ಯಕ್ಷಗಾನ

ಕಲಾತಪಸ್ವಿ

ಬಲಿಪ ನಾರಾಯಣ ಭಾಗವತರ
ಸಂಸ್ಮರಣಗ್ರಂಥ

ಸಂಪಾದಕರು:
ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, M. A.
ಕೃ. ಶ. ಹೆಬ್ಬಾರ್, ವಿದ್ವಾನ್.

೧೯೬೮



ಯಕ್ಷಗಾನ

ಕಲಾತಪಸ್ವಿ

ಬಲಿಪ ನಾರಾಯಣ ಭಾಗವತರ
ಸಂಸ್ಮರಣಗ್ರಂಥ



ಸಂಪಾದಕರು:
ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, M. A.
ಕೃ. ಭ. ಪೆರ್ಲ, ವಿದ್ವಾನ್.

೧೯೬೮

ಪ್ರಕಾಶಕ:
ಯು. ಎಲ್. ರಾವ್, ಪ್ರಿನ್ಸಿಪಾಲ್.
ಸ್ಟಾಫ್ ಟ್ರೈನಿಂಗ್ ಕಾಲೇಜ್
ಸಿಂಡಿಕೇಟ್ ಬೇಂಕ್, ಲಿಮಿಟೆಡ್
ಉಡುಪಿ, ದಕ್ಷಿಣ ಕನ್ನಡ.

ಹತ್ತು ರೂಪಾಯಿ.

ಮುದ್ರಕರು:
ಜನತಾ ಪವರ್ ಪ್ರೆಸ್
ವಿಟ್ಲ, ದಕ್ಷಿಣ ಕನ್ನಡ.

ಪ್ರಕಾಶಕನ ಮಾತು

ನನ್ನ ಮಾತಾಮಹ ಶ್ರೀ ಬಲಿಪ ನಾರಾಯಣ ಭಾಗವತರು ಸ್ವರ್ಗಸ್ಥರಾಗಿ ಒಂದು ವರುಷ ತುಂಬಿತು. ಶ್ರೀ ಭಾಗವತರು ತಮ್ಮ ಬದುಕನ್ನು ಯಕ್ಷಗಾನ ಕಲಾಸೇವೆಯಲ್ಲಿ ಸವೆಸಿದವರು. ಬಾಳ್ವೆಯ ಕೊನೆಯ ಗಳಿಗೆಯ ವರೆಗೂ ಯಕ್ಷಗಾನ ಪ್ರಸಂಗದ ಹಾಡನ್ನು ತುಟಿಯ ಅಂಚಿನಿಂದ ಸೂಸಿ, ಕಲಾರಂಗದಲ್ಲಿ ಓರ್ವ ಕೃತಾರ್ಥಜೀವಿಯಾಗಿ ಬಾಳಿದರು.

ಯಕ್ಷಗಾನ ಕ್ಷೇತ್ರದ ಇಂತಹ ಹಿರಿಯ ಚೇತನದ ಸ್ಮರಣೆಗಾಗಿ ಅವರ ಪ್ರಥಮ ಪುಣ್ಯತಿಥಿಯ ವೇಳೆ ಅವರ ಜೀವನಪರಿಚಯ, ಕಾರ್ಯಕ್ಷೇತ್ರ, ಅವರ ನಿಕಟವರ್ತಿಗಳಿಂದ ನೆನಹುಗಳ ಸಂಗ್ರಹ, ಯಕ್ಷಗಾನ ಕಲೆಗೆ ಸಂಬಂಧಿಸಿದ ವಿದ್ವತ್ಪೂರ್ಣ ಸಂಶೋಧನಾತ್ಮಕ ಲೇಖನಗಳು- ಎಲ್ಲವನ್ನೂ ಒಂದುಗೂಡಿಸಿ ಒಂದು ಸಂಸ್ಮರಣ ಗ್ರಂಥವನ್ನು ಹೊರತರಬೇಕೆಂದು ಹಲವು ದಿನಗಳಿಂದ ಸಂಕಲ್ಪ ಮಾಡಿದ್ದೆ. ನನ್ನ ಮಿತ್ರರ, ಹಿತವಂತರ ಒಲುಮೆಯ ನೆರವಿನಿಂದ ಇಂದಿಗೆ ಇದು ನೆರವೇರುತ್ತಿರುವುದು ನನ್ನಲ್ಲಿ ಅಮಿತವಾದ ಆನಂದವನ್ನುಂಟುಮಾಡಿದೆ.

ಯಕ್ಷಗಾನರಂಗದಲ್ಲಿ ದುಡಿಯುತ್ತಿರುವ ಅನುಭವಿಗಳಾದ ಕಲಾವಿದರನೇಕರಿಗೆ ಗ್ರಂಥ ಪ್ರಕಾಶನದ ಯೋಜನೆಯನ್ನು ತಿಳಿಸಿ ಪತ್ರ ಬರೆದ ಒಡನೆಯೇ ಅವರಿಂದ ಬಂದ ಪ್ರೋತ್ಸಾಹದ ನುಡಿಗಳು ನನ್ನ ಸಾಹಸಕ್ಕೆ ಪುಷ್ಟಿಯನ್ನು ನೀಡಿದವು. ಅವರೆಲ್ಲರೂ ಶ್ರೀ ಭಾಗವತರ ಮೇಲಿನ ಗೌರವಾದರದಿಂದಲೂ, ನಾನು ಕೈಗೊಂಡಿರುವ ಆವಶ್ಯಕ ಕಾರ್ಯದಲ್ಲಿರುವ ಅಭಿಮಾನದಿಂದಲೂ ನನ್ನ ಮನವಿಯನ್ನು ಮನ್ನಿಸಿ, ವಿಳಂಬ ಮಾಡದೆ ಲೇಖನಗಳನ್ನು ಕಳುಹಿಸಿಕೊಟ್ಟು ನನ್ನೊಡನೆ ಸಹಕರಿಸಿದರು. ಆ ಮಹನೀಯರೆಲ್ಲರಿಗೂ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಗ್ರಂಥಪ್ರಕಟನೆಯು ಲೇಖನಗಳನ್ನು ಕಳುಹಿಸಿ ನೆರವಾದ ಈ ಎಲ್ಲ ಹಿರಿಯರ ನೆರವಿನಿಂದ ಸಾಧ್ಯವಾಯಿತೆಂಬ ತೃಪ್ತಿ ನನ್ನಲ್ಲಿದೆ.

ಗ್ರಂಥದ ಯೋಜನೆಯ ಆರಂಭದಿಂದ ಅದು ಅಚ್ಚುಕೂಟದಿಂದ ಹೊರ ಬರುವ ತನಕ ನೂರೆಂಟು ಬಗೆಯಲ್ಲಿ ಸಹಕರಿಸಿದವರು ನನ್ನ ವಿಶ್ವಾಸಪಾತ್ರ ಹಿರಿಯ ಮಿತ್ರರಾದ ಶ್ರೀ ಕೃ. ಭ. ಪೆರ್ಲ ಇವರು. ಹೊತ್ತಗೆಯ ಸಿದ್ಧತೆಗಾಗಿ ನಾನು ಯಾವ ಕೆಲಸವನ್ನು ಮಾಡಬೇಕಿತ್ತೋ, ಆ ಎಲ್ಲ ಭಾರವನ್ನೂ ತಮ್ಮ ಭುಜಗಳ ಮೇಲೆ ಹೊತ್ತು ಅತ್ಯಂತ ದಕ್ಷತೆಯಿಂದ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಅವರಿಗೆ ಯಾವ ರೀತಿಯಲ್ಲಿ ಕೃತಜ್ಞತೆಯನ್ನು ಸಲ್ಲಿಸುವುದೆಂದು ತಿಳಿಯದವನಾಗಿದ್ದೇನೆ.

ಅಂತೆಯೇ ಈ ಸಂಸ್ಮರಣಗ್ರಂಥವು ಸರ್ವಾಂಗೀಣವಾಗಿ ಸುಂದರವೂ ಉಪಯುಕ್ತವೂ ಆಗುವಂತೆ ಸಂಪಾದಕತ್ವದ ಹೊಣೆಯನ್ನು ವಹಿಸಿ ಶ್ರೀ ಕೃ. ಭ. ಪೆರ್ಲ ಇವರೊಂದಿಗೆ ಸಹಕರಿಸಿದ ಕರ್ಣಾಟಕದ ವಿಖ್ಯಾತ ಕವಿ ಶ್ರೀಯುತ ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, ಎಮ್. ಎ. ಇವರಿಗೂ ನನ್ನ ಹಾರ್ದಿಕ ಕೃತಜ್ಞತೆಗಳು.

ಸಕಾಲಕ್ಕೆ ಶುಭಸಂದೇಶವನ್ನು ಅನುಗ್ರಹಿಸಿದ ಶ್ರೀಮದೆಡನೀರು ಮಠಾಧೀಶರಾದ ಶ್ರೀ ಶ್ರೀ ಕೇಶವಾನಂದಭಾರತೀ ಸ್ವಾಮೀಜಿಯವರಿಗೆ ನನ್ನ ಭಕ್ತಿ ಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಪಡಿಯಚ್ಚುಗಳಿಗೆ ತಮ್ಮಲ್ಲಿದ್ದ ಫೋಟೊಗಳನ್ನು ಒದಗಿಸಿಕೊಟ್ಟ ಕರ್ಣಾಟಕ ಪ್ರಾಂತೀಕರಣ ಸಮಿತಿ ಕಾಸರಗೋಡು ಮತ್ತು ಇತರ ಮಹನೀಯರಿಗೆ ನನ್ನ ವಂದನೆಗಳು

ಗ್ರಂಥವನ್ನು ಅತ್ಯಲ್ಪ ಕಾಲದಲ್ಲಿ ಸುಂದರವಾಗಿ ಮುದ್ರಿಸಿ ಕೊಟ್ಟ ವಿಟ್ಲದ ಜನತಾ ಪವರ್ ಪ್ರೆಸ್ಸಿನ ಮೆನೇಜರರಿಗೂ, ಮುಖ್ಯವಾಗಿ ಶ್ರದ್ಧೆಯಿಂದ ಶಕ್ತಿ ಮೀರಿ ದುಡಿದ ಕಾರ್ಮಿಕ ಬಂಧುಗಳಿಗೂ ನನ್ನ ಕೃತಜ್ಞತೆಗಳು.

ಕೊನೆಯದಾಗಿ, ಗ್ರಂಥಪ್ರಕಟನೆಯ ಈ ಸಾಹಸಕಾರ್ಯದಲ್ಲಿ ನನಗೆ ಅನೇಕ ಸೂಕ್ತ ಸಲಹೆಗಳನ್ನಿತ್ತು ಆತ್ಮೀಯತೆಯಿಂದ ಮಾರ್ಗದರ್ಶನ ಮಾಡಿದ ಉಡುಪಿಯ ಶ್ರೀ ವಿಜಯನಾಥ ಶೇಣೈಯವರಿಗೆ ನಾನು ತುಂಬ ಋಣಿಯಾಗಿದ್ದೇನೆ.

ಇತಿ

ವಿ. ಟಿ. ಸಿ. ರೋಡ್
ಉಡುಪಿ
3—12—1967

ಯು. ಎಲ್. ರಾವ್
ಪ್ರಕಾಶಕ

ಸಂಪಾದಕರ ನುಡಿ

ಯಾವೊಂದು ನಾಡಿನ ಅಂತಸ್ಸತ್ವವನ್ನಾದರೂ ಅಲ್ಲಿ ಜನಪ್ರಿಯವಾಗಿ ಪ್ರಚುರವಾಗಿರುವ ಜಾನಪದ ಕಲೆಗಳ ಮೂಲಕ ನಾವು ತಿಳಿಯಲು ಸಾಧ್ಯವಿದೆ. ಕಡಲತಡಿಯ ಕನ್ನಡನಾಡಿನ ವಿಶಿಷ್ಟ ಜಾನಪದ ಕಲೆ ಎನಿಸಿದ ಯಕ್ಷಗಾನವು ಸಮಗ್ರ ಕರ್ಣಾಟಕದಲ್ಲಿ ಪಂಡಿತ ಪಾಮರರೆಲ್ಲರ ಸಮಾನ ಮನ್ನಣೆ ಪಡೆದಿರುವುದನ್ನು ಗಮನಿಸಿದರೆ, ಯಕ್ಷಗಾನ ಕಲೆಯ ಉಪಯುಕ್ತತೆಯ ಕುರಿತು ಬೇರೆ ಪ್ರಶಸ್ತಿಪತ್ರ ಬೇಕಾಗಿಲ್ಲ. ಇಂತಹ ಜನಾದರಣೀಯವಾದ ಯಕ್ಷಗಾನ ಕಲಾಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಮಾಲೆಗಳ ಮಧ್ಯೆ ಶ್ರೀ ಶ್ರೀ ಬಲಿಪ ನಾರಾಯಣ ಭಾಗವತರ ಹೆಸರು ಬೆಳ್ಳಿತಾರೆಯಂತೆ ಬೆಳಗುತ್ತಿದೆ.

ಯಕ್ಷಗಾನ ಬಯಲಾಟ, ತಾಳಮದ್ದಳೆಗಳಲ್ಲಿ ಭಾಗವತರೆಂಬವರ ಪಾತ್ರ ಬಲು ಹಿರಿದು. ಭಾಗವತಶಬ್ದದ ಅರ್ಥವೇ ಸೂಚಿಸುವಂತೆ ಅವರು ದೈವಭಕ್ತರು. ಸಾಮಾನ್ಯರ ಮಧ್ಯೆ ಅವರು ಅಸಾಮಾನ್ಯರು. ನಮ್ಮ ನಾಡಿನ ಜನಪ್ರಿಯ ಜಾನಪದ ಕಲೆಯಾದ ಯಕ್ಷಗಾನವನ್ನು ಸಮಗ್ರವಾಗಿ, ಸಂಪೂರ್ಣವಾಗಿ, ಕೂಲಂಕಷವಾಗಿ ಅಭ್ಯಾಸ ಮಾಡಿ ತನ್ನ ಉತ್ತಮ ಮಾರ್ಗದರ್ಶನದಲ್ಲಿ ಕಲಾವಿದರನ್ನೂ ರಸಿಕ ಪ್ರೇಕ್ಷಕರನ್ನೂ ಅರ್ಧಶತಮಾನಕ್ಕಿಂತ ಮಿಕ್ಕಿದ ಕಾಲದಲ್ಲಿ ನಿರಂತರ, ಅಹರ್ನಿಶಿ ಪ್ರೇಯಸ್ಸಿನಿಂದ ಶ್ರೇಯಸ್ಸಿಗೆ ಸಾಗಿಸಿದ ಮಹೋನ್ನತ ವ್ಯಕ್ತಿತ್ವ ನಮ್ಮ ದಕ್ಷಿಣ ಕನ್ನಡದ ಮಟ್ಟಿಗಾದರೂ ಶ್ರೀ ಶ್ರೀ ಬಲಿಪ ನಾರಾಯಣ ಭಾಗವತರದೆಂಬುದು ನಮಗೆಲ್ಲ ಹೆಮ್ಮೆಯ ವಿಷಯ.

ಯಕ್ಷಗಾನಕ್ಕೆ ಜನಮನ್ನಣೆಯೊಂದಿಗೆ ರಾಜಮರ್ಯಾದೆಯನ್ನು ಗಳಿಸಿಕೊಟ್ಟು, ನಾಡಿನ ಸಂಸ್ಕೃತಿ ಹಾಗೂ ಕಲಾಕ್ಷೇತ್ರದಲ್ಲಿ ತನ್ನ ಸಾಹಿತ್ಯಸ್ಫೂರ್ತಿಯಿಂದಲೂ, ರಾಗರಸಗಳ ರಂಜನೆಯಿಂದಲೂ ಪದ–ತಾಳ–ಗತಿಗಳ ಕಲಾವಿನ್ಯಾಸಗಳಿಂದಲೂ, ಹಿರಿದಾದ ಸೇವೆ ಸಲ್ಲಿಸಿದ ಶ್ರೀ ಶ್ರೀ ಬಲಿಪ ಭಾಗವತರ ನೆನಹು ಚಿರಸ್ಥಾಯಿಯಾಗಿ ಉಳಿಯುವಂತೆ ಇಂದಿನ ಮತ್ತು ಮುಂದಿನ ನಮ್ಮ ನಾಡಿನ ರಸಿಕ ಜನಾಂಗ ಅವರ ನೆನಹಿನಿಂದ ಸ್ಫೂರ್ತಿ ಪಡೆಯುವಂತೆ ಮಾಡುವ ಉದ್ದೇಶವುಳ್ಳ ಈ ಸ್ಮಾರಕಗ್ರಂಥವನ್ನು ಸಂಪಾದಿಸಿ, ನಾಡಿನ ಹಾಗೂ ನುಡಿಯ ಬಾಂಧವರ ಮುಂದೆ ಇಡಲು ನಾವು ಸಂತೋಷಪಡುತ್ತೇವೆ. ಶ್ರೀ ಶ್ರೀ ಬಲಿಪ ಭಾಗವತರ ಸಮೀಪ ಪರಿಚಯವುಳ್ಳ ಹಲವಾರು ವಿದ್ವಾಂಸರೂ, ಕಲಾಪ್ರೇಮಿಗಳೂ ಈ ಗ್ರಂಥಸಂಪಾದನಾ ಕಾರ್ಯದಲ್ಲಿ ತಮ್ಮ ಅಮೂಲ್ಯ ಲೇಖನಗಳನ್ನು ಒದಗಿಸಿಕೊಟ್ಟು ನೆರವು ನೀಡಿದ ಉಪಕಾರವನ್ನು ನಾವು ಎಂದಿಗೂ ಮರೆಯುವಂತಿಲ್ಲ. ಈ ಗ್ರಂಥದ ಸಂಪಾದನಾಕಾರ್ಯವನ್ನು ನಾವು ನಿರ್ವಹಿಸುವಂತೆ ಈ ಒಂದು ಸದವಕಾಶವನ್ನು ಒದಗಿಸಿ ಶ್ರೀ ಶ್ರೀ ಬಲಿಪ ಭಾಗವತರ ಬಗ್ಗೆ ನಮ್ಮ ಅಳಿಲ ಸೇವೆಯ ಶ್ರದ್ಧಾಂಜಲಿಯನ್ನರ್ಪಿಸಲು ನಮಗೆ ಆಸ್ಪದವಿತ್ತ ಅವರ ಮೊಮ್ಮಗ ಶ್ರೀ ಯು. ಎಲ್. ರಾವ್, ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಕಯ್ಯಾರ ಕಿಞ್ಞಣ್ಣ ರೈ,
ಕೃ. ಭ. ಪೆರ್ಲ.

॥ ಶ್ರೀ ದಕ್ಷಿಣಾಮೂರ್ತಯೇ ನಮಃ ॥

॥ ಶ್ರೀ ಗೋಪಾಲಕೃಷ್ಣಾಯ ನಮಃ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶಿಷ್ಯವರ ಶ್ರೀ ತೋಟಕಾಚಾರ್ಯ ಗುರುಪರಂಪರಾಗತ–
ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯೇತ್ಯಾದ್ಯನೇಕಬಿರುದಾಂಕಿತ–
ಶ್ರೀಮದ್ವಾಮನೀರಪುರಾಧೀಶ್ವರ ಶ್ರೀಮದೀಶ್ವರಾನಂದಭಾರತೀ ಕರಕಮಲ
ಸಂಜಾತರಾದ ಶ್ರೀ ಶ್ರೀ ಕೇಶವಾನಂದಭಾರತೀ ಶ್ರೀಪಾದಂಗಳವರು
ಶ್ರೀಮನ್ನಾರಾಯಣಸ್ಮರಣ ಪೂರ್ವಕವಾಗಿ

ಅನುಗ್ರಹಿಸಿದ ಶುಭ ಸಂದೇಶ

"ಭಾರತೀಯರು ಕಲಾಪ್ರಿಯರು. ಭಾರತದ ಪ್ರಾಚೀನ ಕಲೆಗಳು ಕೇವಲ ಮನೋರಂಜನೆಗಾಗಿ ಅಷ್ಟೇ ಮೀಸಲಾದವುಗಳಲ್ಲ. ಅವು ನಮ್ಮ ವಿಶಿಷ್ಟವಾದ ಸುಸಂಸ್ಕೃತಿ, ಸದಾಚಾರಗಳ ಪ್ರೇರಕಗಳಾಗಿವೆ. ಧಾರ್ಮಿಕ ಹಾಗೂ ಭಕ್ತಿಬೋಧಕವಾದ ಭಾವನೆಗಳ ಬೆಂಬಲದ ಮೇಲೆಯೇ ನೆಲೆ ನಿಂತಿರುವ ಇಂತಹ ಕಲೆಗಳು ನಮ್ಮ ಆಸ್ತಿಕತೆಯ ದ್ಯೋತಕಗಳೂ ಹೌದು".

"ಭಾರತದಲ್ಲಿ ರೂಢಮೂಲವಾಗಿರುವ ಅನೇಕ ಕಲೆಗಳಲ್ಲಿ ಕರ್ಣಾಟಕದ ಯಕ್ಷಗಾನವೂ ಒಂದೆನ್ನಬಹುದು. ಯಕ್ಷಗಾನವು ಅತ್ಯಂತ ಜನಪ್ರಿಯವೂ ಅಪೂರ್ವವೂ ಆದ ಒಂದು ಸಮಷ್ಟಿ ಕಲೆ. ಈ ಕಲೆಗಾಗಿ ದುಡಿದು ತಮ್ಮ ಬಾಳನ್ನು ಸವೆಸಿದ ಮಹಾತ್ಮರನೇಕರು ಇಂದು ನಮ್ಮ ಕಣ್ಣಿಂದ ದೂರವಾಗಿದ್ದಾರೆ. ಅಂಥವರಲ್ಲಿ ದಿ। ಬಲಿಪ ನಾರಾಯಣ ಭಾಗವತರೂ ಒಬ್ಬರು. ಅವರ ಹಾಡುಗಾರಿಕೆ ಯಕ್ಷಗಾನಕ್ಷೇತ್ರದಲ್ಲಿ ಪ್ರಸಿದ್ಧವಾದುದು".

"ದಿ। ಬಲಿಪ ಭಾಗವತರು ಶ್ರೀಮದೆಡನೀರು ಮಠದ ಪ್ರಿಯ ಶಿಷ್ಯರಾಗಿದ್ದು, ಶ್ರೀಮಠದಲ್ಲಿ, ಶ್ರೀ ಗೋಪಾಲಕೃಷ್ಣ, ದಕ್ಷಿಣಾಮೂರ್ತಿ ದೇವರ ಸನ್ನಿಧಿಯಲ್ಲಿ ಅನೇಕಬಾರಿ ಕಲಾಸೇವೆ ಮಾಡಿರುವರು. ನಮ್ಮ ಪೂರ್ವ ಗುರುಗಳಾಗಿದ್ದ ಶ್ರೀ ಮದೀಶ್ವರಾನಂದ ಭಾರತೀ ಶ್ರೀಪಾದಂಗಳವರ ಕಾಲದಲ್ಲಿ ದಿ। ಬಲಿಪ ಭಾಗವತರು ಹೆಚ್ಚಾಗಿ ಪ್ರತಿ ವರ್ಷವೂ ವಿಜಯದಶಮಿಯಂದು ಶ್ರೀ ಮಠಕ್ಕೆ ಬಂದು ಕಲಾಸೇವೆಯನ್ನು ಮಾಡುತ್ತಿದ್ದರೆಂಬುದು ಅವರ ಗುರುಭಕ್ತಿಯ ದ್ಯೋತಕವೆನ್ನಬಹುದು. ಅವರ ಬಾಳಿನ ಕೊನೆಯ ದಿನಗಳಲ್ಲೂ ಅವರು ಶ್ರೀ ಮಠಕ್ಕೆ ಬಂದು ಕಲಾಸೇವೆ ಮಾಡಿರುವರು. ಶಾರೀರಿಕವಾದ ಅಸೌಖ್ಯದಿಂದಾಗಿ ಕಲಾವ್ಯವಸಾಯದಿಂದ ಬಹಳ ಕಾಲ ನಿವೃತ್ತರಾದ ದಿ। ಬಲಿಪ ಭಾಗವತರು ಮತ್ತೊಮ್ಮೆ ರಂಗಪ್ರವೇಶಕ್ಕಾಗಿ ಶ್ರೀ ಎಡನೀರು ಮಠದಲ್ಲಿ ಮೊತ್ತಮೊದಲು ಜಾಗಟೆ ಹಿಡಿದು ಹಾಡಿದ್ದರು. ಅದುವೇ ಅವರು ಎಡನೀರು ಮಠದಲ್ಲಿ ಸಲ್ಲಿಸಿದ ಶ್ರೀ ಗೋಪಾಲಕೃಷ್ಣನ ಕೊನೆಯ ಸೇವೆಯಾಯಿತು".

"ಅವರ ಕುರಿತು ಯಕ್ಷಗಾನ ಪ್ರೇಮಿಗಳು ಸ್ಮಾರಕಗ್ರಂಥವೊಂದನ್ನು ಪ್ರಕಟಿಸುವರೆಂಬ ವಿಷಯವು ನಮ್ಮ ಅವಗಾಹನೆಗೆ ಬಂದು ಬಹಳ ಸಂತೋಷವಾಯಿತು. ಗ್ರಂಥದ ಸಂಪಾದಕರ ಈ ಕಾರ್ಯವು ಉಪಯುಕ್ತವೂ ಪ್ರಶಂಸನೀಯವೂ ಆಗಿದೆ ಎಂದು ಹೇಳಲು ಸಂತೋಷಪಡುತ್ತೇವೆ".

ಇತಿ, ಶ್ರೀಮನ್ನಾರಾಯಣ ಸ್ಮರಣೆಗಳು.

श्री केशवानन्दभारती ।



ಶ್ರೀಮದ್ವಾಮನೀರಪುರಾಧೀಶ್ವರ ಶ್ರೀ ಶ್ರೀ ಕೇಶವಾನಂದಭಾರತೀ ಶ್ರೀಪಾದಂಗಳವರು.

ವಿಷಯ ವಿವರ

ಭಾಗ ೩ ಯಕ್ಷಗಾನ ೧೪೯ - ೨೧೮

ಪರಿಶಿಷ್ಟ

ಗಾನ ಗಂಧರ್ವ ಯೋಗಿ

ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಸ್ವರ್ಗಮರ್ತ್ಯಗಳ ನಡುವೆ ನೆಲಸಿಹುದು— ಯಕ್ಷಗಂಧರ್ವಲೋಕ:
ದಿವ್ಯಸಮ್ಮತಿಯ ಶಿವದ ಸುಂದರದ— ಶ್ರೇಯ ಪ್ರೇಯಸಿನ ಪಾಕ.
ಭೂಮಿಯುತ್ತರದಿ, ದಾನವಿತ್ತರದಿ— ಎಲ್ಲಿಯಿಲ್ಲವಾತಂಕ:
ಅವರು ಕಿಂಪುರುಷರವರು ಕಿನ್ನರರು, ಗಾನಲಹರಿ ನಿಶ್ಶಂಕ

೨

ಜೀವಭಾವ ನರ್ತಿಸಿತು ರೂಪರಸ— ಮಿಂಚುಕಿರಲು ಮುದವೇರಿ:
ಪೃಥ್ವಿಶ್ಯಾಮಲೆಯ ಮೈಗೆ ರೋಮಾಂಚ! ಚೆಂಡೆ ಮದ್ದಳೆಯ ಮೀರಿ
ಮೇಘ ನಿರ್ಘೋಷ: ಶ್ರುತಿಯ ಜೋಡಿಸಿತು— ಕಡಲು ಗರ್ಜನೆಯ ತೋರಿ.
ಅಟ್ಟಹಾಸ ಮುಗಿಲಟ್ಟವೇರಿತು! ದೇವದಾನವರು ಸೇರಿ.

೩

ತೆಂಗುಕಂಗುಗಳು, ತಾಳೆಬಾಳೆಗಳು, ಗೊನೆಯು ತೆನೆಯು ತೂಗುತಿರೆ:
ತೆರೆಯ ಕುಣಿತದಲಿ, ಹರಿವ ಮಣಿತದಲಿ, ನದಿಯು ನಾಟ್ಯವಾಡುತಿರೆ:
ಪಕ್ಷಿಕೂಜನದ ವಾದ್ಯವಾದನದ— ತಾಳೆ ಹಿಮ್ಮೇಳ ಸೇರೆ:
ಬಂತು ಆವೇಶ! ನೋಡು ಈ ವೇಷ! ಸುತ್ತು ಸಂತೋಷ ಸೂರೆ!

೪

ಸೃಷ್ಟಿರೂಪಕದ ಸೂತ್ರಪಾತ್ರಗಳ— ಜೋಡಿಸುವನು ಭಗವಂತ:
ಅದರ ಪ್ರತಿಬಿಂಬ ಬಿದ್ದ ಬಯಲಾಟ— ಆಡಿಸುವನು ಭಾಗವತ!
ತಾನು ಮೈಮರೆತು, ಜಗವ ಮೈಮರೆಸಿ, ಕುಣಿಸುತಿದ್ದ ಜೋರಾಗಿ:
ಒಗ್ಗಿ ಹಾಡಿದನೊ— ಹಾಡಿ ಒಗ್ಗಿದನೊ! ಗಾನಗಂಧರ್ವಯೋಗಿ!


೫

ನಾಡಿಮದ್ದುಗಲ ಹಾಡುತಿದ್ದನು— ಹಗಲು ಕತ್ತಲೆಯು ಕೂಡಿ:
ಹಿಡಿದ ಜಾಗಟೆಯ ಬಡಿದ ತಾಳಕೆ— ಚೆಂಡೆಮದ್ದಳೆಯು ಜೋಡಿ.
ಹತ್ತು ಶಿರಗಳನು ಹೊತ್ತ ದೈತ್ಯನೂ ಸತ್ತ— ಧರ್ಮವನು ದೂಡಿ:
ಧರ್ಮ ಕಲ್ತೆ ಜಯ! ಮಹಾಭಾರತದ ಕುರುಕ್ಷೇತ್ರರಣ ನೋಡಿ!

೬

ಇಂದು 'ಕಲ್ಯಾಣ' ನಾಳೆ 'ಕಾಣಗವ್ಯ,' ಈ 'ಪ್ರಸಂಗ'ಗಳೆ— ಮರಳಿ,
ಅದನೆವೃಚ್ಚರಿಸಿ, ನಾಡನೆಚ್ಚರಿಸಿ, ಬಾಳಗರ್ಥವನು ಹೇಳಿ,
ತುಳುವನಾಡಿನಲಿ, ಚೆಲುವ ಬೀಡಿನಲಿ, ಧನ್ಯ ಜನ್ಮವನು ತಾಳಿ—
ಬಂದ ಭಾಗವತ ನಿಂದ ಸ್ಮರಣೆಗಿದೊ— ಕವಿ ಸಮರ್ಪಣೆಯು— ಕೇಳಿ!

ಶ್ರೀ ಬಲಿಪ ನಾರಾಯಣ ಭಾಗವತರು



ಜನನ: 1889 ನಿಧನ: 1966

ಭಾಗ ೧

ಜೀವನ

ಪೂರ್ವಜರು

"ಬಲಿಪ" ಎಂಬುದೊಂದು ವಂಶನಾಮ. ಕರಾಡಬ್ರಾಹ್ಮಣರಲ್ಲಿ ಬಲಿಪರು, ಘಾಟೆಯವರು, ಮಾಧ್ಯಾಹ್ನಿಗಳು ಮುಂತಾದ ಹಲವು ಶಾಖೆಯವರಿದ್ದಾರೆ. ಬಲಿಪ ಅಥವಾ ಬಲಿಪ್ಪ ಎಂಬ ಹೆಸರನ್ನು ಕೇಳಿದೊಡನೆಯೇ, ಇದೆಂತಹ ವಿಚಿತ್ರ ಹೆಸರೆಂದು ಕೆಲವರಿಗೆ ಆಶ್ಚರ್ಯವಾಗುವುದು ಸ್ವಾಭಾವಿಕ. ಹುಲಿಗಳ ಜಾತಿಯಲ್ಲಿ ಬಲಿಪ್ಪ, ಅಡ್ಡ ಬಲಿಪ್ಪ ಮುಂತಾದ ಕೆಲವು ಪ್ರಭೇದಗಳುಂಟೆಂಬುದನ್ನು ಎಲ್ಲರೂ ಅರಿತಿದ್ದಾರೆ. ಯಕ್ಷಗಾನದಲ್ಲಿ ಹುಲಿಯಂತೆ-ಬಲಿಪ್ಪನಂತೆ ರೀತಿಯಿಂದ ಮೆರೆದವರಾದ ಕಾರಣ ನಾರಾಯಣ ಭಾಗವತರಿಗೆ ಬಲಿಪರೆಂಬ ಹೆಸರು ಅನ್ವರ್ಥವಾಗಿ ಬಂದಿರಬಹುದೆಂದು ಹಲವರು ವ್ಯಾಖ್ಯಾನಿಸಿದ್ದುಂಟು.

ಇನ್ನೂರು ಮುನ್ನೂರು ವರ್ಷಗಳ ಹಿಂದೆ, ಯಾವುದೋ ಚಾರಿತ್ರಿಕ ಕಾರಣದಿಂದ ತಮ್ಮ ಹುಟ್ಟೂರಾದ ಮಹಾರಾಷ್ಟ್ರವನ್ನು ಬಿಟ್ಟು, ಕರಾಡಬ್ರಾಹ್ಮಣವರ್ಗದ ಹಲವು ಶಾಖೆಯವರು ವಲಸೆ ಬಂದು ಕಾಸರಗೋಡು ತಾಲೂಕಿನ ನಾಲ್ಕೈದು ಗ್ರಾಮಗಳಲ್ಲಿ ನೆಲೆ ನಿಂತರು. ಅವರಲ್ಲಿ ಬಲಿಪರು ಪಡ್ರೆ ಗ್ರಾಮದ ಅಂಗ್ರಾಜೆ (ಅಂಗರಾಜ್ಯ) ಎಂಬಲ್ಲಿ ಆಸ್ತಿ, ಮನೆ ಮಾಡಿಕೊಂಡು ತಳವೂರಿದರು. ಮಹಾರಾಷ್ಟ್ರವನ್ನು ಬಿಟ್ಟು ಕನ್ನಡ ನಾಡಿಗೆ ಬಂದ ಈ ಕರಾಡ ಬ್ರಾಹ್ಮಣರು, ಕೆಲವೇ ವರ್ಷಗಳಲ್ಲಿ ತಮ್ಮದೇ ಆಗಿದ್ದ ಮರಾಠೀ ಹಿನ್ನೆಲೆಯನ್ನು ಸಂಪೂರ್ಣ ಮರೆತು, ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದ ಸಕಲ ವಿಚಾರಗಳಲ್ಲಿಯೂ ಈ ನಾಡಿನೊಂದಿಗೆ ಬೆರೆತುಕೊಂಡಿದ್ದಾರೆ. ಮನೆಯಲ್ಲಿ ಆಡುವ ಕೌಟುಂಬಿಕ ಭಾಷೆ ಮತ್ತು ಕೆಲವು ವಿಶಿಷ್ಟ ಧಾರ್ಮಿಕ ಆಚಾರಗಳನ್ನು ಬಿಟ್ಟರೆ ಇವರಲ್ಲಿ ಇನ್ನಾವ ಮಹಾರಾಷ್ಟ್ರೀಯ ಚಿಹ್ನೆಯೂ ಈ ಕಾಲಕ್ಕೆ ಉಳಿದು ಬಂದಿಲ್ಲ.

ಐದು ಮಂದಿ ಗ್ರಾಮ ಮೊಕ್ತೇಸರರಲ್ಲಿ ಬಲಿಪರ ಕೂಟದವರೂ ಒಬ್ಬರಾಗಿದ್ದಾರೆ. ಇವರಲ್ಲಿ ಸಂಸ್ಕೃತ ವಿದ್ವಾಂಸರೂ, ಜ್ಯೋತಿಷ್ಕರೂ, ಮಂತ್ರವಾದಿಗಳೂ, ಭಾಗವತರೂ ಹಲವರಿದ್ದರು. ಈಗಲೂ ಇದ್ದಾರೆ. ಹೀಗಾಗಿ ಊರಿನಲ್ಲಿ ಎಲ್ಲರೂ ಗೌರವಬುದ್ಧಿಯಿಂದಲೇ ಕಾಣುವ ಪ್ರತಿಷ್ಠಿತ ಮನೆತನ ಇವರದ್ದಾಗಿದೆ.

ಇಂತಹ ಬಲಿಪರ ವಂಶದಲ್ಲಿ ೧೮೮೯ನೇ ಇಸವಿಯ ವಿರೋಧಿ ಸಂವತ್ಸರದಲ್ಲಿ ಶ್ರೀ ಬಲಿಪ ನಾರಾಯಣ ಭಾಗವತರ ಜನನವಾಯಿತು. ತಂದೆಯ ಹೆಸರು ಶ್ರೀ ಬಲಿಪ ಮಹಾದೇವ ಭಟ್ಟ. ತಾಯಿ ಶ್ರೀಮತಿ ದುರ್ಗಾದೇವಿ. ತಂದೆ ತಾಯಿಗಳಿಬ್ಬರೂ ಪ್ರಾಚೀನ ಸಂಪ್ರದಾಯವನ್ನು ಅನುಸರಿಸುವ ನಿಷ್ಠಾವಂತ ದಂಪತಿಗಳಾಗಿದ್ದರು. ಈ ದಂಪತಿಗಳ ಹಿರಿಯ ಮಗನೇ ಶ್ರೀ ನಾರಾಯಣ ಭಾಗವತರು. ಇವರ ತಮ್ಮ ಶ್ರೀಬಲಿಪ ಶಂಕರ ಭಟ್ಟರೆಂಬವರೊಬ್ಬರಿದ್ದರು. ಸಾಧಾರಣ ನಡು ಪ್ರಾಯ ದಾಟಿದಾಗಲೇ ಅವರು ತೀರಿ ಹೋದರು. ಶಂಕರ ಭಟ್ಟರ ಮೊಮ್ಮಗ ಶ್ರೀ ಬಲಿಪ ನಾರಾಯಣ ಎಂಬವರು ಅಜ್ಜನಿಂದ ಯಕ್ಷಗಾನ ಹಾಡುಗಾರಿಕೆಯನ್ನು ಅಭ್ಯಾಸ ಮಾಡಿ, ಈಗ ಯಕ್ಷಗಾನ ಕೂಟಗಳಲ್ಲಿಯೂ ಬಯಲಾಟಗಳಲ್ಲಿಯೂ ಅವರ ಶೈಲಿಯಲ್ಲಿ ಭಾಗವತಿಕೆಯನ್ನು ನಿರ್ವಹಿಸುತ್ತಿದ್ದಾರೆ.

ಬಾಲ್ಯ ವಿದ್ಯಾಭ್ಯಾಸ

ನಾರಾಯಣ ಭಾಗವತರು ಬಹಳ ಎಳೆವಯಸ್ಸಿನವರಾಗಿದ್ದಾಗಲೇ ಇವರ ಹಿರಿಯರು ತಮ್ಮ ಆಸ್ತಿಯನ್ನು ಪಾಲು ಮಾಡಿ ಕೊಂಡರು. ಇವರ ತೀರ್ಥರೂಪರು ತಮ್ಮ ಪಾಲಿಗೆ ಬಂದ ಪತ್ತಡ್ಕದ ಸಮೀಪದಲ್ಲಿರುವ "ಜಾಲು" ಎಂಬ ಸ್ಥಳಕ್ಕೆ ಬಂದರು. ಮುಂದಕ್ಕೆ ಈ ಸ್ಥಳವು "ಬಲಿಪರ ಜಾಲು" ಎಂದೇ ಪ್ರಸಿದ್ಧವಾಯಿತು. ಎರಡು ಮೂರು ಖಂಡಿ ಬೆಳೆ ಬರುವ ಅಡಿಕೆ ತೋಟ ಮತ್ತು ಸ್ವಲ್ಪ ಬೇಸಾಯದ ಗದ್ದೆ ಇಷ್ಟು ಮಾತ್ರ ಇಲ್ಲಿ ಇವರಿಗಿದ್ದ ಆಸ್ತಿ. ಬಲಿಪರಿಗೆ ಚಿಕ್ಕಂದಿನಿಂದಲೇ ಮನೆಯಲ್ಲಿದ್ದು ಹಿರಿಯರೊಂದಿಗೆ ಗೃಹಕೃತ್ಯದ ಕೆಲಸಕಾರ್ಯಗಳಲ್ಲಿ ನೆರವಾಗುವ ಪರಿಪಾಠವಿರಲಿಲ್ಲ. ಊರಲ್ಲೆಲ್ಲಾ ತಿರುಗಾಡುತ್ತ ತನ್ನ ಸಮಪ್ರಾಯದ ಇತರ ಹುಡುಗರೊಂದಿಗೆ ಏನಾದರೂ ತಂಟೆ ತಕರಾರುಗಳನ್ನು ಮಾಡುತ್ತ ಕಾಲ ಕಳೆಯುವ ಸ್ವಭಾವವೇ ಬಲವಾಗಿತ್ತು.

ನಾರಂಪಾಡಿ ಕುಞಣ್ಣ ಮಾಸ್ತರರೆಂಬವರು ಊರಲ್ಲಿ ಬಂದು ಶಾಲೆಯನ್ನು ನಡೆಸುತ್ತಿದ್ದರು. ಇದು ಐಗಳ ಮಠದ ರೀತಿಯ ಶಾಲೆಯಾಗಿತ್ತು. ಈಗಿನಂತೆ ಸರಕಾರೀ ಪ್ರಾಥಮಿಕ ಶಾಲೆಗಳು ಆ ಕಾಲದಲ್ಲಿ ಸಮೀಪದಲ್ಲಿ ಎಲ್ಲಿಯೂ ಇರಲಿಲ್ಲ. ಊರಿನ ಕೆಲ ಹುಡುಗರನ್ನು ಕಲೆ ಹಾಕಿ ಓದು, ಬರಹ, ಮಗ್ಗಿ, ಗಣಿತ ಇತ್ಯಾದಿ ಎಲ್ಲ ವಿಷಯಗಳನ್ನು ಒಬ್ಬರೇ ಉಪಾಧ್ಯಾಯರು ಕಲಿಸುತ್ತಿದ್ದರು.

ಬಲಿಪರನ್ನು ಹಲವು ಸಲ ಒತ್ತಾಯದಿಂದ, ಬಲಾತ್ಕಾರದಿಂದ ಈ ಶಾಲೆಗೆ ಸೇರಿಸಲಾಗಿತ್ತು. ಒಂದು ಸಲ ಸೇರಿಸಿ ಕೆಲವೇ ದಿನ ಕಳೆಯುವಷ್ಟರಲ್ಲಿ ಅವರು ಶಾಲೆಯ ಸಂಪರ್ಕವನ್ನು ಸಂಪೂರ್ಣ ಕಡಿದು ಹಾಕಿ, ಉಪಾಧ್ಯಾಯರೊಡನೆ ಜಗಳಾಡಿ ಊರ ತಿರುಗಾಟದ ತಮ್ಮ ಮೆಚ್ಚಿನ ಕಾರ್ಯಕ್ರಮದಲ್ಲಿ ತೊಡಗುತ್ತಿದ್ದರು. ಹಿರಿಯರ ಬೈಗಳಿಗೆ, ಶಿಕ್ಷೆಗೆ ಅಂಜಿ ಮತ್ತೊಮ್ಮೆ ಸೇರಿದರೂ ಹೆಚ್ಚು ಕಾಲ ಅಲ್ಲಿರುತ್ತಿರಲಿಲ್ಲ. ಹೀಗಾಗಿ ಚಿಕ್ಕಂದಿನ ವಿದ್ಯಾಭ್ಯಾಸವೆಂಬುದು ಬಲಿಪರ ಪಾಲಿಗೆ ಹೆಸರಿಗೆ ಮಾತ್ರ ದೊರೆತಿತ್ತಷ್ಟೆ.

ಮುಂದೆ ಭಾಗವತರಾದ ಮೇಲೆ ಇವರಿಗಿದ್ದ ಪೌರಾಣಿಕ ಕತೆಗಳ ಅನುಭವ, ಕನ್ನಡಭಾಷಾ ಪ್ರೌಢಿಮೆ, ಛಂದಃಶಾಸ್ತ್ರದ ಪರಿಜ್ಞಾನ ಅದ್ಭುತ ಕವಿತಾಶಕ್ತಿ ಇವುಗಳನ್ನೆಲ್ಲ ಎಲ್ಲಿಂದ ಯಾವಾಗ ಹೇಗೆ ಗಳಿಸಿಕೊಂಡರೆಂಬುದು ಇಂದಿಗೂ ಆಶ್ಚರ್ಯಕರವಾದ ವಿಚಾರವೇ ಆಗಿದೆ. ಊರ ಶಾಲೆಯಲ್ಲಿ ಹೆಚ್ಚೆಂದರೆ ಓದು ಬರಹದ ಅಭ್ಯಾಸ ಮಾಡಿರಬಹುದಷ್ಟೆ.

ನಾರಾಯಣ ಭಾಗವತರಿಗೆ ಅಣ್ಣನಾಗಬೇಕಾಗಿದ್ದ ಶ್ರೀ ಬಲಿಪ ಕೃಷ್ಣ ಭಟ್ಟ ಎಂಬವರು ಆ ಕಾಲದಲ್ಲಿ ಊರಿನ ಹೆಸರಾಂತ ಯಕ್ಷಗಾನ ಭಾಗವತರಾಗಿದ್ದರು. ದಿ॥ ಪಡ್ರೆ ಶ್ರೀಪತಿಶಾಸ್ತ್ರಿಗಳ ಸೋದರ ಮಾವ ಶ್ರೀ ಸೈಪಂಗಲ್ಲು ಅನಂತ ಭಟ್ಟ ಎಂಬವರು ಒಳ್ಳೆಯ ಸಂಸ್ಕೃತ ವಿದ್ವಾಂಸರೂ ಉತ್ತಮ ಅರ್ಥಧಾರಿಗಳೂ ಆಗಿದ್ದರು. ಶುಕರ ಪಾಟಾಳಿ ಎಂಬ ಭಾಗವತರೂ ಒಬ್ಬರಿದ್ದರು. ಊರಿನಲ್ಲಿ ಇನ್ನು ಹಲವು ಮಂದಿ ಭಾಗವತರು, ಮೃದಂಗವಾದಕರು, ಅರ್ಥಧಾರಿಗಳು ಇದ್ದರು. ಮನೆ ಮನೆಗಳಲ್ಲಿ ತಾಳಮದ್ದಳೆಯ ಕೂಟಗಳು ಜರಗುತಿದ್ದವು. ಊರಿನವರಿಗೆ ವಿನೋದದಿಂದ ಕಾಲಹರಣ ಮಾಡಲು ತಾಳಮದ್ದಳೆಯೊಂದೇ ಪ್ರಧಾನ ಸಾಧನವಾಗಿತ್ತು. ಬೇಸಿಗೆಯಲ್ಲಿ ತಿರುಗಾಟಕ್ಕೆ ಹೊರಟ ಯಾವುದಾದರೂ ಮೇಳಗಳು ಬಂದರೆ ಕೆಲವು ಬಯಲಾಟಗಳೂ ಆಗುತ್ತಿದ್ದವು. ಒಂದು ತಾಳಮದ್ದಳೆ ಅಥವಾ ಬಯಲಾಟ ನಡೆಯಿತೆಂದರೆ ಹಲವು ದಿನಗಳ ವರೆಗೆ ಅದರ ವಿಮರ್ಶೆ ನಡೆಯುತ್ತಿತ್ತು.

ತಿರುಗಾಟದ ಸ್ವಭಾವವುಳ್ಳ ಬಲಿಪರು ಸ್ವಾಭಾವಿಕವಾಗಿ ಯಕ್ಷಗಾನದ ಕಡೆಗೆ ಆಕರ್ಷಿಸಲ್ಪಟ್ಟರು. ತಾಳಮದ್ದಳೆ ನಡೆಯುವಲ್ಲೆಲ್ಲ ತಪ್ಪದೆ ಹಾಜರಾಗುತ್ತಿದ್ದರು. ಇವರು ನೋಡದೆ ಬಿಟ್ಟ ಬಯಲಾಟ

ವೊಂದೂ ಇರಲಿಲ್ಲ. ತಾನು ಕೇಳಿದ ಯಕ್ಷಗಾನ ಪ್ರಸಂಗಗಳ ಹಾಡುಗಳನ್ನು ತನ್ನಷ್ಟಕ್ಕೇ ಬಾಯಿಯಲ್ಲಿ ಗುಣುಗುಣಿಸುವುದು, ಅಭಿನಯ ಪೂರ್ವಕವಾಗಿ ಅರ್ಥ ಹೇಳುವುದು, ಆಟದ ವೇಷಗಳ ಅನುಕರಣೆ ಮಾಡುವುದು ಅಸಂಬದ್ಧ ಲಾಗ ಹಾಕುತ್ತ ಕುಣಿಯುವುದು ಮುಂತಾದ ಚೇಷ್ಟೆಗಳೇ ಬಲಿಪರ ಬಾಲ್ಯದ ಪ್ರಧಾನ ಪ್ರವೃತ್ತಿಗಳಾಗಿದ್ದವು.

ಸಾಧಾರಣ ಸಮವಯಸ್ಕರಾಗಿದ್ದ ಪಡ್ರೆ ಶ್ರೀಪತಿ ಶಾಸ್ತ್ರಿಗಳು, ಅವರ ಅಣ್ಣ ಗುರು ವೆಂಕಟೇಶ ಭಟ್ಟರು, ಶಿರಂತಡ್ಕ ಹರಿಯಣ್ಣ ಭಟ್ಟರು, ಸೈಪಂಗಲ್ಲು ನಾರಾಯಣ ಭಟ್ಟರು, ಕೋಟೆ ಗಣಪತಿ ಭಟ್ಟರು ಇವರೆಲ್ಲ ಒಂದುಗೂಡಿ ಊರಿನಲ್ಲಿ ಹುಡುಗರ ಒಂದು ಪ್ರತ್ಯೇಕ ಗುಂಪನ್ನೇ ಮಾಡಿಕೊಂಡಿದ್ದರು. ಬಯಲಾಟ, ತಾಳ ಮದ್ದಳೆಗಳಿಗೆ ಒಟ್ಟಾಗಿ ಹೋಗುವುದು, ಅಲ್ಲಲ್ಲಿ ಒಟ್ಟುಸೇರಿ ಏನಾದರೂ ಹಂಚಿಕೆಗಳನ್ನು ಮಾಡುವುದು, ಊರಿನಲ್ಲಿ ಆಗಾಗ ಕೀಟಲೆಗಳನ್ನೆಬ್ಬಿಸುವುದು, ಮನಸ್ಸು ಬಂದಂತೆ ತಿರುಗಾಡುವುದು, ಮುಂತಾದ ವೃತ್ತಿಗಳೇ ಈ ಗುಂಪಿನ ಪ್ರಧಾನ ಕಾರ್ಯಕ್ರಮಗಳಾಗಿದ್ದುವು.

ಯಕ್ಷಗಾನದಲ್ಲಿ ಭಾಗವಹಿಸುವ ವ್ಯಕ್ತಿಗಳಿಗೆ ಊರಿನಲ್ಲಿ ವಿಶೇಷ ಗೌರವವಿದ್ದುದರಿಂದ ಬರ ಬರುತ್ತ ಈ ಗುಂಪಿನವರಿಗೆ ಅದರಲ್ಲಿ ಆಸಕ್ತಿಯುಂಟಾಯಿತು. ಉತ್ತಮ ಕಂಠ ಮಾಧುರ್ಯವುಳ್ಳ ಬಲಿಪರು ಹಾಡುಗಾರಿಕೆಯ ಅಭ್ಯಾಸದಲ್ಲಿ ತೊಡಗಿದರು. ಪಾಟಾಳಿ ಶಂಕರ ಭಾಗವತರಲ್ಲಿ ಆಶ್ರಯ ವನ್ನು ಪಡೆದು ಕೆಲಕಾಲ ನಿಯಮಿತವಾಗಿ ಅಭ್ಯಾಸವನ್ನು ಮುಂದುವರಿಸಿದರು. "ಬಲಿಪ ನಾರಾಯಣ ನೂ ಪದ ಹೇಳುತ್ತಾನಂತೆ" ಎಂಬ ಸುದ್ದಿ ಊರಿನಲ್ಲಿ ಹರಡಿತು.

ಕೆಣಕಿದ ಅಭಿಮಾನ

ತುಂಟರೆಂದು ಪ್ರಸಿದ್ಧಿ ಪಡೆದ ಹುಡುಗರ ಬಳಗವು ದಿನಗಳೆದಂತೆ ಪ್ರತಿಷ್ಠಿತ ಸ್ವರೂಪವನ್ನು ತಾಳುತ್ತ ಬಂತು. ಶ್ರೀಪತಿ ಶಾಸ್ತ್ರಿಗಳು ಕುಲಕ್ರಮಾಗತವಾದ ಪೌರೋಹಿತ್ಯದೊಂದಿಗೆ ಸಂಸ್ಕೃತ ಭಾಷೆ ಯನ್ನೂ ಅಧ್ಯಯನ ಮಾಡಿ ಒಳ್ಳೆಯ ವಿದ್ವಾಂಸರೂ ಉತ್ತಮ ಅರ್ಥಧಾರಿಗಳೂ ಆದರು. ಸೈಪಂಗಲ್ಲು ನಾರಾಯಣ ಭಟ್ಟರೂ ಹರಿಯಣ್ಣ ಭಟ್ಟರೂ ಮೃದಂಗವಾದನವನ್ನು ಗುರುಮುಖೇನ ಅಭ್ಯಸಿಸಿ ಮೃದಂಗವಾದಕರೆನಿಸಿಕೊಂಡರು. ಕೋಟೆ ಗಣಪತಿ ಭಟ್ಟರು ಹಾಡುಗಾರಿಕೆಯನ್ನು ಕಲಿತು ಕೊಂಡರು.

ಇವರೆಲ್ಲ ಒಂದು ಗೂಡಿ ಅಲ್ಲಲ್ಲಿ "ಹುಡುಗರ" ತಾಳಮದ್ದಳೆ ಕೂಟಗಳನ್ನು ನಡೆಸಲು ಆರಂ ಭಿಸಿದರು. ಹಿರಿಯರ ಕೂಟಗಳಿಗೆ ಹೋಗಿ ತಪ್ಪದೆ ಭಾಗವಹಿಸಿ ಅನುಭವವನ್ನು ಗಳಿಸುವುದು, ಅದರ ಆಧಾರದ ಮೇಲೆ ತಾವೇ ಸ್ವತಂತ್ರವಾಗಿ ಕೂಟಗಳನ್ನು ಏರ್ಪಡಿಸುವುದು, ತಿಳಿದವರನ್ನು ಕೇಳಿ ಅಭ್ಯಾಸ ವನ್ನು ಮುಂದುವರಿಸುವುದು ಮುಂತಾದ ಯೋಗ್ಯ ಹವ್ಯಾಸಗಳತ್ತ ಈ ತರುಣರು ಚೆನ್ನಾಗಿ ಆಕರ್ಷಿ ಸಲ್ಪಟ್ಟರು.

ಊರಿನಲ್ಲಿ ಹಲವು ಕಡೆ ಇವರ ತಾಳಮದ್ದಳೆಗಳಾದವು. ನಾರಾಯಣ ಭಾಗವತರ ಇಂಪಾದ ಸ್ವರವನ್ನು ಕೇಳಿ ಹಲವರು, "ಚಿಂತೆ ಇಲ್ಲ, ಚೆನ್ನಾಗಿ ಅಭ್ಯಾಸಮಾಡಿದರೆ ಉತ್ತಮ ಭಾಗವತನಾಗುವ ಲಕ್ಷಣಗಳು ಇವನಲ್ಲಿವೆ" ಎಂದು ಹೇಳಲಾರಂಭಿಸಿದರು.

ಒಂದು ವರ್ಷ ಯಾವುದೋ ಪ್ರಸಿದ್ಧ ಮೇಳದವರು ಬಂದು ಪಡ್ರೆಯಲ್ಲಿ ಒಂದು ಬಯಲಾಟ ನ್ನಾಡಿದರು. ವೀಳ್ಯಕೊಟ್ಟು ಆಟ ಆಡಿಸಿದ ಊರಿನ ಪ್ರತಿಷ್ಠಿತ ಮಹಾನುಭಾವರ ಮನೆಯಲ್ಲಿ ಮರು ದಿನ ಬೆಳಗ್ಗಿನ ಉಪಾಹಾರದ ಹೊತ್ತಿಗೆ ತುಂಬ ಜನ ಸೇರಿದ್ದರು. ಬಲಿಪರೂ ಅಲ್ಲಿದ್ದರು. ಸ್ವಾಭಾವಿಕವಾಗಿ

ಹಿಂದಿನ ರಾತ್ರಿ ನಡೆದ ಆಟದ ವಿಮರ್ಶೆಯ ಮಾತುಕತೆ ನಡೆದಿತ್ತು. ಮಾತಿನ ಮಧ್ಯದಲ್ಲಿ ಮಹನೀಯರೊಬ್ಬರು, ಬಳಿಯಲ್ಲೇ ಕುಳಿತಿದ್ದ ಬಲಿಪರ ಮುಖ ನೋಡುತ್ತ, "ನಿನ್ನೆ ಆಟದಲ್ಲಿ ಪದ ಹೇಳಿದ ಆ ಭಾಗವತನಿಗಿಂತ, ಮನಸ್ಸು ಮಾಡಿದರೆ ನಮ್ಮ ನಾರಾಯಣನು ಇನ್ನು ಚೆನ್ನಾಗಿ ಹೇಳಿಬಿಟ್ಟಾನು". ಎಂದು ಹೇಳಿದರು. ಬಲಿಪರ ತುಂಟ ಸ್ವಭಾವವನ್ನು ಮಾತ್ರ ಅರಿತಿದ್ದ ಮನೆಯ ಯಜಮಾನರಿಗೆ ಈ ಮಾತು ಅಸಂಗತವೆಂದು ತೋರಿತು. ಈ "ಪೋಕ್ರಿ ಹುಡುಗ" ಮೇಳದ ಭಾಗವತನಾಗಿ ಆಟ ಆಡಿಸುವುದೆಂದರೇನು? ಅಸಂಭವವೆಂದೇ ಅವರು ತಿಳಿದಿದ್ದರು. ಹಾಗಾಗಿ ಈ ಮಾತು ಕೇಳಿದೊಡನೆಯೇ ಬಲಿಪರ ಕಡೆಗೆ ತಿರಸ್ಕಾರದ ದೃಷ್ಟಿಯನ್ನು ಬೀರಿ ಥಟ್ಟನೆ ಅವರು, "ಯಾರು? ನಮ್ಮ ನಾರಾಯಣನೋ? ಇವನು ಮೇಳದ ಭಾಗವತನಾಗಿ ಆಟ ಆಡಿಸುವಾಗ ನಾನು ದೀವಟಿಗೆ ಹಿಡಿದೇನು. ನಿಮಗೆಲ್ಲೋ ಹುಚ್ಚು." ಎಂದು ಘೊಳ್ಳೆಂದು ನಗುತ್ತ ಮರ್ಮಭೇದಕ ಮಾತನ್ನಾಡಿದರು. ಹತ್ತಿರವಿದ್ದವರೆಲ್ಲ ಯಜಮಾನರ ಮಾತು ಹೌದು, ಸರಿ ಎಂಬಂತೆ ತಲೆ ಆಡಿಸುತ್ತ ಗಟ್ಟಿಯಾಗಿ ನೆಗಾಡಿದರು. ಎಳೆ ಪ್ರಾಯದ ಬಲಿಪರ ಹೃದಯವನ್ನು ಚುಚ್ಚಿ ಎಳೆದಂತಾಯಿತು. ಅವರ ಆತ್ಮಾಭಿಮಾನಕ್ಕೆ ಬಲವಾದ ಪೆಟ್ಟಾಯಿತು. ಸಿಟ್ಟು ಅಪಮಾನಗಳಿಂದ ಮುಖ ಕೆಂಪಾಯಿತು. ಆದರೆ ಹಿರಿಯರ ಆ ಸಭೆಯಲ್ಲಿ ಅವರು ಏನೂ ಮಾತನಾಡುವಂತಿರಲಿಲ್ಲ. ಮೌನವಾಗಿ ಅಪಮಾನವನ್ನು ಸಹಿಸಿ ಮನಸ್ಸಿನಲ್ಲೇ ಭೀಷ್ಮ ಪ್ರತಿಜ್ಞೆಯನ್ನು ಮಾಡಿಕೊಂಡರು.

ಮುಂದೆ ಕೆಲವೇ ವರ್ಷಗಳಲ್ಲಿ ಬಲಿಪರು ಶಾಸ್ತ್ರೀಯವಾಗಿ ಯಕ್ಷಗಾನ ಹಾಡುಗಾರಿಕೆಯನ್ನು ಅಭ್ಯಾಸ ಮಾಡಿ ಮೇಳದ ಭಾಗವತರಾಗಿ ತಿರುಗಾಟಕ್ಕೆ ಹೊರಟರು. ಮೇಳ ಪಡ್ರೆಗೆ ಬಂತು. ಅದೇ ಪ್ರತಿಷ್ಠಿತ ವ್ಯಕ್ತಿಯ ಮನೆಯ ಸಮೀಪದ ಗದ್ದೆಯಲ್ಲಿ ಬಯಲಾಟ ನಿಶ್ಚಯವಾಯಿತು.

ಹಿಂದೆ ನಡೆದ ಪ್ರಕರಣದ ಸುದ್ದಿ ಈ ಮೊದಲೇ ಊರಿನಲ್ಲಿ ಸಾಕಷ್ಟು ಪ್ರಚಾರವಾಗಿತ್ತು. ಏನಾಗುವುದೋ ನೋಡಬೇಕೆಂಬ ಕುತೂಹಲದಿಂದ ಆಟದ ಗದ್ದೆಯಲ್ಲಿ ಸಾವಿರಾರು ಜನರು ಬಂದು ಸೇರಿದ್ದರು. ಸಾಯಂಕಾಲ ಯಾರೊಡನೆಯೋ ಮಾತನಾಡುವಾಗ ಬಲಿಪರು, "ಬರುವಾಗ ಮೇಳದಲ್ಲಿ ಒಂದು ಜನವನ್ನು ಬಿಟ್ಟು ಬಂದಿದ್ದೇನೆ. ದೀವಟಿಗೆ ಹಿಡಿಯುವವರು ಇಲ್ಲೇ ಇದ್ದಾರಲ್ಲ. ಹಾಗಾಗಿ ಈವತ್ತಿನ ಮಟ್ಟಿಗೆ ಅವನಿಗೆ ರಜೆ ಕೊಟ್ಟಿದ್ದೇನೆ." ಎಂದು ಪಂಥಾಹ್ವಾನವನ್ನೂ ಕೊಟ್ಟಿದ್ದರು.

ಪಾಪ ಆ ಗಣ್ಯವ್ಯಕ್ತಿಯ ಫಜೀತಿ ಯಾರಲ್ಲಿ ಹೇಳುವುದು? ಜಗಜ್ಜಾಹೀರಾಗಿ ತಾವು ಆಡಿದ ಮಾತು, ಅದನ್ನು ಅಳಿಸುವುದು ಹೇಗೆ? ನಡೆಸುವುದಾದರೂ ಹೇಗೆ? ಆದರೂ ಸಹೃದಯರಾದ ಅವರ ಅಂತರ್ಯದಲ್ಲಿ ಹುಡುಗ ಮುಂದೆ ಬಂದನಲ್ಲ ಎಂಬ ಅಭಿಮಾನವೂ ಇತ್ತು.

ಆಟ ಪ್ರಾರಂಭವಾಯಿತು. ಸಂಗೀತ ಭಾಗವತರ ಕಾರ್ಯಕ್ರಮ ಮುಗಿದ ಮೇಲೆ ಅಂದಿನ ಕ್ರಮದಂತೆ ಬಲಿಪರು "ಭಾಗವತನ ವೇಷ ಧರಿಸಿ" ಕೈಯಲ್ಲಿ ಜಾಗಟೆ ಹಿಡಿದು ರಂಗಸ್ಥಳಕ್ಕೆ ಬಂದರು. ಒಂದೆರಡು ಪದ್ಯಗಳನ್ನು ಹಾಡಿ ಮುಗಿಸುವಷ್ಟರಲ್ಲಿ ಆ ಮಹನೀಯರು ಎಲ್ಲಿಂದಲೋ ಬಿರುಗಾಳಿ ಬಂದಂತೆ ರಂಗಸ್ಥಳವನ್ನು ಪ್ರವೇಶಿಸಿದರು. ದೀವಟಿಗೆಯವನ ಬಳಿಗೆ ಹೋಗಿ ಅವನ ಕೈಯಿಂದ ದೀವಟಿಗೆಯನ್ನು ಸೆಳೆದು, ತುಳುಭಾಷೆಯಲ್ಲಿ "ಅಂಚ ಅತ್ ಇಂಚ ಪತ್‌ಲ" (ಹಾಗಲ್ಲ ಹೀಗೆ ಹಿಡಿ) ಎಂದು ಹೇಳಿ ಒಮ್ಮೆ ತಾವು ಹಿಡಿದು ತೋರಿಸಿ ಅವನ ಕೈಗಿತ್ತರು. ಸಭೆಯಲ್ಲಿ ದೊಡ್ಡ ಉದ್ಗಾರಗಳೊಂದಿಗೆ ಪ್ರಚಂಡ ಕರತಾಡನವಾಯಿತು.

ತಲೆ ತಗ್ಗಿಸುತ್ತ ಆ ಮಹನೀಯರು ರಂಗಸ್ಥಳದಿಂದ ಹಿಂದಿರುಗಿದರು. ಕೂಡಲೇ ಬಲಿಪರು ಜಾಗಟೆ ಸಮೇತ ಮುಂದೆ ಬಂದು ಹಿರಿಯರಾದ ಅವರ ಎರಡು ಕಾಲುಗಳನ್ನೂ ಹಿಡಿದು ನಮಸ್ಕರಿಸಿದರು. ಅವರು ತಮ್ಮೆರಡು ಕೈಗಳಿಂದಲೂ ಬಲಿಪರನ್ನು ಹಿಡಿದು ಆಲಿಂಗಿಸಿ ತಲೆಯ ಮೇಲೆ ಕೈಯಾಡಿ

ಸುತ್ತ "ಒಳ್ಳೆ ಕೀರ್ತಿವಂತನಾಗು" ಎಂದು ಆಶೀರ್ವದಿಸಿದರು. ಇಬ್ಬರ ಕಣ್ಣುಗಳಿಂದಲೂ ನೀರು ತೊಟ್ಟಿಕ್ಕುತ್ತಿತ್ತು. ಈ ದೃಶ್ಯವನ್ನು ಕಂಡ ಪ್ರೇಕ್ಷಕರು ಬೆರಗಾದರು. ಇಬ್ಬರ ಮನಸ್ಸೂ ನಿರ್ಮಲವಾಯಿತು.

ಚಾಟಿ ಏಟಿನಂತಹ ನಿಮ್ಮ ಮಾತು ಬಾರದಿರುತ್ತಿದ್ದರೆ, ನಾನು ಹೀಗಾಗುತ್ತಿದ್ದೆನೇ ಎಂಬ ಭಾವ ಬಲಿಪರ ಮುಖದ ಮೇಲಿತ್ತು.

ತಾನು ಹಂಗಿಸಿ, ಮಾನಖಂಡನೆಯನ್ನು ಮಾಡಿದ್ದರೂ ಅದರಿಂದ ಸತ್ಪರಿಣಾಮವಾಯಿತಲ್ಲ ಎಂಬ ತೃಪ್ತಿಯೂ ಸಮಾಧಾನವೂ ಆ ಹಿರಿಯರಿಗೆ ಉಂಟಾಗಿತ್ತು.

ವಿವಾಹ-ಪತ್ನೀವಿಯೋಗ

ಹುಡುಗನಾಗಿದ್ದಾಗಲೇ ಬಲಿಪರು ಒಳ್ಳೆ ಸ್ಫುರದ್ರೂಪಿಯಾಗಿದ್ದರು. ಶುಭ್ರವಾದ ಗೌರ ವರ್ಣ. ಅಚ್ಚುಕಟ್ಟಾದ ಮೈಕಟ್ಟು ನೀಳವಾದ ನಿಲುವು. ಇವುಗಳಿಂದ ಒಮ್ಮೆ ನೋಡಿದವನನ್ನು ತನ್ನೆಡೆಗೆ ಆಕರ್ಷಿಸುವ ಸುಂದರವಾದ ಆಕೃತಿ ಅವರಿಗಿತ್ತು.

ಇಂಥವನನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಊರಿನ ಕನ್ಯಾಪಿತೃಗಳು ಬಯಸುವುದು ಸ್ವಾಭಾವಿಕ. ಬಹಳ ಸಣ್ಣ ಪ್ರಾಯದಲ್ಲೇ ಹುಡುಗ ಹುಡುಗಿಯರಿಗೆ ಧಾರಾಳವಾಗಿ ಮದುವೆ ನಡೆಯುತ್ತಿದ್ದ ಕಾಲ ಅದು.

ಸ್ವಜಾತಿಬಂಧುಗಳಾಗಿದ್ದ ಪಂಜಿಕುಂಜೆ ಮಾಧವ ಭಟ್ಟರ ಮಗಳು ಲಕ್ಷ್ಮಿ ಎಂಬ ಕುಮಾರಿಯೊಂದಿಗೆ ಹದಿನೆಂಟು ವರ್ಷ ಪ್ರಾಯದಲ್ಲೇ ಬಲಿಪರ ಮದುವೆಯಾಯಿತು. ಕುಮಾರಿ ಲಕ್ಷ್ಮಿಯು ಪ್ರತಿಯೊಂದು ವಿಚಾರದಲ್ಲಿಯೂ ಲಕ್ಷ್ಮಿಯಾಗಿಯೇ ಇದ್ದಳು. ರೂಪಲಕ್ಷ್ಮಿ, ಗೃಹಲಕ್ಷ್ಮಿ, ಶೀಲಲಕ್ಷ್ಮಿ, ಸರ್ವವಿಧಗಳಲ್ಲಿಯೂ ಬಲಿಪರಿಗೆ ಅನುರೂಪಳಾಗಿದ್ದಳು. ಈ ದಂಪತಿಗಳನ್ನು ನೋಡಿ ಎಷ್ಟೋ ಮಂದಿ ರತಿ-ಮನ್ಮಥರೆಂದು ಉದ್ಗಾರವೆತ್ತಿದ್ದುಂಟು.

ವಿಷಮ ದಾಂಪತ್ಯಗಳನ್ನು ಜೋಡಿಸುವುದರಲ್ಲಿ ನಿಷ್ಣಾತ ಎಂಬ ಅಪವಾದ ಬ್ರಹ್ಮನಿಗುಂಟಷ್ಟೆ! ಬಲಿಪರ ವಿಷಯದಲ್ಲಿ ಬ್ರಹ್ಮನೂ ತನ್ನ ಮೇಲಿನ ಅಪವಾದವನ್ನು ಕಳೆದುಕೊಂಡ ಎಂದು ಜನರು ಆಡಿಕೊಳ್ಳುವಂತಾಯಿತು. ಆದರೆ ವಿಧಿ ತನ್ನ ಕೈವಾಡವನ್ನು ನಡೆಸಿಯೇ ಬಿಟ್ಟಿತು.

ವಿವಾಹವಾಗಿ ಒಂದೆರಡು ವರ್ಷಗಳಾಗುವುದರೊಳಗೆ ಬಲಿಪರ ಪತ್ನಿಯು ಅಕಸ್ಮಾತ್ತಾಗಿ ಅಸ್ವಸ್ಥಳಾದಳು. ಸಾಧಾರಣ ಜ್ವರವೆಂದು ಆಲೋಚಿಸಿ ಸಣ್ಣ ಪುಟ್ಟ ಚಿಕಿತ್ಸೆಗಳನ್ನು ಮಾಡುತ್ತಿದ್ದಂತೆಯೇ ಎರಡೇ ದಿನಗಳಲ್ಲಿ ಜ್ವರ ವಿಕೋಪಕ್ಕೆ ಏರಿತು. ಏನು, ಎಂಥದು ಎಂದು ವಿಮರ್ಶಿಸಿ ಸರಿಯಾದ ಚಿಕಿತ್ಸೆಯನ್ನು ಪ್ರಾರಂಭಿಸುವ ಆಲೋಚನೆ ನಡೆಯುತ್ತಿದ್ದಾಗಲೇ ಬಂಧುಗಳನ್ನು ಆಶ್ಚರ್ಯ ದುಃಖಗಳಲ್ಲಿ ಮುಳುಗಿಸಿ ಆ ಸಾಧ್ವಿಯು ಈ ಲೋಕವನ್ನು ಬಿಟ್ಟು ತೆರಳಿದಳು.

ಅನಿರೀಕ್ಷಿತವಾಗಿ ಸಿಡಿಲು ಬಡಿದಂತೆ ಬಂದ ಈ ಆಘಾತದಿಂದ ಬಲಿಪರು ತತ್ತರಿಸಿ ಹೋದರು. ತಾನು ಬಹುವಾಗಿ ಪ್ರೀತಿಸುತ್ತಿದ್ದ, ಜೀವನಸರ್ವಸ್ವವೆಂದು ತಿಳಿದಿದ್ದ ಸಹಧರ್ಮಿಣಿಯು ತೀರಿ ಹೋಗಿದ್ದಾಳೆಂಬ ನಂಬಿಕೆಯೇ, ಪ್ರಕ್ಷುಬ್ಧವಾಗಿದ್ದ ಅವರ ಬುದ್ಧಿಯಲ್ಲಿ ಕೆಲವು ದಿನಗಳ ವರೆಗೆ ನೆಲೆ ನಿಲ್ಲಲಿಲ್ಲ. ಈ ವೇದನೆಯಿಂದ ಕೆಲವು ತಿಂಗಳುಗಳ ತನಕ ಅವರು ಅರೆಹುಚ್ಚನಂತಾಗಿದ್ದರು. ಕ್ರೌಂಚಮಿಥುನದಿಂದ ಒಂದನ್ನು ಕೊಂದು ಉರುಳಿಸಿದ ಬೇಡನ ಕ್ರೌರ್ಯವನ್ನು ಕಂಡು ವಾಲ್ಮೀಕಿಯ ಬಾಯಿಯಿಂದ ಉದ್ಗಾರವು ಹೊರಟಂತೆ, ವಿಧಿಯ ಈ ಕ್ರೂರ ವಿನೋದವನ್ನು ನೋಡಿ ಎಲ್ಲರೂ ಮರುಗುವಂತಾಯಿತು.

ಮರು ಮದುವೆಯಾಗುವಂತೆ ಬಲಿಪರನ್ನು ಅನೇಕರು ಒತ್ತಾಯಿಸಿದರು. ಇಂತಹ ಸುಂದರ ತರುಣನಿಗೆ ಮಗಳನ್ನು ಕೊಡುವ ಕನ್ಯಾಪಿತೃಗಳ ಸಂಖ್ಯೆಯೇನೂ ಕಡಿಮೆಯಾಗಿರಲಿಲ್ಲ. ಯಾರು ಏನು ಹೇಳಿದರೂ ಅವರು ತಮ್ಮ ನಿರ್ಧಾರದಿಂದ ಕದಲಲಿಲ್ಲ. ಅಗಲಿದ ಪತ್ನಿಯ ಮಧುರಸ್ಮೃತಿಯನ್ನು ಅಪವಿತ್ರಗೊಳಿಸಲು ಎಷ್ಟಕ್ಕೂ ಅವರ ಮನಸ್ಸು ಒಡಂಬಡಲಿಲ್ಲ. ಆ ಸ್ಥಾನವನ್ನು ಅಲಂಕರಿಸುವ ಯೋಗ್ಯತೆಯುಳ್ಳ ಇನ್ನೊರ್ವ ಹುಡುಗಿಯು ಇಲ್ಲವೇ ಇಲ್ಲವೆಂದು ಅವರ ನಿರ್ಧಾರವಾಗಿತ್ತು.

ನಿರಂತರ ಸಾಧನೆ

ಕಲಾವಿದರ ಜೀವನದಲ್ಲಿ ಪ್ರಾಯಶಃ ವಿಧಿಯು ಉದ್ದೇಶ ಪೂರ್ವಕವಾಗಿ ಇಂತಹ ಯಾವುದಾದರೊಂದು ದುರ್ಘಟನೆಯನ್ನು ತಂದೊಡ್ಡುತ್ತಾನೆ ಎಂದು ತೋರುತ್ತದೆ. ಇದರಿಂದ ನಿಜವಾದ ಕಲಾವಿದನು ತಪಸ್ವಿಯಾಗುತ್ತಾನೆ. ಬಲಿಪರ ಜೀವನವೂ ಹಾಗೆಯೇ ರೂಪುಗೊಂಡಿತು. ಪತ್ನೀವಿಯೋಗದಿಂದ ನೊಂದ ಹೃದಯವನ್ನೂ, ಪ್ರಕ್ಷುಬ್ಧವಾದ ಬುದ್ಧಿಯನ್ನೂ ಅವರು ಯಕ್ಷಗಾನದಲ್ಲಿ ಲೀನಗೊಳಿಸಿದರು. ಅಂದಿನಿಂದ ಇತರ ಎಲ್ಲ ವ್ಯವಹಾರಗಳನ್ನೂ ಆಸಕ್ತಿಗಳನ್ನೂ ಉಪೇಕ್ಷಿಸಿ ಕೇವಲ ಯಕ್ಷಗಾನವೊಂದನ್ನೇ ಅವರು ತಮ್ಮ ಜೀವನಸರ್ವಸ್ವವನ್ನಾಗಿ ಮಾಡಿಕೊಂಡರು. ಕಡೆಯ ತನಕ ಯಕ್ಷಗಾನವೊಂದೇ ಅವರ ಉಸಿರಾಗಿತ್ತು.

ಹಾಡುಗಾರಿಕೆಯನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರು. ಅದರಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ನವೀನ ವಿಧಾನಗಳನ್ನು ಕಂಡು ಹಿಡಿದರು. ಚೆಂಡೆ ವಾದನ, ಮೃದಂಗ ವಾದನ, ವೇಷಗಾರಿಕೆ, ನೃತ್ಯ, ಅರ್ಥವಿವರಣೆ ಪ್ರತಿಯೊಂದು ವಿಭಾಗವನ್ನೂ ಪರಿಷ್ಕರಿಸಿ, ಕೇವಲ ಹಳ್ಳಿಯ ಪಾಮರರ ಕಲೆಯೆಂದು ಕಡೆಗಣಿಸಲ್ಪಟ್ಟ ಯಕ್ಷಗಾನವನ್ನು ವಿದ್ಯಾವಂತರೂ, ಪಂಡಿತರೂ, ಆಧುನಿಕ ನಾಗರಿಕರೂ ಮೆಚ್ಚಿ ತಲೆದೂಗುವಂತೆ ಮಾಡಿದರು ಆದ್ದರಿಂದಲೇ ಬಲಿಪ ನಾರಾಯಣ ಎಂಬ ನಿಜವಾದ ಅವರ ಹೆಸರು ಮರೆಯಾಗಿ "ಭಾಗವತರು" ಎಂಬ ಅನ್ವರ್ಥನಾಮವೇ ಚಿರಸ್ಥಾಯಿಯಾಯಿತು. ಯಕ್ಷಗಾನದಲ್ಲಿ ಅವರು ತಳೆದ ಶ್ರಮವನ್ನೂ, ಅದಕ್ಕೆ ಸಲ್ಲಿಸಿದ ಸೇವೆಯನ್ನೂ ಮನಗಂಡ ಹಲವರು ಅಭಿಮಾನದಿಂದ ಅವರನ್ನು "ಯಕ್ಷಗಾನ ಪಿತಾಮಹ" ಎಂದು ಕರೆಯುತ್ತಾರೆ.

ಪತ್ನಿಯ ದೇಹಾವಸಾನವಾದ ಮೇಲೆ ಕೆಲವು ತಿಂಗಳ ಕಾಲ ಯಾವ ನಿರ್ದಿಷ್ಟ ಗುರಿಯೂ ಇಲ್ಲದೆ ಮನಬಂದಂತೆ ತಿರುಗಾಡುತ್ತ ವ್ಯರ್ಥವಾಗಿ ಕಾಲ ಕಳೆಯುತ್ತಿದ್ದ ಬಲಿಪರು ಕೊನೆಗೊಂದು ದಿನ ತಮ್ಮ ಬದುಕಿನ ಪ್ರಧಾನ ಲಕ್ಷ್ಯವನ್ನು ಕಂಡುಕೊಂಡರು. ಈ ನಿರ್ಧಾರವು ಮನಸ್ಸಿನಲ್ಲಿ ಮೂಡಿದ ಒಡನೆಯೇ ಯಾರಲ್ಲಿಯೂ ಹೇಳದೆ ಕೇಳದೆ ನೇರವಾಗಿ ಶ್ರೀ ಕೂಡ್ಲು ಸುಬ್ರಾಯ ಶಾನುಭಾಗರಲ್ಲಿಗೆ ಹೋಗಿ ಶಿಷ್ಯವೃತ್ತಿಯನ್ನು ಅಂಗೀಕರಿಸಿದರು. ಹತ್ತು ವರ್ಷಗಳ ಕಾಲ ಅವರ ಬಳಿಯಲ್ಲಿದ್ದು ಸಂಗೀತ ಯಕ್ಷಗಾನ ಅಭ್ಯಾಸ ಮಾಡಿ, ಶ್ರೇಷ್ಠ ಭಾಗವತರೆನಿಸಿ ಜನರ ಮುಂದೆ ಕಾಣಿಸಿಕೊಂಡರು.

ದಿ|| ಶ್ರೀ ಕೂಡ್ಲು ಸುಬ್ರಾಯ ಶಾನುಭಾಗರು ಸಾಧಾರಣ ಒಬ್ಬ ವ್ಯಕ್ತಿಯಂತಿರದೆ ಆ ಕಾಲದಲ್ಲಿ ಹಲವು ಕಲೆಗಳು ಸಂಗಮವಾಗಿರುವ ಒಂದು ದೊಡ್ಡ ಸಂಸ್ಥೆಯಂತಿದ್ದರು. ಮೊದಲಾಗಿ ಅವರು ಪ್ರಸಿದ್ಧ ಸಂಗೀತವಿದ್ವಾಂಸರಾಗಿದ್ದರು. ಕೇವಲ ಪೂರ್ವಪುಣ್ಯದಿಂದ ಮಾತ್ರ ಪಡೆಯಲು ಸಾಧ್ಯವಾಗುವಂತಹ ಉತ್ತಮ ಶಾರೀರಸಂಪತ್ತು ಅವರಲ್ಲಿತ್ತು. ದಕ್ಷಿಣದ ಅನೇಕ ಮಂದಿ ಕರ್ಣಾಟಕ ಸಂಗೀತದ ಘನವಿದ್ವಾಂಸರು ಅವರಲ್ಲಿಗೆ ಬಂದು ಶಾನುಭಾಗರ ವಿದ್ವತ್ತನ್ನೂ ಕಂಠಮಾಧುರ್ಯವನ್ನೂ ಮನಃ

ಪೂರ್ವಕವಾಗಿ ಮೆಚ್ಚಿ ಹೊಗಳಿ ಹೋಗುತ್ತಿದ್ದರು. ಕೊಳಲು, ವೀಣೆ, ಫಿಡ್ಲು, ಮೃದಂಗ ಮುಂತಾದ ಹಲವು ವಾದ್ಯಗಳನ್ನು ಬಾರಿಸುವುದರಲ್ಲಿಯೂ ಅವರು ನಿಷ್ಣಾತರಾಗಿದ್ದರು.

ಯಕ್ಷಗಾನದ ವಿಹಾರಭೂಮಿ ಎನಿಸಿದ ಕುಂಬಳೆ ಸೀಮೆಯಲ್ಲಿ ಕೂಡ್ಲು ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ಕೂಡ್ಲು ಮನೆತನದವರು ಮೊದಲಿನಿಂದಲೂ ಯಕ್ಷಗಾನಕ್ಕೆ ತಾಯಿಬೇರಿನಂತೆ ಆಧಾರಭೂತರಾಗಿದ್ದರು. ಕೂಡ್ಲು ದೇವಸ್ಥಾನದ ಕಡೆಯಿಂದ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವರ ಹೆಸರಿನಲ್ಲಿ ನಡೆಯುತ್ತಿರುವ ಕೂಡ್ಲು ಮೇಳವು ಬಹು ಪುರಾತನ ಮೇಳಗಳಲ್ಲಿ ಒಂದಾಗಿದೆ. ಸ್ವತಃ ಭಾಗವತಿಕೆಯನ್ನು ನಿರ್ವಹಿಸುತ್ತಿದ್ದ ಸುಬ್ರಾಯಶಾನುಭಾಗರ ಕಾಲದಲ್ಲಿ ಅವರ ಮೇಲ್ವಿಚಾರಣೆ ಮತ್ತು ಪ್ರೋತ್ಸಾಹಗಳಿಂದ ಈ ಮೇಳವು ಇತರ ಎಲ್ಲ ಮೇಳಗಳಿಗಿಂತಲೂ ಉತ್ತಮವೆನಿಸಿಕೊಂಡಿತ್ತು. ಸುಬ್ರಾಯ ಶಾನುಭಾಗರ ಮನೆಯು ಕೌಟುಂಬಿಕರು ವಾಸಮಾಡುವ ಸಾಧಾರಣ ಮನೆಯಂತಿರದೆ ಒಂದು ಕಲಾವಿಹಾರಕ್ಷೇತ್ರದಂತಿತ್ತು. ಸಂಗೀತಗಾರರು, ಭಾಗವತರು, ಮೃದಂಗವಾದಕರು, ವೇಷಧಾರಿಗಳು, ಅರ್ಥಧಾರಿಗಳು ಮುಂತಾದ ಎಲ್ಲ ಬಗೆಯ ಕಲಾವಿದರೂ ಕಲಾಭ್ಯಾಸಿಗಳೂ ಅಲ್ಲಿ ಯಾವಾಗಲೂ ಬಂದು ಸೇರುತ್ತಿದ್ದರು. ಬಂದವರಿಗೆಲ್ಲ ಆದರದ ಉಪಚಾರವೂ, ಒಳ್ಳೆಯ ಆತಿಥ್ಯವೂ ಅಲ್ಲಿ ಯಾವಾಗಲೂ ಕಾದಿರುತ್ತಿತ್ತು. ಹೀಗಾಗಿ ಕೂಡ್ಲು ಮನೆಯು ಕಲಾವಿದರಿಗೆ ಒಂದು ಯಾತ್ರಾಸ್ಥಳವೇ ಆಗಿತ್ತು.

ಸುಬ್ರಾಯ ಶಾನುಭಾಗರ ಮೇಲೆ ಬಲಿಪರ ಗುರು ಭಕ್ತಿಯು ಅಸಾಧಾರಣವಾಗಿತ್ತು. ತಾನು ಶಿಷ್ಯವೃತ್ತಿಯನ್ನು ಅಂಗೀಕರಿಸಿದ ಮೇಲೆ ಒಂದೇ ಒಂದು ಸಲವಾದರೂ ಅವರು ತಮ್ಮ ಗುರುಗಳನ್ನು ಹೆಸರು ಹಿಡಿದು ನಿರ್ದೇಶಿಸಿದ್ದಿಲ್ಲ. ಸಂದರ್ಭ ಬಂದಾಗಲೆಲ್ಲ "ಅವರು" ಎಂದೇ ಹೇಳುತ್ತಿದ್ದರು. ಸುಬ್ರಾಯ ಶಾನುಭಾಗರಿಗೂ ಬಲಿಪರಂತಹ ಪ್ರತಿಭಾನ್ವಿತ ಶಿಷ್ಯನು ದೊರೆತುದರಿಂದ ತುಂಬ ಸಂತೋಷವಾಗಿತ್ತು. ಅವರು ಮನಃಪೂರ್ವಕವಾಗಿ ವಿದ್ಯಾದಾನ ಮಾಡಿದರು. ಬಲಿಪರು ಶ್ರದ್ಧಾಭಕ್ತಿಗಳಿಂದ ಅದನ್ನು ಸ್ವೀಕರಿಸಿದರು. ಇಬ್ಬರ ಪ್ರಯತ್ನವೂ ಫಲಕಾರಿಯಾಯಿತು.

ಇನ್ನು ಅಭ್ಯಾಸ ನಡೆಯುತ್ತಿದ್ದಾಗಲೇ ಗುರುಗಳು ಶಿಷ್ಯನನ್ನು ತಮ್ಮ ಮೇಳದ ಸಂಗೀತ ಭಾಗವತನಾಗಿ ತಿರುಗಾಟಕ್ಕೆ ಕಳುಹಿಸಿದ್ದರು. ಸಾಕಷ್ಟು ಅನುಭವ ಬಂತೆಂದು ಮನವರಿಕೆಯಾದ ಮೇಲೆ ಮೇಳದ ಪ್ರಧಾನ ಭಾಗವತಿಕೆಯನ್ನೇ ಒಪ್ಪಿಸಿಕೊಟ್ಟರು.

ಕೆಸರಿನ ಮೇಲೆ ಬಿದ್ದ ಸೂರ್ಯಕಿರಣದ ಪ್ರಭೆಯು ನಿಸ್ತೇಜವಾಗುತ್ತದೆ. ಅದೇ ವಜ್ರದ ಮೇಲೆ ಬಿದ್ದಾಗ ಒಂದಕ್ಕೆ ನಾಲ್ಕರಷ್ಟಾಗಿ ಪ್ರತಿಫಲಿಸುತ್ತದೆ. ಅಂತೆಯೇ ಉತ್ತಮ ಶಿಷ್ಯನಿಗೆ ಕೊಟ್ಟ ವಿದ್ಯೆಯು ಒಂದಕ್ಕೆ ನಾಲ್ಕರಷ್ಟಾಗಿ ಪುಷ್ಟಿ ಹೊಂದುತ್ತದೆ. ಬಲಿಪರು ತಾವು ಗುರುವಿನಿಂದ ಪಡೆದುದನ್ನು ಹತ್ತು ಪಾಲು ಹೆಚ್ಚು ಬೆಳೆಸಿಕೊಂಡರು. ತಾವು ಕಲಿತ ಸಂಗೀತದ ಮಾರ್ಗಪದ್ಧತಿಯನ್ನು ಯಕ್ಷಗಾನದ ಜಾನಪದ ಶೈಲಿಗೆ ಸಮರ್ಪಕವಾಗಿ ಅಳವಡಿಸಿಕೊಂಡರು. ನೃತ್ಯ, ತಾಳ, ಭಾವ, ರಸ, ಸಾಹಿತ್ಯ ಪ್ರಧಾನವಾದ ಯಕ್ಷಗಾನದ ಹಾಡುಗಬ್ಬಗಳಲ್ಲಿ ಇವುಗಳಿಗೆ ಭಂಗ ಬಾರದಂತೆ ಶಾಸ್ತ್ರದ ಎಲ್ಲೆ ಕಟ್ಟುಗಳು ಎಷ್ಟು ಬೇಕೋ ಅಷ್ಟನ್ನೇ ಮಿತವಾಗಿ ಪ್ರಯೋಗಿಸಿದರು. ಹಿಂದಿನ ಭಾಗವತರು ಯಾವುದೋ ಒಂದು ಸಂಪ್ರದಾಯವನ್ನು ಅನುಸರಿಸಿ ಏರು ಪೇರುಗಳಿಲ್ಲದೆ ಹಾಡುತ್ತಿದ್ದ ಅನೇಕ ರಾಗ - ತಾಳಗಳ ಪದ್ಯಗಳನ್ನು ರಸಾಭಿವ್ಯಕ್ತಿಯಾಗುವಂತೆ ನೂತನ ಕ್ರಮದಲ್ಲಿ ಹಾಡಲಾರಂಭಿಸಿದರು. ಕಂದಪದ್ಯ, ಭಾಮಿನಿ, ವಾರ್ಧಿಕ, ವೃತ್ತ, ವಚನ ಇತ್ಯಾದಿಗಳನ್ನು ಹಾಡುವಾಗ ಭಾವ ಸಂಚಾರಕ್ಕೆ ಪ್ರಾಧಾನ್ಯವನ್ನು ಕೊಟ್ಟು ಅವುಗಳಿಗೆ ಒಂದು ಹೊಸ ಸ್ವರೂಪವನ್ನೇ ನಿರ್ಮಾಣ ಮಾಡಿದರು. ತಾಳಗತಿಗಳಲ್ಲಿಯೂ ವಿವಿಧ ಪ್ರಯೋಗಗಳನ್ನು ಮಾಡಿ ಮೃದಂಗ ಚೆಂಡೆಗಳ ವಾದನ ಮತ್ತು ನೃತ್ಯದಲ್ಲಿ ವೈವಿಧ್ಯವನ್ನು ತುಂಬಿದರು. ಹೀಗಾಗಿ ಬಲಿಪರು ಯಕ್ಷಗಾನ ರಂಗವನ್ನು ಪ್ರವೇಶಿಸಿದ ಕೆಲವೇ ವರ್ಷಗಳಲ್ಲಿ ಯಕ್ಷಗಾನದ ಮಟ್ಟಿಗೆ ಗುರುವಿಗಿಂತ ಶಿಷ್ಯನೇ ಬಲ ಎಂದು ಜನರು ಆಡಿಕೊಳ್ಳುವಂತಾಯಿತು.

"ಶಿಷ್ಯಾದಿಚ್ಛೇತ್ಪರಾಜಯಂ"

ಯೋಗ್ಯ ಗುರುವಿನ ಅಭಿಲಾಷೆ ಹೀಗೆಯೇ ಇರುತ್ತದೆ, ಎಂಬ ಮಾತು ಸತ್ಯವೆಂದು ತೋರಿಸುವ ಒಂದು ಸಂದರ್ಭ ಒದಗಿ ಬಂತು. ಸಾಧಾರಣ ೧೯೧೯–೨೦ರ ಕಾಲವಾಗಿರಬೇಕು. ಪಡ್ರೆ ಗ್ರಾಮದ ಬಾಗಿತಿಮಾರು ಎಂಬ ವಿಶಾಲವಾದ ಗದ್ದೆಯಲ್ಲಿ ಒಂದು ವರ್ಷ ಹನ್ನೆರಡು ದಿನಗಳ ಸಂಪೂರ್ಣ ರಾಮಾಯಣ ನಡೆಯಿತು. ಕಟೀಲು ಮೇಳದ ಭಾಗವತರಾಗಿದ್ದ ಬಲಿಪ ನಾರಾಯಣ ಭಾಗವತರ ನೇತೃತ್ವದಲ್ಲಿಯೇ ಈ ಕಾರ್ಯಕ್ರಮ ನಡೆಯಿತು. ಬಯಲಾಟಗಳ ಕೊನೆಯ ದಿನ ಸುಬ್ರಾಯ ಶಾನು ಭಾಗರು ಭಾಗವತರೂ ಯಜಮಾನರೂ ಆಗಿದ್ದು ನಡೆಸುತ್ತಿದ್ದ ಕೂಡ್ಲು ಮೇಳವು ಪಡ್ರೆ ಗ್ರಾಮಕ್ಕೆ ಬಂತು. ಬಾಗಿತಿಮಾರು ಗದ್ದೆಯಿಂದ ಒಂದು ಮೈಲಿನಷ್ಟು ದೂರದಲ್ಲಿರುವ ಪಾಲೆಪ್ಪಾಡಿ ಎಂಬಲ್ಲಿ ಅಂದು ಕೂಡ್ಲು ಮೇಳದ ಆಟವು ನಿಶ್ಚಯವಾಯಿತು.

ಸುಬ್ರಾಯ ಶಾನುಭಾಗರ ಮತ್ತು ಬಲಿಪರ ಗುರು ಶಿಷ್ಯ ಸಂಬಂಧವನ್ನು ಚೆನ್ನಾಗಿ ಅರಿತಿದ್ದ ಊರಿನ ಜನರು ಅಂದು ಎರಡು ಮೇಳಗಳ ಆಟಗಳೂ ಹತ್ತಿರ ಹತ್ತಿರ ನಡೆಯುವಾಗ ಏನಾಗುವುದೋ ಎಂಬ ಕುತೂಹಲವನ್ನು ತಾಳಿದ್ದರು. ಸುಬ್ರಾಯ ಶಾನುಭಾಗರು ಭಾಗವತರಾಗಿರುವ ಆ ಮೇಳದ ಆಟ ಇಷ್ಟು ಸಮೀಪದಲ್ಲಿ ನಡೆಯುತ್ತಿರುವಾಗ ಈವತ್ತು ಬಲಿಪರ ಆಟಕ್ಕೆ ಜನ ಯಾರೂ ಬರಲಿಕ್ಕಿಲ್ಲ ಎಂದು ಹಲವರೂ, ಯಕ್ಷಗಾನ ಬಯಲಾಟದ ಹಾಡುಗಾರಿಕೆಯ ಮಟ್ಟಿಗೆ ಬಲಿಪರನ್ನು ಮೀರಿಸುವವರು ಯಾರೂ ಇಲ್ಲ ಎಂದು ಹಲವರೂ ತಮ್ಮ ತಮ್ಮಲ್ಲೇ ಎರಡು ಪಕ್ಷಗಳನ್ನು ಮಾಡಿಕೊಂಡು ಒಂದು ರೀತಿಯ ಸ್ಪರ್ಧಾಭಾವವನ್ನು ತಳೆದಿದ್ದರು. ಹೊಳೆಯ ಎರಡು ದಡಗಳಲ್ಲೂ ಹಸನಾಗಿ ಬೆಳೆದ ಹುಲ್ಲನ್ನು ಕಂಡು ಒಮ್ಮೆ ಅತ್ತ ಒಮ್ಮೆ ಇತ್ತ ಓಡಾಡುತ್ತ ಹುಲ್ಲು ತಿನ್ನದೆ ಕಾಲಕಳೆಯುವ ಹಸುವಿನಂತಾಗಿತ್ತು ಹಲವರ ಸ್ಥಿತಿ. ಶಾನುಭಾಗರ ಹಾಡುಗಾರಿಕೆಯನ್ನು ಕೇಳುವ ಸುಸಂದರ್ಭವನ್ನು ಬಿಡುವಂತಿಲ್ಲ. ಬಲಿಪರ ಆಟವನ್ನು ನೋಡದೆ ನಿರ್ವಾಹವಿಲ್ಲ.

ರಾತ್ರಿ ಆಟ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬಲಿಪರು ಕೂಡ್ಲು ಮೇಳದ ರಂಗಸ್ಥಳದ ಬಳಿಗೆ ಹೋದರು. ಗುರುಗಳನ್ನು ಕಂಡು ತಮ್ಮ ಗುರುಭಕ್ತಿಯನ್ನು ಅರ್ಪಿಸಿದರು. ಹತ್ತಿರದಲ್ಲೇ ನಡೆಯುವ ಆಟದಲ್ಲಿ ತಾನು ಅನಿವಾರ್ಯವಾಗಿ ಹಾಡಲೇಬೇಕಾದ ಸಂದರ್ಭ ಒದಗಿ ಬಂದಿದೆ ಎಂದೂ ಇದರಲ್ಲಿ ಸ್ಪರ್ಧಾಬುದ್ಧಿ ಲೇಶವೂ ಇಲ್ಲವೆಂದೂ ಮೌನಮುದ್ರೆಯಿಂದಲೇ ತಿಳಿಸಿದರು. ಸಹೃದಯರೂ ಸುಸಂಸ್ಕೃತರೂ ಆಗಿದ್ದ ಸುಬ್ರಾಯ ಶಾನುಭಾಗರು ವಿಷಯವನ್ನು ಅರ್ಥಮಾಡಿ, "ಹೋಗು ಚೆನ್ನಾಗಿ ಹಾಡು. ಸಂದರ್ಭ ಸಿಕ್ಕಿದರೆ ನಿನ್ನ ಹಾಡುಗಾರಿಕೆಯನ್ನು ಕೇಳಲು ನಾವೂ ಅಲ್ಲಿಗೆ ಬರುತ್ತೇವೆ." ಎಂದು ಹುರಿದುಂಬಿಸಿ, ಹರಸಿ ಕಳುಹಿಸಿದರು.

ಶಾನುಭಾಗರ ಮೇಳದ ಆಟ ನಡೆಯುವಾಗ ಬಲಿಪರ ಆಟ ಸಪ್ಪೆಯಾದೀತೆಂಬ ಜನರ ಊಹೆ ತಪ್ಪಾಯಿತು. ಉಚ್ಚ ಕಂಠದಿಂದ ಹೊರಹೊಮ್ಮುತ್ತಿದ್ದ ಬಲಿಪರ ಗಾನಧ್ವನಿಯು ಎಲ್ಲರನ್ನೂ ಅವರತ್ತ ಆಕರ್ಷಿಸಿತು. ಮಧ್ಯರಾತ್ರಿಯ ಎರಡು ಗಂಟೆ ಕಳೆದಾಗ, "ಕರ್ಣಪರ್ವ" ನಡೆಯುತ್ತಿದ್ದ ಕೂಡ್ಲು ಮೇಳದ ಆಟದ ಗದ್ದೆ ಶೂನ್ಯವಾಗುತ್ತ ಬಂತು. ಸಂದರ್ಭ ನೋಡಿ ಶಾನುಭಾಗರು ಜಾಗಟೆಯನ್ನು ಸಂಗೀತ ಭಾಗವತನ ಕೈಗಿತ್ತು "ಮುಂದುವರಿಸು" ಎಂದು ಹೇಳಿ ತಾವು ನೇರವಾಗಿ ಬಂದು "ಸಂಪೂರ್ಣರಾಮಾಯಣ"ವನ್ನು ಆಲಿಸುತ್ತ ಬೆಳಗಿನ ತನಕ ಬಾಗಿತಿಮಾರು ಗದ್ದೆಯಲ್ಲಿ ಕುಳಿತುಕೊಂಡರು. ಶಿಷ್ಯನ ಈ ವಿಜಯದಿಂದ ಅವರ ಹೃದಯವು ಪ್ರಫುಲ್ಲವಾಗಿತ್ತು. ಬೆಳಗ್ಗೆ ಪ್ರೋತ್ಸಾಹದ ನಾಲ್ಕು ಮಾತುಗಳನ್ನು ಹೇಳಿ ತಮ್ಮ ಮೇಳದೊಂದಿಗೆ ಮುಂದುವರಿದರು. ಮಹಾಪುರುಷರಲ್ಲದೆ ಇನ್ನಾರಲ್ಲಿ ಇಂತಹ ಔದಾರ್ಯವಿದ್ದೀತು.

ಕ್ಷಣಶ: ಕಣಶ:

ಸುಬ್ಬಣ್ಣ ಮದ್ದಳೆಗಾರರೆಂಬವರು ಸವ್ಯಸಾಚಿಯಂತಿದ್ದರು. ಸಂಗೀತದಲ್ಲಿ ಶ್ರೇಷ್ಠ ಮೃದಂಗ ವಾದಕರೆಂದು ಹೆಸರಾಂತ ಅವರು ಯಕ್ಷಗಾನದಲ್ಲಿಯೂ ಪ್ರಸಿದ್ಧ ಮೃದಂಗವಾದಕರಾಗಿದ್ದರು. ಸಂಗೀತದಲ್ಲಿಯೂ ಅವರಿಗೆ ಅಗಾಧವಾದ ಪಾಂಡಿತ್ಯವಿತ್ತು. ವಿವಿಧ ರಾಗ, ತಾಳಗಳ ಶಾಸ್ತ್ರೀಯ ಜ್ಞಾನವೂ ಅಭ್ಯಾಸವೂ ಇದ್ದ ಅವರು ಹಲವು ವಿಚಾರಗಳಲ್ಲಿ ಬಲಿಪರಿಗೆ ಮಾರ್ಗದರ್ಶಕರಾಗಿದ್ದರು. ಸುಬ್ಬಣ್ಣ ಮದ್ದಳೆಗಾರರ ಕೆಲವು ವರ್ಷಗಳ ಒಡನಾಟದಿಂದ ಬಲಿಪರು ಅನೇಕ ನೂತನ ವಿಚಾರಗಳನ್ನು ಸಂಗ್ರಹಿಸಿದರು. ಯಕ್ಷಗಾನ ಪ್ರಸಂಗಗಳಲ್ಲಿ ಬರುವ ಪದ್ಯಗಳನ್ನು ಬೇರೆ ಬೇರೆ ರಾಗ ತಾಳಗಳಲ್ಲಿ ಹಾಡಬೇಕಾದ ಕ್ರಮಗಳನ್ನೂ, ಮುಕ್ತಾಯ "ಬಿಡಿತು" ಇತ್ಯಾದಿಗಳನ್ನೂ ಅವರು ಬಲಿಪರಿಗೆ ಶಾಸ್ತ್ರ ಸಂಗತವಾಗಿ ಹೇಳಿಕೊಡುತ್ತಿದ್ದರು, ಅಭ್ಯಾಸಮಾಡಿಸುತ್ತಿದ್ದರು. ಯಾರಿಂದಲೇ ಆಗಲಿ, ತಿಳಿಯಬೇಕಾದ, ಸಂಗ್ರಹಿಸಬೇಕಾದ, ಹೊಸ ವಿಚಾರಗಳಿದ್ದರೆ ಸ್ವಲ್ಪವೂ ಆಲಸ್ಯಪಡದೆ ಶ್ರದ್ಧೆಯಿಂದ ಗಳಿಸುವ ಪ್ರವೃತ್ತಿ ಬಲಿಪರದಾಗಿತ್ತು.

ಬಲಿಪರು ತಿರುಗಾಟವನ್ನು ಪ್ರಾರಂಭಿಸಿದ ಮೇಲೆ, ಹಲವು ವರ್ಷಗಳ ಹಿಂದೆ ಕೇರಳದ ನಾರಾಯಣ ಅಯ್ಯರ್ ಎಂಬ ವೀಣೆ ಭಾಗವತರೊಬ್ಬರು ಪಡ್ರೆಗೆ ಬಂದಿದ್ದರು. ಮೂರು-ನಾಲ್ಕು ವರ್ಷಗಳ ಕಾಲ ಹಲವರಿಗೆ ಸಂಗೀತದ ಪಾಠ ಹೇಳುತ್ತ ಅವರು ಪಡ್ರೆಯಲ್ಲೇ ಉಳಿದರು. ಪ್ರತಿ ವರ್ಷವೂ ಬೇಸಗೆಯ ತಿರುಗಾಟ ಮುಕ್ತಾಯವಾಗಿ ಮಳೆಗಾಲ ಬಂದೊಡನೆಯೇ ಬಲಿಪರು ವೀಣೆ ಅಯ್ಯರರ ಬಳಿಗೆ ಧಾವಿಸಿ ಬರುತ್ತಿದ್ದರು. ಎಳೆ ವಿದ್ಯಾರ್ಥಿಯಂತೆ ಅವರ ಮುಂದೆ ಕುಳಿತು ಸಂಗೀತಾಭ್ಯಾಸ ಮಾಡುತ್ತಿದ್ದರು. ಯಕ್ಷಗಾನದ ಹಾಡುಗಾರಿಕೆಗೆ ಶಾಸ್ತ್ರೀಯ ಸಂಗೀತದ ಪರಿಚಯ ಅನಿವಾರ್ಯವೆಂದು ಅವರು ಮನಗಂಡಿದ್ದರು. ಈ ಎಡೆಯಲ್ಲಿ ಕೊಳಲು, ವೀಣೆ, ಹಾರ್ಮೋನಿಯಂ ಮುಂತಾದ ವಾದ್ಯಗಳ ವಾದನಕ್ರಮವನ್ನೂ ತಕ್ಕ ಮಟ್ಟಿಗೆ ಅಭ್ಯಾಸ ಮಾಡಿಕೊಂಡರು.

ಬದುಕಿನ ಕೊನೆಯ ಗಳಿಗೆಯ ತನಕ ತಾನೊಬ್ಬ ವಿದ್ಯಾರ್ಥಿ ಎಂದೇ ಅವರು ಹೇಳಿಕೊಳ್ಳುತ್ತಿದ್ದರು. ತಿಳಿಯಬೇಕಾದ, ಸಾಧಿಸಬೇಕಾದ ವಿಷಯಗಳು ಅಪಾರವಾಗಿವೆ. ತಾನೆಲ್ಲಿಯೋ ಬಿಂದು ಮಾತ್ರ ತಿಳಿದಿದ್ದೇನೆ ಎಂಬ ಜಿಜ್ಞಾಸಾ ಬುದ್ಧಿ ಅವರಲ್ಲಿತ್ತು. ಈ ಶ್ರದ್ಧೆಯಿಂದಲೇ ಅವರು ಜೀವನದ ಪ್ರತಿ ನಿಮಿಷದಲ್ಲಿಯೂ, ಪ್ರತಿಯೊಬ್ಬ ವ್ಯಕ್ತಿ, ಸಂದರ್ಭ, ಸನ್ನಿವೇಶಗಳಿಂದ ತಾನು ತಿಳಿಯಬೇಕಾದ ಅಂಶ ಏನಿದೆ ಎಂಬ ಚಿಕಿತ್ಸಕ ಬುದ್ಧಿಯಿಂದ ವಿಮರ್ಶಿಸಿ ಸಂಗ್ರಹಿಸುತ್ತಲೇ ಇದ್ದರು.

ತಿರುಗಾಟ

ಕೂಡ್ಲು, ಕಟೀಲು, ಕದಿರೆ, ಇಚ್ಲಂಪಾಡಿ, ಪಾವಂಜೆ ಮುಂತಾದ ಮೇಳಗಳು ಆ ಕಾಲದಲ್ಲಿ ತೆಂಕುತಿಟ್ಟಿನಲ್ಲಿ ಪ್ರಸಿದ್ಧವಾಗಿದ್ದವು. ಈ ಎಲ್ಲಾ ಮೇಳಗಳಲ್ಲಿಯೂ ಒಂದಲ್ಲ ಒಂದು ವರ್ಷ ಬಲಿಪರು ಭಾಗವತರಾಗಿ ತಿರುಗಾಟ ಮಾಡಿದ್ದಾರೆ. ಕೆಲವು ಮೇಳಗಳಲ್ಲಿ ಎಡೆಬಿಡದೆ ಮೂರು ನಾಲ್ಕು ವರ್ಷಗಳ ಕಾಲ ಇದ್ದದ್ದೂ ಉಂಟು. ಕೆಲವೊಮ್ಮೆ ಭಾಗವತರಾಗಿ ಕೆಲವೊಮ್ಮೆ ಭಾಗವತರೂ ಯಜಮಾನರೂ ಆಗಿ ಮೇಳಗಳನ್ನು ನಡೆಸುತ್ತ ಇದ್ದರು.

ಸುಮಾರು ಮೂವತ್ತು ನಾಲ್ವತ್ತು ವರ್ಷಗಳ ಕಾಲಾವಧಿಯಲ್ಲಿ ಬಲಿಪರಿದ್ದು ನಡೆದ ಆಟಗಳು, ಜೋಡಾಟಗಳು, ನಾಟಕಗಳು, ತಾಳಮದ್ದಳೆಗಳು-ಇವುಗಳ ಸಂಖ್ಯೆ ಎಷ್ಟೆಂದು ಊಹಿಸುವುದೇ ಕಷ್ಟ. ಅಂತೆಯೇ ಅವರ ಮಾರ್ಗದರ್ಶನದಿಂದ ಮುಂದೆ ಬಂದ ಭಾಗವತರ ಮೃದಂಗ-ಚೆಂಡೆವಾದಕರ, ವೇಷಧಾರಿಗಳ, ಅರ್ಥಧಾರಿಗಳ ಸಂಖ್ಯೆಯನ್ನೂ ಊಹಿಸುವುದು ದುಸ್ತರ. ಇಂದಿನ ಅಸಂಖ್ಯಾತ ಯಕ್ಷಗಾನ ಕಲಾವಿದರಲ್ಲಿ ಪ್ರತಿಯೊಬ್ಬನೂ ಒಂದಲ್ಲ ಒಂದು ರೀತಿಯಲ್ಲಿ ತಾನು ಬಲಿಪರಿಗೆ ಋಣಿಯಾಗಿದ್ದೇನೆ ಎಂದು ತಿಳಿದಿದ್ದಾನೆ.

ಸಾಕಷ್ಟು ವಿದ್ಯೆಯೂ ಸಂಸ್ಕಾರವೂ ಇಲ್ಲದ "ಮೇಳದವರನ್ನು" ಪಳಗಿಸಿ ಆರೇಳು ತಿಂಗಳ ಕಾಲ ಎಲ್ಲರನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳುವುದೊಂದು ಕೆಲಸ. ಪ್ರತಿದಿನವೂ ಇಡೀ ರಾತ್ರಿ ನಿದ್ದೆಗೆಟ್ಟು ಕುಳಿತಲ್ಲಿಂದ ಅಲುಗಾಡದೆ ಹಾಡುತ್ತ ಬಯಲಾಟಗಳನ್ನು ಆಡಿಸುವುದು ಮತ್ತೊಂದು ಕೆಲಸ. ಮರುದಿನ ಹತ್ತಾರು ಮೈಲುಗಳಷ್ಟು ದೂರವಿರುವ ಯಾವುದೋ ಮತ್ತೊಂದು ಹಳ್ಳಿಗೆ ಆಟದ ಪೆಟ್ಟಿಗೆಗಳನ್ನು ಕಾಲುನಡೆಯಲ್ಲಿ ಸಾಗಿಸುತ್ತ ಹೋಗಿ ಆ ಊರಿನ ಗಣ್ಯವ್ಯಕ್ತಿಗಳನ್ನು ಸಂಧಿಸಿ, ಕೆಲವೊಮ್ಮೆ ಒತ್ತಾಯಿಸಿ ಆಟಗಳನ್ನು ಏರ್ಪಡಿಸುವ ಮಗುದೊಂದು ಕೆಲಸ-ಹೀಗೆ ಮೇಳದ ಭಾಗವತನೋ ಯಜಮಾನನೋ ಆಗಿರುವ ವ್ಯಕ್ತಿ ಅನುಭವಿಸಬೇಕಾದ ಶಾರೀರಿಕ ಮಾನಸಿಕ ಶ್ರಮಗಳ ತೀಕ್ಷ್ಣತೆಯನ್ನು ಆ ಕೆಲಸಗಳನ್ನು ಮಾಡಿದವನು ಮಾತ್ರ ಸರಿಯಾಗಿ ಊಹಿಸಬಲ್ಲ. ಅನ್ನ, ಆಹಾರ, ವಿಶ್ರಾಂತಿ ನಿದ್ದೆ ಯಾವುದನ್ನೂ ಲೆಕ್ಕಿಸದೆ ಧೀರನಾಗಿ ನಿಲ್ಲಬಲ್ಲ ಮಹಾ ಸಾಹಸಿಯೇ ಈ ಕಾರ್ಯಕ್ಕೆ ಹೊರಡಬೇಕಷ್ಟೆ.

ಬಲಿಪ ಭಾಗವತರಿರುವ ಮೇಳ ಎಂಬ ಸುದ್ದಿಯಾದರೆ ಸಾಕು. ಆ ವರ್ಷ ಇತರ ಎಲ್ಲ ಮೇಳಗಳಿಗಿಂತ ಅದಕ್ಕೇ ಪ್ರಾಶಸ್ತ್ಯ ಹೆಚ್ಚು. ಆ ಮೇಳಕ್ಕೆ ಸಿಗುವಷ್ಟು "ವೀಳ್ಯ" ಬೇರೆ ಯಾವ ಮೇಳಕ್ಕೂ ಸಿಗುತ್ತಿರಲಿಲ್ಲ. ಹೀಗಾಗಿ ಪ್ರತಿಯೊಂದು ಮೇಳದವರೂ ಬಲಿಪರನ್ನೇ ಬಯಸುತ್ತಿದ್ದರು.

ಆ ಕಾಲದಲ್ಲಿ ಈಗಿನಂತೆ ಡೇರೆಗಳನ್ನು ಕಟ್ಟಿ ಟಿಕೇಟಿನ ಮೂಲಕ ಪ್ರವೇಶವನ್ನಿತ್ತು, ವಿದ್ಯುದ್ದೀಪಾಲಂಕೃತ ರಂಗಭೂಮಿಯಲ್ಲಿ ಆಟವಾಡುವ ಪರಿಪಾಠವಿರಲಿಲ್ಲ. ದೇವಸ್ಥಾನಗಳಲ್ಲಿ ಸೇವೆಯ ಆಟಗಳನ್ನು ಮಾತ್ರ ಮೇಳದವರು ತಾವಾಗಿ ಆಡುತ್ತಿದ್ದರು. ಆಯಾ ಊರಿನ ಶ್ರೀಮಂತ ವ್ಯಕ್ತಿಗಳು ಮುಂದೆ ಬಂದು "ವೀಳ್ಯ ಕೊಟ್ಟು" ಆಟ ಆಡಿಸಿದರೆ ಮಾತ್ರ ಬೇರೆ ಆಟಗಳಾಗುತ್ತಿದ್ದವು. ವೀಳ್ಯವೂ ಇಂತಿಷ್ಟೇ ಎಂಬ ನಿಯಮ ನಿರ್ಬಂಧಗಳೇನೂ ಇದ್ದಿಲ್ಲ. ಹೀಗಿರುತ್ತ ಕೆಲವು ವರ್ಷಗಳಲ್ಲಿ ಇಡೀ ತಿರುಗಾಟ ಮುಕ್ತಾಯವಾಗುವ ಸಮಯಕ್ಕೆ ಸಾಲದ ಹೊರೆ ಮಿತಿಮೀರಿ ಮೇಳವನ್ನೇ ಯಾರಾದರೊಬ್ಬ ಧನಿಕನ ಬಳಿ ಅಡವಿಟ್ಟು ಬರಬೇಕಾದ ಪ್ರಮೇಯವೂ ಬರುತ್ತಿತ್ತು. ಬಲಿಪರ ಪಾಲಿಗೂ ಇಂತಹ ಪರಿಸ್ಥಿತಿ ಅನೇಕ ಸಲ ಬಂದೊದಗಿತ್ತು. ಆದರೆ ಯಾವುದರಿಂದಲೂ ಅವರು ಧೃತಿಗೆಡಲಿಲ್ಲ. ಕಲಾರಾಧನೆಯನ್ನು ಬಿಟ್ಟುಕೊಡಲಿಲ್ಲ. ಕಲಾವ್ಯವಸಾಯದಿಂದ ಧನ ಸಂಪಾದನೆಯಾಗುವುದಿಲ್ಲ, ಇದು ವ್ಯರ್ಥ ಎಂದು ಯಾವ ಕಾಲಕ್ಕೂ ಅವರಿಗೆ ತೋರಿದ್ದಿಲ್ಲ. ಜೀವಿಕೆಗೆ ಕಲೆಯೂ ಒಂದು ಕಸುಬು ಎಂದು ಎಂದಿಗೂ ಅವರು ಭಾವಿಸಿದ್ದಿಲ್ಲ. ಸಂಪತ್ತು, ಕೀರ್ತಿ, ಪ್ರತಿಷ್ಠೆ, ಬಿರುದು ಗೌರವ ಮುಂತಾದವುಗಳು ಬಂದಾಗ ಬರುತ್ತವೆ. ಅವುಗಳಿಗಾಗಿಯೇ ತಾನು ಕಲೆಯನ್ನು ಆಶ್ರಯಿಸಿದವನಲ್ಲ. ದೇವರು ಕೊಟ್ಟ ಕಲಾಪ್ರಜ್ಞೆಯನ್ನು ಕಲಾ ಸೇವೆಯಲ್ಲಿ ವಿನಿಯೋಗಿಸಬೇಕಾದ್ದು ತನ್ನ ಕರ್ತವ್ಯ ಎಂಬ "ಕರ್ಮಣ್ಯೇವಾಧಿಕಾರಸ್ತೇ" ತತ್ವವನ್ನು ಜೀವನದಲ್ಲಿ ಅಕ್ಷರಶಃ ಪಾಲಿಸಿದ ಕಲಾ ತಪಸ್ವಿಯಾಗಿದ್ದರು ಬಲಿಪರು. ದೀರ್ಘ ಕಾಲದ ಇಂತಹ ತಿರುಗಾಟಗಳಿಂದ ಅವರು ಪಡೆದ ಅನುಭವಗಳು ಅಪಾರವಾಗಿದ್ದವು.

ಕುಮಾರ ನಾಟಕ ಮಂಡಳಿ

ವರ್ಷದಲ್ಲಿ ಆರು ತಿಂಗಳು ತಿರುಗಾಟ. ಮಳೆಗಾಲದಲ್ಲಿ ತಾಳಮದ್ದಳೆಗಳು, ಯಕ್ಷಗಾನಕೂಟಗಳು; ಉಳಿದ ಸಮಯದಲ್ಲಿ ಅಭ್ಯಾಸ, ಹೊಸ ಸಂಶೋಧನೆ, ನೂತನ ಕಲಾವಿದರನ್ನು ತರಬೇತುಗೊಳಿಸಿ ಮುಂದಿನ ತಿರುಗಾಟಕ್ಕೆ ಸಿದ್ಧಪಡಿಸುವುದು, ಇತ್ಯಾದಿ ಯಕ್ಷಗಾನಕ್ಕೆ ಸಂಬಂಧ ಪಟ್ಟ ಚಟುವಟಿಕೆಗಳಲ್ಲಿಯೇ ಬಲಿಪರ ಬಿಡುವಿನ ಪ್ರತಿಕ್ಷಣವೂ ವಿನಿಯೋಗವಾಗುತ್ತಿತ್ತು.

ಪಡ್ರೆ ಶ್ರೀಪತಿ ಶಾಸ್ತ್ರಿಗಳು ಮತ್ತು ಬಲಿಪರು ಒಂದುಗೂಡಿ ಪಾರ್ತಿಸುಬ್ಬನ ರಾಮಾಯಣ ಪ್ರಸಂಗಗಳನ್ನೆಲ್ಲ ಸಂಗ್ರಹಿಸಿ ಸಂಶೋಧಿಸಿದರು. ಅವುಗಳಲ್ಲಿ ಪ್ರಕ್ಷಿಪ್ತವಾಗಿ ಸೇರಿರುವ ಭಾಗಗಳನ್ನೆಲ್ಲ ಪ್ರತ್ಯೇಕಿಸಿ ಶುದ್ಧ ಪ್ರತಿಗಳನ್ನು ತಯಾರಿಸಿದರು. ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ "ಪಟ್ಟಾಭಿಷೇಕ"ವನ್ನು ಪರಿಷ್ಕರಿಸಿ ಪ್ರಕಟಿಸಿದರು.

ಸಮವಯಸ್ಕರಾದ ಊರಿನ ಹಲವು ತರುಣರನ್ನು ಸೇರಿಸಿ "ಕುಮಾರ ನಾಟಕ ಮಂಡಳಿ" ಎಂಬ ಒಂದು ನಾಟಕ ಸಂಸ್ಥೆಯನ್ನು ಸ್ಥಾಪಿಸಿದರು. ಅವರಿವರಿಂದ ಒಂದಿಷ್ಟು ಧನಸಂಗ್ರಹ ಮಾಡಿ, ಉಳಿದ ಹೆಚ್ಚಿನ ಭಾಗವನ್ನು ತಾವೇ ಕೈಯಿಂದ ವೆಚ್ಚಮಾಡಿ ಪರದೆಗಳು, ಉಡುಪು ತೊಡುಪು, ಚೆಂಡೆ ಮದ್ದಳೆ ಮುಂತಾದ ಉಪಕರಣಗಳನ್ನೆಲ್ಲ ಮಾಡಿಕೊಂಡರು.

ಅಭ್ಯಾಸಿಗಳಿಗೆ ಶಾಸ್ತ್ರಿಗಳು ಪ್ರತಿಯೊಂದು ಪ್ರಸಂಗದ ಪ್ರತಿಪಾತ್ರದ ಅರ್ಥವನ್ನೂ ಬರೆದು ಕೊಟ್ಟು ಬಾಯಿಪಾಠ ಮಾಡಿಸುತ್ತಿದ್ದರು. ಬಲಿಪರು ನೃತ್ಯ, ಅಭಿನಯಗಳನ್ನು ಹೇಳಿಕೊಡುತ್ತಿದ್ದರು. ಹಲವು ವರ್ಷಗಳ ತನಕ ಸುತ್ತು ಮುತ್ತಲಿನ ನಾಲ್ಕು ಊರುಗಳಲ್ಲಿ ಈ ಮಂಡಳಿಯ ಅನೇಕ ನಾಟಕಗಳಾದವು. ಈ ನಾಟಕಗಳಿಂದ ಊರಿನವರಿಗೆಲ್ಲರಿಗೂ ಯಕ್ಷಗಾನದ್ದೇ ಹುಚ್ಚು ಹಿಡಿದಂತಾಗಿತ್ತು. ಎಲ್ಲಿ ನೋಡಿದರೂ ಯಾರ ಬಾಯಲ್ಲಿಯೂ ಯಕ್ಷಗಾನದ್ದೇ ಮಾತು. ಅದೇ ಚಟುವಟಿಕೆ. ಇದರಿಂದ ಎಷ್ಟೋ ಮಂದಿ ಹೊಸ ಭಾಗವತರು, ಮೃದಂಗ ಚೆಂಡೆ ವಾದಕರು, ವೇಷಧಾರಿಗಳು, ಅರ್ಥಧಾರಿಗಳು ಬೆಳಕಿಗೆ ಬಂದರು. ಹಳ್ಳಿಯಲ್ಲಿ ತಿರುಗಾಡುವ ಸಾಧಾರಣ ಅವಿದ್ಯಾವಂತ ತರುಣನಾದರೂ, ನಾಟಕದಲ್ಲಿ ಪ್ರಧಾನ ಪಾತ್ರಧಾರಿಯಾಗಿ ತಾಳಮದ್ದಳೆಯಲ್ಲಿ ಅರ್ಥದಾರಿಯಾಗಿ ಜನರ ಮುಂದೆ ಬಂದು ಧೈರ್ಯದಿಂದ ನಾಲ್ಕು ಮಾತುಗಳನ್ನಾಡಿ ತನ್ನ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸುವ ಅವಕಾಶವನ್ನು ಪಡೆದ. ಎಲ್ಲರಿಗೂ ಬಲಿಪರ ಶಾಸ್ತ್ರಿಗಳ ವಿಷಯದಲ್ಲಿ ಅಸಾಧಾರಣವಾದ ಗುರುಭಕ್ತಿ, ಆದರ ಗೌರವಗಳ ಭಾವನೆ ಇತ್ತು. ಊರಿನಲ್ಲಿ ನಡೆಯುವ ಯಾವುದೇ ಕೆಲಸವಾದರೂ ಸರಿ, ಬಲಿಪರು ಶಾಸ್ತ್ರಿಗಳು ಅದರಲ್ಲಿ ಇದ್ದಾರೆ ಎಂದರಾಯಿತು, ನೂರಾರು ಮಂದಿ ತರುಣರು ಮುಂದೆ ಬಂದು ತಾವಾಗಿ ಸಹಕರಿಸುತ್ತಿದ್ದರು. ಆ ಕಾಲದಲ್ಲಿ ಪರಿಷತ್ತುಗಳು, ಸಭೆಸಮಾರಂಭಗಳು, ತಾಳಮದ್ದಳೆಗಳು, ನಾಟಕಗಳು ಪ್ರತಿ ದಿನವೆಂಬಂತೆ ನಡೆಯುತ್ತಿದ್ದವು.

ದಿ॥ ಪಾವಂಜೆ ಹರಿದಾಸ ಲಕ್ಷ್ಮೀನಾರಾಯಣಪ್ಪಯ್ಯನವರ ವಿಷಯದಲ್ಲಿ ಬಲಿಪರಿಗೆ ಅಪಾರವಾದ ಗೌರವ ಬುದ್ಧಿ ಇತ್ತು. ಅವರ ಆಶುಕವಿತಾ ಸಾಮರ್ಥ್ಯವನ್ನು ಅವರು ಬಹಳವಾಗಿ ಮೆಚ್ಚಿದ್ದರು. ಹರಿದಾಸರ ಜತೆಯಲ್ಲೇ ಕೆಲವು ಕಾಲ ಇದ್ದು, ಅವರು ತಾತ್ಕಾಲಿಕ ಸ್ಫೂರ್ತಿಯಿಂದ ರಚಿಸುತ್ತ ಹಾಡುತ್ತ ಇದ್ದ ನೂರಾರು ಪದ್ಯಗಳನ್ನು ಬರೆದುಕೊಂಡು ಬಲಿಪರು ಅವುಗಳನ್ನು ಇನ್ನಷ್ಟು ಸೊಗಸಾಗಿ ಹಾಡುವ ಅಭ್ಯಾಸ ಮಾಡಿದ್ದರು. ಅವರನ್ನೇ ಅನುಕರಿಸುತ್ತ ಕೆಲವು ಕಡೆ ಹರಿಕಥೆಗಳನ್ನೂ ಮಾಡಿದ್ದಾರೆ.

ಹೊರನಾಡುಗಳಲ್ಲಿ

ಬಲಿಪರ ಅವಿಶ್ರಾಂತ ಶ್ರಮದಿಂದ, ಯಕ್ಷಗಾನವು ಕೇವಲ ಪಾಮರರನ್ನು ಮಾತ್ರ ರಂಜಿಸುವ ಹಳ್ಳಿಮುಕ್ಕರ ಕಲೆಯೆಂಬ ತಾತ್ಸಾರ ಭಾವನೆಯು ಮಾಯುವಾಗುತ್ತ ಬಂತು. ಪೇಟೆ ಪಟ್ಟಣಗಳಲ್ಲಿ ವಿದ್ಯಾವಂತ ನಾಗರಿಕರ ಮಧ್ಯದಲ್ಲಿ ಈ ಕಲೆಗೆ ಸಾಕಷ್ಟು ಪ್ರಾಶಸ್ತ್ಯವು ದೊರೆಯಿತು. ಯಕ್ಷಗಾನ ದಲ್ಲಿ ಅಡಕವಾಗಿರುವ ಕಲಾವೈಭವವನ್ನು ಗುರುತಿಸಿದ ವಿದ್ಯಾವಂತರನೇಕರು ಈ ರಂಗದಲ್ಲಿ ಪ್ರವೇಶಿಸಿ ದರು. ಪಂಡಿತರು, ಶಾಸ್ತ್ರಿಗಳು, ಉಪಾಧ್ಯಾಯರು, ವಕೀಲರು, ಡಾಕ್ಟರುಗಳು, ಭಾಗವತರಾಗಿ, ವೇಷ ಧಾರಿಗಳಾಗಿ, ಅರ್ಥಧಾರಿಗಳಾಗಿ ಯಕ್ಷಗಾನದಲ್ಲಿ ಆಸಕ್ತಿಯನ್ನು ವಹಿಸಿದರು. ಯಕ್ಷಗಾನ ಕಲಾವಿದನಿಗೂ ಸಮಾಜದಲ್ಲಿ ಸ್ಥಾನ ಗೌರವಗಳು ದೊರೆಯುವಂತಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಉತ್ತರ ಭಾಗಗಳಲ್ಲಿ ಪ್ರಚಲಿತವಾಗಿದ್ದ ಯಕ್ಷಗಾನದ ಕೀರ್ತಿ ಯು ಹೊರನಾಡುಗಳಲ್ಲಿಯೂ ಪಸರಿಸಿತು. ಬೊಂಬಾಯಿ, ಮದ್ರಾಸು, ಬೆಂಗಳೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದಕ್ಷಿಣ ಕನ್ನಡದಿಂದ ಹೋಗಿ ನೆಲಸಿದ ಅನೇಕ ವ್ಯವಸಾಯಿಗಳು ತಮ್ಮ ಜತೆಯಲ್ಲೇ ಯಕ್ಷಗಾನವನ್ನೂ ಕೊಂಡೊಯ್ದರು. ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಅಲ್ಲಲ್ಲಿ ಯಕ್ಷಗಾನ ಕೂಟಗಳನ್ನೂ ಬಯಲಾಟಗಳನ್ನೂ ಏರ್ಪಡಿಸಿದರು.

ಜಿಲ್ಲೆಯಲ್ಲಿ ಪ್ರಚಂಡ ಖ್ಯಾತಿಯನ್ನು ಗಳಿಸಿ "ಯಕ್ಷಗಾನ ಪಿತಾಮಹ" ಎನಿಸಿಕೊಂಡ ಬಲಿಪ ರಿಗೆ ೧೯೩೫ರ ಸುಮಾರಿಗೆ ಬೊಂಬಾಯಿಯಿಂದ ಆಮಂತ್ರಣ ಬಂತು. ಅಲ್ಲಿರುವ ಕಲಾಭಿಮಾನಿಗಳು ಉಚ್ಚಮಟ್ಟದ ಕೆಲವು ಬಯಲಾಟಗಳನ್ನು ಬೊಂಬಾಯಿಯ ಜನತೆಯ ಮುಂದೆ ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದರು. ಶ್ರೀಯುತರಾದ ಕುರ್ಯ ವಿಠಲ ಶಾಸ್ತ್ರಿ, ಅಳಕ್ಕೆ ರಾಮಯ ರೈ, ಪುತ್ತೂರು ಕೃಷ್ಣ ಭಟ್ಟ, ಕಡಂದೇಲು ಪುರುಷೋತ್ತಮ ಭಟ್ಟ, ಮಧೂರು ನಾರಾಯಣ ಹಾಸ್ಯಗಾರ ಮುಂತಾದ ಅನು ಭವೀ ಕಲಾವಿದರನ್ನು ಕರೆದು ಕೊಂಡು, ಮೃದಂಗ ವಾದನಕ್ಕೆ ಶ್ರೀ ನೆಡ್ಲೆ ನರಸಿಂಹ ಭಟ್ಟರನ್ನು ಜತೆಗೂಡಿ ಬಲಿಪರು ಬೊಂಬಾಯಿಗೆ ಹೋದರು. ಸುಮಾರು ಒಂದು ಒಂದೂವರೆ ತಿಂಗಳ ಕಾಲ ಅಲ್ಲಿದ್ದು ಹಲವು ಬಯಲಾಟಗಳನ್ನು ಆಡಿದರು.

ಬೊಂಬಾಯಿಯ ಶ್ರೇಷ್ಠ ಕಲಾಭಿಜ್ಞರನೇಕರು ಈ ಬಯಲಾಟಗಳನ್ನು ನೋಡಿದರು. ಪತ್ರಿಕೆ ಗಳಲ್ಲಿ ಫೊಟೋಗಳೊಂದಿಗೆ ವಿಮರ್ಶಾತ್ಮಕವಾದ ಲೇಖನಗಳೂ ಪ್ರಕಟವಾದವು. ಯಕ್ಷಗಾನದ ನೃತ್ಯ, ವೇಷ ಭೂಷಣಗಳು, ಪದ್ಯಗಳ ರಾಗತಾಳಸಂಯೋಜನೆ, ಮಾತಿನ ಚಾತುರ್ಯ ಮುಂತಾದ ವೈಶಿಷ್ಟ್ಯ ಗಳನ್ನು ಕಲಾಪರಿಣತರು ಗುರುತಿಸಿ ಮನಃಪೂರ್ವಕವಾಗಿ ಈ ಬಯಲಾಟಗಳನ್ನು ಶ್ಲಾಘಿಸಿದರು. ವಿಶೇಷವಾಗಿ ಬಲಿಪರ ನಾದ ಮಾಧುರ್ಯವನ್ನು ಅನೇಕ ಮಂದಿ ಗವೈಯಾಗಳು ಮೆಚ್ಚಿ ಕೊಂಡಾಡಿ ದರು.

ಶ್ರೀ ಕುರ್ಯ ವಿಠಲ ಶಾಸ್ತ್ರಿಗಳು ಧರ್ಮಸ್ಥಳ ಕ್ಷೇತ್ರದ ಮೇಳದ ಯಜಮಾನಿಕೆಯನ್ನು ವಹಿಸಿ ತಿರುಗಾಟ ಮಾಡುತ್ತಿದ್ದಾಗ ಒಂದು ಬಾರಿ ಉತ್ತರಕನ್ನಡದ ಪ್ರವಾಸವನ್ನು ಕೈಗೊಂಡಿದ್ದರು. ೧೯೩೬ ರಲ್ಲಿ ಹೊನ್ನಾವರ, ಕುಮಟಾ, ಅಂಕೋಲಾ ಮುಂತಾದ ಸ್ಥಳಗಳಲ್ಲಿ ಆಟಗಳನ್ನಾಡುವ ಸಂದರ್ಭ ಬಂದಾಗ ವಿಶೇಷ ಆಮಂತ್ರಣವನ್ನಿತ್ತು ಹಾಡುಗಾರಿಕೆಗೆ ಬಲಿಪ ಭಾಗವತರನ್ನು ಕರೆಸಿದ್ದರು. ಬಡಗು ತಿಟ್ಟಿನ ಸಂಪ್ರದಾಯವೇ ರೂಢಿಯಲ್ಲಿರುವ ಆ ಪ್ರದೇಶಗಳಲ್ಲಿ ತೆಂಕುತಿಟ್ಟಿನ ಯಕ್ಷಗಾನ ಬಯಲಾಟ ಗಳನ್ನು ಜಯಪ್ರದವಾಗಿ ಪ್ರದರ್ಶಿಸಿ ಜನತೆಯ ಮೆಚ್ಚುಗೆಯನ್ನು ಗಳಿಸಿದ ಕೀರ್ತಿಯು ಶ್ರೀ ಶಾಸ್ತ್ರಿ ಗಳಿಗೂ ಬಲಿಪರಿಗೂ ಸೇರಬೇಕಾಗಿದೆ. ಅದು ತನಕ ತೆಂಕುತಿಟ್ಟಿನ ಯಕ್ಷಗಾನವೆಂದರೆ ಅನಾದರವನ್ನು

ತಾಳುತ್ತಿದ್ದ ಉತ್ತರ ಕನ್ನಡದ ಕಲಾಭಿಮಾನಿಗಳು ತಮ್ಮ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು ತೆಂಕುತಿಟ್ಟಿನ ಹಾಡುಗಾರಿಕೆಯಲ್ಲಿ ಅಡಕವಾಗಿರುವ ಹಲವು ಸೂಕ್ಷ್ಮ ವಿಚಾರಗಳನ್ನು ಬಲಿಪರು ಚೆನ್ನಾಗಿ ವಿಶದ ಪಡಿಸಿದರು. ಮುಖ್ಯವಾಗಿ ಬಯಲಾಟದ ನೃತ್ಯಕ್ಕೆ ಪೋಷಕವಾಗುವ "ಬಿಡಿತುಗಳು", ಚೆಂಡೆ ವೀರ-ರೌದ್ರರಸಗಳನ್ನು ಪುಷ್ಟೀಕರಿಸುವ ಸ್ವರ ಗಾಂಭೀರ್ಯ, ಶಾಂತ, ಶೃಂಗಾರ, ಕರುಣಾ ಮುಂತಾದ ಸೌಮ್ಯರಸಗಳಲ್ಲಿಯೂ ಆಯಾ ರಸಭಾವಗಳನ್ನು ವ್ಯಕ್ತಪಡಿಸುವ ವಿಶಿಷ್ಟ ನೃತ್ಯ ವಿಧಾನ ಇತ್ಯಾದಿಗಳನ್ನು ಆ ಕಡೆಯವರು ಬಹುವಾಗಿ ಮೆಚ್ಚಿ ಕೊಂಡಾಡಿದರು. ಉತ್ತರ ಕನ್ನಡದ ಈ ಪ್ರವಾಸದಿಂದ ಯಕ್ಷಗಾನ ದಲ್ಲಿ ಬಲಿಪರನ್ನು ಮಿಕ್ಕಿದ ಬೇರೆ ಭಾಗವತರಿಲ್ಲ ಎಂದು ಎಲ್ಲರೂ ಒಪ್ಪುವಂತಾಯಿತು.

ಮೈಸೂರು ಸರಕಾರದಿಂದ ರಾಜ್ಯಪ್ರಶಸ್ತಿ

೧೯೬೩ರಲ್ಲಿ ಬಲಿಪ ನಾರಾಯಣ ಭಾಗವತರಿಗೆ ಮೈಸೂರು ಸರಕಾರದ ಸಂಗೀತ ನಾಟಕ ಅಕಾಡಮಿಯಿಂದ ರಾಜ್ಯ ಪ್ರಶಸ್ತಿಯು ದೊರೆಯಿತು. ಬಲಿಪರಂತಹ ಶ್ರೇಷ್ಠ ಕಲಾವಿದನಿಗೆ ಎಂದೋ ಬರಬೇಕಾಗಿದ್ದ ಈ ಸಂಭಾವನೆಯು ಈಗಲಾದರೂ ಬಂತಲ್ಲ ಎಂದು ಜನರು ಸಂತೋಷಗೊಂಡರು. ಆಧುನಿಕ ಕನ್ನಡ ರಂಗ ಭೂಮಿಯ ಸಾರ್ವಭೌಮರೆನಿಸಿದ ಆದ್ಯ ರಂಗಾಚಾರ್ಯರೇ ಮೊದಲಾದ ಆರು ಏಳು ಮಂದಿ ಶ್ರೇಷ್ಠ ಕಲಾವಿದರಿಗೆ ಆ ವರ್ಷ ಪ್ರಶಸ್ತಿಗಳನ್ನು ಕೊಡಲಾಗಿತ್ತು. ಬೆಂಗಳೂರಿನ ರವೀಂದ್ರ ಕಲಾನಿಕೇತನದಲ್ಲಿ ನೆರೆದ ಸಾವಿರಾರು ಮಂದಿ ವಿದ್ವಜ್ಜನರ ಮುಂದೆ ಈ ಪ್ರಶಸ್ತಿ ಪ್ರದಾನ ಸಮಾರಂಭವು ನೆರವೇರಿತು. ಸುಂದರವಾದ ನಟರಾಜನ ಪಂಚ ಲೋಹ ವಿಗ್ರಹ, ಶಾಲುಜೋಡಿ, ನಗದು ರೂಪಾಯಿ ಐನೂರು, ಪ್ರಶಸ್ತಿ ಪತ್ರ ಮುಂತಾದವುಗಳನ್ನಿತ್ತು ಕಲಾವಿದರನ್ನು ಸಂಭಾವಿಸಿದ್ದರು.

ಅಕಾಡಮಿಯವರು ಆಮಂತ್ರಣವನ್ನು ಕೊಡುವಾಗಲೇ, ಬಳಗದವರನ್ನೂ ಜತೆಯಲ್ಲಿ ಕರೆ ತಂದು ಒಂದು ಗಂಟೆಯ ಕಾಲ ಯಕ್ಷಗಾನ ಪ್ರದರ್ಶನವನ್ನೂ ಮಾಡಬೇಕೆಂಬ ಸೂಚನೆಯನ್ನು ಕೊಟ್ಟಿದ್ದರು. ಅಂತೆಯೇ ಬಲಿಪರು ಬೆಂಗಳೂರಿಗೆ ಹೋಗುವಾಗ ತಮ್ಮ ಜತೆಯಲ್ಲಿ ಶ್ರೀಯುತರಾದ ಕೆಮ್ಮಣ್ಣು ನಾರ್ಣಪ್ಪಯ್ಯ, ಪುತ್ತೂರು ಕೃಷ್ಣಯ್ಯ, ಪೆರ್ಲ ಕೃಷ್ಣ ಭಟ್ಟ, ತುದಿಯಡ್ಕ ವಿಷ್ಣಯ್ಯ, ಕೋಟೆ ಸುಬ್ರಾಯ ಭಟ್ಟ ಮುಂತಾದವರನ್ನು ಕರೆದುಕೊಂಡು ಹೋಗಿದ್ದರು. ಪ್ರಶಸ್ತಿ ವಿತರಣೆಗಳಾದ ಮೇಲೆ ಬಲಿಪರ ಹಾಡುಗಾರಿಕೆಯಲ್ಲಿ ಒಂದು ಗಂಟೆಯ ಕಾಲ "ಶರಸೇತು ಬಂಧನ"ವೆಂಬ ಯಕ್ಷಗಾನ ತಾಳಮದ್ದಳೆಯು ಕಲಾನಿಕೇತನದಲ್ಲಿ ಜರಗಿತು. ಸಭೆಯಲ್ಲಿದ್ದ ಬೆಂಗಳೂರಿನ ಕಲಾಭಿಮಾನಿಗಳೂ ವಿದ್ವಾಂಸರೂ ಈ ಮುಪ್ಪಿನ ವಯಸ್ಸಿನಲ್ಲಿಯೂ ಕಂಚಿನ ಸ್ವರದಂತೆ ತೀಕ್ಷ್ಣವೂ ಶುದ್ಧವೂ ಆಗಿದ್ದ ಸ್ವರದಲ್ಲಿ ಹಾಡಿದ ಬಲಿಪರ ಹಾಡುಗಾರಿಕೆಯನ್ನೂ ಅದಕ್ಕೆ ಅನುಗುಣವಾಗಿ ಹಿಮ್ಮೇಳದಲ್ಲಿ ಶ್ರೀ ಕೆಮ್ಮಣ್ಣು ನಾರ್ಣಪ್ಪಯ್ಯನವರು ನುಡಿಸಿದ ಅದ್ಭುತವಾದ ಮೃದಂಗ-ಚೆಂಡೆ ವಾದನಗಳನ್ನೂ ಬಹುವಾಗಿ ಮೆಚ್ಚಿದರು.

ಶ್ರೀಗಳಾದ ಅ. ನ. ಕೃಷ್ಣರಾಯರು, ದೇವೇಂದ್ರಪ್ಪನವರು, ದಿ॥ ಚೌಡಯ್ಯನವರು, ಮುಂತಾದ ಮಹನೀಯರನೇಕರು ಬಲಿಪರನ್ನು ಪ್ರತ್ಯೇಕವಾಗಿ ಸಂಧಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ ಬಹಳ ಹೊತ್ತು ಯಕ್ಷಗಾನ ಕಲೆಯ ಹಲವು ವಿಶಿಷ್ಟ ವಿಚಾರಗಳ ಕುರಿತು ಮಾತುಕತೆ ನಡೆಸಿದ್ದರು.

ಸಮಾರಂಭಕ್ಕೆ ಬಂದಿದ್ದ ಬೆಂಗಳೂರು ಆಕಾಶವಾಣಿಯ ವ್ಯವಸ್ಥಾಪಕರು, ಅರ್ಧಗಂಟೆಯ ಒಂದು ಕಾರ್ಯಕ್ರಮವನ್ನು ಧ್ವನಿಮುದ್ರಣ ಮಾಡಿಕೊಳ್ಳಲು ಮರುದಿನ ಆಕಾಶವಾಣಿ ಕೇಂದ್ರಕ್ಕೆ ಬರಬೇಕೆಂದು ಆಮಂತ್ರಣ ಕೊಟ್ಟು ಹೋದರು. ಬಲಿಪರಿಗೆ ಅತ್ಯಂತ ಪ್ರಿಯವಾಗಿದ್ದ ಪಾರ್ತಿ

ಸುಬ್ಬನ ಪಟ್ಟಾಭಿಷೇಕ ಪ್ರಸಂಗದಲ್ಲಿ ರಾಮ ಭರತರ ಸಮಾಗಮದ ಕಥಾಭಾಗವನ್ನು ಅಯ್ದು ಅರ್ಥ ಗಂಟೆಯ ಕಾರ್ಯಕ್ರಮವನ್ನು "ರಿಕಾರ್ಡ್" ಮಾಡಿಕೊಂಡರು. ಮುಂದೆ ಅನೇಕ ಸಲ ಈ ಕಾರ್ಯ ಕ್ರಮವನ್ನು ಆಕಾಶವಾಣಿಯವರು ಪ್ರಸಾರ ಮಾಡಿದ್ದಾರೆ.

ತಮ್ಮ ಊರಿನ ಕಲಾವಿದನನ್ನು ಮೊದಲಾಗಿ ತಾವಾಗಿಯೇ ಹೊಗಳಿ, ಸತ್ಕರಿಸಿ ಗೌರವಿಸು ವುದು ಉಚಿತವಲ್ಲ ಎಂಬ ಭಾವನೆಯಿಂದಲೊ ಏನೋ ಅದು ತನಕ ಮೌನವನ್ನು ತಾಳಿದ್ದ ಜಿಲ್ಲೆಯ ನೂರಾರು ಯಕ್ಷಗಾನ ಸಂಘಗಳು, ಇತರ ಸಂಸ್ಥೆಗಳು, ಸರಕಾರದಿಂದ ಪ್ರಶಸ್ತಿ ಬಂದೊಡನೆಯೇ ಬಲಿ ಪರನ್ನು ಪ್ರತ್ಯೇಕವಾಗಿ ಆಮಂತ್ರಿಸಿ ಗೌರವಿಸಿದವು. ಆ ಸಮಯದಲ್ಲಿ ಬಲಿಪರ ಪಾಲಿಗೆ ಈ ಸತ್ಕಾರ ಸಮಾರಂಭಗಳ ಒಂದು ಪ್ರವಾಹವೇ ಬಂದಂತಾಯಿತು.

ಮಾನಪತ್ರಗಳು, ಶಾಲು ಜೋಡಿಗಳು, ಬೆಳ್ಳಿ ಬಂಗಾರದ ಅನೇಕ ಪಾರಿತೋಷಕಗಳು, ಮುಂತಾದವುಗಳನ್ನಿತ್ತು ಅಲ್ಲಲ್ಲಿ ಅಲ್ಲಲ್ಲಿ ಜನರು ಬಲಿಪರ ಕುರಿತು ತಮಗಿದ್ದ ಗೌರವ ಅಭಿಮಾನಗಳನ್ನು ವ್ಯಕ್ತಪಡಿಸಿದರು. ಸತ್ಕಾರ ಸಮಾರಂಭ ನಡೆದ ಪ್ರತಿಯೊಂದು ಸಂದರ್ಭದಲ್ಲಿಯೂ ತಪ್ಪದೆ ಬಲಿಪರ ಹಾಡುಗಾರಿಕೆಯಿಂದ ಒಂದು ಯಕ್ಷಗಾನ ಕೂಟವು ನಡೆಯುತ್ತಿತ್ತು. ತಮಗೆ ಎಷ್ಟೇ ಶ್ರಮವಾದರೂ ಲೆಕ್ಕಿಸದೆ ವೃದ್ಧಾಪ್ಯದಲ್ಲೂ ತುಂಬು ಉತ್ಸಾಹದಿಂದ ಮೊದಲಿನಂತೆ ಹಾಡುತ್ತಿದ್ದ ಬಲಿಪರ ಸ್ಥೈರ್ಯ ವನ್ನೂ ಕಲಾಪ್ರೇಮವನ್ನೂ ಕಂಡು ಜನರು ಆಶ್ಚರ್ಯಪಡುತ್ತಿದ್ದರು.

ಯೋಗ್ಯರಲ್ಲಿ ಮಮತೆ, ಅಯೋಗ್ಯರಲ್ಲಿ ನೈಷ್ಠುರ್ಯ

ಬಲಿಪ ನಾರಾಯಣ ಭಾಗವತರ ಉಪದೇಶ, ಪ್ರೋತ್ಸಾಹಗಳಿಂದ ಬೆಳಕಿಗೆ ಬಂದ ಯಕ್ಷಗಾನ ಕಲಾವಿದರ ಸಂಖ್ಯೆಗೆ ಮಿತಿ ಇಲ್ಲ. ಇಂದಿನ ಪ್ರಸಿದ್ಧ ಭಾಗವತರು, ವೇಷಧಾರಿಗಳು, ಅರ್ಥಧಾರಿಗಳು ಮುಂತಾದವರಲ್ಲಿ ಹೆಚ್ಚಿನವರು ತಾವು ಆರಂಭದಲ್ಲಿ ಬಲಿಪರಿಂದಲೇ ಸ್ಫೂರ್ತಿಯನ್ನೂ ಸಹಾಯವನ್ನೂ ಪಡೆದಿರುವುದಾಗಿ ಹೇಳಿಕೊಳ್ಳುತ್ತಾರೆ. ವಿನೀತನಾಗಿರುವ ಯಾವನೇ ವ್ಯಕ್ತಿಯಾದರೂ ಅವನಲ್ಲಿ ಕಲಾವಿದನಾಗುವ ಲಕ್ಷಣಗಳು ಕಂಡು ಬಂದರೆ, ಅಂಥವನನ್ನು ಬಲಿಪರು ತಾವಾಗಿ ಒತ್ತಾಯಿಸಿ, ಪ್ರೋತ್ಸಾಹಿಸಿ ಮುಂದೆ ತರುತ್ತಿದ್ದರು.

ತಾಳಮದ್ದಳೆಯ ಕೂಟದಲ್ಲಿ ಹೊಸ ಅರ್ಥಧಾರಿಯೊಬ್ಬ ಅಂಜುತ್ತ ಹಿಂಜರಿದರೆ, 'ಬಾ, ಕುಳಿತುಕೊ ಇಂದಿನ ಪ್ರಸಂಗದಲ್ಲಿ ಇಂತಹ ಅರ್ಥವನ್ನು ನೀನೇ ಹೇಳಬೇಕು'. ಎಂದು ಮೊದಲು ಒತ್ತಾಯಿಸಿ ಕುಳಿತುಕೊಳ್ಳಿಸುತ್ತಿದ್ದರು.

"ನನಗೆ ಪ್ರಸಂಗದ ಪರಿಚಯವಿಲ್ಲ ಪದ್ಯಗಳೂ ಸರಿಯಾಗಿ ಗೊತ್ತಿಲ್ಲ. ಆ ಅರ್ಥ ಸಾಧ್ಯ ವಾಗಲಾರದು." ಎಂದೇನಾದರೂ ಅವನು ಹೇಳಿದರೆ, "ಪದ ಹೇಳುವವನು ನಾನಲ್ಲವೇ ? ನಿನಗೇಕೆ ಭಯ ? ಎಲ್ಲ ಬೇಕಾದಂತೆ ನಾನು ಮಾಡುತ್ತೇನೆ." ಎಂದು ಹೇಳಿ ಪ್ರಸಂಗದ ಪದ್ಯಗಳನ್ನು ಪದ ಚ್ಛೇದದೊಂದಿಗೆ ಸ್ಫುಟವಾಗಿ ಎರಡು ಮೂರು ಬಾರಿ ಹಾಡಿ ಎಂಥವನಿಗೂ ಅರ್ಥವಾಗುವಂತೆ ಮಾಡುತ್ತಿದ್ದರು. ಹೇಳಿದ ಅರ್ಥದಲ್ಲಿ ಏನಾದರೂ ಬಿಟ್ಟು ಹೋದರೆ ಮಧ್ಯದಲ್ಲಿ ಬೇಕಾದ್ದನ್ನು ಹೇಳಿಕೊಟ್ಟು ಸರಿಪಡಿಸುತ್ತಿದ್ದರು. ಕೆಲವೊಮ್ಮೆ ಅರ್ಥ ಹಿಂದು ಮುಂದಾದರೆ, ಮುಂದಿನ ಪದ್ಯದ ಅರ್ಥವನ್ನೂ ಹೇಳಿ ಮುಗಿಸಿದರೆ, ಅಂತಹ ಪದ್ಯಗಳನ್ನೇ ಬಿಟ್ಟು ಇಲ್ಲವೇ ಹೊಸ ಪದ್ಯಗಳನ್ನು ಜೋಡಿಸಿ ಅರ್ಥಧಾರಿಯು ತಪ್ಪಿ ಬಿದ್ದ ವಿಚಾರ ಸಭೆಗೆ ಗೊತ್ತೇ ಆಗದಂತೆ ಚಮತ್ಕಾರವಾಗಿ ಹಾಡುತ್ತಿದ್ದರು.

ಹೀಗೆ ಒಮ್ಮೆ ಪ್ರೋತ್ಸಾಹಗೊಂಡವನು ಮುಂದೆ ತಾನಾಗಿಯೇ ಸಾಧನೆ ಮಾಡಿ ಒಳ್ಳೆಯ ಅರ್ಥಧಾರಿಯಾದ ಉದಾಹರಣೆಗಳೆಷ್ಟೋ ಇವೆ.

ವೇಷಧಾರಿಗಳ ವಿಚಾರದಲ್ಲಿಯೂ ಹೀಗೆಯೇ. ರಂಗಸ್ಥಳಕ್ಕೆ ಕಾಲಿಟ್ಟು ಸಭೆಗೆ ಮುಖ ತೋರಿಸುವುದಕ್ಕೇ ಅಂಜುವವನನ್ನು, ಇಂದಿನ ಪ್ರಧಾನವೇಷವನ್ನು ನೀನೇ ಮಾಡಬೇಕೆಂದು ಒತ್ತಾಯಿಸಿ, ಸಂದರ್ಭಕ್ಕೆ ತಕ್ಕಂತೆ ಅವನಿಗೆ ಪದ್ಯಗಳನ್ನು ಕೊಟ್ಟು ಕುಣಿಸಿ, ಮಾತಾಡಿಸಿ, ಸಭಿಕರು 'ಭಲೆ ಒಳ್ಳೇವೇಷ !' ಎಂದು ಹೊಗಳುವಂತೆ ಮಾಡುತ್ತಿದ್ದರು.

ಶ್ರೀಯುತರಾದ ಕೆಮ್ಮಣ್ಣು ನಾರ್ಣಪ್ಪಯ್ಯನವರು, ಕುದುರೆ ಕೊಡ್ಲು ರಾಮ ಭಟ್ಟರು, ನೆಡ್ಲೆ ನರಸಿಂಹ ಭಟ್ಟರೇ ಮೊದಲಾದ ನುರಿತ ಕೆಲವೇ ಮಂದಿ ಪ್ರಸಿದ್ಧ ಮೃದಂಗವಾದಕರು ಮಾತ್ರ ಬಲಿಪರು ಹಾಡುವಾಗ ಧೈರ್ಯದಿಂದ ಮದ್ದಳೆ ಬಾರಿಸಲು ಕುಳಿತುಕೊಳ್ಳುತ್ತಿದ್ದರು. ಸಾಮಾನ್ಯ ಅಭ್ಯಾಸಿಯಾದರೆ, ಅವನಿಗೆ ಅವರ ಹೆಸರು ಕೇಳಿದಾಗಲೇ ಜಂಘಾಬಲ ಉಡುಗಿಹೋಗುತ್ತಿತ್ತು. ತಾಳಗತಿಯಲ್ಲಿ ಕಟ್ಟುನಿಟ್ಟಾಗಿರುವ ಬಲಿಪರನ್ನು ಅನುಸರಿಸಲು ಸಾಧಾರಣ ಮದ್ದಳೆಗಾರನಿಂದ ಸಾಧ್ಯವೇ ಇಲ್ಲ. ಪರಿಣತರಲ್ಲದ ಹಿಮ್ಮೇಳದವರನ್ನು ಕೂಡಿಕೊಂಡು ಬಲಿಪರು ಹಾಡುತ್ತಲೇ ಇರಲಿಲ್ಲ. ನಿಗರ್ವಿಯಾಗಿದ್ದು ಕಲಿಯುವ ಮನಸ್ಸುಳ್ಳ ಯಾವನಾದರೊಬ್ಬ ಮೃದಂಗವಾದಕನು ವಿನೀತನಾಗಿ ಅವರ ಬಳಿಗೆ ಬಂದರೆ ಬಹಳ ಮಮತೆಯಿಂದ ಅವನನ್ನು ಜತೆಯಲ್ಲಿ ಕುಳ್ಳಿರಿಸಿ, ತಪ್ಪಿದಾಗ ಹೇಳಿಕೊಟ್ಟು ಸರಿಪಡಿಸಿಕೊಂಡು ಇಡೀ ರಾತ್ರಿಯ ತಾಳಮದ್ದಳೆಯನ್ನೋ ಬಯಲಾಟವನ್ನೊ ಪೂರಯಿಸಿದ್ದೂ ಉಂಟು. ಹಾಗೆ ಪ್ರೋತ್ಸಾಹಗೊಂಡವನು, ತಾನೂ ಬಲಿಪರ ಹಾಡುಗಾರಿಕೆಗೆ ಮದ್ದಳೆ ಬಾರಿಸಿದ್ದೇನೆಂಬ ತೃಪ್ತಿಯನ್ನು ಹೊಂದಿ ಮುಂದೆ ಹೆಚ್ಚಿನ ಸಾಧನೆಯಿಂದ ಒಳ್ಳೆ ಮದ್ದಳೆಗಾರನಾದುದೂ ಉಂಟು.

ಕಲೆಯ ವಿಚಾರದಲ್ಲಿ ತಾವೇ ಸರ್ವಜ್ಞರೆಂದು ಗರ್ವದಿಂದ ಮೆರೆದಾಡುವ ಪಂಡಿತಂಮನ್ಯರನ್ನು ಕಂಡರೆ ಬಲಿಪರು ಸಹಿಸುತ್ತಿರಲಿಲ್ಲ. ಸಂದರ್ಭ ಸಿಕ್ಕಿದಾಗ ನಿರ್ದಾಕ್ಷಿಣ್ಯವಾಗಿ ಅಂಥವರ ಗರ್ವಭಂಗ ಮಾಡುತ್ತಿದ್ದರು. ಇದರಿಂದ ಎಷ್ಟೋ ಸಂದರ್ಭಗಳಲ್ಲಿ ಬಲಿಪರು ಮಹಾ ಗರ್ವಿಷ್ಠ ವ್ಯಕ್ತಿ ಎಂದು ಹಲವರಿಗೆ ತೋರಿರಲೂ ಬಹುದು. ಆದರೆ ಅಂಥವರನ್ನು ಹಾಗೆಯೇ ಬಿಟ್ಟು ಮೌನ ತಾಳಿದರೆ ಕಲೆಗೆ ಅಪಚಾರವಾದೀತು, ಮಾತ್ರವಲ್ಲ ಕಲೆಯ ನಾಶವೇ ಆದೀತೆಂದು ಅವರ ಖಚಿತವಾದ ಅಭಿಪ್ರಾಯವಾಗಿತ್ತು.

ತಾಳಮದ್ದಳೆಗಳಲ್ಲಿ ಅರ್ಥಧಾರಿಗಳು ಪ್ರಸಂಗಕರ್ತೃವಿನ ಆಶಯವನ್ನೂ, ರಸಭಾವಗಳನ್ನೂ ವ್ಯಕ್ತಪಡಿಸುವಂತೆ ಹಿತವೂ ಮಿತವೂ ಆಗಿ ಮಾತನಾಡಬೇಕೇ ಹೊರತು, ತಮ್ಮಲ್ಲಿರುವ ಪಾಂಡಿತ್ಯವನ್ನೆಲ್ಲ ಪ್ರದರ್ಶಿಸುವಂತೆ, ಕಥಾ ಸಂದರ್ಭಕ್ಕೆ ಸಂಬಂಧವಿಲ್ಲದ ಯಾವುದೋ ವಿಷಯಗಳನ್ನು ಹೇಳುತ್ತ ವ್ಯರ್ಥವಾಗಿ ಉದ್ದ ಮಾತಾಡುವುದು, ಎದುರಾಳಿಯನ್ನು ಹೇಗಾದರೂ ಮಾತಿನಲ್ಲಿ ಕಟ್ಟಿ ಸೋಲಿಸಬೇಕೆಂಬ ದುರ್ಬುದ್ಧಿಯಿಂದ ಅಸಂಬದ್ಧ ಪ್ರಶ್ನೆ ಕೇಳುವುದು, ಪಾತ್ರಗೌರವಕ್ಕೆ ಅನುಚಿತವಾದ ಶಬ್ದಪ್ರಯೋಗ, ಭಾಷಾಪ್ರಯೋಗಗಳನ್ನು ಮಾಡುತ್ತ ಕಲೆಗೆ ದ್ರೋಹವೆಸಗುವುದು ಮುಂತಾದ್ದನ್ನು ಅವರು ಎಂದಿಗೂ ಸಹಿಸುತ್ತಿರಲಿಲ್ಲ.

ಒಂದು ಸಲ "ಕೃಷ್ಣ ಸಂಧಾನ" ಪ್ರಸಂಗದ ಯಕ್ಷಗಾನ ಕೂಟ ನಡೆಯಿತು. ಅಂದು, ತಾನು ಬಹುದೊಡ್ಡ ಅರ್ಥಧಾರಿ ಎಂದು ತನ್ನಷ್ಟಕ್ಕೆ ತೀರ್ಮಾನಿಸಿಕೊಂಡಿದ್ದ ಮಹನೀಯರೊಬ್ಬರಿಗೆ ಸಂಜಯನ ಪಾತ್ರವನ್ನು ಕೊಡಲಾಗಿತ್ತು. ಸಂಧಾನದಲ್ಲಿ ಕೌರವನ ಅರ್ಥಕ್ಕೆ ತಾನೇ ಸಮರ್ಥನೆಂಬ ಭಾವನೆ ಅವರಿಗಿತ್ತು. ತನ್ನ ಪಾಲಿಗೆ ಸಂಜಯನ ಅರ್ಥವೆಂದು ಗೊತ್ತಾದೊಡನೆಯೇ ರೊಚ್ಚಿಗೆದ್ದ ಅವರು ಕೌರವನ ಅರ್ಥ ಹೇಳುವ ಬಡಪಾಯಿಯನ್ನು, ಚೆನ್ನಾಗಿ ತಿಕ್ಕಿ ಒಮ್ಮೆ ಬುದ್ಧಿಕಲಿಸಬೇಕೆಂದು ತೀರ್ಮಾ

ನಿಸಿಕೊಂಡಿದ್ದರು. ಕೌರವನು ಸಂಜಯನನ್ನು ಉಪಪ್ಲಾವ್ಯಕ್ಕೆ ಕಳುಹಿಸುವ ಸಂದರ್ಭ ಬಂದಾಗ, ಈ ಸಂಜಯನು ಕೌರವನೊಡನೆ ವಾಗ್ಯುದ್ಧವನ್ನೇ ಪ್ರಾರಂಭಿಸಿದನು. ಎಷ್ಟು ಹೊತ್ತಾದರೂ ಚರ್ಚೆ ಮುಗಿಯುವ ಲಕ್ಷಣ ಕಂಡುಬರಲಿಲ್ಲ. ಮುಂದಿನ ಪದ್ಯವನ್ನು ಹಾಡಲು ಸಮಯ ಕಾಯುತ್ತಿದ್ದ ಬಲಿಪರು ಸ್ವಲ್ಪ ಹೊತ್ತು ತಾಳ್ಮೆಯಿಂದ ಕುಳಿತರು. ಒಂದೆರಡು ಸಲ ವೀಳ್ಯಹಾಕಿದರು. ಶ್ರುತಿ ಪೆಟ್ಟಿಗೆಯನ್ನು ಬಾರಿಸಿ ಸೂಚನೆಯನ್ನೂ ಕೊಟ್ಟರು. ಯಾವುದಕ್ಕೂ ಆ ಸಂಜಯನು ಜಗ್ಗುವಂತೆ ಕಾಣಲಿಲ್ಲ. ಕೊನೆಗೆ ತಾರಕ ಸ್ವರದಲ್ಲಿ "ನೂಕಿರೋ ಸಂಜಯನ"— ಎಂಬ ಪದ್ಯವನ್ನು ಹೇಳಿ ಅಲ್ಲಿಂದಲೇ ಸಂಜಯನು ಗಂಟುಕಟ್ಟಿ ಹೊರಡುವಂತೆ ಮಾಡಿದರು.

ಇನ್ನೊಂದು ಕಡೆ "ಪಂಚವಟಿ" ಪ್ರಸಂಗದ ತಾಳಮದ್ದಳೆ ನಡೆಯುತ್ತಿತ್ತು. ಆ ದಿನ ಲಕ್ಷ್ಮಣನ ಪಾತ್ರಧಾರಿಯು ತಾನು ರಾಮನ ಪಾತ್ರಧಾರಿಗಿಂತ ಎಷ್ಟೋ ಮಿಗಿಲಾದವನೆಂದು ತಿಳಿದಿದ್ದ. ವಿತಂಡಾ ವಾದದಲ್ಲಿ ಸಮರ್ಥನೂ ಆಗಿದ್ದ. ಕಾಂಚನಮೃಗವನ್ನು ತರುವ ಸಂದರ್ಭ ಬಂದಾಗ, ರಾಮ ಲಕ್ಷ್ಮಣರಲ್ಲಿ ಭೀಕರವಾದ ಚರ್ಚೆ ಪ್ರಾರಂಭವಾಯಿತು. ಪರ್ಣಕುಟಿಯಲ್ಲಿದ್ದು ಸೀತೆಯನ್ನು ರಕ್ಷಿಸುವ ಕಾರ್ಯವನ್ನು ಲಕ್ಷ್ಮಣನು ಸರ್ವಥಾ ಒಪ್ಪಲಿಲ್ಲ. ತಾನೇ ಹೋಗುವೆನೆಂದು ಹಟ ಹಿಡಿದ. ವಾದದಲ್ಲಿ ಸೋತ ಅಂದಿನ ರಾಮ ನಿರ್ವಾಹವಿಲ್ಲದೆ ಲಕ್ಷ್ಮಣನ ಮಾತಿಗೆ ಒಪ್ಪಿ ಸುಮ್ಮನಾಗ ಬೇಕಾಯಿತು. ಮುಂದಿನ ಪದ್ಯವನ್ನು ಹಾಡಬೇಕಾಗಿದ್ದ ಬಲಿಪ ಭಾಗವತರು ಜಾಗಟೆ ಕೋಲು ಗಳನ್ನು ಕೆಳಗಿಟ್ಟು ಸುಮ್ಮನೆ ಕುಳಿತರು. ಮಾತಿನಲ್ಲಿ ಗೆದ್ದ ಠೀವಿಯಿಂದ ಕುಳಿತಿದ್ದ ಲಕ್ಷ್ಮಣ "ಹ್ಞಂ ಮುಂದುವರಿಯಲಿ". ಎಂದು ಸೂಚನೆ ಕೊಟ್ಟಾಗ ಬಲಿಪರು, "ಕಾಂಚನಮೃಗವನ್ನು ತರಲು ಲಕ್ಷ್ಮಣನು ಹೋಗುವ ರಾಮಾಯಣದ ಕತೆ ನನಗೆ ಗೊತ್ತಿಲ್ಲ. ಆ ಪ್ರಸಂಗದ ಪದ್ಯಗಳೂ ನನಗೆ ಬರುವುದಿಲ್ಲ" ಎಂದು ಹೇಳಿ ಅಲ್ಲಿಂದ ಎದ್ದು ಹೊರಟೇ ಹೋದರು. ಅಂದಿನ ತಾಳಮದ್ದಳೆ ಅಲ್ಲಿಗೇ ಮುಕ್ತಾಯವಾಯಿತು.

ಹಳೆ ಕ್ರಮದಲ್ಲಿ ಮಾತನಾಡುವ ಕೆಲವು ಅರ್ಥಧಾರಿಗಳಿಗೆ ಭಾಗವತರನ್ನು ಮಾತನಾಡಿಸುವ ಸಂಪ್ರದಾಯವಿತ್ತು. ಒಂದು ಸಲ ಕೇಳು ಮಣಿಯಾಣಿ ಎಂಬ ಹೆಸರಿನವರೊಬ್ಬರು, ಒಡ್ಡೋಲಗದ ಅರ್ಥ ಪ್ರಾರಂಭಿಸುವಾಗ ಗಂಭೀರ ಧ್ವನಿಯಿಂದ "ಅಯ್ಯ ಭಾಗವತ, ಕೇಳು" ಎಂದು ಪ್ರಾರಂಭಿಸಿದರು. ಕೂಡಲೇ ಬಲಿಪರು ಅದೇ ಧ್ವನಿಯನ್ನು ಅನುಕರಿಸುತ್ತ "ಅಯ್ಯ ಕೇಳು, ಅದೇನು ಹೇಳುತ್ತೀಯೋ ಹೇಳು." ಎಂದು ಗರ್ಜಿಸಿದರು ತಬ್ಬಿಬ್ಬಾದ ಕೇಳುವಿನ ಅರ್ಥ ಅಲ್ಲಿಗೇ ಮುಕ್ತಾಯವಾಯಿತು.

ಒಂದು ಸಲ ಅಂಗದ ಸಂಧಾನದಲ್ಲಿ ಪಡ್ರೆ ಶ್ರೀಪತಿ ಶಾಸ್ತ್ರಿಗಳು ಅಂಗದನ ಅರ್ಥವನ್ನು ಹೇಳುತ್ತಿದ್ದರು. ರಾವಣನ ಆಸ್ಥಾನದಿಂದ ಹಿಂತಿರುಗಿ ಬಂದಾಗ ಏನೇನಾಯಿತು ಎಂದು ಕೇಳಿದ ರಾಮನ ಪ್ರಶ್ನೆಗೆ ನಡೆದ ಘಟನೆಗಳನ್ನೆಲ್ಲ ವಿವರಿಸಿ ಹೇಳಿದರು. ಆದರೆ ಅಂದಿನ ರಾಮನಿಗೆ ಅಷ್ಟರಿಂದ ತೃಪ್ತಿ ಯಾಗಲಿಲ್ಲ. "ಬರುವಾಗ ಏನು ತಂದಿದ್ದಿ" ಎಂದು ಮತ್ತೊಮ್ಮೆ ಕೇಳಿದ. ಶಾಸ್ತ್ರಿಗಳು "ವಿಶೇಷ ವಾಗಿ ಏನೂ ತಂದಿಲ್ಲ" ಎಂದು ಉತ್ತರಿಸಿದರು. ಆದರೆ ರಾಮ ತನ್ನ ಹಟ ಬಿಡಲಿಲ್ಲ. ನಾಲ್ಕೈದು ಬಾರಿ ಮೇಲಿಂದ ಮೇಲೆ "ಏನು ತಂದಿದ್ದಿ ಹೇಳು" ಎಂದು ಒತ್ತಾಯಿಸಿದ. ಕೊನೆಗೆ ಶಾಸ್ತ್ರಿಗಳು ನಿರುಪಾಯರಾಗಿ ಬಲಿಪರ ಮುಖ ನೋಡಿದರು. ಅವರ ಇಂಗಿತವನ್ನು ಅರ್ಥಮಾಡಿಕೊಂಡ ಬಲಿಪರು ಮೊದಲು ಹಾಡಿದ ಪದ್ಯವನ್ನೇ ಮತ್ತೊಮ್ಮೆ ವಿಶದವಾಗಿ ಹಾಡಿದರು. ಪದ್ಯ ಮುಗಿದಾಗ ಶಾಸ್ತ್ರಿಗಳು ರಾಮನ ಮುಖ ನೋಡುತ್ತ ಎರಡು ಕೈಗಳನ್ನು ಅಲ್ಲಾಡಿಸಿ "ಏನೂ ಇಲ್ಲ" ಎಂದು ದೃಢವಾಗಿ ಹೇಳಿದರು. ಅಂಗದನು ರಾವಣನ ಆಸ್ಥಾನದಿಂದ ಏನನ್ನಾದರೂ ತಂದ ವಿಚಾರ ಪ್ರಸಂಗದ ಪದ್ಯದಲ್ಲಿ ಇರಲಿಲ್ಲ. ಸಭೆಯಲ್ಲಿದ್ದವರಿಗೆ ಈ ವಿನೋದ ಅರ್ಥವಾಯಿತು. ಎಲ್ಲರೂ ಘೊಳ್ಳೆಂದು ನೆಗಾಡಿದರು. ಅಷ್ಟಕ್ಕೆ ರಾಮ ಮುಖ ತಗ್ಗಿಸಿ ಸುಮ್ಮನಾದ.

ಮರುದಿನ ಬೆಳಿಗ್ಗೆ ಈ ವಿಷಯದ ಮಾತುಕತೆ ಬಂದಾಗ ಬಲಿಪರು ಹೇಳಿದರು. "ಯಾವುದೋ ರಾಮಾಯಣದಲ್ಲಿ, ಸಂಧಾನಕ್ಕೆ ಹೋದ ಅಂಗದನು ಆಸ್ಥಾನದಿಂದ ಹಿಂತಿರುಗಿ ಬರುವಾಗ ರಾವಣನ ಖಡ್ಗವನ್ನು ಎಳೆದು ತಂದಿದ್ದಾನೆ ಎಂದಿದೆಯಂತೆ. ಅದನ್ನು ಶಾಸ್ತ್ರಿಗಳ ಬಾಯಿಯಿಂದ ಹೇಳಿಸಬೇಕೆಂದು ನಿನ್ನೆಯ ರಾಮ ಹಟ ಮಾಡಿದ್ದ. ಆ ವಿಚಾರ ತಿಳಿದಿದ್ದರೂ ಪ್ರಸಂಗದ ಪದ್ಯದಲ್ಲಿ ಇಲ್ಲದೆ ಇರುವ ಅಧಿಕಪ್ರಸಂಗವೇಕೆಂದು ಶಾಸ್ತ್ರಿಗಳು ಹಾಗೆ ಮಾಡಿದರು" ಎಂದು ವಿವರಿಸಿದರು.

ಇನ್ನು ಕೆಲವರಿಗೆ, ಪ್ರಸಂಗದ ಪದ್ಯಗಳು ಒಂದಾದ ಮೇಲೊಂದರಂತೆ ತಮಗೆ ಚೆನ್ನಾಗಿ ಬಾಯಿಪಾಠ ಬರುತ್ತವೆ ಎಂದು ತೋರಿಸುವುದಕ್ಕೋಸ್ಕರ ಮೊದಲನೆಯ ಪದದ ಅರ್ಥ ಮುಗಿಸು ವಾಗ ಮತ್ತಿನ ಪದದ ಆರಂಭದ ಒಂದು ಚರಣವನ್ನು ಎತ್ತಿಕೊಡುವ ಚಾಪಲ್ಯವಿರುತ್ತದೆ. ಹಾಗೆ ಮಾಡುವ ಅರ್ಥಧಾರಿಗಳಿಗೆ ಬಲಿಪರು ಚೆನ್ನಾಗಿ ಬುದ್ಧಿ ಕಲಿಸುತ್ತಿದ್ದರು. ಹಾಗೆ ಎತ್ತಿ ಕೊಟ್ಟ ಪದ್ಯವನ್ನು ಅವರು ಹೇಳುತ್ತಲೇ ಇರಲಿಲ್ಲ. ಬೇರೆಯೇ ಯಾವುದಾದರೂ ಪದ್ಯವನ್ನು ಹೇಳಿ ಮುಂದುವರಿಸುತ್ತಿದ್ದರು.

ಒಂದು ಸಲ "ಸಂಧಾನದ" ಕೌರವನೊಬ್ಬ ಅಂದಿನ ಕಥಾಭಾಗದಲ್ಲಿ ಆರಂಭದ "ಅರಸ ಕೇಳಿತ್ತಲು ಸುಯೋಧನ" ಎಂಬ ಪದ್ಯಕ್ಕೆ ಬಹಳ ವೀರಾವೇಶದಿಂದ ಬೊಬ್ಬಿಡುತ್ತ ಅರ್ಧ ಗಂಟೆ ಮಾತನಾಡಿ, ತಾನು ದ್ವಾರಕೆಗೆ ಹೋಗಿ ಬಂದ ವಿಚಾರವನ್ನೆಲ್ಲ ವಿಶದವಾಗಿ ವಿವರಿಸುತ್ತ ತನಗೆ ಬಲರಾಮನ ಸಹಾಯ ಸಂಪೂರ್ಣ ದೊರಕಿದೆಯಾದ್ದರಿಂದ "ಇನ್ನು ಭಯವೇನು"— ಎಂಬ ಮುಂದಿನ ಪದ್ಯದ ಚರಣವನ್ನು ತಾರಕ ಸ್ವರದಲ್ಲಿ ಎತ್ತಿ ಕೊಟ್ಟು ಭಾಗವತರ ಮುಖ ನೋಡಿದ. ಒಳ್ಳೆಯ ಅರ್ಥಧಾರಿ ಸರಿಯಾಗಿ ಅರ್ಥ ಹೇಳುತ್ತಾನೆಂದಾದರೆ, ವೀರರಸದ ಸನ್ನಿವೇಶ ಬಂದಾಗ ಪಾತ್ರಧಾರಿಯ ಅರ್ಥ ಮುಗಿಯುವಷ್ಟರಲ್ಲಿ ಅದೇ ಆವೇಶದಿಂದ ಥಣ್ಣನೆ ಮುಂದಿನ ಪದ್ಯವನ್ನು ಹಾಡುವುದು ಬಲಿಪರ ಕ್ರಮ. ಆದರೆ ಏನೇನೋ ಅಪ್ರಸ್ತುತವನ್ನು ಮಾತಾಡಿ ಸುಮ್ಮನೆ ಕಾಲ ಕಳೆದು ತಾಳ ಮದ್ದಳೆಯ ಪ್ರಾರಂಭದಲ್ಲೇ ರಸಭಂಗ ಮಾಡಿದ ಆ ಕೌರವನ ಮೇಲೆ ಅವರಿಗೆ ತುಂಬಾ ಸಿಟ್ಟು ಬಂದಿತ್ತು. ಹಾಗಾಗಿ ಅವರು ಆ ಕೌರವನಿಗೆ ಅನುಕೂಲವಾಗುವಂತೆ 'ಇನ್ನು ಭಯವೇನು' ಎಂಬ ಪದ್ಯವನ್ನು ವೀರ ರಸದಲ್ಲಿ ಹೇಳುವುದಕ್ಕೆ ಬದಲು ಅವನ ಆವೇಶಕ್ಕೆ ಸಂಪೂರ್ಣ ತಣ್ಣೀರೆರಚಿದಂತೆ ಬಹಳ ಸೌಮ್ಯ ಸ್ವರದಲ್ಲಿ "ಭೋರನೊದಗಲು ಪಾರ್ಥ" ಎಂಬ ಪದ್ಯವನ್ನು ನಿಧಾನವಾಗಿ ಹಾಡಿದರು. ಯಥಾರ್ಥವಾಗಿ ಆ ಕೌರವನಿಗೆ ತನ್ನ ಆವೇಶದ ಭರದಲ್ಲಿ ಈ ಪದ್ಯ ಮಧ್ಯದಲ್ಲಿ ಇದೆ ಎಂಬ ವಿಚಾರವೇ ಮರೆತು ಹೋಗಿತ್ತು.

ಮಾತನಾಡುವುದಕ್ಕೆ ಪ್ರಾರಂಭಿಸುವಾಗ, ಅರ್ಥವನ್ನು ಯಾವ ಮಾತಿನಿಂದ ಹೇಗೆ ಆರಂಭಿಸು ವುದೆಂದೇ ತಿಳಿಯದವರು ಹಲವರಿದ್ದಾರೆ. ಅಂಥವರು ಯಾವ ಅರ್ಥವೇ ಆಗಿರಲಿ, ಎಂತಹ ಸಂದರ್ಭ ವೇ ಆಗಿರಲಿ, "ಓಹೋಯ್, ಏನಾಶ್ಚರ್ಯವಿದು" ಎಂದು ಮೊದಲು ಮಾಡುತ್ತಾರೆ. ಕೂಡಲೇ ಬಲಿಪರು, "ಯಾವುದು ಸ್ವಾಮೀ, ನಾನು ಪದ ಹೇಳಿದ್ದೇ? ನೀವು ಅರ್ಥ ಹೇಳಿದ್ದೇ?" ಎಂದು ಕೇಳಿ ಅಂಥವರನ್ನು ಚೇಷ್ಟೆ ಮಾಡುತ್ತಿದ್ದರು.

"ಅಯೋಧ್ಯೆ ಎಂಬ ತಕ್ಕಂಥ ರಾಜ್ಯವನ್ನು ಆಳಿಕೊಂಡಿರತಕ್ಕಂಥ ದಶರಥನೆಂಬ ತಕ್ಕಂಥ ಭೂಪಾಲನ........." ಎಂದು ಮುಂತಾಗಿ ಪ್ರತಿಯೊಂದು ಶಬ್ದಕ್ಕೂ 'ತಕ್ಕಂಥ' ಸೇರಿಸಿ ಅದೇ ಯಕ್ಷ ಗಾನದಲ್ಲಿ ಅರ್ಥ ಹೇಳುವ ಗಂಭೀರವಾದ ಶೈಲಿ ಎಂದು ತಿಳಿದು ಮಾತನಾಡುವವರು ಹಲವರಿದ್ದಾರೆ. ಅಂಥವರು ಸಭೆಗೆ ಬಂದಾಗಲೇ ಬಲಿಪರು, "ಈವತ್ತು......... ಎಂಬ ತಕ್ಕಂಥವರಿಗೆ ರಾಮನೆಂಬ

ತಕ್ಕಂಥ ಅರ್ಥವನ್ನು ಕೊಡತಕ್ಕಂಥವರಾಗಿರಿ." ಎಂದು ಹೇಳಿ ಅವರ "ತಕ್ಕಂಥ ಪ್ರವೃತ್ತಿ"ಯನ್ನು ಮೊದಲಾಗಿಯೇ ಎಚ್ಚರಿಸುತ್ತಿದ್ದರು.

ಬಯಲಾಟದ ವೇಷಧಾರಿಗಳಲ್ಲಿರುವ ಅನೇಕ ಕುಂದು ಕೊರತೆಗಳನ್ನೂ ಅವರು ಹೀಗೆಯೇ ವ್ಯಂಗ್ಯ, ಚೇಷ್ಟೆ, ಕೊಂಕುಮಾತುಗಳಿಂದ ತಿದ್ದುತಿದ್ದರು. ಕುಣಿಯುವಾಗ ತಾಳ ತಪ್ಪಿದರೆ, ಹಿಂದಿನಿಂದ ಚಾಗಟೆ ಕೋಲಿನಿಂದ ಬೆನ್ನಿಗೆ ತಿವಿದು ಗಟ್ಟಿಯಾಗಿ ಬಾಯಿ ತಾಳ ಹೇಳುತ್ತ ತಾಳಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತಿದ್ದರು.

ಯಕ್ಷಗಾನದ ಹಾಡುಗಾರಿಕೆ, ಮೃದಂಗವಾದನ, ವೇಷ, ನೃತ್ಯ, ಅರ್ಥ — ಯಾವುದಕ್ಕೂ ಇದು ಹೀಗೇ ಇರಬೇಕೆಂದು ವಿಧಿಸುವ ಶಾಸ್ತ್ರೀಯ ಪದ್ಧತಿ ಇಲ್ಲ. ನಿಯಮ ನಿಬಂಧನೆಗಳಿಲ್ಲ. ಆದ್ದರಿಂದ ಯಕ್ಷಗಾನ ಕಲಾವಿದನೆನಿಸಿಕೊಂಡವನು ತನಗೆ ಇಷ್ಟ ಬಂದಂತೆ ಯಾವುದನ್ನು ಹೇಗೆ ಬೇಕಾದರೂ ಮಾಡಿಕೊಳ್ಳಬಹುದು ಎಂಬ ಸ್ವತಂತ್ರ ಮನೋವೃತ್ತಿ ಕೆಲವರಲ್ಲಿ ಇದೆ. ತನಗೆ ಒಳ್ಳೆ ಇಂಪಾದ ಸ್ವರವಿದೆ ಎಂದು ತಿಳಿದವನು ಅಲ್ಲಿ ಇಲ್ಲಿ ಅಷ್ಟು ಇಷ್ಟನ್ನು ಕೇಳಿ ಒಂದೇ ತಿಂಗಳಿನಲ್ಲಿ ಯಕ್ಷಗಾನ ಭಾಗವತನಾಗುತ್ತಾನೆ. ವೇಷಕ್ಕೆ ಬೇಕಾದ ಉಡುಪು, ಕಿರೀಟ, ಆಭರಣಗಳು ಸಿಕ್ಕಿದರೆ ಸಾಕು ವೇಷಧಾರಿಯಾಗುತ್ತಾನೆ. ಸರಿಯೋ ತಪ್ಪೋ, ಕನ್ನಡದಲ್ಲಿ ಎರಡು ವಾಕ್ಯಗಳನ್ನು ಜೋಡಿಸುವ ಸಾಮರ್ಥ್ಯವಿದ್ದರಾಯಿತು. ಪ್ರಸಿದ್ಧ ಅರ್ಥಧಾರಿಯಾಗುತ್ತಾನೆ. ಇಂತಹ ಅಪಕ್ವ 'ಕಲಾಭಿಜ್ಞ'ರನ್ನು ಬಲಿಪರು ಎಂದಿಗೂ ಸಹಿಸುತ್ತಿರಲಿಲ್ಲ.

ಯಾವುದೇ ಅಪ್ರಸಿದ್ಧ ಪ್ರಸಂಗವಾದರೂ ಪುಸ್ತಕ ನೋಡಿ ಪದ ಹೇಳುವ ಕ್ರಮ ಅವರಲ್ಲಿರಲಿಲ್ಲ. ಪ್ರಸಂಗದ ಹಾಡುಗಳು ಸರಿಯಾಗಿ ಬಾಯಿಪಾಠ ಬಂದರೆ ಮಾತ್ರ, ರಾಗ ತಾಳಗಳನ್ನು ಹೊಂದಿಸಿಕೊಂಡು, ಹ್ರಸ್ವ ದೀರ್ಘಗಳನ್ನು ಹೆಚ್ಚು ಕಡಿಮೆ ಮಾಡದೆ, ಭಾವ ರಸಗಳು ವ್ಯಕ್ತವಾಗುವಂತೆ ಹಾಡಲು ಸಾಧ್ಯವಾಗುತ್ತದೆ. ಬಾಯಿಪಾಠ ಬಾರದವನು ನೋಡಿ ಹಾಡುವಾಗ ಪುಸ್ತಕ ನೋಡುವುದರಲ್ಲೇ ತಲ್ಲೀನನಾಗಿ ಉಳಿದ ವಿಚಾರಗಳೆಲ್ಲ ಅಸ್ತವ್ಯಸ್ತವಾಗುತ್ತವೆ.–ಎಂದವರು ಹೇಳುತ್ತಿದ್ದರು.

ನೃತ್ಯಕ್ಕೆ ಪ್ರಾಧಾನ್ಯವಿರುವಂತೆ ತಾಳಪ್ರಧಾನವಾಗಿ ರಚಿಸಲ್ಪಟ್ಟ ಯಕ್ಷಗಾನದ ಹಾಡುಗಬ್ಬಗಳನ್ನು ಏಕ ತಾಳ, ಝಂಪೆ, ತ್ರಿವುಡೆ, ರೂಪಕ ಮುಂತಾದ ತಾಳಗಳಲ್ಲಿ ವಿಶಿಷ್ಟ ರೂಪದಲ್ಲಿ ಹಾಡುವುದು ಸಾಮಾನ್ಯದ ಕೆಲಸವಲ್ಲ. ಆರಂಭಿಸಿದ ತಾಳಗಳಿಗೆ ಮಧ್ಯದಲ್ಲಿ ಮುಕ್ತಾಯ ಕೊಟ್ಟು ತಾಳಪರಿವರ್ತನೆ ಮಾಡುವುದೂ ಬಹಳ ಕ್ಲಿಷ್ಟವಾದ ಕಾರ್ಯ. ಗುರು ಮುಖದಿಂದ ಸರಿಯಾಗಿ ಅಭ್ಯಾಸ ಮಾಡಿದವನು ಮಾತ್ರ ಇದನ್ನು ಸಮರ್ಪಕವಾಗಿ ಮಾಡಬಲ್ಲ. ಅದಿಲ್ಲದೆ ಹಾಡಿದ್ದೇ ರಾಗ, ಹಾಕಿದ್ದೇ ತಾಳ ಎಂದು ಹಾಡುವ ಹಲವು ಭಾಗವತರನ್ನು ಬಲಿಪರು, ಅವರೆಲ್ಲ "ತಿತ್ತಿಥ್ಥೈ ಭಾಗವತ"ರೆಂದು ಗೇಲಿ ಮಾಡುತ್ತಿದ್ದರು. ಏಕತಾಳ ಒಂದನ್ನು ಬಿಟ್ಟರೆ ಬೇರಾವುದೂ ಅವರಿಗೆ ಸರಿಯಾಗಿ ಗೊತ್ತಿಲ್ಲ. ಎಲ್ಲ ಪದ್ಯಗಳನ್ನೂ ಏಕ ತಾಳದಲ್ಲಿ ಹೇಳುತ್ತಾರೆ ಎಂಬುದೇ ಈ ಮಾತಿನ ವ್ಯಂಗ್ಯ.

ಯಕ್ಷಗಾನ ಪ್ರಸಂಗಗಳಲ್ಲಿ ಸಾಹಿತ್ಯವೇ ಪ್ರಧಾನ. ರಸಾಭಿವ್ಯಕ್ತಿಗೆ ಸ್ವಲ್ಪವೂ ಕುಂದು ಬಾರದಂತೆ ರಾಗ ತಾಳಗಳನ್ನು ಹೊಂದಿಸಿ ಹಾಡಬೇಕಾದ್ದು ಭಾಗವತನ ಕರ್ತವ್ಯ. ಬಲಿಪರು ಈ ತತ್ವವನ್ನು ಅಕ್ಷರಶಃ ಪಾಲಿಸುತ್ತಿದ್ದರು. ತಾಳಕ್ಕೆ ಸರಿ ಬರುವುದಿಲ್ಲವೆಂದು ಹ್ರಸ್ವವನ್ನು ದೀರ್ಘವಾಗಿ ಉಚ್ಚರಿಸುವುದು, ಅಥವಾ ದೀರ್ಘಾಕ್ಷರವನ್ನು ಹ್ರಸ್ವವಾಗಿ ಹಾಡುವುದು ಇಂತಹ ತಪ್ಪುಗಳನ್ನು ಅವರು ಎಂದಿಗೂ ಮಾಡಿದ್ದಿಲ್ಲ. ಅಭ್ಯಾಸವಿಲ್ಲದ ಇತರ ಭಾಗವತರು ಹಾಗೆ ಮಾಡುತ್ತಿರುವುದನ್ನು ಉದಾಹರಣೆಗಳೊಂದಿಗೆ ಎತ್ತಿ ತೋರಿಸಿ ಆ ಪದ್ಯಗಳನ್ನು ಹೀಗೆಯೇ ಹಾಡಬೇಕೆಂದು ಅವರು ಹೇಳಿ ತೋರಿಸುತ್ತಿದ್ದರು.

ಮುಖ್ಯವಾಗಿ ಪಾರ್ತಿಸುಬ್ಬನ ಪ್ರಸಂಗಗಳು ಬಲಿಪರಿಗೆ ಬಹಳ ಪ್ರಿಯವಾಗಿದ್ದವು. ಆ ಪ್ರಸಂಗಗಳಲ್ಲಿ ಬರುವ ಪ್ರತಿಯೊಂದು ಪದ್ಯವನ್ನೂ ಯಾವ ತಾಳದಲ್ಲಿ ಬೇಕಾದರೂ ಹಾಡಬಹುದೆಂದು ಅವರು ತಾಳ ಹಾಕಿ ಹಾಡಿ ತೋರಿಸುತ್ತಿದ್ದರು.

ಯಕ್ಷಗಾನವು ಕೇವಲ ರಂಜನೆಗಾಗಿಯೇ ಹುಟ್ಟಿದ ಕಲೆಯಲ್ಲ. ವಿವಿಧ ಪೌರಾಣಿಕ ಕಥಾನಕಗಳ ಅನುಭವವನ್ನು ಉಂಟುಮಾಡುವುದರ ಮೂಲಕ ಜನರಲ್ಲಿ ಧರ್ಮ, ಸಂಸ್ಕೃತಿ, ಸತ್ಯ, ನ್ಯಾಯ, ನೀತಿ ಮುಂತಾದ ಉದಾತ್ತ ಗುಣಗಳು ನೆಲೆ ನಿಲ್ಲುವಂತೆ ಮಾಡುವುದೇ ಯಕ್ಷಗಾನದ ಪರಮೋದ್ದೇಶ ಎಂದವರು ತಿಳಿದಿದ್ದರು. ಆದ್ದರಿಂದಲೇ ಸಾಮಾಜಿಕ ಕತೆಗಳನ್ನಾಯ್ದು ಯಕ್ಷಗಾನದ ಶೈಲಿಯಲ್ಲಿ ಪ್ರಸಂಗಗಳನ್ನು ಬರೆದು ಬಯಲಾಟವೆಂದೋ ನಾಟಕವೆಂದೋ ಹೆಸರಿಟ್ಟು ಆಡುತ್ತಿರುವ ಆಧುನಿಕ ಕ್ರಮವನ್ನು ಅವರು ಮೆಚ್ಚುತ್ತಿರಲಿಲ್ಲ. ತುಂಬ ಕೆಳಮಟ್ಟದ ಹಾಸ್ಯ ಸನ್ನಿವೇಶಗಳು ಬರುವಂತೆ ಕತೆಗಳನ್ನು ಬರೆದು, ಸಾಮಾನ್ಯ ಜನರನ್ನು ನಗಿಸಿ ಯಕ್ಷಗಾನದ ಮೂಲಕ ಹಣ ಗಳಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಅರಿಯದ ಅಜ್ಞರು ಅದೇ ಕಲೆಯೆಂದು ಪ್ರೋತ್ಸಾಹಿಸುತ್ತಲೂ ಇದ್ದಾರೆ. ಸ್ವಲ್ಪ ಕಾಲ ಇದು ಹೀಗೆಯೇ ನಡೆದೀತು, ಕಾಲಸ್ಥಿತಿಯ ಪ್ರಭಾವವನ್ನು ಯಾರಿಂದ ತಡೆಗಟ್ಟಲಾದೀತು? ಆದರೆ ಕಲೆಯ ಜೀವಾಳ ಮತ್ತು ಯಥಾರ್ಥ ಸ್ವರೂಪಗಳ ಅರಿವು ಜನತೆಗೆ ಉಂಟಾದಾಗ ಈ ಆಭಾಸಗಳೆಲ್ಲ ತಾನಾಗಿಯೇ ಮಾಯವಾಗಿ ಹೋದಾವು ಎಂದು ಅವರು ಸಮಾಧಾನದ ಮಾತುಗಳನ್ನು ಹೇಳುತ್ತಿದ್ದರು.

ಯಕ್ಷಗಾನ ಕೃತಿಗಳು

ವಿದ್ವತ್ತು ಮತ್ತು ಕವಿತಾಶಕ್ತಿ ಇವೆರಡೂ ಒಬ್ಬನೇ ವ್ಯಕ್ತಿಯಲ್ಲಿ ಸಮಾವೇಶಗೊಳ್ಳುವುದು ದುರ್ಲಭವೆಂಬುದು ಲೋಕಾನುಭವ. ಅನುಸ್ಯೂತವಾದ ಅಧ್ಯಯನದಿಂದ ಪ್ರಯತ್ನಪೂರ್ವಕವಾಗಿ ಪಾಂಡಿತ್ಯವನ್ನು ಸಂಪಾದಿಸಬಹುದು. ಆದರೆ ಪ್ರತಿಭೆಯಿಂದ ಹೊರ ಹೊಮ್ಮುವ ಕಾವ್ಯರಚನಾಶಕ್ತಿ ಜನ್ಮಾಂತರೀಯ ಸಂಸ್ಕಾರದಿಂದಲೇ ಬರಬೇಕಷ್ಟೆ.

ಪ್ರತಿವರ್ಷವೂ ನಿಯಮಿತವಾಗಿ ಮೇಳಗಳಲ್ಲಿ ಭಾಗವಹಿಸುವುದನ್ನು ಬಿಟ್ಟು ವಿಶ್ರಾಂತಿಯನ್ನು ಪಡೆಯುತ್ತಿದ್ದ ಬಲಿಪರು ಉತ್ತರ ವಯಸ್ಸಿನಲ್ಲಿ ತಮ್ಮ ದೀರ್ಘಕಾಲದ ಅನುಭವದಿಂದ ಅನೇಕ ಯಕ್ಷಗಾನ ಕೃತಿಗಳನ್ನು ರಚಿಸಿದರು. ಪ್ರತಿಭೆ ಉಕ್ಕಿ ಬಂದಾಗ ಸಿಕ್ಕಿದ ಬಿಡಿ ಕಾಗದಗಳಲ್ಲಿ, ಪುಸ್ತಕಗಳಲ್ಲಿ, ಹಳೆ ಡೈರಿಗಳಲ್ಲಿ, ಎಲ್ಲೆಂದರೆ ಅಲ್ಲಿ ಬರೆದು ಹಾಕುತ್ತಿದ್ದರು. ಹೀಗೆ ಅಸ್ತವ್ಯಸ್ತವಾಗಿ ಬರೆದಿಟ್ಟ ಕೃತಿಗಳನ್ನೆಲ್ಲ ಒಂದುಗೂಡಿಸಿ ಸಂಗ್ರಹಿಸಿ ನೋಡಿದಾಗ ಸಂಪೂರ್ಣಗೊಂಡ ಒಟ್ಟು ಇಪ್ಪತ್ತು ಪ್ರಸಂಗಗಳು ದೊರೆತಿವೆ.

೧ ಅಹಲ್ಯಾಶಾಪ. ೨ ಬ್ರಹ್ಮಕಪಾಲ. ೩ ಪ್ರಹ್ಲಾದ ಚರಿತ್ರೆ. ೪ ಶಶಿಪ್ರಭಾ ಪರಿಣಯ. ೫ ದೇವೀ ಮಹಾತ್ಮೆ. ೬ ಶಕುಂತಲಾ ಪರಿಣಯ. ೭ ಪದ್ಮಾವತೀ ಕಲ್ಯಾಣ. ೮ ಕಚ ದೇವಯಾನಿ. ೯ ಚಂದ್ರಹಾಸ. ೧೦ ಗದಾಪರ್ವ. ೧೧ ಸಮುದ್ರ ಮಥನ. ೧೨ ಜಲಂಧರ ಕಾಳಗ. ೧೩ ರುಕ್ಮಿಣೀ ಸ್ವಯಂವರ. ೧೪ ನರಕಾಸುರವಧೆ. ೧೫ ಗರ್ವಭಂಗ. ೧೬ ಕೃಷ್ಣಾರ್ಜುನ ಕಾಳಗ. ೧೭ ಉಷಾ ಪರಿಣಯ. ೧೮ ವೀರವರ್ಮ ಕಾಳಗ. ೧೯ ಸಿಂಹಧ್ವಜ ಕಾಳಗ. ೨೦ ವಾನರವಂಶಾಭ್ಯುದಯ.

ಇವುಗಳಲ್ಲಿ ಅಹಲ್ಯಾಶಾಪ ಎಂಬ ಒಂದು ಪ್ರಸಂಗ ಮಾತ್ರ ಪ್ರಕಟಿತವಾಗಿದೆ. ಉಳಿದವುಗಳೆಲ್ಲ ಕರಡು ಹಸ್ತಪ್ರತಿಗಳಾಗಿಯೇ ಉಳಿದಿವೆ.

ಯಕ್ಷಗಾನದಲ್ಲಿ ಹಲವು ವರ್ಷಗಳ ಸರ್ವತೋಮುಖ ಅನುಭವ ಬಂದ ಮೇಲೆ ಬರೆದವುಗಳಾದ ಕಾರಣ ಈ ಪ್ರಸಂಗಗಳು ಸರ್ವವಿಧದಲ್ಲಿಯೂ ಸ್ವಯಂಪೂರ್ಣವಾಗಿವೆ. ಇವುಗಳಲ್ಲಿ ಯೋಗ್ಯ ಕಥಾಸಂವಿಧಾನ, ಸರಳಶೈಲಿ, ಲಲಿತ ಪದವಿನ್ಯಾಸ, ಉಚಿತ ಸಂಭಾಷಣೆ, ಪೂರ್ಣರಸಾವಿಷ್ಕಾರ ಮುಂತಾದ ಎಲ್ಲ ಕಾವ್ಯಗುಣಗಳೂ ಅಡಕವಾಗಿವೆ. ಬಯಲಾಟಗಳಿಗೂ ತಾಳಮದ್ದಳೆಗಳಿಗೂ ಉಪಯುಕ್ತವಾಗುವಂತೆ ಸಂಭಾಷಣಾ ಶೈಲಿಯನ್ನೇ ಬಳಸಿಕೊಂಡಿದ್ದಾರೆ. ಒಂದು ಕಥಾಭಾಗವು ಒಂದೇ ರಾತ್ರಿಯಲ್ಲಿ ಮುಗಿಯುವಂತೆ ಪದ್ಯಸಂಖ್ಯೆಯನ್ನೂ ಮಿತಗೊಳಿಸಿದ್ದಾರೆ. ಕಂದಪದ್ಯ, ಭಾಮಿನಿ, ವಾರ್ಧಿಕ, ವೃತ್ತ ಮುಂತಾದವುಗಳು ಹಳೆಯ ಪ್ರಸಿದ್ಧ ಕಾವ್ಯಗಳ ನೆನಪನ್ನು ಹುಟ್ಟಿಸುವಷ್ಟು ಸತ್ವಪೂರ್ಣವಾಗಿವೆ.

ಸರಳ ಸಂಸ್ಕೃತ ಶೈಲಿಯಲ್ಲಿ ರಚಿಸಿದ ಈ ಎರಡು ಶಾರ್ದೂಲವಿಕ್ರೀಡಿತಗಳನ್ನು ನೋಡಿದರೆ ತಿಳಿನೀರಿನಂತೆ ಹರಿಯುವ ಅವರ ಕವಿತಾಪ್ರವಾಹದ ಪರಿಚಯವಾದೀತು.

ಶ್ರೀ ಗೋವಿಂದಮನಂತ ಭಕ್ತವರದಂ ಗೋವರ್ಧನೋದ್ಧಾರಣಂ
ನಾಗಾರಾತಿಸುವಾಹನಂ ಮುರಹರಂ ನಾರಾಯಣಂ ಶ್ರೀಧವಂ ॥
ವಾಗೀಶಾದಿ ಸಮಸ್ತ ದೇವವಿನುತಂ ಪೀತಾಂಬರಾಲಂಕೃತಂ
ಯೋಗೀಂದ್ರಾರ್ಚಿತಪಾದ ಪದ್ಮಯುಗಳಂ ಶ್ರೀಕೃಷ್ಣದೇವಂ ಭಜೇ ॥
ಶ್ರೀಕೃಷ್ಣಂ ಕರುಣಾಕರಂ ಗಿರಿಧರಂ ಭರ್ಗಪ್ರಿಯಂ ಚಿನ್ಮಯಂ
ಲೋಕೇಶಾದಿ ಸಮಸ್ತ ದೇವವಿನುತಂ ವೈಕುಂಠವಾಸಂ ಹರಿಂ ॥
ನಾಕೇಶಾದಿ ಸುರೌಘಶೋಕ ಹರಣಂ ನಾರಾಯಣಂ ನಿರ್ಮಲಂ
ಮಾಕಾಂತಂ ಸನಕಾದಿವಂದಿತಪದಂ ವಂದೇ ಜಗತ್ಪಾಲಕಂ ॥

ಕಂದಪದ್ಯಗಳ ಪದಬಂಧವು ಎಷ್ಟು ಗಂಭೀರವೂ ಮಧುರವೂ ಆಗಿದೆ ಎಂಬುದು ಈ ಪದ್ಯಗಳಿಂದ ವ್ಯಕ್ತವಾಗುತ್ತದೆ.

ಹಿತವಿರಲೀಕ್ಷಣ ಕೆನ್ನಯ
ಜತೆಯಿಂದೈತರಲು ತೋರ್ಪೆನಿಂದಿನೊಳಾ ರಘು ।
ಪತಿಯಂ ದಿಟವೆನೆ ಮಾರುತ
ಸುತನತಿಹಿತವೆನುತ ಪೇಳ್ದನಾ ಮುನಿವರಗಂ ॥
ಕರುಣಿಪೆ ದ್ವಾಪರದಲಿ ಮಮ
ದರುಶನಮಂ ನಿನಗೆನುತ್ತ ನಿಜಗತಿಗೈದಿದ ।
ಪರತರ ಪಾವನಮೂರ್ತಿಯು
ತೊರೆದನೆ ದಯಮೆನ್ನೊಳೆಂದು ಬಳಲುವೆನೆಂದಂ ॥

ಬಲಿಪರು ರಚಿಸಿದ ಪ್ರತಿಯೊಂದು ಕಂದಪದ್ಯವೂ ಕೇವಲ ಮಾತ್ರಾಗಣನೆಯ ಲಕ್ಷಣವನ್ನು ಮಾತ್ರ ಅವಲಂಬಿಸಿಲ್ಲ. ಪ್ರತಿಯೊಂದರಲ್ಲಿಯೂ ಕಂದ ಲಕ್ಷಣಾನುಸಾರವಾಗಿ ಆರನೆಯ ಗಣವು 'ಜಗಣ'ವಾಗಿಯೇ ಬರುತ್ತದೆ.

ಭಾಮಿನಿ ವಾರ್ಧಿಕಗಳೂ ಕೂಡ ತಡೆಯಿಲ್ಲದ ಸಿರಗ್ಗಳವಾದ ಶೈಲಿಯಲ್ಲಿ ಲಲಿತಪದವಿನ್ಯಾಸದಿಂದ ಉತ್ತಮ ಕವಿತೆಗೆ ಉದಾಹರಣೆಗಳಂತಿವೆ. ಒಂದೆರಡು ಪದ್ಯಗಳಿಂದ ಈ ವಿಚಾರ ಸ್ಪಷ್ಟವಾದೀತು.

ವಾರ್ಧಿಕ

ಪರಶಿವಂ ಕರುಣಿಸಿದ ಬುದ್ಧಿಯಿಂದೀ ಪುಣ್ಯ
ಚರಿತೆಯಂ ಕನ್ನಡದಿ ಯಕ್ಷಗಾನದೊಳೆಲ್ಲ
ರರಿವಂತೆ ಬಲಿಪ ನಾರಾಯಣಂ ಭಾಗವತಜನ ಕಿಂಕರರ ಶರಣನು ॥
ವಿರಚಿಸಿದನೀ ಕೃತಿಯ ಕೇಳಿ ಪೇಳ್ವರ ಸಕಲ
ದುರಿತಗಳ ಪರಿಹರಿಸಿ ಕೈವಲ್ಯಮನ್ನಿತ್ತು
ಕರುಣದಿಂದಲಿ ಕಣ್ವಪುರದೊಡೆಯ ಶ್ರೀಕೃಷ್ಣ ಪಾಲಿಸುವನನುಗಾಲವು ॥

ಭಾಮಿನಿ

ಹೊಳೆಯ ನೀರಿನ ಹೊಯಿಲ ಮಧ್ಯದಿ
ಮುಳುಗಿ ಸಾವನನೆತ್ತಿ ಪ್ರಾಣವ
ನುಳುಹಿದಂದದಿ ಕರುಣದಿಂದುದ್ಧರಿಸಿರುವೆ ನಿನ್ನ ।
ಹಲವು ಜನ್ಮಕು ಮರೆಯೆನೆನುತಿಹ
ನಳಿನಮುಖಿಯಂ ಪರಸಿ ಪೋಗಲು
ಹಲಧರನು ಬಲದೊಡನೆ ಬಂದಾ ಹರಿಯೊಳಿಂತೆಂದ ॥

ರಾಗ ತಾಳಗಳ ಪದ್ಯಗಳಲ್ಲಿಯೂ ಇಂತಹದೇ ಲಲಿತ ಶೈಲಿಯನ್ನು ನಾವು ಕಾಣಬಹುದು.

ಶಂಕರಾಭರಣ—ಅಷ್ಟ.

ನಾಳಿಗೆ ಪರಿಣಯವೆಂದು ॥ ಭೂಮಿ । ಪಾಲಕರೆಲ್ಲರು ಬಂದು ।
ನೆರೆ । ದಾಲಯ ಶೋಭಿಪುದಿಂದು । ಶುಭಕಾಲವೆನ್ನುತ । ಬಂಧು ।
ಜಾಲ ಸಂತೋಷದಿ । ತೇಲಾಡುತಿರಲು । ನೀ । ನಾಲಸ್ಯ ದಿಂದಿಹೆ ।

ಕಾಂಬೋದಿ—ಝಂಪೆ.

ಶ್ರೀಮತ್ಸಮಸ್ತ ಬ್ರಹ್ಮಾಂಡನಾಯಕ ರಮಾ । ಕಾಮಿನೀ
ವರ ಸುಗುಣಧಾಮ ॥ ತಾಮರಸನೇತ್ರ ನಿನ್ನಡಿಗೆ ಭೀಷ್ಮಕ
ಸುತೆ ಪ್ರ । ಣಾಮದಿಂ ಗೈವ ಬಿನ್ನಪವು ॥
ಬಾಲತನದಿಂ ನಿನ್ನ ಲೀಲೆಗಳ ಕೇಳುತನು । ಗಾಲ ಸೇ
ವಿಸಿ ಬಾಳ್ವೆನೆಂದು ॥ ಮೇಲೊಂದನೆಣಿಸದನುಕೂಲೆಯಾಗಿರಲಣ್ಣ ।
ಖೂಳ ಚೈದ್ಯಗೆ ವಾಲೆ ಬರೆದು ।

ವಿಸ್ತೃತವಾದ ಕಾವ್ಯ ವಿಮರ್ಶೆ ಇಲ್ಲಿ ಅಪ್ರಸ್ತುತ. ಕೇವಲ ಸ್ಥಾಲೀಪುಲಾಕನ್ಯಾಯದಿಂದ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡಲಾಗಿದೆ.

ದಿ। ಶ್ರೀ ಮಂಜೇಶ್ವರ ಗೋವಿಂದ ಪೈಯವರು ಬಲಿಪರ ಮತ್ತು ಅವರ ಕೃತಿಗಳ ಕುರಿತು ಈ ಮಾತುಗಳನ್ನು ಬರೆದಿದ್ದರು.

“ಶ್ರೀ ಬಲಿಪ ನಾರಾಯಣ ಭಾಗವತರೆಂದರೆ ಕಳೆದ ಎಷ್ಟೋ ವರ್ಷಗಳಿಂದ ತಮ್ಮ ಜಾಗಟೆಯ ಬಾಜನೆಗೆ ಎಷ್ಟೋ ಯಕ್ಷಗಾನ ಪ್ರಸಂಗಗಳನ್ನು ಹಾಡಿ ಆಡಿಸಿರುವ ವಯೋವೃದ್ಧರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಕಲೆಯಲ್ಲಿ ಅವರೆಂದರೆ ಎತ್ತಿದ ಕೈ. ಈ ಜಿಲ್ಲೆಯಲ್ಲಿ ಹೇಗೂ ಅವರನ್ನು ಕಂಡಿಲ್ಲದ ಕೇಳಿಲ್ಲದ ಯಕ್ಷಗಾನ ಪ್ರೇಮಿಗಳು ಇರುವರಾದರೆ ತೀರ ಕಡಿಮೆ. ಅವರ ಹೆಸರನ್ನು ಅರಿಯದವರೆಂದರೆ ಪ್ರಾಯಶಃ ನಾಸ್ತಿ ಎನ್ನಬಹುದು. ಹೀಗಾಗಿ ಈ ಪ್ರಸಂಗಗಳು ಅಂಥವರೊಬ್ಬ ಯಕ್ಷಗಾನ ವಿಶಾರದರ ಕೃತಿಗಳೆಂಬುದರಿಂದ ಅವು ಉತ್ತಮವಾಗಿರಲೇ ಬೇಕು”

"ಅಹಲ್ಯಾಶಾಪ" ಒಂದನ್ನುಳಿದು ಮಿಕ್ಕ ಎಲ್ಲ ಪ್ರಸಂಗಗಳೂ ಇನ್ನೂ ಅಪ್ರಕಟಿತವಾಗಿಯೇ ಇವೆ. ಈ ಶ್ರೇಷ್ಠ ಕೃತಿಗಳು ಪ್ರಕಟವಾದಗೆ ಯಕ್ಷಗಾನಕ್ಕೆ ಹೊಸ ಕಳೆ ಬಂದೀತು.

ವಿಚಿತ್ರ ಜೀವನ

ಬಲಿಪ ನಾರಾಯಣ ಭಾಗವತರ ದೈನಂದಿನ ಜೀವನಕ್ರಮ ಬಹಳ ವಿಚಿತ್ರವಾಗಿತ್ತು. ಎಳವೆಯಿಂದಲೇ ಅಲೆದಾಟದ ಸ್ವಭಾವವಿದ್ದ ಇವರು ಕೊನೆಯ ತನಕ ತಮ್ಮ ಹೆಚ್ಚಿನ ಸಮಯವನ್ನು ತಿರುಗಾಟದಲ್ಲೇ ಕಳೆದಿದ್ದರು. ಒಂದೇ ಕಡೆಯಲ್ಲಿದ್ದು ನಿಯಮಿತವಾದ ಬಾಳ್ವೆಯನ್ನು ಕಳೆದ ಕಾಲಾವಧಿ ಇವರ ಜೀವನದಲ್ಲಿ ಅತ್ಯಲ್ಪ.

ಉಡುಪು ತೊಡುಪುಗಳ ವಿಚಾರದಲ್ಲಿ ಅವರಿಗೆ ವಿಶೇಷ ಲಕ್ಷ್ಯವಿರಲಿಲ್ಲ. ಮಲಿನವಾದ ದಪ್ಪ ಧೋತಿಯೊಂದು, ಬಣ್ಣದ ನಿಲುವಂಗಿ, ಉದ್ದದ ಶಾಲು, ಕೆಲವೊಮ್ಮೆ ಅದರದ್ದೇ ಮುಂಡಾಸು—ಇದೇ ಬಲಿಪರ ಉಡಿಗೆಯಾಗಿತ್ತು. ಈ ಉಡುಪನ್ನು ಆಗಾಗ ತೊಳೆದು ಶುಚಿಯಾಗಿಟ್ಟುಕೊಳ್ಳಬೇಕೆಂಬ ಸ್ಮರಣೆಯೇ ಅವರಿಗೆ ಬರುತ್ತಿರಲಿಲ್ಲ. ಹಲವು ದಿನಗಳ ವರೆಗೆ ಮಾಸಿ, ಮಲಿನವಾದ ಉಡುಪು ಅವರ ಮೈ ಮೇಲೆ ಇರುತ್ತಿತ್ತು. ಯಾರಾದರೂ ಬಂಧುಗಳೋ, ಗೆಳೆಯರೋ ಒತ್ತಾಯಿಸಿ ಬಟ್ಟೆ ಬರೆಗಳನ್ನು ಒಗೆಸಿ ಶುಭ್ರಮಾಡಿ ಕೊಟ್ಟರೆ ಮತ್ತೆ ಅದನ್ನು ತೊಟ್ಟುಕೊಳ್ಳುತ್ತಿದ್ದರು.

ಮೇಳಗಳಲ್ಲಿ ತಿರುಗಾಟ ಮಾಡಿದ ಅಭ್ಯಾಸಬಲದಿಂದಲೊ ಏನೋ, ಅರೆ ನಿಮಿಷವೂ ನಿದ್ದೆ ಮಾಡದೆ ಹತ್ತು ಇಪ್ಪತ್ತು ದಿನಗಳ ವರೆಗೆ ಇರುತ್ತಿದ್ದರು. ರಾತ್ರಿ ಬಯಲಾಟಗಳ ಭಾಗವತಿಕೆ, ಹಗಲು ಒಂದೆಡೆಯಿಂದ ಇನ್ನೊಂದು ಸ್ಥಳಕ್ಕೆ ಹತ್ತು ಇಪ್ಪತ್ತು ಮೈಲುಗಳಷ್ಟು ದೂರದ ಕಾಲು ನಡೆಯ ಪ್ರಯಾಣ, ಮಧ್ಯದಲ್ಲಿ ಅವ್ಯವಸ್ಥಿತವಾದ ಆಹಾರ ಪಾನೀಯಗಳು– ಹಲವು ವರ್ಷಗಳ ವರೆಗೆ ಇದೇ ಅವರ ನಿತ್ಯ ಜೀವನದ ಕ್ರಮವಾಗಿತ್ತು.

ಕಬ್ಬು, ಗೇರುಬೀಜ, ಹಸುರು ಪರಮಾನ್ನ ಮುಂತಾದುವು ಅವರಿಗೆ ಅತ್ಯಂತ ಪ್ರಿಯವಾದ ತಿನಿಸುಗಳಾಗಿದ್ದವು. ಕಾಲುನಡೆಯ ದೂರಪ್ರಯಾಣಕ್ಕೆ ಹೊರಟಾಗ ಮಾರುದ್ದದ ಒಂದೋ ಎರಡೋ ಕಬ್ಬಿನ ಜಲ್ಲೆಗಳನ್ನು ತೆಗೆದುಕೊಳ್ಳುತ್ತಿದ್ದರು. ದಾರಿಯುದ್ದಕ್ಕೂ ಕಚ್ಚಿ ಮೆಲ್ಲುತ್ತ ನಡೆಯುತ್ತಿದ್ದರು. ಕಬ್ಬು ತಿನ್ನುವುದರಲ್ಲೇ ಮಗ್ನನಾಗಿದ್ದರೆ ನಡೆದಾಗ ಮಾರ್ಗಶ್ರಮವೂ ಗೊತ್ತಾಗುವುದಿಲ್ಲ, ಬಾಯಾರಿಕೆಯೂ ಆಗುವುದಿಲ್ಲ ಎಂದವರು ಹೇಳುತ್ತಿದ್ದರು.

ಸುಟ್ಟ ಗೇರುಬೀಜದ 'ಬೊಂಡು' ಸಿಕ್ಕಿದರೆ ಒಂದು ಸೇರು ಎರಡು ಸೇರು ತೆಗೆದುಕೊಳ್ಳುತ್ತಿದ್ದರು. ಒಂದೇ ಸಲಕ್ಕೆ ತಿಂದು ಮುಗಿಸುತ್ತಲೂ ಇದ್ದರು.

ಮಳೆಗಾಲದ ವಿಶ್ರಾಂತಿಯ ವೇಳೆಯಲ್ಲಿ ಪಡ್ರೆಗೆ ಬಂದಾಗ ನಾಲ್ಕು ತಿಂಗಳ ಕಾಲ ಔತಣಗಳ ಸುರಿಮಳೆಯಾಗುತ್ತಿತ್ತು. ಪಡ್ರೆ ಶ್ರೀಪತಿ ಶಾಸ್ತ್ರಿಗಳು, ಕೋಟಿ ಸುಬ್ರಾಯ ಭಟ್ಟರು, ಶಿರಂತಡ್ಕ ಹರಿಯಣ್ಣ ಭಟ್ಟರು, ಸೈಪಂಗಲ್ಲು ನಾರಾಯಣ ಭಟ್ಟರು ಮುಂತಾಗಿ ಹತ್ತು ಹನ್ನೆರಡು ಮಂದಿ ಒಂದುಗೂಡಿ ಒಂದೊಂದು ದಿನ ಒಬ್ಬೊಬ್ಬರ ಮನೆಯಲ್ಲಿ ವಿಶೇಷ ತಿಂಡಿ ತಿನಿಸುಗಳನ್ನು ಮಾಡಿಸುತ್ತಿದ್ದರು. ತಿನ್ನುವಾಗ ಯಾರು ಹೆಚ್ಚು ಎಂದು ಪಂಥ ಕಟ್ಟುವ ಕ್ರಮವೂ ಇತ್ತು. ಪಂಥದಲ್ಲಿ ಒಂದು ಸಲವಾದರೂ ಬಲಿಪರನ್ನು ಸೋಲಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ತೆಂಗಿನಕಾಯಿ ಹಾಲು, ಮಿತವಾದ ಬೆಲ್ಲ ಸೇರಿಸಿ ತಯಾರಿಸಿದ ಹಸುರು ಪರಮಾನ್ನವನ್ನು, ಸೌಟಿನ ಲೆಕ್ಕದಲ್ಲಿ ನಲ್ವತ್ತು ಐವತ್ತರ ತನಕ

ಬಲಿಪರು ಒಂದು ಬಾರಿಗೆ ತಿನ್ನುತ್ತಿದ್ದರು. ಒತ್ತಾಯಿಸಿ ಬಡಿಸಿದರೆ ಸಾಕೆಂದು ಹೇಳುವ ಕ್ರಮ ಅವರಲ್ಲಿರಲಿಲ್ಲ. ಹೋಳಿಗೆ, ಲಾಡು, ಬಾಳೆಹಣ್ಣು, ತುಪ್ಪ, ಜೇನು ಮುಂತಾದವುಗಳನ್ನೂ ಪಂಥಕಟ್ಟಿ ಎಷ್ಟು ಬೇಕಾದರೂ ತಿನ್ನುತ್ತಿದ್ದರು. ನೂರು, ನೂರೈವತ್ತು ಹಣ್ಣುಗಳಿದ್ದ ಇಡೀ ಬಾಳೆಗೊನೆಯನ್ನು ಕುಳಿತಲ್ಲಿಂದ ಏಳಬೇಕಾದರೆ ತಿಂದು ಮುಗಿಸಿದ ಸಂದರ್ಭಗಳೂ ಉಂಟು.

ಸ್ಪರ್ಧೆಗೆ ನಿಂತು ಅತಿಯಾಗಿ ತಿಂದ ಮೇಲೆ, ಅದರಿಂದ ಆರೋಗ್ಯಕ್ಕೆ ಅಪಾಯ ಬಂದೀತೆಂಬ ಸಂಶಯ ಬಂದರೆ, ಕೂಡಲೇ ಬೇಕೆಂದಾಗ ಎಲ್ಲವನ್ನೂ ವಾಂತಿ ಮಾಡಿ ಹೊರ ಹಾಕುವ ವಿಚಿತ್ರ ಅಭ್ಯಾಸ ಬಲಿಪರಿಗಿತ್ತು.

ಒಂದೊಂದು ದಿನ ಒಂದೊಂದು ಮನೆಯಲ್ಲಿ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಿ ಅಲ್ಲಿ ಇಂತಹ ಔತಣಗಳನ್ನು ಮಾಡುವುದು, ಬೆಳಗಿನ ತನಕ ತಾಳಮದ್ದಳೆಯ ಕೂಟಗಳನ್ನು ಜರಗಿಸುವುದು. ಹೀಗೆ ಹಲವು ವರ್ಷಗಳ ವರೆಗೆ ಇಡೀ ಊರಿನ ಜೀವನ ಉತ್ಸಾಹ, ಸಂತೋಷ ಸಂಭ್ರಮಗಳಿಂದ ನಡೆಯುವಂತೆ ಮಾಡಿದ್ದರು.

ಸ್ವತಃ ರುಚಿರುಚಿಯಾದ ಹಲವು ಪಾಕಗಳನ್ನು ತಯಾರಿಸುವ ಕ್ರಮವು ಬಲಿಪರಿಗೆ ತಿಳಿದಿತ್ತು. ಹಾಲು, ತುಪ್ಪ, ಸಕ್ಕರೆ, ದ್ರಾಕ್ಷೆ, ಜೇನು ಮುಂತಾದ ವಸ್ತುಗಳು ಯಾವಾಗಲೂ ಅವರ ಮನೆಯಲ್ಲಿ ಧಾರಾಳವಾಗಿ ಇರುತ್ತಿದ್ದವು. ಮನೆಗೆ ಯಾರು ಬಂದರೂ ತಾನೇ ಕುಳಿತು ಬಗೆ ಬಗೆಯ ತಿಂಡಿಗಳನ್ನು ತಯಾರಿಸಿ ಬಂದವರನ್ನು ತುಂಬು ಪ್ರೀತಿಯಿಂದ ಉಪಚರಿಸುತ್ತಿದ್ದರು.

ಆಹಾರ, ನಿದ್ರೆ, ವಿಶ್ರಾಂತಿ ಯಾವುದೂ ಇಲ್ಲದೆ ಹಲವು ಹಗಲು ರಾತ್ರಿಗಳನ್ನು ಕಳೆಯುವುದು, ತಿನ್ನುವಾಗ ಮಿತಿಮೀರಿ ತಿನ್ನುವುದು, ನಿದ್ದೆ ಮಾಡಿದಾಗ ಮೂರು ನಾಲ್ಕು ದಿನಗಳು ಮಲಗಿದಲ್ಲಿಂದ ಏಳದೆ ನಿದ್ರಿಸುವುದು ಮುಂತಾದ ಬಲಿಪರ ವಿಚಿತ್ರ ಕ್ರಮಗಳನ್ನು ನೋಡಿದರೆ ಇದೆಲ್ಲ ಹೇಗೆ ಸಾಧ್ಯವಾಗುತ್ತಿತ್ತೆಂದು ಎಂಥವನಿಗೂ ಆಶ್ಚರ್ಯವಾಗುತ್ತಿತ್ತು.

ಬಾಳಸಂಜೆ; ಅಸ್ತಮಾನ

ಸಾಧಾರಣ ತಮ್ಮ ಹದಿನೈದು ಹದಿನಾರನೆಯ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿದ ಬಲಿಪರು ಹಲವು ವರ್ಷಗಳ ಕಾಲ ಒಂಟಿ ಬಾಳನ್ನು ನಡೆಸಿದ ನಂತರ ಮತ್ತೊಮ್ಮೆ ಗೃಹಸ್ಥ ಜೀವನವನ್ನು ಪ್ರವೇಶಿಸಿದರು. ಕೂಡ್ಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅವರಿಗೆ ಸೋಮೇಶ್ವರದ ಶ್ರೀ ಸೋಮನಾಥಯ್ಯ ಮತ್ತು ಶ್ರೀಮತಿ ಮೂಕಾಂಬಿಕಾ ಎಂಬವರ ಪುತ್ರಿ ಕುಮಾರಿ ಸೀತಾ ಅವರ ಪರಿಚಯವಾಯಿತು. ಈ ಪರಿಚಯವು ಗಾಢವಾದ ಪ್ರೇಮದಲ್ಲಿ ಪರ್ಯವಸಾನ ಹೊಂದಿ ಬಲಿಪರು ಆಕೆಯನ್ನು ವಿವಾಹವಾದರು. ಇವರಿಗೆ ರತ್ನಾ ಎಂಬ ಮಗಳು ಜನಿಸಿದಳು, ಆ ಬಳಿಕ ವಿಟ್ಲದ ಸಮೀಪದ ಕೋಡಂಗಾಯಿ ಎಂಬಲ್ಲಿ ಸೀತಾದೇವಿಯವರ ಆಸ್ತಿಮನೆಗಳಿದ್ದಲ್ಲಿ ಬಂದು ನೆಲಸಿ ಕ್ರಮಬದ್ಧವಾದ ಜೀವನವನ್ನು ಪ್ರಾರಂಭಿಸಿದರು. ಮಗಳನ್ನು ಉಡುಪಿಯ ಶ್ರೀ ರಘುನಾಥರಾವ್ ಎಂಬವರಿಗೆ ಮದುವೆ ಮಾಡಿ ಕೊಟ್ಟ ಮೇಲೆ ನಿಶ್ಚಿಂತೆಯಿಂದ ಕಾಲಹರಣ ಮಾಡುತ್ತಿದ್ದರು. ಶ್ರೀಮತಿ ರತ್ನಾ ಅವರ ಮಗ ಶ್ರೀ ಯು. ಲಕ್ಷ್ಮೀನಾರಾಯಣ ರಾವ್ ಎಂಬವರು ಈಗ ಉಡುಪಿಯಲ್ಲಿ ಸಿಂಡಿಕೇಟ್ ಬೇಂಕಿನ ತರಬೇತಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ಉತ್ತಮ ಸ್ಥಿತಿಯಲ್ಲಿದ್ದಾರೆ.

ಕೃಷಿಯಲ್ಲಿಯೂ ಬಲಿಪರಿಗೆ ಒಳ್ಳೆಯ ಅನುಭವವಿತ್ತು. ಏನೂ ಫಲ ಬಾರದ ಅಡಿಕೆ ತೋಟವನ್ನು ಕೆಲವೇ ವರ್ಷಗಳಲ್ಲಿ ನಂದನವನದಂತೆ ಮಾಡಿದರು. ಸ್ವತಃ ದುಡಿಯುತ್ತ, ಹೊಸ ಗಿಡಗಳನ್ನು ನಟ್ಟು, ನೀರೆರೆದು ಒಂದಕ್ಕೆ ನಾಲ್ಕರಷ್ಟು ಫಲ ಬರುವಂತೆ ಮಾಡಿದರು. ಬಲಿಪರ ಕೃಷಿ ವಿಧಾನವನ್ನು ನೋಡಿ ಅನುಭವ ಪಡೆಯುವ ಸಲುವಾಗಿಯೇ ಅನೇಕರು, ಅಲ್ಲಿಗೆ ಆಗಾಗ ಬಂದು ಹೋಗುತ್ತಿದ್ದರು.

ಒಳ್ಳೆ ಜಾತಿಯ ದನ, ಎಮ್ಮೆ ಮುಂತಾದ ಜಾನುವಾರುಗಳ ಲಕ್ಷಣವನ್ನು ತಿಳಿದು ಆರಿಸಿ ಸಾಕುವ ಕೆಲಸದಲ್ಲಿಯೂ ಅವರು ನಿಷ್ಣಾತರಾಗಿದ್ದರು. ಮನೆಯಲ್ಲಿ ಯಾವಾಗಲೂ ತಪ್ಪದೆ ಚೆನ್ನಾಗಿ ಹಾಲು ಕೊಡುವ ಒಂದೆರಡು ದನಗಳು, ಎಮ್ಮೆಗಳು ಇರುತ್ತಿದ್ದವು. ಹೊಸ ದನವೋ ಎಮ್ಮೆಯೋ ಬೇಕಾದವರು ಚೆನ್ನಾಗಿ ಪರೀಕ್ಷಿಸಿ ಉತ್ತಮ ಜಾತಿಯನ್ನು ಆರಿಸಲು ಬಲಿಪರ ಸಲಹೆ ಕೇಳುತ್ತಿದ್ದರು, ಹಲವು ಕಡೆ ಅವರನ್ನು ಕರೆದುಕೊಂಡು ಹೋಗುತ್ತಿದ್ದರು.

ಕೃಷಿ ಮಾಡಲು ಯೋಗ್ಯವಾದ ಭೂಮಿಯನ್ನು ಆರಿಸುವುದು, ಹೊಸ ಮನೆಕಟ್ಟುವುದು, ಆಸ್ತಿಗಳಿಗೆ ಬೆಲೆ ನಿರ್ಧರಿಸುವುದು ಮುಂತಾದ ಹಲವು ವಿಚಾರಗಳಲ್ಲಿ ಬಲಿಪರ ಅನುಭವ ಅಪಾರವಾಗಿತ್ತು. ಈ ವಿಷಯಗಳನ್ನು ಕೇಳಿ ತಿಳಿಯುವುದಕ್ಕಾಗಿಯೇ ಅನೇಕರು ಅವರನ್ನು ಆಶ್ರಯಿಸುತ್ತಿದ್ದರು.

ಬಲಿಪರು ವಿಶ್ರಾಂತಿಯನ್ನು ಪಡೆಯುತ್ತಿದ್ದಾಗಲೂ ಆಗಾಗ ಬಯಲಾಟಗಳಲ್ಲಿ, ಯಕ್ಷಗಾನ ಕೂಟಗಳಲ್ಲಿ ಭಾಗವತಿಕೆಯನ್ನು ನಿರ್ವಹಿಸಬೇಕೆಂದು ಅವರಿಗೆ ವಿಶೇಷ ಆಮಂತ್ರಣಗಳು ಬರುತ್ತಿದ್ದವು. ದೂರ ದೂರದ ಸ್ಥಳಗಳಿಂದ ಕಾರು ತೆಕ್ಕೊಂಡು ಮನೆಯ ತನಕ ಬಂದು ಅವರನ್ನು ಕರೆದೊಯ್ಯುತ್ತಿದ್ದರು. ಅಸ್ವಸ್ಥತೆ, ನಿಃಶಕ್ತಿ, ಆಯಾಸ ಮುಂತಾದ ಯಾವ ಅನಾನುಕೂಲತೆಗಳಿದ್ದರೂ ಲೆಕ್ಕಿಸದೆ ಯಕ್ಷಗಾನಕ್ಕೆ ಕರೆ ಬಂದಾಗ ತಪ್ಪದೆ ಎಷ್ಟು ದೂರ ಬೇಕಾದರೂ ಅವರು ಹೋಗುತ್ತಿದ್ದರು.

ಮೇಳದವರು ತಿರುಗಾಟಕ್ಕೆ ಹೊರಟಾಗ ಕಲಾವಿದರ ನ್ಯೂನತೆಯಿಂದಲೋ, ಅಥವಾ ಬೇರೆ ಯಾವುದಾದರೂ ಕಾರಣದಿಂದಲೋ ಆಟಗಳು ಸಪ್ಪೆಯಾಗಿ, 'ಕಲೆಕ್ಷನ್' ಕಡಿಮೆಯಾಗುತ್ತ ಬಂದರೆ ಮೇಳಗಳ ಯಜಮಾನರು ಬಲಿಪರಲ್ಲಿಗೆ ಬಂದು ಒತ್ತಾಯಿಸಿ ಕೆಲವು ದಿನಗಳ ಮಟ್ಟಿಗೆ ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ಹಾಡುಗಾರಿಕೆಗೆ ಬಲಿಪ ಭಾಗವತರು ಬರುತ್ತಾರೆ ಎಂಬ ಸುದ್ದಿಯಾದರೆ ಸಾಕು ಜನಸಂದಣಿ ಕಿಕ್ಕಿರಿದು ನೆರೆಯುತ್ತಿತ್ತು. ಕೆಲವು ದಿನ ಮೇಳದ ಜತೆಯಲ್ಲಿದ್ದು ಕಲಾವಿದರಿಗೆ ಹೊಸ ಸಲಹೆ ಸೂಚನೆಗಳನ್ನಿತ್ತು, ಹೊಸ ಚೈತನ್ಯವನ್ನು ಉಂಟು ಮಾಡಿ ಅವರು ಹಿಂತಿರುಗಿ ಬರುತ್ತಿದ್ದರು.

ಪ್ರಸಿದ್ಧ ಅರ್ಥಧಾರಿಗಳನ್ನು ಬರಮಾಡಿ ಎಲ್ಲಿಯಾದರೂ ದೊಡ್ಡ ಯಕ್ಷಗಾನಕೂಟವನ್ನು ಏರ್ಪಡಿಸಬೇಕೆಂದು ಹೊರಟವರು ಹಾಡುಗಾರಿಕೆಗೆ ಬಲಿಪರನ್ನೇ ಕರೆಯುತ್ತಿದ್ದರು. ಬಯಲಾಟವಾಗಲಿ, ತಾಳಮದ್ದಳೆಯಾಗಲಿ, ನಡೆಯಲಿದೆ ಎಂಬ ಮಾತು ಬಂದಾಗ ಮೊಟ್ಟ ಮೊದಲಿಗೆ "ಭಾಗವತರು ಯಾರು" ಎಂಬ ಪ್ರಶ್ನೆಯನ್ನು ಜನರು ಕೇಳುತ್ತಿದ್ದರು. ಬಲಿಪ ಭಾಗವತರು ಬರುತ್ತಾರಂತೆ ಎಂದು ಉತ್ತರ ಬಂದರಾಯಿತು, ಅದು ಭಾರೀ ದೊಡ್ಡ ಆಟವೋ ಕೂಟವೋ ಆಗಿರಬೇಕೆಂದು ತೀರ್ಮಾನಿಸುತ್ತಿದ್ದರು.

ನಾಡಿನ ಹಲವಾರು ಸಾರ್ವಜನಿಕ ಸಂಸ್ಥೆಗಳ, ಶಾಲೆಗಳ ಸಹಾಯಾರ್ಥವಾಗಿ ಬಲಿಪರು ಅನೇಕ ಬಯಲಾಟಗಳನ್ನು ತಾಳಮದ್ದಳೆಯ ಕೂಟಗಳನ್ನು ನಡೆಸಿ ಕೊಟ್ಟಿದ್ದಾರೆ. ಅಂತಹ ಸಂದರ್ಭಗಳಲ್ಲಿ ಸಂಭಾವನೆಯನ್ನು ಸ್ವೀಕರಿಸುವ ಬದಲು ತನ್ನ ಪಾಲಿನ ಸಣ್ಣ ಅಳಿಲಸೇವೆ ಇರಲಿ ಎಂದು ಸಾಕಷ್ಟು ದೊಡ್ಡ ಮೊತ್ತದ ಸಹಾಯವನ್ನು ಕೊಟ್ಟು ಬರುತ್ತಿದ್ದರು. ಬಲಿಪರು ಕರೆದಾಗ ಯಾವ

ಯಕ್ಷಗಾನ ಕಲಾವಿದನೂ ಉಚಿತವಾಗಿ ಸೇವೆ ಸಲ್ಲಿಸಲು ನಿರಾಕರಿಸುತ್ತಿರಲಿಲ್ಲ. ಬೇಕೆಂದಾಗ ಯಕ್ಷಗಾನ ಕ್ಷೇತ್ರದ ಶ್ರೇಷ್ಠ ಕಲಾವಿದರೆಲ್ಲರನ್ನೂ ಒಂದುಗೂಡಿಸುವ ಸಾಮರ್ಥ್ಯ ಅವರಲ್ಲಿತ್ತು.

ಹತ್ತು ಹನ್ನೆರಡು ವರ್ಷಗಳ ಕಾಲ ಆಸ್ತಿ, ಅಡಿಕೆತೋಟ ಮುಂತಾದ ಕೃಷಿ ವ್ಯವಹಾರದಲ್ಲಿ ಆಸಕ್ತರಾಗಿದ್ದ ಬಲಿಪರು ಮುಂದೆ ಸ್ವತಃ ದುಡಿಯುವ ಶಕ್ತಿ ಸಾಮರ್ಥ್ಯಗಳು ತಮ್ಮಲ್ಲಿ ಕಡಿಮೆ ಯಾಯಿತೆಂದು ತೋರಿ ಬಂದಾಗ ಅದೆಲ್ಲವನ್ನು ಮಾರಾಟಮಾಡಿ, ವಿಟ್ಲ ಪೇಟೆಯಲ್ಲೇ ಒಂದು ಹಿತ್ತಿಲು ಮನೆಯನ್ನು ಕ್ರಯಕ್ಕೆ ಪಡೆದು ಅಲ್ಲೇ ಹಾಯಾಗಿ ಜೀವಿಸತೊಡಗಿದರು. ಯಾರಾದರೂ ಬಂದು ಒತ್ತಾಯಿಸಿ ಕರೆದುಕೊಂಡು ಹೋದರೆ ಅಪರೂಪಕ್ಕೆ ಆಟಗಳಲ್ಲಿ ತಾಳಮದ್ದಳೆಗಳಲ್ಲಿ ಹಾಡು ವುದು, ಉಳಿದ ಸಮಯದಲ್ಲಿ ಬೇರೆ ಬೇರೆ ನೂತನ ಪ್ರಸಂಗಗಳನ್ನು ರಚಿಸುವುದು, ಜಿಜ್ಞಾಸುಗಳಾಗಿ ಯಾರಾದರೂ ಮನೆಗೆ ಬಂದರೆ ಅವರಿಗೆ ಬೇಕಾದ ವಿಷಯಗಳನ್ನು ಹೇಳಿಕೊಟ್ಟು ಪ್ರೋತ್ಸಾಹಿಸುವುದು ಇವೇ ಅವರ ಪ್ರಧಾನ ಕಾರ್ಯಕ್ರಮಗಳಾಗಿದ್ದವು.

ಅಭಿಮಾನಿಗಳು ಯಾರಾದರೂ ಮನೆಗೆ ಬಂದು ಭೇಟಿಕೊಟ್ಟಾಗ, ಕುಶಲಪ್ರಶ್ನೆಗಳನ್ನು ಕೇಳಿ ದಾಗ ನಗುನಗುತ್ತ, "ವಾಯಿದೆ ಮುಗಿಯುತ್ತ ಬಂತು, ಬೇಗ ಬೇಗ ಸಾಧ್ಯವಿದ್ದಷ್ಟು ಕೆಲಸ ಮಾಡಿ ಮುಗಿಸಿ ಪ್ರಯಾಣದ ಸಿದ್ಧತೆಯನ್ನು ಮಾಡಬೇಕು" ಎಂದು ಹೇಳುತ್ತಿದ್ದರು.

ಜಿಲ್ಲೆಯ ಅನೇಕ ಕಡೆಗಳಲ್ಲಿ ಎಷ್ಟೋ ಮಂದಿ ಯಕ್ಷಗಾನ ಕಲಾಭ್ಯಾಸಿಗಳು ಯಕ್ಷಗಾನ ಸಂಘಗಳನ್ನು ಸ್ಥಾಪಿಸಿ, ಬಲಿಪರನ್ನೇ ಕರೆಸಿ ಅವರ ಕೈಗಳಿಂದಲೇ ಸಂಘಗಳ ಉದ್ಘಾಟನೆಯನ್ನು ಮಾಡಿಸಿ ಕೊಂಡು ಆಶೀರ್ವಾದ ಪಡೆದುಕೊಂಡರು. ಬಲಿಪರ ಅನುಗ್ರಹ ಆಶೀರ್ವಾದಗಳಿದ್ದರೆ ಸಂಘಕ್ಕೂ ಕಲಾವಿದರಿಗೂ ಶ್ರೇಯಸ್ಸು ಬರುವುದು ನಿಶ್ಚಿತವೆಂದು ಅವರ ನಂಬಿಕೆಯಾಗಿತ್ತು.

ಬಲಿಪರ ಅವ್ಯವಸ್ಥಿತವಾದ ಬದುಕಿನ ಕ್ರಮವನ್ನು ನೋಡಿದವರಿಗೆ ಅವರ ಶರೀರವು ಎಂದೋ ಅನಾರೋಗ್ಯಕ್ಕೆ ಬಲಿಯಾಗಬೇಕಿತ್ತೆಂದು ತೋರುತ್ತಿತ್ತು. ಆದರೆ ಹಾಗಾಗಲಿಲ್ಲ. ಇದ್ದಷ್ಟು ದಿನ ವಿಶೇಷ ನೋವು ನರಳಾಟಗಳಿಲ್ಲದೆ ಸುಖವಾಗಿಯೇ ಅವರು ಬದುಕಿದರು.

"ಈ ವೃದ್ಧಾಪ್ಯದಲ್ಲಿ ತಾಳಮದ್ದಳೆಗಳಿಗೆ, ಆಟಗಳಿಗೆ ಹೋಗುವುದು, ಬೆಳಗಿನ ತನಕ ನಿದ್ದೆಗೆಟ್ಟು ಹಾಡುವುದು, ದೀರ್ಘ ಪ್ರಯಾಣ ಮಾಡುವುದು– ನಿಮ್ಮಿಂದ ಸಾಧ್ಯವಾಗುವುದೇ? ಯಾಕೆ ಹೀಗೆ ಬಳಲುತ್ತೀರಿ?" ಎಂದು ಅವರ ಹಿತೈಷಿಗಳು ಕೇಳಿದಾಗ ಎಷ್ಟೋ ಸಲ ಅವರು, "ಜಾಗಟೆ ಕೋಲು ಕೈಯಲ್ಲಿ ಹಿಡಿದು ಹಾಡುತ್ತಿರುವಾಗಲೇ ಊರ್ಧ್ವಶ್ವಾಸ ಹಾಗೆಯೇ ಹೊರಟು ಹೋದರೆ ಅದರಷ್ಟು ಭವ್ಯವಾದ ಮರಣ ನನ್ನ ಪಾಲಿಗೆ ಬೇರೊಂದಿಲ್ಲ" ಎಂದು ಹೇಳುತ್ತಿದ್ದರು.

ಬಹುಮಟ್ಟಿಗೆ ಅವರ ಈ ಉತ್ಕಟ ಅಭಿಲಾಷೆಯನ್ನು ದೈವವು ಪೂರಯಿಸಿ ಕೊಟ್ಟಿತು.

೧೯೬೬ನೇ ಪರಾಭವ ಸಂವತ್ಸರದ ಕಾರ್ತಿಕ ಮಾಸದ ಆರಂಭದಲ್ಲಿ ಕೊನೆಯ ಬಾರಿ ಎಂಬಂತೆ ಅವರು ತಮ್ಮ ಹುಟ್ಟೂರಾದ ಪಡ್ರೆಗೆ ಬಂದಿದ್ದರು, ಅಂದು ಅವರ ಅತ್ಯಂತ ಆತ್ಮೀಯರಾಗಿದ್ದ ಪಡ್ರೆ ಶ್ರೀಪತಿ ಶಾಸ್ತ್ರಿಗಳ ವಾರ್ಷಿಕ ಶ್ರಾದ್ಧದ ದಿನವಾಗಿತ್ತು. ಗುಡ್ಡೆಗಳನ್ನು ಹತ್ತಿ ಇಳಿದು ಬಯಲನ್ನು ದಾಟಿ ನಡೆದು ಬರುವಷ್ಟು ಶರೀರದಲ್ಲಿ ಶಕ್ತಿ ಇಲ್ಲದಿದ್ದರೂ ಬಲಿಪರು ಪ್ರಯಾಸಪಟ್ಟು ಶಾಸ್ತ್ರಿಗಳ ಮನೆಗೆ ಬಂದರು. ಆ ದಿನ ಊರಿನ ಹಿರಿಯ ವ್ಯಕ್ತಿಗಳೆಲ್ಲ ಅಲ್ಲಿ ಸೇರಿದ್ದರು, ಬಾಳಸಂಜೆ ಯಲ್ಲಿ ಮತ್ತೊಮ್ಮೆ ಬಾಲ್ಯಸ್ನೇಹಿತರಲ್ಲಿ ಹೆಚ್ಚಿನವರು ಒಂದಾದರು. ದಿನವಿಡೀ ಹಳೆಯ ನೆನಹು ಗಳನ್ನು ಸ್ಮರಿಸುತ್ತ ಆನಂದದಿಂದ ಮಾತನಾಡಿಕೊಂಡರು. ಪ್ರಾಯಸ್ಥರ ಸಭೆಯಲ್ಲಿ, ಯಾರು ಮೊದಲು "ಹೋಗುವವರು" ಯಾರು ಮತ್ತೆ ಎಂಬ ಮಾತೇ ಪ್ರಧಾನವಾಗಿ ಆಗಾಗ ಬರುತ್ತಿತ್ತು.

ಆ ದಿನ ರಾತ್ರಿ ಊರಿನವರೆಲ್ಲ ಸೇರಿ ಬಲಿಪರ ಸೋದರ ಮಾವನ ಮನೆಯಲ್ಲಿ ಒಂದು ತಾಳ ಮದ್ದಳೆಯ ಏರ್ಪಾಡು ಮಾಡಿದರು. ಮೃದಂಗ ವಾದನಕ್ಕೆ ಶ್ರೀ ಕುದುರೆಕೂಡ್ಲು ರಾಮ ಭಟ್ಟರನ್ನು ಕರೆಸಿದ್ದರು. ಹಳೆಯ ಮಿತ್ರರು, ಬಂಧುಗಳು, ಎಳೆಯರು, ಶ್ರದ್ಧಾಭಕ್ತಿಯಿಂದ ಕುಳಿತು ಆಲಿಸುತ್ತಿದ್ದ ಆ ಸಭೆಯಲ್ಲಿ ಬಲಿಪರು ಭಾವಾವೇಶದಿಂದ ತಮಗೆ ಪ್ರಿಯವಾದ ಪಾರ್ತಿಸುಬ್ಬ ಕವಿಯ ಪಂಚವಟಿ ಪ್ರಸಂಗವನ್ನು ಹಾಡಿದರು. ಕೇಳುತ್ತ ಕುಳಿತವರಿಗೆ ಸಮಯದ ಪರಿಜ್ಞಾನವೇ ಇರಲಿಲ್ಲ. ಮಧ್ಯರಾತ್ರಿ ಕಳೆದು ಸುಮಾರು ಎರಡು ಗಂಟೆಗಳಾದಾಗ ಅವರು ಜಾಗಟೆಯನ್ನು ಕೆಳಗಿಟ್ಟು, "ಇನ್ನು ಸಾಕು ಬಹಳ ಆಯಾಸವಾಗುತ್ತದೆ ಎಂದು ಹೇಳಿದರು. ಗಾನರಸದಲ್ಲಿ ತೇಲಾಡುತ್ತಿದ್ದವರಿಗೆ ಥಕ್ಕನೆ ನಿಂತುಹೋದುದರಿಂದ ನಿರಾಶೆಯಾದರೂ ನಿರ್ವಾಹವಿಲ್ಲದೆ ಸಮ್ಮತಿಸಬೇಕಾಗಿ ಬಂತು. ತಾಳಮದ್ದಳೆ ಮುಕ್ತಾಯವಾದರೂ ಮಾತುಕತೆ ನಿಲ್ಲಲಿಲ್ಲ. ಬೆಳಗಿನ ತನಕ ಬಂದವರೆಲ್ಲ ಬಲಿಪರ ಸುತ್ತಲೂ ಕುಳಿತು ಬಗೆ ಬಗೆಯ ವಿನೋದದ ಮಾತುಗಳನ್ನಾಡಿದರು. ತಮ್ಮ ಪ್ರೀತಿಯ ಕಲಾತಪಸ್ವಿಯೊಂದಿಗೆ ಇದೇ ಕೊನೆಯ ಸಂಭಾಷಣೆ ಎಂದು ಅಂದು ಯಾರಿಗೂ ಹೊಳೆಯಲಿಲ್ಲ.

ಮತ್ತೊಂದೆರಡು ದಿನ ಊರಿನಲ್ಲಿದ್ದು ಬಲಿಪರು ತಮ್ಮ ಬಂಧುಗಳ ಮನೆಗಳಿಗೆಲ್ಲ ಹೋಗಿ ಬಂದರು. ಕಾಣಬೇಕಾದವರನ್ನು ಕಂಡು ಮಾತನಾಡಿಸಿದರು. ಬಹುಶಃ ಅವರ ಮನಸ್ಸಿನಲ್ಲಿ ತಾನು ಇನ್ನೊಮ್ಮೆ ಹುಟ್ಟೂರಿಗೆ ಬರುವ ಸಂಭವವಿಲ್ಲ ಎಂಬ ಭಾವನೆ ಮೂಡಿತ್ತೋ ಏನೊ.

"ಮುದದಿಂದ ನಿನ್ನ ಕೊಂಡಾಡುವೆ ನಾನನವರತ" ಎಂದು ಸಾವಿರ ಸಾವಿರ ಬಾರಿ ಮಧೂರ ಮಹಾಗಣಪತಿಯನ್ನು ಸ್ತುತಿಸಿದ ಬಲಿಪರು ಮಧೂರಿಗೊಮ್ಮೆ ಹೋಗಿ ಬರಬೇಕು, ಮಲ್ಲ ದೇವಸ್ಥಾನಕ್ಕೂ ಹೋಗಿ ಕೊನೆಯ ಸೇವೆ ಸಲ್ಲಿಸಬೇಕು ಎಂದು ಹೇಳುತ್ತಿದ್ದರು.

ಮುಂದೆ ಹತ್ತಾರು ದಿನಗಳಲ್ಲಿ ಅವರು ಮಧೂರಿಗೆ ಹೋದರು. ಅಲ್ಲಿಂದಲೇ ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೂ ಹೋದರು. ಹಿಂದೊಮ್ಮೆ ತಾನು ಶ್ರೀ ದೇವೀ ಸನ್ನಿಧಿಯಲ್ಲಿ ತಾಳಮದ್ದಳೆಗೆ ಬರುವೆನೆಂದು ಮಾತುಕೊಟ್ಟು ಬರಲಾಗಲಿಲ್ಲ, ಆದ್ದರಿಂದ ತನ್ನ ಪಾಲಿನ ಸೇವೆಯೊಂದು ಆಗಬೇಕೆಂದು ದೇವಸ್ಥಾನದ ಆಡಳಿತೆದಾರರಲ್ಲಿ ಹೇಳಿ ಅಲ್ಲಿ ಒಂದು ತಾಳಮದ್ದಳೆಯನ್ನು ಏರ್ಪಡಿಸಿದರು. ಅಂದು ಕಾರ್ತಿಕ ಮಾಸದ ಹುಣ್ಣಿಮೆಯಾಗಿತ್ತು, ದೇವಸ್ಥಾನದಲ್ಲಿ ವಿಶೇಷ ಜನಸಂದಣಿ ಸೇರಿತು. ಬಲಿಪರ ಹಾಡುಗಾರಿಕೆಯಲ್ಲಿ ತಾಳಮದ್ದಳೆ ಇದೆ ಎಂಬ ಸುದ್ದಿ ಹರಡಿದ್ದರಿಂದ ಮತ್ತಷ್ಟು ಜನ ಸೇರಿದ್ದರು.


ಅಂದಿಗೆ ಎರಡು ಮೂರು ದಿನಗಳಿಂದ ಅವರ ಆರೋಗ್ಯವು ತೀರ ಕೆಟ್ಟಿದ್ದರೂ, ಶ್ರೀ ದೇವಿಯ ಮೇಲಣ ಭಕ್ತಿ ಭಾವದಿಂದ ಶಕ್ತಿ ಮೀರಿ ಹಾಡಿದರು. ಬಲಿಪರ ಕೊನೆಯ ಯಕ್ಷಗಾನ ಸೇವೆ ತನ್ನ ಸನ್ನಿಧಿಯಲ್ಲೇ ಆಗಬೇಕೆಂದು ಶ್ರೀ ದುರ್ಗಾಪರಮೇಶ್ವರಿಯು ಸಂಕಲ್ಪಿಸಿರಬೇಕು.

ಹಾಡುತ್ತ ಇದ್ದಂತೆ ಬಲಿಪರ ಸ್ವರ ಕಂಪಿಸಲಾರಂಭಿಸಿತು. ಅಂಗಾಂಗಗಳಲ್ಲಿ ನಡುಕ ಉಂಟಾಗಿ ಕುಳಿತುಕೊಳ್ಳುವುದೇ ಅಸಾಧ್ಯವಾಯಿತು. ಬಳಿಯಲ್ಲೇ ಕುಳಿತಿದ್ದ ಪ್ರಸಿದ್ಧ ಯಕ್ಷಗಾನ ಭಾಗವತರಾದ ಪುತ್ತಿಗೆ ಶ್ರೀ ರಾಮಕೃಷ್ಣ ಜೋಯಿಸರ ಕೈಗೆ ಜಾಗಟೆಯನ್ನಿತ್ತು "ಮುಂದುವರಿಸಿ" ಎಂದು ಹೇಳಿ ಅವರು ಪ್ರಯಾಸದಿಂದ ಅಲ್ಲಿಂದ ಎದ್ದರು. ಮರುದಿನ ಪ್ರಾತಃಕಾಲವೇ ದೇವಸ್ಥಾನದ ಆಡಳ್ತೆದಾರರು ಬಲಿಪರನ್ನು ಕಾರಿನಲ್ಲಿ ಮಂಗಳೂರಿನ ಆಸ್ಪತ್ರೆಗೆ ಕಳುಹಿಸಿ ಕೊಟ್ಟರು.

ಮುಂದೆ ಮೂರೇ ದಿನಗಳಲ್ಲಿ, ದಶಂಬರ ೩ನೇ ತಾರೀಕು ಶನಿವಾರ ರಾತ್ರಿ ೧೦ ಗಂಟೆಯ ಹೊತ್ತಿಗೆ ಬಲಿಪ ನಾರಾಯಣ ಭಾಗವತರ ಜೀವಜ್ಯೋತಿಯು ಪಾರ್ಥಿವ ಶರೀರವನ್ನು ಬಿಟ್ಟು ಪರಮಾತ್ಮನ ಸನ್ನಿಧಿಯನ್ನು ಸೇರಿತು.

ಮರುದಿನ ವಿಟ್ಲದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬಂಧುಗಳು, ಮಿತ್ರರು, ಕಲಾಭಿಮಾನಿಗಳು ಒಂದುಗೂಡಿ ಅಗಲಿದ ಮಹಾಪುರುಷನಿಗೆ ಕಣ್ಣೀರ ಶ್ರದ್ಧಾಂಜಲಿಯನ್ನರ್ಪಿಸುತ್ತ ವೈಭವದಿಂದ ದಾಹ ಸಂಸ್ಕಾರವನ್ನು ನೆರವೇರಿಸಿದರು.

"ಈ ಭೂತಲದಲ್ಲಿ ಎಂದಿನ ವರೆಗೆ ಪರ್ವತಗಳು, ಕಾನನಗಳು ನದಿಗಳು ಇರುತ್ತವೋ ಅಂದಿನ ವರೆಗೆ ರಾಮಾಯಣ ಕಥೆಯು ಲೋಕದಲ್ಲಿ ಪ್ರಚಾರದಲ್ಲಿ ಉಳಿದೀತು "— ಎಂದು ಬ್ರಹ್ಮದೇವರು ವಾಲ್ಮೀಕಿ ಮಹರ್ಷಿಗಳೊಡನೆ ಹೇಳಿದಂತೆ ಎಂದಿನ ತನಕ ಪ್ರಪಂಚದಲ್ಲಿ ನದೀಗಿರಿಕಾನನಗಳಿರುತ್ತವೋ ಅಂದಿನ ತನಕ ಯಕ್ಷಗಾನ ಕಲೆಯು ಸ್ಥಾಯಿಯಾಗಿ ಉಳಿದೀತು. ಯಕ್ಷಗಾನ ಕಲೆಯು ಇರುವಷ್ಟು ಕಾಲ ಬಲಿಪ ನಾರಾಯಣ ಭಾಗವತರ ಹೆಸರೂ ಅಳಿಯಲಾರದು.



ಮೈಸೂರುರಾಜ್ಯ ಸಂಗೀತನಾಟಕ ಅಕಾಡೆಮಿಯು ಕೊಟ್ಟ
ಪುರಸ್ಕಾರ, ೧೯೬೩.



ಶ್ರೀ ಭಾಗವತರು; ವಿಟ್ಲದ ನಿವಾಸದಲ್ಲಿ.



ಮಗಳು ಮತ್ತು ಮಡದಿ



ಸಹಧರ್ಮಿಣಿಯೊಂದಿಗೆ.

ಭಾಗ ೨

ಸಂಸ್ಮರಣೆಗಳು

ಜೀವ - ಭಾವ ಒಂದು, ದೇಹ ಎರಡು

ಶ್ರೀ ಮೌವಾರು ಕಿಟ್ಟಣ್ಣ ಭಾಗವತರು.

ತುಂಬ ಎಳೆಯವನಾಗಿದ್ದಾಗಲೇ ನನಗೆ ಯಕ್ಷಗಾನದ ಮೇಲೆ ಬಹಳ ಅಭಿರುಚಿ ಇತ್ತು. ಯಕ್ಷಗಾನದ ಹಾಡುಗಳನ್ನು ಕೇಳುವುದು, ಬಯಲಾಟಗಳನ್ನು ನೋಡುವುದು, ಬೇರೆ ಬೇರೆ ವೇಷಗಳ ಉಡುಪು ತೊಡುಪು ಕುಣಿತ, ಅಭಿನಯ ಅಬ್ಬರಗಳನ್ನು ನೋಡುವುದೆಂದರೆ ಎಲ್ಲಿಲ್ಲದ ಆಸಕ್ತಿ. ಹೇಗಾದರೂ ಪ್ರಯತ್ನಿಸಿ ಯಾವುದಾದರೊಂದು ಮೇಳವನ್ನು ಸೇರಿ ನಾನೂ ಒಬ್ಬ ಯಕ್ಷಗಾನ ಕಲಾವಿದನಾಗಬೇಕೆಂಬ ಹಿರಿಯ ಆಕಾಂಕ್ಷೆ ಆ ಕಾಲದಿಂದಲೇ ನನ್ನ ಮನಸ್ಸಿನಲ್ಲಿ ಬೇರೂರಿತ್ತು.

ಮೊದಲ ಬಾರಿಗೆ ನಾನು ಕೂಡ್ಲು ಮೇಳವನ್ನು ಸೇರಿದೆ. ಹಾಡುಗಾರಿಕೆ, ಮೃದಂಗವಾದನ ವೇಷ, ಕುಣಿತ, ಅರ್ಥಗಾರಿಕೆ-ಇವುಗಳಲ್ಲಿ ಯಾವುದರಲ್ಲಿ ನಿನಗೆ ಅಭ್ಯಾಸವಿದೆ ಎಂದು ಮೇಳದ ಯಜಮಾನರು ಕೇಳಿದಾಗ ನನಗೆ ಯಾವುದೂ ಗೊತ್ತಿಲ್ಲ ಎಂದೇ ನಾನು ಉತ್ತರ ಕೊಟ್ಟಿದ್ದೆ. ನನ್ನಲ್ಲಿದ್ದುದು ಮೇಳಕ್ಕೆ ಸೇರಬೇಕೆಂಬ ಉತ್ಸಾಹ ಮತ್ತು ಆಸಕ್ತಿ ಮಾತ್ರ. ಅಡಿಗೆ ಭಟ್ಟನಾಗಿ ಬರುವುದಿದ್ದರೆ ಆಗಬಹುದೆಂದು ಅನುಮತಿ ಸಿಕ್ಕಿತು. ಅದೇ ಆದರೂ ಆಗಬಹುದೆಂದು ನಾನು ಸಂತೋಷದಿಂದ ಸೇರಿಕೊಂಡೆ.

ಆ ವರ್ಷ ಶ್ರೀ ಬಲಿಪ ನಾರಾಯಣ ಭಾಗವತರು ಕೂಡ್ಲು ಮೇಳದಲ್ಲಿ ಸಂಗೀತಗಾರರಾಗಿದ್ದರು. ಅವರಿನ್ನೂ ಪ್ರಧಾನ ಭಾಗವತರ ಪಟ್ಟವನ್ನೇರಿರಲಿಲ್ಲ. ಅಂದಿನಿಂದ ಪ್ರಾರಂಭವಾದ ನನ್ನ ಮತ್ತು ಬಲಿಪ ಭಾಗವತರ ಪರಿಚಯು ಗುರುಶಿಷ್ಯ ರೂಪದಲ್ಲಿ ಮಾರ್ಪಟ್ಟು ಅವರು ಕೊನೆಯುಸಿರನ್ನೆಳೆಯುವ ತನಕ ಕಳೆದ ನಾಲ್ವತ್ತೈದು ಐವತ್ತು ವರ್ಷಗಳ ಕಾಲ ಒಂದೇ ರೀತಿಯಲ್ಲಿ ಸ್ಥಾಯಿಯಾಗಿ ಉಳಿದಿತ್ತು. ಈ ದೀರ್ಘಕಾಲದ ಒಡನಾಟದಲ್ಲಿ ನಡೆದ ಘಟನೆಗಳೆಷ್ಟೋ ಆದ ಅನುಭವಗಳೆಷ್ಟೋ-ಎಲ್ಲವನ್ನೂ ಸಂಗ್ರಹಿಸಿದರೆ ಒಂದು ದೊಡ್ಡ ಗ್ರಂಥವೇ ಆದೀತು. ಮುಖ್ಯವಾಗಿ ಯಕ್ಷಗಾನದಲ್ಲಿ ಬಲಿಪರಿಗಿದ್ದ ಅಪಾರ ಅನುಭವ, ಉದ್ದಾಮಪಾಂಡಿತ್ಯ ಅವರ ವಿಚಿತ್ರ ವ್ಯಕ್ತಿತ್ವ-ಇವು ಯಾವ ಕಾಲಕ್ಕೂ ಮರೆತುಹೋಗುವಂಥವುಗಳಲ್ಲ.

ದಿ॥ ಬಲಿಪ ನಾರಾಯಣ ಭಾಗವತರು ಪ್ರಧಾನ ಭಾಗವತರಾಗಿ ಯಕ್ಷಗಾನರಂಗವನ್ನು ಪ್ರವೇಶಿಸುವ ಮೊದಲು ಮೂಲ್ಕಿ ಮಂಜುನಾಥ ಭಾಗವತರು, ಪುತ್ತೂರು ನಾರಾಯಣ ಭಾಗವತರು, ಪೆರ್ವೊಡಿ ಸಂಕಯ ಭಾಗವತರು, ಪಾಡಿ ವೆಂಕೇಚ ಭಾಗವತರು ಮುಂತಾಗಿ ನಾಲ್ಕಾರು ಮಂದಿ ಹೆಸರಾಂತ ಹಾಡುಗಾರರಿದ್ದರು. ಇವರಲ್ಲಿ ಒಂದಿಬ್ಬರಿಗೆ ಗಂಭೀರವಾದ ನಾದಮಾಧುರ್ಯವಿತ್ತು ಒಬ್ಬರಲ್ಲಿ ಅದ್ಭುತವಾದ ಕವಿತಾಸಾಮರ್ಥ್ಯವಿತ್ತು. ಮತ್ತೊಬ್ಬರಿಗೆ ಸುಮಾರು ನೂರ ಐವತ್ತಕ್ಕೂ ಮಿಕ್ಕಿ ಪ್ರಸಂಗಗಳು ಬಾಯಿಪಾಠ ಬರುತ್ತಿದ್ದವು. ಆದರೆ ಇವರೆಲ್ಲರ ಹಾಡುಗಾರಿಕೆಯಲ್ಲಿ ವಿಶೇಷವಾದ

ಯಾವ ವೈಶಿಷ್ಟ್ಯವೂ ಇರಲಿಲ್ಲ. ಯಾವುದೊ ಒಂದು ಪ್ರಾಚೀನ ಸಂಪ್ರದಾಯವನ್ನು ಅನುಸರಿಸಿ ಒಂದೇ ಕ್ರಮದಲ್ಲಿ ಹಾಡುತ್ತಿದ್ದರು. ಶಾಸ್ತ್ರೀಯ ಸಂಗೀತರಾಗಗಳ ಸ್ಪಷ್ಟ ಛಾಯೆಯನ್ನು ಯಕ್ಷಗಾನದ ಪದ್ಯಗಳಿಗೆ ಅಳವಡಿಸಿ, ರಸ-ಭಾವಗಳಿಗೂ ಸಾಹಿತ್ಯಕ್ಕೂ ಪ್ರಾಧಾನ್ಯವನ್ನು ಕೊಟ್ಟು, ಕಾಲಾನುಗುಣವಾಗಿ ರಾಗ-ತಾಳಲಯಗಳನ್ನು ಹೊಂದಿಸಿ ಯಕ್ಷಗಾನದ ಹಾಡುಗಾರಿಕೆಗೆ ಒಂದು ವಿಶಿಷ್ಟಸ್ವರೂಪವನ್ನು ಶ್ರೀ ಬಲಿಪ ಭಾಗವತರೇ ಮೊಟ್ಟ ಮೊದಲಿಗೆ ಒದಗಿಸಿಕೊಟ್ಟವರು. ಬಲಿಪರಿಗಿದ್ದ ಅದ್ಭುತವಾದ ಕಂಠಮಾಧುರ್ಯ ಎಲ್ಲರೂ ಕೇಳಿ ಆಸ್ವಾದಿಸಿದ ವಿಚಾರವೆ. ಕವಿತಾಸಾಮರ್ಥ್ಯವೂ ಅವರಲ್ಲಿ ಅಪಾರವಾಗಿತ್ತು. ಬಯಲಾಟಗಳಲ್ಲಿ ಯಾವುದಾದರೊಂದು ಕಥಾಭಾಗದ ಪ್ರಸಂಗದ ಪದ್ಯಗಳನ್ನು ಹಾಡುತ್ತಿದ್ದಾಗ ಅವಶ್ಯವೆಂದು ತೋರಿದರೆ, ಆಯಾ ಸಂದರ್ಭಕ್ಕೆ ಬೇಕಾದ ಹೊಸ ಹೊಸ ಹಾಡುಗಳನ್ನು ರಚಿಸಿಕೊಂಡೇ ಹಾಡುವ ಪರಿಪಾಠ ಅವರಿಗಿತ್ತು. ಪುಸ್ತಕ ನೋಡಿ ಹಾಡುವ ಗೊಡವೆಯೇ ಅವರಿಗಿರಲಿಲ್ಲ. ಯಾವ ಪ್ರಸಂಗ ಬೇಕಾದರೂ ಅವರಿಗೆ ಸಂಪೂರ್ಣ ಬಾಯಿಪಾಠ ಬರುತ್ತಿತ್ತು.

ಬಲಿಪರು ಮುಖ್ಯ ಭಾಗವತರಾದ ಮೇಲೆ ಒಂದೆರಡು ವರ್ಷಗಳ ಕಾಲ ನಾನು "ಸಂಗೀತ" ಭಾಗವತನಾಗಿ ಮೇಳಗಳಲ್ಲಿ 'ತಿರುಗಾಟ' ಮಾಡಿದ್ದೆ. ಆಮೇಲೆ ನಾನು ಪ್ರಧಾನ ಭಾಗವತನಾಗಿ ಬಯಲಾಟಗಳನ್ನು ಆಡಿಸುತ್ತಿದ್ದಾಗ ಹಲವು ಬಾರಿ ಬಲಿಪರು ವಿಶೇಷ ಆಮಂತ್ರಣದ ಮೇಲೆ ಬಂದು ಭಾಗವತಿಕೆಯನ್ನು ನಿರ್ವಹಿಸಿದ್ದುಂಟು. ಯಾವ ಮೇಳವೇ ಆಗಿರಲಿ, ಎಲ್ಲಿ ಬೇಕಾದರೂ ಬಯಲಾಟ ನಡೆಯುತ್ತಿರಲಿ, ಎಂತಹ ಪ್ರಸಿದ್ಧ ಭಾಗವತನೇ ಹಾಡುಗಾರನಾಗಿರಲಿ, ಅಲ್ಲಿಗೆ ಬಲಿಪರು ಬಂದಿದ್ದಾರೆಂಬ ಸುದ್ದಿ ಸಿಕ್ಕಿದರೆ ಸಾಕು ಮುಂದೆ ಅವರೇ ಭಾಗವತರಾಗಬೇಕಾಗಿತ್ತು. ಬಲಿಪರಿದ್ದಲ್ಲಿ ಧೈರ್ಯದಿಂದ ಪದ್ಯ ಹೇಳುವ ಎದೆಗಾರಿಕೆ ಬೇರೆ ಯಾವ ಭಾಗವತನಿಗೂ ಇರಲಿಲ್ಲ.

ಮೊದಲಿನಿಂದ ಕೊನೆಯ ತನಕವೂ ನಾನು ಬಲಿಪರಲ್ಲಿ ಪೂಜ್ಯ ಗುರುಭಾವವನ್ನೇ ಇಟ್ಟು ವ್ಯವಹರಿಸುತ್ತಿದ್ದೆ. ಆದರೆ ಅವರು ನನ್ನೊಡನೆ ಗೆಳೆತನದ ಸಮಾನಸ್ಕಂಧತೆಯಿಂದಲೇ ವರ್ತಿಸುತ್ತಿದ್ದರು. ಬಲಿಪರ ಉಛ್ರಾಯಕಾಲದಲ್ಲಿ, ನನಗೂ ಒಳ್ಳೆಯ ಕಂಠಮಾಧುರ್ಯವಿದ್ದು ನಾನೂ ಉತ್ತಮ ಭಾಗವತನೆಂದು ಹೆಸರು ಪಡೆದಿದ್ದ ಆ ಕಾಲದಲ್ಲಿ ನಾವಿಬ್ಬರೂ ಒಂದಾಗಿ ತಿರುಗಾಟದಲ್ಲಿದ್ದಾಗ ಜನರು "ಬಲಿಪ ನಾರಾಯಣ ಭಾಗವತರೂ ಮೌವಾರು ಕಿಟ್ಟಣ್ಣ ಭಾಗವತರೂ ಯಕ್ಷಗಾನದ ಅಶ್ವಿನೀದೇವತೆ"ಗಳೆಂದು ಆಡಿಕೊಳ್ಳುವುದಿತ್ತು. ಹಲವು ವಿಚಾರಗಳಲ್ಲಿ ನಿಜವಾಗಿಯೂ ನಮ್ಮಲ್ಲಿ ಅಂತಹ ಅನ್ಯೋನ್ಯತೆ ಬೆಳೆದಿತ್ತು. ಅನೇಕ ಸಂದರ್ಭಗಳಲ್ಲಿ ಅವರು ಹಾಡುತ್ತಿದ್ದಾಗ ಕೈಯಲ್ಲಿ ಜಾಗಟೆ ಹಿಡಿದು ನಾನು ತಾಳ ಹಾಕುತ್ತಿದ್ದೆ. ನಮ್ಮಿಬ್ಬರ ಮನೋಧರ್ಮ ಆ ಮಟ್ಟಿನ ವರೆಗೆ ಐಕ್ಯತೆಯನ್ನು ಹೊಂದಿತ್ತು. ಅದೆಷ್ಟೋ ಸಲ ಮದ್ದಳೆ ಬಾರಿಸುವಾಗ ಎಡ ಬಲಗಳನ್ನು ನಾವಿಬ್ಬರು ವಿಭಾಗಿಸಿಕೊಂಡು ಒಂದೊಂದು ಬದಿಯಿಂದ ಒಬ್ಬೊಬ್ಬರು ಬಾರಿಸಿದ್ದುಂಟು. ಈ ಚಮತ್ಕಾರಗಳನ್ನು ಜನರು ಬಹುವಾಗಿ ಮೆಚ್ಚುತ್ತಿದ್ದರು.

ಒಂದು ಸಲ ಉಳ್ಳಾಲ ವಾಸುದೇವ ಕಿಣಿ ಎಂಬ ಮಹನೀಯರೊಬ್ಬರು ಮಂಜುನಾಥ ಭಾಗವತರಂತೆ ಹಾಡುವ ಯಕ್ಷಗಾನ ಭಾಗವತ ಇನ್ನೊಬ್ಬ ಇಲ್ಲವೇ ಇಲ್ಲ ಎಂದು ಬಲಿಪ ಭಾಗವತರ ಮುಂದೆ ಪಂಥ ಹೂಡಿದ್ದರು. ಬಲಿಪರು ಆ ಪಂಥಾಹ್ವಾನವನ್ನು ಸ್ವೀಕರಿಸಿ, ಸಭೆಯಲ್ಲಿ ತಾರಕ ಸ್ವರದಲ್ಲಿ ಹಾಡುತ್ತಿದ್ದ ಮಂಜುನಾಥ ಭಾಗವತರ ಕ್ರಮವನ್ನೇ ಅನುಕರಣೆ ಮಾಡಿ ಜನರ ಮೆಚ್ಚುಗೆಯನ್ನು ಪಡೆದರು. ಪಂಥ ಹಾಕಿದ ವಾಸುದೇವ ಕಿಣಿಯವರೂ ಸ್ವತಃ ಮೆಚ್ಚಿ ಉಚಿತ ಬಹುಮಾನವನ್ನು ಕೊಟ್ಟು ಬಲಿಪರನ್ನು ಸತ್ಕರಿಸಿದರು.

ಒಂದು ವರ್ಷ ಕಟೀಲು ಮೇಳದ ಯಜಮಾನಿಕೆಯನ್ನು ವಹಿಸಿ ಬಲಿಪರು ತಿರುಗಾಟ ಮಾಡಿದ್ದರು. ಆ ವರ್ಷದ ತಿರುಗಾಟ ಮುಕ್ತಾಯವಾದಾಗ ಬಲಿಪರ ಮೇಲೆ ದೊಡ್ಡ ಸಾಲದ

ಹೊರಗೆ ಕೂತಿತು. ಸಾಲ ಸಂದಾಯ ಮಾಡುವ ಯಾವ ದಾರಿಯನ್ನೂ ಕಾಣದ ಬಲಿಪರು ಕಟೀಲಿನತ್ತ ಹೋಗುವುದನ್ನೇ ಬಿಟ್ಟು ತಲೆ ತಪ್ಪಿಸಿಕೊಂಡು ತಿರುಗಾಡುತ್ತಿದ್ದರು. ಇದರಿಂದ ಬೇಸರಗೊಂಡ ಕಟೀಲಿನ ಆಡಳಿತೆದಾರರಾಗಿದ್ದ ಕೋಟಿ ಶೆಟ್ಟಿಯವರು ಬಲಿಪರ ಮೇಲೆ ವ್ಯಾಜ್ಯವನ್ನೇ ಹೂಡಿದರು. ವ್ಯಾಜ್ಯ ದಾಖಲಾದ ಸುದ್ದಿ ಕೇಳಿ ಬಲಿಪರು ಮತ್ತಷ್ಟು ಕಂಗೆಟ್ಟು ಹೋದರು.

ಮರುವರ್ಷ ಕಟೀಲಿನ ಆಸುಪಾಸಿನಲ್ಲಿ ಬಯಲಾಟಗಳಾಗುವಾಗ ಆಟ ಆಡಿಸುವ ಜನರು ಬಲಿಪರೇ ಭಾಗವತರಾಗಿ ಬರಬೇಕೆಂದು ಒತ್ತಾಯದಿಂದ ಕರೆಯುತ್ತಿದ್ದರು. ಆದರೆ ಕೋಟಿ ಶೆಟ್ಟಿಯವರ ವ್ಯಾಜ್ಯದಿಂದ ಅಂಜಿದ್ದ ಬಲಿಪರು ಆ ಕಡೆ ಸುಳಿಯಲೇ ಇಲ್ಲ. ಕೊನೆಗೊಂದು ದಿನ ಕಟೀಲು ಕ್ಷೇತ್ರದಲ್ಲೇ ಒಂದು ಆಟ ನಡೆಯಿತು. ಹಲವು ಮಂದಿ ಬಲಿಪರ ಅಭಿಮಾನಿಗಳು ಅವರನ್ನು ಒತ್ತಾಯದಿಂದ ಬಲಾತ್ಕರಿಸಿಯೇ ಅಲ್ಲಿಗೆ ಕರೆತಂದರು. ಶ್ರೀಯುತರ ಅಂದಿನ ಹಾಡುಗಾರಿಕೆ ಅದ್ಭುತವಾಗಿತ್ತು. ಬೆಳಗಿನ ತನಕ ಶ್ರದ್ಧಾಭಕ್ತಿಗಳಿಂದ ಹಾಡಿದ ಅಂದಿನ ಆ ಗಾನಮಾಧುರ್ಯವನ್ನು ಎಂಥವನಾದರೂ ಮೆಚ್ಚಲೇ ಬೇಕಾಗಿತ್ತು. ಪ್ರಾತಃಕಾಲ ಆಟ ಮುಗಿದೊಡನೆಯೇ ಸ್ವತಃ ಕೋಟಿ ಶೆಟ್ಟಿಯವರೇ ಬಲಿಪರಿದ್ದಲ್ಲಿಗೆ ಬಂದು ಎರಡು ಕೈಗಳಿಂದಲೂ ಅವರನ್ನು ಹಿಡಿದು ಆಲಿಂಗಿಸಿ ದೇವಸ್ಥಾನಕ್ಕೆ ಕರೆದೊಯ್ದರು. ವ್ಯಾಜ್ಯವನ್ನು ರದ್ದು ಪಡಿಸಿ ಒಡನೆಯೇ ತಮಗೆ ಬರಬೇಕಾಗಿದ್ದ ಹಣಕ್ಕೆ ರಶೀದಿಯನ್ನೂ ಕೊಟ್ಟರು.

ಉತ್ತಮ ಕಲಾಪ್ರೇಮಿಗಳಾಗಿದ್ದ ಶ್ರೀ ಶೆಟ್ಟಿಯವರು ಕೇವಲ ಹಣಕ್ಕಾಗಿ ವ್ಯಾಜ್ಯ ಮಾಡಿರಲಿಲ್ಲ. ಬಲಿಪರು ಕಟೀಲು ದೇವಸ್ಥಾನದತ್ತ ಬರುವುದನ್ನೇ ಬಿಟ್ಟರೆಂಬ ಬೇಸರ ಅವರಿಗಿತ್ತು. ಬಲಿಪರಿಗೂ ತಾನು ಭಕ್ತಿಶ್ರದ್ಧೆಯಿಂದ ಆರಾಧಿಸುತ್ತಿದ್ದ ಕಟೀಲು ಶ್ರೀ ದುರ್ಗಾ ಪರಮೇಶ್ವರಿಯಮ್ಮನ ಸೇವಾಭಾಗ್ಯ ತಪ್ಪಿತಲ್ಲ ಎಂಬ ಪಶ್ಚಾತ್ತಾಪ ಇತ್ತು. ಈ ಘಟನೆಯಿಂದ ಎಲ್ಲವೂ ಸರಿಹೋಯಿತು. ಅಂದಿನಿಂದ ತಮ್ಮ ಆಯುಸ್ಸಿನ ಕೊನೆಯ ವರ್ಷದ ತನಕ ಬಲಿಪರು ವರ್ಷದಲ್ಲಿ ಒಂದು ಬಾರಿಯಾದರೂ ತಪ್ಪದೆ ಹೋಗಿ ಕಟೀಲಿನಲ್ಲಿ ಸೇವೆ ಸಲ್ಲಿಸಿ ಬರುತ್ತಿದ್ದರು.

ತೆಂಕುತಿಟ್ಟಿನಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದ ಕೂಡ್ಲು, ಕಟೀಲು, ಇಚ್ಲಂಪಾಡಿ, ಕದಿರೆ, ಪಾವುಂಜೆ ಮುಂತಾದ ಎಲ್ಲ ಮೇಳಗಳಲ್ಲಿಯೂ ಭಾಗವತರಾಗಿ ಶ್ರೀ ಬಲಿಪ ನಾರಾಯಣ ಭಾಗವತರು ಹಲವು ವರ್ಷಗಳ ಕಾಲ ತಿರುಗಾಟ ಮಾಡಿದ್ದರು. ಬಯಲಾಟಗಳಲ್ಲಿ ಹಾಡುಗಾರಿಕೆಗೆ ಬಲಿಪರಿದ್ದಾರೆ ಎಂಬ ಸುದ್ದಿಯಾದರೆ ಸಾಕು, ಸಾವಿರಾರು ಸಂಖ್ಯೆಯಲ್ಲಿ ಜನಸಂದಣಿಯು ಕಿಕ್ಕಿರಿದು ನೆರೆಯುತ್ತಿತ್ತು. ಧ್ವನಿವರ್ಧಕಗಳ ಬಳಕೆಯೇ ಇಲ್ಲದ ಆ ಕಾಲದಲ್ಲಿ ವೀರರಸದ ಪದ್ಯಗಳನ್ನು ತಾರಕಸ್ವರದಲ್ಲಿ ಬಲಿಪರು ಹಾಡಿದರೆಂದರೆ ಮೂರು ನಾಲ್ಕು ಮೈಲುಗಳ ದೂರದ ವರೆಗೆ ಸ್ಪಷ್ಟವಾಗಿ ಕೇಳಿಸುತ್ತಿದ್ದವು.

ಪುತ್ತೂರಿನಲ್ಲಿ ಶ್ರೀ ಮುತ್ತು ಭಟ್ಟ ಎಂಬವರು ಬಲಿಪರ ಸತ್ಕಾರಕ್ಕೆಂದೇ ಒಂದು ವಿಶೇಷ ಯಕ್ಷಗಾನ ಕೂಟವನ್ನು ಏರ್ಪಡಿಸಿದ್ದರು. ಅಂದು ಕುಶಲವರ ಕಾಳಗ ಎಂಬ ಪ್ರಸಂಗವನ್ನು ಆರಿಸಲಾಗಿತ್ತು. ಅಂದಿನ ಬಲಿಪರ ಹಾಡುಗಾರಿಕೆಯು ಚಿರಸ್ಮರಣೀಯವಾಗಿತ್ತು. ಬೆಳಗ್ಗೆ ತಾಳ ಮದ್ದಳೆಯ ಮಂಗಳಾಚರಣೆಯಾದಾಗ ಶ್ರೀ ಮುತ್ತು ಭಟ್ಟರು ಐದು ಪವನಿನ ಚಿನ್ನದ ಬಳೆಗಳನ್ನಿತ್ತು ಬಲಿಪರನ್ನು ಸಂಭಾವಿಸಿದರು. ಅಂತೆಯೇ ಶ್ರೀ ಅಜಿಲಾಡಿ ರಾಮಣ್ಣ ರೈ ಎಂಬವರೂ ಒಂದು ಪವನಿನ ಚಿನ್ನದ ಪದಕವನ್ನು ಕೊಟ್ಟು ಬೇರೊಂದು ಸಂದರ್ಭದಲ್ಲಿ ಬಲಿಪರನ್ನು ಗೌರವಿಸಿದ್ದರು.

ಬೆಳ್ಳಾರೆಯ ಸಮೀಪ ಅಯ್ಯನಕಟ್ಟೆ ಎಂಬಲ್ಲಿ ನಡೆದ ಎರಡು ದಿನಗಳ ಚಾರಿತ್ರಿಕ ಯಕ್ಷಗಾನ ಕೂಟಗಳಲ್ಲಿ ಯಕ್ಷಗಾನದಲ್ಲಿ ಬಲಿಪರಿಗಿಂತ ಶ್ರೇಷ್ಠ ಭಾಗವತ ಇನ್ನೊಬ್ಬನಿಲ್ಲ ಎಂಬ ವಿಚಾರ ಸ್ಪಷ್ಟವಾಯಿತು.

ನಾನೊಮ್ಮೆ ಕಾರಣಾಂತರದಿಂದ ದಿ। ಮಂಜೇಶ್ವರ ಗೋವಿಂದ ಪೈಯವರನ್ನು ಭೇಟಿಯಾಗಿದ್ದೆ. ಸಂಭಾಷಣೆಯಲ್ಲಿ ಸ್ವಾಭಾವಿಕವಾಗಿಯೇ ಯಕ್ಷಗಾನದ– ಬಲಿಪ ಭಾಗವತರ–ಸುದ್ದಿ ಬಂತು. ಶ್ರೀಯುತರು ಆದೇಶರೂಪದಲ್ಲಿಯೇ ನನಗೊಂದು ಮಾತು ಹೇಳಿದ್ದರು. "ಕಿಟ್ಟಣ್ಣ ಭಾಗವತರೇ, ಯಕ್ಷಗಾನದಲ್ಲಿ ಬಲಿಪರೊಂದು ಉಜ್ವಲ ತಾರೆಯಂತಿದ್ದಾರೆ. ಕೇವಲ ಅಶಿಕ್ಷಿತರ ಕೈಯಲ್ಲಿದ್ದು ಪಾಮರರಂಜನೆಯನ್ನು ಮಾಡುತ್ತಿದ್ದ ಯಕ್ಷಗಾನವನ್ನು ಎತ್ತಿ ಹಿಡಿದು ಪರಿಷ್ಕರಿಸಿ ಅದಕ್ಕೊಂದು ನಿರ್ದಿಷ್ಟ ಸ್ವರೂಪವನ್ನಿತ್ತು ಉದ್ಧರಿಸಿದವರು ಶ್ರೀ ಬಲಿಪ ನಾರಾಯಣ ಭಾಗವತರು. ಅವರ ವೈಯಕ್ತಿಕ ಜೀವನ ಬೇರೆಯಲ್ಲ ಯಕ್ಷಗಾನ ಬೇರೆಯಲ್ಲ ಎಂಬ ರೀತಿಯಲ್ಲಿ ಯಕ್ಷಗಾನ ಕಲೆಯು ಅವರಲ್ಲಿ ಬೆರೆತು ಹೋಗಿದೆ. ಅಂತಹ ಮಹಾಪುರುಷರ ಜೀವನವೃತ್ತವನ್ನು ಎಲ್ಲರೂ ಅರಿತಿರಬೇಕು. ನೀವು ಅವರ ಅತ್ಯಂತ ಆತ್ಮೀಯ ಗೆಳೆಯರು–ಶಿಷ್ಯರು. ಅವರ ಪ್ರಾಮಾಣಿಕವಾದ ಜೀವನ ಚರಿತ್ರೆಯನ್ನು ಬರೆಯಲು ನೀವೇ ಅರ್ಹರು. ಈ ಒಂದು ಕಾರ್ಯವನ್ನು ನೀವೇ ಮಾಡಬೇಕು."

ನಾನು ಬಲಿಪರ ಒಡನಾಡಿಯೂ ಹೌದು, ಗೆಳೆಯನೂ, ಶಿಷ್ಯನೂ ಹೌದು. ಆದರೆ ಅವರಂತಹ ಮಹಾನ್ ವ್ಯಕ್ತಿಯ ಸಮಗ್ರ ಜೀವನ ಚರಿತ್ರೆಯನ್ನು ಬರೆಯುವಷ್ಟು ವಾಕ್ಶಕ್ತಿಯು ನನ್ನಲ್ಲಿ ಇಲ್ಲವೇ ಇಲ್ಲ ಎಂಬುದನ್ನು ನಾನರಿತಿದ್ದೇನೆ. ಹೀಗಾಗಿ ಶ್ರೀ ಗೋವಿಂದ ಪೈಯವರ ಆದೇಶವು ಆದೇಶವಾಗಿಯೇ ಉಳಿಯಿತು.

ಈಗ ಬಲಿಪರ ಕುರಿತು ಸ್ಮಾರಕ ಗ್ರಂಥವೊಂದು ಪ್ರಕಟವಾಗುವುದೆಂಬ ವೃತ್ತಾಂತವನ್ನು ಕೇಳಿ ನನಗೆ ಪರಮಾಹ್ಲಾದವಾಯಿತು. ದಿ। ಬಲಿಪ ನಾರಾಯಣ ಭಾಗವತರ ಹಾಡುಗಳ ಗಂಭೀರ ನಾದವು ಇನ್ನೂ ಹಲವು ವರ್ಷಗಳ ಕಾಲ ಜನರ ಕಿವಿಗಳಲ್ಲಿ ಪ್ರತಿಧ್ವನಿಸುತ್ತಲೇ ಇರುತ್ತದೆ. ಅವರ ವಿಚಿತ್ರ ವ್ಯಕ್ತಿತ್ವವೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಆದರೂ ಈ ಚಾರಿತ್ರಿಕ ಮಹಾಪುರುಷನ ಇತಿವೃತ್ತವು ಗ್ರಂಥಸ್ಥವಾಗಿರುವುದು ಅತ್ಯಂತ ಆವಶ್ಯಕವೇ ಆಗಿದೆ. ಶ್ರೀ ಬಲಿಪರ ಕುರಿತು ನನ್ನ ಹೃದಯದಲ್ಲಿ ಅಡಕವಾಗಿರುವ ಭಕ್ತಿಯ ಪ್ರತೀಕವಾಗಿ ಈ ಎರಡು ಮಾತುಗಳನ್ನು ಗುರುಕಾಣಿಕೆಯ ರೂಪದಲ್ಲಿ ಸಮರ್ಪಿಸಲು ನಾನು ತುಂಬಾ ಸಂತೋಷಪಡುತ್ತೇನೆ.

ಅನುಗ್ರಹ ಭಾಗ್ಯ

ಶ್ರೀ ಪುತ್ತಿಗೆ ರಾಮಕೃಷ್ಣ ಜೋಯಿಸರು

"ಯಕ್ಷಗಾನ ಕೇಸರಿ" ಎಂಬ ಬಿರುದು ಅನ್ವರ್ಥವಾಗಿ ಒಪ್ಪುವುದಾದರೆ ಅದು ದಿ। ಬಲಿಪ ನಾರಾಯಣ ಭಾಗವತರಿಗೆ ಮಾತ್ರ. ಯಕ್ಷಗಾನ ಪ್ರಪಂಚದಲ್ಲಿ ಧೀರರೂ, ಗಂಭೀರರೂ, ಪ್ರತಾಪ ಶಾಲಿಗಳೂ ಆಗಿ ಅದ್ವಿತೀಯರೆನಿಸಿ ಮೆರೆದ ಭಾಗವತರು ಅವರೊಬ್ಬರೆ. ಕೇಸರಿಯ ಗಂಭೀರ ನಾದ ವನ್ನು ಕೇಳಿದಾಗ ಮಿಕ್ಕ ಮೃಗಗಳೆಲ್ಲ ಹೇಗೆ ಭಯಪಟ್ಟು ಪಲಾಯನ ಮಾಡಿ ಅಡಿಗಿಕೊಳ್ಳುತ್ತವೋ ಹಾಗೆ ಬಲಿಪ ನಾರಾಯಣ ಭಾಗವತರ ಕಂಠ ನಾದವನ್ನು ಕೇಳಿದೊಡನೆಯೇ ಉಳಿದ ಭಾಗವತರುಗಳ ಜಂಘಾಬಲವೇ ಉಡುಗಿ ಹೋಗುತ್ತಿತ್ತು. ಬಲಿಪರಿದ್ದ ಸಭೆಯಲ್ಲಿ ಯಾವ ಭಾಗವತನೂ ಜಾಗಟೆ ಹಿಡಿದು ಧೈರ್ಯದಿಂದ ಪದ ಹೇಳುವ ಸಾಹಸ ಮಾಡಿರಲಿಕ್ಕಿಲ್ಲ. ಸ್ವತಃ ಭಾಗವತನಾಗಿದ್ದು ಹಲವು ವರ್ಷಗಳ ತಿರುಗಾಟದ ಅನುಭವವುಳ್ಳ ನಾನೇ ಈ ಮಾತನ್ನು ನಿಃಸಂಕೋಚವಾಗಿ ಹೇಳುತ್ತಿದ್ದೇನೆ. ಬಲಿಪರು ಗರ್ವಿಷ್ಠರೂ ನಿರ್ದಯಿಯೂ ಆಗಿದ್ದರೆಂದು ಈ ಮಾತಿನ ಅರ್ಥವಲ್ಲ. ಕೇಸರಿಯಂತೆ ಅವರ ವ್ಯಕ್ತಿತ್ವವು ಅತ್ಯಂತ ಪ್ರಭಾವಶಾಲಿಯಾಗಿತ್ತೆಂಬುದು ಮಾತ್ರ ನನ್ನ ವಿವಕ್ಷಿತ.

ಬಲಿಪ ನಾರಾಯಣ ಭಾಗವತರು ಮೇಳಗಳ ಭಾಗವತಿಕೆಯನ್ನು ವಹಿಸಿ ತಿರುಗಾಟ ಪ್ರಾರಂಭಿ ಸಿದ ಸುಮಾರು ಹನ್ನೆರಡು ವರ್ಷಗಳ ಬಳಿಕ ನಾನೂ ಭಾಗವತನಾಗಿ ಯಕ್ಷಗಾನ ರಂಗವನ್ನು ಪ್ರವೇಶಿ ಸಿದೆ. ಆ ಸಮಯಕ್ಕಾಗಲೇ ಬಲಿಪರು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದ್ದರು. ಆಟದಲ್ಲಿ ಪದಕ್ಕೆ ಬಲಿಪರೆಂಬ ಸುದ್ದಿಯಾದರೆ ಸಾಕು, ಸಾವಿರ ಸಂಖ್ಯೆಯಲ್ಲಿ ಜನಸಂದಣಿ ಕಿಕ್ಕಿರಿದು ನೆರೆಯುತ್ತಿತ್ತು. ನಾನು ಭಾಗವತನಾಗಿದ್ದ ಮೇಳದ ಆಟಗಳು ನಡೆದಾಗ ಎಷ್ಟೋ ಬಾರಿ ಆಟ ಆಡಿಸುವವರ ಆಗ್ರ ಹದಿಂದ ವಿಶೇಷ ಆಮಂತ್ರಣದ ಮೇಲೆ ಬಲಿಪರನ್ನು ಕರೆಸಿದ್ದಿತ್ತು. ಮೇಳದಲ್ಲಿರುವ ಖಾಯಂ ಭಾಗವತನ ಹಾಡುಗಾರಿಕೆ ಸಾಲದು; ಬಲಿಪರ ಶ್ರೇಷ್ಠ ಭಾಗವತಿಕೆಯೇ ಬೇಕೆಂದು ಈ ಆಮಂತ್ರಣದ ಸ್ಪಷ್ಟ ಅರ್ಥ ಗೊತ್ತಿದ್ದರೂ ಒಂದೇ ಒಂದು ಬಾರಿಯಾದರೂ ಬಲಿಪರ ಕುರಿತು ಅಸೂಯೆಯಾಗಲಿ, ಅನಾದರವಾಗಲಿ ನನ್ನ ಮನಸ್ಸಿನಲ್ಲಿ ಉಂಟಾಗಲೇ ಇಲ್ಲವೆಂದು ಪ್ರಮಾಣ ಪೂರ್ವಕವಾಗಿ ನಾನು ಹೇಳ ಬಲ್ಲೆ. ಪ್ರತಿಯಾಗಿ ಬಲಿಪರನ್ನು ಕರೆಸುವರೆಂಬ ವಿಚಾರ ಬಂದೊಡನೆಯೇ ಅವರ ನಾದ ಮಾಧುರ್ಯ ವನ್ನು ಕೇಳುವ, ಅವರ ಅಪಾರ ಪಾಂಡಿತ್ಯದಿಂದ ಹೊಸ ಅನುಭವದ ಪಾಠವನ್ನು ಕಲಿಯುವ ಸುಸಂದರ್ಭ ಒದಗಿ ಬಂತಲ್ಲ – ಎಂದು ಸಂತೋಷವೇ ಉಂಟಾಗುತ್ತಿತ್ತು. ನನ್ನಂಥವರು ಅಸೂಯೆ ಪಡುವ ಅಥವಾ ಅನಾದರಿಸುವ ಸ್ಥಿತಿಗಿಂತ ಬಲಿಪರ ಯೋಗ್ಯತೆಯು ಬಹಳ ಮೇಲ್ಮಟ್ಟದ್ದಾಗಿತ್ತು. ನಾನು ಬಲಿಪರಲ್ಲಿ ಪ್ರತ್ಯಕ್ಷವಾಗಿ ಶಿಷ್ಯವೃತ್ತಿಯನ್ನು ಸ್ವೀಕರಿಸದಿದ್ದರೂ ಆರಂಭದಿಂದ ಕೊನೆಯ ತನಕ ನನಗೆ ಅವರಲ್ಲಿ ಪವಿತ್ರವಾದ ಗುರುಭಕ್ತಿಯ ಭಾವನೆ ಅಚಲವಾಗಿತ್ತು.

ಜೋಡಾಟಗಳಲ್ಲಿ

ಹಲವು ವರ್ಷಗಳ ತಿರುಗಾಟದಲ್ಲಿ ನನ್ನ ಮತ್ತು ಬಲಿಪರ ಮೇಳಗಳ ಕೂಡುವಿಕೆಯಿಂದ ಅನೇಕ ಜೋಡಾಟಗಳಾಗಿವೆ. ಜೋಡಾಟವೆಂದೊಡನೆಯೇ ಸ್ಪರ್ಧೆ ಇದ್ದೇ ಇರುತ್ತದೆ. ಗೆದ್ದವರು ಸೋತವರು ಎಂಬ ತೀರ್ಮಾನವೂ ಬಂದೇ ಬರುತ್ತದೆ. ಎರಡು ಮೇಳಗಳ ಭಾಗವತರು, ಮೃದಂಗ ವಾದಕರು, ಚೆಂಡೆಗಾರರು, ವೇಷಧಾರಿಗಳು – ಮುಂತಾದವರನ್ನೆಲ್ಲ ಒಬ್ಬೊಬ್ಬರನ್ನಾಗಿ ಪ್ರತ್ಯೇಕಿಸಿ, ತುಲನಾತ್ಮಕವಾಗಿ ವಿಮರ್ಶಿಸಿ ಪ್ರೇಕ್ಷಕರು ತಮ್ಮ ತೀರ್ಮಾನ ಕೊಡುತ್ತಿದ್ದರು. ಒಂದು ಜೋಡಾಟ ನಡೆಯಲಿದ್ದರೆ, ಹಲವು ದಿನ ಮುಂಚಿತವಾಗಿಯೇ ಆ ಬಗ್ಗೆ ಕುತೂಹಲವೂ, ನಡೆದ ಮೇಲೆ ತಿಂಗಳ ಗಟ್ಟಲೆ ಅದರ ಬಗ್ಗೆ ವಿಮರ್ಶೆಯೂ ನಮ್ಮಲ್ಲಿ ನಡೆಯುವುದು ವಾಡಿಕೆ. ಯಕ್ಷಗಾನ ಕಲೆಯ ಮೇಲೆ ನಮ್ಮ ಜನತೆಯ ಆಸಕ್ತಿ ಅಷ್ಟು ತೀವ್ರವಾಗಿದೆ. ನನ್ನ ಹಾಡುಗಾರಿಕೆಯ ಮೇಲೆ ಅಭಿಮಾನವಿದ್ದ ಹಲವು ಮಂದಿ ಸಹೃದಯರು, ಅನೇಕ ಸಲ ಜೋಡಾಟ ಮುಗಿದ ಮೇಲೆ ಬೆಳಗ್ಗೆ ಬಂದು, "ಜೋಯಿಸರೇ, ನೀವೂ ಬಲಿಪರನ್ನೇನೂ ಬಿಟ್ಟು ಕೊಡಲಿಲ್ಲ. ಬಲಿಪರಿಗೆ ಸಮವಾಗಿಯೇ ಭೇಷಾಗಿ ಹಾಡಿದ್ದೀರಿ" ಎಂದು ಮುಂತಾಗಿ ನನ್ನನ್ನು ಹುರಿದುಂಬಿಸುತ್ತಿದ್ದರು. ಆದರೆ ಪುಣ್ಯಕ್ಕೆ ಬಲಿಪರನ್ನು ಸೋಲಿಸಿದ್ದೀರಿ ಎಂದು ಯಾರೂ ಹೇಳಿದ್ದಿಲ್ಲ. ಈ ಮಾತುಗಳಿಗೆ ಬಾಹ್ಯವಾಗಿ ನಾನು ಅಂತಹ ಮಹನೀಯರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದರೂ ಆಂತರಿಕವಾಗಿ ನನಗೆ ನಗು ಬರುತ್ತಿತ್ತು. ಬಲಿಪರೆಲ್ಲಿ, ನಾನೆಲ್ಲಿ, ನಾನು ಅವರಿಗೆ ಸಮವಾಗಿ ಹಾಡುವುದೆಂದರೇನು? ಮೂರು – ನಾಲ್ಕು ಮೈಲು ದೂರಕ್ಕೆ ಕೇಳಿಸಬಹುದಾದ ವೀರರಸದ ಪದ್ಯಗಳ ಗಂಭೀರಸ್ವರವು ಬಲಿಪರಕಂಠದಿಂದ ಹೊರಹೊಮ್ಮಿದಾಗ ನಾಲ್ಕು-ಐದು ಸಾವಿರ ಜನಸಂದಣಿಯಿರುವ ಸಭೆಯಾದರೂ ಮಂತ್ರಮುಗ್ಧವಾದಂತೆ ಸ್ತಂಭಿತವಾಗುತ್ತಿತ್ತು. ಶೃಂಗಾರ ಕರುಣಾರಸಗಳ ವಿಚಾರವೂ ಹೀಗೆಯೇ ಇತ್ತು. ರಸ – ಭಾವಗಳಿಗೆ ಪ್ರಾಧಾನ್ಯವನ್ನಿತ್ತು ಬಲಿಪರು ಶೃಂಗಾರದ ಪದ್ಯಗಳನ್ನು ಹಾಡಿದಾಗ ಇಡೀ ಸಭೆಯೇ ನಕ್ಕು ನಲಿದಾಡುತ್ತಿದ್ದುದನ್ನೂ, ಕರುಣಾರಸದ ಸನ್ನಿವೇಶ ಬಂದಾಗ ಕಣ್ಣೀರು ಮಿಡಿಯುತ್ತಿದ್ದುದನ್ನೂ ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ಹಲವು ಜೋಡಾಟಗಳಲ್ಲಿ ಬಲಿಪರ ಸ್ವರ ಏರುತ್ತ ಹೋಗಿ ಹಾಡುಗಾರಿಕೆಗೆ ಕಳೆಕಟ್ಟುತ್ತಿದ್ದಂತೆ, ಎದುರು ಮೇಳದ ಭಾಗವತರು ಜಾಗಟೆ – ಕೋಲುಗಳನ್ನು ಕೆಳಗಿಟ್ಟು ಮೌನ ಮುದ್ರೆಯನ್ನು ತಾಳಿದ ಘಟನೆಗಳೆಷ್ಟೋ ಆದದ್ದುಂಟು. ಇದು ತನಕ ಯಕ್ಷಗಾನ ಹಾಡುಗಾರಿಕೆಯಲ್ಲಿ ಬಲಿಪರನ್ನು ಮೀರಿಸಿದ ಯಾವ ಭಾಗವತನೂ ಬೆಳಕಿಗೆ ಬಂದದ್ದಿಲ್ಲ.

ನಾನು ಅರ್ಥಧಾರಿಯೂ ಆಗಿದ್ದೆ

ಮೊಟ್ಟ ಮೊದಲು ನಾನು ಬಲಿಪರನ್ನು ಭೇಟಿಯಾದ ಮತ್ತು ನನಗೆ ಅವರ ಪರಿಚಯವಾದ ಸಂದರ್ಭ ಸ್ವಲ್ಪ ವಿಚಿತ್ರವೇ ಆಗಿದೆ. ಆಗ ನಾನಿನ್ನೂ 'ಭಾಗವತ'ನಾಗಿರಲಿಲ್ಲ. ಅಡ್ಕತ್ತೊಟ್ಟು ಮಹಾದೇವ ಭಟ್ಟ ಎಂಬವರ ಮನೆಯಲ್ಲಿ ಒಂದು ತಾಳಮದ್ದಳೆ ನಡೆಯಿತು. ಹಾಡುಗಾರಿಕೆಗೆ ಆಗ ತಾನೆ ಪ್ರಸಿದ್ಧಿಗೆ ಬರುತ್ತಿದ್ದ ಬಲಿಪ ನಾರಾಯಣ ಭಾಗವತರು ಬರುತ್ತಾರೆಂಬ ಸುದ್ದಿ ಕೇಳಿ ಅವರ ಹಾಡುಗಾರಿಕೆಯನ್ನು ಕೇಳಬೇಕೆಂಬ ಕುತೂಹಲದಿಂದ ಕೆಲವು ಮಿತ್ರರೊಡನೆ ನಾನೂ ಹೋಗಿದ್ದೆ. ಬಿಲ್ಲಹಬ್ಬ ಪ್ರಸಂಗ ಆರಿಸಲ್ಪಟ್ಟಿತ್ತು. ಗೆಳೆಯರ ಒತ್ತಾಯದಿಂದ ಆ ದಿನ ನಾನೂ ಒಂದು ಅರ್ಥ ಹೇಳಿ 'ಅರ್ಥಧಾರಿ' ಎಂದೂ ಎನಿಸಿಕೊಂಡೆ. ಪುತ್ತಿಗೆ ಜೋಯಿಸರು ಅರ್ಥಧಾರಿಗಳೂ ಆಗಿದ್ದಾರೆಂದು ಹೇಳಿಕೊಳ್ಳುವಂತಾಯಿತು.

ಅಂದಿನ ಬಲಿಪರ ಹಾಡುಗಾರಿಕೆ ಅದ್ಭುತವಾಗಿತ್ತು. 'ಬಿಲ್ಲಹಬ್ಬ' ಅವರಿಗೆ ಪ್ರಿಯವಾದ ಪ್ರಸಂಗಗಳಲ್ಲಿ ಒಂದಾಗಿತ್ತು. ಅಕ್ರೂರನು ನಂದಗೋಕುಲಕ್ಕೆ ಬರುವ ಸಂದರ್ಭದ "ಕಂಡನು ಶ್ರೀಲೋಲನ ಕಂಡನು" "ಜಲಧಿಸುತೆಯುಳನಪ್ಪುವಾ ಮೃದು । ಚೆಲುವ ತೋಳಿನೊಳೆಳೆದು ಭಕುತನ"– ಮುಂತಾದ ಪದ್ಯಗಳು ಇಂದಿಗೂ ನನ್ನ ಕಿವಿಗಳಲ್ಲಿ ಪ್ರತಿಧ್ವನಿತವಾಗುತ್ತಿವೆ. ಹಾಡುವಾಗ ಉಂಟಾಗುವ ಭಾವಪ್ರಚೋದನೆ ಅಷ್ಟೂ ಪರಿಣಾಮಕಾರಿಯಾಗಿತ್ತು.

ಜಂಬದ ಕೋಳಿಯ ಗರ್ವ ಇಳಿಸಿದರು

ಎಳೆಯ ವಯಸ್ಸಿನಿಂದಲೇ ಬಲಿಪರು ಮಹಾಛಲವಾದಿಯೂ, ನಿಷ್ಠುರ ಸಾಧಕರೂ ಆಗಿದ್ದರು. ದಿ। ಕೂಡ್ಲು ಸುಬ್ರಾಯ ಶಾನುಭಾಗರಲ್ಲಿ ಎಂಟು – ಹತ್ತು ವರ್ಷಗಳ ಕಾಲ ಸಂಗೀತ ಯಕ್ಷಗಾನಗಳ ಅಭ್ಯಾಸವನ್ನು ಮುಗಿಸಿ ಬಲಿಪರು ಅಪರೂಪವಾಗಿ ಅಲ್ಲೊಂದುಕಡೆ ಇಲ್ಲೊಂದುಕಡೆ ಹಾಡುಗಾರಿಕೆಯನ್ನು ಪ್ರಾರಂಭಿಸಿದ್ದರಷ್ಟೆ. ಆ ವರ್ಷ ಪ್ರಸಿದ್ಧ ವೇಷಧಾರಿಯೊಬ್ಬರು ಕೂಡ್ಲು ಮೇಳವನ್ನು ವಹಿಸಿಕೊಂಡಿದ್ದರು. ಭಾಗವತರು ಯಾರಾಗಬಹುದೆಂಬ ಪ್ರಶ್ನೆ ಬಂದಾಗ ಬಲಿಪರ ಯೋಗ್ಯತೆಯನ್ನು ಅರಿತಿದ್ದ ಸುಬ್ರಾಯ ಶಾನುಭಾಗರು ಬಲಿಪರನ್ನೇ ಕರಕೊಳ್ಳಿ ಎಂದು ಸೂಚನೆ ಕೊಟ್ಟರು. ಜಂಬದ ಕೋಳಿಯಾಗಿದ್ದ ಆ ವೇಷಧಾರಿ, "ಆ ಬ್ರಾಹ್ಮಣ ಯಾಕಾದೀತು? ಎಲ್ಲಿಯಾದರೂ ಅಡಿಗೆ ಶಾಲೆಗೆ ಹೋಗಿ ಸೌಟು ತಿರುಗಿಸಲಿ! ಮೇಳದ ಭಾಗವತಿಕೆ ಅದಕ್ಕೆ ಹೇಳಿದ್ದಲ್ಲ" ಎಂದು ತಾತ್ಸಾರದ ಮಾತನ್ನಾಡಿ ಬೇರೆ ಭಾಗವತರನ್ನು ನೇಮಕ ಮಾಡಿಕೊಂಡರು. ಮರುವರ್ಷ ಜನತೆಯ ಆಗ್ರಹದ ಮೇಲೆ ಬಲಿಪರನ್ನೇ ಭಾಗವತರನ್ನಾಗಿ ನೇಮಿಸಿ ಕೂಡ್ಲು ಮೇಳವು ತಿರುಗಾಟಕ್ಕಿಳಿಯಿತು. ಹಿಂದಿನ ವರ್ಷ ಮೇಳ ನಡೆಸಿದ ಮಹಾನುಭಾವರೂ ಪ್ರಧಾನ ವೇಷಧಾರಿಯಾಗಿ ಆ ಮೇಳದಲ್ಲೇ ಇದ್ದರು.

ತಿರುಗಾಟದ ಆರಂಭದಲ್ಲಿ ನಡೆಯುವ ಸೇವೆಯಾಟದ ದಿನ ಸಾವಿರಾರು ಮಂದಿ ಪ್ರೇಕ್ಷಕರು ಬಂದಿದ್ದರು. ಒಡ್ಡೋಲಗದ ಪ್ರಧಾನ ವೇಷವನ್ನು ಧರಿಸಿ ಆ ವೇಷಧಾರಿಗಳು ರಂಗಸ್ಥಳವನ್ನು ಪ್ರವೇಶಿಸಿದರು. ಬಲಿಪರು ಕಥಾರಂಭದ ಮೊದಲನೆಯ ಪದ್ಯವನ್ನು ಹಾಡಿ ಮುಕ್ತಾಯಗೊಳಿಸಿದರು. ವೇಷಧಾರಿಗಳು ಅದರ ಅರ್ಥವಿವರಣೆಯನ್ನೂ ಮಾಡಿದ್ದಾಯಿತು. ಆದರೆ ಬಲಿಪರು ಅದೇ ಪದ್ಯವನ್ನು ಮತ್ತೊಮ್ಮೆ ಹಾಡಿದರು. ವೇಷಧಾರಿಗೂ ಪ್ರೇಕ್ಷಕರಿಗೂ ಇದೇನು ಹೀಗೆ ಎಂದು ಆಶ್ಚರ್ಯವಾಯಿತು. ಭಾಗವತರಿಗೇನೋ ಮರವೆ ಬಂದಿರಬೇಕು ಚಿಂತಿಲ್ಲ ಎಂಬ ಉದಾರತೆಯಿಂದ ಆ ವೇಷಧಾರಿ ಮತ್ತೊಮ್ಮೆ ಏನೋ ಒಂದು ರೀತಿ ಅರ್ಥ ಹೇಳಿದ ಹಾಗೆ ಮಾಡಿದರು. ಬಲಿಪರು ಮೂರನೆಯ ಬಾರಿಗೂ ಅದೇ ಪದ್ಯವನ್ನು ಮತ್ತೊಂದು ಸಲ ಹಾಡಿದರು. ಈ ಸಲ ಗಾಬರಿಗೊಂಡ ವೇಷಧಾರಿ ಹಿಂತಿರುಗಿ ಭಾಗವತರ ಮುಖವನ್ನೇ ನೋಡತೊಡಗಿದರು.

"ಏನು ಮುಖ ನೋಡುತ್ತ ನಿಂತಿದ್ದಿ? ನೀನು ಇದು ತನಕ ಬಗಳಿದ್ದರಲ್ಲಿ ನಾನು ಹಾಡಿದ ಪದ್ಯದ ಅರ್ಥ ಬರಲೇ ಇಲ್ಲ. ಆ ಪದ್ಯದ ಅರ್ಥ ಬಾರದೇ ಮುಂದಿನ ಪದ್ಯ ಹೇಳುವುದಿಲ್ಲ" – ಎಂದು ಸಭೆಗೆ ಕೇಳಿಸುವಂತೆ ಬಲಿಪರು ನಿಷ್ಠುರವಾಗಿಯೇ ಹೇಳಿದರು. ಪ್ರಸಿದ್ಧ ವೇಷಧಾರಿಗಳು ತಬ್ಬಿಬ್ಬಾಗಿ ಹೋದರು. ಯಥಾರ್ಥವಾಗಿ ಅವರು ವೇಷದಲ್ಲಿ ಪ್ರಸಿದ್ಧಿ ಹೊಂದಿದ್ದರೇ ಹೊರತು, ಉತ್ತಮ ಭಾಷಾ ಪ್ರೌಢಿಮೆ, ಅರ್ಥಜ್ಞಾನ ಸಾಹಿತ್ಯ ಪರಿಚಯ ಅವರಿಗಿದ್ದಿಲ್ಲ. ಹಳೆ ಸಂಪ್ರದಾಯ ಕ್ರಮದಲ್ಲಿ ಅರ್ಥ ಹೇಳುವ ಪರಿಪಾಠ ಅವರಿಗಿತ್ತು.

"ಅಡಿಗೆ ಶಾಲೆಯುಲ್ಲಿ ಸೌಟು ತಿರುಗಿಸುವ ಭಾಗವತನ ಪದ್ಯಕ್ಕೆ ಇಷ್ಟೇ ಅರ್ಥ ಸಾಕೆಂದು ಭಾವಿಸಿದ್ದಿಯಾ? ಅದಾಗಲಿಕ್ಕಿಲ್ಲ, ಅರ್ಥ ಗೊತ್ತಾಗದಿದ್ದರೆ ಕಲಿಸಿಕೊಡುತ್ತೇನೆ. ಚೆನ್ನಾಗಿ ಕಲಿತು ಆ ಮೇಲೆ ರಂಗಸ್ಥಳಕ್ಕೆ ಬಾ–"

ಬಲಿಪರು ತಮ್ಮನ್ನು ಅಪಮಾನಿಸಿದ್ದಕ್ಕೆ ಸರಿಯಾಗಿ ಪ್ರತೀಕಾರ ಮಾಡಿದರು. ಅಂದಿನಿಂದ ಆ ವೇಷಧಾರಿಗಳೂ ಬಲಿಪರಿಗೆ ಬಹುವಾಗಿ ಭಯಪಡುತ್ತಿದ್ದರು. ಮಾತ್ರವಲ್ಲ ಅವರ ವಿಚಾರದಲ್ಲಿ ಪೂಜ್ಯಭಾವವನ್ನೂ ಇಟ್ಟುಕೊಂಡಿದ್ದರು.

ಸಂಜಯುನನ್ನು ಹೊರದಬ್ಬಿದರು

ಬಲಿಪ ನಾರಾಯಣ ಭಾಗವತರು ಯಕ್ಷಗಾನ ಕಲೆಯ ಪ್ರತಿಯೊಂದು ವಿಭಾಗದಲ್ಲಿಯೂ ಪರಿಣತರಾಗಿದ್ದರು. ಪುರಾಣ-ಪೂರ್ವ ಕತೆಗಳ ಅಗಾಧ ಪಾಂಡಿತ್ಯ ಅವರಿಗಿತ್ತು. ಕವಿತಾಶಕ್ತಿ, ಅರ್ಥಜ್ಞಾನ ಛಂದಃಶಾಸ್ತ್ರ ಮುಂತಾದವುಗಳಲ್ಲಿಯೂ ನಿಷ್ಣಾತರಾಗಿದ್ದರು. ನೃತ್ಯ, ವೇಷ ಭೂಷಣ ಗಳ ನಿರ್ದಿಷ್ಟ ಕ್ರಮವನ್ನು ಅವರು ಅರಿತಿದ್ದರು. ಮೃದಂಗ-ಚೆಂಡೆವಾದನಗಳನ್ನೂ ಅವರು ಚೆನ್ನಾಗಿ ತಿಳಿದಿದ್ದರು. ಹೀಗೆ ಯಕ್ಷಗಾನದ ಯಾವ ವಿಭಾಗದ ಕಲಾವಿದನನ್ನಾದರೂ ಉಪದೇಶಿಸಿ, ತಿದ್ದಿ ಸರಿ ಪಡಿಸುವ ಸಾಮರ್ಥ್ಯ ಅವರಿಗಿತ್ತು.

ತಾಳಮದ್ದಳೆಯ ಕೂಟಗಳಲ್ಲಿ ಕೆಲವೊಮ್ಮೆ ತಾವೇ ಸರ್ವಜ್ಞರೆಂದು ಅಹಂಕಾರ ಪಡುವ ಅರ್ಥಧಾರಿಗಳು ತಮ್ಮ ಪಾಂಡಿತ್ಯಪ್ರದರ್ಶನಕ್ಕಾಗಿಯೇ ಕಥಾಸಂದರ್ಭವನ್ನು ಬಿಟ್ಟು ಏನಾದರೂ ಅಸಂಬದ್ಧ ಮಾತನಾಡುವುದುಂಟು. ಅಂತಹ ಸಂದರ್ಭಗಳಲ್ಲಿ ಬಲಿಪರು ನಿರ್ದಾಕ್ಷಿಣ್ಯವಾಗಿ ಅಂಥ ವರ ಮಾನಖಂಡನೆಯನ್ನು ಮಾಡುತ್ತಿದ್ದರು. ಪದ್ಯಗಳಲ್ಲಿ ಇದ್ದಷ್ಟೇ ವಿಷಯವನ್ನು ರಸ-ಭಾವಗಳು ವ್ಯಕ್ತವಾಗುವಂತೆ ಚಿಕ್ಕದಾಗಿ ಚೊಕ್ಕ ಮಾತನಾಡುವುದು ಬಲಿಪರಿಗೆ ತುಂಬ ಪ್ರಿಯವಾಗಿತ್ತು. ಹಾಗೆ ಮಾತನಾಡುವ ಅರ್ಥಧಾರಿಗಳನ್ನು ಅವರು ಅದೆಷ್ಟೋ ಸಲ ಸಂದರ್ಭಕ್ಕೆ ಬೇಕಾದಂತೆ ಹೊಸ ಪದ್ಯ ಗಳನ್ನು ರಚಿಸಿ, ಸೇರಿಸಿ, ಹಾಡಿ ಇನ್ನಷ್ಟು ಮಾತನಾಡುವಂತೆ ಪ್ರೋತ್ಸಾಹಿಸಿದ್ದುಂಟು. ಕಂಡಾಬಟ್ಟೆ ಮಾತನಾಡುವವರನ್ನು, ಪದ್ಯಗಳನ್ನು ಹಿಂದು ಮುಂದಾಗಿಸಿ ತಪ್ಪಿಸಿ ಮಧ್ಯದಲ್ಲೇ ಗಡಿಬಿಡಿಯಿಂದ ಅರ್ಥನಿಲ್ಲಿಸುವಂತೆ ಮಾಡಿದ್ದೂ ಉಂಟು.

ಪೂಕಳ ಎಂಬಲ್ಲಿ ನಡೆದ ಒಂದು ತಾಳಮದ್ದಳೆಯಲ್ಲಿ ಪ್ರಸಿದ್ಧ ಅರ್ಥಧಾರಿಯೊಬ್ಬರಿಗೆ 'ಸಂಧಾನ'ದಲ್ಲಿ ಸಂಜಯುನ ಪಾತ್ರವನ್ನು ಕೊಟ್ಟಿದ್ದರು. ಕೃಷ್ಣ, ಕೌರವ ಮುಂತಾದ ಪ್ರಧಾನ ಪಾತ್ರವನ್ನು ತನಗೆ ಕೊಡದೆ ಸಂಜಯುನ ಅರ್ಥವನ್ನು ಕೊಟ್ಟದ್ದು ಮೊದಲೇ ಅವರಿಗೆ ತುಂಬ ಅತೃಪ್ತಿಯನ್ನುಂಟು ಮಾಡಿತ್ತು. ಆರಂಭದಲ್ಲಿ ಕೌರವನು ಸಂಜಯುನನ್ನು ಉಪಪ್ಲಾವ್ಯಕ್ಕೆ ಕಳುಹಿಸುವ ಸಂದರ್ಭ ಬಂದಾ ಗಲೇ ಆ ಸಂಜಯು ಕೌರವನೊಂದಿಗೆ ಭಯಂಕರ ಚರ್ಚೆಯನ್ನೇ ಪ್ರಾರಂಭಿಸಿದ. ಎಷ್ಟು ಹೊತ್ತು ಚರ್ಚೆ ಮಾತಾಡಿದರೂ ಆ ಸಂಜಯು ಪಾಂಡವರ ಬಳಿಗೆ ಹೋಗಲು ಸಮ್ಮತಿಸುವ ಲಕ್ಷಣವೇ ಕಂಡು ಬರಲಿಲ್ಲ. ಹಾಡು ನಿಲ್ಲಿಸಿ ಮುಂದಿನ ಪದ್ಯವನ್ನು ಹೇಳಲು ಕಾಯುತ್ತಿದ್ದ ಬಲಿಪರಿಗೆ ಸಂದರ್ಭಕ್ಕೆ ತೀರಾ ವಿರುದ್ಧವಾಗಿ ಮಾತನಾಡುತ್ತಿದ್ದ ಸಂಜಯುನ ಪಾತ್ರಧಾರಿಯ ಮಾತುಗಳನ್ನು ಕೇಳಿ ತುಂಬ ಸಿಟ್ಟು ಬಂತು. ಅವರು ಕೂಡಲೇ "ನೂಕಿರೋ ಸಂಜಯುನ"– ಎಂಬ ಪದ್ಯವನ್ನು ತಾರಕ ಸ್ವರದಲ್ಲಿ ಹಾಡಿ ಅಲ್ಲಿಂದಲೇ ಸಂಜಯುನನ್ನು ಹೊರದಬ್ಬಿ ತಾಳಮದ್ದಳೆಯನ್ನು ಮುಂದುವರಿಸಿದರು. ಬಲಿಪರು

ಭಾಗವತರಾಗಿದ್ದ ತಾಳಮದ್ದಳೆಯ ಕೂಟಗಳಲ್ಲಿ ಇಂತಹ ಅನೇಕ ಘಟನೆಗಳು ನಡೆದು ಹೋಗಿವೆ. ಹೀಗಾಗಿ ಹಾಡುಗಾರಿಕೆಗೆ ಬಲಿಪರೆಂದಾದರೆ ಎಂತಹ ಪ್ರಸಿದ್ಧ ಅರ್ಥಧಾರಿಗಳಾದರೂ ತುಂಬ ಎಚ್ಚರಿಕೆಯಿಂದ ಮಾತನಾಡುತ್ತಿದ್ದರು.

ಕುಂಬಳೆಯ ಯಕ್ಷಗಾನ ಕೂಟ

ಇತ್ತೀಚೆಗೆ ಐದಾರು ವರ್ಷಗಳ ಹಿಂದೆ ಕುಂಬಳೆಯ ಪಾರ್ತಿ ಸುಬ್ಬ ಸ್ಮಾರಕ ಯಕ್ಷಗಾನ ಸಂಘದವರು ಒಂದು ದೊಡ್ಡ ಯಕ್ಷಗಾನ ಕೂಟವನ್ನು ಏರ್ಪಡಿಸಿದ್ದರು. ಹಾಡುಗಾರಿಕೆಗೆ ಬಲಿಪರು ಬಂದಿದ್ದರು. ನನಗೂ ಆಮಂತ್ರಣವಿತ್ತು. ಬಲಿಪರಿದ್ದಲ್ಲಿ ನಾನೇಕೆ ಎಂಬ ಸಂದೇಹದಿಂದಲೇ ನಾನು ಆ ಕೂಟಕ್ಕೆ ಹೋಗಿದ್ದೆ. ಮೊದಲನೆಯ ಪ್ರಸಂಗದ ಭಾಗವತಿಕೆಯನ್ನು ನಾನೇ ನಿರ್ವಹಿಸಬೇಕೆಂದು ಬಲಿಪರೂ ಇತರರೂ ತುಂಬ ಒತ್ತಾಯಿಸಿದರು. ತುಂಬ ಸಂಕೋಚಪಟ್ಟುಕೊಂಡೇ ಹೇಗೋ ಅಂದಿನ ಹಾಡುಗಾರಿಕೆಯನ್ನು ನಿರ್ವಹಿಸಿದೆ. ಬಲಿಪರು ಸ್ವತಃ ಎದುರಿಗೇ ಕುಳಿತಿರುವಾಗ ಅವರು ಅದ್ಭುತವಾಗಿ ಹಾಡಿರುವ ಪದ್ಯಗಳನ್ನು ಕೇಳಿದ ನಮಗೆ ಅದೇ ಪದ್ಯಗಳನ್ನು ಅವರ ಮುಂದೆ ಹಾಡಬೇಕಾಗಿ ಬಂದಾಗ ಏನೋ ಒಂದು ರೀತಿಯ ನಾಚಿಕೆ, ಸಂಕೋಚ ತಾನಾಗಿ ಉಂಟಾಗುತ್ತದೆ. ಆದರೆ ಅವರು ಮಾತ್ರ, “ಚಿಂತೆ ಇಲ್ಲ ಚೆನ್ನಾಗಿ ಹಾಡಿದ್ದೀರಿ. ಇನ್ನೂ ಸ್ವಲ್ಪ ಮುಂದುವರಿಸಿ”— ಎಂದು ಉತ್ತೇಜನ ಕೊಡದೆ ಇರುವುದಿಲ್ಲ. ನಾನು ಯಕ್ಷಗಾನದಲ್ಲಿ ಪ್ರಾಯಸ್ಥನಾದ ಭಾಗವತನಾದುದರಿಂದಲೋ ಏನೋ - ನನ್ನ ಕುರಿತು ಬಲಿಪರು ವಿಶೇಷ ಆದರವನ್ನು ವ್ಯಕ್ತಪಡಿಸುತ್ತಿದ್ದರು. ನಾನು ಕೂಡ ಅವರಲ್ಲಿ ಅತ್ಯಂತ ಪೂಜ್ಯಭಾವದಿಂದ ವರ್ತಿಸುತ್ತಿದ್ದುದರ ಫಲಸ್ವರೂಪವಾಗಿಯೇ ಇರಬೇಕು, ಅವರು ತಮ್ಮ ಬದುಕಿನಲ್ಲಿ ಕೊನೆಯ ಬಾರಿ ಹಾಡಿದ ಯಕ್ಷಗಾನ ಕೂಟದಲ್ಲಿ ಹಾಡು ನಿಲ್ಲಿಸಿದಾಗ ಅವರ ಆಶೀರ್ವಾದದೊಂದಿಗೆ ಅವರ ಕೈಯಿಂದ ಜಾಗಟೆಯನ್ನು ಪಡೆಯುವ ಭಾಗ್ಯ ನನ್ನ ಪಾಲಿಗೆ ಬಂತು.

“ಎಲೆ ಮನುಜ ಸಾಯಬೇಕೊಂದು ದಿನ”

ಕಾರ್ತಿಕ ಮಾಸದ ಪೌರ್ಣಮಿಯು ಕಳೆದ 1966ನೇ ಇಸವಿಯಲ್ಲಿ ನವಂಬರ ತಿಂಗಳಲ್ಲಿ ಬಂದಿತ್ತು. ಹುಣ್ಣಿಮೆಯ ಹಿಂದಿನ ದಿನ ಬಲಿಪರು ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಬಂದಿದ್ದರು. ಹಿಂದೆ ಎಂದೋ ಒಂದು ದಿನ ತಾನು ಮಲ್ಲಕ್ಕೆ ತಾಳಮದ್ದಳೆಗೆ ಬರುತ್ತೇನೆಂದು ಒಪ್ಪಿಗೆ ಇತ್ತು ಬರಲು ಅಸಾಧ್ಯವಾದುದರಿಂದ ಈ ಸಲ ತಾನಾಗಿಯೇ ಬಂದು ಶ್ರೀ ದೇವಿಯ ಸನ್ನಿಧಿಯಲ್ಲಿ ಸೇವೆ ಮಾಡಬೇಕೆಂಬ ಉದ್ದೇಶದಿಂದ ಬಂದಿರುವೆನೆಂದು ಹೇಳಿದರು. ಮಲ್ಲಕ್ಕೆ ಬಂದಾಗಲೇ ಅವರ ಆರೋಗ್ಯ ತೀರ ಕೆಟ್ಟಿತ್ತು. ಆದರೂ ಅವರ ಒತ್ತಾಸೆಯಿಂದಲೇ ದೇವಸ್ಥಾನದ ಆಡಳ್ತೆದಾರರು ಹುಣ್ಣಿಮೆಯ ದಿನ ತಾಳಮದ್ದಳೆಯ ವ್ಯವಸ್ಥೆ ಮಾಡಿದರು. ಇಡೀ ಪ್ರಸಂಗವನ್ನು ಹಾಡಿ ಮುಗಿಸಲು ತನ್ನಿಂದ ಸಾಧ್ಯವಾಗಲಾರದು ಎಂಬ ಸಂದೇಹದಿಂದಲೇ ಬಲಿಪರು ನನ್ನನ್ನೂ ಕರೆಸಬೇಕೆಂದು ಹೇಳಿದರಂತೆ. ಈ ಪ್ರಾಯದಲ್ಲೂ ಬಲಿಪರು ಹೇಗೆ ಹಾಡುತ್ತಾರೋ, ಇನ್ನು ಹೆಚ್ಚು ಕಾಲ ಅವರ ಗಾನಮಾಧುರ್ಯವನ್ನು ಸವಿಯುವ ಯೋಗ ಇರಲಾರದು - ಎಂಬ ಎರಡು ಬಗೆಯ ಕುತೂಹಲದಿಂದ ನಾನು ಆ ದಿನ ಮಲ್ಲಕ್ಕೆ ಬಂದೆ. ಯಕ್ಷಗಾನದಲ್ಲಿ ಬಹಳ ಆಸಕ್ತಿ ಇರುವ ನನ್ನ ಹುಡುಗರೂ ಹೆಂಡತಿಯೂ ಬಲಿಪರ ಪದ್ಯ ಕೇಳಬೇಕೆಂಬ ಕುತೂಹಲದಿಂದ ನನ್ನ ಜತೆಯಲ್ಲೇ ಹೊರಟರು.

ಅಂದು ಸಂಜೆ ಬಲಿಪರನ್ನು ಕಂಡಾಗ ನನಗೇಕೋ ಬಹಳ ವ್ಯಸನವಾಯಿತು. ಕೇಳಿದೆ. "ಸ್ವಾಮಿ ಕಾಣುವಾಗ ಬಹಳ ಅಸ್ವಸ್ಥರಂತೆ ಕಾಣಿಸುತ್ತೀರಿ. ಪ್ರಾಯವೂ ಆಯಿತು. ಆರೋಗ್ಯವೂ ಸರಿಯಾಗಿಲ್ಲ. ಈ ಕಾಲದಲ್ಲಿಯೂ ಹೀಗೆ ಮನೆ ಬಿಟ್ಟು ದೂರ ಬಂದು ತಾಳಮದ್ದಳೆ- ಭಾಗವತಿಕೆ ಎಂದು ಏಕೆ ಆಯಾಸ ಪಡುತ್ತೀರಿ, ಮನೆಯಲ್ಲೇ ಇದ್ದು ಸ್ವಲ್ಪ ವಿಶ್ರಾಂತಿ ಪಡೆಯ ಬಾರದೇ?"

ಈ ಮಾತಿಗೆ ಬಲಿಪರು ಪ್ರಯಾಸದಿಂದ ನಗುತ್ತ ಹೇಳಿದರು. "ಜೋಯಿಸರೇ, ನೀವು ದಾಸರ ಪದ್ಯ ಕೇಳಿಲ್ಲವೇ? 'ಎಲೆ ಮನುಜ ಸಾಯಬೇಕೊಂದು ದಿನ'- ಸಾವು ಯಾರಿಗೂ ತಪ್ಪಿದ್ದಲ್ಲ, ಅದಕ್ಕೆ ಭಯಪಟ್ಟು ಕುಳಿತರೆ ಆಗುತ್ತದೆಯೇ? ಜಾಗಟೆ ಕೋಲು ಕೈಯಲ್ಲಿ ಹಿಡಿದು ಹಾಡು ತ್ತಿರುವಾಗಲೇ ಈ ಉಸಿರು ನಿಂತು ಹೋದರೆ ಅದರಷ್ಟು ಭವ್ಯವಾದ ಮರಣ ಬೇರೆ ಯಾವುದು? ಹಾಗೇ ಆಗಬೇಕೆಂದು ದೇವರಲ್ಲಿ ನಾನು ಪ್ರಾರ್ಥಿಸುತ್ತಿದ್ದೇನೆ."

ಅವರ ಈ ಭಾವಾವೇಶವನ್ನು ಕೇಳಿ ನನಗೇಕೋ ಕಣ್ಣೀರು ಬರುವಂತಾಯಿತು. ರಾತ್ರೆ ಯಕ್ಷಗಾನ ಪ್ರಾರಂಭವಾಯಿತು.

ಬಲಿಪರಿಗೆ ಅತ್ಯಂತ ಪ್ರಿಯವಾಗಿದ್ದ ಪಾರ್ತಿಸುಬ್ಬ ಕವಿಯ "ಪಂಚವಟಿ" ಪ್ರಸಂಗವನ್ನೇ ಆರಿಸಲಾಗಿತ್ತು. ಅನಾರೋಗ್ಯದಿಂದ ಅತ್ಯಂತ ನಿಶಕ್ತರಾಗಿದ್ದರೂ ಅಂದು ನಾರಾಯಣ ಭಾಗವತರು ಶಕ್ತಿಮೀರಿ ಸೊಗಸಾಗಿಯೇ ಹಾಡಿದರು. ಕಂಠನಾದವು ಮೊದಲಿನಂತೆಯೇ ಗಂಭೀರವೂ ಮಧುರವೂ ಆಗಿತ್ತು. ಆದರೆ ಸಮಯ ಕಳೆದಂತೆ ಅವರಿಗೆ ಉಂಟಾಗುತ್ತಿದ್ದ ಆಯಾಸ, ನೋವು ಕುಳಿತು ಕೇಳುತ್ತಿದ್ದ ಪ್ರೇಕ್ಷಕರಿಗೂ ಪ್ರತ್ಯಕ್ಷ ಕಾಣುತ್ತಿತ್ತು. ಕೊನೆಗೆ "ಅಂಜಬೇಡೆಲೆ ಸೀತೆ—" ಎಂಬ ಪದ್ಯವನ್ನು ಹಾಡಿ ಮುಗಿಸಿದ ಮೇಲೆ ಹಾಡುಗಾರಿಕೆಯನ್ನು ಮುಂದುವರಿಸಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯುಂಟಾಯಿತು, ಮೈ ನಡುಗಲಾರಂಭಿಸಿತು. ಬಳಿಯಲ್ಲೇ ಕುಳಿತಿದ್ದ ನನ್ನನ್ನು ಕರೆದು, "ಜೋಯಿಸರೇ, ಆಯಿತು! ಇನ್ನು ಸಾಧ್ಯವೇ ಇಲ್ಲ. ಇನ್ನು ನೀವು ಮುಂದುವರಿಸಿ" ಎಂದು ಹೇಳಿ ಜಾಗಟೆ ಕೋಲುಗಳನ್ನು ನೀಡಿದರು. ನಾನು ಭಕ್ತಿಯಿಂದ ಅವರ ಕಾಲು ಹಿಡಿದು ಜಾಗಟೆಯನ್ನು ತೆಗೆದುಕೊಂಡೆ. "ನಿಮಗೆ ಒಳ್ಳೆಯದಾಗಲಿ" ಎಂದು ಹರಸಿದರು.

ಅದೇ ಬಲಿಪ ನಾರಾಯಣ ಭಾಗವತರ ಕೊನೆಯ ಹಾಡುಗಾರಿಕೆಯಾಯಿತು. ಮಲ್ಲ ಶ್ರೀ ದುರ್ಗಾಪರಮೇಶ್ವರೀ ಸನ್ನಿಧಿಯಲ್ಲಿ ತಮ್ಮ ಅಂತಿಮ ಕಾಣಿಕೆಯನ್ನರ್ಪಿಸಿ ಬಲಿಪರು ಧನ್ಯತೆ ಯನ್ನು ಪಡೆದರು. ಅದೇ ಶ್ರೀ ಸನ್ನಿಧಿಯಲ್ಲಿ ಬಲಿಪರಿಂದ ಆಶೀರ್ವಾದ ಪೂರ್ವಕವಾಗಿ ಜಾಗಟೆ ಯನ್ನು ಪಡೆದ ನಾನೂ ಧನ್ಯನಾದೆ.

ಸಭೆಯಿಂದ ಎದ್ದು ದೇವಸ್ಥಾನದ ಮುಂಭಾಗದ ಜಗಲಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಬಲಿಪರ ವೇದನೆ ಹೆಚ್ಚುತ್ತ ಬಂತು. ಮುಂದೆ ಕೆಲವೇ ಪದ್ಯಗಳನ್ನು ನಾನು ಹಾಡಿದ ಮೇಲೆ ತಾಳ ಮದ್ದಳೆಯನ್ನು ಮುಕ್ತಾಯಗೊಳಿಸಿದೆವು. ಬೆಳಗ್ಗೆ ಅಲ್ಲಿಂದಲೇ ಅವರನ್ನು ನೇರವಾಗಿ ಮಂಗಳೂರಿಗೆ ಚಿಕಿತ್ಸೆಗೆ ಕೊಂಡೊಯ್ದರು.

ದಶಂಬರ ೪ ನೆಯ ತಾರೀಕು ಆದಿತ್ಯವಾರ ಮಂಗಳೂರು ಸರಕಾರೀ ಕಾಲೇಜಿನಲ್ಲಿ ಕರ್ಣಾಟಕ ಸಂಘದ ಆಶ್ರಯದಲ್ಲಿ ನಡೆದ ತಾಳಮದ್ದಳೆಯ ಭಾಗವತಿಕೆಗೆಂದು ನಾನು ಅಲ್ಲಿಗೆ ಹೋದಾಗ "ನಿನ್ನೆ ರಾತ್ರೆ ಬಲಿಪರು ದೈವಾಧೀನರಾದರು"—ಎಂಬ ದಾರುಣವಾದ ವಾರ್ತೆ ಸಿಕ್ಕಿತು.

ಯಕ್ಷಗಾನದ ಒಂದು ಸುವರ್ಣಗೋಪುರ ಕಳಚಿಬಿತ್ತು. ಆದರೆ ಯಕ್ಷಗಾನ ಕಲೆ ಇರುವಷ್ಟು ಕಾಲ ಬಲಿಪರ ಭವ್ಯವಾದ ವ್ಯಕ್ತಿತ್ವವೂ, ಧೀರ-ಗಂಭೀರನಾದವೂ ಜನರ ಚಿತ್ತಪಟಲದಿಂದ ಎಂದೆಂದಿಗೂ ಮಾಯುವಾಗಲಾರದು.

ಯಕ್ಷಗಾನ ಕಲಾತಪಸ್ವಿ
ದಿವಂಗತ ಶ್ರೀ ಬಲಿಪ ನಾರಾಯಣ ಭಾಗವತರು

ಶ್ರೀ ಅಗರಿ ಶ್ರೀನಿವಾಸ ಭಾಗವತರು.

ಪಾಶ್ಚಾತ್ಯರನ್ನೇ ಅನುಸರಿಸಿ ನಡೆಯುವ ಅಜ್ಞಾನದಿಂದ ಸನಾತನ ಸಂಸ್ಕೃತಿ ಧರ್ಮಗಳ ಸುಜ್ಞಾನವು ಶಿಥಿಲವಾಗುತ್ತಾ ಬರುವ ಈ ಕಾಲದಲ್ಲಿ ಆರ್ಯ ಸಂಸ್ಕೃತಿಯ ಶ್ರೇಷ್ಠತೆಯನ್ನು ಪ್ರಸಾರ ಗೊಳಿಸುವ ಕಾರ್ಯಗಳಲ್ಲಿ ಯಕ್ಷಗಾನ ಕಲೆಯು ಪ್ರಥಮ ಸ್ಥಾನವನ್ನು ಪಡೆದಿರುವುದೆಂಬುದು ಉತ್ಪ್ರೇಕ್ಷೆಯಲ್ಲ. ಇಂಥಾ ಉಚ್ಚ ಕಲೆಯು ಕಾನನದ ಸುಗಂಧಪೂರಿತ ಕುಸುಮದಂತೆ ಅಶಿಕ್ಷಿತರ ವಶ ವಾಗಿ ಸಾಮಾನ್ಯರ ಜೀವನೋಪಾಯದ ವಿದ್ಯೆಯೆಂದು ಪರಿಗಣಿಸಲ್ಪಟ್ಟಿರುವ ಕಾಲದಲ್ಲಿ, ವಿದ್ವಾಂಸ ರನ್ನಾಕರ್ಷಿಸುವ ಇದರ ಯೋಗ್ಯತೆಯನ್ನು ಜನತೆಗೆ ಎತ್ತಿ ತೋರಿದ ವ್ಯಕ್ತಿ ದಿವಂಗತ ಶ್ರೀ ಬಲಿಪ ನಾರಾಯಣ ಭಾಗವತರು.

ನಾನು ಜನ್ಮತಃ ಸಾಹಿತ್ಯ ಸಂಗೀತಗಳ ಮೇಲಣ ಅಭಿಮಾನ, (ಹುಚ್ಚು)ದಿಂದ ನಾಟಕ ರಂಗಗಳಲ್ಲಿ ವ್ಯವಸಾಯ ಮಾಡುತಿದ್ದು ಒಡನಾಡಿಗಳ ದುರ್ವರ್ತನೆಯಿಂದ ಬೇಸರಗೊಂಡು ಆ ಕಲೆಗೆ ತಿಲಾಂಜಲಿಯೆನ್ನಿತ್ತ ಕಾಲವದು. ಸರ್ವಸಾಧಾರಣ 1924ನೇ ಇಸವಿ.

ಶ್ರೀಮಾನ್ ಪುತ್ತಿಗೆ ರಾಮಕೃಷ್ಣ ಜೋಯಿಸ ಭಾಗವತರ ಮೈತ್ರಿಯು ನನ್ನ ಮನವನ್ನು ಯಕ್ಷಗಾನ ಕಲೆಯತ್ತ ಸೆಳೆಯಿತು. ಆ ಕಾಲವಲ್ಲಿ ಶ್ರೇಷ್ಠ ಸಾಹಿತಿಗಳೂ, ಮಂಗಳೂರಿನ ಅಧ್ಯಾಪಕ ತರಬೇತಿ ಶಾಲೆಯ ಮುಖ್ಯೋಪಾಧ್ಯಾಯರೂ ಆಗಿದ್ದ ಶ್ರೀ ದಿ। ಉಳ್ಳಾಲ ಮಂಗೇಶರಾವ್ ಇವರ ಆಶ್ರಯದಲ್ಲಿ ಮಂಗಳೂರಿನ ತರಬೇತಿ ಶಾಲೆಯಲ್ಲಿ ಮತ್ತು ಕೆನರಾ ಹೈಸ್ಕೂಲಿನಲ್ಲಿ ವಾರಕ್ಕೊಮ್ಮೆ ವಿದ್ವಾಂಸರ ಕೂಡುವಿಕೆಯಿಂದ ಯಕ್ಷಗಾನ ಕೂಟವು ಜರಗುತಿತ್ತು. ಶ್ರೀ ದಿ। ಭಾಗವತರ ತಾರುಣ್ಯದ ಕಾಲವದು. ಶ್ರೀ ಮಂಗೇಶರಾಯರು ಮತ್ತು ಅನೇಕ ವಿದ್ವಾಂಸರ ಮನವನ್ನಾಕರ್ಷಿಸಿದ ಹಾಡು ಗಾರಿಕೆಯು ಶ್ರೀ ದಿ। ಭಾಗವತರದು. ಯಕ್ಷಗಾನದ ಹಾಡುಗಾರಿಕೆಯ ವೈಶಿಷ್ಟ್ಯವೇನೆಂಬುದನ್ನು ನಾನು ಮನನ ಮಾಡಿಕೊಂಡುದು ಆ ಕಾಲವಲ್ಲಿ ಶ್ರೀಯುತರ ಹಾಡುವಿಕೆಯಿಂದ. ಭಾಗವತಿಗೆಯೇ ಯಕ್ಷಗಾನ ರಂಗದಲ್ಲಿ ಪ್ರಧಾನ ಪಾತ್ರವೆಂಬುದು ನಿರ್ವಿವಾದ. ಏಕೆಂದರೆ ಈ ಹಾಡುಗಾರಿಕೆಗೆ ಸಂಗೀತಪಾಂಡಿತ್ಯ ಒಂದೇ ಸಾಲದು, ಸಾಹಿತ್ಯ ಜ್ಞಾನವೂ ಅತ್ಯಗತ್ಯ. "ಸಾಹಿತ್ಯಮಪಿ ಸಂಗೀತಂ ಸರಸ್ವತ್ಯಾ ಸ್ತನದ್ವಯಂ" ಶ್ರೀ ಸರಸ್ವತಿ ಮಾತೆಯ ಸಾಹಿತ್ಯ, ಸಂಗೀತಗಳೆಂಬ ಎರಡು ಸ್ತನ ಗಳನ್ನೂ ಪಾನಮಾಡಿದ ಕಂದನು ಮಾತ್ರ ಯಕ್ಷಗಾನದ ಭಾಗವತನೆನಿಸಿಕೊಳ್ಳಲು ಸಾಧ್ಯವಿನಹ ಯಾವುದಾದರೊಂದರಲ್ಲಿ ಪರಿಜ್ಞಾನವನ್ನು ಪಡೆದು ಭಾಗವತನೆನಿಸಿದರೆ ಅವನು ಯಕ್ಷಗಾನ ಕಲೆಯ ಕೊಲೆಗಾರ. ಸಂಗೀತಜ್ಞಾನವೂ, ಕವಿತಾಜ್ಞಾನವೂ ಪೂರ್ವ ಜನ್ಮದ ವಾಸನಾಬಲದಿಂದ ಜನ್ಮತಃ

ನೆಲೆಗೊಂಡು, ಮಾರ್ಗದರ್ಶಕರಾದ ಗುರುಗಳಿಂದ ಪರಿಶ್ರಮ ವಹಿಸಿ, ಆ ವಿದ್ಯೆಯನ್ನು ಪಠಿಸಿದರೆ ಮಾತ್ರ ಅಂತಹ ವಿದ್ವಾಂಸನ ಕಲೆಯಲ್ಲಿ ಸೊಗಸು. ಒಬ್ಬ ಸಂಗೀತ ವಿದ್ವಾಂಸನು ಹಾಡುತ್ತಿರುವ ಕಾಲದಲ್ಲಿ ಯಾವ ಗುರುಮುಖದಿಂದಲೂ ಆ ವಿದ್ಯೆಯನ್ನು ಕಲಿಯದಿದ್ದ ಬಾಲಕನು ತನ್ನ ಪೂರ್ವ ಜನ್ಮದ ವಾಸನಾಬಲದಿಂದಲೇ ತಪ್ಪದೆ ತಾಳ ಹಾಕುತ್ತಿರುವುದನ್ನೂ, ಸಂಗೀತ ವಿದ್ಯೆಯನ್ನು ಅಭ್ಯಾಸ ಮಾಡಿದ ಹಾಡುಗಾರನು ಕೆಲವು ವೇಳೆ ತಾಳ ತಪ್ಪುತ್ತಿರುವುದನ್ನೂ, ಗಮನಿಸಿದರೆ ಸಂಗೀತ ಕಲೆಗೆ ಪೂರ್ವ ಜನ್ಮದ ವಾಸನಾ ವಿಶೇಷವೂ ಅತ್ಯಗತ್ಯವೆಂಬುದು ಶತಃಸಿದ್ಧ. ಅಂತಹ ವಾಸನಾಬಲವಿದ್ದವನು ಮಾತ್ರ ಗುರುಮುಖೇನ ವ್ಯಾಸಂಗವಮಾಡಿ ಹಾಡಿದರೆ ಸಕ್ಕರೆ ಬೆರೆತ ಹಾಲಿನಂತೆ, ಆ ಗಾನಸುಧೆಗೆ ಮಾಧುರ್ಯ. ಇಂತಹ ಮಾಧುರ್ಯವು ನೆಲಸಿಕೊಂಡಿದ್ದ ಶ್ರೀ ದಿ। ಭಾಗವತರ ಹಾಡುಗಾರಿಕೆಯ ವಿದ್ವತ್ತೇ ನನ್ನನ್ನು ಆ ಕಾಲದ ಯಕ್ಷಗಾನ ಕೂಟಗಳಿಗೆ ಸೆಳೆದ್ಯೊದಿತ್ತು.

"ಶ್ರುತಿರ್ಮಾತಾ ಲಯಃ ಪಿತಾ" ಎಂಬ ಸಿದ್ಧಾಂತದಂತೆ ಸಂಗೀತಕ್ಕೆ ರಾಗ, ತಾಳ, ಶ್ರುತಿ ಜ್ಞಾನಗಳು ಅವಶ್ಯವಾದರೆ ಯಕ್ಷಗಾನದ ಭಾಗವತಿಗೆಗೆ ಈ ಜ್ಞಾನಗಳಲ್ಲದೆ ಸಾಹಿತ್ಯಕ್ಕೆ ಸಂಬಂಧಿಸಿದ ಕಥಾಜ್ಞಾನ, ಕವಿತಾಜ್ಞಾನ, ಅರ್ಥಜ್ಞಾನ, ರಸಜ್ಞಾನಾದಿ ಹಲವು ಜ್ಞಾನಗಳು ಇದ್ದೇ ತೀರಬೇಕು. ಅಲ್ಲದೆ ಆವಾವ ರಾಗಗಳು ಆವಾವ ರಸಗಳನ್ನು ಉತ್ಪಾದಿಸುತ್ತವೆ, ಯಾವ ಕಾಲದಲ್ಲಿ ಯಾವ ರಾಗವನ್ನು ಹಾಡಬೇಕು, ಎಂಬುದನ್ನು ಭಾಗವತನಾದವನು ತಿಳಿದಿರಬೇಕು. ಮತ್ತು ಹಲವು ಪುರಾಣೋಕ್ತ ಪ್ರಸಂಗಗಳನ್ನು ಕಂಠಪಾಠವಾಗಿಸಿಕೊಳ್ಳಬೇಕು. ಕೃತ, ತ್ರೇತ ದ್ವಾಪರ ಯುಗಗಳ ಪುಣ್ಯಪುರುಷರ ಆದರ್ಶ ಜೀವನವನ್ನು ಶ್ರೋತೃಗಳ ಚಿತ್ತದಲ್ಲಿ ಪ್ರತಿಬಿಂಬಿಸುವಂತೆ ಮಾಡುವುದೇ ಯಕ್ಷಗಾನ ಕಲೆಯಂ ಶ್ರೇಷ್ಠತೆ. ಪಾತ್ರದ ಗೌರವ ಕೆಡದಂತೆ, ರಸಾಭಾಸವಾಗದಂತೆ ತಲ್ಲೀನಗೊಂಡು ತಾನೇ ಆಪಾತ್ರವಾಗಿ ಹಾಡಿ ಅದರಲ್ಲೇ, ಆ ರಸವನ್ನು ಅರ್ಥಧಾರಿಗಳಲ್ಲಿ ಉತ್ಪಾದಿಸುವುದೇ ಭಾಗವತನ ಮುಖ್ಯ ಲಕ್ಷಣ. ಈ ಲಕ್ಷಣವುಳ್ಳವನು ಹಾಡಿದರೆ ಮಾತ್ರ ನಾನಾ ವಿಚಾರಗಳತ್ತ ಹರಿದಿರುವ ಪ್ರೇಕ್ಷಕ ವೃಂದದ ಮನವನ್ನು ಕಲೆಯತ್ತ ಆಕರ್ಷಿಸಿ, ಧಾರ್ಮಿಕ ಜೀವನದತ್ತ ಕೊಂಡೊಯ್ದು ಜನತೆಯು ತನ್ನನ್ನು ತಾನೇ ತಿದ್ದಿಕೊಳ್ಳುವಂತೆ ಮಾಡಲು ಸಾಧ್ಯ. ಇನ್ನು ಯಾವ ರಾಗವು ಯಾವ ರಸವನ್ನು ಉತ್ಪಾದಿಸಲು ಸಾಧ್ಯವೆಂಬುದನ್ನು ತಿಳಿದುಕೊಳ್ಳದೆ, ಕೇವಲ ಕವಿತಾಶಕ್ತಿಯ ಬಲದಿಂದ ಪ್ರಸಂಗಗಳನ್ನು ರಚಿಸಿರುವ ಕವಿಗಳ ಕೃತಿಗಳನ್ನು, ಆ ಕೃತಿಗಳಲ್ಲಿ ಸೂಚಿಸಿರುವ ರಾಗಗಳಿಂದ ರಸಪುಷ್ಟಿಗೆ ಬೇಕಾದ ರಾಗಗಳಿಗೆ ಹೊಂದಿಸಿಕೊಂಡು ಶ್ರೋತೃವೃಂದಕ್ಕೆ ಅರ್ಥವಾಗುವಂತೆಯೂ, ತಾಳ ಲಯಗಳು ಕೆಡದಂತೆಯೂ ಹಾಡಬೇಕಾದರೆ ಎಷ್ಟು ಪರಿಶ್ರಮ ಬೇಕೆಂಬುದನ್ನು ಆ ಕಲೆಯಲ್ಲಿ ವ್ಯವಸಾಯ ಮಾಡಿದವನು ಮಾತ್ರ ತಿಳಿದುಕೊಳ್ಳಲು ಸಾಧ್ಯ.

ಶ್ರೀಮಂತರೂ, ಧೀಮಂತರೂ ಆಗಿದ್ದ ದಿವಂಗತ ಕೂಡ್ಳು ಸುಬ್ರಾಯ ಶ್ಯಾನುಭಾಗರಂತಹ ಸಂಗೀತ ವಿದ್ವಾಂಸರಿಂದ ಪರಿಶ್ರಮ ಪಡೆದ ಶ್ರೀ ದಿ। ಭಾಗವತರ ಹಾಡುಗಾರಿಕೆಯಲ್ಲಿ ಮೇಲೆ ಸೂಚಿಸಿರುವ ಲಕ್ಷಣಗಳೆಲ್ಲಾ ಸೇರಿಕೊಂಡಿದ್ದುವೆಂಬುದಕ್ಕೆ ಶಾರೀರ (ಕಂಠ) ಮಾಧುರ್ಯದಿಂದ ಹಾಡುತಿದ್ದುದನ್ನು ಕೇಳಿ ಮೆಚ್ಚಿ ದಿ। ಶ್ರೀ ಉಳ್ಳಾಲ ಮಂಗೇಶರಾಯರು ಮುಖ್ಯೋಪಾಧ್ಯಾಯರು ಸರಕಾರಿ ಟ್ರೈನಿಂಗ್ ಶಾಲೆ ಮಂಗಳೂರು, ಶ್ರೀ ದಿ. ಆರ್. ತಾತಾಚಾರ್ಯ M. A. L. T. ಜಿಲ್ಲಾ ವಿದ್ಯಾಧಿಕಾರಿಗಳು, ಶ್ರೀ. ದಿ. ಪೇಜಾವರ ಸೀತಾರಾಮಾಚಾರ್ಯ, ವಿದ್ವಾನ್ ಮತ್ತು ಇನ್ನಿತರರು ಕೊಂಡಾಡಿ ಪ್ರೋತ್ಸಾಹಿಸಿದುದು ನಿದರ್ಶನ, ಇಂತಹ ಮಹನೀಯರ ಪ್ರಶಂಸೆಯೇ ನಿಜವಾದ ಪ್ರಶಂಸೆಯಲ್ಲದೆ, ಸಂಗೀತ ಸಾಹಿತ್ಯ ಗಂಧವಿಲ್ಲದ ಓರ್ವ ಧನಾಢ್ಯನು ಅಥವಾ ಅಧಿಕಾರಿಯು ಮೆಚ್ಚಿ ಕೊಂಡಾಡಿದರೆ "ಸಂಗೀತಕ್ಕೆ ಸರ್ಟಿಫಿಕೇಟು ಕೊಟ್ಟ ಸರ್ಕಲ್ ಇನ್ಸ್‌ಪೆಕ್ಟ್" ಎಂಬ ಗಾದೆಯಂತಾದೀತು.

ಸಾಧಾರಣ ೭೦ಕ್ಕೂ ಮಿಕ್ಕಿ ಪ್ರಸಂಗಗಳನ್ನು ಕಂಠಪಾಠವಾಗಿರಿಸಿಕೊಂಡು, ತನ್ನ ಶಾರೀರ ಮಾಧುರ್ಯದಿಂದ ಪ್ರತಿನಿತ್ಯವೂ ಎಂಟು ಗಂಟೆಗಳ ಕಾಲ ಶ್ರಮವಹಿಸಿ, ಕಲೆಯು ಕೆಡದಂತೆ ಹಾಡಿ, ವಿದ್ವಾಂಸರಿಂದ ಹೊಗಳಿಸಿ ಕೊಂಡಂತಹ ದಿವಂಗತ ಶ್ರೀ ಭಾಗವತರು ಗಣ್ಯವ್ಯಕ್ತಿಗಳೆಂಬುದರಲ್ಲಿ ಸಂದೇಹವಿಲ್ಲ.

ದಿ। ಶ್ರೀ ಭಾಗವತರ ಹಾಡುಗಾರಿಕೆಯಿಂದಲೂ ಆ ಕಾಲದ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದಲೂ ವೃದ್ಧಿಯನ್ನೈದುತಿದ್ದ ಕಲೆಯು, ಕಾಲ ಗತಿಯಿಂದ ಕ್ರಮೇಣ ಕ್ಷಯಿಸುತ್ತಾ ಬಾತು. ಕಾರಣ ದಿ। ಶ್ರೀ ಭಾಗವತರಿಗೂ, ಅರ್ಥದಾರಿಗಳಿಗೂ ಉಂಟಾದ ಮನಃಕ್ಲೇಶ. ಮೂಲ ಪ್ರತಿಯನ್ನು ಕೆಡಿಸಿ ಕೆಲವು ಪದ್ಯಗಳನ್ನು ಸೇರಿಸಿ ಹೊಸತಾಗಿ ಅಚ್ಚು ಹಾಕಿಸಿದ ಪ್ರಸಂಗ ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ಅರ್ಥವಿವರಣೆಯನ್ನು ಮಾಡುವ ಕಲಾವಿದರ ಅರ್ಥಗಳಿಗೂ, ಮೂಲಪ್ರತಿಯನ್ನೇ ಕಂಠಪಾಠ ಮಾಡಿಕೊಂಡು ಪುಸ್ತಕದ ಸಹಾಯವಿಲ್ಲದೆ ಹಾಡುವ ಭಾಗವತರ ಪದಗಳಿಗೂ ಹೊಂದಾಣಿಕೆ ಇಲ್ಲದಿದ್ದುದೇ ಈ ಮನಃಕ್ಲೇಶಗಳಿಗೆ ಕಾರಣವಾಗಿತ್ತು, ಇದರಿಂದಲೇ ಯಕ್ಷಗಾನ ಪ್ರಭೆಯು ಕುಂದುತ್ತಾ ಬಂತು. ಕೇವಲ ಧನಾರ್ಜನೆಯೇ ಮುಖ್ಯವಲ್ಲ, ಯಕ್ಷಗಾನದ ನೈಜ ಪ್ರಭೆಯು ಪ್ರಕಾಶವಾಗಬೇಕೆಂಬ ಉದ್ದೇಶವನ್ನೇ ಕಟ್ಟಿಕೊಂಡಿರುವ ದಿ। ಶ್ರೀ ಭಾಗವತರು ಯಕ್ಷಗಾನ ಕೂಟಗಳಿಂದ ದೂರವಾಗತೊಡಗಿದರು. ಇದರಿಂದ ಪದ್ಯವನ್ನು ಅನುಸರಿಸಿ ಅರ್ಥವಿವರಣೆ ಯಾಗಬೇಕೆಂಬ ನಿರ್ಣಯವು ತಪ್ಪಿ ಅರ್ಥವಿವರಣೆಯನ್ನು ಹೊಂದಿ ಪದ್ಯವನ್ನು ಹಾಡಬೇಕೆಂಬ ನಿರ್ಣಯವು ಆರಂಭವಾಗಿ ಅದರಿಂದ ಕವಿ ಹೃದಯ ಕೆಟ್ಟು ಕಲೆಯು ಕಳೆಗುಂದುತ್ತಾ ಬಂತು. ದಿ। ಶ್ರೀ ಭಾಗವತರು ಯಕ್ಷಗಾನ ಕೂಟದಿಂದ ದೂರ ನಿಂತರೂ ಆ ಕಲೆಯ ಮೇಲಣ ಅಭಿಮಾನದಿಂದ ತನ್ನ ನಿರ್ಣಯವನ್ನು ಬಿಡದೆ ತನ್ನ ಇಳಿವಯಸ್ಸಿನಲ್ಲಿಯೂ ಅನೇಕ ಪ್ರಸಂಗಗಳನ್ನು ರಚಿಸಿಕೊಂಡಿದ್ದು ಕಲಾತಪಸ್ವಿಯೆನಿಸಿದರು.

ಗುಣದೋಷಗಳು ಮಾನವನಲ್ಲಿ ಮಿಶ್ರಣವಾಗಿರುವುದು ಪ್ರಕೃತಿಯ ಸಹಜ ಗುಣವಲ್ಲದ, ನಿರ್ದೋಷಿಯು ಪರಮಾತ್ಮನೊರ್ವನೇ. ವ್ಯಕ್ತಿಯ ಗುಣಗಳನ್ನು ಶ್ಲಾಘಿಸಿ, ದೋಷವನ್ನು ಸೂಚಿಸುವುದೇ ನಿಜವಾದ ವಿಮರ್ಶೆಯಲ್ಲದೆ, ಗುಣಗಳನ್ನು ಕೊಂಡಾಡುವುದೂ, ದೋಷಗಳನ್ನೇ ವಿವರಿಸುವುದೂ, ನಿಜವಾದ ವಿಮರ್ಶೆಯಲ್ಲ. ದಿ। ಶ್ರೀ ಭಾಗವತರ ಹಾಡುಗಾರಿಕೆಯಲ್ಲಿ ದೋಷಗಳೇನಾದರೂ ಇದ್ದವೋ ಎಂಬುದನ್ನು ವಿಚಾರಿಸುತ್ತಾ ಹೋದರೆ ಕವಿತೆಗಳಲ್ಲಿನ ಛಂದಸ್ಸು ಮತ್ತು ವ್ಯಾಕರಣಗಳನ್ನೂ ತಿದ್ದಿಕೊಳ್ಳದೆ ಹಾಡುತಿದ್ದುದು ಕೆಲವು ವೇಳೆ ಕೇಳಬಹುದಾಗಿತ್ತು. ಆದರೂ ಯಾರ ಬೆದರಿಕೆಗೂ ಬೆದರದೆ ಯಾವ ಆಶೆಗೂ ಕಟ್ಟು ಬೀಳದೆ "ವಿಘ್ನೈಃ ಪುನಃ ಪುನರಪಿ ಪ್ರತಿ ಹನ್ಯಮಾನಾ ಆರಬ್ಧ ಮುತ್ತಮ ಗುಣಾ ನ ಪರಿತ್ಯಜಂತಿ" ಎಷ್ಟೇ ವಿಘ್ನಗಳು ಪ್ರಾಪ್ತಿಸಿದರೂ ಎದೆಗುಂದದೆ ತನ್ನ ಮುಖ್ಯ ಸದುದ್ದೇಶವನ್ನು ಸಾಧಿಸುತ್ತಾ ತನ್ನ ಜೀವಿತವನ್ನೇ ಕಳೆದ ದಿ। ಶ್ರೀ ಭಾಗವತರು ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾ" ಎಂಬಂತೆ ಧೀರರೂ, ಉತ್ತಮ ಗುಣಾಢ್ಯರೂ ಕಲಾತಪಸ್ವಿಗಳೂ ಎಂಬುದು ನಿಶ್ಚಯ. ಇಂತಹ ಕಲಾ ಕೋವಿದರನ್ನು ಕಳೆದುಕೊಂಡುದು ಯಕ್ಷಗಾನ ಕಲಾಕ್ಷೇತ್ರದ ದೌರ್ಭಾಗ್ಯ. ಇಂತಹ ಯಕ್ಷಗಾನ ಕಲಾತಪಸ್ವಿಗಳ ಅನುಕರಣೆಯನ್ನೇ ಅನುಸರಿಸಿ ಮುಂದಿನ ಜನಾಂಗವು ಯಕ್ಷಗಾನ ಕಲೆಯನ್ನು ಬೆಳಗಿಸಿ ಶ್ರೇಷ್ಠವಾದ ಯಕ್ಷಗಾನವು ಪ್ರಸಾರಗೊಳ್ಳುವಂತೆ ಪರಮಾತ್ಮನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಕಣ್ಮರೆಯಾದ ಯಕ್ಷಗಾನ ಕಲಾಯೋಗಿ

ಶ್ರೀ ನೆಕ್ರಾಜೆ ಜಗನ್ನಾಥ ಶೆಟ್ಟಿ, ವಿದ್ವಾನ್.

ದಿವಂಗತ ಬಲಿಪ ನಾರಾಯಣ ಭಾಗವತರಂತಹ ಪೂಜ್ಯವ್ಯಕ್ತಿಗಳ ಗುಣಗಾನವನ್ನು ಮಾಡುವುದು, ಯಕ್ಷಗಾನ ಕಲಾಭಿಮಾನಿಗಳ ಕರ್ತವ್ಯವಾಗಿರುತ್ತದೆ. ಆದರೆ ಮಾತ್ರ ಯಕ್ಷಗಾನ ಕಲಾದೇವಿಯು ತನ್ನ ಉಭಯ ಹಸ್ತಗಳಿಂದಲೂ ಅಂತಹ ಕಲಾಭಿಮಾನಿಗಳನ್ನು ಸದಾ ಆಶೀರ್ವಾದಿಸುತ್ತಿರುವಳು. ಯಕ್ಷಗಾನ ಕಲಾದೇವಿಯ ಅಚ್ಚುಮೆಚ್ಚಿನ ಕಂದ, ದಿವಂಗತ ಬಲಿಪ ನಾರಾಯಣ ಭಾಗವತರ ಕುರಿತಾಗಿ ಪ್ರಕಟಿಸಲ್ಪಡುವ ಸ್ಮಾರಕ ಗ್ರಂಥದಲ್ಲಿ, ಯಕ್ಷಗಾನ ಕಲಾರಾಧಕನಾದ ನನ್ನ ಲೇಖನಕ್ಕೂ ಆಶ್ರಯ ದೊರಕಬಹುದೆಂಬ ಸದುದ್ದೇಶವನ್ನಿಟ್ಟುಕೊಂಡು ಈ ಚಿಕ್ಕ ಲೇಖನವನ್ನು ಬರೆಯಲು ತೊಡಗುವೆನು.

ಯಕ್ಷಗಾನದ ಏಳಿಗೆಗಾಗಿ, ತನ್ನ ಜೀವಮಾನವನ್ನೇ ಮುಡಿಪಾಗಿಟ್ಟು, ಎಡೆಬಿಡದೆ ಅಹೋರಾತ್ರಿ ದುಡಿದ ವ್ಯಕ್ತಿಗಳಲ್ಲಿ ಬಲಿಪರು ಅಗ್ರಗಣ್ಯರು, 'ಅದು ಅವಿದ್ಯಾವಂತರಾದ ಹಳ್ಳಿಯ ಹುಂಬರ ಮನೋರಂಜನಾ ಕಾರ್ಯ, ಅದರಲ್ಲೇನಿದೆ ಸ್ವಾರಸ್ಯ ! — ಎಂದು ಆ ಕಲೆಯ ಕಡೆಗೆ ವಕ್ರದೃಷ್ಟಿಯನ್ನು ಬೀರಿ, ಹಳಿಯುತ್ತಿದ್ದ ಮಂದಿಯನ್ನು ತನ್ನ ಮೃದುಮಧುರವಾದ ಗಾನಮಾಧುರ್ಯದಿಂದ, ಅದರ ಕಡೆಗೊಲಿಸಿ, ಅವರಿಂದಲೂ 'ಶಹಭಾಸ್ ಯಕ್ಷಗಾನ' ಎನ್ನಿಸಿದ ಕೀರ್ತಿಯು ಪೂಜ್ಯರಿಗೆ ಸಲ್ಲುತ್ತದೆ. ಯಕ್ಷಗಾನ ಕಲೆಯ ಘನೋದ್ದೇಶವನ್ನೂ, ಅದರಲ್ಲಡಕವಾದ ತಿರುಳನ್ನೂ ಜನತೆಯ ಮುಂದಿಟ್ಟು, ವಿದ್ಯಾವಂತ ಜನಾಂಗವೂ ಮೆಚ್ಚುವಂತೆ ಮಾಡಿ, ಸಂಗೀತ, ಸಾಹಿತ್ಯಗಳನ್ನೊಳಗೊಂಡ ಆ ಜಾನಪದ ಕಲೆಯನ್ನು ಉನ್ನತ ಶಿಖರಕ್ಕೇರಿಸಲು ಮಾಡಿದ ಅವರ ಪ್ರಯತ್ನವು ಶ್ಲಾಘನೀಯವಾದುದು. ಅದು ಅವರ ಚಿರತಪಸ್ಸಿನ ಫಲವೆಂದರೆ ಅತಿಶಯೋಕ್ತಿಯಾಗಲಾರದು. ಆದುದರಿಂದಲೇ ಆ ಪೂಜನೀಯ ವ್ಯಕ್ತಿಯನ್ನು ನಾನು ಯಕ್ಷಗಾನ ಕಲಾಯೋಗಿಯೆಂದೇ ಸಂಬೋಧಿಸುವೆನು.

ಈ ಕಲಾಯೋಗಿಯು ನಮ್ಮನ್ನಗಲಿ ಇಂದಿಗೆ ವರ್ಷ ಒಂದಾದರೂ ಅವರ ಕೀರ್ತಿಯು ಚಿರಸ್ಥಾಯಿಯಾಗಿ ಉಳಿದಿದೆ. ಈಗಲೂ ನಮ್ಮ ಕಣ್ಣಮುಂದೆ ಕುಳಿತು ಹಾಡುವರೋ ಎಂಬ ಭಾವನೆಯು ನಮ್ಮಲ್ಲುಂಟಾಗದಿರದು. ಆ ಭಾವನೆಯು ಎಲ್ಲರಲ್ಲೂ ಉಂಟಾಗುವಂತೆ ಬೆಂಗಳೂರು ಆಕಾಶವಾಣಿಯವರೂ ಆಗಾಗ ಸಹಕರಿಸುತ್ತಾರೆ. ಕಳೆದ ಸಪ್ಟಂಬರ 17ನೇ ತಾರೀಕಿನಂದು ಥಕ್ಕನೆ ರೇಡಿಯೋ ಸೆಟ್ಟಿನ ಗುಂಡಿಯನ್ನು ತಿರುಗಿಸಿದಾಗ, ಅನಿರೀಕ್ಷಿತವಾಗಿ ಆ ಗಾನಯೋಗಿಯ ಹಾಡನ್ನು ಕೇಳುವ ಸುಯೋಗವು ಬಂದೊದಗಿತು. ಆ ಗಾನಾಮೃತದ ಸವಿಯನ್ನೀಂಟಿದೆನು ತೃಪ್ತಿಗೊಂಡೆನು. ಹಾಡು ನಿಂತಿತು. ಅಯ್ಯೋ ! ಆ ವ್ಯಕ್ತಿಯನ್ನು ನೋಡುವ ಭಾಗ್ಯವು ಇನ್ನಿಲ್ಲವಲ್ಲಾ ! ಎಂಬ ಭಾವವು ಮನದಲ್ಲೊಡಮೂಡಿ ಕಣ್ಣುಗಳಿಂದ ನಾಲ್ಕು ಹನಿಗಳುದುರಿದವು.

ಪೂಜ್ಯ ಬಲಿಪ ನಾರಾಯಣ ಭಟ್ಟರನ್ನು ಕೆಲವರು ಬಲಿಪರೆನ್ನುವರು. ಇನ್ನು ಕೆಲವರು ಬಲಿಪ ಭಾಗವತರೆನ್ನುವರು. ಬೇರೆ ಕೆಲವರು ಬರೇ ಭಾಗವತರೆನ್ನುವರು. ಭಾಗವತರೆಂದರೆ

ಬಲಿಪರೇ, ಬಲಿಪರೆಂದರೆ ಪೂಜ್ಯ ಬಲಿಪ ನಾರಾಯಣ ಭಾಗವತರೆಂಬುದನ್ನು ಪ್ರತಿಯೊಬ್ಬನೂ ಅರಿತಿರುವನು. ಭಾಗವತರೆಂದು ಕರೆಯಲ್ಪಡಲು ಬೇಕಾದ ಯೋಗ್ಯತೆಗಳೆಲ್ಲವೂ ಅವರಲ್ಲಿದ್ದುವು. ರಸಭರಿತವಾಗಿಯೂ, ಅರ್ಥವತ್ತಾಗಿಯೂ, ಕರ್ಣಾನಂದಕರವಾಗಿಯೂ ತಾಳಬದ್ಧವಾಗಿಯೂ ಹಾಡ ಬಲ್ಲ ಚೈತನ್ಯವು ಅವರಿಗಲ್ಲದೆ ಮತ್ತಾರಿಗೂ ಇರಲಿಲ್ಲ. ಬಲಿಪರಿಗೆ ಸರಿಸಮಾನರಾದವರು ಬಲಿಪರೇ ಹೊರತು ಬೇರಾರೂ ಇರಲಿಲ್ಲ.

ಆರಂಭದಲ್ಲಿ ಹಾಡುಗಾರಿಕೆಯಲ್ಲಿ ಅಭಿರುಚಿಯನ್ನು ಹುಟ್ಟಿಸಿ ಯಕ್ಷಗಾನ ಕಲಾದೇವಿಯ ಸೇವೆಯನ್ನು ಮಾಡಲು ನನಗೆ ಉತ್ಸಾಹವನ್ನುಂಟುಮಾಡಿದವರು ಅವರೇ. ನಾನು ಚಿಕ್ಕವನಾಗಿರುವಾಗ ಕಾಸರಗೋಡಿನಲ್ಲಿ ಕೋಳ್ಯೂರು ಯಕ್ಷಗಾನ ನಾಟಕ ಸಭೆಯವರ ಯಕ್ಷಗಾನ ನಾಟಕಗಳು ಆಗಾಗ ಆಗುತ್ತಿದ್ದವು. ಆ ನಾಟಕ ಸಭೆಯ ಭಾಗವತರು ಬಲಿಪನಾರಾಯಣ ಭಾಗವತರು. ಅವರ ಹಾಡನ್ನು ಕೇಳಲು ಜನರು ಕಿಕ್ಕಿರಿದು ನೆರೆಯುತ್ತಿದ್ದರು. ನನ್ನ ತೀರ್ಥರೂಪರೂ ಕೂಡ ಭಾಗವತರ ಕೀರ್ತಿಗಾನ ಮಾಡುವವರಲ್ಲೊಬ್ಬರು. ಅವರ ಹಾಡನ್ನು ಕೇಳುವ ಉದ್ದೇಶದಿಂದಲೇ ಅವರು ಪ್ರತಿನಿತ್ಯವೂ ನಾಟಕ ನೋಡಲು ಹೋಗುತ್ತಿದ್ದರು. ನಾನು ಕೂಡಾ ಆಗಾಗ ಅವರೊಂದಿಗೆ ಹೋಗುತ್ತಿದ್ದೆ. ಅವರ ಮೃದು ಮಧುರವಾದ ಕಿನ್ನರ ಕಂಠವೇ ನನ್ನನ್ನು ಯಕ್ಷಗಾನದ ಕಡೆಗೆ ಆಕರ್ಷಿಸಿತು. ನಾನು ಕೂಡ ಅವರಂತೆ ಹಾಡುಗಾರನಾಗಬೇಕೆಂಬ ಅಭಿಪ್ರಾಯವು ಆಗಲೇ ನನ್ನ ಮನಸ್ಸಿನಲ್ಲಿ ಒಡಮೂಡಿತ್ತು. ಆಗ ನಾನು ವಿದ್ಯಾರ್ಥಿಜೀವನದಲ್ಲಿದ್ದೆ ಶಾಲಾ ವಿದ್ಯಾರ್ಥಿಯಾದ ಕಾರಣ ಈ ಕಲೆಯಲ್ಲಿ ಅಭ್ಯಾಸವನ್ನು ಮಾಡಲು ಅವಕಾಶ ದೊರಕಲಿಲ್ಲ. ಕಟ್ಟಕಡೆಗಾದರೂ ನನ್ನ ಇಚ್ಛೆಯು ನೆರವೇರಿತು. ಹಾಡುಗಾರನಾದೆ. ಆದರೆ, ಅವರಂತೆ ಹಾಡುವ ಯೋಗ್ಯತೆಯೂ ಪಾಂಡಿತ್ಯವೂ ನನಗೆ ಇದು ವರೆಗೆ ದೊರಕಲಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಆ ಕಲಾಯೋಗಿಯು ಹಾಡಿದ ಕೆಲವು ಹಾಡುಗಳು ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸು ತ್ತವೆ. ಯಕ್ಷಗಾನ ನಾಟಕಾರಂಭದಲ್ಲಿ ಸ್ತುತಿ ರೂಪವಾಗಿ ಆಗಾಗ ಅವರು ಹಾಡುತ್ತಿದ್ದ—"ಕೃಷ್ಣಾ ಮೂರುತಿ ಕಣ್ಣಾ ಮುಂದೆ ನಿಂತಿದಂತಿದೆ"— ಎಂಬ ಹಾಡು ಈಗಲೂ ನನ್ನ ಮನಃಪಟಲದಲ್ಲಿದೆ. ಕಲ್ಯಾಣಿ ರಾಗವನ್ನು ಸೇರಿಸಿ ಅಟತಾಳದಲ್ಲಿ ಆ ಹಾಡನ್ನು ಹಾಡುತ್ತಿದ್ದರು. ಆ ಸಂದರ್ಭದಲ್ಲಿ ಯಕ್ಷಗಾನ ಕಲಾಪ್ರೇಮಿಯಾದ ಕಣಿಪುರ ಶ್ರೀ ಗೋಪಾಲಕೃಷ್ಣ ಮೂರುತಿಯು ಹಾಡಿಗೊಲಿದು ಅವರ ಕಣ್ಣಮುಂದೆ ನಿಂತಿರುವನೋ ಎಂಬ ಭಾವನೆಯು ಶ್ರೋತೃಗಳಿಗಾಗುವ ರೀತಿಯಲ್ಲಿ ಭಾವಾವೇಶದಿಂದ ಹಾಡುತಿದ್ದರು. ಒಂದೊಂದು ಬಾರಿ "ಮಾಯಗಾರನು ನೀನೆ ಮಹಿಮನು ನೀನೆ"— ಎಂಬ ಆದಿ ತಾಳದ ಹಾಡನ್ನು ರಸಭರಿತವಾಗಿ ಹಾಡುತಿದ್ದರು. ಈ ಹಾಡನ್ನು ಹಾಡುವಾಗ ತಾಳದ ವೈವಿಧ್ಯ ವನ್ನು ತಾಳಗತಿಯಲ್ಲಿ ತನಗಿರುವ ಅದ್ಭುತ ಪಾಂಡಿತ್ಯವನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿ ಮಾಡುವ ಚೈತನ್ಯವು ಅವರಿಗಿದ್ದಿತು. ಆಯಾ ರಸಗಳಿಗನುಸಾರವಾಗಿ ಹಾಡನ್ನು ಹಾಡಿ ಪಾತ್ರಪರಿಪೋಷಣೆಯನ್ನು ಮಾಡಿ ಸಭಿಕರನ್ನು ಆನಂದಗೊಳಿಸುವ ದಿವ್ಯ ಶಕ್ತಿಯು ಆ ಕಲಾ ಯೋಗಿಗಿತ್ತು. ಅದರಲ್ಲೂ ಪಾರ್ತಿಸುಬ್ಬ ವಿರಚಿತ ಯಕ್ಷಗಾನ ಪ್ರಸಂಗಗಳನ್ನು ಹಾಡುವುದರಲ್ಲಿ ಅವರದು ಎತ್ತಿದ ಕೈ. ಸಂದರ್ಭಕ್ಕೆ ತಕ್ಕಂತೆ ಹಾಡಿ ಪಾತ್ರಧಾರಿಗಳು ಪಾತ್ರಪರಿಪೋಷಣೆಯನ್ನು ಮಾಡುವಂತೆ ಸಹಕರಿಸುತ್ತಿದ್ದರು. ಶ್ರೀರಾಮ ಪಟ್ಟಾಭಿಷೇಕದ ಸಂಭ್ರಮವನ್ನು ನೋಡಲು ಬಂಧು ಬಳಗದವರೂ, ಪರಿವಾರದವರೂ, ರಾಜಾಧಿರಾಜರೂ ಊರವರೂ ಎಲ್ಲರೂ ಬಂದು ನೆರೆದಿದ್ದರು. ಆದರೆ ಕೈಕಾದೇವಿಯು ಮಾತ್ರ ಬರಲಿಲ್ಲವೆಂಬುದನ್ನರಿತು ದಶರಥ ಚಕ್ರವರ್ತಿಯು ವಿಚಾರಿಸುವ ಪದ್ಯ ವನ್ನು ಬಹಳ ಚಲೋದಾಗಿ ಹಾಡುತ್ತಿದ್ದರು. "ಯಾಕೆ ಭರತನ ಮಾತೆ ಈ ಕಡೆಗೆ ಬರಲಿಲ್ಲ—" ಎಂಬ ಹಾಡನ್ನು ನಿಧಾನ ಝಂಪೆಯಲ್ಲಿ ರಸಭರಿತವಾಗಿ ಹಾಡುತ್ತಿದ್ದರು. ವೀರರಸ ಪ್ರಧಾನವಾದ ಹಾಡು

ಗಳನ್ನೂ ಅವರು ಹಾಡಿದರೆಂದರೆ ಇಡೀ ರಂಗಸ್ಥಳವೇ ಗಡಗಡನೆ ನಡುಗುವಂತಾಗುತಿತ್ತು. ಆ ಹಾಡು ಗಳು ಸಾಮಾನ್ಯ ಮೈಲಂದ್ದ ದೂರ ಕೇಳಿಸುತ್ತಿದ್ದವು. ಒಮ್ಮೆ ವಾಲಿಸಂಹಾರವೆಂಬ ಯಕ್ಷಗಾನ ಪ್ರಸಂಗ ದಲ್ಲಿ ಅವರು ಹಾಡುವುದನ್ನು ಕೇಳುವ ಸುಸಂದರ್ಭವು ನನಗೆ ಬಂದೊದಗಿತ್ತು. 'ಸೀತೆಯನ್ನು ಕಳ ಕೊಂಡ ನೀನೂ, ರುಮೆಯನ್ನು ಕಳಕೊಂಡ ನಾನೂ ಸಮಾನರು ಎಂದು ಸುಗ್ರೀವನು ಶ್ರೀರಾಮನಲ್ಲಿ ಹೇಳಿದ್ದೇ ಸರಿ–ಕೂಡಲೇ ಭಾಗವತರು 'ಕಣ್ಣಾರೆ ಕಂಡರೆ ಬಿಡುವೆನೆ ಸೀತೆಯ ಎನ್ನ ಮನೋಪ್ರೀತೆಯ'- ಎಂಬ ಹಾಡನ್ನು ಹಾಡಿದರು. ಆ ಹಾಡನ್ನು ಕೇಳಿ ನನ್ನ ಎದೆಯೆ ಗಡಗಡನೆ ನಡುಗಲಾರಂಭಿಸಿತು. ಪತ್ನೀವಿಯೋಗದಿಂದ ದುಃಖಾನ್ವಿತನಾದ ಶ್ರೀರಾಮನು ಕೂಡಲೇ ಕೈಯಲ್ಲಿದ್ದ ಬಿಲ್ಲನ್ನೆತ್ತಿ ತಟ್ಟನೆ ಎದ್ದು ನಿಂತ ದೃಶ್ಯವು ಈಗಲೂ ಕಣ್ಣಮುಂದೆ ನಲಿದಾಡುತ್ತದೆ. ಅವರ ಆ ವೀರರಸದ ಹಾಡು ದುಃಖಾನ್ವಿತ ನಾದ ಶ್ರೀರಾಮನಿಗೆ ಉತ್ತೇಜನವನ್ನು ಕೊಟ್ಟಿತು. ಇಲ್ಲಿ ಭಾಗವತರ ಚಮತ್ಕಾರವು ಎತ್ತಿ ಕಾಣುತ್ತದೆ. "ಕುಮಾರ ವ್ಯಾಸನು ಹಾಡಿದನೆಂದರೆ" ಹೇಗೆ "ಕಲಿಯುಗ ದ್ವಾಪರವಾಗುವುದೊ" ಹಾಗೆಯೇ ಬಲಿಪ ಭಾಗವತರು ಹಾಡಿದರೆಂದರೆ ಕಲಿಯುಗವು ತ್ರೇತಾಯುಗವಾಗದಿರದು. ಅಂತೂ ಯಕ್ಷಗಾನ ತಾಳ ಮದ್ದಳೆಯಲ್ಲೂ, ಬಯಲಾಟದಲ್ಲೂ ಭಾಗವತನೇ ಸೂತ್ರಧಾರಿ. ಅವನ ಪಾತ್ರವೇ ಮುಖ್ಯವಾದುದು. ಪಾತ್ರಧಾರಿಗಳ ಪಾತ್ರಪೋಷಣೆಯನ್ನು ಮಾಡತಕ್ಕವನು ಭಾಗವತನೆ. ಈ ಅದ್ಭುತ ಶಕ್ತಿಯನ್ನು ಪ್ರತ್ಯಕ್ಷೀಕರಿಸಿದವರು ಈ ಕಲಾಯೋಗಿಯೇ.

ಬಲಿಪರೆಂದರೆ ತುಂಬಿದ ಕೊಡ. ಜಂಭದ ಪ್ರಶ್ನೆಯೇ ಅವರಲ್ಲಿಲ್ಲ. ಯಕ್ಷಗಾನ ಕಲೆಯು ಶಾಶ್ವತವಾಗಿ ಉಳಿಯಬೇಕೆಂಬುದೇ ಅವರ ಉತ್ಕಟೇಚ್ಛೆ. ಆದಕಾರಣ ಯಾರಾದರೂ ಕಲೆಯ ಕೊಲೆ ಯನ್ನು ಮಾಡಲುಪಕ್ರಮಿಸಿದರೆ ಅವರನ್ನು ಕಟುವಾಗಿ ಟೀಕಿಸುವ ಪದ್ಧತಿ ಅವರಿಗಿತ್ತು. ಇದನ್ನು ಮತ್ಸರವೆನ್ನಲಾಗುವುದಿಲ್ಲ. ಅದು ಆಚಾರ್ಯನ ನೆಲೆಯಲ್ಲಿ ಹೇಳುವ ಹಿತವಚನವಲ್ಲದೆ ಮತ್ತೇನು? ಹಾಗೆ ಟೀಕಿಸುವುದು ಅವರ ಏಳಿಗೆಗೆಂದೇ ಭಾವಿಸತಕ್ಕದ್ದು.

ಬಲಿಪರ ಹಾಡುಗಾರಿಕೆಗೆ ಮೃದಂಗವಾದನ ಮಾಡುವುದೆಂದರೆ ಮೃದಂಗವಾದಕರಿಗೂ ತುಂಬಾ ಸಂತೋಷ. ಅವರ ಹಾಡಿಗೆ ಬಾರಿಸಿದರೆಂದಾದರೆ ಅವರಿಗೆ ದೊಡ್ಡ ಯೋಗ್ಯತಾಪತ್ರವು ದೊರಕಿ ದಂತೆಯೇ ಸರಿ. ಆದರೆ ಅವರ ಹಾಡಿಗೆ ಮದ್ದಳೆ ಬಾರಿಸತಕ್ಕ ಯೋಗ್ಯತೆಯುಳ್ಳವರು ಬೆರಳೆಣಿಕೆ ಯಷ್ಟು ಮಂದಿ ಮಾತ್ರ. ಅದರಲ್ಲೂ ಕೆಲವರಿಗೆ ಮೃದಂಗವಾದನವಲ್ಲದೆ. ಬೇರೆ ವ್ಯವಹಾರ ಜ್ಞಾನವೇ ಇಲ್ಲ. ಸಭೆಯಲ್ಲಿ ಹೇಗೆ ವರ್ತಿಸಬೇಕು, ಕಲೆಯ ಮೇಲ್ಮೆಗಾಗಿ ತಾವು ಏನು ಮಾಡಬೇಕೆಂಬುದರ ಪರಿ ಜ್ಞಾನವೇ ಅವರಿಗಿಲ್ಲ. ನಮ್ಮ ಮೃದಂಗ ವಾದನವನ್ನೇ ಕೇಳಲು ಜನರು ಬರುತ್ತಿದ್ದಾರೆಂಬೇ ಆ ಅವಿವೇಕಿಗಳ ಭಾವನೆ. ಅಂಥವರನ್ನು ಕಂಡರೆ ಮಾತ್ರ ಪೂಜ್ಯರಿಗಾಗುತ್ತಿರಲಿಲ್ಲ. ಒಂದೊಂದು ಸಂದರ್ಭದಲ್ಲಿ ಅಂಥವರು ಹಿಮ್ಮೇಳಕ್ಕೆ ಕುಳಿತರೆಂದಾದರೆ, ಸಭೆಯಲ್ಲೇ ಅವರ ಗರ್ವ ಭಂಗವನ್ನು ಮಾಡಿ, ಅವರನ್ನು ಸರಿದಾರಿಗೆ ತರುವ ಚಮತ್ಕಾರವು ಅವರಲ್ಲಿದ್ದಿತು.

ದಿವಂಗತ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರು ಬಲಿಪ ಭಾಗವತರ ಹಿತಾಪೇಕ್ಷಿಗಳಾಗಿದ್ದರು. ಯಕ್ಷಗಾನ ಕಲಾಭಿವೃದ್ಧಿಗಾಗಿ ತನು ಮನ ಧನಗಳನ್ನರ್ಪಿಸಿ, ಅದರ ಏಳಿಗೆಗಾಗಿ ತನ್ನ ಜೀವನವನ್ನೇ ಮೀಸಲಾಗಿಟ್ಟ ಯಕ್ಷಗಾನ ಕಲಾಚಾರ್ಯರುಗಳಲ್ಲಿ ಅವರೂ ಒಬ್ಬರಾಗಿದ್ದರು. ಅಂತಹ ವ್ಯಕ್ತಿಗಳು ಕೂಡ ಬಲಿಪ ಭಾಗವತರ ಕವಿತಾ ಪ್ರೌಢಿಮೆಯನ್ನೂ, ಹಾಡುಗಾರಿಕೆಯನ್ನೂ ಮನಬಿಚ್ಚಿ ಹೊಗಳು ತಿದ್ದರು. ಐಯ್ಯನಕಟ್ಟೆ, ಕಲಶ ಮೊದಲಾದ ಕಡೆಗಳಲ್ಲಿ ಬಲಿಪರು ಹಾಡುಗಾರಿಕೆಯಲ್ಲಿ ಜಯಭೇರಿ ಹೊಡೆದ ಕಥೆಯನ್ನು ಆಗಾಗ ಶೆಟ್ಟರು ನನ್ನಲ್ಲಿ ಹೇಳುತ್ತಿದ್ದರು. ಅಂತಹ ಘನ ವಿದ್ವಾಂಸರಲ್ಲಿ ಹೋಗಿ ಅಭ್ಯಾಸ ಮಾಡೆಂದು ಪದೇ ಪದೇ ನನ್ನನ್ನು ಒತ್ತಾಯಪಡಿಸುತಿದ್ದರು. ಅದಕ್ಕೂ ಭಾಗ್ಯಬೇಕಲ್ಲ.

ನನ್ನ ಮುಖ್ಯವೃತ್ತಿಗೂ ಅದಕ್ಕೂ ಹೊಂದಿಕೆಯಾಗಲಿಲ್ಲ. ಯಕ್ಷಗಾನ ಕಾಮಧೇನುವಿನ ಕೆಚ್ಚಲು ಬರಿದಾಗಿರಲಿಲ್ಲ. ಆದನ್ನು ಹೀರಿ ಸವಿಯುವ ಭಾಗ್ಯವು ಮಾತ್ರ ನನಗಿರಲಿಲ್ಲ. ಇನ್ನು ಬರಲಿಕ್ಕೂ ಇಲ್ಲ. ಯಕ್ಷಗಾನ ಕಲೆಯ ಏಳಿಗೆಗಾಗಿ ಅವರೆಲ್ಲರೂ ಮಾಡಿದ ಪ್ರಯತ್ನವು ಫಲಕಾರಿಯಾಗುವಂತೆ ಮಾಡೋಣ. ಅವರು ತೋರಿಸಿಕೊಟ್ಟ ಹಾದಿಯಲ್ಲೇ ಮುಂದುವರಿಯೋಣ. ಯಕ್ಷಗಾನ ಕಲೆಯು ಅಖಿಲ ಕರ್ಣಾಟಕದಲ್ಲಿ ತನ್ನ ಜಯಭೇರಿಯನ್ನು ಹೊಡೆಯುವಂತೆ ಮಾಡೋಣ. ಆ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನೊದಗಿಸೋಣ !

ಯಕ್ಷಗಾನ ಪಿತಾಮಹ – ನನ್ನ ಪಿತಾಮಹ

ಶ್ರೀ ಬಲಿಪ ನಾರಾಯಣ ಭಟ್ಟ, ಪಡ್ರೆ

ಪಡ್ರೆ ಗ್ರಾಮದ ಅಂಗ್ರಾಜೆ ಎಂಬುದು ನಮ್ಮ ತರವಾಡು ಮನೆ. ನನ್ನ ಅಜ್ಜ ನಾರಾಯಣ ಭಾಗವತರು. ಅವರ ಅಜ್ಜನ ಹೆಸರೂ ನಾರಾಯಣ ಎಂದೇ ಇತ್ತು. ಬಲಿಪರ ಮನೆತನದಲ್ಲಿ ಕೀರ್ತಿಶಾಲಿಗಳಾಗಿ ಬಾಳಿದ ಅನೇಕ ಮಹನೀಯರಿದ್ದರೆಂದು ನನ್ನ ಅಜ್ಜ ಹೇಳುತ್ತಿದ್ದರು. ಭಾಗವತರ ಅಜ್ಜ ದಿ। ಶ್ರೀ ಬಲಿಪ ಕೃಷ್ಣ ಭಟ್ಟ ಎಂಬವರು ಪ್ರಸಿದ್ಧ ಭಾಗವತರಾಗಿದ್ದರಂತೆ. ಪ್ರಾಯಶಃ ಇವರ ಸಂಸ್ಕಾರದಿಂದಲೇ ನಾರಾಯಣ ಭಾಗವತರಿಗೆ ಎಳವೆಯಿಂದಲೇ ಯಕ್ಷಗಾನದಲ್ಲಿ ಆಸಕ್ತಿ ಉಂಟಾಗಿರಬೇಕು.

ದಿ। ಶ್ರೀ ಬಲಿಪ ಮಹಾದೇವ ಭಟ್ಟರಿಗೆ ಶ್ರೀ ನಾರಾಯಣ ಭಟ್ಟ ಮತ್ತು ಶ್ರೀ ಶಂಕರ ಎಂಬ ಇಬ್ಬರು ಗಂಡು ಮಕ್ಕಳು. ಶ್ರೀ ಶಂಕರ ಭಟ್ಟರ ಮಗ ಶ್ರೀ ಬಲಿಪ ಮಾಧವ ಭಟ್ಟರೇ ನನ್ನ ತೀರ್ಥರೂಪರು. ಹೀಗಾಗಿ ಬಲಿಪರ ಮೊಮ್ಮಗನಾದ ನಾನೂ ಬಲಿಪ ನಾರಾಯಣ ಭಾಗವತನಾಗಿದ್ದೇನೆ.

ಅಜ್ಜನವರ ಕಲಾಪ್ರೌಢಿಮೆಯನ್ನೂ, ಕೀರ್ತಿಯನ್ನೂ ಕಂಡು ಕೇಳಿ ಚಿಕ್ಕ ಹುಡುಗನಾಗಿರುವಾಗಲೇ ನನಗೆ ಯಕ್ಷಗಾನದ ಹಾಡುಗಾರಿಕೆಯಲ್ಲಿ ಅನ್ಯಾದೃಶವಾದ ಆದರ ಗೌರವಗಳು ಉಂಟಾಗಿದ್ದವು. ನನ್ನ ಆಸಕ್ತಿಯನ್ನು ಗುರುತಿಸಿ ಅವರು ವಾತ್ಸಲ್ಯದಿಂದ ನನಗೂ ಭಾಗವತಿಕೆಯ ಅಭ್ಯಾಸವನ್ನು ಮಾಡಿಸಿದರು. ಅವರ ಉಪದೇಶಕ್ರಮ ಬಹಳ ವಿಚಿತ್ರವಾಗಿತ್ತು. ರಹಸ್ಯವಾದ ವಿಷಯಗಳನ್ನು ಮಾತ್ರ ಬಹಳ ಸೂಕ್ಷ್ಮವಾಗಿ ಹೇಳಿ ಕೊಡುತ್ತಿದ್ದರು. ಉಳಿದ ಸಾಧನೆ–ಅಭ್ಯಾಸಗಳನ್ನು ಶಿಷ್ಯನೇ ತನ್ನ ಪ್ರತಿಭೆಯಿಂದ ಮಾಡಿಕೊಳ್ಳಬೇಕಾಗಿತ್ತು.

ಮೊಮ್ಮಗನಾದ ನನ್ನ ಕುರಿತು ಬಾಹ್ಯವ್ಯವಹಾರದಲ್ಲಿ ಅವರು ತುಂಬ ನಿಷ್ಠುರರಾಗಿ ವರ್ತಿಸುತ್ತಿದ್ದಂತೆ ಹಲವರಿಗೆ ತೋರಿದ್ದುಂಟು. ಆದರೆ ಈ ನೈಷ್ಠುರ್ಯ ಪ್ರದರ್ಶನವು ಆಂತರಂಗಿಕವಾಗಿ ಅವರಿಗಿದ್ದ ಪ್ರೀತಿ ವಾತ್ಸಲ್ಯಗಳಿಗೆ ಪೋಷಕವೇ ಆಗಿತ್ತೆಂಬ ವಿಚಾರ ಅವರ ಅಂತರಂಗವನ್ನು ಅರಿತಿದ್ದ ನನಗೆ ಮಾತ್ರ ತಿಳಿದಿತ್ತು.

ಬಯಲಾಟಗಳಲ್ಲಿ ಭಾಗವತನು ನಿಂತುಕೊಂಡೇ ಹಾಡಬೇಕೆಂಬ ಹಳೆ ಸಂಪ್ರದಾಯವನ್ನು ಮುರಿದು, ಕುಳಿತು ಹಾಡುವ ಕ್ರಮವನ್ನು ಬಳಕೆಗೆ ತಂದುದು, ಮೃದಂಗ, ಚೆಂಡೆ, ಜಾಗಟೆ, ಚಕ್ರತಾಳ ಮುಂತಾದ ಎಲ್ಲ ವಾದ್ಯಗಳೂ ಏಕಶ್ರುತಿಯಲ್ಲಿ ಇರಬೇಕೆಂಬ ನಿಯಮವನ್ನು ಕಟ್ಟು ನಿಟ್ಟಾಗಿ ಪಾಲಿಸುವುದು, ವೇಷಗಳ ಮುಖವರ್ಣಿಕೆ, ಉಡುಪು ತೊಡುಪುಗಳು, ನೃತ್ಯ ಅಭಿನಯಭಂಗಿಗಳು, ಮಾತುಗಾರಿಕೆ ಮುಂತಾದ ಎಲ್ಲ ವಿಭಾಗಗಳಲ್ಲಿಯೂ ನಿಯಮ ಪಾಲನೆ ಮಾಡುವುದು ಮೊದಲಾಗಿ ಅನೇಕ ಸುಧಾರಣೆಗಳನ್ನು ಮೊಟ್ಟ ಮೊದಲಿಗೆ ನನ್ನ ಅಜ್ಜನವರೇ ಬಳಕೆಗೆ ತಂದಿದ್ದಾರೆ.

ನನ್ನ ಅಜ್ಜನವರ ವ್ಯಕ್ತಿತ್ವವು ಬಹುಮುಖವಾಗಿತ್ತು. ಬಾಲ್ಯದಲ್ಲಿ ಕೆಲವು ತಿಂಗಳ ಕಾಲ ಅವರು ವೇದಾಭ್ಯಾಸ ಮಾಡಿದ್ದರಂತೆ. ಅನೇಕ ರೀತಿಯ ಹೊಸ ಹೊಸ ಪಾಕಗಳನ್ನು ಸಿದ್ಧಗೊಳಿಸುವ ಉತ್ತಮ ಪಾಕಶಾಸ್ತ್ರಜ್ಞರೂ ಅವರಾಗಿದ್ದರು. ಬಯಲಾಟಗಳಲ್ಲಿ ಒಂದೆರಡು ಬಾರಿ ಕೀಚಕ, ಬಲರಾಮ ಮುಂತಾದ ವೇಷಗಳನ್ನೂ ಮಾಡಿದ್ದಾರಂತೆ. ಮೃದಂಗವಾದಕನಾಗಿ ಚೆಂಡೆವಾದಕನಾಗಿ ತಿರುಗಾಟವನ್ನೂ ಮಾಡಿದ್ದರಂತೆ. ಹೊಳೆಗಳಲ್ಲಿ ನೆರೆ ಬಂದಾಗಲೂ ನಿರ್ಭಯವಾಗಿ ಈಜಾಡುತ್ತಿದ್ದರು. ಕಡಿದಾದ ಬೆಟ್ಟವನ್ನೇರುವುದು, ಮರ ಹತ್ತುವುದು, ಇಕ್ಕಟ್ಟಾದ ಕಾಲು ಸಂಕಗಳನ್ನು ದಾಟುವುದು, ಹಳ್ಳಿಯ ದಾರಿಗಳಲ್ಲಿ ಕತ್ತಲು ಹೊತ್ತಿನಲ್ಲಿ ನಡಿಯುವುದು ಮುಂತಾದ ಕ್ಲಿಷ್ಟ ಕಾರ್ಯಗಳನ್ನು ಅವರು ತಮ್ಮ ಅಪರವಯಸ್ಸಿನಲ್ಲಿಯೂ ಅನಾಯಾಸವಾಗಿ ಮಾಡುತ್ತಿದ್ದರು.

ಮರಣಕ್ಕೆ ಪೂರ್ವಭಾವಿಯಾಗಿಯೇ ಅವರು ಯಕ್ಷಗಾನ ಹಾಡುಗಾರಿಕೆಯ ಅನೇಕ ರಹಸ್ಯ ವಿಚಾರಗಳನ್ನು ನನಗೆ ಉಪದೇಶಿಸಿ, ಜಾಗಟೆಯನ್ನು ಅನುಗ್ರಹಿಸಿ ಆಶೀರ್ವದಿಸಿದ್ದಾರೆ. ಭಗವಂತನ ಅನುಗ್ರಹದಿಂದಲೂ, ಅಜ್ಜನ ಆಶೀರ್ವಾದಬಲದಿಂದಲೂ, ಅಂತಹ ಅಜ್ಜನ ಮೊಮ್ಮಗ ಇವನು ಎಂದು ಹೇಳಿಸಿಕೊಳ್ಳುವ ಯೋಗ್ಯತೆ ನನಗುಂಟಾಗಲಿ ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.



ಎಳವೆಯ ಗೆಳೆಯ ಶ್ರೀ ನಾರಾಯಣ ಭಾಗವತರು

ಶ್ರೀ ಶಿರಂತಡ್ಕ ಹರಿಯಣ್ಣ ಭಟ್ಟ, ಪಡ್ರೆ

ದಿ। ಬಲಿಪ ನಾರಾಯಣ ಭಾಗವತರು ಜನಿಸಿದ ಮರು ಸಂವತ್ಸರದಲ್ಲಿಯೇ ಹುಟ್ಟಿದವನು ನಾನು. ಒಂದೇ ಗ್ರಾಮ ಜಾತಿ ಮತಗಳಿಗೆ ಸೇರಿದವರು ನಾವಾದ್ದರಿಂದ ಬಹಳ ಸಣ್ಣ ಪ್ರಾಯದಿಂದ ಕೊನೆಯ ತನಕ ಒಡನಾಡಿಗಳಾಗಿದ್ದೆವು. ಬಾಲ್ಯದ ಆಟಪಾಟಗಳು, ಯೌವನದ ಹುಚ್ಚು ಉತ್ಸಾಹಗಳು, ಮುಪ್ಪಿನ ಅನುಭವಗಳು, ಪ್ರತಿಯೊಂದರಲ್ಲೂ ಬಲಿಪರೊಂದಿಗೆ ಪಾಲುಗಾರನಾಗಿದ್ದೆ ನೆನ್ನುವ ವಿಚಾರದಿಂದ ನಾನು ತುಂಬ ಅಭಿಮಾನಪಡುತ್ತಿದ್ದೇನೆ.

ಹೆಚ್ಚಿನ ಮಹಾಪುರುಷರ ಜೀವನಸ್ವಭಾವದಂತೆ ಬಲಿಪರೂ ಕೂಡ ಹುಡುಗ ಪ್ರಾಯದಲ್ಲಿದ್ದಾಗ ತುಂಬಾ ತುಂಟತನದ ಸ್ವಭಾವವುಳ್ಳವರಾಗಿದ್ದರು. ಊರಿನಲ್ಲಿ ನಡೆಯುತ್ತಿದ್ದ ಯಾವುದೇ ತಂಟೆ ತಕರಾರುಗಳಲ್ಲಿಯೂ ಬಲಿಪರ ಪಾತ್ರ ಪ್ರಧಾನವಾಗಿರುತ್ತಿತ್ತು. ಅವರ ಸಹವಾಸದಲ್ಲಿದ್ದ ನಾವು ಕೂಡ ಅನೇಕ ಸಲ ಬಾಯಿಗೆ ಕೈಯಿಟ್ಟು ಹಿರಿಯರ ಮುಂದೆ ನಿಂತು ತನಿಖೆಗೆ ಈಡಾಗಬೇಕಾದ ಸಂದರ್ಭಗಳು ಒದಗಿ ಬಂದಿದ್ದವು. ಆದರೆ ಚಾಣಾಕ್ಷರಾಗಿದ್ದ ಬಲಿಪರು ಯಾವ "ಕೇಸಿ"ನಲ್ಲೂ ಸಿಕ್ಕಿಬೀಳದೆ ತಪ್ಪಿಸಿಕೊಳ್ಳುತ್ತಿದ್ದರು.

ಬಲಿಪರು ಎಳೆ ಪ್ರಾಯದಿಂದಲೇ ಒಳ್ಳೇ ಸ್ಫುರದ್ರೂಪಿಯಾಗಿದ್ದರು. ನಮ್ಮ ಜಾತಿಯವರ ಆಗಿನ ಕ್ರಮದಂತೆ ಸುಮಾರು ಹದಿನೆಂಟು ವರ್ಷ ಪ್ರಾಯವಾಗುವ ವರೆಗೆ ಅವರ ಕಿವಿಯಲ್ಲಿ ಕುಂಡಲಗಳೂ, ಕೈಯಲ್ಲಿ ಚಿನ್ನದ ಬಳೆಗಳೂ ರಾರಾಜಿಸುತ್ತಿದ್ದವು. ಅವರ ಆ ಕಾಲದ ವೇಷವನ್ನು ಈಗ ಸ್ಮರಿಸಿದರೆ ನಗು ಬರುತ್ತದೆ. ಮದುವೆಯಾದ ಮೇಲೆ ಈ ಬಳೆಗಳನ್ನು ತೆಗೆದಿದ್ದರು.

ನಾರಾಯಣ ಭಾಗವತರ ಹಿರಿಯರೊಬ್ಬರು ಬಲಿಪ ಕೃಷ್ಣ ಭಟ್ಟರೆಂಬವರು ಯಕ್ಷಗಾನ ಭಾಗವತರಾಗಿದ್ದರು. ದಿ। ಪಡ್ರೆ ಶ್ರೀಪತಿ ಶಾಸ್ತ್ರಿಗಳ ಸೋದರ ಮಾವ ಸೈಪಂಗಲ್ಲು ಅನಂತ ಭಟ್ಟರು ಒಳ್ಳೇ ವಿದ್ವಾಂಸರೂ ಶ್ರೇಷ್ಠ ಅರ್ಥಧಾರಿಗಳೂ ಆಗಿದ್ದರು, ಈ ಹಿರಿಯರ ಸಂಪರ್ಕ ಆದರ್ಶಗಳಿಂದ ಹುಡುಗರಾಗಿದ್ದ ನಾವೆಲ್ಲ ಸ್ವಾಭಾವಿಕವಾಗಿ ಯಕ್ಷಗಾನದ ಕಡೆಗೆ ಆಕರ್ಷಿಸಲ್ಪಟ್ಟೆವು. ಒಳ್ಳೆ ಕಂಠ ಮಾಧುರ್ಯವಿದ್ದ ಬಲಿಪರು ಹಾಡುಗಾರಿಕೆಯನ್ನು ಅಭ್ಯಾಸಮಾಡಿದರು. ದಿ। ಶ್ರೀಪತಿ ಶಾಸ್ತ್ರಿಗಳು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಗಳಿಸಿ ಪ್ರಸಿದ್ಧ ಅರ್ಥಧಾರಿಗಳಾದರು. ಮೃದಂಗವಾದನದ ಅಭ್ಯಾಸವನ್ನು ನಾನೂ ಮಾಡಿದ್ದೆ. ನನ್ನ ಕುಟುಂಬದವನೇ ಆಗಿದ್ದ ದಿ। ಸೈಪಂಗಲ್ಲು ನಾರಾಯಣ ಎಂಬವನೂ ಮೃದಂಗವಾದಕನಾಗಿದ್ದ. ಊರಿನಲ್ಲಿ ನಮ್ಮನ್ನು ಹೆಸರು ಹಿಡಿದು ಕರೆಯುವ ಬದಲು ಮದ್ದಳೆಗಾರರೆಂದೇ ಹೇಳುವ ವಾಡಿಕೆ ಇತ್ತು. ಯಕ್ಷಗಾನದ ಹುಚ್ಚು ಹಿಡಿದು, ಬಲಿಪರ ಸಹವಾಸದಲ್ಲಿದ್ದು ಹೊಂತಗಾರಿಕೆಯಲ್ಲಿ ನಮ್ಮ ಹೆಚ್ಚಿನ ಸಮಯ ತಾಳಮದ್ದಳೆ, ಬಯಲಾಟ ನಾಟಕ

ಮುಂತಾದ ಚಟುವಟಿಕೆಗಳಲ್ಲೇ ಕಳೆಯುತ್ತಿತ್ತು. ಭೋಜರಾಜನ ರಾಜ್ಯದಲ್ಲಿ ಕುರಿ ಮೇಯಿಸುವ ಕುರುಬನೂ, ಮಡಕೆ ಮಾಡುವ ಕುಂಬಾರನೂ ಸಂಸ್ಕೃತದಲ್ಲಿ ಕವಿತೆ ಮಾಡುತ್ತಿದ್ದನಂತೆ. ಹಾಗೆಯೇ ಆ ಕಾಲದಲ್ಲಿ ನಮ್ಮ ಪಡ್ರೆ ಗ್ರಾಮದಲ್ಲಿ ಯಕ್ಷಗಾನದ ಹಾಡುಗಾರಿಕೆ, ಮೃದಂಗವಾದನ, ಅರ್ಥ ವಿವರಣೆ, ವೇಷ ಹಾಕುವುದು—ಇತ್ಯಾದಿ ಯಾವುದಾದರೊಂದು ವಿಷಯವನ್ನು ಅಭ್ಯಾಸ ಮಾಡದಿರುವ ಒಬ್ಬನೇ ಒಬ್ಬ ವ್ಯಕ್ತಿಯಾದರೂ ಸಿಗುವುದು ದುರ್ಲಭವಾಗಿತ್ತು. ದಿ। ಶ್ರೀಪತಿ ಶಾಸ್ತ್ರಿಗಳ ಮತ್ತು ಬಲಿಪರ ನೇತೃತ್ವ, ಉತ್ಸಾಹ ಇದಕ್ಕೆ ಪ್ರಧಾನ ಕಾರಣವಾಗಿತ್ತು. ಬೇಕೆಂದಾದಾಗ ಐದೇ ನಿಮಿಷದಲ್ಲಿ ಒಂದು ತಾಳಮದ್ದಳೆಯು ಏರ್ಪಾಡಾಗುತ್ತಿತ್ತು. ಭಾಗವತರು, ಮೃದಂಗವಾದಕರು, ಅರ್ಥಧಾರಿಗಳು—ಎಷ್ಟು ಮಂದಿ ಬೇಕಾದರೂ ಸಿಗುತ್ತಿದ್ದರು. ಹೀಗಾಗಿ ಕೆಲವೊಮ್ಮೆ ತಿಂಗಳ ತನಕ ಪ್ರತಿದಿನವೂ ತಾಳ ಮದ್ದಳೆಗಳಾದುದೂ ಉಂಟು. ಬಲಿಪರು ಮೇಳದ ಭಾಗವತರಾಗಿ ತಿರುಗಾಟಕ್ಕೆ ಹೊರಟಾಗ ಒಂದೆರಡು ವರ್ಷ ಮೃದಂಗವಾದಕನಾಗಿ ನಾನು ಅವರನ್ನು ಹಿಂಬಾಲಿಸಿದ್ದೆ. ಆದರೆ ತಾಳಜ್ಞಾನದಲ್ಲಿ ಅವರ ಅಂತಸ್ತಿಗೆ ನನ್ನಿಂದ ಕೊನೆಯ ತನಕ ಮುಟ್ಟಲಾಗಲಿಲ್ಲ. ಅರ್ಧಂಬರ್ಧ ಅಭ್ಯಾಸ ಮಾಡಿ, ಅಬದ್ಧ ಮೃದಂಗ ಬಾರಿಸುವವರ ಸುದ್ದಿ ಬಂದಾಗ, "ಅದು ನಮ್ಮ ಹರಿಯಣ್ಣನ ಮದ್ದಳೆಯ ಹಾಗೆ" ಎಂದು ಬಲಿಪರು ಎಷ್ಟೋ ಸಲ ಸ್ನೇಹಾಚಾರದಿಂದಲೇ ತಮಾಷೆ ಮಾಡಿದ್ದುಂಟು.

ನೆರೆಯಲ್ಲಿ ಮುಳುಗಿದ ನಾಟಕ ಮಂಡಳಿ

ಶ್ರೀಪತಿ ಶಾಸ್ತ್ರಿಗಳ ಮತ್ತು ಬಲಿಪರ ಪ್ರೋತ್ಸಾಹ ಸಾಧನೆಗಳಿಂದ ಪಡ್ರೆಯಲ್ಲಿ ಒಂದು ಯಕ್ಷಗಾನ ನಾಟಕ ಮಂಡಳಿಯ ರಚನೆಯಾಗಿತ್ತು. ನಾನು ಅದರಲ್ಲಿ ಮೃದಂಗವಾದಕನಾಗಿಯೂ ಹಾಸ್ಯಗಾರನಾಗಿಯೂ ಎರಡು ಪಾತ್ರಗಳನ್ನು ನಿರ್ವಹಿಸುತ್ತಿದ್ದೆ. ಊರಿನ ಹಲವು ತರುಣರು ವೇಷಧಾರಿಗಳಾಗಿದ್ದರು. ಊರಿನಲ್ಲಿ ಮದುವೆ, ಉಪನಯನ ಪೂಜೆ–ಕೊನೆಗೆ ಶ್ರಾದ್ಧವಾದರೂ ಸರಿ—ಇತ್ಯಾದಿ ಯಾವ ವಿಶೇಷ ಸಮಾರಂಭ ಎಲ್ಲಿ ನಡೆದರೂ ಅಲ್ಲಿ ನಮ್ಮದೇ ಒತ್ತಾಯದಿಂದ ನಾಟಕ ನಡೆಯುತ್ತಿತ್ತು. ಮೃದಂಗವಾದಕನಾಗಿ ನಾನು ವಿಶೇಷ ಖ್ಯಾತಿಯನ್ನು ಗಳಿಸದಿದ್ದರೂ 'ಹಾಸ್ಯಗಾರ'ನೆಂಬ ಬಿರುದು ಈಗಲೂ ನನ್ನನ್ನು ಬಿಟ್ಟು ಹೋಗಲಿಲ್ಲ. "ಹಾಸ್ಯಕ್ಕೆ ಹರ್ಯಣ್ಣ" ಎಂದು ಈಗಲೂ ಊರಿನಲ್ಲಿ ನನ್ನನ್ನು ಲೇವಡಿ ಮಾಡುತ್ತಾರೆ.

ಕೆಲವು ನಾಟಕಗಳನ್ನಾಡಿ ನಮ್ಮ ಗ್ರಾಮದಲ್ಲಿ 'ಶಾಭಾಸ್ ಗಿರಿ'ಯನ್ನು ಪಡೆದ ನಮಗೆ ಪೇಟೆಗೂ ಹೋಗಿ ಕೀರ್ತಿಗಳಿಸಬೇಕೆಂಬ ಚಪಲ ಉಂಟಾಯಿತು. ವಿಟ್ಲ, ಪುತ್ತೂರು, ಪಾಣೆಮಂಗಳೂರು, ಬಂಟ್ವಾಳ ಮುಂತಾದ ಕಡೆಗಳಲ್ಲಿ ನಾಟಕವಾಡಬೇಕೆಂಬ ಉದ್ದೇಶದಿಂದ, ಇದ್ದ ಸಾಮಾನು ಕಟ್ಟಿಕೊಂಡು ನಮ್ಮ ಮೇಳ ಹೊರಟಿತು. ಮೊದಲ ಪ್ರದರ್ಶನ ಪುತ್ತೂರು ಪೇಟೆಯಲ್ಲಿ ಎಂದು ನಿಶ್ಚಯವಾಯಿತು. ಆದರೆ ದುರ್ದೈವವಶಾತ್ ನಾವು ಪುತ್ತೂರಿಗೆ ಬಂದ ದಿವಸವೇ ನಾಟಕವಾಡಲು ಸಾಧ್ಯವಿಲ್ಲವೆಂಬ ಪೋಲಿಸರ ತಡೆಯಾಜ್ಞೆ ನಮ್ಮ ಕೈಗೆ ಸಿಕ್ಕಿತು. ಆ ವರ್ಷ ನೇತ್ರಾವತಿ ನದಿಯಲ್ಲಿ ನೆರೆ ಬಂದು ಊರೆಲ್ಲ ಮುಳುಗಿದ್ದರಿಂದ ಹೀಗಾಯಿತು. ಪ್ರಥಮ ಪ್ರದರ್ಶನಕ್ಕೆ ತಡೆ ಬಂದದ್ದರಿಂದ ನಮ್ಮ ನಾಟಕ ಕಂಪೆನಿಯೂ ನೆರೆಯಲ್ಲಿ ಮುಳುಗಿ ಮಾಯವಾದಂತಾಯಿತು. ಪುತ್ತೂರಿನಿಂದ ನಿರಾಶರಾಗಿ ಹಿಂತಿರುಗಿದ ಮೇಲೆ ಕಂಪೆನಿಯ ಜನರೆಲ್ಲ ಒಬ್ಬೊಬ್ಬರು ಒಂದೊಂದು ಕಡೆ ಚದರಿ ಹೋದರು. ಬಲಿಪರು ಮೇಳಕ್ಕೆ ಹೋದರು. ಅಲ್ಲಲ್ಲಿ ಬಿದ್ದಿದ್ದ ಬಟ್ಟೆ-ಬರೆ ಸಾಮಾನುಗಳನ್ನೆಲ್ಲ ಯಾರ್ಯಾರೋ ಹಂಚಿಕೊಂಡರು. ಆಮೇಲೆ ನಾಟಕ ನಡೆಯಲಿಲ್ಲ.

ವಿನೋದದಿಂದ ಉಂಟಾದ ವಿಚಿತ್ರ ಸಂಕಟ

ಒಂದು ಸಲ ಪ್ರಸಿದ್ಧ ದೇವಸ್ಥಾನವೊಂದರಲ್ಲಿ ನಡೆದ ಭಾರೀ ತಾಳಮದ್ದಳೆಯೊಂದಕ್ಕೆ ಬಲಿಪ ರೊಂದಿಗೆ ನಾನೂ ಹೋಗಿದ್ದೆ. ಬಲಿಪ ಭಾಗವತರೂ, ಪ್ರಸಿದ್ಧ ಅರ್ಥಧಾರಿಗಳೂ ಬರುತ್ತಾರೆಂಬ ಸುದ್ದಿ ಹತ್ತು ಹದಿನೈದು ದಿನಗಳಿಂದ ಪ್ರಚಾರದಲ್ಲಿದ್ದುದರಿಂದ ತುಂಬ ಜನಸಂದಣಿ ನೆರೆದಿತ್ತು. ಎಲ್ಲ ಸಿದ್ಧತೆ ಗಳೂ ಆಗಿ ರಾತ್ರಿ ಯಕ್ಷಗಾನ ಪ್ರಾರಂಭವಾಗುವ ವೇಳೆಗೆ ದೇವಸ್ಥಾನದ ಆಡಳ್ತೆ ಮೊಕ್ತೇಸರರು ಠೀವಿ ಯಿಂದ ಬಲಿಪರ ಬಳಿ ಬಂದು ಕುಳಿತು, "ಭಾಗವತರೇ ! ಪ್ರಶಂಗ ಯಾವುದಾದೀತು ? ವಾಲಿಶುಗ್ರೀವರ ಕಾಳಗವೋ ಪಟ್ಟಾಭಿಸೇಕವೋ"ಎಂದು ಕೇಳಿದರು. ಎಲ್ಲವನ್ನೂ ಮಾಡಿಸುವವನೂ ತಿಳಿದವನೂ ತಾನೆಂಬ ಅಹಂಕಾರ ಅವರ ವರ್ತನೆಯಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಆದರೆ ಅವರಿಗೆ ಶ, ಷ, ಸ ಗಳ ಉಚ್ಚಾರ ಸರಿಯಾಗಿ ಬರುತ್ತಿರಲಿಲ್ಲ. ಬಲಿಪರ ಬಳಿಯಲ್ಲೇ ಕುಳಿತಿದ್ದ ನನಗೆ ಅವರ ಮಾತನ್ನು ಕೇಳಿ ಫಕ್ಕನೆ ಒಂದು ಚೇಷ್ಟೆ ಹೊಳೆಯಿತು. ನಾನೂ ಅವರ ಧ್ವನಿಯನ್ನೇ ಅನುಕರಿಸುತ್ತ ಹೇಳಿದೆ "ಪ್ರಶಂಗ ಯಾವುದಾದರೇನು ? ಶುಭದ್ರಾ ಪರಿಣಯ ಆದೀತು. ಶೂಧನ್ವಕಾಳಗ ಆದೀತು. ಯಾವುದೂ ಬೇಡವಾದ್ರೆ ಸಕುಂತಲಾ ಪರಿಣಯವಾದೀತು."

ನಾನು ಚೇಷ್ಟೆ ಮಾಡಿದೆನೆಂದು ಗೊತ್ತಾಗಿ ಅವರಿಗೆ ಸಿಟ್ಟು ಬಂತು. ನನ್ನ ಕಡೆ ತಿರಸ್ಕಾರ ದಿಂದ ಬೊಟ್ಟು ಮಾಡಿ ಬಲಿಪರೊಡನೆ, "ಯಾರು ಈ ಜನ ?" ಎಂದು ಕೇಳಿದರು. ಪರಿಸ್ಥಿತಿ ವಿಕೋಪಕ್ಕೆ ಬಂತೆಂದು ಬಲಿಪರಿಗೂ ಅರ್ಥವಾಯಿತು. ಅವರ ಸಿಟ್ಟು ಪ್ರಬಲವಾದರೆ ಅಂದಿನ ತಾಳಮದ್ದಳೆಯೇ ನಿಂತು ಹೋಗುವ ಸಂಭವವಿತ್ತು ಕೂಡಲೇ ಬಲಿಪರು ಪ್ರಸಂಗಾವಧಾನತೆಯಿಂದ ಅವರೊಡನೆ "ಇವರು ನಮ್ಮ ಊರಿನವರು. ಪಾಪ ಅವರಿಗೆ ಶ, ಷ, ಸಗಳ ಉಚ್ಚಾರ ಸರಿಯಾಗಿ ಬರುವುದಿಲ್ಲ. ಹೀಗೇ ಯಾವಾಗಲೂ ಮಾತನಾಡುತ್ತಾರೆ ಹೊರತು ತಮ್ಮನ್ನು ಗೇಲಿ ಮಾಡಿದ್ದಲ್ಲ" ಎಂದು ಸಮಾಧಾನದ ಮಾತನ್ನು ಹೇಳಿದರು. ಆ ಗಣ್ಯವ್ಯಕ್ತಿಗೆ ಇದು ಹೌದೆಂದು ತೋರಿತು. ಮಾತ್ರವಲ್ಲ ತನ್ನ ಜತೆಗೆ ಇನ್ನೊಬ್ಬನೂ ಇದ್ದಾನೆಂಬ ಸಮಾಧಾನವೂ ಆಯಿತು. ಆದರೆ ನನ್ನ ಫಜೀತಿ ಯಾರಲ್ಲಿ ಹೇಳಲಿ ! ಮರುದಿನ ಮಧ್ಯಾಹ್ನ ಅಲ್ಲಿಂದ ಹೊರಡುವ ವರೆಗೆ ಬಹಳ ಎಚ್ಚರಿಕೆಯಿಂದ, ಮಾತನಾಡುವ ಸಂದರ್ಭ ಬಂದಾಗಲೆಲ್ಲ ಶ, ಷ, ಸ ಗಳನ್ನು ವಿಪರ್ಯಾಸವಾಗಿಯೇ ಉಚ್ಚರಿಸುತ್ತಿದ್ದೆ. ಬಲಿಪರು ಈ ಬುದ್ಧಿ ವಂತಿಕೆಯನ್ನು ಮಾಡದಿದ್ದರೆ ನನ್ನ ಹಾಸ್ಯಪ್ರವೃತ್ತಿ ಅಂದು ಎಂತಹ ಅನಾಹುತವನ್ನು ಉಂಟು ಮಾಡುತ್ತಿತ್ತೊ !.

ಹರಿಯಣ್ಣನನ್ನು ನಂಬಿದರೆ ಹರನೇ ಗತಿ

ಇನ್ನೊಂದು ಕಡೆ ಯಕ್ಷಗಾನಕೂಟದಲ್ಲಿ ಇಂತಹದೇ ಒಂದು ವಿನೋದದ ಪ್ರಸಂಗ ಒದಗಿ ಬಂದಿತ್ತು. ಬಹಳ ವಿಜೃಂಭಣೆಯಿಂದ ಅಂದಿನ ತಾಳಮದ್ದಳೆಯನ್ನು ಏರ್ಪಡಿಸಿದ ವ್ಯವಸ್ಥಾಪಕರು ಯಾವುದೋ ಒಂದು ಅಪ್ರಸಿದ್ಧ ಪ್ರಸಂಗದ ಹೆಸರನ್ನು ಹೇಳಿ, ಅದೇ ಆಗಬೇಕೆಂದು ಹಟ ಹಿಡಿದರು. ಬಲಿಪರಿಗೆ ಪುಸ್ತಕ ನೋಡಿ ಪದ ಹೇಳುವ ಪರಿಪಾಠ ಇರಲಿಲ್ಲ. ಆ ಪ್ರಸಂಗ ಸಂಪೂರ್ಣ ಬಾಯಿ ಪಾಠವೂ ಬರುತ್ತಿರಲಿಲ್ಲ. "ಇಡೀ ಪ್ರಸಂಗ ನೆನಪಾಗುವುದಿಲ್ಲ. ಏನು ಮಾಡುವುದು ?" ಎಂದು ಕೇಳಿದರು. ನನ್ನ ದೊಡ್ಡಸ್ತಿಕೆಯ ಪ್ರದರ್ಶನಕ್ಕೆ ಒಂದು ಸಣ್ಣ ಅವಕಾಶ ದೊರೆಯಿತಲ್ಲ ಎಂಬ

ಚಾಪಲ್ಯದಿಂದ ನಾನು, "ನನಗೂ ಆ ಪ್ರಸಂಗದ ಪದ್ಯಗಳು ತಕ್ಕ ಮಟ್ಟಿಗೆ ಬಾಯಿಪಾಠ ಬರುತ್ತವೆ. ಇಬ್ಬರೂ ಸೇರಿ ಹೇಗಾದರೂ ಸುದರಿಕೆ ಮಾಡೋಣ" ಎಂದು ಹೇಳಿದೆ. ತಾಳಮದ್ದಳೆ ಸುರುವಾಯಿತು. ನನ್ನನ್ನು ಕೇಳಿ ಅಲ್ಲಲ್ಲಿ ನೆನಪು ಮಾಡುತ್ತ ಮಧ್ಯರಾತ್ರಿಯ ವರೆಗೆ ಬಲಿಪರು ಪದ್ಯ ಹಾಡಿದರು. ಮುಂದಕ್ಕೆ "ಇನ್ನೂ ಮುಂದಿನ ಪ್ರಸಂಗ ನನಗೆ ಏನೂ ನೆನಪಿಲ್ಲ ನೀನೇ ಹೇಳಬೇಕೆ"ಂದು ನನ್ನಲ್ಲಿ ಹೇಳಿದರು. ತಬ್ಬಿಬ್ಬಾದ ನಾನು "ಇಲ್ಲಿ ತನಕ ನನಗೂ ನೆನಪಿತ್ತು. ಮುಂದೆ ನನಗೂ ಬರುವುದಿಲ್ಲ" ಎಂದು ಹೇಳಿದೆ. ಸರಿ. ಆ ಪ್ರಸಂಗ ಅಲ್ಲಿಗೇ ಮುಕ್ತಾಯವಾಯಿತು. "ಹರ್ಯಣ್ಣನನ್ನು ನಂಬಿದರೆ ಒಟ್ಟೆ ದೋಣಿಯಲ್ಲಿ ಕುಳಿತ ಹಾಗೆ ದೇವರೇ ಗತಿ." ಎಂದು ಬಲಿಪರೂ ಉದ್ಗಾರವೆತ್ತಿದರು.

ಕೊಲ್ಲೂರಿನಲ್ಲಿ

ಒಂದು ಬಾರಿ ನಾನು, ಬಲಿಪಭಾಗವತರು, ಪಡ್ರೆ ಶ್ರೀಪತಿ ಶಾಸ್ತ್ರಿಗಳು ಹೀಗೆ ಮೂವರೂ ಒಟ್ಟಾಗಿ ಕೊಲ್ಲೂರು ಕ್ಷೇತ್ರಕ್ಕೆ ಯಾತ್ರೆ ಮಾಡಿದ್ದೆವು. ಕೊಲ್ಲೂರಿನಲ್ಲಿ ನಮ್ಮ ಪರಿಚಿತರು ಯಾರೂ ಇದ್ದಿಲ್ಲ. ಸಾಯಂಕಾಲ ಕ್ಷೇತ್ರವನ್ನು ಸೇರಿದವರು ವಾಡಿಕೆಯಂತೆ ಅಡಿಗರೊಬ್ಬರ ಮನೆಯಲ್ಲಿ ತಂಗಿದೆವು. ಸಾಮಾನ್ಯ ಯಾತ್ರಿಕರಂತೆ ನಮಗೂ ಒಂದೆರಡು ಚಾಪೆ ಕೊಟ್ಟು 'ಓ ಅಲ್ಲಿ ಮಲಕ್ಕೊಳ್ಳಿ ಬೆಳಗ್ಗೆ ಎದ್ದು ನಿಮ್ಮ ಸೇವೆಗಳನ್ನು ಮಾಡಿ ಹೋಗಿ' ಎಂದು ಸೂಚನೆ ಕೊಟ್ಟು ಅವರು ತಮ್ಮ ಕೆಲಸಕ್ಕೆ ಹೋದರು. ಆದರೆ ಹೊಳೆಯಲ್ಲಿ ಸ್ನಾನ ಮಾಡಿ ಬಂದು ಕುಳಿತು ಶಾಸ್ತ್ರಿಗಳು ಬಹಳ ಹೊತ್ತು ಜಪಮಾಡುತ್ತಿದ್ದುದನ್ನೂ, ಕಂಬಕ್ಕೆ ಒರಗಿ ಕುಳಿತ ಬಲಿಪರು ಯಕ್ಷಗಾನ ಪದ್ಯಗಳನ್ನು ಗುಣಿ ಗುಣಿಸುತ್ತ ಹಾಡುತ್ತಿದ್ದುದನ್ನೂ, ನಾನು ಕೈಗೆ ಸಿಕ್ಕಿದ ತಟ್ಟೆಯೊಂದರ ಮೇಲೆ ಮೃದಂಗದ ಪೆಟ್ಟುಗಳನ್ನು ಬಾರಿಸುತ್ತಿದ್ದುದನ್ನೂ, ನೋಡಿ-ಕೇಳಿ ಆ ಅಡಿಗರಿಗೆ ನಮ್ಮ ಬಗ್ಗೆ ಕುತೂಹಲವುಂಟಾಯಿತು. ಸಮೀಪ ಬಂದು ನಮ್ಮೆಲ್ಲರ ಪ್ರತ್ಯೇಕ ಪರಿಚಯವನ್ನು ಕೇಳಿದರು. ಅಗಾಧ ಸಂಸ್ಕೃತ ಪಾಂಡಿತ್ಯವನ್ನು ನೋಡಿ ಶಾಸ್ತ್ರಿಗಳಲ್ಲಿ ಅವರಿಗೆ ವಿಶೇಷ ಗೌರವವುಂಟಾಯಿತು. ಬಲಿಪರ ಕಂಠ ಮಾಧುರ್ಯವನ್ನೂ ಯಕ್ಷಗಾನ ಕಲಾ ಪ್ರೌಢಿಮೆಯನ್ನೂ ಅವರು ಬಹುವಾಗಿ ಮೆಚ್ಚಿದರು. ಪತ್ಯೇಕ ಅಡಿಗೆ ಮಾಡಿಸಿ ಸೊಗಸಾದ ಊಟವಿತ್ತು ನಮ್ಮನ್ನು ಸತ್ಕರಿಸಿದರು. ರಾತ್ರಿಯೆಲ್ಲ ಬಲಿಪರ ಹಾಡುವಿಕೆಯಲ್ಲಿ, ಪುರಾಣ ಶಾಸ್ತ್ರ ವೇದಾಂತ ವಿಷಯಗಳ ಚರ್ಚೆಯಲ್ಲಿ ಕಳೆಯಿತು. ಶ್ರೀ ಮೂಕಾಂಬಿಕೆಯ ಅನುಗ್ರಹದಿಂದ ತಾನು ರಚಿಸಿದ ಕೆಲವು ಸಂಸ್ಕೃತ ಶ್ಲೋಕಗಳ ಅರ್ಥವನ್ನು ವಿವರಿಸುವಂತೆ ಅವರು ಶಾಸ್ತ್ರಿಗಳನ್ನು ಕೇಳಿಕೊಂಡರು. ಶಾಸ್ತ್ರಿಗಳು ಸಮರ್ಪಕವಾಗಿ ಅರ್ಥ ವಿವರಿಸಿದರು.

ಮರುದಿನ ಅಡಿಗರು ತಾವಾಗಿ ಮುಂದೆ ನಿಂತು ನಮ್ಮ ಸೇವಾಕಾರ್ಯಗಳನ್ನು ತೃಪ್ತಿಕರವಾಗಿ ಮಾಡಿಸಿದರಲ್ಲದೆ ನಮಗೆ ಮೂವರಿಗೂ– "ಬಾಲಾಸರಸ್ವತೀ" ಮಂತ್ರೋಪದೇಶ ಮಾಡಿದರು. ಮತ್ತೊಂದು ದಿನ ನಾವಲ್ಲಿರುವಂತೆ ಒತ್ತಾಯಿಸಿ ಕೊನೆಗೆ ಅಭಿಮಾನದಿಂದ ನಮ್ಮನ್ನು ಬೀಳ್ಕೊಟ್ಟರು.

ಗುರು - ಶಿಷ್ಯ ಸಂಧಾನ

ತಮ್ಮ ಗುರುಗಳಾದ ಕೂಡ್ಲು ಸುಬ್ರಾಯ ಶಾನುಭಾಗರನ್ನು ಬಲಿಪರು ಬಹಳ ಭಯ ಭಕ್ತಿಗಳಿಂದ ಕಾಣುತ್ತಿದ್ದರು. ಅವರ ಆದೇಶದಂತೆ ಹಲವು ಬಾರಿ ಕೂಡ್ಲು ಮೇಳದ ಯಜಮಾನಿಕೆಯನ್ನು ವಹಿಸಿ

ಬಲಿಪರು ತಿರುಗಾಟಗಳನ್ನೂ ಮಾಡಿದ್ದರು. ಒಂದು ವರ್ಷ ಸಾಲದ ಹೊರೆ ಮಿತಿ ಮೀರಿ ಮೇಳವನ್ನು ಯಾರಲ್ಲಿಯೋ ಅಡವಿಟ್ಟು ಬಲಿಪರು ಕಣ್ಣು ತಪ್ಪಿಸಿ ಎಲ್ಲಿಯೋ ಮರೆಯಾದರು. ಅದೇ ವರ್ಷ ಸುಬ್ರಾಯ ಶಾನುಭಾಗರು ಅಸ್ವಸ್ಥರಾಗಿ ಹಾಸಿಗೆ ಹಿಡಿದರು. ಮರೆಯಲ್ಲಿದ್ದ ಬಲಿಪರಿಗೆ ಮರಣ ಶಯ್ಯೆಯಲ್ಲಿರುವ ತಮ್ಮ ಗುರುಗಳನ್ನು ಕಾಣಲೇಬೇಕೆಂಬ ತವಕ ಒಂದು ಕಡೆ, ಮೇಳವನ್ನು ಅಡವು ಮಾಡಿ ಅಪಾರ ನಷ್ಟ ಒದಗಿಸಿದ ತನ್ನನ್ನು ನೋಡಿ ಅವರು ಏನು ಹೇಳುವರೋ ಎಂಬ ಭೀತಿ ಇನ್ನೊಂದುಕಡೆ, ಹೀಗಾಗಿ ಅವರು ತುಂಬ ಕಾತರ ಸ್ಥಿತಿಯಲ್ಲಿದ್ದರು. ಒಂದು ದಿನ ನನ್ನನ್ನು ಕರೆದು, 'ಒಮ್ಮೆ ಕೂಡ್ಳಿಗೆ ಹೋಗಿ ನಾನು ಬರಬಹುದೇ ಎಂದು 'ಅವರಲ್ಲಿ' ಕೇಳಿ ಬರುತ್ತೀಯಾ? ಎಂದು ಹೇಳಿದರು. ಸಂತೋಷದಿಂದ ಒಪ್ಪಿಕೊಂಡು ಈ ಗುರುಶಿಷ್ಯ ಸಂಧಾನಕ್ಕೆ ನಾನು ಮುಂದಾದೆ.

ಕೂಡ್ಳಿಗೆ ಹೋಗಿ, ರುಗ್ಣಶಯ್ಯೆಯಲ್ಲಿ ಮಲಗಿದ್ದ ಶಾನುಭಾಗರೊಡನೆ ಬಲಿಪರ ಮಾತನ್ನು ಹೇಳಿದಾಗ, ಕೇಳಿದ ಅವರು ಕ್ಷಣಕಾಲ ಕಣ್ಣುಮುಚ್ಚಿ ಮೌನ ತಾಳಿದರು. ಆ ಮೇಲೆ ಎರಡು ಕಣ್ಣುಗಳಿಂದಲೂ ಕಣ್ಣೀರು ಸುರಿಯುತ್ತಿದ್ದಂತೆ ತಡವರಿಸುತ್ತ ಹೇಳಿದರು"– ಅವನು ಇಂದು ಬಂದಾನು ನಾಳೆ ಬಂದಾನು, ಎಂದು ಎಷ್ಟು ದಿನಗಳಿಂದ ಕಾದು ಕುಳಿತಿದ್ದೇನೆ ಗೊತ್ತೇ? ಹುಚ್ಚು ಮನುಷ್ಯ, ಏನೇನೋ ಊಹಿಸಿ ಭಯಪಡುತ್ತಿದ್ದಾನೆ. ಹಣ ನಷ್ಟವಾದರೇನಾಯಿತು? ನಾನೇನು ಧನಪಿಶಾಚಿ ಎಂದು ತಿಳಿದಿದ್ದಾನೆಯೇ? ನಾನು ಕಣ್ಣು ಮುಚ್ಚುವುದಕ್ಕೆ ಮೊದಲು ಅವನೊಮ್ಮೆ ಬಂದರೆ ಸಮಾಧಾನವಾಗುತ್ತಿತ್ತು."

ನನ್ನ ಸಂಧಾನ ಫಲಿಸಿತು. ಬಲಿಪರು ಅಧೈರ್ಯದಿಂದಲೇ ಹೋಗಿ ಗುರುಗಳನ್ನು ಕಂಡು ಆಶೀರ್ವಾದ ಪಡೆದು ಬಂದರು. ಇಬ್ಬರ ಮನಸ್ಸೂ ನಿರ್ಮಲವಾಯಿತು. ಮುಂದೆ ಕೆಲವೇ ದಿನಗಳಲ್ಲಿ ಕೂಡ್ಲು ಸುಬ್ರಾಯ ಶಾನುಭಾಗರು ದೈವಾಧೀನರಾದರು.

ಸತ್ತು ಬದುಕಿದರು

ಇನ್ನೊಮ್ಮೆ ಒಂದು ವಿಚಿತ್ರ ಪ್ರಸಂಗ ನಡೆದಿತ್ತು. 1930–31ರಲ್ಲಿ ಆಗಿರಬೇಕೆಂದು ನನ್ನ ನೆನಪು. ಕೆಲವೇ ದಿನಗಳ ಅಸ್ವಸ್ಥತೆಯಲ್ಲಿದ್ದ ಬಲಿಪರು ಕಟೀಲಿನಲ್ಲಿ ನಿಧನಹೊಂದಿದರೆಂಬ ವಾರ್ತೆ ಯಾರ ಮೂಲಕವೋ ಪಡ್ರೆಗೆ ತಲಪಿತು. ಇದರಿಂದ ಊರಿನಲ್ಲಿ ದೊಡ್ಡ ಹಾಹಾಕಾರವೆದ್ದಿತು. ಒಡನೆಯೇ ಸುದ್ದಿಯ ಸತ್ಯತೆಯನ್ನು ತಿಳಿಯುವುದಕ್ಕಾಗಿ, ಸತ್ಯವೇ ಎಂದಾದರೆ ಮುಂದಿನ ಕಾರ್ಯಭಾಗಗಳನ್ನು ನಡೆಸುವ ಸಲುವಾಗಿ ನಾನು, ಪಡ್ರೆ ಶ್ರೀಪತಿ ಶಾಸ್ತ್ರಿಗಳು ಕೋಟೆ ಸುಬ್ರಾಯ ಭಟ್ಟರು ಹೀಗೆ ಮೂರು ಮಂದಿ ಕಟೀಲಿಗೆ ಧಾವಿಸಿದೆವು. ಕಟೀಲನ್ನು ಸೇರಿದಾಗ, ಬಲಿಪರ ನಿಧನದಿಂದ ಊರೆಲ್ಲ ಚಿಂತಾಮಗ್ನವಾಗಿರಬಹುದೆಂಬ ಕಲ್ಪನೆಯಿಂದಲೂ ಬಲಿಪರ ಕಳೇಬರವನ್ನಾದರೂ ಕಾಣುವ ಯೋಗ ನಮಗೆ ಇದೆಯೋ ಇಲ್ಲವೋ ಎಂಬ ಸಂದೇಹದಿಂದಲೂ ನಮ್ಮ ಮನಸ್ಸು ತುಂಬ ವ್ಯಾಕುಲಗೊಂಡಿತ್ತು. ಆದರೆ ಅಲ್ಲಿ ಇಂತಹ ಯಾವ ಸೂಚನೆಯೂ ಕಂಡು ಬರಲಿಲ್ಲ. ಹೋಟೆಲೊಂದಕ್ಕೆ ಹೋಗಿ, ಅಂಜುತ್ತಲೇ "ಬಲಿಪ ಭಾಗವತರ ವಿಚಾರ ಏನಾದರೂ ಗೊತ್ತಿದೆಯೇ?" ಎಂದು ಕೇಳಿದೆವು. ಮಾಲಿಕರು, "ಗೊತ್ತಿಲ್ಲದೆ ಏನು? ಬೆಳಿಗ್ಗೆ ಬಂದು ಕಾಫಿ ಕುಡಿದು ಹೋಗಿದ್ದಾರೆ. ಈಗ ದೇವಸ್ಥಾನದಲ್ಲೋ ಆಡಳ್ತೆಗಾರರ ಮನೆಯಲ್ಲೋ ಇರಬಹುದು." ಎಂದು ನಿರ್ಲಿಪ್ತತೆಯಿಂದ ಉತ್ತರ ಕೊಟ್ಟರು.

ಅಪವಾರ್ತೆಯನ್ನು ಹರಡಿ ನಮ್ಮನ್ನು ಇಷ್ಟು ದೂರ ಓಡಿಸಿದ ದುಷ್ಟ ವ್ಯಕ್ತಿಯ ಮೇಲೆ ಮಿತಿ ಮೀರಿದ ಕೋಪ ಬಂದರೂ ಬಲಿಪರು ಸ್ವಸ್ಥರಾಗಿದ್ದಾರೆ ಎಂಬುದನ್ನು ಕೇಳಿ ಆನಂದದಿಂದ ನಲಿವಂತಾಯಿತು ನಮ್ಮ ಸ್ಥಿತಿ. ನಾವು ಕರಾಡಿ ಭಾಷೆ ಮಾತನಾಡುವುದನ್ನು ಕೇಳಿ ಮಾಲಿಕರು, "ನೀವು

ಬಲಿಪರ ಸಂಬಂಧಿಕರೋ, ಪಡ್ರೆಯವರೋ" – ಎಂದು ಕೇಳಿ, ಬಲಿಪರ ಮೇಲಿನ ಅಭಿಮಾನದಿಂದ ಕಾಫಿ ಕೊಟ್ಟು ನಮ್ಮನ್ನು ಉಪಚರಿಸಿದರು.

ಅಲ್ಲಿಂದ, ಆಡಳ್ತೆಗಾರರ ಮನೆಯಲ್ಲಿದ್ದಾರೆ ಎಂದು ತಿಳಿದು ಬಲಿಪರನ್ನು ಕಾಣಲು ನೇರವಾಗಿ ಅಲ್ಲಿಗೆ ಹೋದಾಗ ಅವರು ವೀಳ್ಯ ಜಗಿಯುತ್ತ, ಹರಟೆ ಹೊಡೆಯುತ್ತ ಕುಳಿತಿದ್ದರು. ಸತ್ತು ಹೋದ ಆತ್ಮೀಯ ವ್ಯಕ್ತಿಯ ಕಳೇಬರವನ್ನಾದರೂ ಕಾಣುವ ಭಾಗ್ಯ ಇದೆಯೋ ಇಲ್ಲವೋ ಎಂದು ಶಂಕಿಸುತ್ತ ದೂರದಿಂದ ಬಂದವನಿಗೆ ಆ ವ್ಯಕ್ತಿ ಆರೋಗ್ಯದಿಂದಿದ್ದು ಕುಳಿತು ನಗು ನಗುತ್ತ ಮಾತನಾಡುವ ದೃಶ್ಯವನ್ನು ಕಾಣುವ ಸುಯೋಗ ಪೂರ್ವಪುಣ್ಯದಿಂದಲೇ ಬರಬೇಕಷ್ಟೆ.

ಅಕಸ್ಮಾತ್ತಾಗಿ ಪ್ರತ್ಯಕ್ಷರಾದ ನಮ್ಮನ್ನು ಕಂಡು ಬಲಿಪರಿಗೆ ಆಶ್ಚರ್ಯವಾಯಿತು. "ಊರಿನಲ್ಲಿ ಏನು ವಿಶೇಷ? ಎಂದು ಸ್ವಲ್ಪ ಶಂಕಿಸುತ್ತಲೇ ಕೇಳಿದರು. 'ನೀವು ನಿಧನ ಹೊಂದಿದ ಸುದ್ದಿ ಬಂದುದೇ ದೊಡ್ಡ ವಿಶೇಷ' ಎಂದು ನಾವು ಉತ್ತರಿಸಬೇಕಿತ್ತು. ಆದರೆ ಗಂಭೀರ ಪ್ರಕೃತಿಯ ಶಾಸ್ತ್ರಿಗಳೂ ಸುಬ್ರಾಯನೂ ಮಾತು ಪ್ರಾರಂಭಿಸುವುದು ಹೇಗೆ, ಎಂದು ತಿಳಿಯದೆ ಮೌನವನ್ನೇ ತಾಳಿದ್ದರು. ಕೊನೆಗೆ 'ಹಾಸ್ಯಗಾರ' ಎನ್ನಿಸಿದ ನಾನೇ ನನ್ನ ಶೈಲಿಯಲ್ಲಿ ಮಾತನಾಡಿದೆ. "ನೀವು ಸತ್ತಿದ್ದೀರಿ ಎಂಬ ಸುದ್ದಿ ಊರಿಗೆ ಬಂತು. ಸರಿಯಾಗಿ ಸತ್ತಿದ್ದೀರೋ ಇಲ್ಲವೋ ಎಂದು ನಿಮ್ಮನ್ನೇ ಕೇಳಿ ಹೋಗೋಣ ಎಂದು ಬಂದಿದ್ದೇವೆ." ಎಂದು ಹೇಳಿದೆ. ನನ್ನ ಮಾತಿನಿಂದ ಎಲ್ಲರೂ ನಗುವಂತಾಯಿತು. ಬಲಿಪರೂ ಅದೇ ಧಾಟಿಯಲ್ಲಿ ಹೇಳಿದರು, "ಹಾಗೋ ಸಮಾಚಾರ, ಹಾಗಾದರೆ ಬಂದ ನೀವು ಇನ್ನು ಹತ್ತು ದಿನ ಆ ಕಡೆ ಹೋಗುವುದು ಬೇಡ. ಉತ್ತರ ಕ್ರಿಯೆಯ ಸಿದ್ಧತೆಗಳೆಲ್ಲ ಊರಿನಲ್ಲಿ ಮುಂದುವರಿಯಲಿ. ಕೊನೆಯ ವೈಕುಂಠ ಸಮಾರಾಧನೆಯ ದಿನ ನಾವೆಲ್ಲ ಒಟ್ಟಾಗಿ ಹೋಗಿ ಪರಮಾನ್ನದ ಭರ್ಜರಿ ಊಟ ಹೊಡೆಯುವ.

ಯಕ್ಷಗಾನದ ಜ್ವಲಂತ ತಾರೆ

ಕೊನೆಯ ಬಾರಿ ಎಂಬಂತೆ ಕಳೆದ '66ನೇ ನವಂಬರದಲ್ಲಿ ಬಲಿಪರು ಪಡ್ರೆಗೆ ಬಂದಿದ್ದರು. ಶ್ರೀಪತಿ ಶಾಸ್ತ್ರಿಗಳ ಅಣ್ಣ ಗುರು ವೆಂಕಟೇಶ ಭಟ್ಟರು, ಕೋಟೆ ಸುಬ್ರಾಯ ಭಟ್ಟ, ಅವನ ಅಣ್ಣ ಗಣಪತಿ ಭಟ್ಟ, ನಾನು – ಬಾಲ್ಯದ ಒಡನಾಡಿಗಳಾಗಿದ್ದ ಇನ್ನೂ ಅನೇಕರು ದಿ। ಶ್ರೀಪತಿ ಶಾಸ್ತ್ರಿಗಳ ಶ್ರಾದ್ಧದ ದಿನ ಮತ್ತೊಮ್ಮೆ ಒಂದೆಡೆ ಸೇರಿದ್ದೆವು. ಅಂದು ಒಂದು ತಾಳಮದ್ದಳೆಯೂ ಆಗಿತ್ತು. ಬಲಿಪರು ಶಾಸ್ತ್ರಿಗಳ ಮೇಲಣ ಗೌರವ ಬುದ್ಧಿಯಿಂದಲೋ ಏನೋ – ಆ ದಿನ ತಮ್ಮ ಶಕ್ತಿ ಮೀರಿ ಪಂಚವಟಿ ಪ್ರಸಂಗವನ್ನು ಸೊಗಸಾಗಿ ಹಾಡಿದ್ದರು. ಸುಖದುಃಖ ಮಾತನಾಡುವಾಗ 'ಇನ್ನು ಹೆಚ್ಚು ವಾಯಿದೆ ಇಲ್ಲ. ಗಂಟು ಕಟ್ಟಿ ತಯಾರಾಗುವ ಸಮಯ ಬಂತು. ನಮ್ಮಲ್ಲಿ ಯಾರು ಮೊದಲು ಯಾರು ನಂತರ ಎಂಬುದನ್ನು ಮಾತ್ರ ನೋಡಬೇಕಷ್ಟೆ." ಎಂದು ನಗುತ್ತಲೇ ಅವರು ಹೇಳಿದರು. ಅವರ ಭವಿಷ್ಯ ಸತ್ಯವಾಯಿತು. ಈ ಮಾತನ್ನಾಡಿದ ಕೆಲವೇ ದಿನಗಳಲ್ಲಿ ಬಲಿಪರು ನಮ್ಮನ್ನಗಲಿ ಹೋದರು. ಬಲಿಪರು ಗತಿಸಿ ಒಂದು ತಿಂಗಳಾಗುವಷ್ಟರಲ್ಲಿ ಅವರ ಅತ್ಯಂತ ನಿಕಟವರ್ತಿಯಾಗಿದ್ದ – ನನಗೆ ತಮ್ಮನಾಗಬೇಕಾದ – ಕೋಟೆ ಸುಬ್ರಾಯನೂ, ಕಳೆದ ಜೂನ್ ತಿಂಗಳಲ್ಲಿ ಗುರು ವೆಂಕಟೇಶ ಭಟ್ಟರೂ ದೈವಾಧೀನರಾದರು. ಈ ಪ್ರಮುಖ ವ್ಯಕ್ತಿಗಳನ್ನು ಕಳೆದುಕೊಂಡ ಪಡ್ರೆ ಗ್ರಾಮವು ಈಗ ಶೂನ್ಯವಾದಂತಾಗಿದೆ. ಆದರೂ ಯಕ್ಷಗಾನ ಕ್ಷೇತ್ರದಲ್ಲಿ ಜ್ವಲಂತ ತಾರೆಯಾಗಿ ಮಿನುಗಿ ನಮ್ಮ ಗ್ರಾಮಕ್ಕೂ ಸಮಾಜಕ್ಕೂ ವಿಶೇಷ ಕೀರ್ತಿಯನ್ನು ತಂದ ಬಲಿಪ ನಾರಾಯಣ ಭಾಗವತರ ಸ್ಮರಣೆ ಬಂದಾಗ ಮೈ ಪುಲಕಿತವಾಗುತ್ತದೆ.

ಇನ್ನೆಲ್ಲಿದೆ ಅಂತಹ ಘನ ಪಾಂಡಿತ್ಯ

ಶ್ರೀ ಕುದುರೆಕೂಡ್ಲು ರಾಮ ಭಟ್ಟ.

ಯಕ್ಷಗಾನದ ಘನ ವಿದ್ವಾಂಸರೂ ಪ್ರಸಿದ್ಧ ಭಾಗವತರೂ ಆಗಿರುವ ಶ್ರೀ ಮಾಂಬಾಡಿ ನಾರಾಯಣ ಭಾಗವತರ ಶಿಷ್ಯನಾಗಿ ನಾನು ಮೃದಂಗವಾದನವನ್ನು ಅಭ್ಯಾಸ ಮಾಡಿದೆ. ದಿ। ಸುಬ್ಬಣ್ಣ ಮದ್ದಳೆಗಾರರು, ಕದಿರೆ ಕಿಟ್ಟಣ್ಣನವರು, ಕೆಮ್ಮಣ್ಣು ನಾರ್ಣಪ್ಪಯ್ಯನವರು ಮುಂತಾದ ಶ್ರೇಷ್ಠ ಮೃದಂಗವಾದಕರು ಮದ್ದಳೆ ಬಾರಿಸುವುದನ್ನು ನಾನು ಕೇಳಿದ್ದೆ. ಒಬ್ಬೊಬ್ಬರಲ್ಲಿರುವ ಪಾಂಡಿತ್ಯ ಪ್ರತಿಭೆಗಳು ಒಂದೊಂದು ತೆರನಾಗಿದ್ದವು. ಅವುಗಳನ್ನೆಲ್ಲ ಅಳವಡಿಸಿ ಶ್ರೇಷ್ಠ ಮೃದಂಗವಾದಕನಾಗ ಬೇಕೆಂಬ ಹಂಬಲ ನನ್ನಲ್ಲಿತ್ತು.

ಯಕ್ಷಗಾನ ಭಾಗವತರಲ್ಲಿ ಏಕಮೇವಾದ್ವಿತೀಯರೆನಿಸಿದ ದಿ। ಬಲಿಪ ನಾರಾಯಣ ಭಾಗವತರ ಹೆಸರನ್ನು ನಾನು ಕೇಳಿದ್ದೆ. ಅವರ ಕಟ್ಟುನಿಟ್ಟಾದ ತಾಳಲಯದ ಕುರಿತು ಇತರ ಮೃದಂಗವಾದಕರು ಗೌರವ ಭಯ ಭಕ್ತಿಗಳಿಂದ ಮಾತನಾಡುತ್ತಿದ್ದ ವಿಚಾರವೂ ನನಗೆ ತಿಳಿದಿತ್ತು. ಸಾಮಾನ್ಯವಾಗಿ ಯಾವ ಮದ್ದಳೆಗಾರನಿಗೂ ಅವರೊಂದಿಗೆ ಹಿಮ್ಮೇಳದಲ್ಲಿ ಕುಳಿತುಕೊಳ್ಳುವ ಧೈರ್ಯವಿರುತ್ತಿರಲಿಲ್ಲ. ಬಲಿಪ ಭಾಗವತರ ಪದಕ್ಕೆ ಮದ್ದಳೆ ಬಾರಿಸಿ 'ಭಲೆ' ಎನಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ನನ್ನಲ್ಲಿ ಬಹು ದಿನಗಳಿಂದ ಮನೆ ಮಾಡಿಕೊಂಡಿತ್ತು. ಹಾಡುಗಾರಿಕೆಗೆ ಬಲಿಪ ಭಾಗವತರೆಂದಾದರೆ ಮೃದಂಗ ವಾದನಕ್ಕೆ ತಪ್ಪದೆ ಶ್ರೀ ಕೆಮ್ಮಣ್ಣು ನಾರ್ಣಪ್ಪಯ್ಯನವರನ್ನೇ ಬರಮಾಡುತ್ತಿದ್ದರು.

ಮೊದಲ ಅನುಭವ

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಕುಂಬಳೆಯಲ್ಲಿ ಶ್ರೀ ವಾಸುದೇವ ಭಟ್ಟ ಎಂಬವರು ಒಂದು ದೊಡ್ಡ ಯಕ್ಷಗಾನ ಕೂಟವನ್ನು ಏರ್ಪಡಿಸಿದ್ದರು. ಹಾಡುಗಾರಿಕೆಗೆ ಬಲಿಪ ನಾರಾಯಣ ಭಾಗವತರು ಎಂಬ ಸುದ್ದಿಯನ್ನು ಕೇಳಿ ಕುತೂಹಲದಿಂದ ನಾನು ಅಂದು ಕುಂಬಳೆಗೆ ಹೋಗಿದ್ದೆ. ದೂರದಲ್ಲಿ ಕುಳಿತು ಬಲಿಪರ ತಾಳಗತಿಯ ಚಮತ್ಕಾರವನ್ನೂ, ಅವರೊಂದಿಗೆ ಮೃದಂಗ ನುಡಿಸುವವರ ವೈಶಿಷ್ಟ್ಯವನ್ನೂ ಸರಿಯಾಗಿ ಪರಿಶೀಲಿಸಬೇಕೆಂದು ಸಂಕಲ್ಪ ಮಾಡಿದ್ದೆ.

ಆ ದಿನ ಪಂಚವಟಿ ವಾಲಿಸಂಹಾರ ಪ್ರಸಂಗವಾಗಿತ್ತು. ಬಲಿಪರು ತಮಗೆ ಪ್ರಿಯವಾದ ಆ ಪ್ರಸಂಗದ ಪದ್ಯಗಳನ್ನು ಸೊಗಸಾಗಿ ಹಾಡುತ್ತಿದ್ದರು. ನಾನು ನನ್ನಷ್ಟಕ್ಕೇ ದೂರದಲ್ಲಿ ಕುಳಿತು ಪ್ರತಿಯೊಂದು ಪದ್ಯವನ್ನು ಹಾಡುವಾಗಲೂ, ಅದನ್ನು ಮನಸ್ಸಿನಲ್ಲೇ ಆವರ್ತಿಸುತ್ತ ಕೈಯಲ್ಲಿ ತಾಳ ಹಾಕುತ್ತ ಹಾಡುಗಾರಿಕೆಯಲ್ಲಿ ಬಲಿಪರ ವೈಶಿಷ್ಟ್ಯವನ್ನು ಆಸ್ವಾದಿಸುತ್ತ ಇದ್ದೆ. ಅಷ್ಟರಲ್ಲಿ ವ್ಯವ

ಸ್ಥಾಪಕರು ನನ್ನ ಬಳಿಗೆ ಬಂದು, "ಒಂದೆರಡು ಪದ್ಯಗಳಿಗೆ ನೀವು ಮದ್ದಳೆ ಬಾರಿಸಬೇಕಂತೆ, ಬಲಿಪರು ಕರೆಯುತ್ತಾರೆ, ಬನ್ನಿ" ಎಂದು ನನ್ನನ್ನು ಕರೆದರು. ನನಗೆ ಒಮ್ಮೆಗೇ ಸಂತೋಷವೂ ಭಯವೂ ಉಂಟಾಯಿತು. ಬಲಿಪರೇ ಕರೆದುದು ನಿಜವಿರಬಹುದೇ? ಅಥವಾ ಇವರೇ ಹಾಗೆ ಹೇಳಿ ನನ್ನನ್ನು ಉಪಾಯದಿಂದ ಕುಳಿತುಕೊಳ್ಳಿಸುವ ಹಂಚಿಕೆ ಮಾಡಿರಬಹುದೇ ಎಂಬ ಸಂದೇಹವೂ ಉಂಟಾಯಿತು. ಏನೇ ಇರಲಿ. ಒಮ್ಮೆ ಅದೃಷ್ಟಪರೀಕ್ಷೆ ಮಾಡಿಯೇ ಬಿಡೋಣ ಎಂದು ಹೆದರಿಕೊಂಡೇ ಹೋಗಿ ಮೃದಂಗವಾದಕರ ಸ್ಥಾನದಲ್ಲಿ ಕುಳಿತುಕೊಂಡೆ.

ಕುಳಿತಾಗ ಬಲಿಪರೊಮ್ಮೆ ನಗುಮುಖದಿಂದಲೇ ನನ್ನ ಕಡೆಗೆ ನೋಡಿದರು. ಪ್ರೋತ್ಸಾಹದ ಸೂಚನೆಯೂ ಆ ದೃಷ್ಟಿಯಲ್ಲಿತ್ತು. ನನಗೂ ಸ್ವಲ್ಪ ಧೈರ್ಯ ಬಂದಂತಾಯಿತು. "ಮಾರೀಚ ನಿಶಾಚರ"— ಎಂಬ ಮುಂದಿನ ಪದ್ಯವನ್ನು ಬಲಿಪರು ಹಾಡತೊಡಗಿದರು. ಮಂದಗತಿಯ ಆದಿತಾಳ ದಲ್ಲಿ ಪ್ರಾರಂಭಿಸಿ ಮುಕ್ತಾಯಕೊಟ್ಟು ರೂಪಕದಲ್ಲಿ ಮುಂದುವರಿಸಿದರು. ರೂಪಕದ ಮುಕ್ತಾಯ ದೊಡನೆಯೇ ಕೊನೆಯ ಚರಣವನ್ನು ತ್ರಿವುಡೆಯಲ್ಲಿ ಹಾಡಿ ಏಕತಾಳದಲ್ಲಿ ಕೊನೆಗೊಳಿಸಿದರು. ತಾಳಗತಿಯ ಈ "ಸರ್ಕಸ್ಸು" ಬಹಳ ವಿಚಿತ್ರವಾಗಿತ್ತು, ದೈವಾನುಗ್ರಹದಿಂದ ಅವರು ಆರಂಭಿಸಿದ ಪ್ರತಿಯೊಂದು ತಾಳವೂ ನನಗೆ ಚೆನ್ನಾಗಿ ಮನವರಿಕೆಯಾಗಿತ್ತು ಮಾತ್ರವಲ್ಲ ಹಾಡಿದ ಪದ್ಯದ ಮನೋ ಧರ್ಮಕ್ಕೆ ಅನುಗುಣವಾಗಿ ನಾನು ನುಡಿಸಿದ ಮೃದಂಗದ ಗತಿಯೂ ಹೊಂದಿಕೆಯಾಗಿತ್ತು. ಪದ್ಯ ಮುಗಿದೊಡನೆಯೇ ಬಲಿಪರೊಮ್ಮೆ ಮೆಚ್ಚುಗೆಯ ದೃಷ್ಟಿಯಿಂದ ನನ್ನನ್ನು ನೋಡಿದರು. ನನ್ನ ಭೀತಿ ಎಲ್ಲೋ ಮಾಯವಾಯಿತು. ಹೊಸ ಉತ್ಸಾಹ ಬಂತು. ಮುಂದೆ ಬೆಳಗಿನ ತನಕ ಯಾವ ಅಳುಕೂ ಇಲ್ಲದೆ ನಾನು ಮೃದಂಗ ಬಾರಿಸಿದೆ. "ಹುಡುಗ ಚಿಂತೆ ಇಲ್ಲ, ಆಗಬಹುದು" ಎಂದು ಬಲಿಪರು ಆ ಮೇಲೆ ಹಲವರಲ್ಲಿ ಹೇಳಿದ್ದಾರೆಂಬ ವಿಚಾರ ನನಗೂ ತಿಳಿಯಿತು.

ಅಂದಿನಿಂದ ಆರಂಭವಾದ ನನ್ನ ಮತ್ತು ಬಲಿಪರ ಒಡನಾಟ ಕೊನೆಯ ತನಕ ಯಾವ ತಡೆಯೂ ಇಲ್ಲದೆ ಮುಂದುವರಿದಿತ್ತು. ಅವರು ಹಿರಿಯರು, ತಿಳಿದವರು, ಗುರುಗಳು ಎಂಬ ಭಾವ ನನ್ನ ಮನಸ್ಸಿನಲ್ಲಿತ್ತು. ಎಳೆಯವನು, ಶ್ರದ್ಧಾಳು, ಪ್ರತಿಭಾವಂತ ಎಂಬ ವಾತ್ಸಲ್ಯ ನನ್ನ ಮೇಲೆ ಅವರಿಗೂ ಇತ್ತು. ಹೀಗಾಗಿ ಸ್ಪರ್ಧೆ, ದ್ವೇಷ, ಮತ್ಸರ ಇತ್ಯಾದಿ ಭಾವನೆಗಳುಂಟಾಗುವ ಆಸ್ಪದವೇ ಇರಲಿಲ್ಲ.

ಅಪ್ರತಿಮ ಪಾಂಡಿತ್ಯ

"ಭಾಗವತನಂತೆ ಮೃದಂಗವಾದಕನಿಗೂ ಪ್ರಸಂಗದ ಪ್ರತಿಯೊಂದು ಪದ್ಯವೂ ಸರಿಯಾಗಿ ಬಾಯಿಪಾಠ ಬರಬೇಕು. ಸಂಪೂರ್ಣ ಅರ್ಥಜ್ಞಾನವೂ ಇರಬೇಕು. ಆದರೆ ಮಾತ್ರ ಅವನು ಉತ್ತಮ ಮೃದಂಗವಾದಕನಾಗಬಲ್ಲ". ಎಂದು ಬಲಿಪರು ಆಗಾಗ ಹೇಳುತ್ತಿದ್ದರು. ಈ ಮಾತು ಅಕ್ಷರಶಃ ಸತ್ಯ ಎಂಬ ಅನುಭವ ನನಗಾಗಿದೆ. ಯಾವುದೇ ಪದ್ಯವನ್ನಾದರೂ ಭಾಗವತರು ಹಾಡುತ್ತಿರುವಾಗ ತಾನೂ ಅದನ್ನು ಹಾಗೆಯೇ ಮನಸ್ಸಿನಲ್ಲೇ ಆವರ್ತಿಸುತ್ತ ಮೃದಂಗ ನುಡಿಸಿದರೆ ಸರಿಯಾದ ಹೊಂದಾಣಿಕೆಯಾಗುತ್ತದೆ. ರಸ ಭಾವಗಳಿಗೆ ಪುಷ್ಟಿ ದೊರೆಯುತ್ತದೆ. ತಾಳದ ಆವರ್ತಗಳನ್ನು ಮೃದಂಗದಲ್ಲಿ ಬಾರಿಸುವುದಕ್ಕೆ ಬದಲಾಗಿ ಪದ್ಯವನ್ನೇ ನುಡಿಸಿದಂತಾಗುತ್ತದೆ. ಇಂತಹ ಸಹಕಾರ ಮೃದಂಗವಾದಕನಿಂದ ದೊರೆತಾಗ ಭಾಗವತನ ಹಾಡುಗಾರಿಕೆಗೂ ಕಳೆ ಏರುತ್ತದೆ.

ಯಕ್ಷಗಾನ ಪ್ರಸಂಗಗಳಲ್ಲಿ ಬರುವ ಯಾವ ಹಾಡನ್ನು ಬೇಕಾದರೂ ಯಾವುದೇ ತಾಳದಲ್ಲಿ ಹಾಡುವ ಸಾಮರ್ಥ್ಯ ಬಲಿಪ ಭಾಗವತರಿಗಿತ್ತು. ತಾಳಕ್ಕೆ ಹೊಂದಿಕೆಯಾಗುವುದಕ್ಕೋಸ್ಕರ ಅರ್ಥಕ್ಕೆ ಭಂಗ ಬರುವಂತೆ ಪದಚ್ಛೇದಗಳನ್ನು ಮಾಡುವುದು, ಹ್ರಸ್ವವನ್ನು ದೀರ್ಘವಾಗಿ ಎಳೆಯುವುದು, ದೀರ್ಘಾಕ್ಷರವನ್ನು ಮೊಟಕು ಮಾಡುವುದು ಮುಂತಾದ ಯಾವ ವಿಕಾರಗಳನ್ನೂ ಬಲಿಪರು ಮಾಡುತ್ತಿದ್ದಿಲ್ಲ. ಅವರು ಲೀಲಾಜಾಲವಾಗಿ ಹಾಡುತ್ತಿರುವಾಗ ಕೇಳುವವನಿಗೆ ಹೀಗೆ ಹಾಡುವುದು ಬಹು ಸುಲಭ ಎಂದು ತೋರುತ್ತಿತ್ತು. ಆದರೆ ಸ್ವತಃ ತಾಳ ಹಾಕಿ ಹಾಡತೊಡಗಿದರೆ ಅದರ ಸಂಕೀರ್ಣತೆಯು ಅರಿವಾಗುತ್ತಿತ್ತು.

ಬಲಿಪ ಭಾಗವತರು ಹಾಡನ್ನು ಎತ್ತಿಕೊಳ್ಳುವಾಗಲೇ ಇಂತಹದೇ ತಾಳವೆಂದು ಯಾವ ಮೃದಂಗವಾದಕನಿಗೂ ಸ್ಪಷ್ಟವಾಗಿ ಗೊತ್ತಾಗುತಿತ್ತು. ಮಧ್ಯದಲ್ಲಿ ಮುಕ್ತಾಯ ಕೊಟ್ಟು ತಾಳವನ್ನು ಬದಲಾಯಿಸುವ ಬಲಿಪರ ಚಮತ್ಕಾರವು ಅದ್ಭುತವಾಗಿತ್ತು. ಝಂಪೆಯಿಂದ ತ್ವರಿತ ಝಂಪೆ, ತ್ರಿವುಡೆಯಿಂದ ಏಕತಾಳ. ರೂಪಕದಿಂದ ಏಕತಾಳ. ಅಷ್ಟತಾಳದಿಂದ ಏಕತಾಳ ಮುಂತಾದ ಪರಿವರ್ತನೆಗಳನ್ನು ಅನಾಯಾಸವಾಗಿ ಅವರು ಅಳವಡಿಸಿಕೊಳ್ಳುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಉತ್ತಮ ಮೃದಂಗವಾದಕನಿಗೆ ತನ್ನ ಕರ ಚಮತ್ಕಾರವನ್ನು ಸಂಪೂರ್ಣವಾಗಿ ಪ್ರಕಟಿಸಲು ಒಳ್ಳೆಯ ಅವಕಾಶ ದೊರೆಯುತ್ತದೆ.

ಸರಿಯಾದ ತಾಳಜ್ಞಾನವಿಲ್ಲದ ಭಾಗವತನೊಂದಿಗೆ ಮೃದಂಗ ನುಡಿಸಲು ಕುಳಿತಾಗ ಕೈ ಕಟ್ಟಿದಂತಾಗುತ್ತದೆ. ಮೃದಂಗವಾದಕನಿಗೆ ತನ್ನ ಪಾಂಡಿತ್ಯವನ್ನೆಲ್ಲ ಪ್ರದರ್ಶಿಸುವ ಅವಕಾಶವೇ ದೊರೆಯುವುದಿಲ್ಲ. ಹಾಗೇನಾದರೂ ಮಾಡಿದರೆ ಅಂತಹ ಭಾಗವತರು ತಾಳ ತಪ್ಪಿ ತಬ್ಬಿಬ್ಬಾಗಿ ಹೋಗುತ್ತಾರೆ. ವಿಷಮ ಗತಿಯಿಂದ ಬಾರಿಸುವಾಗ ಅಂಥವರಿಗೆ ತಾಳ ಹಿಡಿಯುವುದೇ ಕಷ್ಟವಾಗುತ್ತದೆ.

ಬಲಿಪ ನಾರಾಯಣ ಭಾಗವತರ ನಿಧನದೊಂದಿಗೆ ಯಕ್ಷಗಾನ ಭಾಗವತಿಕೆಯ ಸುವರ್ಣಯುಗವೊಂದು ಮುಕ್ತಾಯವಾದಂತೆ ನಮಗೆ ಅನುಭವವಾಗುತ್ತದೆ. ಇನ್ನು ಬಲಿಪ ಭಾಗವತರಿಲ್ಲ ಎನ್ನುವಾಗ ನಾವೆಲ್ಲ ತಬ್ಬಲಿಗಳಾಗಿದ್ದೇವೆ ಎನ್ನುವ ತೀವ್ರ ಕಳವಳವುಂಟಾಗುತ್ತದೆ. ಹೆಸರಿಗೆ, ಎಣಿಕೆಗೆ ಅದೆಷ್ಟೋ ಮಂದಿ ಭಾಗವತರಿರಬಹುದು. ಆದರೆ "ಕನಿಷ್ಠಿಕಾಧಿಷ್ಠಿತಕಾಲಿದಾಸಃ" ಎಂಬಂತೆ ಸಂಪೂರ್ಣ ಅರ್ಥದಲ್ಲಿ ಭಾಗವತರೊಬ್ಬರೆ, ಬಲಿಪ ನಾರಾಯಣ ಭಾಗವತರು.



ಹೂವಿನೊಂದಿಗೆ ಹಗ್ಗ

ಶ್ರೀ ನೆಡ್ಲೆ ನರಸಿಂಹ ಭಟ್ಟ.

ಯಕ್ಷಗಾನವೆಂದರೆ ದಿ| ಶ್ರೀ ಬಲಿಪ ನಾರಾಯಣ ಭಾಗವತರು, ಬಲಿಪ ಭಾಗವತರೆಂದರೆ ಯಕ್ಷಗಾನ ಎಂಬಷ್ಟೂ ಅವಿನಾಭಾವಸಂಬಂಧ ಯಕ್ಷಗಾನ ಮತ್ತು ಬಲಿಪರಲ್ಲಿತ್ತು. ಬಾಲ್ಯದಿಂದ ಕೊನೆಯ ತನಕ ಬಾಳಿನ ಉದ್ದಕ್ಕೂ ಯಕ್ಷಗಾನವೊಂದೇ ಅವರ ಮುಖ್ಯ ಪ್ರವೃತ್ತಿಯಾಗಿತ್ತು. ಓರ್ವ ತಪಸ್ವಿಯಂತೆ ಅವರು ಯಕ್ಷಗಾನ ಕಲೆಯನ್ನು ಸಾಧಿಸಿದರು, ಆರಾಧಿಸಿದರು.

ಮೊಟ್ಟ ಮೊದಲು ಬಲಿಪ ಭಾಗವತರ ಸಾಹಚರ್ಯ ಭಾಗ್ಯ ನನಗೆ ಒದಗಿ ಬಂದುದು ೧೯೩೩ರಲ್ಲಿ. ಶ್ರೀ ಕೆಮ್ಮಣ್ಣು ನಾರ್ಣಪ್ಪಯ್ಯನವರ ಮೃದಂಗವಾದನದೊಂದಿಗೆ ಬಲಿಪರ ಹಾಡುಗಾರಿಕೆಯಲ್ಲಿ ವಿಟ್ಲದಲ್ಲಿ ಒಂದು ಯಕ್ಷಗಾನ ಕೂಟ ನಡೆದಿತ್ತು. ತಮ್ಮ ಕ್ಷೇತ್ರದಲ್ಲಿ ಘನವಿದ್ವಾಂಸರಾದ ಈ ಇಬ್ಬರು ಮಹನೀಯರ ಕಲಾ ಪ್ರೌಢಿಮೆಯು ನನ್ನ ಮನಸ್ಸನ್ನು ಯಕ್ಷಗಾನದತ್ತ ಆಕರ್ಷಿಸಿತು. ಶ್ರೀ ನಾರ್ಣಪ್ಪಯ್ಯನವರೊಂದಿಗೆ ನಾನು ಮೃದಂಗವಾದನದ ಅಭ್ಯಾಸವನ್ನು ಪ್ರಾರಂಭಿಸಿದೆ. ಅವರ ಸಂಪರ್ಕದಿಂದ ನಾನೂ ಬಲಿಪರಿಗೆ ಅತ್ಯಂತ ಸಮೀಪದವನೂ ಆತ್ಮೀಯನೂ ಆದೆ. ಆ ಕಾಲದಲ್ಲಿ ಶ್ರೀ ನಾರ್ಣಪ್ಪಯ್ಯನವರೇ ಬಲಿಪರಿಗೆ ಮೆಚ್ಚಿನ ಮೃದಂಗವಾದಕರಾಗಿದ್ದರು. ಅವರ ಸಂಗಡ ಇದ್ದು ಹಲವು ಕೂಟಗಳಲ್ಲಿ ಬಲಿಪರ ಹಾಡುಗಾರಿಕೆಗೆ ನಾನೂ ಮೃದಂಗ ನುಡಿಸಿದೆ.

ಬಲಿಪರ ಹಾಡುಗಾರಿಕೆಯು ಸ್ವರ, ರಾಗ, ತಾಳ, ಸ್ಪಷ್ಟತೆ ಮುಂತಾದ ಎಲ್ಲ ವಿಚಾರಗಳಲ್ಲಿ ಎಲ್ಲರೂ ಮೆಚ್ಚುವಂತಿದ್ದರೂ ಮೃದಂಗವಾದಕರ ದೃಷ್ಟಿಯಿಂದ ಅದರಲ್ಲಿ ಪ್ರತ್ಯೇಕವಾದ ವೈಶಿಷ್ಟ್ಯವಿತ್ತು. ಅವರು ಹಾಡುವಾಗ ಜಾಗಟೆ ಹಿಡಿದು ತಾಳ ಹಾಕದೆ ಇದ್ದರೂ ಪದ್ಯದ ಗತಿಯನ್ನು ಅನುಸರಿಸಿ ಮೃದಂಗ ಬಾರಿಸಬಹುದಾಗಿತ್ತು. ಅವರ ತಾಳಗತಿಗೆ ನಿಶ್ಚಿತವಾದ ನಿಯಮವಿದ್ದುದರಿಂದ ಚೆನ್ನಾಗಿ ಪರಿಣತನಾದ ಮೃದಂಗವಾದಕನು ಸುಖವಾಗಿ ಅವರನ್ನು ಅನುಸರಿಸಬಹುದಾಗಿತ್ತು. ಒಂದೇ ಪದ್ಯವನ್ನು ಹಲವು ತಾಳಗಳಲ್ಲಿ ಆವರ್ತನಕ್ರಮದಲ್ಲಿ ಹಾಡುವ ಪರಿಪಾಠ ಅವರಿಗಿತ್ತು.

ಕಂದಪದ್ಯ, ಭಾಮಿನಿ, ವಾರ್ಧಿಕ ಮುಂತಾದವುಗಳನ್ನು ಹಾಡುವಾಗಲೂ ನಿಶ್ಚಿತವಾದ ಕ್ರಮದಲ್ಲಿ ಮೃದಂಗದಲ್ಲಿ ಛಾಪುಗಳನ್ನು ಹಾಕುತ್ತಿದ್ದರೆ ಮಾತ್ರ ಅವರಿಗೆ ಸರಿಹೋಗುತ್ತಿತ್ತು. ತಾಳ ಇಲ್ಲದಿದ್ದರೂ ಇವುಗಳನ್ನು ಹಾಕುತ್ತಿರುವಾಗ ರಾಗದ ಆರೋಹಣ ಅವರೋಹಣಗಳನ್ನು ಹೊಂದಿಕೊಂಡು ಮೃದಂಗದ ನಾದವು ಹೊರಹೊಮ್ಮುತ್ತಿರಬೇಕು. ಹಾಗಿದ್ದರೆ ಮಾತ್ರ ಹಿಮ್ಮೇಳವು ನಿಜವಾದ ಹಿಮ್ಮೇಳವೆನಿಸುತ್ತದೆ.

ಶ್ರೀ ಬಲಿಪ ಭಾಗವತರ ತಾಳಗತಿಯ ಗುಟ್ಟು ತಿಳಿಯದ ಮೃದಂಗವಾದಕರು ಅವರ ಹಾಡುಗಾರಿಕೆಗೆ ಮೃದಂಗ ಬಾರಿಸಲು ಅಂಜುತ್ತಿದ್ದರು. ಈ ಅಂಜಿಕೆ ಸ್ವಾಭಾವಿಕವಾಗಿತ್ತು. ಏಕೆಂದರೆ ಮೃದಂಗದ ನುಡಿಗಳು ತಮ್ಮ ಮನೋಧರ್ಮಕ್ಕೆ ಸರಿಬಾರದಿದ್ದರೆ ಅವರು ನಿಷ್ಠುರವಾಗಿ ಅಂತಹ

ಮದ್ದಳೆಗಾರರನ್ನು ಜರೆದು, ಝಡಿಸಿ ಎಬ್ಬಿಸುತ್ತಿದ್ದರು. ಅವರ ಮನೋಧರ್ಮದ ಅರಿವಿದ್ದ ಮೃದಂಗದವನಿಗೆ ಅವರೊಂದಿಗೆ ಸಹಕರಿಸುವಾಗ ಉಂಟಾಗುವಷ್ಟು ಸುಖ, ಸರಳತೆ ಬೇರೆ ಯಾವ ಭಾಗವತನಲ್ಲಿಯೂ ಸಿಗಲಾರದು. ಶ್ರೇಷ್ಠ ಮೃದಂಗವಾದಕನಿಗೆ ತನ್ನ ಸಂಪೂರ್ಣ ವಿದ್ವತ್ತನ್ನು ಪ್ರದರ್ಶಿಸಿ ಮೆರೆಯುವ ಸದವಕಾಶವು ಬಲಿಪರೊಂದಿಗೆ ಕುಳಿತಾಗ ಮಾತ್ರ ದೊರೆಯುತ್ತಿತ್ತು.

ಬಯಲಾಟದಲ್ಲಿ ವೇಷಧಾರಿಗಳು, ತಾಳಮದ್ದಳೆಯಲ್ಲಿ ಅರ್ಥಧಾರಿಗಳು, ತಮ್ಮ ತಮ್ಮ ಕ್ಷೇತ್ರದಲ್ಲಿ ಚೆನ್ನಾಗಿ ಪರಿಣತರಾದ ಅಭ್ಯಾಸಿಗಳಾಗಿಯೇ ಇರಬೇಕೆಂದು ಅವರು ಬಯಸುತ್ತಿದ್ದರು. ವೇಷಧಾರಿಗೆ ರಂಗಸ್ಥಳದ ಮಾಹಿತಿ, ನಾಟ್ಯ, ಅಭಿನಯ, ಕಥಾಪರಿಚಯ, ತಾನು ವಹಿಸುವ ಪಾತ್ರದ ಸ್ವಭಾವ ಗೌರವಗಳ ಸ್ಪಷ್ಟ ಅರಿವು ಮುಂತಾದವುಗಳೆಲ್ಲ ಸರಿಯಾಗಿ ಗೊತ್ತಿರಬೇಕು. ಹಾಗೆ ತಿಳಿದು ಭಾಗವತರೊಂದಿಗೆ ಸಹಕರಿಸಿ ಆರಂಭಿಸಿದ ಕಥಾಭಾಗ ನಿರ್ದಿಷ್ಟ ವೇಳೆಯಲ್ಲಿ ಮುಕ್ತಾಯವಾಗುವಂತೆ ಮಾಡಬೇಕು. ಯಕ್ಷಗಾನ ಸಾಮೂಹಿಕವಾಗಿ ಅಭಿವ್ಯಕ್ತವಾಗಿ ರಸಾವಿಷ್ಕಾರವನ್ನುಂಟುಮಾಡುವ ವಿಶಿಷ್ಟಕಲೆ, ಇದರಲ್ಲಿ ವೈಯುಕ್ತಿಕ ಪ್ರತಿಷ್ಠೆಗೆ ಸ್ಥಾನವಿಲ್ಲ. ಕಲಾವಿದನೊಬ್ಬ ಇತರರನ್ನು ಅಲಕ್ಷಿಸಿ ತನ್ನೊಬ್ಬನ ಘನತೆಯೋಗ್ಯತೆಗಳನ್ನು ಮಾತ್ರ ಪ್ರದರ್ಶಿಸಲು ಮುಂದೆ ಬಂದರೆ ಕಲೆಗೆ ಅಪಚಾರವಾಗುತ್ತದೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು.

ಶ್ರೀ ಬಲಿಪ ನಾರಾಯಣ ಭಾಗವತರ ಉಪದೇಶ ಸಂಪರ್ಕಗಳಿಂದಲೇ ಹಲವು ಯಕ್ಷಗಾನ ಕಲಾವಿದರು ಪ್ರಸಿದ್ಧಿಗೆ ಬಂದಿದ್ದಾರೆ. ಅವರ ಒಡನಾಟದ ಭಾಗ್ಯದಿಂದಲೇ ನಾನೂ ಒಬ್ಬ ಮೃದಂಗ ವಾದಕನೆನಿಸಿಕೊಂಡೆ. ಮಲ್ಲಿಗೆಯ ಘನತೆಯಿಂದ ಹಗ್ಗಕ್ಕೂ ಬೆಲೆ ಬರುವಂತೆ ಬಲಿಪರ ಸಹವಾಸದಿಂದ ಯಕ್ಷಗಾನದಲ್ಲಿ ನನಗೂ ಅಳಿಲಸೇವೆ ಮಾಡುವ ಅವಕಾಶ ದೊರೆಯಿತು. ಯಕ್ಷಗಾನದ ಪ್ರತಿಯೊಂದು ಅಂಗದಲ್ಲಿಯೂ ಬಲಿಪ ಭಾಗವತರಿಗೆ ಅಸಾಧಾರಣವಾದ ಪಾಂಡಿತ್ಯವಿತ್ತು. ಆದ್ದರಿಂದಲೇ ನನಗೆ ಅವರಲ್ಲಿ ಭಕ್ತಿಶ್ರದ್ಧೆಗಳು ತಾನಾಗಿ ಒಡಮೂಡಿವೆ.

ಶ್ರೀ ಬಲಿಪ ಭಾಗವತರ ವಿಷಯದಲ್ಲಿ ಆಂತರಂಗಿಕವಾಗಿ ನನಗಿದ್ದ ಮೂಕಭಕ್ತಿಯ ಫಲವೋ ಎಂಬಂತೆ ಅವರು ತಮ್ಮ ಬದುಕಿನ ಕೊನೆಯ ಭಾಗವತಿಕೆಯನ್ನು ಮಾಡಿದಾಗ ಮೃದಂಗ ಬಾರಿಸುವ ಭಾಗ್ಯ ನನ್ನ ಪಾಲಿಗೆ ಒದಗಿ ಬಂತು. ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಹೋಗಿ ತಮ್ಮ ಪರವಾಗಿ ಒಂದು ಯಕ್ಷಗಾನ ಸೇವೆ ನಡೆಯಬೇಕೆಂದು ಬಯಸಿದ ಬಲಿಪರು ಮೃದಂಗವಾದನಕ್ಕೆ ಬರಬೇಕೆಂದು ನನಗೆ ಹೇಳಿ ಕಳುಹಿಸಿದ್ದರು. ಅಂದು ಭಾವಪೂರ್ಣವಾಗಿ ಅವರು ಹಾಡಿದ್ದರು. ನಾನೂ ಶ್ರದ್ಧೆಯಿಂದ ಮೃದಂಗ ಬಾರಿಸಿದೆ. ಅಂದಿಗೆ ನನ್ನ ಬದುಕಿನಲ್ಲಿಯೂ ಒಂದು ಅಧ್ಯಾಯ ಪೂರ್ಣವಾಯಿತು. ಇನ್ನು ಬಲಿಪರ ಪದ್ಯಕ್ಕೆ ಮೃದಂಗ ಬಾರಿಸುವ ಯೋಗವಿಲ್ಲ. ಘನಗರ್ಜನೆಯಂತೆ ಗಂಭೀರವಾದ ಅವರ ನಾದವನ್ನು ಕೇಳುವ ಭಾಗ್ಯವಿಲ್ಲ. ಆದರೂ ಬದುಕಿರುವಷ್ಟು ಕಾಲ ಅವರ ಆ ಭವ್ಯ ವ್ಯಕ್ತಿತ್ವವನ್ನು ಎಂದೆಂದಿಗೂ ಮರೆಯುವಂತಿಲ್ಲ.

* * * * * *

* * *

*

ಮಮತೆಯ ಬಳ್ಳಿ

ಶ್ರೀ ಕುರ್ಯ ವಿಠಲ ಶಾಸ್ತ್ರಿ

ಚಿಕ್ಕಂದಿನಿಂದಲೇ ತಾಳಮದ್ದಳೆಗಳೆಂದರೆ ನನಗೆ ಬಹು ಮೆಚ್ಚಿಗೆ. ಸಾಮಾನ್ಯ ನನ್ನ 7–8ರ ಪ್ರಾಯದಲ್ಲಿ, ಮಳೆಗಾಲದ ಒಂದು ದಿನ, ಪೂಜ್ಯ ತೀರ್ಥರೂಪರು ನನ್ನನ್ನು ಕರೆದು. ನಮ್ಮ ಮನೆ ಮಾತಿನಲ್ಲಿ–

"ಮಗೂ, ಇಂದು ಕಸ್ತಲಗೆ ಬಲಿಪ ಮಾವ ಬಕ್ಕು. ಪದ ಹೇಳುಲೆ ಇದ್ದು" ಎಂದರು.

"ಬಲಿಪ ಮಾವ" ಎಂದರೆ ಯಾರು? ಅವರು ಬರುವುದರಲ್ಲಿ ವಿಶೇಷವೇನಿದೆ? ಎಂದು ಪ್ರಶ್ನಿಸಿದೆ.

ಬಲಿಪ ಮಾವ ಎಂದರೆ ಬಹು ದೊಡ್ಡ ಭಾಗವತರು.ಆಟ–ತಾಳಮದ್ದಳೆಗಳಲ್ಲಿ ಈಗ ಇವರು ಎಲ್ಲಭಾಗವತರನ್ನು ಮೀರಿಸಿ ನಿಂತವರು . ಅವರ "ಪದ" ವೆಂದರೆ ಅಷ್ಟು ಚೆನ್ನಾಗಿದೆ. ನಾವು ಅಣ್ಣ–ತಮ್ಮಂದಿರ ಹಾಗೆ. ನಮ್ಮೊಳಗೆ ಅಷ್ಟೊಂದು ಅನ್ಯೋನ್ಯ ಎಂದೆಲ್ಲ ತಂದೆಯವರು ವಿವರಿಸಿದರು.

ಆಗಿನಿಂದಲೇ ಅವರು ನನ್ನಲ್ಲಿ ಗೌರವ ಮೂಡಿಸಿದರು. ಭಾಗವತರ ಬಗೆಗೆ ಪೂಜ್ಯ ಭಾವನೆ ಮೂಡಿ ಬಂದಿತು. ಅವರ ಹಾಡುಗಾರಿಕೆಯನ್ನು ಕೇಳುವ ಕುತೂಹಲ ಕೆರಳಿತು.

ಆ ರಾತ್ರಿ ನಮ್ಮಲ್ಲಿಗೆ ಬರಲು ಭಾಗವತರಿಗೆ ಏಕೋ ಅನಾನುಕೂಲವಾಯಿತು. ಮಲಗಿ ನಿದ್ರಿಸುವ ಹೊತ್ತಿನ ವರೆಗೂ "ಭಾಗೋತ ಮಾವ ಬರಲಿಲ್ಲ. ಬರಲಿಲ್ಲ, ಏಕೆ ಬರಲಿಲ್ಲ?" ಎಂಬುದೇ ನನ್ನ ಮತ್ತು ನನ್ನ ತಮ್ಮನ ರಾಗ. ಅಡಿಗಡಿಗೆ ತೀರ್ಥರೂಪರೊಡನೆ ವಿಚಾರಿಸುವುದೇ ಕೆಲಸ. ನಿರಾಶೆಯಿಂದಲೇ ನಮ್ಮಿಬ್ಬರ ನಿದ್ರೆ.

ಮಾರನೆಯ ದಿನ ಮಧ್ಯಾಹ್ನ ನಾವಿಬ್ಬರೂ ಊಟ ಮಾಡುತ್ತಿದ್ದೆವು. ಊಟದ ಜಗಲಿಗೆ ಕಾಣಿಸುತ್ತಿದ್ದ ನಮ್ಮ ಮನೆಯಂಗಳಕ್ಕೆ ಇಳಿದು ಬರುವ ಗುಡ್ಡದದಾರಿಯ ಕಡೆಗೆ ಕಣ್ಣುಹಾಯಿಸಿದ್ದೆ. ತನ್ನ ದೇಹದಷ್ಟೇ ಉದ್ದದ ನಾಗರ ಬೆತ್ತವನ್ನು ಊರುತ್ತಾ ಒಂದೊಂದೇ ಮೆಟ್ಟಲುಗಳನ್ನು ಇಳಿದು ಬರುತ್ತಿದ್ದ ಒಬ್ಬರು, ಅವರ ಹಿಂದಿನಿಂದಲೇ ಬರುತ್ತಿದ್ದ ಹಣ್ಣು ಮೀಸೆಯ ಮುದುಕರಿನ್ನೊಬ್ಬರು ಕಾಣಿಸಿದರು. ನಮ್ಮ ಮನೆ, ಹಟ್ಟಿ, ತೋಟ ಇತ್ಯಾದಿಗಳನ್ನು ತೋರಿಸಿ ನಡೆಯುವ ವರ್ಣನೆಯ ಮಾತುಗಳು ಕೇಳಿಸಿದುವು.

ಬಂದ ವ್ಯಕ್ತಿಯ ಸುಳಿವು ಸಿಕ್ಕಿದಂತಾಯಿತು. ಊಟ ಅಲ್ಲೆ ಉಳಿಯಿತು. "ಭಾಗೋತ ಮಾವ ಬಂದಾ SSSS" ಎಂದು ಎದ್ದಿತು ನಮ್ಮಿಬ್ಬರ ಬೊಬ್ಬೆ. ಅರೆ ಊಟದ ಕೈಯನ್ನೂ ತೊಳೆಯದೆ ನಾವಿಬ್ಬರೂ ಅಂಗಳಕ್ಕೆ ಹಾರಿದೆವು. ತುಳಸಿ ಕಟ್ಟೆಯನ್ನು ಸಮೀಪಿಸಿದ್ದ ಭಾಗವತರು ನನ್ನನ್ನು ಸಮೀಪಿಸಿ ಬೆನ್ನು ತಟ್ಟಿ "ಬಾ ಮಗ" ಎಂದರು.

ಪೂಜೆಯಲ್ಲಿದ್ದ ತಂದೆಯವರಿಗೆ ನನ್ನ ತಮ್ಮ ಆಗಲೇ ಸುದ್ದಿ ಮುಟ್ಟಿಸಿದ್ದ.

ನೀರ ತಂಬಿಗೆಗಳೆರಡನ್ನು ಮಾತೋಶ್ರೀಯವರು ಹೊರ ಜಗಲಿಗೆ ತಂದಿಟ್ಟರು. ಕೈಯ ಬೆತ್ತವನ್ನು ಮೇಲ್ಪಾವಣಿಗೆ ಸಿಕ್ಕಿಸುತ್ತಿದ್ದಂತೆ–

"ಯಜಮಾನರು ಇಲ್ಲೆಯೋ ಸಂಕು ಅಕ್ಕಾ?"

"ಪೂಜೆಲಿ ಇದ್ದವು"

–ಪ್ರಶ್ನೋತ್ತರಗಳಾಗಿದ್ದುವು. ಒಳಗಿದ್ದ ತಂದೆಯವರ ಸೂಚನೆಯಂತೆ, ಎತ್ತಲಾರದ ಎರಡು ಚಾಪೆಗಳನ್ನು ನನ್ನ ತಮ್ಮ ಎಳೆಯುತ್ತಾ ತಂದು ಜಗಲಿಯಲ್ಲಿ ಹಾಕಿದ. ಕೈ ಕಾಲು ತೊಳೆದು ಮೇಲೆ ಬಂದ ಭಾಗವತರು ತಾವೇ ಒಂದನ್ನು ಬಿಡಿಸಿದರು. ಇನ್ನೊಂದು ಹಣ್ಣು ಮೀಸೆಯವರಿಗೆ ಕೊಟ್ಟರು.

"ಉಂಡಿಕ್ಕಿ ಕೈ ತೊಳದಿಕ್ಕಿ ಬನ್ನಿ" ಎಂದು ಅವರು ನಮ್ಮನ್ನು ಕಳುಹಿಸುವ ವರೆಗೂ ಅರ್ಧದ ಊಟ–ಎಂಜಲು ಕೈಗಳ ಅರಿವು ನನಗೆ ಆಗಿರಲಿಲ್ಲ!

ಮೂಗು ಬಾಯಿಗಳಲ್ಲಿ ಉಂಡು ನಾವು ಹೊರಗೆ ಬರುವಷ್ಟರಲ್ಲಿ ತಂದೆಯವರು ಪೂಜೆ ತೀರಿಸಿ ಬಂದು ಭಾಗವತರೊಡನೆ ಕುಶಲ ಪ್ರಶ್ನೆಗೆ ತೊಡಗಿದ್ದರು. ಭಾಗವತರು ಬಾಯಾರಿಕೆ ತೀರಿಸಿ ಕೊಳ್ಳುತ್ತಿದ್ದರು.

ಪಕ್ಕದಲ್ಲೇ ನಿಂತು, ಮಾತುಕತೆಗಳನ್ನು "ತೆರೆದ ಕಿವಿ"ಯಿಂದ ನಾವು ಆಲಿಸತೊಡಗಿದೆವು. ಹಣ್ಣು ಮೀಸೆಯ ಮಹಾಶಯರು ಪ್ರಸಿದ್ಧ ಮೃದಂಗವಾದಕ ಶ್ರೀ ಮುಲ್ಕಿ ಸುಬ್ಬಣ್ಣ ಮದ್ದಳೆಗಾರ ರೆಂದು ಮಾತುಗಳಿಂದ ತಿಳಿಯಿತು.

ಆ ಮೇಲೆ, ಸ್ನಾನ–ಊಟಗಳ ತರುವಾಯ ಅದೆಷ್ಟೋ ಹೊತ್ತಿನ ವರೆಗೆ ಸಂಭಾಷಣೆ ನಡೆಯುತ್ತಲೇ ಇತ್ತು. ವಿಷಯ? ತಾಳಮದ್ದಳೆಗಳದೇ.

ನನ್ನ ನೆನಪಿಗೆ ಬರುವ, ಶ್ರೀ ಬಲಿಪ ನಾರಾಯಣ ಭಾಗವತರ ಮೊತ್ತ ಮೊದಲನೆಯ ಪರಿಚಯ ಅದು. ನನ್ನನ್ನು ಅದಕ್ಕೆ ಮೊದಲೂ ಅವರು ನೋಡಿದವರೇ. ನಾನು ಅವರನ್ನು ಕಂಡಿದ್ದರೆ, ಅದು ಹಸುಳೆಗಣ್ಣುಗಳ ದೃಷ್ಟಿಯಷ್ಟೆ.

ಬಂಧು ಭಾವ

ಕೆಲವೊಮ್ಮೆ ಮಳೆಗಾಲ ದಾಟುವ ವರೆಗೂ ಭಾಗವತರು ನಮ್ಮಲ್ಲೇ ಉಳಿಯುವ ಅಭ್ಯಾಸ ವಿತ್ತು. ಯಾವುದಾದರೂ ಯಕ್ಷಗಾನ ಪ್ರಸಂಗವನ್ನು ಬರೆಯುವ ಇಲ್ಲವೇ ತಿದ್ದುವ ಅದಲ್ಲವಾದರೆ ಹರಿಕಥೆಗಳಿಗಾಗಿ ಹೊಸ ಪದ್ಯಗಳನ್ನು ರಚಿಸುವ ಕೆಲಸ ಮಾಡುತ್ತ ಇರುತಿದ್ದರು.

ಕಾರ್ಯಬಾಹುಳ್ಯದಿಂದ, ತಂದೆಯವರು ಮನೆಯಿಂದ ಹೊರಟು ಕೋಳ್ಯೂರು ಅಥವಾ ಮಂಗಳೂರುಗಳಿಗೆ ಹೋಗಿ ಬರುವಾಗ 2–3 ದಿನಗಳೇ ಕಳೆದುಹೋಗುತ್ತಿದ್ದುವು–ಒಮ್ಮೊಮ್ಮೆ. ಮನೆಗೆ ಯಾರಾದರೂ ಅತಿಥಿಗಳು ಆಗಮಿಸಿದರೆ, ಸತ್ಕಾರದ ಹೊಣೆಯೆಲ್ಲ ಭಾಗವತರದೇ.

ಅಂತಹದೊಂದು ಸಂದರ್ಭದಲ್ಲಿ–

ತಾಯಿಯವರು ಮೂರು ದಿನದ ವಿಶ್ರಾಂತಿಯಲ್ಲಿದ್ದರು. ಕೈಮೈ ಎಲ್ಲಾ ಹುಣ್ಣುಮಾಡಿ ಕೊಂಡಿದ್ದ ನಾನು, ಸ್ನಾನವನ್ನೂ ಮಾಡಲಾರದ ಸ್ಥಿತಿಯಲ್ಲಿದ್ದೆ. ಆ ಬಾರಿ, ಬೆಳಗಿನ ಕಾಫಿಯಿಂದ ಹಿಡಿದು ಮಧ್ಯಾಹ್ನದ ಊಟದ ವರೆಗೂ ಭಾಗವತರದೇ ಕಾರ್ಯಭಾರ; ವಿತರಣೆಯ ವ್ಯವಸ್ಥೆಯ ಹೊಣೆ. ಹುಣ್ಣುಗಳಿಂದ ಸೋತಿದ್ದ ನನ್ನ ಚಿಕಿತ್ಸೆಯ ಜವಾಬ್ದಾರಿ.

ಸಣ್ಣದೊಂದು ಮುಳ್ಳು ತಂದು, ಹುಣ್ಣುಗಳ ಬಾಯಿಬಿಡಿಸಿ – ಕೀವು ಹಿಂಡಿ ನನ್ನ ಮೈಗೆ ಅವರೇ ಎಣ್ಣೆ ಸವರಿದರು; ಬಿಸಿನೀರಿನ ಸ್ನಾನ ಮಾಡಿಸಿ ಮಲಗಿಸಿದರು.

ಮರುದಿನ ಬೆಳಿಗ್ಗೆ ನಮ್ಮಲ್ಲಿಂದ ಸ್ವಲ್ಪ ದೂರದಲ್ಲಿದ್ದ ಹೆಂಗುಸೊಬ್ಬರನ್ನು ಅಡಿಗೆಗಾಗಿ ಬರಲು ಹೇಳಿಕಳುಹಿಸುವಾಗ ಭಾಗವತರು –

"ಉಳಿದವರಿಗೇಕೆ ತೊಂದರೆ? ಅಡಿಗೆಯ ಕೆಲಸವೇನು ಗೊಬ್ಬರ ಹೊರುವ ಕೆಲಸವಲ್ಲ. ನೀವೇನೂ ಯೋಚನೆ ಮಾಡಬೇಡಿ. ನಾನು ನಳಪಾಕ ಮಾಡಿಬಿಡುತ್ತೇನೆ."

– ಎಂದು ತಾಯಮ್ಮನವರೊಡನೆ ಹೇಳಿ ಕಳುಹಿಸುವ ಆಳನ್ನು ನಿಲ್ಲಿಸಿದರು. ಆ ದಿನವೂ ಅಟ್ಟು ನಮ್ಮ ಹೊಟ್ಟೆಗೆ ಹಾಕಿದರು.

ತನ್ನ ಸ್ನೇಹಿತರು ತನ್ನವರು ಎಂದು ಅವರು ತಿಳಿದಾಗ, ವಾತ್ಸಲ್ಯ – ಪ್ರೀತಿಗಳನ್ನು ಸದಾ ಬೆಳೆಸಿದವರು ಅವರು. ತನ್ನವರ ಮನೆಗೆ ಬಂದ ತೊಂದರೆ ತನ್ನದೇ ಎಂಬುದು ಅವರ ಲೆಕ್ಕ.

ತಂದೆಯವರನ್ನು ಅವರು ಕರೆಯುತ್ತಿದ್ದುದು "ಒಪ್ಪಕುಂಞಣ್ಣ" ಎಂದು. ತಾಯಿ ಅವರ ಬಾಯಲ್ಲಿ "ಸಂಕು ಅಕ್ಕ". "ಭಾಗೋತಣ್ಣ" ಎಂಬುದು ಪ್ರತಿಸಂಬೋಧನೆ. ನನ್ನನ್ನು ಮನೆಯವರೆಲ್ಲ ಹೇಳುವಂತೆ "ಮಗು" ಎನ್ನುತ್ತಿದ್ದರು.

ದೊಡ್ಡವರ ಕೂಟ

ಆ ಕಾಲದಲ್ಲಿ ಮೇಳಗಳ ತಿರುಗಾಟ ಮುಗಿದೊಡನೆ, ಮಳೆಗಾಲದುದ್ದಕ್ಕೂ ಬಿಡದೆ ಹಳ್ಳಿಯ ಮನೆಮನೆಗಳಲ್ಲೂ ತಾಳಮದ್ದಳೆಗಳು ಆಗುತ್ತಿದ್ದುವು. ತಾಳಮದ್ದಳೆಗಳಲ್ಲೂ "ದೊಡ್ಡ ತಾಳಮದ್ದಳೆ – ಸಣ್ಣ ತಾಳಮದ್ದಳೆ" ಎಂಬ ಎರಡು ಪ್ರಭೇದಗಳು.

ನಮ್ಮತ್ತ ಕಡೆಯ ಮಟ್ಟಿಗೆ ಆ ಕಾಲದ ಪ್ರಸಿದ್ಧ ಅರ್ಥಧಾರಿಗಳಾಗಿದ್ದ ಶ್ರೀ ಮುಗುಳಿ ಮಹಾಬಲ (ಪುಟ್ಟುಕುಞಿ) ಭಟ್ಟರು, ಶ್ರೀ ಹೊಸಹಿತ್ಲು ಗಣಪತಿ ಭಟ್ಟರು, ಶ್ರೀ ಕಾಡೂರು ಮಹಾಬಲೇಶ್ವರ ಭಟ್ಟರು, ನನ್ನ ತಂದೆಯವರು ಇವರೇ ಮೊದಲಾದ ಅರ್ಥಧಾರಿಗಳಾಗಿದ್ದು ಆಗುವುದು – ದೊಡ್ಡ ತಾಳಮದ್ದಳೆ.

ಅಲ್ಲಲ್ಲಿಯ ಶಾಲೆ – ದೇವಸ್ಥಾನಗಳಲ್ಲಿ ಆಯಾ ಊರಿಗೆ ಸಂಬಂಧಪಟ್ಟವರೇ ಕೂಡಿ ನಡೆಸುವುದು – ಸಣ್ಣದು.

ನಾನೂ ಸಣ್ಣ ಸಣ್ಣ ತಾಳಮದ್ದಳೆಗಳಲ್ಲಿ ಅರ್ಥ ಹೇಳಲು ಆರಂಭ ಮಾಡಿದ್ದೆ. ಅದು ಆಗಾಗ ನಡೆಯುತ್ತಾ ಇತ್ತು. "ಭಾಗೋತ ಮಾವ" ಬಂದ ದೊಡ್ಡ ತಾಳಮದ್ದಳೆಗಳಿಗೆ ಹೋಗಿ ಪದ – ಅರ್ಥಗಳನ್ನು ಹೇಳುವ ಕುತೂಹಲವೂ ತಣಿಸಲಾರದಷ್ಟಿತ್ತು.

ಮೇಳ ಮುಗಿಸಿ, ಪ್ರತಿ ವರ್ಷವೂ ಎಂಬಂತೆ, ಮಳೆಗಾಲದಲ್ಲಿ ನಮ್ಮ ಮನೆಗೆ ಪೂಜ್ಯ ಭಾಗವತರು ಬಂದೇ ಬರುತ್ತಿದ್ದರು. ಹಾಗೆ ಬರುವಾಗ ನನ್ನ ದೊಡ್ಡಪ್ಪ ಶ್ರೀ ಕಾಡೂರು ಮಹಾಬಲೇಶ್ವರ ಭಟ್ಟರಾಗಲಿ, ತಂದೆಯವರಾಗಲಿ ಸೇರಿ ವಾರಕ್ಕೆ ಎರಡು ಮೂರರಂತೆ ತಾಳಮದ್ದಳೆಗಳನ್ನು ಅಲ್ಲಲ್ಲಿ ಮಾಡಿಸುತ್ತಾ ಇದ್ದರು.

ಹೆಚ್ಚಾಗಿ ತಂದೆಯವರ ಮುಂದಾಳುತನದಲ್ಲೇ ಅವು ಆಗುತ್ತಿದ್ದ ಕಾರಣ, ನಮ್ಮ ಬಂಧುಗಳಲ್ಲೊ ಸ್ನೇಹಿತರಲ್ಲೊ (ಹೆಚ್ಚಾಗಿ) ನಡೆಯುತ್ತಿದ್ದವು.

ನಮ್ಮ "ಉತ್ತರದ ಗಡಿ" ಕೋಳ್ಯೂರಿನ ದೇವಸ್ಥಾನದಲ್ಲಿನ ಕೂಟದಿಂದ ಆರಂಭವಾಗಿ, ಉತ್ತಾರ ಕೊಡಂಗೆ, ಪಾತೂರು ಮುಗುಳಿ, ಕರೋಪಾಡಿ ಮುಗುಳಿ. ಪಥ್ಯಾಣ, ಕನ್ಯಾನ, ಆವಳ, ಪೂಕಳ, "ದಕ್ಷಿಣದ ಗಡಿ" ಕಂಬಾರಿನ ದೇವಸ್ಥಾನದ ವರೆಗೂ ಅಲ್ಲಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಿಗೆ ಹೆಚ್ಚಾಗಿ ನಾನು ಹೊಗುತ್ತಲೇ ಇದ್ದೆ.

ಹೀಗೆ ಮಳೆಗಾಲದಲ್ಲಿ ಸುಮಾರು ಒಂದೂವರೆ ತಿಂಗಳ ಸಮಯ ನಮಗೆ ಗೊತ್ತಾಗದಂತೆಯೇ ಸರಿಯುತ್ತಿತು.

ತಾಳಮದ್ದಳೆಗಳಲ್ಲಿ ಭಾಗವತರ ಮತ್ತು ಚೆಂಡೆ ಇಡುವ ಸ್ಥಳಗಳ ಮಧ್ಯೆ ಕುಳಿತಿರುವುದು ನನಗೊಂದು ಹುಚ್ಚಾಗಿತ್ತು. ಎಲ್ಲ ಕಡೆಗಳಲ್ಲೂ ತಂದೆಯವರ ಪರಿಚಯ ಪ್ರಭಾವಗಳಿದ್ದುವು. ಇತರರಿಗೆ ತೊಂದರೆಯಾದರೂ, ಮನೆಯವರು ಆ ಸ್ಥಳದಿಂದ ನನ್ನನ್ನು ದೂಡುತ್ತಿರಲಿಲ್ಲ.

ಭಾಗವತರಂತೂ, ಅತಿ ಸಮೀಪದಲ್ಲಿ ಕುಳಿತಿದ್ದ ನನ್ನನ್ನು ಉದ್ದೇಶಿಸಿ, ಪದ್ಯ ನಿಲ್ಲಿಸಿದೊಡನೆ ಏನಾದರೂ ಚೇಷ್ಟೆಯ ಮಾತುಗಳನ್ನು ಪ್ರಾರಂಭಿಸುತ್ತಿದ್ದರು. ಅವರ ವಿಶಿಷ್ಟ ಧ್ವನಿಯಲ್ಲಿ ವಿನೋದ ವಾರ್ತಾಲಾಪವನ್ನು ಅವ್ಯಾಹತವಾಗಿ ನಡೆಸುತ್ತಿದ್ದರು.

ಮಗುವಿಗೆ ಧೈರ್ಯ

ಪೂಜ್ಯ ಭಾಗವತರು, ನಮ್ಮ ಮನೆಯಲ್ಲಿ ನನ್ನನ್ನು "ಮಗು" ಎಂದು ಕರೆದವರು. ಮಾತನಾಡುವಾಗ ತಪ್ಪಿದರೆ ತಿದ್ದಿ ಬೆನ್ನು ತಟ್ಟಿದವರು.

ಕೋಳ್ಯೂರಿನಲ್ಲಿ ದೊಡ್ಡವರ ಕೂಟವೊಂದು ಜರಗಿತ್ತು. 15 ವರ್ಷದವನಾಗಿದ್ದ ನಾನು ಅದುವರೆಗಿನ ಸಣ್ಣ ಕೂಟಗಳ 'ಅನುಭವ'ದ ಬಲದಿಂದ, ಆ ಕೂಟದಲ್ಲಿ ಭಾಗವಹಿಸಿದರೆ ಆಗಬಹುದೆಂಬ ಹುಚ್ಚು ಧೈರ್ಯ ತಳೆದೆ.

ಭಾಗವತರ ಹಾಡುಗಾರಿಕೆ; ಶ್ರೀ ಕೆಮ್ಮಣ್ಣು ನಾರ್ಣಪ್ಪಯ್ಯನವರು ಮೃದಂಗವಾದಕರು. ಸರ್ವಶ್ರೀ ಬಳ್ಳಮಜಲು ರಂಗಪ್ಪಯ್ಯ, ಕವಿ ಬಡಕಬೈಲು ಪರಮೇಶ್ವರಯ್ಯ, ಕುಂಜಾರು ರಾಮಕೃಷ್ಣಯ್ಯ ಇವರೊಂದಿಗೆ ಹೊಸಹಿತ್ಲು ಗಣಪತಿ ಭಟ್ಟರು, ಮಂಕುಡೆ ಬಳ್ಳೂಕರಾಯರು ಕೂಡಾ ಅಂದಿನ ಅರ್ಥಧಾರಿಗಳು. ಅವರೆಲ್ಲರ ಎಡೆಯಲ್ಲಿ ನಾನೂ ಹೋಗಿ ಕುಳಿತೆ-ಹಿರಿಯರೆದುರಿನ ಮಗುವಾಗಿ.

"ಕುಮಾರ ವಿಜಯ" ಅಂದಿನ ಪ್ರಸಂಗ. ನನಗಿದ್ದುದು ಪದ್ಮಕೋಮಲೆಯ ಅರ್ಥ.

ಮುಂದುಡಿ ಕುಳಿತಿದ್ದ ನನ್ನ ಕಡೆಗೆ ಒಮ್ಮೆ ನೋಡಿದ ಭಾಗವತರು ಮುಗುಳುನಗೆ ಬೀರಿದರು. ಪ್ರತಿಯಾಗಿ ನಗೆ ಬೀರಲು ನನ್ನ ಬಾಯಿಕಟ್ಟಿ ಹೋಗಿತ್ತು.

ಆ ಹಳೆಯ ಹುಲಿಗಳ ಎದುರಿಗೆ ನಾನು ಹುಲ್ಲೆಗಿಂತ ಕಡೆಯಾಗಿದ್ದೆ. ಅದುವರೆಗೆ ಅಡಗಿಸಿದ್ದ ಅಳುಕೆಲ್ಲ ಆಗ ಮೂರ್ತಿವೆತ್ತು ಬಂದಿತ್ತು. ಪದ್ಮಕೋಮಲೆಯ 'ಪದ'ವನ್ನು ಭಾಗವತರು ಹಾಡಲು ತೊಡಗಿದಾಗ ಮೈ ಬೆವರತೊಡಗಿತು.

ನನ್ನ ಅವಸ್ಥೆಯನ್ನು ಭಾಗವತರು ಗಮನಿಸಿದರು. ಗಂಟಲು ಕೇಕರಿಸಿ ನನ್ನ ಗಮನವನ್ನು ಅವರೆಡೆಗೆ ಸೆಳೆದರು. ಹುಬ್ಬು ಹಾರಿಸಿ ಧೈರ್ಯವಿತ್ತರು.

ಮೊದಲನೆಯ ಪದದ ಅರ್ಥವನ್ನು ಹೇಗಾದರೂ ಹೇಳಿ ಮುಗಿಸಿದೆ. ಭಾಗವತರತ್ತ ನೋಡಿದೆ. "ಇಷ್ಟೇಕೆ ಬೆದರುತ್ತಿಯಾ, ಧೈರ್ಯವಾಗಿ ಮುಂದುವರಿಸು" ಎನ್ನುವಂತಿತ್ತು ಅವರ ನೋಟ. ಅನಂತರ ಅಷ್ಟೊಂದು ಕಷ್ಟವಾಗಲಿಲ್ಲ.

*　　　*　　　*　　　*　　　*

ನಮ್ಮನ್ನು ಮನೆಯ ಮಕ್ಕಳಾಗಿ ಎತ್ತಿ ಮುದ್ದಾಡುತ್ತಿದ್ದ ಭಾಗವತರು, ನಾವು ತಪ್ಪು-ಚೇಷ್ಟೆ ಮಾಡಿದರೆ-ಅಮ್ಮನೊಡನೆ ಮನೆಯಲ್ಲಿ ಜಗಳಾಡಿದರೆ ಸಹಿಸುತ್ತಿರಲಿಲ್ಲ. ಕೂಡಲೇ ಗದರಿಸುತ್ತಿದ್ದರು; ಹೊಡೆಯಲು ಕೋಲು ಹೆಕ್ಕುತ್ತಿದ್ದರು.

ಒಂದು ದಿನ ನಾನು ಶಾಲೆಗೆ ಹೋಗದೆ, ಅವರು ಹಾರ್ಮೋನಿಯಂ ಬಾರಿಸುವುದನ್ನೇ ಕೇಳುತ್ತಾ ಕುಳಿತಿದ್ದೆ. ನನ್ನನ್ನು ಅಂಗಿ ಹಾಕಿಸಿ ಶಾಲೆಗೆ ಹೋಗಲೇ ಬೇಕೆಂದು ಹೊರಡಿಸಿದರು. ನಾನು ಅತ್ತುಬಿಟ್ಟೆ. "ನೀನು ಶಾಲೆಗೆ ಹೋಗಿ ಬರುವ ವರೆಗೂ ಹಾರ್ಮೋನಿಯಂ ಬಾರಿಸುವುದೇ ಇಲ್ಲ" ಎಂದು ಪೆಟ್ಟಿಗೆಗೆ ಬೀಗ ಹಾಕಿ ನನ್ನನ್ನು ಕಳುಹಿಸಿದರು.

ಆ ರಾತ್ರೆ ಸುಮಾರು ಅರ್ಧ ಘಂಟೆಯ ಹೊತ್ತು ಶಾಲೆಗೆ ಹೋಗಲೇ ಬೇಕಾದ ಕರ್ತವ್ಯ, ಅಲ್ಲಿ ಓದಿ ಕಲಿತು ಅಭ್ಯಾಸವಾಗಲೇ ಬೇಕಾದ ವಿಚಾರಗಳ ಕುರಿತು ಸರಿಯಾಗಿ ವಿವರಿಸಿ ಸಮಾಧಾನ ಪಡಿಸಿದರು. ಆ ಬಳಿಕ, ಸಾಕಷ್ಟು ಹೊತ್ತು ಹಾರ್ಮೋನಿಯಂ ಬಾರಿಸಿ ನನ್ನನ್ನು ಸಂತೋಷಪಡಿಸಿದರು.

ಸ್ವರದ ಆಕರ್ಷಣೆ

ಕೆಲವು ವರ್ಷಗಳು ಕಳೆದಾಗ, ನನ್ನ ಯಕ್ಷಗಾನದ ಆಸಕ್ತಿಯೂ ಬಲಿಯುತ್ತಿದ್ದಾಗ ಒಂದು ದಿನ ಮಂಗಳೂರಿನಿಂದ ಮಂಜೇಶ್ವರಕ್ಕಾಗಿ ಊರಿಗೆ ಹಿಂದಿರುಗುತ್ತಿದ್ದೆ.

ಬಸ್ ಸಂಚಾರ ನಮ್ಮ ಊರಿಗೆ ಅಪರಿಚಿತವಾಗಿತ್ತು. ಎತ್ತಿನ ಗಾಡಿಯಲ್ಲೇ ಪಯಣ. ನಮ್ಮ ಎತ್ತಿನ ಗಾಡಿಯು ಮಂಜೇಶ್ವರ ಮುಟ್ಟುವಾಗ ರಾತ್ರೆ 11 ಗಂಟೆಯಾಗಿತ್ತು. ರಸ್ತೆಯ ಪಕ್ಕದ ಸಣ್ಣ ಮೈದಾನಿನಲ್ಲಿ ಬಯಲಾಟ ನಡೆಯುತ್ತಿದ್ದುದನ್ನು ಗಾಡಿಯೊಳಗೆ ಮಲಗಿದ್ದಲ್ಲಿಂದಲೇ ಗಮನಿಸಿ, ಗಾಡಿಯನ್ನು ನಿಲ್ಲಿಸಲು ಹೇಳಿದೆ. ಯಾವ ಮೇಳದ ಆಟವೆಂದು ತಿಳಿಯಲು ಗಾಡಿಯಾಳಿನೊಡನೆ ಕೇಳಿದೆ. "ಇಚ್ಲಂಪಾಡಿ" ಮೇಳವೆಂದು ಅವನು ತಿಳಿಸಿದ. ಭಾಗವತರ ಹಾಡುಗಾರಿಕೆಯಿಂದಾಗಿ ಪ್ರಸಿದ್ಧವಾಗಿದ್ದ ಆ ಮೇಳದ ಹೆಸರು ಕೇಳಿದೊಡನೆ ಗಾಡಿಯಿಂದ ನಾನು ಕೆಳಕ್ಕಿಳಿದಾಯಿತು.

ಗಾಡಿಯಲ್ಲೇ ಇದ್ದಾಗ ರಂಗಸ್ಥಳ ಕಾಣಿಸಿತ್ತು. ಪ್ರಸಿದ್ಧ ವೇಷಧಾರಿ ಶ್ರೀ ಕುಂಬಳೆ ಗುಂಡನವರು ಸೈಕಲ್ ಗಂಟೆಯನ್ನು ಮಧ್ಯಕ್ಕೆ ಸಿಕ್ಕಿಸಿದ ಧನುಸ್ಸನ್ನು ಕೈಯಲ್ಲಿ ಹಿಡಿದು ರಾಜವೇಷದಿಂದ ರಂಗಸ್ಥಳದಲ್ಲಿದ್ದರು. ಇನ್ನಿಬ್ಬರು ವೇಷಧಾರಿಗಳೂ ಇದ್ದರು.

ಕೆಳಗಿಳಿದ ತರುವಾಯ ನೋಡಿದೆ. ಜನಸಂದಣಿ ಏನನ್ನೂ ಕಾಣಗೊಡಲಿಲ್ಲ. ಕೇಳಿದೆ ಗುಜಗುಜುವಿನಿಂದಾಗಿ ಮಾತು-ಪದ್ಯ ಏನೂ ಕೇಳಲಿಲ್ಲ. ಯಾವ ಪ್ರಸಂಗವಿರಬಹುದು? ಎಂದು ಯೋಚಿಸಿದೆ. ಯೋಚಿಸುತ್ತಿರುವಾಗಲೇ —

"ಅಗ್ಗಳದ ದನುಜರಟ್ಟುಳಿಯನಾಲಿಸಿ ರಾಮ" ಎಂಬ ಪದ್ಯ ಸಿಂಹಘರ್ಜನೆಯಂತೆ ಕೇಳಿಸ ತೊಡಗಿತು. ರಸ್ತೆಯಲ್ಲೇ ಇದ್ದ ನನ್ನನ್ನೇ ಆ ಸ್ವರದ ಝೇಂಕಾರ ಅಪ್ಪಳಿಸಿದಂತಾಯಿತು. ಪಕ್ಕದ ಕಲ್ಲನ್ನು ಏರಿ ನೋಡಿದೆ.

ರಥದ ಬಳಿ, ಹೂವಿನ ಹಾರಗಳ ರಾಶಿಯನ್ನು ಕೊರಳಲ್ಲಿ ಹೊತ್ತುಕೊಂಡು ಕುಳಿತ "ಭಾಗೋತ ಮಾವ" ರಂಗಸ್ಥಳದಲ್ಲಿ ಕಂಡರು. ಹೊಸ ರೆಕ್ಕೆ ಬಂದಂತಾಗಿ ಅಲ್ಲಿಂದಲೇ ನೆಗೆದೆ. ನಿಬಿಡ ಜನಸಂದಣಿ. ಅದರೊಳಗೂ ಜಿಗಿದು ನುಗ್ಗಿ ಅವರಿದ್ದಲ್ಲಿಗೇ ತಲಪಿದೆ. ನನ್ನನ್ನು ನೋಡಿದೊಡನೆ "ಎಲ್ಲಿಂದ ಬಂದೆ ಉಂಡೆ?" ಎಂದರು.

ನಿಲ್ಲಲೂ ಕುಳಿತುಕೊಳ್ಳಲೂ ಸ್ಥಳವಿರಲಿಲ್ಲ. ಅತ್ತಿತ್ತ ನೋಡಿ ಬೇರೆ ದಾರಿಕಾಣದೆ, ಹಾಡಲು ಕುಳಿತಿದ್ದ ಮೇಜಿನ ಮೇಲೆಯೆ ಅತ್ತ ಸರಿದು ತನ್ನ ಪಕ್ಕದಲ್ಲೇ ಒಂದಿಷ್ಟು ಸ್ಥಳ ಮಾಡಿ ಕೊಟ್ಟರು.

ಹಾಗೆ ಕುಳಿತವನು, ವಾಲಿ ಬೀಳುವ ವರೆಗೂ ಅಲ್ಲೇ ಇದ್ದೆ. ಪದ ಕೇಳಿ, ಆಟ ನೋಡಿದೆ. ಆಟ ನೋಡಿದುದಕ್ಕಿಂತಲೂ ಹೆಚ್ಚಾಗಿ ಪದ ಕೇಳಿದೆ ಎನ್ನಬಹುದು.

ಸಂತೋಷದ ಮೂಟೆಯನ್ನು ತುಂಬಿಸಿಕೊಂಡು ಬೆಳಿಗ್ಗೆ ಮನೆಗೆ ಹೊರಟಾಗ ಮನೆಯ ವರ್ತಮಾನವನ್ನೆಲ್ಲ ವಿಚಾರಿಸಿದರು. ಇನ್ನು 10 ದಿನಗಳಲ್ಲಿ ಕೋಣೆಬೈಲಿನಲ್ಲಿ ಆಟ ಇದೆ. ತಂದೆ ಯವರೊಡನೆ ಹೇಳು. ಎಲ್ಲರೂ ಆಟಕ್ಕೆ ಬನ್ನಿ ಎಂದರು.

ಕೋಣೆಬೈಲಿನ ಆಟಕ್ಕೆ ನಾವೆಲ್ಲರೂ ಹೋಗಿದ್ದೆವು. ಆ ದಿನ "ಕುಮಾರ ವಿಜಯ". ಗುಂಡ ನವರ ದೇವೇಂದ್ರ, ಐತಪ್ಪ ಶೆಟ್ರು ಶಚಿ—ಮಾಯಾ ಅಜಮುಖಿ, ಅಪ್ಪು ಹಾಸ್ಯಗಾರರ ದೂರ್ವಾಸ, ಅಯ್ಯಪ್ಪರವರ ಅಜಮುಖಿ.

ಸೂರ್ಯೋದಯದ ವರೆಗೂ ನಡೆದ ಆಟ, ಚಿರಸ್ಮರಣೀಯ. ಆ ಆಟದಲ್ಲಿ "ಭಾಗೋತ ಮಾವ"ನ ಕೈವಾಡ ಅವರ್ಣನೀಯ.

ಮಾಯಾ ಅಜಮುಖಿ-ದೂರ್ವಾಸರನ್ನು ಅವರು ಕುಣಿಸುವಾಗ, ರಂಗಸ್ಥಳದ ಬಳಿಯಲ್ಲೇ ಓಲೆಗರಿಯ ಚಾಪೆಯಲ್ಲಿ ಕುಳಿತಿದ್ದ ನಾನೂ ಕುಣಿದಿದ್ದೆನೋ ಏನೋ! "ಕೇಳುತಾ ಮುನಿಪಾಲನ ವಚನವ" ಮತ್ತು "ಮನಸಿಜನಾಟಕ್ಕೆ ಮನಮಾಡೊ ಮುನಿಯೆ" ಎಂಬ ಪದ್ಯಗಳನ್ನು ಅಲೆಯಲೆಯಾಗಿ ಹಾಡಿ, ಬಾಯಿತಾಳದ ಪೆಟ್ಟುಗಳಿಂದ ವೇಷಧಾರಿಗಳ ಕಾಲುಗಳೂ ಅಲೆಗಳೊಂದಿಗೇ ಸೇರುವಂತೆ ಮಾಡಿ ಅವರು ಕಣ್ಣುಕಿವಿಗಳಿಗೆ ಹಬ್ಬ ಮಾಡಿದರು. ಇಷ್ಟು ವರ್ಷಗಳು ಕಳೆದರೂ ಅದು ಇನ್ನೂ ನೆನಪಿನಲ್ಲುಳಿದಿದೆ.

ಪಾತ್ರಪೋಷಣೆ

ಒಮ್ಮೆ ಶ್ರೀ ಮುಗುಳಿ ರಾಮಕೃಷ್ಣ ಭಟ್ಟರಲ್ಲಿ ಒಂದು ತಾಳಮದ್ದಳೆಯ ಏರ್ಪಾಡಾಗಿತ್ತು. ಭಾಗವತರು—ಆಗಿನ ಕಾಲಕ್ಕೆ ತಾಳಮದ್ದಳೆಗಳಿಗೆ ಅಪೂರ್ವವಾಗಿದ್ದ –"ಬಿಲ್ಲಹಬ್ಬ ಕಂಸವಧೆ" ಪ್ರಸಂಗ ವನ್ನು ತಾವಾಗಿಯೇ ಆರಿಸಿಕೊಂಡಿದ್ದರು.

ಹೆಚ್ಚಾಗಿ ವೀರರಸದ ಅರ್ಥಗಳನ್ನೇ ನಿರ್ವಹಿಸುತ್ತಿದ್ದ ನನ್ನ ತಂದೆಯವರು ಆ ದಿನ—ಅರ್ಥ ಧಾರಿಗಳ ಸಂಖ್ಯೆ ಕಡಿಮೆಯಾಗಿದ್ದ ಕಾರಣ—ಅಕ್ರೂರನ ಪಾತ್ರ ವಹಿಸಬೇಕಾಗಿ ಬಂದಿತು. ಎಲ್ಲ ಪದ್ಯಗಳೂ ಹೊಸತಾದುವು. ಭಕ್ತಿರಸಪ್ರಧಾನವಾಗಿದ್ದು (ಪ್ರತಿಯೊಂದೂ) ದೀರ್ಘವಾಗಿದ್ದುವು.

ಅಕ್ರೂರನಿಗಿರುವ ಪದ್ಯಗಳನ್ನು ಅತ್ಯಂತ ಮನೋಹರವಾಗಿ ಭಾಗವತರು ಹಾಡಿದರು. ಪ್ರತಿಯೊಂದನ್ನೂ ಎರಡೆರಡು ಬಾರಿ ಹಾಡುತ್ತಾ ಹೋದರು. ರಸಜ್ಞರ ಮೇಲೆ ಪರಿಣಾಮ ವಾಯಿತು; ತಂದೆಯವರಲ್ಲಿ ಪ್ರತಿಫಲಿಸಿತು.

ಆದರೂ, "ಚರಣ ನೂಪುರ ಗೆಜ್ಜೆ ಪರಿಯ" ಎಂಬ ಪದ್ಯಕ್ಕೆ ಅರ್ಥ ಹೇಳುವಾಗ, ಪದ್ಯದ ನೆನಪು ಪೂರ್ಣವಾಗಿ ಬಾರದೆ ಹೋಯಿತು. ರಸದ ಕಡೆಗೇ ಗಮನವಿದ್ದುದರಿಂದ ಒಂದೊಂದು ಚಿಕ್ಕ ತುಂಡುಗಳನ್ನು ಮರೆಯುತೊಡಗಿ ಎಡವಿದರು.

ಭಾಗವತರ ಲಕ್ಷ್ಯ ಅರ್ಥದ ಕಡೆಗೂ ಇತ್ತು. ಕೈಯ ಮುದ್ರೆಗಳಿಂದ ನೆನಪು ತರಿಸಿ ಕೊಟ್ಟು, ಚಿಕ್ಕ ಧ್ವನಿಯಿಂದ ಮರೆತ ತುಂಡುಗಳನ್ನು ಜ್ಞಾಪಿಸಿಕೊಟ್ಟರು. ವಹಿಸಿಕೊಟ್ಟ ಕರ್ತವ್ಯದ ಪಾಲನೆಯನ್ನು ಸೂತ್ರಧಾರರಾಗಿ ನೆರವೇರಿಸಿದರು.

ಅನಂತರ ಬಂದುದು ನಮ್ಮ ಯಕ್ಷಗಾನ ನಾಟಕ ಸಂಸ್ಥೆ. ಅಲ್ಲೂ ಅವರು ಭಾಗವತರಾಗಿ ದ್ದರು. ನಾನು ನಾಟಕಗಳಲ್ಲಿ ಪ್ರಹ್ಲಾದ ಮೊದಲಾದ ಬಾಲಪಾತ್ರಗಳನ್ನೂ, ಕೃಷ್ಣಲೀಲೆಯಲ್ಲಿ ಬಾಲ ಕೃಷ್ಣ ಮತ್ತು (ಮುಂದಿನ) ರಾಧೆ ಪಾತ್ರಗಳನ್ನೂ ಮಾಡುತ್ತಿದ್ದೆ.

ನೇಪಥ್ಯದಲ್ಲಿದ್ದ ಭಾಗವತರು ಹಾಡುತ್ತಿದ್ದಂತೆಯೇ ನಮ್ಮ ಪಾತ್ರಾಭಿನಯವನ್ನೂ ನೋಡು ತ್ತಿದ್ದರು. ಅರ್ಥವಿವರಣೆಗೂ ಗಮನ ಕೊಟ್ಟು, ನಾವು ಬಿಟ್ಟ ಭಾಗವನ್ನು ಜ್ಞಾಪಿಸಲು ಜಾಗಟೆಗೆ ಸಂಜ್ಞಾರೂಪದ ಸಣ್ಣ ಪೆಟ್ಟು ಕೊಟ್ಟು ನಮ್ಮ ಗಮನವನ್ನು ಅವರತ್ತ ಸೆಳೆಯುತ್ತಿದ್ದರು. ಬಿಟ್ಟ ಅಂಶವನ್ನು ನಮ್ಮಿಂದ ಹೇಳಿಸುತ್ತಿದ್ದರು.

ಪರದೆ – ದೃಶ್ಯಾವಳಿಗಳು ಇತ್ಯಾದಿ ಇದ್ದುದರಿಂದ ಅವರಿಗೆ ಒಮ್ಮೊಮ್ಮೆ ಬೇಕಾದಂತೆ ಹಾಡಲೂ, ರಂಗವನ್ನು ನೋಡಲೂ ತೊಡಕಾಗುತ್ತಿತ್ತು. ದೃಶ್ಯಗಳನ್ನು ಹೊಂದಿಸಿಕೊಳ್ಳುವಾಗ ಒಂದಿಷ್ಟು ವೇಳೆ ಹೋಯಿತಾದರೂ ಸಿಟ್ಟಿಗೇಳುತ್ತಿದ್ದರು. ನೊಂದು, “ಇವೆಲ್ಲ ಹರಟೆ – ರಗಳೆಗಳೇಕೆ?” ಎನ್ನುತ್ತಿದ್ದರು. “ಇವು ಯಾವವೂ ಇರಬಾರದು” ಎನ್ನುವ ವರೆಗೂ ಟೀಕಿಸುತ್ತಿದ್ದರು.

ಕಟೀಲು ದುರ್ಗಾಪರಮೇಶ್ವರೀ ಶಾಲೆಯಲ್ಲಿ ಒಂದು ಬಾರಿ ನಮ್ಮ ನಾಟಕ ಕಾರ್ಯಕ್ರಮ ವಿತ್ತು. ಪ್ರಹ್ಲಾದ ಚರಿತ್ರೆ ಪ್ರಸಂಗ. ತಂದೆಯವರು ಹಿರಣ್ಯಕಶ್ಯಪುವಾಗಿಯೂ ನಾನು ಪ್ರಹ್ಲಾದ ನಾಗಿಯೂ ಅಭಿನಯ ನಡೆದಿತ್ತು. ಅಂದು ತಂದೆಯವರಿಗೇನೊ ಒಂದಷ್ಟು ಸ್ಫೂರ್ತಿ ಕುಂದಿ, ಅವರ ಕೆಲಸಕ್ಕೆ ಎಂದಿನ ಕಳೆ ಕೂಡಿ ಬರಲಿಲ್ಲ. ಭಾಗವತರು ಅದನ್ನು ಗಮನಿಸಿದರು.

“ಪೆತ್ತವ್ವೆಯ ಮನಮರುಕವ ಲಾಲಿಸಿ। ಮೃತ್ಯುಂಜಯನಂತೆ” ಎಂಬ ಪದ್ಯಕ್ಕೆ ತನ್ನ ಸರ್ವ ಶಕ್ತಿಯನ್ನೂ ವಿನಿಯೋಗಿಸಿದರು.

“ಮೃತ್ಯುಂಜಯನಂತೆ” ಎಂಬ ನುಡಿ ಆ ಸಿಡಿಲ ಘರ್ಜನೆಯ ಕಂಠದಿಂದ ಚಿಮ್ಮಿದಾಗ, ತಂದೆಯವರಿಗೆ ಚಾವಟಿ ಏಟು ಹೊಡೆದಂತಾಯಿತು. ಅಭಿನಯ ಕಳೆಗೂಡಿತು. ಶಾಲೆಯ ಮಾಡಿನ ಹಂಚುಗಳು ಹಾರಿ ಹೋಗುವವೆ? ಎನಿಸಿತು ಉಳಿದವರಿಗೆ. ಬಣ್ಣ ಬಳಿಯುತ್ತಲಿದ್ದ ಕಲಾವಿದರೆಲ್ಲ ರಂಗದ ಬಳಿಗೆ ಓಡಿಬಂದರು.

ಅಲ್ಲಿಂದ ಮುಂದಿನ ಸಂಭಾಷಣಾ ಸನ್ನಿವೇಶದಲ್ಲಿ, “ಅಂಜುವರೆನಗಭವರು ಮೇ। ಲಂಜು ತಿಹರು ನಿರ್ಜರರು” ಎಂಬ ಪದ್ಯಕ್ಕೂ ಅದೇ ರೀತಿಯ ಠೇಂಕಾರ.

ಅವರು ಹಾಡುತ್ತಿದ್ದಂತೆಯೇ ಹಿರಣ್ಯ ಕಶ್ಯಪು ಮುಂದೆ ಸರಿದು ಬಂದ. ನಿಂತಿದ್ದ ಪ್ರಹ್ಲಾದ ನನ್ನು ಕೈಯಲ್ಲಿ ಹಿಡಿದೆತ್ತಿ ನೆಲಕ್ಕೆ ಅಪ್ಪಳಿಸಿದ.

ನೆಲಕ್ಕೆ ಬಿದ್ದಲ್ಲಿಂದ ನಾನು ಬೇಗನೆ ಏಳಲು ಪ್ರಯತ್ನಿಸಿದೆ. ಏಳುತ್ತಲಿದ್ದಂತೆ ಮತ್ತೊಂದು ಒದೆತವೂ ಬಿದ್ದಿತು.

(ಒದೆತದ ನೋವು ದೊರೆತ ಕಟೀಲು ಶಾಲೆ, ಘಟನೆಗೆ ಕಾರಣವಾದ ಭಾಗವತರ ಪದ್ಯ...... ಈಗಲೂ ಆಗಾಗ ನೆನಪಾಗುತ್ತವೆ.)

ನಿರ್ಣಯ ನಿರ್ಧಾರ

ಯಾವುದಾದರೂ ಒಂದು ನಿರ್ಣಯವನ್ನು ಕೈಗೊಂಡರೆ, ಏನೇ ಆದರೂ – ಯಾರೇ ಹೇಳಿದರೂ ಭಾಗವತರು ಅದನ್ನು ಬಿಟ್ಟವರಲ್ಲ.

ನಿಂತು ಹಾಡುವುದು, ಬಯಲಾಟದಲ್ಲಿ ಹಿಂದಿನಿಂದ ನಡೆದು ಬಂದಿದ್ದ ಪರಂಪರಾವಿಧಿ. ಭಾಗವತರು ಬಹಳವಾಗಿ ಆಯಾಸಗೊಂಡಿದ್ದು ದೇಹಾರೋಗ್ಯವೂ ಅಷ್ಟೊಂದು ಸರಿಯಾಗಿರದ ಒಂದು ವರ್ಷದಲ್ಲಿ, ಆಟ ಆಡಿಸುವವರು ವಿಶೇಷವಾಗಿ ಕರೆದಾಗ ಮಾತ್ರವೇ ಹೋಗುತ್ತಿದ್ದರು; ಕುಳಿತುಕೊಂಡು ಹಾಡಲು ಮೇಜನ್ನೊ, ಎತ್ತರದ ಕಾಲ್ಮಂಚವನ್ನೊ, ಹಾಕಿಸಿಕೊಂಡು ಹಾಡುತ್ತಿದ್ದರು.

ಇದರಿಂದ ರಂಗಕ್ಕೆ ಏನೂ ತೊಂದರೆಯಾಗುತ್ತಿರಲಿಲ್ಲ. ಹಿಮ್ಮೇಳದವರಿಗೂ ಒಂದಷ್ಟು ಸುಖವೇ ಸಿಗುತ್ತಿತ್ತು.

ಆದರೆ, ಒಂದು ಕಡೆಯಲ್ಲಿ; ನಿಂತು ಹಾಡಬೇಕೆಂದು ಭಾಗವತರನ್ನು ಒತ್ತಾಯ ಮಾಡಲಾಯಿತಂತೆ. ಭಾಗವತರು ಒಪ್ಪಲಾರದಾದರು. ಆಟ ಆಡಿಸುವವರು ಆ ಊರಿನ ತೂಕದ ವ್ಯಕ್ತಿ. ಒಂದೇ ಒಂದು ಪದ್ಯವನ್ನಾದರೂ ನಿಂತು ಹಾಡಬೇಕು ಎನ್ನುವಷ್ಟು ಒತ್ತಡ ಹಾಕಿದರಂತೆ. "ಪ್ರಾಣವೇ ಹೋದರೂ ಸಾಧ್ಯವಿಲ್ಲ" ಎಂದರು ಭಾಗವತರು. ಕೊನೆಗೂ ಗೆದ್ದರು. ತರಿಸಿದ ಮೇಜಿನಲ್ಲೇ ಕುಳಿತು ಹಾಡಿದರು. ಆಟ ಮುಂದುವರಿಯಿತು.

ಸಿಗುರಿನ ಕಬ್ಬು

ಭಾಗವತರ ದಿನಚರಿ, ಆಹಾರ – ವಿಹಾರ ಇತ್ಯಾದಿಗಳನ್ನು ಸಮೀಪದಿಂದ ಕಂಡಿದ್ದ ನಮಗೆ, ಅವರು ಅವಧೂತ ಮಾರ್ಗಾವಲಂಬಿಯಾಗಿದ್ದರೇನೊ ಎಂಬ ಸಂದೇಹ ಒಮ್ಮೊಮ್ಮೆ ಬಂದಿದೆ.

ಕಾಲ್ನಡೆಯಿಂದ ಸಾಗುವುದರಲ್ಲಿ ತರುಣರಾದ ನಮಗಿಂತ ಎಷ್ಟೋ ಪಾಲು ಬಲಿಷ್ಠರಾಗಿದ್ದರು ಅವರು. ಆಟ ಮುಗಿಸಿ, ರಂಗಸ್ಥಳದಿಂದ ಜಾಗಟೆಯನ್ನೊಪ್ಪಿಸಿ ಹೊರಟು – ಕಬ್ಬು ಸಿಕ್ಕಿದರೆ ಅದನ್ನು ಜಗಿಯುತ್ತಾ – ನಡೆಯ ತೊಡಗಿದರೆ, ಎಲ್ಲೂ ನಿಲ್ಲದೆ 25ಮೈಲುಗಳಷ್ಟು ನಡೆದುದೂ ನನ್ನ ಅನುಭವದಲ್ಲಿದೆ. ಹಾಗೆ ನಡೆದರೂ ಅವರು ಆಯಾಸದ ನಿದ್ರೆಗೆ ಶರಣಾಗುತ್ತಿರಲಿಲ್ಲ. ಗೇರುಮರ ದಡಿಯಲ್ಲಿ ಕಂಬಳಿಯೊಂದನ್ನು ಹಾಸಿ, ಬಲಿಪ ಮಾವ "ಬಲಿಪನಂತೆ" ಬಿದ್ದುಕೊಳ್ಳುತ್ತಿದ್ದರು.

ಅಂದು ಏನಾದರೂ ಹೊಸ ಪ್ರಸಂಗವೆಂದಾದರೆ, ಆ ಪ್ರಸಂಗದ ಅನುಭವವನ್ನು ನಾವು ಕೇಳಿದರೆ, ಕಂಬಳಿಯಲ್ಲಿ ಮಲಗಿಕೊಂಡಲ್ಲಿಂದಲೇ ಹೇಳುತ್ತಿದ್ದರು.

ಸ್ನಾನ – ಊಟ ಇತ್ಯಾದಿಗಳ ಬಗೆಗೆ ಅವರಿಂದಲೇ ಅಪೇಕ್ಷೆ ಬಂದುದನ್ನು ಕಾಣೆ. ಆದರೆ, ಅದರಿಂದಾಗಿ ಅವರ ಭಾಗವತಿಕೆಗೆ ಯಾವ ತೊಂದರೆಯೂ ಬಾರದುದಿಲ್ಲ. ಹಾಡಲು ಕುಳಿತಾಗ, ತಡೆಯಿಲ್ಲದೆ ನಿರಾಯಾಸವಾಗಿ ಹಾಡಿಯೇ ಬಿಡುತ್ತಿದ್ದರು.

ಒಮ್ಮೊಮ್ಮೆ 3–4 ದಿನಗಳ ವರೆಗೆ ಊಟವೇ ಮಾಡದೆ ಇದ್ದುದಿದೆ. ಹಾಗೆಯೇ ಊಟ ಮಾಡಬೇಕೆಂದು ತೋರಿದರೆ, ನನ್ನಂತಹ ನಾಲ್ಕು ಮಂದಿಗಾಗುವಷ್ಟು ಅನ್ನವನ್ನು ರಾಸಿಹಾಕಿಕೊಂಡು ಸಂಪೂರ್ಣ ಉಂಡು ಮುಗಿಸಿದುದೂ ಇದೆ.

ಎಲೆಯಡಿಕೆ ಮೆಲ್ಲುವಾಗ ಒಂದು ಮುದ್ದೆ ಸುಣ್ಣವನ್ನು ಎಲೆಯಲ್ಲಿಟ್ಟು ಬೆಣ್ಣೆ ಮೆದ್ದಂತೆ ಸುಲಭವಾಗಿ ನುಂಗಿದುದೂ ಇದೆ; ತೊಗರಿ ಬೇಳೆಯ ತೊವ್ವೆಗೆ ಒಂದು ಹಿಡಿ ತುಂಬಾ ಉಪ್ಪು ಹಾಕಿ ಕಲಸಿ ಉಂಡುದೂ ಇದೆ.

ನಿದ್ರೆ ಕೆಡುವುದರಲ್ಲೂ ಮುಂದು. ಮಲಗಿ ನಿದ್ರಿಸಿದರೆ. 2–3 ದಿನ – ಯಾವುದಕ್ಕೂ ಏಳದೆ-ಮುಸುಕು ಹಾಕಿ ಮಲಗಿರುವುದರಲ್ಲೂ ಹಾಗೆಯೇ.

* * * * *

ಬಜ್ಪೆಯಲ್ಲಿ ಒಂದು ತಿಂಗಳ ಕಾಲ ಎಡೆಬಿಡದೆ ಆಟ ನಡೆದಿತ್ತು. ಸಂಚಾರಕ್ಕೆ ಬಸ್ ಸೌಕರ್ಯ ಇನ್ನೂ ಒದಗಿರಲಿಲ್ಲ. ಭಾಗವತರ ಅವಧೂತ ಮಾರ್ಗದ ದಿನಚರಿ, ಆಗ ಹೀಗಿತ್ತು.

ಬೆಳಿಗ್ಗೆ ಆಟ ಮುಗಿಸಿ, ರಂಗಸ್ಥಳದ ಬಳಿಯಿಂದ ನಡೆಯುತೊಡಗಿದರೆ, ಎಂಟೂವರೆಯ ಹೊತ್ತಿಗೆ ಮರವೂರಿಗಾಗಿ ಮಂಗಳೂರಿಗೆ. ಅಲ್ಲಿ ಮಾರ್ಕೆಟಿನಲ್ಲಿ ಸೇರುಗಟ್ಟಲೆ ಗೇರು ಬೀಜ ಖರೀದಿ ಮಾಡಿ, ಎಲ್ಲಾದರೊಂದು ಕಡೆ ಕುಳಿತು ಅದನ್ನು ಮುಗಿಸಿ, ಒಂದು 'ದಂ' ಎಳೆದು, ಏನಾದರೂ ಬರಹಕ್ಕೆ ಪ್ರಾರಂಭ. ಸಂಜೆಯ ವರೆಗೂ ಬರಹ. ಏಳು ಗಂಟೆಗೆ ಪುನಃ ಬಜ್ಪೆಗೆ ಬಂದು ಬೆಳಗಿನ ತನಕವೂ ಹಾಡುಗಾರಿಕೆ.

ಒಂದು ತಿಂಗಳ ಕಾರ್ಯಕ್ರಮ ಹೀಗೆ ಅವಿರತವಾಗಿ ಸಾಗಿತು. ಆಗ ಅವರಿಗೆ ಯಾವ ತೊಂದರೆಯೂ ಕಾಣಿಸಿಕೊಳ್ಳಲಿಲ್ಲ. ಆದರೆ, ಅನಂತರ ರಕ್ತವಾಂತಿ ಆರಂಭವಾಗಿ, ಪುನಃ ಚೇತರಿಸಿಕೊಳ್ಳಬೇಕಾದರೆ ಮಳೆಗಾಲದ 3 – 4 ತಿಂಗಳುಗಳನ್ನು ಅದಕ್ಕಾಗಿಯೇ ಉಪಯೋಗಿಸಬೇಕಾಯಿತು.

ಸ್ಪರ್ಧೆ-ಆಟ

ಜೋಡಾಟದಲ್ಲಿ ಸ್ಪರ್ಧೆಯಿಂದ ಪದ್ಯ ಹಾಡುವುದೆಂದರೆ ಭಾಗವತರಿಗೆ ಎಲ್ಲಿಲ್ಲದ ಬೇಸರ ಬರುತ್ತಿತ್ತು. "ಸುಮ್ಮನೆ ಶ್ವಾಸಹಾಳು ಮಾಡಿ ಅನಾರೋಗ್ಯ ಸಂಪಾದಿಸುವ ಒಂದು ಬೇಡದ ಪೈಪೋಟಿ" ಎಂದೇ ಜೋಡಾಟದ ಕುರಿತು ಅವರ ಖಚಿತಾಭಿಪ್ರಾಯ.

ಆದರೂ ಕೆಲವೊಮ್ಮೆ ಅವರಿರುವ ಮೇಳದಲ್ಲಿ ಜೋಡಾಟ ನಡೆಯುವುದು ಅನಿವಾರ್ಯವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಭಾಗವತರು ಮನಸೊಲ್ಲದ ಮನಸ್ಸಿನಿಂದ ಹೊತ್ತು ಕಳೆಯುತ್ತಾ ಇದ್ದರು. ಎದುರು ಮೇಳದ ಭಾಗವತರು ಗೆಲುವಿನ ಮುಂಡಿಗೆ ತಿನ್ನತೊಡಗುವಾಗ –

– ಅದು ಸ್ವಪ್ನಸಾಮ್ರಾಜ್ಯವಾಗುತ್ತಿತ್ತು.

ಮಂಕುಡೆಯ ಶ್ರೀ ಆಚಾರ್ಯರಲ್ಲಿ ಹಿಂದೊಮ್ಮೆ ಒಂದು ಜೋಡಾಟ.

ಎದುರಾಳಿ ಭಾಗವತರೂ ಬಲಿಪ ಭಾಗವತರಂತೆಯೇ ಹಳೆಯ ಪದ್ಧತಿಯಲ್ಲಿ ಹೆಸರುಗಳಿಸಿದ್ದವರು. ಕಂಠವೂ ಕಂಚಿನಂತೆ.

ಆ ದಿನದ "ಕೃಷ್ಣಾರ್ಜುನ ಕಾಳಗ"ವನ್ನು ನೋಡಲು ತಂದೆಯವರೂ ನಾನೂ ಹೋಗಿದ್ದೆವು.

ಕೃಷ್ಣನ ಎರಡನೆಯ ಪ್ರವೇಶದ ವರೆಗೂ, ಬಲಿಪ ಭಾಗವತರ ರಂಗಸ್ಥಳ ಭಣಗುಡುತ್ತಿತ್ತು. 'ನಮ್ಮ ಭಾಗವತರು ಸೋತರಲ್ಲಾ' ಎಂಬ ದುಃಖ ತಂದೆಯವರಿಗೆ. ಅದನ್ನು ಆಗಾಗ ಭಾಗವತರಲ್ಲೇ ತೋಡಿಕೊಳ್ಳುತ್ತಿದ್ದರು. "ತಡೆ, ಈಗ ಮಾತ್ರ ಒಂದು ಕೊಡುತ್ತೇನೆ" ಎನ್ನುತ್ತಿದ್ದ ಭಾಗವತರು –

ಎರಡನೇ ಪ್ರವೇಶವ ಹೊತ್ತಿನಲ್ಲಿ "ಇತ್ತ ಪಾಂಡವರೀಪರಿಯೊಳಿರಲು" ಎಂಬ ಪದ್ಯವನ್ನು ಆರಂಭಿಸಿದರು.

ಅದಾವ ಧ್ವನಿಯೋ, ಯಾವ ಶ್ರುತಿಯೋ ದೇವನೇ ಬಲ್ಲ.

ಅದೊಂದು ಚರಣಕ್ಕೆ ಸಮಗ್ರ ಸಭೆ ಸಂತೋಷದ ಕರತಾಡನ ಗೈದಿತು. "ಹೋಃSSS" ಎಂದು ಸಮುದ್ರಘೋಷವೆಬ್ಬಿಸಿತು. ತಂದೆಯವರ ಮುಖದಲ್ಲಿ ಬಿಳಿ ನಗೆಯೊಂದು ಚಿಮ್ಮಿತು. ಅವರಿಗೇ ಅರಿಯದಂತೆ "ಇನ್ನು ಸತ್ತರೂ ಅಕ್ಕು" ಎಂಬ ಉದ್ಗಾರ ಉಕ್ಕಿತು.

ಹಾಗೆಯೇ, ವಿಟ್ಲದಲ್ಲಿ ಮತ್ತೊಂದು ದಿನದ ಜೋಡಾಟ. ಆ ದಿನದ ಪ್ರಸಂಗ "ಅಭಿಮನ್ಯು ಕರ್ಣಪರ್ವ".

ಭಾಗವತರು ಮುಚ್ಚಿದ ಕಣ್ಣನ್ನು ಹಾಡುವಾಗಲೂ ತೆರೆಯದೆ, ಮನಸ್ಸು ಕೊಟ್ಟು ಒಂದೇ ಒಂದು ಪದ್ಯವನ್ನೂ ಹಾಡದೆ ಇದ್ದಾಗ, ಪ್ರೇಕ್ಷಕರಾಗಿ ಸಭೆಯಲ್ಲಿ ಕುಳಿತಿದ್ದ ನಾವು 10–12 ಮಂದಿ ಸಪ್ಪೆಯಾದೆವು. "ಎದುರಾಳಿಗಳು ಗೆದ್ದರು; ನಮ್ಮವರು ಸೋತರು" ಎಂದುಕೊಂಡು, ಬೇಸರದಿಂದ ಎದ್ದು ಮನೆಗೆ ಹಿಂತೆರಳುವ ಸಲುವಾಗಿ ಹೊರಟೆವು.

ಸುಮಾರು ಮೂರು ಫರ್ಲಾಂಗ್‌ಗಳಷ್ಟು ಹಾದಿ ತುಳಿದು, ಅಪ್ಪೇರಿಪಾದೆ ಎಂಬಲ್ಲಿಗೆ ತಲಪಿಯಾಗಿತ್ತು.

ಗಾಳಿಯಲ್ಲಿ ಕೇಳಿ ಬಂದಿತು "ನರನು ಗಾಂಡೀವಧನುವ" ಎಂಬ ಪದ.

ಪದ್ಯವನ್ನು ಅವರು ಹಾಡಿದರೊ, ಅಥವಾ ಹೊರಟ ನಮ್ಮ ಕೆನ್ನೆಗೆ ಬಡಿದು ಹಿಂದಿರುಗಿಸಲೆಂದು ಅದುವೆ ಹಾಡಿಸಿಕೊಂಡಿತೊ ನಾನರಿಯೆ.

ಒಬ್ಬರನೊಬ್ಬರು ದೂಡಿಕೊಂಡು, ಜೀವ ಕೈಯಲ್ಲಿ ಹಿಡಿದು ಓಡುತ್ತಾ ಬಂದು ತಿರುಗಿ ನಾವು ಆಟದ ಆವರಣ ಹೊಕ್ಕುದಂತೂ ನಿಜ.

ಅನುಭವ ನಿರ್ದೇಶನ

ಕಟೀಲು ಮೇಳದಲ್ಲಿ ಗೆಜ್ಜೆಕಟ್ಟಿ ನಾಟ್ಯಾಭ್ಯಾಸವಾಗಿ ನಾನೂ ವೇಷಧಾರಿಯಾಗಲು ತೊಡಗಿದ ಬಳಿಕ–ಕೆಲವು ವರ್ಷಗಳ ತರುವಾಯ ಶ್ರೀ ಭಾಗವತರ ಭಾಗವತಿಕೆಯಲ್ಲಿ ನಾನೂ ಕುಣಿಯುವ ಸಂದರ್ಭಗಳು ಒದಗಿದ್ದುವು.

ಆಗ, ರಾತ್ರೆ ಬಣ್ಣ ಬಳಿದುಕೊಂಡ ಬಳಿಕ, ತಂದೆಯವರ ಕಾಲದಿಂದಲೇ ಇದ್ದ ಸಲುಗೆ ಅಭಿಮಾನಗಳಿಂದಾಗಿ, ಆಯಾ ದಿನದ ಕಥೆಯ ಬಗೆಗೆ ಎಷ್ಟೋ ಅನುಭವಗಳನ್ನು ಅವರಲ್ಲಿ ಕೇಳಿದ್ದಿದೆ. ಅವರು ಬರಿಯ ಕಥಾಸಂದರ್ಭವನ್ನು ಮಾತ್ರ ಆಗ ವಿವರಿಸಿ "ಉಳಿದುದನ್ನು ನಾಳೆ ಬೆಳಿಗ್ಗೆ ಹೇಳುತ್ತೇನೆ" ಎನ್ನುತ್ತಿದ್ದರು. ಹೀಗೆಯೇ ಕೆಲಸ ಮಾಡೆಂದು ನಿರ್ದೇಶನ ಕೊಡುತ್ತಿರಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಕೇಳಿದರೆ, ಇಂತಿಂತಹ ಸಂದರ್ಭಗಳಲ್ಲಿ ಹೀಗೆಯೇ ಕುಣಿದು ಅಭಿನಯಿಸು. ಮಾತು ನೀನು ಮಾತನಾಡುವುದೇ ಮಿತವಾಗಿದೆ. ರಂಗಕ್ಕೆ ಮಾರುದ್ದದ ಭಾಷಣ ಬೇಡ ಎನ್ನುತ್ತಿದ್ದರು.

ಒಂದು ದಿನ, 'ಬಿಲ್ಲಹಬ್ಬ'ದಲ್ಲಿ ನಾನು ಕೃಷ್ಣನ ಪಾತ್ರ ವಹಿಸಿದ್ದೆ. ತಡೆದ ಗೋಪಿಕಾಸ್ತ್ರೀಯರನ್ನು ಸಾಂತ್ವನಗೊಳಿಸಿ ಬೀಳ್ಕೊಡುವ ಸಂದರ್ಭದಲ್ಲಿ ಭಾಗವತರು–

"ಬಾಲೆಯರುಗಳು ಕೇಳಿ" ಎಂಬ ಪದ್ಯವನ್ನೆತ್ತಿಕೊಂಡು ವಿವಿಧ ವಿಸ್ತಾರಗಳಲ್ಲಿ ಹಾಡಿ, ತಾಳಗಳಲ್ಲೂ 2–3 ವಿಧದ ಬದಲಾವಣೆ ಮಾಡಿ, ಕೊನೆಗೆ "ಬಾಯಿತಾಳ"ವನ್ನೂ ಹಾಕಿ ವೇಷಧಾರಿಗಳನ್ನು ಕುಣಿಸತೊಡಗಿದರು.

ಅವರೆತ್ತಿಕೊಂಡ ತಾಳದ ಲಯವೆಲ್ಲಿ ಎಂದು ತಿಳಿಯದೆ ನಾನು ಕುಣಿಯದೆ ನಿಂತುಕೊಂಡೆ.

ಕೈಗೆಟಕುವಷ್ಟು ಸಮೀಪದಲ್ಲೇ ಇದ್ದ ನನ್ನ ಬೆನ್ನಿಗೆ ಜಾಗಟೆಯ ಕೋಲಿನಿಂದಲೇ ಒಂದೇಟು ಬಿತ್ತು. ಆ ಪೆಟ್ಟಿಗೆ ಸರಿಯಾಗಿ "ಥೈ ತಿತ್ತ ಥೈ" ಎಂಬ ಬಾಯಿ ತಾಳವು ಕೇಳಿಸಿತು. ಕಾಲು ಕುಣಿಯಲೇ ಬೇಕಾಯಿತು.

ಆ "ಥೈ ತಿತ್ತ ಥೈ" ಅದೆಷ್ಟು ತ್ವರಿತಗತಿಯಲ್ಲಿ ಹೋಗಿ ಮುಕ್ತಾಯವಾಯಿತೆಂದು ನಾನು ಹೇಳಲಾರೆ. ಮೂಗು ಬಾಯಿಗಳಲ್ಲಿ ಉಸಿರು ಹೊರಹೊಮ್ಮುತ್ತಾ ಇದ್ದ ನನಗೆ ಅರ್ಥಹೇಳುವುದು ತೀರಾ ಕಷ್ಟವಾಗಿತ್ತು.

ಅಂದಿನಿಂದ ತಾಳದ ಲಯಜ್ಞಾನವನ್ನು ನಾನು ಸುಲಭವಾಗಿ ಹಿಡಿದುಕೊಳ್ಳುತ್ತಾ ಬಂದೆ.

ರಂಗದಲ್ಲಿ ಕುಣಿಯಬೇಕಾದ ಪದ್ಯಗಳಿಗೆ ಕುಣಿಯದೆ ನಿಂತಾಗ ಭಾಗವತರು ಕ್ಷಮಿಸುತ್ತಿರಲಿಲ್ಲ. ವೇಷಧಾರಿಯ ಆಯಾಸವನ್ನೂ ಲಕ್ಷಿಸುತ್ತಿರಲಿಲ್ಲ. ನಿಂತರೆ ಗಂಟೆಕೋಲಿನಿಂದ ಬೆನ್ನಿಗೆ ಒತ್ತಿ ಮುಂದೆ ತಳ್ಳುತ್ತಿದ್ದರು. "ಕುಣಿ" ಎಂದು ಬಾಯಲ್ಲೂ ಹೇಳುತ್ತಿದ್ದರು. 'ಆ, ಯಾ, ಸ,' ಎಂದು ಹೇಳಿದರೆ, "ಬಣ್ಣವೇಕೆ ಹಾಕಿದೆ?" ಎಂಬ ಪ್ರಶ್ನೆ ಸಿದ್ಧವಾಗಿರುತ್ತಿತ್ತು.

ತಾಳದ ಗುಟ್ಟುಗಳನ್ನೂ, ವಿಷಮಗತಿಯಲ್ಲಿ ಕುಣಿಯುವ ರಹಸ್ಯವನ್ನೂ ಅವರ ಭಾಗವತಿಕೆಯಿಂದಲೇ ನಾನು ಅನುಭವ ಮಾಡಿಕೊಂಡವನು.

ಗೌರವ ಪ್ರಶ್ನೆ

ಗೌರವಕ್ಕೆ ಕುಂದು ಬರುವ ಸಂದರ್ಭವೊದಾವರೆ ಶ್ರೀ ಭಾಗವತರು ನಿರ್ದಾಕ್ಷಿಣ್ಯದಿಂದ, ಕಠಿಣರಾಗಿಯೇ ವರ್ತಿಸುತ್ತಿದ್ದರು.

ಒಂದು ವರ್ಷ ತಿರುಗಾಟದ ಕೊನೆಯಲ್ಲಿ—ಪತ್ತನಾಜೆಗೆ 13 ದಿನಗಳು ಮಾತ್ರವೇ ಉಳಿದಿದ್ದುವೆನ್ನುವಾಗ, ಮೇಳದ ಯಜಮಾನಿಕೆಯ ಪಾಲುಗಾರಿಕೆಯಲ್ಲಿ ಭಿನ್ನಾಭಿಪ್ರಾಯವಾಯಿತು. ಮೇಳ ಇಬ್ಭಾಗವಾಯಿತು. ಭಾಗವತರು ಆಗ ಪ್ರತಿಪಕ್ಷೀಯ ಪಂಗಡಕ್ಕೆ ಹೊರಟುಹೋದರು. ಮದ್ದಳೆಗಾರರು, ವೇಷಧಾರಿಗಳು, ಕೆಲಸದವರು ಮೇಳದ ಪೆಟ್ಟಿಗೆಗಳನ್ನು ಆಟದ ಗದ್ದೆಯಲ್ಲೇ ಬಿಟ್ಟು ಹೊರಟುಹೋದರು. ಕಾಫಿ ಕುಡಿದು ಹೋಟೆಲಿನಿಂದ ಹಿಂದಿರುಗಿ ಬರುವಾಗ 10–12 ಮಂದಿ ಮಾತ್ರ ಉಳಿದಿದ್ದರು. ನ್ಯಾಯಾನ್ಯಾಯದ ಕಡೆಗೆ ಗಮನ ಕೊಡದೆ ಉಳಿದ 13 ದಿನಗಳ ಆಟಗಳನ್ನು ಆಡುವುದೇ ಕರ್ತವ್ಯಪಾಲನೆ ಎಂದು ನಾನು ತಿಳಿದೆ. ವ್ಯವಸ್ಥಾಪಕರನ್ನು ಸಮಾಧಾನಪಡಿಸಿ, ನನ್ನವರನ್ನು ಪ್ರೋತ್ಸಾಹಿಸಿ ಮೇಳವನ್ನು ಮುಂದುವರಿಸಿದೆ.

ಆ ತರುವಾಯದ ಮಳೆಗಾಲದಲ್ಲಿ ಶ್ರೀ ಭಾಗವತರು ಕಾಣಸಿಕ್ಕಿದಾಗ, ನನ್ನಲ್ಲಿ ಹೇಳದೆ ಮೇಳವನ್ನು ಮುರಿದಿರೇಕೆ? ಪ್ರತಿಪಕ್ಷೀಯರನ್ನು ಹಿಡಿದುಕೊಂಡು ಏಕೆ ಹೊರಟಿರಿ? ಎಂದು ನಾನು ಕೇಳಿದೆ.

"ಮರ್ಯಾದೆಗೆ ಪೆಟ್ಟಾದ ಮೇಲೆ ಏಕೆ ತಿರುಗಾಟ" ಎಂಬ ಉತ್ತರದಿಂದಲೇ ಅವರು ನನ್ನ ಬಾಯಿಗೆ ಬೀಗ ಹಾಕಿದರು.

ಉಳಿದ ನ್ಯಾಯಾನ್ಯಾಯದ ಇತ್ಯರ್ಥಕ್ಕಾಗಿ ಅವರು ವಾದಿಸಲಿಲ್ಲ. 'ನೀನೂ ನನ್ನ ಜೊತೆಯಲ್ಲೇಕೆ ಹೊರಟು ಬರಲಿಲ್ಲ?' ಎಂದು ಪ್ರಶ್ನಿಸಲಿಲ್ಲ. ನಾನು ಪ್ರತಿಪಕ್ಷೀಯರೊಂದಿಗೆ ಹೋದುದಕ್ಕಾಗಿ, ಮೊದಲಿದ್ದ ಪ್ರೀತಿ-ವಿಶ್ವಾಸಗಳನ್ನು ಕಡಿಮೆ ಮಾಡಲೂ ಇಲ್ಲ.

ಮುಖ್ಯವಾಗಿ, ಸ್ವಾಭಿಮಾನಕ್ಕಾಗಿಯೇ ಭಾಗವತರು ಹೊರಟದ್ದಿರಬಹುದೆಂಬುದು ಅನಂತರ ನನ್ನ ಅನುಭವಕ್ಕೆ ಬಂದಿದೆ.

ಗೌರವದ ಕೊಡುಗೆ

ಭಾಗವತರು ಗರ್ವಿತರ ಗರ್ವಭಂಗ ಮಾಡುವುದರಲ್ಲಿ ಮೊದಲಿಗರು.

ಯಕ್ಷಗಾನ ಜಗತ್ತಿನಲ್ಲಿ ಪ್ರಸಿದ್ಧರಾದ ಮೃದಂಗವಾದಕರೊಬ್ಬರು – ಮೃದಂಗವಾದನದಲ್ಲಿ ತುಂಬಾ ಪಾಂಡಿತ್ಯವಿದ್ದವರೇ ಆದರೂ – ಬಹಳ ನಿಷ್ಠುರಿಯಾಗಿ, ಉಳಿದವರನ್ನೆಲ್ಲ ನಿಂದಿಸುತ್ತ ಹೆಮ್ಮೆ ಪಡುತ್ತಿದ್ದರಂತೆ.

'ಮಹಾಸಭೆ' ಎನಿಸಿದ ಒಂದು ತಾಳಮದ್ದಳೆಯಲ್ಲಿ "ಮಾರೀಚ ನಿಶಾಚರ ಸಂತತ......" ಎಂಬ ಪದ್ಯವನ್ನು ಹಾಡಿದಾಗ ಮೃದಂಗವಾದಕರ ಕೈಯಾಡದಂತೆ ಮಾಡಿದುದೂ, ಅನಂತರ ಅವರಿಗೆ ಬಾಯಿ ತಾಳವನ್ನೇ ಹೇಳಿಕೊಟ್ಟು, ಮುಂದೆ ಬಾರಿಸಲು ಅವಕಾಶ ಮಾಡಿಕೊಟ್ಟುದೂ ನನ್ನ ನೆನಪಿನಲ್ಲಿದೆ.

ಕೊಬ್ಬಿದವರ ಸೊಕ್ಕನ್ನು ಇಳಿಸುವ ಶಕ್ತಿಯಿದ್ದ ತಾಳಜ್ಞಾನ ಅವರಲ್ಲಿ ಇದ್ದಿತು.

ಕೊಟ್ಟ ಕಿರೀಟ

ಎರಡು–ಮೂರು ವರ್ಷಗಳ ಮೇಳದ ತಿರುಗಾಟದಿಂದ ನಾನೂ ವೇಷಧಾರಿ ಎನಿಸಿದ್ದಾಗ, ಯಕ್ಷಗಾನದ ಪರಂಪರೆಯ ಕಿರೀಟ-ದಗಲೆ-ಸೋಗೆವಲ್ಲಿ-ಮುಖತುಂಬಿದ ಮೀಸೆ ಇತ್ಯಾದಿಗಳನ್ನು ಧರಿಸಿ ರಾಜವೇಷವನ್ನು ಮಾಡುವ ಅಭ್ಯಾಸ ನನಗೆ ಬಂದಿರಲಿಲ್ಲ.

ನಾನು ಯಜಮಾನನಾಗಿಯೂ ವೇಷಧಾರಿಯಾಗಿಯೂ ಭಾಗವಹಿಸಿದ್ದ ಇರಾ ಸೋಮನಾಥೇಶ್ವರ ಮೇಳ ಆ ವರ್ಷವಷ್ಟೆ ಹೊರಟುದು. ಹಾಡುಗಾರಿಕೆಗೆ ಭಾಗವತರೂ, ಚೆಂಡೆ-ಮೃದಂಗಗಳಿಗೆ ನರಸಿಂಹ ಭಟ್ಟರೂ ಇದ್ದರು.

ಅಯ್ಯನ ಕಟ್ಟೆಯಲ್ಲಿ "ಕುಮಾರ ವಿಜಯ" ಪ್ರಸಂಗ ಕಾರಣಾಂತರಗಳಿಂದ, ದೇವೇಂದ್ರನ ವೇಷಧಾರಿ ಸಮಯಕ್ಕೆ ಒದಗಿ ಬರಲಿಲ್ಲ. ಆತನ ಹೊಣೆ ಹೊರುವ ಬೇರೆಯವರೂ ಇರಲಿಲ್ಲ.

ಮುಂದಿನ ದಾರಿ ಕಾಣದೆ, ಹೊಳೆಯ ಹೊಯಿಗೆಯಲ್ಲಿ ಮಲಗಿದ್ದ ಭಾಗವತರ ಬಳಿ ಹೋದೆ ಪರಿಸ್ಥಿತಿಯನ್ನು ಹೇಳಿದೆ.

"ನೀನೇ ದೇವೇಂದ್ರನ ವೇಷ ಮಾಡು" ಎಂದರವರು.

ಕಿರೀಟ ಹೊತ್ತು ಅಭ್ಯಾಸವಿಲ್ಲದ ನಾನು ಬೆಳಗಿನ ತನಕ ಆ ವೇಷವನ್ನು ನಿರ್ವಹಿಸಬಲ್ಲೆನೆ? ಎಂದು ಕೇಳಿದರೆ–

"ನನಗೆ ಗೊತ್ತಿಲ್ಲ; ಸಾಧ್ಯವಿಲ್ಲದಿದ್ದರೆ ಹೊಳೆಗೆ ಹಾರು" ಎಂದು ಗುಡುಗಿ, ಕಂಬಳಿಯ ಮುಸುಕು ಎಳೆದುಕೊಂಡರು.

ಮರುಮಾತನಾಡದೆ, ಮೌನವಾಗಿ ಚೌಕಿಗೆ ಬಂದೆ. ಅವರ ಬಾಯಿಯಿಂದ "ಹೊಳೆಗೆ ಹಾರು" ಎಂಬ ಮಾತು ಬಂದುದೇಕೆ ಎಂದು ವಿಮರ್ಶಿಸಿದೆ.

ನನ್ನನ್ನು ಎತ್ತಿ ಆಡಿಸಿದ, ನನ್ನ ತಲೆಗೆ ಎಣ್ಣೆ ಹಾಕಿ ಸ್ನಾನ ಮಾಡಿಸಿದ 'ಭಾಗೋತ ಮಾವ' ನಾನು ಹೊಳೆಗೆ ಹಾರುವುದರಲ್ಲಿ ಸಂತೋಷಗೊಂಡಾರೇ? ಗೌರವವನ್ನು ಪ್ರಾಣವೆಂದು ಭಾವಿಸಿರುವ ಭಾಗವತರು, ನಾನೂ ಮರ್ಯಾದೆ ಕಳೆದುಕೊಂಡರೆ ಸಂತೋಷ ಪಡೆದಾರೇ?

ಪ್ರಶ್ನೆಗಳಿಗೆ ಉತ್ತರ ಅರಸಿದೆ, ಸಮಗ್ರ ವೇಷಭೂಷಣಗಳನ್ನು ಧರಿಸುವುದು ನನ್ನ ಅಭ್ಯಾಸಕ್ಕೆ ಬರಬೇಕೆಂಬುದೇ ಅವರ ಬಿರುನುಡಿಯ ಅಂತರಾರ್ಥವಿರಬೇಕೆಂದು ನಿರ್ಧರಿಸಿದೆ.

ಹಾಗೆ, ಬಣ್ಣ ಬಳಿದು, ಎಲ್ಲ ವೇಷಭೂಷಣಗಳಿಂದ ಅಲಂಕೃತನಾಗಿ ರಂಗಪ್ರವೇಶ ಮಾಡುವಾಗ, ಭಾಗವತರನ್ನು ಕಣ್ತುಂಬ ನೋಡಿ ಪಾದಮುಟ್ಟಿ ನಮಸ್ಕರಿಸಿದೆ.

ನನ್ನೆಡೆಗೆ ಒಂದು ಅರೆಗಣ್ಣಿನ ನೋಟ. ಒಂದು ಕಿರುನಗೆ. "ಹೂಂ! ಸಿದ್ಧನಾಗು!" ಎಂಬ ನುಡಿ.

ಅತ್ಯಂತ ಮಧುರವಾಗಿ, ನಿಧಾನಗತಿಯಿಂದ ಪದ್ಯಗಳು ಹೊರಡ ತೊಡಗಿದವು. ನನಗೂ ಹೊಸ ಹುರುಪು. "ಭಾಗೋತ ಮಾವ" ನೀಡಿದ ಸ್ಫೂರ್ತಿ. ಹೊಸತೊಂದನ್ನು ಕೈಗೆಟಕಿಸುವ ಉತ್ಸಾಹ.

ಅಂದಿನ ನನ್ನ ದೇವೇಂದ್ರನ ಪಾತ್ರವು ಭಾವಭರಿತ–ರಸಪೂರ್ಣ–ಸರ್ವಾಂಗ ಸುಂದರವಾಗಿ ಯಶಸ್ವಿಯಾಯಿತೆಂದು ಆಟ ನೋಡಿದ್ದ ಆತ್ಮೀಯ ಶ್ರೀ ನಾರಾಯಣ ಶೇಕರೂ ಇನ್ನಿತರ ಚೊಕ್ಕಾಡಿಯ ಬಂಧುಗಳೂ ಮರುದಿನ ಹೇಳಿ ತಮಗಾದ ಸಂತೋಷ ವ್ಯಕ್ತಪಡಿಸಿದರು.

"ಏನು ತಿದ್ದುಪಡಿಗಳಿವೆ?" ಎಂದು ಭಾಗವತರೊಡನೆ ಕೇಳಿದರೆ, "ಏನೂ ಇಲ್ಲ, ಹೋಗು" ಎಂಬ ಹಿಂದಿನ ದಿನದಂತಹ ಚುಟುಕು ಮಾತಿನ ಉತ್ತರವೇ ದೊರೆಯಿತು.

ಆದರೆ ಪರೋಕ್ಷವಾಗಿ–

'ಗುಂಡನ, ಹೊಸಹಿತ್ಲು ಗಣಪತಿ ಭಟ್ರ. ಇನ್ನೂ ಅನೇಕ ಪ್ರಸಿದ್ಧ ವೇಷಧಾರಿಗಳ 'ಕುಮಾರ ವಿಜಯದ ದೇವೇಂದ್ರ'ನಿಗಾಗಿ ಹಾಡಿದ್ದೇನೆ. ಅವರ ಅಭಿನಯಗಳನ್ನೂ ನೋಡಿದ್ದೇನೆ. ಆದರೆ ನಿನ್ನೆ ನಮ್ಮ ಮಗು ಮಾಡಿದ ಕೆಲಸವನ್ನು ಯಾರೂ ಮಾಡಿದ್ದಿಲ್ಲ. ಅದರಲ್ಲಿ ಯಾರ ಅನುಕರಣೆಯೂ ಇಲ್ಲ. ಅದು ರಸಪೂರ್ಣವಾಗಿ ಬಂದಿತ್ತು. ಆ ಕಿರೀಟ ಹೊತ್ತು ಬೆಳಗಿನ ವರೆಗೆ ಕೆಲಸ ಮಾಡಿಯಾನೆಂಬ ಗ್ರಹಿಕೆ ನನಗೆ ಸ್ವಪ್ನದಲ್ಲೂ ಇರಲಿಲ್ಲ. ಮಗು ಚೆನ್ನಾಗಿ ಅಭಿನಯಿಸಿದ'.

—ಎಂದು ನನ್ನ ಸಹೋದ್ಯೋಗಿಗಳಾದ ವೇಷಧಾರಿಗಳೊಡನೆ ಅವರು ಹೇಳಿದರಂತೆ.

ಆ ತಿರುಗಾಟದುದ್ದಕ್ಕೂ ಅಂತಹ ಹೊಸ ಹೊಸತಾದ ವೇಷಗಳನ್ನೇ ಭಾಗವತರು ನನ್ನ ತಲೆಗೆ ಕಟ್ಟುತ್ತಿದ್ದರು. ನನಗೆ ತ್ರಾಸವಾಗಿದೆ; ನಿಜ. ಆದರೆ ದೊರೆತ ಅನುಭವ!

ಕಷ್ಟ ಸಹಿಷ್ಣು

ನನ್ನ ಬಗೆಗೆ ಬಿದಿರು ಮೈಯಂತೆ ಹೊರಗಿನಿಂದ ಎಷ್ಟು ಕಠಿಣರಾಗಿ ಕಂಡರೂ ಭಾಗವತರು ಅಂತಃಕರಣದಲ್ಲಿ ನನ್ನವರೇ ಆಗಿದ್ದರು.

ನನ್ನ ಯಜಮಾನಿಕೆಯ ಅನನುಭವದಿಂದ ಪ್ರಯಾಣದಲ್ಲಿ ಎಷ್ಟೋ ಬಾರಿ ಕಷ್ಟವಾಗುತ್ತಿತ್ತು. ಆಗ ನನ್ನಲ್ಲಿ ಏನನ್ನೂ ಹೇಳದೆ, ಸ್ನಾನ-ಊಟಕ್ಕೂ ಬಿಡದಿಗೆ ಬಾರದೆ, ಮರದಡಿಯಲ್ಲೊ ಹಳ್ಳಿಯ ಹೊಳೆ ಮಳಲಿನಲ್ಲೊ ಮಲಗಿಬಿಡುತ್ತಿದ್ದರು.

ಅವರು ಮಲಗಿದಲ್ಲಿಗೇ ಅನ್ನ-ಪದಾರ್ಥಗಳ ಪಾತ್ರೆಯನ್ನು ಒಯ್ದು ನಾನೇ ಎಲೆ ಹಾಕಿ "ವನಭೋಜನ" ಮಾಡಿಸುತ್ತಾ ಇದ್ದೆ. ನನ್ನ ಕಷ್ಟಕ್ಕಾಗಿ ಮನದಲ್ಲಿ ಮರುಕ, ಸೇವೆಯಿಂದ ತೃಪ್ತಿ ಆದರೂ ಅದನ್ನು ಬಾಹ್ಯವಾಗಿ ತೋರದೆ—

"ನಿನಗೆ ಯಾಕೆ ಈ ಯಜಮಾನಿಕೆ? ಅಕ್ಕಿಗೆ ರೇಶನ್, ಲೈಟಿಗೆ ಎಣ್ಣೆ ಇಲ್ಲ. ಪ್ರಯಾಣಕ್ಕೆ ಬಸ್ಸುಗಳಿಲ್ಲ. ಇಷ್ಟು ಕಷ್ಟದ ಕಾಲದಲ್ಲೂ ಹಗಲು ಮನೇಜುಮೆಂಟು—ರಾತ್ರೆ ವೇಷ. ಯಾವ ಮೋಕ್ಷಕ್ಕೆ ಇದು? ಇಷ್ಟು ದೂರದೂರಕ್ಕೆ ಈ ಬಿಡು ಆಟಗಳನ್ನು ಒಪ್ಪಿಕೊಳ್ಳುವುದು ಯಾಕೆ?" ಎಂದು ಕಠಿಣವಾಗಿಯೇ ನನ್ನನ್ನು ಬೈದು ಬೆದರಿಸುತ್ತಿದ್ದರು.

ಆ ತಿರುಗಾಟದುದ್ದಕ್ಕೂ ಅಂತಹ ಬಿರುನುಡಿಗಳನ್ನು ಅವರು ಆಡುತ್ತಲೇ ಇದ್ದರು. ಅವರ ಸೇವೆಯನ್ನು ನಾನು ನಡೆಸುತ್ತಲೇ ಇದ್ದೆ. ನಮ್ಮಿಬ್ಬರ ಮನಸ್ಸುಗಳು ಎಂದೂ ಕಲುಷಿತವಾದುದಿಲ್ಲ.

ಅಂದಿನ ಅವರ ಬಿರುನುಡಿಗಳೆಲ್ಲ ಮುಂದಿನ ನನ್ನ –ಶ್ರೀ ಧರ್ಮಸ್ಥಳ ಮೇಳದ–21 ವರ್ಷಗಳ ಯಜಮಾನಿಕೆಗೆ ಸಂಪೂರ್ಣ ಸಹಾಯಕವಾದುವು. ಅಂದಿನ ಬೇಸರದ ಕಾರಣಗಳು ಮುಂದಿನ ಅನುಭವಕ್ಕೆ ಇಡುಗಂಟಾಗಿ ಒದಗಿದವು.

ಕಲಾ ತಪಸ್ವಿ

ಅವರ ಬಿಡುವಿನಲ್ಲಿ —

ಪ್ರತಿದಿನವೂ ಮನೆಯಲ್ಲಿ ಕುಳಿತು ಸಂಶೋಧನೆ ಮಾಡುವುದೂ, ಹಳೆಯ ಪದ್ಯಗಳನ್ನು ಹೊಸ ವಿಧಾನಗಳಿಗೆ ಅಳವಡಿಸುವುದೂ, ಹೊಸ ಯಕ್ಷಗಾನ ಪ್ರಸಂಗಗಳನ್ನು ಸ್ವತಃ ರಚಿಸುವುದೂ, ಸತತವಾಗಿ ನಡೆದಿತ್ತು.

ಅವರು ವಿಟ್ಲದಲ್ಲಿರುವಾಗ, ಮಳೆಗಾಲದಲ್ಲಿ ಅವರಲ್ಲಿಗೆ ಹೋಗಿಬರುವ ಪದ್ಧತಿಯನ್ನಿಟ್ಟುಕೊಂಡಿದ್ದೆ. ಆಗ ಅವರ ಕೃತಿಗಳನ್ನೆಲ್ಲ ಅವರೇ ನನಗೆ ಓದಿ ಹೇಳುತ್ತಿದ್ದರು.

ಅವರು ಹೊಸತಾಗಿ ಬರೆದ "ಗದಾಯುದ್ಧ" ನನ್ನ ಮನಸ್ಸಿಗೆ ತುಂಬ ಹಿಡಿಸಿದ ಪ್ರಸಂಗಗಳಲ್ಲಿ ಒಂದು. (ನನಗಂತೂ ಆ ಪ್ರಸಂಗದಲ್ಲಿ ಅಭಿನಯಿಸುವ ಯೋಗವಿಲ್ಲ. ಇನ್ನಾದರೂ ಅದು ಮುದ್ರಣಗೊಂಡು ಪ್ರಕಟವಾಗಲಿ ಎಂಬ ಹಾರೈಕೆ ಮಾತ್ರ.)

ಶ್ರೀ ಭಾಗವತರು, ಅವರು ವಿದ್ಯಾರ್ಥಿ ದೆಸೆಯಲ್ಲಿ ದಿವಂಗತ ಕೂಡ್ಲು ಶ್ರೀ ಸುಬ್ರಾಯ ಶ್ಯಾನುಭಾಗರ ಶಿಷ್ಯರಾಗಿದ್ದಂದಿನಿಂದ ಇತ್ತೀಚಿನ ವರೆಗಿನ ಅವರ ಜೀವನದ ಅನುಭವಗಳನ್ನು ಆಗಾಗ ನಮಗೆ ತಿಳಿಸುತ್ತ ಇದ್ದವರು. ಅವುಗಳಲ್ಲೆಷ್ಟೋ ರಂಗಕ್ಕೆ ಅನುಕೂಲವಾಗಿದ್ದುವು. ಕೆಲವು ಈಗಿನ ಹೊಸ ಕಾಲಕ್ಕೆ ಪ್ರತಿಕೂಲವಿದ್ದುವು.

ಪ್ರತಿಕೂಲವಾದುವನ್ನು ಬಿಟ್ಟು ಅನುಕೂಲವಾದುವನ್ನು ಅನುಸರಿಸುವುದರಿಂದ ಕಲಾರಂಗಕ್ಕೆ ಅಪಚಾರವೂ ಇಲ್ಲ; ಕಲಾವಿದನಿಗೆ ಪಾಪವೂ ಆಗದು.

ಕೆಲವೊಂದು ದುಃಖರಸ ಪ್ರಧಾನವಾದ ಹಾಗೂ ಭಕ್ತಿರಸ ತುಂಬಿದ ಪದ್ಯಗಳನ್ನು ಹೇಳುವ ತೀವ್ರಗತಿ–ಮಂದಗತಿಗಳ ಬಗ್ಗೆ ಚಾಗಟೆಯನ್ನು ಎತ್ತಿ ಬಿಡಿತ ಕೊಡುವ ಬಗ್ಗೆ ನಾವಿಬ್ಬರೇ ಇದ್ದಾಗ ನಾವೆಷ್ಟೋ ವಾದಿಸಿದ್ದಿದೆ.

ದುಃಖಸನ್ನಿವೇಶದಲ್ಲಿ, ವೇಷಧಾರಿಯು ರಥದ ಮುಂಭಾಗದಲ್ಲಿ ಚಾಪೆಹಾಕಿ ಕುಳಿತು ದುಃಖಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಉದ್ದವಾಗಿ "ಬಿಡಿತ" ಬಾರಿಸಿದರೆ, ಆ ವೇಷಧಾರಿ ಏನು ಮಾಡಲೂ ಸಾಧ್ಯವಾಗದು ಎಂದು ನಾನು ಹೇಳಿದರೆ "ಯಕ್ಷಗಾನಕ್ಕೆ ಬಿಡಿತ ಬೇಕೇ ಬೇಕು" ಎಂಬುದು ಅವರ ಮತವಾಗಿತ್ತು.

"ದುಃಖರಸದಲ್ಲಿ ಕುಣಿಯುವುದು ಹೇಗೆ" ಎಂದರೆ "ಹೇಗಾದರೂ ಕುಣಿಯಬೇಕು" ಎಂಬ ಉತ್ತರ ಬರುತ್ತಿತ್ತು.

ಅಂದಿಗೆ ಅಷ್ಟು ಸಮಂಜಸವೆಂದು ನನಗೆ ತೋರದಿದ್ದ ಆ ಮಾತು, ಸಂಶೋಧನೆ ಹಾಗೂ ಸಾಧನಾನುಭವದ ತರುವಾಯ ಸಾಧುವೆಂದು ತೋರಿದೆ. ದುಃಖರಸಪ್ರಧಾನವಾದ ಪದ್ಯಗಳಿಗೂ ಭಾವಗರ್ಭಿತವಾಗಿ– ರಸಪೂರ್ಣವಾಗಿ ಕುಣಿತ–ಅಭಿನಯಗಳು ಸಾಧ್ಯವೆಂದು ಮನದಟ್ಟಾಗಿದೆ.

ಹಿಂದಿನ – ಅವರ – ಕಾಲದಲ್ಲಿ, ಕುಣಿಯುವಾಗ ತಾಳಕ್ಕೆ ಪ್ರಾಧಾನ್ಯ ಇತ್ತು. ಕುಣಿತದಲ್ಲಿ ಭಾವನೆಗೂ ಪ್ರಾಧಾನ್ಯ ಇದೆ ಎಂಬ ಅಭಿಪ್ರಾಯ ನೋಡುವವರಲ್ಲೂ ಇರಲಿಲ್ಲ; ಹೇಳಿ ಕುಣಿಸುವವರಲ್ಲೂ ಇರಲಿಲ್ಲ. ಬಲಿಪ ಮಾವನೂ ತಾಳದ ಕಡೆಗೇ ಗಮನಕೊಟ್ಟು ನಾನಾ ಕ್ರಮಗಳಲ್ಲಿ ವೇಷಗಳನ್ನು ಕುಣಿಸುತ್ತಿದ್ದರು. ಒಂದೇ ತಾಳಕ್ಕೆ ಹಲವು ಬಗೆಯ ನಾಟ್ಯದ ಹೆಜ್ಜೆಗಳನ್ನೂ ಮುಕ್ತಾಯಗಳನ್ನೂ ಕಲ್ಪಿಸಿಕೊಡುತ್ತಿದ್ದರು. ಪದ್ಯವೂ ಹಾಗೆಯೇ ಬಲವಾದ ಹಾಗೂ ಮಧುರವಾದ ಕಂಠದಿಂದ ಅತ್ಯಂತ ವೇಗಗತಿಯಲ್ಲಿ ಬಂದರೆ ಜನರಿಗೂ ತೃಪ್ತಿ; ಕುಣಿವವನಿಗೂ ಪೋಷಕವಾಗುತ್ತಿತ್ತು.

ಭಾಗವತರು ಅವೆರಡನ್ನೂ ಸಿದ್ಧಿಸಿಕೊಂಡವರು. ರಂಗಕ್ಕೆ ತಂದು ಪ್ರದರ್ಶನ ಮಾಡಿ–ಮಾಡಿಸಿದವರು.

'ಪಾರಿಜಾತ'ದಲ್ಲಿ ಸತ್ಯಭಾಮೆ – ಶ್ರೀಕೃಷ್ಣರ ಸಂಭಾಷಣೆಯ ಸನ್ನಿವೇಶದ ಪದ್ಯಗಳನ್ನು ಅವರು ಹಾಡುವಾಗ, ಆ ಪದ್ಯಗಳ ಗತಿ ನನ್ನ ಕೈ – ಕಾಲುಗಳಿಗೆ ಬಾರದಷ್ಟು ವೇಗವಾಗಿ ಸಾಗುತ್ತಿತ್ತು.

ಆಗ ಹಸ್ತಾಭಿನಯವನ್ನು ಬಿಟ್ಟು ತಾಳಕ್ಕಾಗಿಯೇ ಪೇಚಾಡಿ ಕಾಲಿಗೆ ಮಾತ್ರವೇ ಕೆಲಸ ಕೊಡುವ ಪ್ರಮೇಯ ಬರುತ್ತಿತ್ತು.

ಹಾಗಾಗಲು ಅವರ ಲಯಜ್ಞಾನ ಮತ್ತು ವಿಷಮತಾಳದಲ್ಲಿ ಪದ್ಯಗಳನ್ನು ಹೇಳುವ ಅಭ್ಯಾಸ. ಇವುಗಳು ಕಾರಣವೆಂದು ನನ್ನ ಅಭಿಪ್ರಾಯ.

ಶಿಕ್ಷಕ

ತನ್ನಂತೆಯೆ ಹಾಡಬೇಕೆಂದೂ ತಾಳ ಬಾರಿಸಬೇಕೆಂದೂ ಭಾಗವತರು ಸಾಧ್ಯವಾದವರಿಗೆಲ್ಲ ಉಪದೇಶಿಸುತ್ತಿದ್ದರು. ಅವರ ತಾಳದ ಕಟ್ಟುನಿಟ್ಟಿಗೆ ತಕ್ಕಂತೆ ಕುಣಿಯಲು ಹಲವರನ್ನು ಪ್ರಚೋದಿಸಿದ್ದರು.

ಉಪದೇಶ, ಅನುಸರಣಾಯೋಗ್ಯವಾಗಿತ್ತು. ಆ ದಾರಿಯಲ್ಲೇ ಮುಂದುವರಿದು ಗುರಿ ಮುಟ್ಟುವುದು ಮಾತ್ರ ಯಾವ ಕಲಾವಿದನಿಗೂ ಸುಲಭಸಾಧ್ಯವಾಗಿರಲಿಲ್ಲ. ಅಂತಾಗಿಯೇ ಅವರು,

ಅದು ಸರಿಯಲ್ಲ–ಇದು ತಪ್ಪಾಗಿದೆ; ಆ ಪದ್ಯವನ್ನು ಹೀಗೆ ಹಾಡಬೇಕು – ಈ ತಾಳ ಹೀಗಿರಬೇಕು ಎಂದು ಜೀವನದುದ್ದಕ್ಕೂ ಬೊಬ್ಬಿಡುತ್ತಾ ಇದ್ದರು.

ಆದರೂ ಅದನ್ನು ಭಟ್ಟಿ ಇಳಿಸಿದಂತೆ ಸ್ವಾಧೀನ ಮಾಡಿ ಮುಂದರಿದವರು ಯಾರೂ ಇಲ್ಲ. ಗಂಟಲಲ್ಲಿಳಿಯದ ತುತ್ತು ಅದಾಯಿತು. ಅದೊಂದು ಪದ್ಧತಿ, ಅವರೊಂದಿಗೇ ಹೊರಟು ಹೋಯಿತು.

* * * * *

ಯಕ್ಷಗಾನ ವಾಲ್ಮೀಕಿ ಪಾರ್ತಿ ಸುಬ್ಬನ ಪ್ರಸಂಗಗಳೆಂದರೆ ಭಾಗವತರಿಗೆ ಪ್ರಾಣಾಧಿಕ ಪ್ರೀತಿ. ಅವನ ಕೃತಿಗಳಲ್ಲಿನ ಒಂದೇ ತಾಳದಲ್ಲಿದ್ದ ಐದಾರು ಪದ್ಯಗಳನ್ನು ವಿವಿಧ ತಾಳಗಳಲ್ಲಿ ಅವರು ಬೇರೆ ಬೇರೆಯಾಗಿ ಲೀಲಾಜಾಲವಾಗಿ ಹಾಡುತ್ತಿದ್ದರು. 2–3 ತಾಳಗಳಲ್ಲಿ ಹಾಡುವುದು ಹೇಗೆಂದು ಪ್ರಶ್ನಿಸಿದರೆ "ಪಾರ್ತಿ ಸುಬ್ಬನ ಪದ್ಯಗಳನ್ನು ಸಪ್ತ ತಾಳಗಳಿಗೂ ತಿಳಿದವನಿಗೆ ಅಳವಡಿಸಲು ಕಷ್ಟ ವಾಗುವುದಿಲ್ಲ; ಅದು ನೀರಸವೆನಿಸುವುದೂ ಇಲ್ಲ" ಎಂದು ಹೇಳಿ, ಸ್ವತಹಾ ಹಾಡಿ–ಬಾರಿಸಿ ತೋರಿಸಿ, ನಮ್ಮನ್ನೆಲ್ಲ ಚಕಿತಗೊಳಿಸುತ್ತಿದ್ದರು.

ತನ್ನ ಕಲಾಜೀವನದಲ್ಲಿ ಅವರು ಎಷ್ಟೋ ವೇಷಧಾರಿಗಳಲ್ಲಿದ್ದ ಕುಂದುಕೊರತೆಗಳನ್ನು ಹೋಗಲಾಡಿಸಿ, ಕಲಾಕ್ಷೇತ್ರದಲ್ಲಿ ಪಳಗಿಸಿದ್ದಾರೆ.

ಅವರ ಉತ್ಸಾಹದ ಕಾಲದಲ್ಲಿ ಬೇಕಾದಷ್ಟು ಹರಿಕಥೆಗಳನ್ನು ಮಾಡಿದ್ದಿದೆ. ಪದ್ಯಗಳೆಲ್ಲ ಅವರವೇ. ಅವರ ಕೃತಿಗಳೂ ಹರಿದಾಸ ಪಾವಂಜೆ ಲಕ್ಷ್ಮಿನಾರ್ಣಪ್ಪನವರ ಕೃತಿಗಳಂತೆಯೇ ಪ್ರಾಸ ಪೋಷಿತ – ಲಯಬದ್ಧ – ಕರ್ಣರಸಾಯನವೆನಿಸಿದ್ದವು.

ನಡತೆಯನ್ನು ತಿದ್ದುವುದಕ್ಕಾಗಿ ಭಾಗವತರು ಎಷ್ಟೋ ಮಾತುಗಳನ್ನು ಆಡಿದ್ದಿದೆ. ಮೇಳ ದಲ್ಲಿರುವಾಗಲೂ ಹಾಗೆಯೇ; ಅದರಿಂದ ಹೊರತಾಗಿರುವಾಗಲೂ ಹಾಗೆಯೇ. ಕೆಲವರಿಗೆ ಅವೆಲ್ಲ ನಿಷ್ಠುರದ ಮಾತುಗಳಂತೆ ಕೇಳಿರಬಹುದು. ಟೀಕೆಗಳಾಗಿ ಕಾಣಿಸಿರಲೂ ಬಹುದು. ಆದರೆ ಕಟುಮಾತು ಆಡಿಸಿಕೊಂಡವರು ತನ್ನವರೇ೦ದಾದರೆ – ಅವರ ಮರ್ಯಾದೆಯುಳಿಸುವ ಪ್ರಸಂಗ ಬಂದರೆ, ಭಾಗವತರು ಜೀವದಾಸೆ ಬಿಟ್ಟಾದರೂ ಅವರ ಸಹಾಯಕ್ಕೆ ಧಾವಿಸುತ್ತಿದ್ದರು.

ನಾನು ಶ್ರೀ ಧರ್ಮಸ್ಥಳ ಮೇಳದ ಯಜಮಾನನಾಗಿರುವಾಗ ಒಮ್ಮೆ ಪುತ್ತೂರಿನ ಬಳಿಯ ಕೆದಿಲದಲ್ಲಿ ಒಂದು ಪ್ರದರ್ಶನವಿರಿಸಿದ್ದೆವು.

ಆ ದಿನ, ಅಲ್ಲೇ ಸಮೀಪದಲ್ಲಿ ನಮ್ಮ ಸ್ವಜಾತಿ ಬಾಂಧವರಲ್ಲಿ ಒಂದು ಲಗ್ನವೂ ನಡೆಯ ಲಿತ್ತು. ಲಗ್ನ ಸಮಾರಂಭಕ್ಕೆ ಮಡಿಕೇರಿ, ಮೈಸೂರು, ಬೆಂಗಳೂರು, ಭದ್ರಾವತಿ ಮೊದಲಾದೆಡೆ ಗಳಿಂದ ಹಲವು ಮಂದಿ ಕಲಾಭಿಮಾನಿಗಳಾದ ಗಣ್ಯವ್ಯಕ್ತಿಗಳು ಬರಲಿದ್ದರು. ನಮ್ಮ ಆಟದ ಕಾರ್ಯ ಕ್ರಮಕ್ಕೆ ಅದೂ ಒಂದು ಮುಖ್ಯ ಕಾರಣ.

ಅದೇ ದಿನ ಬೆಳಿಗ್ಗೆ, ಮೇಳದ ಖಾಯಂ ಭಾಗವತರಾಗಿದ್ದವರು ಅವರ ಸ್ವಂತ ಕೆಲಸದ ಮೇಲೆ ಮನೆಗೆ ಹೋಗಬೇಕಾಗಿ ಬಂದಿತು. ಬೆಳ್ತಂಗಡಿಯಿಂದ ಕೆದಿಲಕ್ಕೆ ಬರುವ ಬದಲು ಅವರು ಮನೆಗೆ ಹೊರಟು ಹೋದರು.

ಮೊದಲೇ ಒಪ್ಪಿಕೊಂಡ ಕೆದಿಲದ ಆಟವನ್ನು–ಗಣ್ಯರೆದುರು ನಡೆಯಲಿರುವ ಕಲಾಪ್ರದರ್ಶನ ವನ್ನು–ಭಾಗವತರಿಲ್ಲದೆ ನಡೆಸುವುದು ಹೇಗೆ? ಬಲಿಪಮಾವನನ್ನೇ ಮೊರೆಹೋಗುವುದೆಂದು ನಿರ್ಧ ರಿಸಿ ಬೆಳ್ತಂಗಡಿಯಿಂದ ಆಟದ ಸಾಮಾನುಗಳನ್ನು ಲಾರಿಯಲ್ಲಿ ಕೆದಿಲಕ್ಕೆ ಕಳುಹಿಸಿ, ನಾನು ನೇರಾಗಿ ಅವರಿರುವ ವಿಟ್ಲಕ್ಕೆ ಬಂದೆ.

ಅವರ ಮನೆಯಲ್ಲಿ ಕೇಳಿದಾಗ–

ಅವರಿಗೆ ಅಸೌಖ್ಯವಿದೆ. ಆದರೂ ಬಿಡದೆ 6 ದಿನಗಳ ಕಾಲ ನಡೆಯಲಿರುವ 'ಸಮುದ್ರ ಮಥನ' ಆಟಕ್ಕಾಗಿ ಅವರು ಬೇರೆ ಕಡೆಗೆ ಹೋಗಿದ್ದಾರೆ. ಹಿಂದಿನ ದಿನದ್ದೇ ಕೊನೆಯ ಕಾರ್ಯಕ್ರಮ. ಸಂಜೆ ಹಿಂತಿರುಗಿ ಬರಬಹುದು ಎಂಬ ವಿವರ ದೊರೆಯಿತು.

ನಾನು ಕೂಡಲೇ ಒಂದು ಕಾರ್ ಹಿಡಿದು ಹಿಂದಿನ ದಿನದ ಕಡೇ ಆಟವಾಗಿದ್ದ ಬೆಳ್ಳಾರೆಗೆ ಹೋದೆ.

ಅಲ್ಲಿಗೆ ಹೋದಾಗ, ಭಾಗವತರು ಆಟ ಮುಗಿಸಿ ಬಸ್ಸಿನಲ್ಲೇ ವಿಟ್ಲಕ್ಕೆ ಹೋಗಿದ್ದಾರಾಗಿ ತಿಳಿಯಿತು. ಕಾರ್ ವಿಟ್ಲಕ್ಕೆ ಹಿಂತಿರುಗಿತು. ಬಂದು ಮುಟ್ಟುವಾಗ ಸಂಜೆ ಆರು ಗಂಟೆಯಾಗಿತ್ತು.

ಅತಿ ಆಯಾಸದಿಂದ ಮಲಗಿದ್ದ ಭಾಗವತರು, ಬಂದುದನ್ನರಿತು ಮಲಗಿದ್ದ ಒಳಕೋಣೆಗೇ ನನ್ನನ್ನು ಕರೆಸಿಕೊಂಡರು. "ಏನು ಅವಸರದ ಕಾರ್ಯ?" ಎಂದು ಪ್ರಶ್ನಿಸಿದರು.

ನಮ್ಮ ಭಾಗವತರು ಇಲ್ಲದಿರುವುದನ್ನೂ ಅಂದಿನ ಆಟದ ಪ್ರಾಮುಖ್ಯವನ್ನೂ ತಿಳಿಸಿದೆ. "ನೀವು ಬಂದು ಸುಧಾರಿಸಿಕೊಡಬೇಕು" ಎಂದೆ.

ಅವರು ಕೆರಳಿದ ಸಿಂಹದಂತಾಗಿ, ಮಲಗಿದಲ್ಲಿಂದ ತಟ್ಟನೆ ಎದ್ದು ಕುಳಿತರು. ನಮ್ಮ ಮನೆಮಾತಿನಲ್ಲೇ "ನಿಮಗೆಲ್ಲ ತಲೆ ಸರಿ ಇಲ್ಲ. ಸಮಯಕ್ಕೆ ಸರಿಯಾಗಿ ಕೆಲಸ ಮಾಡದೆ, ಯಾವಾಗಲೂ ತಲೆಬಿಸಿ-ಅವ್ಯವಸ್ಥೆ ಮಾಡುತ್ತೀರಿ. ಭಾಗವತರಿಲ್ಲವೆಂದು ಮೊದಲೇ ಗೊತ್ತಿಲ್ಲವೆ? ಯಾಕೆ ಮೊದಲೇ ಬರಲಿಲ್ಲ?" ಎಂದು ಗುಡುಗಿದರು.

"ಭಾಗವತರು ಹೋಗುವ ವಿಷಯ ಬೆಳಿಗ್ಗೆ ತಾನೇ ತಿಳಿಯಿತು. ಹಾಗಾಗಿ ಓಡಿ ಬಂದೆ. ಮೊದಲೇ ತಿಳಿದಿರಲಿಲ್ಲ" ಎಂದು ಸ್ಪಷ್ಟಪಡಿಸಿದೆ.

ಗುಡುಗು ಶಾಂತವಾಯಿತು. "ನಿನ್ನ ಊಟವಾಗಿದೆಯೆ" ಎಂಬ ಪ್ರಶ್ನೆ ಬಂತು. ಇಲ್ಲ ಎಂದಾಗ, ಸ್ನಾನ ಮಾಡಲು ಅಪ್ಪಣೆಯಾಯಿತು. ಸ್ನಾನ–ಊಟಗಳಾಗುವ ವೇಳೆಗೆ ಅವರು ಅಂಗಿ ಬಟ್ಟೆ ಧರಿಸಿ ಸಿದ್ಧರಾಗಿದ್ದರು.

ಸರಿಯಾಗಿ ನಿಲ್ಲುವ ಸ್ಥಿತಿಯಲ್ಲಿ ಇಲ್ಲದಿದ್ದರೂ ಮಾಲುವ ಮೈಯಲ್ಲೇ ಬಂದು ಕಾರಿನಲ್ಲಿ ಕುಳಿತು "ಎನ್ನ ಜಾಗಟೆ ತೆಕ್ಕೊಂಡು ಬಾ, ಹೋಪೊ" ಎಂದರು.

ಕಾರು ಸಾಗುತ್ತಿದ್ದಂತೆ ದಾರಿಯುದ್ದಕ್ಕೂ–

"ಇನ್ನು ನಿನಗೆ ಮೇಳ ಬೇಡ. ಬೇಕಾದಷ್ಟು ಕಷ್ಟ ಬಂದಿದ್ದಿ. ದೇವರು ಒಳ್ಳೆ ಹೆಸರನ್ನೂ ಕೊಟ್ಟಿದ್ದಾನೆ. ಇನ್ನೂ ಕಷ್ಟ ಬರಬೇಡ. ಹೀಗಿರುವ ಭಾಗವತ–ವೇಷಧಾರಿಗಳನ್ನೂ, ಕೆಲಸದವರನ್ನೂ ನಂಬಿ ನಿನಗಿನ್ನು ಮರ್ಯಾದೆಯಲ್ಲಿ ತಿರುಗಾಟ ಮಾಡಿಸಲು ಸಾಧ್ಯವಿಲ್ಲ. ಈ ವರ್ಷಕ್ಕೇ ನಿಲ್ಲಿಸಿ ಬಿಡು"

–ಎಂದು ಬಹಳವಾಗಿ ಹೇಳಿದರು.

ಆ ಮಾತನ್ನೇ ಪಾಲಿಸುತ್ತಿದ್ದರೆ, ಮುಂದಿನ ತಿರುಗಾಟದಲ್ಲಿ ನನಗೆ ಭವಣೆ ಬಂದು ಹೃದಯ ವಿಕಾರಕ್ಕೆ ಒಳಗಾಗುವ ಪರಿಸ್ಥಿತಿ ಬರುತ್ತಿರಲಿಲ್ಲವೊ ಏನೊ!

ಆ ರಾತ್ರಿಯದು ಬಿಡದೆ 7ನೇ ದಿನದ ಭಾಗವತಿಕೆ. ಹಾಡಲು ಅದೆಷ್ಟು ಕಷ್ಟವಾಗಿತ್ತೊ, ಪಾಪ ಮುದುಕರಿಗೆ! ಕಾಫಿ, ಚಾ, ತಿಂಡಿ ಯಾವುದನ್ನೂ ತೆಗೆದುಕೊಳ್ಳದೆ ಎಲ್ಲಿಂದಲಾದರೂ ಸಾಧ್ಯವಿದ್ದರೆ ಇಷ್ಟು ಜೇನು ತರಿಸಿಕೊಡು ಎಂದರು. ತರಿಸಿದೆ.

ಅರ್ಧ ಕುಡ್ತೆಯಷ್ಟು ಜೇನಿಗೆ ತಣ್ಣೀರು ಬೆರಸಿ ಗಳಗಳನೆ ಕುಡಿದರು. ರಥವಲ್ಲಿ ಕುಳಿತು ಹಾಡತೊಡಗಿದರು.

ಮುದಿಯಾದರೂ ಬಲಿಪ ಬಲಿಪನೇ. ಘರ್ಜನೆಯಲ್ಲಿ ಬಲವಿತ್ತು. ಶಕ್ತಿಯೂ ಇತ್ತು. ಅವರು ಘರ್ಜಿಸಿದರು. ನಾವೆಲ್ಲ ಕುಣಿದೆವು. ಬೆಳಗಾಗುವಾಗ "ಆಟ ಚೆನ್ನಾಯಿತು" ಎಂಬ ಪ್ರತಿಕ್ರಿಯೆ ಶ್ರೋತೃವೃಂದದಿಂದ ಬಂದಿತು.

ಮಾನಾಪಮಾನದ ಪ್ರಸಂಗಗಳಲ್ಲಿ ಮರ್ಯಾದೆಯುಳಿಸಲು ಮುಂದಾಗುವುದು ಅವರ ಅಂತರಂಗದಲ್ಲಿ ಸತತವೂ ಹುದುಗಿದ್ದ ಒಂದು ಉತ್ತಮ ಗುಣ. ಆ ಅನುಭವವನ್ನು ನಾನೂ ಪಡೆದಿದ್ದೇನೆ. ಪಡೆದ ಇತರರೂ ಇದ್ದಾರೆ.

ಅವರ ಮನಸ್ಸು, ಕಾಣುವವರಿಗೆ ವಜ್ರದಷ್ಟು ಕಠಿಣ. ಅರಿತವರಿಗೆ ಹೂವಿನಷ್ಟು ಮೃದು.

ಸ್ನೇಹ ಕಂಬನಿ

ತಂದೆಯವರು ದೀರ್ಘಕಾಲದ "ಸಿಹಿಮೂತ್ರ" ರೋಗದಿಂದಾಗಿ ಹಾಸಿಗೆ ಹಿಡಿದು ನವೆಯುತ್ತಿದ್ದರು. ಹಿಂದಿನ ಗೆಳೆತನದ ಬಂಧನ, ಭಾಗವತರನ್ನು ಒಂದು ದಿನ ಅನಿರೀಕ್ಷಿತವಾಗಿ ನಮ್ಮ ಮನೆಗೆ ಬರಿಸಿತು.

ಮಧ್ಯಾಹ್ನ ಎರಡು ಗಂಟೆಯ ಬಿಸಿಲು. ಐದು ಮೈಲು ದಾರಿಯನ್ನು ಆ ಇಳಿವಯಸ್ಸಿನಲ್ಲೂ ಕಾಲ್ನಡಿಗೆಯಿಂದ ಸಾಗಿಸಿ ಬಂದರು. ಮೈಯಲ್ಲಿ ಬೆವರಿಳಿದಿತ್ತು. ಬಂದವರು ಕೈಕಾಲು ಮುಖ ಕೂಡಾ ತೊಳೆಯದೆ, ತಂದೆಯವರು ಮಲಗಿದ್ದ ಮಂಚದ ಬಳಿಗೇ ನೇರವಾಗಿ ಧಾವಿಸಿದರು.

ಭಾಗವತರನ್ನು ಕಂಡ ತಂದೆಯವರು, ಏಳಲಾರದೆ ಎರಡು ಕೈಗಳನ್ನು ನೀಡಿ ಹಾಸಿಗೆಯಲ್ಲೇ ಉರುಳಾಡಿದರು. ಭಾಗವತರು ತಂದೆಯವರನ್ನು ಅಪ್ಪಿಕೊಂಡರು. ನೀಡಿದ್ದ ಕೈಗಳು ಅವರನ್ನು ಬಾಚಿಕೊಂಡವು.

ಏಳೆಂಟು ನಿಮಿಷ ಕಾಲ, ಇಬ್ಬರೂ ಒಬ್ಬರನ್ನೊಬ್ಬರು ಅಪ್ಪಿಕೊಂಡು ಮೌನವಾಗಿ ಕಣ್ಣೀರು ಸುರಿಸಿದರು. ಹೃದಯದಲ್ಲಿನ ಮೂಕಯಾತನೆಯನ್ನು ಅನುಭವಿಸಿದರು. ಅನಂತರ ಮನಸ್ಸನ್ನು ಹತೋಟಿಗೆ ತಂದುಕೊಂಡರು. ಕಣ್ಣೀರು ಒರಸಿಕೊಂಡು ಮಾತನಾಡಲು ತೊಡಗಿದರು.

ಅವರಿಬ್ಬರೊಳಗಿನ ಗೆಳೆತನದ ಹಾರ್ದಿಕ ಬಂಧ ಅದೆಷ್ಟು ಬಲವಿತ್ತೊ, ದೇವರೇ ಬಲ್ಲ. ನಾವೆಲ್ಲ ಲೋಹಪ್ರತಿಮೆಗಳಂತೆ - ಆ ಸ್ನೇಹ ಕಂಬನಿಯ ದೃಶ್ಯವನ್ನು ಕಾಣುತ್ತಾ ಎಷ್ಟೋ ಹೊತ್ತು ನಿಂತಿದ್ದೆವು.

ಮಾರನೆಯ ದಿನದ ಮಧ್ಯಾಹ್ನದ ವರೆಗೂ ಗೆಳೆಯರಿಬ್ಬರೂ ಬೇಕಾದಷ್ಟು ಮಾತನಾಡಿ ಮನಸ್ಸನ್ನು ಹಗುರವಾಗಿಸಿಕೊಂಡರು.

ಅಗಲಲು ಸಿದ್ಧರಾಗಿ ಅವರು ಹೊರಡುವ ಹೊತ್ತಿಗೆ ಭಾಗವತರ ಪಾದಕ್ಕೆ ಅಡ್ಡಬೀಳುವಂತೆ ತಂದೆಯವರು ನಮಗೆಲ್ಲ ಅಪ್ಪಣೆ ಮಾಡಿದರು. ಕಾಲಿಗಡ್ಡಬಿದ್ದ ನಮ್ಮೆಲ್ಲರನ್ನು ಒಮ್ಮೆ ಕಣ್ತುಂಬಾ ನೋಡಿದ ಅವರು ಕೀಳಲಾರದ ಕಾಲನ್ನು ಕಿತ್ತು ಹೊರಟು ಹೋದರು.

ತಂದೆಯವರನ್ನು ಅವರು ಕಂಡುದು ಅದೇ ಕೊನೆ.

ಕೊನೆಯ ನೋಟ

.........ಅತೀವ ನಿತ್ರಾಣ. ನಡಿಗೆಯಂತೂ ಇರಲಿ, ಮಾತಿಗೂ ಕಷ್ಟಪಡುವ ಸ್ಥಿತಿ......

"ಮೂಲ್ಕಿ ಮೇಳವನ್ನು ನಮ್ಮ ಪೆರ್ವಡಿ ನಾರಾಯಣ ಹೊಸದಾಗಿ ವಹಿಸಿಕೊಂಡಿದ್ದಾನೆ. ಬಾಯಾರು ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಸೇವೆಯ ಆಟ ಇಟ್ಟುಕೊಂಡಿದ್ದಾನೆ. ಒಮ್ಮೆ ದಯ ಮಾಡಿಸಿ ಮಕ್ಕಳನ್ನೆಲ್ಲ ಹರಸ ಬೇಕು" ಎಂದೆ, ವಿಟ್ಲದಲ್ಲಿನ ಅವರ ಮನೆಗೆ ಹೋಗಿ.

"ಏನೂ ಎಡಿತ್ತಿಲ್ಲೆನೆ ಮಗಾ......ಎಂತ ಮಾಡುದು?"

ನಾನೇ ಬಂದು ನಿಮ್ಮನ್ನು ಕರೆದುಕೊಂಡು ಬರುತ್ತೇನೆ ಎಂದೆ.

"ನಿನಗೂ ಸೌಖ್ಯವಿಲ್ಲ. ನೀನೆಲ್ಲಿಗೆ? ನಾನೇ ಬರುತ್ತೇನೆ"

ಆಡಿದಂತೆ ಮಾಡಿದರು. ಆಟದ ದಿನ, ಸಂಜೆಯ ಹೊತ್ತಿಗೆ ಸರಿಯಾಗಿ, ಬಂದರು. ಚೌಕಿ ಮನೆಗೆ ಬಂದು, ದೇವತಾ ಪ್ರಾರ್ಥನೆ ಮಾಡಿಸಿ, ಬಣ್ಣ ಹಾಕಿಸಿ, ಆಟ ನೋಡಲು ಸಿದ್ಧರಾಗಿ ಸಭೆಯಲ್ಲಿ ಕುಳಿತರು.

ಆಟ ನಡೆಯುತ್ತಿದ್ದಷ್ಟು ಹೊತ್ತು ತನ್ನ ತೀವ್ರ ಅನಾರೋಗ್ಯವನ್ನು ಮರೆತರು. ಹರಕೆಯ ವಾತ್ಸಲ್ಯದಲ್ಲಿ ತನ್ಮಯರಾದರು.

ಬೆಳಗಾದ ಮೇಲೆ ನಾನೇ ಅವರನ್ನು ಆಟದ ಗದ್ದೆಯಿಂದ ಮುಳಿಗದ್ದೆಯ ಬಸ್ ನಿಲ್ದಾಣದ ವರೆಗೂ ಕರೆತಂದೆ.

ಬಸ್ ಹತ್ತಿಸಿ ಅವರನ್ನು ಬೀಳ್ಕೊಟ್ಟೆ.........

ನನ್ನ "ಭಾಗೋತ ಮಾವ" ದೇವರ ಪಾದ ಸೇರುವ ಕೆಲವೇ ದಿನಗಳ ಮೊದಲು ನಡೆದ ಘಟನೆ ಅದು.

ಅನಂತರ ಅವರನ್ನು ನಾನು ಕಾಣಲಿಲ್ಲ.

ಇನ್ನೂ ಕಾಣುವುದು ಕಂಬನಿಯ ಕಣ್ಣುಮುಂಜಿನಲ್ಲಿ ಮಾತ್ರ.

ಬಲಿಪರನ್ನು ನಾನು ಕಂಡಂತೆ

ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್, ನಿಸರ್ಗ ಕಲಾನಿಲಯ, ಗುಡ್ಡಡ್ಕ.

ನನಗೆ ನೆನಪಿದ್ದಂತೆ ಅದು ಸಾವಿರದೊಂಬೈನೂರ ಮೂವತ್ತೆರಡನೇ ಇಸವಿ ಇರಬೇಕು. ಅಂದು ನನ್ನ ಹುಟ್ಟೂರಾದ ಕೀರಿಕ್ಕಾಡಿನ ಸಮೀಪದ ಪೆರ್ಲ (ಆಗ ಹಾಯರ್ ಎಲಿಮೆಂಟರಿ) ಶಾಲೆಯಲ್ಲಿ ಯಕ್ಷಗಾನ ಕೂಟ. ಭಾಗವತಿಕೆಗೆ ದಿ। ಬಲಿಪ ನಾರಾಯಣ ಭಾಗವತರು. ಆದರೆ ಪ್ರಸಿದ್ಧಿ 'ಬಲಿಪರು' ಎಂದು ಮಾತ್ರ. ಅವರ ಹೆಸರು ನಾರಾಯಣ ಎಂದು ತಿಳಿದುದು ನನಗೆ ಎಷ್ಟೋ ವರ್ಷಗಳ ಅನಂತರವೇ! ಆ ದಿನ ಹಿಮ್ಮೇಳದಲ್ಲಿ ಮೃದಂಗವಾದಕರಾಗಿದ್ದವರು ಯಕ್ಷಗಾನದ ಸುಪ್ರಸಿದ್ಧ ಮೃದಂಗ ವಾದಕರಾದ ಶ್ರೀ ಕೆಮ್ಮಣ್ಣು ನಾರಾಯಣಪ್ಪನವರು - ಕೇಳಬೇಕೇ ಮತ್ತೆ? ಇಡೀ ಶಾಲೆಯೇ ಜನಸ್ತೋಮದಿಂದ ಕಿಕ್ಕಿರಿದಿತ್ತು.

ಅಂದಿನ ಕಥಾಭಾಗ ಶ್ರೀಮದ್ರಾಮಾಯಣದೊಳಗಣ ಪಾರ್ತಿಸುಬ್ಬ ವಿರಚಿತ 'ಅಂಗದ ಸಂಧಾನ'. ಪಾತ್ರಧಾರಿಗಳಾಗಿ ದಿ। ಪದ್ರೆ ಶ್ರೀಪತಿ ಶಾಸ್ತ್ರಿಗಳು, ಶ್ರೀ ಕುಂಜಾರು ರಾಮಕೃಷ್ಣಯ್ಯನವರು ಇನ್ನೂ ಇತರರು. ರಾಮಕೃಷ್ಣಯ್ಯನವರು ರಾವಣನೆಂದೂ, ಶ್ರೀಪತಿ ಶಾಸ್ತ್ರಿಗಳು ಪ್ರಹಸ್ತನೆಂದೂ, ದಿ। ಬಳ್ಳಮಂಜಲು ರಂಗಪ್ಪಯ್ಯನವರಿಗೆ ಅಂಗದನೆಂದೂ ಆ ಮೊದಲೇ ನಿಶ್ಚಯವಾಗಿತ್ತು. ಆದರೆ ಅದಾವ ಕಾರಣದಿಂದಲೋ ರಂಗಪ್ಪಯ್ಯನವರು ಸಕಾಲಕ್ಕೆ ತಲಪದೆ ಅಂಗದನ ಪಾತ್ರ ತೆರವಾಗಿತ್ತು. ಸುಸಂಸ್ಕೃತ ಕ್ರಮದಿಂದ, ಹಿಂದಿಲ್ಲ, ಇನ್ನು ಮುಂದೆಯೂ ಇಂತಹದಿಲ್ಲ ಎಂಬ ತನ್ನದೇ ಆದ ದಿವ್ಯ ವೈಶಿಷ್ಟ್ಯದಿಂದ ಏಕಮೇವಾದ್ವಿತೀಯ ಘನಶೈಲಿಯಿಂದ ಅರ್ಥ ವಿವರಿಸುತ್ತಿದ್ದ ಶಾಸ್ತ್ರಿಗಳ ಇದಿರಿನಲ್ಲಿ ಅಂಗದನಾಗಲು ಯಾರೂ ಒಪ್ಪದೆ ಸಮಯ ಮೀರಿ ಹೋಗುತ್ತಿತ್ತು. ಅದನ್ನೊಂದನ್ನೂ ಗಣಿಸುವ ಸ್ವಭಾವ ಬಲಿಪರದ್ದಲ್ಲ. ಅವರು ಗಂಟೆಯಾದೊಡನೆಯೇ "ಗಜ ಮುಖದವಗೇ ಗಣಪಗೆ" ಎಂದು ಪ್ರಾರ್ಥನೆಯ ಪದ್ಯ ಪ್ರಾರಂಭಿಸಿಯೇ ಬಿಟ್ಟರು, ವ್ಯವಸ್ಥಾಪಕರ ಕೈಕಾಲೇ ಉಡುಗಿ ಹೋಯಿತು. ಬಲಿಪರ ಹತ್ತಿರ ಪಾತ್ರ ವಿನಿಮಯ ಆಗಿಲ್ಲ ಅನ್ನುವ ಧೈರ್ಯ ಅವರಿಗಿಲ್ಲ. ಅವರಿಗೆಂದೇನು? ಆರಿಂದಲೂ ಅದು ಆಗುವಂಥಾದ್ದೂ ಅಲ್ಲ. ಯಾರಾದರೂ ಧೈರ್ಯಮಾಡಿ ಮಾತಾಡಿ ಜಾಗಟೆ ಇಡಿಸಿದರೆ, ಮತ್ತೆ ಆದಿನ ಅದನ್ನು ಹಿಡಿಸಲು, ಅವರಿಗೆ ಮನಸ್ಸಾಗದಿದ್ದರೆ ಬ್ರಹ್ಮ ಬಂದರೂ ಅಸಾಧ್ಯವೆ. ಹಾಗಿತ್ತು ಅವರ ಶಿಸ್ತಿನ ಕ್ರಮ. ಹಾಗಾಗಿ ವ್ಯವಸ್ಥಾಪಕರು ತಲೆಗೆ ಕೈಯಿಟ್ಟು ಗಡಿಬಿಡಿಯಿಂದ ಅತ್ತಿತ್ತ ಸುತ್ತತೊಡಗಿದರು. ಆಗ ಅವರ ದೃಷ್ಟಿಗೆ ಹೇಗೋ ನಾನು ಸಿಕ್ಕಿಬಿಟ್ಟೆ.

ನಾನು ಅದಾಗಲೇ ಯಕ್ಷಗಾನ ಕಲಾಕ್ಷೇತ್ರಕ್ಕೆ ಕಾಲಿರಿಸಿದ್ದೆನಷ್ಟೆ. ನನ್ನನ್ನು ಕಂಡೊಡನೆ ವ್ಯವಸ್ಥಾಪಕರು "ಮಾಸ್ತರರೇ, ಈವತ್ತು ನನ್ನ ಮರ್ಯಾದೆ ನೀವೇ ಉಳಿಸಬೇಕು ನಿಮಗೆ ಅಂಗದನ ಪಾತ್ರವನ್ನು ಒಪ್ಪಿಸಿದ್ದೇನೆ. ಬನ್ನಿ ಬನ್ನಿ" ಎಂದು ನನ್ನ ಉತ್ತರಕ್ಕೂ ಕಾಯದೆ ನಡೆದೇ ಬಿಟ್ಟರು.

ನನಗೆ ನುಂಗಲಿಕ್ಕೂ ಅಲ್ಲ, ಉಗುಳಲಿಕ್ಕೂ ಅಲ್ಲ. ಅಂತೂ ಚಿರಪರಿಚಿತರಾದ ಅವರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಆ ದಿನ ನಾನು ಅಂಗದನಾದೆ. ಆದರೆ ನಾನು ನಿಜಕ್ಕೂ ಭಯಪಟ್ಟದ್ದು ಶ್ರೀಪತಿ ಶಾಸ್ತ್ರಿಗಳ ಪ್ರಹಸ್ತನಿಗಲ್ಲ; ಬಲಿಪರ ಭಾಗವತಿಕೆಗೆ. ಕಾರಣವಿಷ್ಟೆ– ಎಲ್ಲಾದರೂ ಪಾತ್ರ ಗೌರವವನ್ನು ಬಿಟ್ಟು ಅಸಂಬದ್ಧ ಪ್ರಲಾಪಿಸಿದರೆ ಇಲ್ಲವೇ ನೀರಸವಾದ ವಾದಕ್ಕಿಳಿದರೆ ಬಲಿಪರು ಜಾಗಟೆಯಿಟ್ಟು ನಿರ್ದಾಕ್ಷಿಣ್ಯವಾಗಿ ಕನಲಿಬಿಟ್ಟಾರು ಎಂದು ಅವರ ವಿಚಾರದಲ್ಲಿದ್ದ ಪ್ರಚಾರ ನನಗೆ ಗೊತ್ತಿದ್ದುದೇ. ಆದರೆ ಪುಣ್ಯಕ್ಕೆ ಹಾಗೇನೂ ಆಗದೆ ಬೆಳಗಾಯಿತು. ಇನ್ನೂ ಇಪ್ಪತ್ತರ ಹರೆಯದವನಾದ ನನ್ನ ಮಾತುಗಾರಿಕೆ ಅವರಿಗೇನೋ ರುಚಿಸಿದ್ದಲ್ಲದೆ ಬೆಳಗ್ಗೆ ನನ್ನನ್ನು ಹತ್ತಿರಕ್ಕೆ ಕರೆದು ಹೀಗೇ ಮುಂದಕ್ಕೆ ಬರಬೇಕೆಂದು ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ಅಂದಿನಿಂದ ನಾನು ಕೂಡಾ ಅವರ ಕೂಟದ ಒಬ್ಬ ಅರ್ಥಧಾರಿಯಾದೆ.

ಆ ಬಳಿಕ ಅವರ ಭಾಗವತಿಕೆಗೆ ಅರ್ಥಧಾರಿಯಾಗಿ ೧೯೬೫ನೇ ಇಸವಿ ಆಖೈರಿ ವರೆಗೂ ಹೋಗಿದ್ದೆ. ಅವರ ಕೊನೆ ಭಾಗವತಿಕೆ ನನಗೆ ಸಿಕ್ಕಿದ ಆ ಪುಣ್ಯದಿನವನ್ನು ನಾನು ಹೇಗೆ ಮರೆಯಲಿ? ಅಂದಿನ ಕಥಾಭಾಗ ಸುಭದ್ರಾಪರಿಣಯ. ಆ ಇಳಿವಯಸ್ಸಿನ ವೃದ್ಧಾಪ್ಯದಲ್ಲೂ ಅವರು ಹಾಡಿದ ಹಾಡುಗಾರಿಕೆ ಈಗಲೂ ನನ್ನ ಕಿವಿಗಳಿಗೆ ಕೇಳಿಸುವಂತೆಯೇ ಆಗುತ್ತದೆ. ರಮ್ಯಗವ್ಯ ರಮಣೀಯ ಹಾಡುವಿಕೆಯಿಂದ ಅಂದಿನ ಕೂಟವನ್ನು ಅವರು ಅಷ್ಟೊಂದು ಯಶಸ್ವಿಗೊಳಿಸಿದ್ದರು.

ನನ್ನ ಇದುವರೆಗಿನ ೩೭ ವರ್ಷಗಳ ಯಕ್ಷಗಾನ ಕಲಾಜೀವನದಲ್ಲಿ ನಾನು ಎಷ್ಟೋ ಹಿರಿಯ ಕಿರಿಯ ಭಾಗವತರ ಹಾಡುವಿಕೆಯಲ್ಲಿ ಅರ್ಥಧಾರಿಯಾಗಿ ಭಾಗವಹಿಸಿದ್ದೇನೆ. ಆದರೆ ಬಲಿಪರ ಭವ್ಯ ಭಾಗವತಿಕೆಗೆ ತಲ್ಲೀನನಾದಷ್ಟು ಬೇರೆ ಆರದ್ದರಲ್ಲೂ ಆದದ್ದಿಲ್ಲ– ಅಷ್ಟು ಜಾಗ್ರತೆಯ ಭಯ ಭಕ್ತಿಯಿಂದ ಭಾಗವಹಿಸಿದ್ದೂ ಇಲ್ಲ. ನನ್ನ ದೃಷ್ಟಿಯಿಂದ ಹಾಗಿತ್ತು ಅವರ ವರ್ಚಸ್ಸು.

ಒಂದು ಯಕ್ಷಗಾನ ಕೂಟದಲ್ಲಿ ಕಾರ್ಯಕರ್ತರು ನನಗೊಂದು ಸಣ್ಣ ಪಾತ್ರವನ್ನು ಕೊಟ್ಟಿದ್ದರು. ಅಂದೂ ಭಾಗವತಿಕೆಗೆ ಬಲಿಪರೇ. ಅವರು ಸ್ವಯಂ ಸೃಷ್ಟಿಸಿ ನನ್ನ ಪಾತ್ರಕ್ಕೆ ಹತ್ತು ಪದ್ಯಗಳನ್ನೇ ಹೆಚ್ಚು ಕೊಟ್ಟು ಪದ್ಯಗಳ ಲೆಕ್ಕಗಳಿಂದಲೂ ಅಂದಿನ ಕಥಾಭಾಗದಲ್ಲಿ ನನ್ನ ಪಾತ್ರವೇ ಹಿರಿದೆಂದು ಮಾಡಿಸಿಬಿಟ್ಟರು. ಪ್ರೇಕ್ಷಕರಿಗೂ ಮಿಕ್ಕ ಅರ್ಥಧಾರಿಗಳಿಗೂ ಆಶ್ಚರ್ಯವೇ ಆಶ್ಚರ್ಯ. ಬೆಳಗ್ಗೆ ಒಬ್ಬರು ಮುದುಕರು ಅವರ ಹತ್ತಿರ ಬಂದು "ಏನು ಭಾಗವತರೇ ನಿನ್ನೆ ನೀವು ಕೀರಿಕ್ಕಾಡು ಮಾಸ್ತರರಿಗೆ ಪ್ರಸಂಗದಲ್ಲಿ ಇಲ್ಲದ ಪದ್ಯಗಳನ್ನು ಹೇಳಿದಿರಲ್ಲ– ಅದೇನು?" ಎಂದಾಗ ಅವರ ಉತ್ತರ 'ಪದ್ಯ ಹೇಳುವುದು ಅರ್ಥ ಹೇಳುವವರಿಗೆ' ಎಂತ ಅಷ್ಟೆ.

ಅವರ ಭಾಗವತಿಕೆಯಲ್ಲಿ ಎಂತಹ ಅರ್ಥಧಾರಿಯೇ ಇರಲಿ ಒಣ ಪ್ರತಿಷ್ಠೆಗೋ, ಒಳ ಜಗಳಕ್ಕೋ ಮುಂದಾದರೆ ಅವರು ಆಸ್ಪದವೇ ಕೊಡುತ್ತಿರಲಿಲ್ಲ. ಪ್ರಸಂಗಗಳ ಪದ್ಯಗಳಲ್ಲಿ ಅದನ್ನು ಹೇಳಿ ಇದನ್ನು ಹೇಳಿ ಎಂದರೂ ಅವರು ಅದಕ್ಕೆ ಕಿವಿಗೊಡುತ್ತಿರಲಿಲ್ಲ. ಪದ್ಯಗಳನ್ನು ಕ್ರಮದಂತೆ ಹೇಳುತ್ತ ಹೋಗುವುದೇ ಅವರ ಪದ್ಧತಿ. ಯಕ್ಷಗಾನದಲ್ಲಿ ಯಾರ ದಾಕ್ಷಿಣ್ಯಕ್ಕೂ ಅವರು ಬಾಗುತ್ತಿರಲಿಲ್ಲ. ಯಾವನಾದರೂ ಒಬ್ಬ ಅರ್ಥಧಾರಿ ಇಲ್ಲದ ಕುತರ್ಕಕ್ಕೆ ಪ್ರಾರಂಭಿಸಿ ಪಾತ್ರಗೌರವವನ್ನು ಬಿಟ್ಟು ಸ್ವಪ್ರತಿಷ್ಠೆಗೇ ಪ್ರಯತ್ನಿಸಿದರೆ ಜಾಗಟೆ ಕೆಳಗಿಟ್ಟು ಎಲೆಯಡಿಕೆ ಜಗಿಯಲಿಕ್ಕೆ ಪ್ರಾರಂಭಮಾಡುವ ಕ್ರಮವೂ ಇತ್ತು. ಮತ್ತೆ ಪದ್ಯ ಹಾಡಬೇಕಾದರೆ ಅವರಿಗೇ ಮನಸ್ಸಾಗಬೇಕಷ್ಟೆ. ಒಟ್ಟಿನಿಂದ ಯಕ್ಷಗಾನಕ್ಕೆ ಯಾವುದೇ ರೂಪದಿಂದಲೂ ಅಪಚಾರವಾಗುವುದನ್ನು ಅವರು ಒಂದು ನಿಮಿಷವೂ ಸಹಿಸುತ್ತಿರಲಿಲ್ಲ.

ನಮ್ಮ ಮತ್ತಕಡೆ ಮೊದಮೊದಲು ಯಕ್ಷಗಾನ ಕೂಟಗಳಲ್ಲಿ ಪಾತ್ರಧಾರಿ ಪ್ರಥಮ ಪ್ರವೇಶದಲ್ಲಿ ಭಾಗವತರನ್ನು ಮಾತನಾಡಿಸುವ ಒಂದು ಸಂಪ್ರದಾಯವಿತ್ತು. ಅದನ್ನು ನಿಲ್ಲಿಸಿದವರು ಬಲಿಪರೇ.

ಒಮ್ಮೆ ಒಬ್ಬರು ಅರ್ಥಧಾರಿಗಳು 'ಕೇಳಿದ್ರೇನಯ್ಯ ಭಾಗವತರೆ' ಎಂತ ಅರ್ಥ ಪ್ರಾರಂಭಿಸಿದರು; ಆಗ ಬಲಿಪರು 'ನಾನು ಕೇಳಿದೆ; ಅವರು ಕೊಡಲಿಲ್ಲ' ಎಂದು ಉಚ್ಚರಿಸಿದ್ದೇ ಉಚ್ಚರಿಸಿದ್ದು. ಅಂದಿನಿಂದ 'ಕೇಳಿದ್ರೇನಯ್ಯ ಭಾಗವತರೆ' ಎಂಬುದು ಅಲ್ಲಿಗೇ ನಿಂತುಬಿಟ್ಟಿತು. ಈ ಬಗೆಯದಾಗಿತ್ತು ಅವರು ತಿದ್ದುವ ಕ್ರಮ. ನಿಜಕ್ಕೂ ಯಕ್ಷಗಾನಕ್ಕೊಂದು ವ್ಯವಸ್ಥಿತ ಸುಧಾರಿತ ಮಾರ್ಗವನ್ನು ತೋರಿಸಿಕೊಟ್ಟವರೇ ಬಲಿಪರೆಂದರೂ ಹೆಚ್ಚಲ್ಲ. ಸಂಗೀತ, ರಾಗಬದ್ಧ, ತಾಳಲಯ ಶುದ್ಧ ಕ್ರಮದಿಂದ ಹಾಡಿ ಪಾಮರರಿಂದ ಪಂಡಿತರ ವರೆಗೂ ಯಕ್ಷಗಾನ ರಸವಾಹಿನಿಯನ್ನು ಹರಿಸಿದವರಲ್ಲಿ ನಮ್ಮ ತೆಂಕುತಿಟ್ಟಿನಲ್ಲಿ ಬಲಿಪರೇ ಮೊದಲಿಗರೆಂದು ನಾನಂತೂ ನನ್ನ ಸ್ವಂತ ಅನುಭವದಿಂದ ಧೈರ್ಯವಾಗಿ ಹೇಳಬಲ್ಲೆ. ಪಾರ್ತಿ ಸುಬ್ಬನ ಪದ್ಯಗಳನ್ನು ಹಾಡುವುದರಲ್ಲಿ ಅವರಷ್ಟು ಪಳಗಿದವರು ಇಲ್ಲವೇ ಇಲ್ಲ.

ಯಕ್ಷಗಾನದಲ್ಲಿ ಒಬ್ಬ ಭಾಗವತನಿಗೆ ಇರಬೇಕಾದ ಸರ್ವಗುಣ ಸಂಪನ್ನತೆಯೂ ಅವರಿಗೆ ದೈವದತ್ತವಾಗಿಯೇ ಬಂದಿತ್ತು. ಯಾವ ದಾಕ್ಷಿಣ್ಯಕ್ಕೂ ಕಟ್ಟುಬೀಳದ ಯಾವನ ಬೆದರಿಕೆಯನ್ನೂ ಲಕ್ಷಿಸದ ಧೈರ್ಯವೂ ಅವರಿಗಿತ್ತು. ಆ ಭವ್ಯ ದೇಹ, ಆ ಗಂಭೀರಮುಖಮುದ್ರೆ; ಆ ದಿವ್ಯ ಕಂಠ; ಇನ್ನಾರಿಗೆ ತಾನೇ ಬಂದಿತು? ಯಕ್ಷಗಾನ ಪ್ರಪಂಚದಲ್ಲಿ ದಿ। ಬಲಿಪ ಭಾಗವತರ ಸ್ಥಾನವನ್ನು ತುಂಬ ಬಲ್ಲಂತಹ ಭಾಗವತರೊಬ್ಬರು ಹುಟ್ಟಿಬಂದರೆ ಅದು ಯಕ್ಷಗಾನದ ಭಾಗ್ಯವೇ ಸರಿ.

ಬಲಿಪ ಭಾಗವತರ ಭಾಗಧೇಯವು

ಶ್ರೀ ಗೋಪಾಲಕೃಷ್ಣ ಪುಣಿಂಚತ್ತಾಯ, ಪುಂಡೂರು

ಯಕ್ಷಗಾನ ಪ್ರಪಂಚದಲ್ಲಿ ಒಂದು ಧ್ರುವತಾರೆಯಂತೆ ಬೆಳಗಿದ ದಿವಂಗತ ಬಲಿಪ ನಾರಾಯಣ ಭಾಗವತರ ಬಾಳುವೆಯು, ಬಹಳ ವಿಶೇಷ ರೀತಿಯದಾಗಿತ್ತಲ್ಲದೆ ವಿವೇಕ ಪೂರ್ಣವೂ ಆಗಿತ್ತು. ಅವರ ಅಗಲುವಿಕೆಯು ಪ್ರಕೃತ ಯಕ್ಷಗಾನ ಕಲೆಗೆ ತುಂಬಲಾರದ ನಷ್ಟವಾಗಿದೆ. ಯಾಕೆಂದರೆ ಅವರ ಕಂಠವು ಮಾಧುರ್ಯಗಾಂಭೀರ್ಯಗಳಿಂದ ಕೂಡಿದ್ದು ಕರ್ಣಾನಂದಕರವಾಗಿತ್ತಲ್ಲದೆ, ಅವರೊಬ್ಬ ಸಂಗೀತ, ಸಾಹಿತ್ಯಗಳಲ್ಲಿ ಸಾಕಷ್ಟು ಪರಿಚಯವಿದ್ದ ಉತ್ತಮ ಯಕ್ಷಗಾನ ಭಾಗವತರಾಗಿದ್ದರು. ದಕ್ಷಿಣದ ಯಕ್ಷಗಾನ ಪ್ರಪಂಚದಲ್ಲಿ ಇವರನ್ನು ಸರಿಗಟ್ಟುವ ಯೋಗ್ಯತೆಯುಳ್ಳ ಭಾಗವತರು ಬೇರೆ ಯಾರೂ ಇವರ ಸಮಕಾಲೀನರಾಗಿ ಇದ್ದಿಲ್ಲವೆಂಬುದು ನಿರ್ವಿವಾದ. ಎಂತಲೇ ಮಾನ್ಯ ಮೈಸೂರು ಸರಕಾರದವರು ಕೂಡ ಇವರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನೂ, ವರ್ಷಾಶನವನ್ನೂ ಕೊಟ್ಟು ಪುರಸ್ಕರಿಸಿದರು. ಮಾತ್ರವಲ್ಲ ಇವರೂ ತನ್ನ ಜೀವಿತವನ್ನು ಯಕ್ಷಗಾನ ಕಲೆಗಾಗಿ ಧಾರೆ ಎರೆದು, ತನ್ನ ಜೀವಮಾನದ ಕೊನೆಯ ದಿನಗಳ ತನಕವೂ ಭಾಗವತರಾಗಿ ಮೆರೆದು, ಪರಲೋಕವನ್ನು ಸೇರಿದ ಮಹಾ ಪುಣ್ಯಪುರುಷರೆನಿಸಿದರು.

ಪ್ರಥಮ ದರ್ಶನ

ದಿ। ಬಲಿಪ ಭಾಗವತರನ್ನು ನಾನು ಮೊದಲು ಕಂಡುದು ನಮ್ಮ ನೆಕ್ರಾಜೆ ಗ್ರಾಮದ ಪೈಕದಲ್ಲಿ, ಎರಡು ಭೂತಗಳ ಸ್ಥಾನದ ವಾರ್ಷಿಕ ಉತ್ಸವದ ಕಾಲಕ್ಕೆ ಜರಗಿದ ಯಕ್ಷಗಾನ ಕೂಟದಲ್ಲಿ. ನಾನು ಆಗ ಕೇವಲ ಹನ್ನೆರಡರ ಹರೆಯದವನಾಗಿದ್ದೆನಾದರೂ, ನನ್ನ ಹೃದಯಾಂತರಾಳದಲ್ಲಿ ಮನೆ ಮಾಡಿಕೊಂಡಿದ್ದ ಯಕ್ಷಗಾನ ಕಲಾ ಮಾತೆಯ ಪ್ರೇರಣೆಯಿಂದಲೋ ಏನೋ, ಅಂದಿನ ಯಕ್ಷಗಾನ ಕೂಟದಲ್ಲಿ ನಾನೊಬ್ಬ ಶ್ರೋತೃವಾಗಿ ಬೆಳಗಿನ ತನಕ ಯಕ್ಷಗಾನವನ್ನು ಕೇಳಿದ್ದೇನೆ. ಅಂದಿನ ದೃಶ್ಯವು ಇಂದಿಗೂ ನನ್ನ ಹೃದಯದಲ್ಲಿ ಅಚ್ಚಳಿಯದೆ ಉಳಿದಿದೆ. ಯಾಕೆಂದರೆ ಆ ದಿನದ ಕಲಾ ಪ್ರದರ್ಶನವು ಅಷ್ಟು ರಸವತ್ತಾಗಿ ನಡೆದಿತ್ತು. ಬೆಡಿ ದಿವಸ ರಾತ್ರೆಯ ಬಂಡಿ ಉತ್ಸವ ಮುಗಿದ ಕೂಡಲೇ, ಸುಮಾರು ಹನ್ನೆರಡು ಗಂಟೆಗೆ ಪ್ರಾರಂಭವಾದ ಅಂದಿನ ಯಕ್ಷಗಾನ ಕೂಟದಲ್ಲಿ, ಪ್ರೇಕ್ಷಕರಾಗಿ ತುಂಬಾ ಜನರು ಬೆಳಗಿನ ತನಕ ಅತ್ಯುತ್ಸಾಹದಿಂದ ಪಾಲುಗೊಂಡಿದ್ದರು. ನಾನು ಕೂಡ, ಆ ಪ್ರದರ್ಶನದಲ್ಲಿ ಮೃದಂಗ ಮತ್ತು ಚೆಂಡೆವಾದಕರಾಗಿದ್ದ ನನ್ನ ಚಿಕ್ಕಪ್ಪ ದಿ। ಸುಬ್ರಾಯ ಪುಣಿಂಚತ್ತಾಯರು ಮತ್ತು ದಾಮೋದರ ಪುಣಿಂಚತ್ತಾಯರ ಜೊತೆಯಲ್ಲಿದ್ದು, ಸುಖವಾಗಿ ಅಂದಿನ ಯಕ್ಷಗಾನ ರಸಾಸ್ವಾದನೆ ಮಾಡಿದೆನು. ಬಲಿಪ ಭಾಗವತರಂತೆಯೇ ಅಂದಿನ ಯಕ್ಷಗಾನವನ್ನು ಚಂದಗಾಣಿಸಿದ, ಇನ್ನೊಬ್ಬ ವ್ಯಕ್ತಿಯೆಂದರೆ

ದಿ। ಪಡ್ರೆ ಶ್ರೀಪತಿ ಶಾಸ್ತ್ರಿಯವರು, ಇವರು ಆ ಕಾಲದ ಅದ್ವಿತೀಯ ಅರ್ಥಧಾರಿಗಳೆಂಬುದು ನನ್ನ ಅನುಭವಕ್ಕೆ ಬಂದುದು ಅದೇ ದಿನ ಬಿಲ್ಲಹಬ್ಬ-ಕಂಸವಧೆ, ಅಂದಿನ ಕಥಾಭಾಗವಾಗಿತ್ತು. ಶ್ರೀಪತಿ ಶಾಸ್ತ್ರಿಗಳು ಅಂದು ಅಕ್ರೂರನ ಪಾತ್ರಧಾರಿಯಾಗಿದ್ದರು. ಉಳಿದ ಪಾತ್ರಧಾರಿಗಳ ನೆನಪು ಈಗ ಉಳಿದಿಲ್ಲವಾದರೂ, ಅಂದಿನ ಅಕ್ರೂರನ ಪಾತ್ರವು ಮಾತ್ರ ಎಂದೂ ಮರೆತು ಹೋಗುವುದಿಲ್ಲ. ಕರುಣಾರಸ, ಶಾಂತ ರಸಗಳೇ ಮೈವೆತ್ತಂತಿದ್ದ ಅಕ್ರೂರನ ಮಾತುಗಳು ನಂದಗೋಕುಲದಲ್ಲಿ ಶ್ರೀಕೃಷ್ಣನನ್ನು ಕಂಡಾಗ.

ಕಂಡನು। ಶ್ರೀಲೋಲನ ಕಂಡನು। ಪಲ್ಲವಿ.। ಕಂಡನು, ರತ್ನ ವಿಷ್ಟರದಿ ಶ್ರೀಹರಿಯು
ನುದ್ದಂಡ ಮೂರುತಿಯ, ಬ್ರಹ್ಮಾಂಡ ನಾಯಕನನ್ನು॥ ಕಂಡನು ॥ ಅ. ಪ ॥

ಯಮುನಾ ನದಿಯಲ್ಲಿ ಭಗವಂತನ ವಿಶ್ವರೂಪದರ್ಶನ ಮಾಡಿದಾಗ ಪ್ರೇಕ್ಷಕರಲ್ಲಿ ಭಕ್ತಿರಸವು ತುಂಬಿ ಕಣ್ಣುಗಳಿಂದ ಆನಂದಾಶ್ರುರೂಪದಿಂದ ಹೊರಬರುವಂತೆ ಮಾಡಿತ್ತು. ಮಾತ್ರವಲ್ಲ ಆ ಸಂದರ್ಭಗಳಲ್ಲಿ ಬಲಿಪ ಭಾಗವತರು ಕೂಡ, ಪದ್ಯಗಳನ್ನು ಬಹಳ ಇಂಪಾಗಿ ಹಾಡಿದುದರಿಂದ ಸಭಿಕರು ತಲ್ಲೀನರಾಗಿ ಬಾಹ್ಯ ಪ್ರಪಂಚವನ್ನೇ ಮರೆತಿದ್ದರು. ಬಿಲ್ಲಹಬ್ಬದಲ್ಲಿ ಪದ್ಯಹಾಡಲು ಬಲಿಪ ಭಾಗವತರಿಗೆ ಬಹಳ ಪ್ರೀತಿಯೆಂದು ನನಗೆ ಆ ಮೇಲಿನ ಅನುಭವದಿಂದ ತಿಳಿದುಬಂತು. ಈ ಘಟನೆಯು ನಡೆದು ಇಂದಿಗೆ ನಲುವತ್ತೈದು ವರ್ಷಗಳು ದಾಟಿದುವು. ಆಗ ನಾರಾಯಣ ಭಾಗವತರು ಯುವಕರಾಗಿದ್ದರು.

ದ್ವಿತೀಯ ದರ್ಶನ

ಮೇಲಿನ ಘಟನೆ ನಡೆದು ಎರಡು ವರ್ಷಗಳ ಬಳಿಕ ನಾನು ಭಾಗವತರನ್ನು ಎರಡನೇ ಬಾರಿ ನೋಡಿದುದು ನಮ್ಮ ನೆರೆಯವರಾದ ಬಡಕ್ಕೀಕರೆ ವಿಷ್ಣು ಭಟ್ಟರಲ್ಲಿ, ಅಂದಿನ ಯಕ್ಷಗಾನ ಕೂಟಕ್ಕೆ ನನಗೂ ಆಮಂತ್ರಣವಿದ್ದುದರಿಂದ ರಾತ್ರೆ ನನ್ನ ಹಿರಿಯರ ಜೊತೆಗೆ ನಾನು ಅಲ್ಲಿಗೆ ಹೋದೆನು. ಆ ದಿನ ಮಧ್ಯಾಹ್ನ ಆ ಮನೆಯಲ್ಲಿ ಶುಭ ಸಮಾರಂಭ ನಡೆದಿತ್ತೆಂದು ಅಲ್ಲಿ ಹೋದ ಬಳಿಕ ನನಗೆ ಅರಿವಾಯಿತು. ಸ್ವಜಾತಿಯವರಾದುದರಿಂದ ಬಲಿಪರು ಮತ್ತು ಶ್ರೀಪತಿ ಶಾಸ್ತ್ರಿಗಳು ಸಹ ಮಧ್ಯಾಹ್ನವೇ ಬಂದಿದ್ದರು. ನಾವು ಅಲ್ಲಿಗೆ ತಲಪುವಾಗಲೇ ಯಕ್ಷಗಾನ ಕಾರ್ಯಕ್ರಮವು ಪ್ರಾರಂಭವಾಗಿತ್ತು. ಅಂದಿನ ಕಥಾಭಾಗ. ಮುದ್ದಣಕವಿ ವಿರಚಿತ ಕುಮಾರ ವಿಜಯ ಪ್ರಸಂಗವಾಗಿತ್ತು. ಬಲಿಪ ಭಾಗವತರ ಅಂದಿನ ಹಾಡುವಿಕೆಯು ಯಾರನ್ನಾದರೂ ಮರುಳು ಮಾಡುವಂತಿತ್ತು. ಇದಕ್ಕೆ ತಕ್ಕ ಕಾರಣಗಳೂ ಇವೆ. ಮೊದಲನೆಯದಾಗಿ ಕುಮಾರ ವಿಜಯ ಪ್ರಸಂಗದಲ್ಲಿ ಕವಿಯು ಪದ್ಯಗಳನ್ನು ನಾನಾ ರೂಪದ ವಿಶೇಷಧಾಟಿಗಳಲ್ಲಿ ಪ್ರಾಸಬದ್ಧವಾಗಿ ರಚಿಸಿರುವುದು. ಎರಡನೆಯದಾಗಿ ಆ ದಿನ ಮೃದಂಗವಾದಕರಾಗಿದ್ದವರು, ಆ ಕಾಲದ ಪ್ರಸಿದ್ಧ ಮೃದಂಗವಾದಕರಾದ ಮೂಲ್ಕಿ ಸುಬ್ಬಣ್ಣಯವರು. ಇವರಿಗೆ ಆಗಲೇ ಸಾಮಾನ್ಯ ಎಪ್ಪತ್ತು ವರ್ಷ ಪ್ರಾಯವಾಗಿರಬಹುದೆಂದು ನನ್ನ ಊಹೆ. ವಯೋವೃದ್ಧರಾದರೂ ಅವರ ಕಲಾಪ್ರೌಢಿಮೆಯು ಮಾತ್ರ ಆ ವೇಳೆಯಲ್ಲಿಯೂ ಅದ್ವಿತೀಯವಾಗಿ ಕಂಡುಬರುತ್ತಿತ್ತು. ಮೂರನೆಯದಾಗಿ ಆ ದಿನ ದೇವೇಂದ್ರನ ಪಾತ್ರವನ್ನು ಶ್ರೀಪತಿ ಶಾಸ್ತ್ರಿಗಳು ವಹಿಸಿಕೊಂಡಿದ್ದರು. ಆದುದರಿಂದ ಅಂದಿನ ಯಕ್ಷಗಾನ ಕೂಟವು ಬಹಳ ರಸವತ್ತಾಗಿ ಜರಗಿತಲ್ಲದೆ, ಶ್ರೋತೃಗಳು ಬೆಳಗಿನ ತನಕ ಕುಳಿತು ಶ್ರದ್ಧೆಯಿಂದ ಕೇಳುತ್ತಿದ್ದರು.

ನನಗೂ ಕೂಡ ಆ ಕಾಲದಲ್ಲಿ ಯಕ್ಷಗಾನ ಕೂಟಗಳಲ್ಲಿ ಚೆಂಡೆ ಬಾರಿಸುವಷ್ಟು ಶಿಕ್ಷಣವು ದೊರಕಿದ್ದುದರಿಂದ, ಮಧ್ಯೆ ಒಂದೆರಡು ಬಾರಿ ಚೆಂಡೆ ಬಾರಿಸಿ ಆ ಕೂಟದಲ್ಲಿ ಭಾಗವಹಿಸಿದ್ದೆನು.

ಆ ದಿನ ಅರ್ಥಧಾರಿಗಳು ಕೆಲವೇ ಜನರು ಮಾತ್ರ ಸೇರಿದ್ದ ಕಾರಣ, ವ್ಯವಸ್ಥಾಪಕರ ಮತ್ತು ಸಭಿಕರ ಒತ್ತಾಯದ ಅಪೇಕ್ಷೆಯಂತೆ, ನಾನು ಮೊದಲ ಬಾರಿಗೆ ಜಯಂತನ ಪಾತ್ರಧಾರಿಯಾದೆನು. ಆ ದಿನವೇ ಬಲಿಪ ಭಾಗವತರಿಗೂ ನನ್ನ ಪರಿಚಯವಾಗಿರಬೇಕೆಂದು ನನ್ನ ಎಣಿಕೆ.

"ಕೌಟುಂಬಿಕ ಸ್ನೇಹ"

ಬಲಿಪ ನಾರಾಯಣ ಭಾಗವತರಿಗೆ ನಾರಾಯಣನೆಂಬ ವ್ಯವಹಾರ ನಾಮವಿದ್ದರೂ ಆ ಹೆಸರನ್ನು ಹೇಳದೆ ಕೇವಲ ಬಲಿಪ ಭಾಗವತರೆಂದೇ ಎಲ್ಲರೂ ಹೇಳುತ್ತಿದ್ದು, ಈ ಹೆಸರಿನಿಂದಲೇ ಅವರು ಪ್ರಸಿದ್ಧರಾದರು. ಬಲಿಪರೆಂಬುದು ಅವರ ಮನೆತನದ; ಅಥವಾ ಕುಟುಂಬದ ಹೆಸರಾಗಿದೆ. ತುಳು ನಾಡಿನಲ್ಲಿ ಬಲಿಪ ಎಂದರೆ ಹೆಬ್ಬುಲಿ ಎಂದರ್ಥ. ಹೆಬ್ಬುಲಿಯು ಕಾಡಿನಲ್ಲಿ ಪ್ರಾಣಿಗಳಿಗೆಲ್ಲಾ ರಾಜನಾಗಿ ಮೆರೆಯುವಂತೆಯೇ, ನಾರಾಯಣ ಭಾಗವತರು ಸಹ ಆ ಕಾಲದ ಮಿಕ್ಕ ಯಕ್ಷಗಾನ ಭಾಗವತರಿಗೆಲ್ಲಾ ರಾಜನೆನಿಸಿ, ಈ ಹೆಸರನ್ನು ಅನ್ವರ್ಥ ಮಾಡಿಕೊಂಡಿದ್ದರು. ಬಲಿಪ ಭಾಗವತರಿರುವ ಸಭೆಯಲ್ಲಿ ಬೇರೆ ಯಾವ ಭಾಗವತರಾದರೂ ಪದ್ಯ ಹಾಡಲು ಹೆದರುತ್ತಿದ್ದರು. ಮಾತ್ರವಲ್ಲ ಹುಲಿಯು ತನ್ನ ಬೇಟೆಯನ್ನು ಸಾಧಿಸಲು ನಿದ್ರಾಹಾರಗಳ ಗೊಡವೆಯಿಲ್ಲದೆ ಪ್ರಯತ್ನಿಸಿ ಕೃತಾರ್ಥವಾಗುವಂತೆ ನಾರಾಯಣ ಭಾಗವತರು ಸಹ ಯಕ್ಷಗಾನ ಕಲಾರಾಧನೆಯಲ್ಲಿ ನಿದ್ರಾಹಾರಗಳ ಗೊಡವೆಯಿಲ್ಲದೆ ದುಡಿಯಬಲ್ಲ ಸಮರ್ಥರಾಗಿದ್ದರು. ಆ ರೀತಿಯ ದೇಹದಾರ್ಢ್ಯವನ್ನೂ, ಆರೋಗ್ಯವನ್ನೂ, ದೇವರೇ ಅವರಿಗೆ ಕರುಣಿಸಿದ್ದರು. ಸರಿಯಾದ ಪುರುಷಪ್ರಮಾಣದ ಉದ್ದ ಮತ್ತು ಅಗಲವಿದ್ದ ಅಚ್ಚುಕಟ್ಟಾದ ಅವರ ದೇಹವೂ, ಮನೋಹರವಾದ ಮುಖಕಾಂತಿಯೂ, ಅವರ ವ್ಯಕ್ತಿತ್ವವನ್ನು ಎತ್ತಿ ತೋರಿಸುವ ಮುಖ್ಯ ಸಾಧನಗಳಾಗಿದ್ದುವು. ಒಮ್ಮೆ ಅವರ ಪದ್ಯವನ್ನು ಕೇಳಿದವರು ಮತ್ತೆ ಎಂದೂ ಅವರನ್ನು ಮರೆಯದಂತಹ ಯೋಗ್ಯತೆ ಅವರದಾಗಿತ್ತು.

ಬಲಿಪರ ತರವಾಡು ಮನೆ ಇರುವುದು, ಕಾಸರಗೋಡು ತಾಲೂಕು ಪಡ್ರೆ ಗ್ರಾಮದ ಪತ್ತಡ್ಕ ಎಂಬಲ್ಲಿ. ಇಲ್ಲಿಂದ ಒಂದು ಮೈಲು ದೂರದ ಪಂಬತ್ತಡ್ಕ ಎಂಬಲ್ಲಿರುವ, ಕಡಂಬಳಿತ್ತಾಯರ ತರವಾಡು ಮನೆಯು, ಕೆಲವು ಶತಮಾನಗಳಷ್ಟು ಪುರಾತನವಾದುದು. ಅಂತೆಯೇ ನಮ್ಮ ಪುಂಡೂರು ತರವಾಡು ಮನೆಯೂ ಕೂಡ ಕುಂಬಳೆ ಸೀಮೆಯಲ್ಲಿ ಪಾರ್ತಿಸುಬ್ಬನು ಹುಟ್ಟುವುದಕ್ಕೂ ಎಷ್ಟೋ ವರ್ಷದ ಹಿಂದಿನ ಇತಿಹಾಸದಿಂದ ಕೂಡಿದ್ದಾಗಿದೆ. ಆದುದರಿಂದಲೇ ಪುಂಡೂರು ಪುಣಿಂಚತ್ತಾಯರ ಮನೆಗೂ, ಇಲ್ಲಿಂದ ಬಡಗು ದಿಕ್ಕಿಗೆ ಎಂಟು ಮೈಲು ದೂರದಲ್ಲಿರುವ ಪಂಬತ್ತಡ್ಕ ಕಡಂಬಳಿತ್ತಾಯರ ಕುಟುಂಬಕ್ಕೂ ಬಹಳ ಹಿಂದಿನಿಂದಲೂ ಸಂಬಂಧವು ನಡೆಯುತ್ತಿತ್ತು. ನನ್ನ ಮಾತೃಶ್ರೀಯವರ ಮನೆಯು ಕೂಡ, ಪಂಬತಡ್ಕವೇ ಆಗಿದ್ದುದರಿಂದ ಬಹಳ ಚಿಕ್ಕ ಪ್ರಾಯದಲ್ಲಿಯೇ ಅಜ್ಜಿಯ ಮನೆಗೆ ಹೋಗುವಾಗ ಬಲಿಪರ ತರವಾಡು ಮನೆಯನ್ನು ನಾನು ಕಾಣುವಂತಾಯಿತು. ಪುಂಡೂರಿಂದ ಪಡ್ರೆಗೆ ಹೋಗುವ ಹೆದ್ದಾರಿಯ ಕರೆಯಲ್ಲಿಯೇ ಬಲಿಪರ ಮನೆ ಇರುವುದರಿಂದ, ಈ ದಾರಿಯಾಗಿ ಹೋಗುವ ಯಾರಿಗೂ ಈ ಮನೆಯನ್ನು ಕಾಣಬಹುದು. ಮಾತ್ರವಲ್ಲ ಬಾಯಾರಿದವರಿಗೆ ಆ ಮನೆಗೆ ಹೋಗಿ ಆಸರನ್ನು ಅಡಗಿಸಿಕೊಂಡು ಮುಂದೆ ಹೋಗುವಷ್ಟು ಅನುಕೂಲವುಳ್ಳದ್ದಾಗಿತ್ತು. ತಾಯಿಯ ಮದುವೆಗಾಗಿ ನನ್ನ ತಂದೆಯವರ ದಿಬ್ಬಣವು ಈ ಮನೆಯ ಮುಂಭಾಗದಿಂದ ಹೋಗುತ್ತಿದ್ದಾಗ ಬಾಯಾರಿದ ದಿಬ್ಬಣಿಗರಿಗೆಲ್ಲಾ, ಬೇಕಾದಷ್ಟು ಸೀಯಾಳವನ್ನು ಕೊಟ್ಟು ಸತ್ಕರಿಸಿದ ಇವರ ಹಿರಿಯರು ಸಹ ನನ್ನ ತೀರ್ಥರೂಪರಿಗೆ ಪರಿಚಿತರಾಗಿದ್ದರೆಂದು, ಬಲಿಪ ಭಾಗವತರೇ ನನ್ನಲ್ಲಿ ಹೇಳಿದ ವಿಚಾರ. ಮಾತ್ರವಲ್ಲ ನನ್ನ ತಂದೆಯವರು ಸಹ ಭಾಗವತರಾಗಿದ್ದರಲ್ಲದೆ, ಅಗತ್ಯವಿದ್ದಾಗ ಅರ್ಥ ಹೇಳುತ್ತಲೂ ಇದ್ದರು. ಕರ್ನಾಡ

ಸಮುದಾಯದವರಿಗೆ ಪ್ರಧಾನ ಆರಾಧನಾ ಸ್ಥಳವಾದ ಮಠಗಳಲ್ಲಿ, ಮಲ್ಲ ಶ್ರೀ ದುರ್ಗಾ ಪರಮೇಶ್ವರೀ ಮಠವು ನಮ್ಮ ಮನೆಯಿಂದ ಕೇವಲ ಮೂರು ಮೈಲು ದೂರದಲ್ಲಿ, ದಕ್ಷಿಣ ದಿಕ್ಕಿಗಿದೆ. ಅಂತೆಯೇ ಇನ್ನೊಂದು ಪ್ರಧಾನ ಮಠವಾದ ಅಗಲ್ಪಾಡಿ, ಅನ್ನಪೂರ್ಣೇಶ್ವರೀ ಮಠವು ಕೂಡ, ನಮ್ಮ ಮನೆಯಿಂದ ಬಡಗು ದಿಕ್ಕಿಗೆ ಮೂರು ಮೈಲು ದೂರದಲ್ಲಿದೆ. ಆದುದರಿಂದ ಅಗಲ್ಪಾಡಿಯಿಂದ ಮಲ್ಲಕ್ಕೆ ಅಥವಾ ಮಲ್ಲಮಠದಿಂದ ಅಗಲ್ಪಾಡಿ ಮಠಕ್ಕೆ ಹೋಗುವ ಹೆದ್ದಾರಿಯು ಕೂಡ ನಮ್ಮ ಮನೆಯ ಸಮೀಪದಲ್ಲಿಯೇ ಇರುವುದರಿಂದ ಪ್ರಯಾಣಿಕರು ಆಸರೆ, ಆಯಾಸಗಳ ಪರಿಹಾರಕ್ಕಾಗಿ, ನಮ್ಮ ಮನೆಗೆ ಬರುವುದು ಬಹಳ ಹಿಂದಿನಿಂದಲೂ ವಾಡಿಕೆಯಾಗಿತ್ತು. ಆದುದರಿಂದಲೇ ಶ್ರೀ ಬಲಿಪ ನಾರಾಯಣ ಭಾಗವತರನ್ನು ನಾನು ಮೂರನೆಯ ಬಾರಿ ನಮ್ಮ ಮನೆಯಲ್ಲಿಯೇ ಕಾಣುವಂತಾಯಿತು.

ಒಂದು ದಿನ ಅಪರಾಹ್ನ ಸುಮಾರು ನಾಲ್ಕು ಘಂಟೆಯ ಸಮಯಕ್ಕೆ ಅನಿರೀಕ್ಷಿತವಾಗಿ ಬಲಿಪ ಭಾಗವತರು ಮಲ್ಲ ಮಠದಿಂದ ನಮ್ಮ ಮನೆಗೆ ಬಂದರು. ಆತಿಥ್ಯವನ್ನು ಸ್ವೀಕರಿಸಿ ಸ್ವಲ್ಪ ಹೊತ್ತಿನಲ್ಲಿಯೇ ಮೃದಂಗವನ್ನು ತರುವಂತೆ ಚಿಕ್ಕಪ್ಪನವರಲ್ಲಿ ಕೇಳಿಕೊಂಡರು. ಆ ಕಾಲದ ಮೃದಂಗ ವಾದಕರಲ್ಲಿ ಪ್ರಸಿದ್ಧಿ ಪಡೆದ ಸುಬ್ರಾಯ ಪುಣಿಂಚತ್ತಾಯರು, ಅತ್ಯುತ್ಸಾಹದಿಂದ ಮೃದಂಗ, ಜಾಗಟೆಗಳನ್ನು ತಂದರು. ಮಾತ್ರವಲ್ಲ ಮೃದಂಗವನ್ನು ಸುಲ್ತಾನ ಮಾಡಿ ಸರಿಯಾದ ನಾದ ಹೊರಡುವಂತೆ ಮಾಡಿದರು. ಆದರೆ ದುರ್ದೈವವಶಾತ್ ಆ ದಿನ ನಮ್ಮಲ್ಲಿ, ಸರಿಯಾದ ಶ್ರುತಿಸಾಧನವಿಲ್ಲದುದರಿಂದ, ನಮಗೆಲ್ಲರಿಗೂ ಬಹಳ ಪಶ್ಚಾತ್ತಾಪವಾಯಿತು. ಆದರೂ ಭಾಗವತರು ಮಾತ್ರ ಮನಗುಂದದೆ; ಜಾಗಟೆ ಬಾರಿಸುತ್ತ ಪದ್ಯಹಾಡಲು ಪ್ರಾರಂಭಿಸಿಯೇ ಬಿಟ್ಟರು. ಗೋಸಂಪಿಗೆಯ ಮರದಿಂದ ತಯಾರಿಸಲ್ಪಟ್ಟ ನಮ್ಮ ಮೃದಂಗವು ಬಹಳ ಮೃದುವಾದ, ಮತ್ತು ದೀರ್ಘವಾದ ನಾದವನ್ನುಂಟು ಮಾಡುತ್ತಿದ್ದುದರಿಂದ ಶ್ರುತಿಯ ನಾದವಿಲ್ಲದ ದೋಷವನ್ನದು ಸ್ವಲ್ಪ ದೂರ ಮಾಡಿತು. ಆದುದರಿಂದಲೇ ಭಾಗವತರ ಹಾಡುವಿಕೆಯು, ಮುಸ್ಸಂಜೆಯ ತನಕ ನಿರಾತಂಕವಾಗಿ ಮುಂದೆ ಸಾಗಿತು. ಇದರಿಂದಾಗಿ ನಮ್ಮ ಬಯಲಿನಲ್ಲಿ ವಾಸಿಸುವ ಕೆಲವು ಮಂದಿಗಾದರೂ, ಭಾಗವತರು ನಮ್ಮ ಮನೆಯಲ್ಲಿದ್ದಾರೆಂದು ತಿಳಿಯುವಂತಾಯಿತು. ಮುಂದೆ ಕೇಳುವುದೇನು, ರಾತ್ರಿ ಒಂಭತ್ತು ಘಂಟೆ ಸಮಯಕ್ಕೆ ಅವರೆಲ್ಲರೂ ಒಬ್ಬೊಬ್ಬರಾಗಿ ನಮ್ಮ ಮನೆಗೆ ಬಂದು ಸೇರಿದರು. ರಾತ್ರೆಯ ಭೋಜನ ಮುಗಿಸಿ ನಾವು ಚಾವಡಿಗೆ ಬರುವಷ್ಟರಲ್ಲಿ, ಕೆಲವು ಮಂದಿ ಒಕ್ಕಲಿಗರು ಜಗಲಿಯಲ್ಲಿ ಕುಳಿತಿದ್ದರು. ಭಾಗವತರು ತಾಂಬೂಲವನ್ನು ಜಗಿಯುತ್ತಾ, ಬಂದವರ ಕುರಿತು ವಿಚಾರ ಮಾಡಿದರು. ಆಗ ಅವರೆಲ್ಲರೂ, ನಾವು ಭಾಗವತರ ಪದ್ಯ ಕೇಳಬೇಕೆಂಬ ಆಸೆಯಿಂದ ಬಂದವರೆಂದು ಹೇಳಿಕೊಂಡರು. ಇದನ್ನು ಕೇಳಿದಾಗ ಭಾಗವತರ ಉತ್ಸಾಹವು ದ್ವಿಗುಣಗೊಂಡಿತು. ಪಾತ್ರಧಾರಿಗಳಾರೂ ಆ ದಿನ ಸೇರಿಲ್ಲವಾದರೂ, ಸರಿಯಾದ ಶ್ರುತಿ ಇಲ್ಲವಾದರೂ ಇದೊಂದನ್ನೂ ಗಮನಿಸದೆ ಭಾಗವತರು ಪ್ರಸಂಗದ ಪದ್ಯಗಳನ್ನು ಹಾಡಲು ಪ್ರಾರಂಭಿಸಿದರು. ನನ್ನ ಇನ್ನಿಬ್ಬರು ಚಿಕ್ಕತಂದೆಯವರು ಈಶ್ವರ ಪುಣಿಂಚತ್ತಾಯರು ಮತ್ತು ದಾಮೋದರ ಪುಣಿಂಚತ್ತಾಯರು ಸಹ ಚೆಂಡೆ ಬಾರಿಸಲು ಸಮರ್ಥರಾದುದರಿಂದ ಚೆಂಡೆಯನ್ನು ಬಾರಿಸಲು ಅವರೂ ತೊಡಗಿದರು. ಈ ರೀತಿ ಯಕ್ಷಗಾನ ಕಲೆಯ ಮುಖಾಂಗಗಳಲ್ಲಿ ಕೇವಲ ಮೂರಂಗಗಳಿಂದ ಕೂಡಿದ ತಾಳಮದ್ದಳೆಯು, ಅವಿಚ್ಛಿನ್ನವಾಗಿ ಅರ್ಧ ಝಾಮ ಹೊತ್ತು, ಬಹಳ ರಸವತ್ತಾಗಿ ಜರಗಿತು. ಶ್ರೋತೃಗಳಾಗಿ ಬಂದವರೆಲ್ಲ ಬಹಳ ಸಂತೋಷದಿಂದ ಮರಳಿ ಮನೆಗೆ ಹೋದರು. ಮರುದಿನ ಮಧ್ಯಾಹ್ನದ ಊಟ ತೀರಿಸಿ ಭಾಗವತರೂ ನಮ್ಮಲ್ಲಿಂದ ಊರಿಗೆ ತೆರಳಿದರು.

ಮಲ್ಲಮಠಕ್ಕೆ ಬರುವುದೆಂದರೆ ಭಾಗವತರಿಗೆ ಬಹಳ ಪ್ರೀತಿ. ಆದುದರಿಂದಲೇ ವರ್ಷಕ್ಕೊಂದು ಬಾರಿಯಾದರೂ, ಅವರು ಆ ದೇವರ ದರ್ಶನ ಮಾಡದಿರುವುದು ಬಹಳ ವಿರಳ. ಎರಡು ಬಾರಿ ಬಂದ ವರ್ಷಗಳೂ ಇವೆ. ಮಾತ್ರವಲ್ಲ ತನ್ನ ಪರಲೋಕ ಯಾತ್ರೆಯು ಸಮೀಪಿಸಿತೆಂದು ತಿಳಿದ ಭಾಗವತರು,

ಶ್ರೀ ದೇವಿಯ ಸೇವೆಗಾಗಿ ಧಾವಿಸಿ ಬಂದು, ಪ್ರಕೃತ ಮಠದ ಮೊಕ್ತೇಸರರು ಅಚ್ಚುತ ಭಟ್ಟರ ಸಹಕಾರದಿಂದ ಮರುದಿನವೇ ಒಂದು ಯಕ್ಷಗಾನ ಕೂಟವನ್ನು ಏರ್ಪಡಿಸಿ, ಪ್ರಾರಂಭದಲ್ಲಿ ಒಂದು ಘಂಟೆಯ ಕಾಲ ಬಹಳ ಕಷ್ಟದಿಂದಲಾದರೂ ಪದ್ಯಹಾಡಿ, ತನ್ನ ಭಾಗವತಿಕೆಯನ್ನು ಕೊನೆಗೊಳಿಸಿದುದು, ಇಲ್ಲಿ ನಾವು ಮರೆಯತಕ್ಕುದಲ್ಲ. ಭಾಗವತರು ಮಠಕ್ಕೆ ಬಂದಾಗಲೆಲ್ಲಾ ಹೆಚ್ಚಾಗಿ ಯಕ್ಷಗಾನ ಕೂಟಗಳು ತಪ್ಪದೆ ಜರಗುತ್ತಿದ್ದುವು. ಇದಕ್ಕೆ ಭಾಗವತರ ಪ್ರೋತ್ಸಾಹವು ಮಾತ್ರ ಕಾರಣವಾಗಿರದೆ, ಆ ದೇವಸ್ಥಾನದ ಆಡಳಿತೆ ಮೊಕ್ತೇಸರರ ಯಕ್ಷಗಾನ ಕಲಾಪ್ರೇಮವು ಕೂಡಾ ಕಾರಣವಾಗಿತ್ತು. ಆ ಕಾಲದಲ್ಲಿ ಆಡಳಿತೆ ನಡೆಸುತ್ತಿದ್ದ ದಿವಂಗತ ಆನೆಮಜಲು ಸುಬ್ರಹ್ಮಣ್ಯ ಭಟ್ಟರು ಮತ್ತು ಅವರ ಸಹೋದರ ಕೃಷ್ಣ ಭಟ್ಟರು ಸಹ ಯಕ್ಷಗಾನ ಕಲಾ ಪ್ರೇಮಿಗಳು. ಮಾತ್ರವಲ್ಲ ಆ ಕಲೆಯಲ್ಲಿ ದುಡಿದು ಕಷ್ಟಪಟ್ಟವರು. ಮೊದಲನೆಯವರು ಪಾತ್ರಧಾರಿಯಾಗಿ ಕಲಾಸೇವೆ ಮಾಡಿದರೆ, ಎರಡನೆಯವರಾದ ದಿವಂಗತ ಕೃಷ್ಣ ಭಟ್ಟರು, ಮೃದಂಗವಾದನ ಮತ್ತು ಪದ್ಯ ಹಾಡಲು ಸಹ ಬಲ್ಲವರಾಗಿದ್ದರು. ಈ ಶಿಕ್ಷಣಕ್ಕಾಗಿ ಅವರು ಸುಮಾರು ಮೂರು ವರ್ಷ ಕಾಲ ನಮ್ಮ ಮನೆಗೆ ರಾತ್ರಿ ತಪ್ಪದೆ ಬರುತ್ತಿದ್ದರು. ಆದುದರಿಂದಲೇ, ಮಲ್ಲಮಠದ ಮೊಕ್ತೇಸರರಿಗೂ, ನಮಗೂ ಒಂದು ಬಗೆಯ ಆತ್ಮೀಯವಾದ ಸಂಬಂಧವೂ ಬೆಳೆದಿತ್ತು. ಮಾತ್ರವಲ್ಲ ನಮ್ಮ ಪುಂಡೂರು ಶಾಲೆಯಲ್ಲಿ ನೆರೆಯವರ ಸಹಾಯ ಸಹಕಾರಗಳಿಂದ ಮತ್ತು ಮೇಲೆ ಹೇಳಿದ ಮಹನೀಯರ ಸೇರುವಿಕೆಯಿಂದ ಒಂದು ಯಕ್ಷಗಾನ ಸಂಘವು ಪ್ರಾರಂಭವಾಗಿ ವಾರಕ್ಕೊಂದು ಯಕ್ಷಗಾನ ಕೂಟವು ಕೂಡಾ ಜರಗುತಿತ್ತು. ಈ ಕಾಲಾವಧಿಯಲ್ಲಿಯೇ ಮಲ್ಲಮಠದಲ್ಲಿ ಅದೊಂದು ಸಿಂಹಮಾಸದಲ್ಲಿ ಬಹಳ ವಿಜೃಂಭಣೆಯ ಯಕ್ಷಗಾನ ಕೂಟವು ಜರಗಿತ್ತು. ಆ ದಿನ ಕಾಸರಗೋಡು ಸೆಕೆಂಡರೀ ಶಾಲೆಯಲ್ಲಿ ಪಂಡಿತರಾಗಿದ್ದ ದಿ। ಸುರತ್ಕಲ್ ಸುಬ್ರಾಯರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಬಲಿಪ ಭಾಗವತರು ಮತ್ತು ಕೆಮ್ಮಣ್ಣು ನಾರ್ಣಪ್ಪಯ್ಯನವರು ಅಂದಿನ ಹಿಮ್ಮೇಳದವರಾಗಿದ್ದರು. ಸಿಂಹಮಾಸದ ಶನಿವಾರಗಳಲ್ಲಿ ಮಲ್ಲಮಠಕ್ಕೆ ಭಕ್ತಾದಿಗಳು ಸಹಸ್ರ ಸಂಖ್ಯೆಯಲ್ಲಿ ಬಂದು ಸೇರುವುದು ಈಗಲೂ ರೂಢಿಯಾಗಿದೆ. ಆದುದರಿಂದಲೇ ಆ ದಿನದ ಯಕ್ಷಗಾನ ಕೇಳಲು ಸಾವಿರಾರು ಮಂದಿ ಸೇರಿದ್ದರು. ಅಂದಿನ ಕಥಾಭಾಗವು ರಾಮಾಯಣದಲ್ಲಿ ಸುಂದರಕಾಂಡದ, ಉಂಗುರ ಸಂಧಿಯಾಗಿತ್ತು. ದಿ। ಶ್ರೀಪತಿ ಶಾಸ್ತ್ರಿಗಳೇ ಆ ದಿನ ಹನುಮಂತನ ಪಾತ್ರಧಾರಿಯಾಗಿದ್ದರು. ನಾವು ರಾತ್ರೆ ಮಠಕ್ಕೆ ತಲಪುವಾಗ ಯಕ್ಷಗಾನವು ಪ್ರಾರಂಭವಾಗಿತ್ತು. ಆದರೂ ಅಂದಿನ ಅಧ್ಯಕ್ಷರು ಸಭೆಯಲ್ಲಿ ಶೃಂಗಾರ ರಾವಣನ ಪಾತ್ರವನ್ನು, ನಾನು ವಹಿಸಿಕೊಳ್ಳುವುದಾಗಿ ಸಾರಿದರು. ಆದುದರಿಂದ ತೀರಾ ಅಪರಿಚಿತವಾದ ಆ ದಿನದ ರಾವಣನ ಪಾತ್ರವನ್ನು ನಿರ್ವಹಿಸಲು ನಾನು ನಿರ್ಬಂಧಿತನಾದೆನು. ಆದರೆ ಅಂದಿನ ಸಭಿಕರು ಮತ್ತು ಮೃದಂಗವಾದಕರಿಂದ, ಹುರುಪುಗೊಂಡ ಭಾಗವತರ ಹಾಡುವಿಕೆಯು ಬಹಳ ಉತ್ಸಾಹ ಪೂರ್ಣವಾಗಿತ್ತು. ಆದರಲ್ಲಿಯೂ, ಶೃಂಗಾರ ರಾವಣನು ಸೀತೆಯಲ್ಲಿ ಮಾತಾಡಿಸುವ ಕಾಲದಲ್ಲಿ ಹಾಡಿದ.

[ರಾಗ ಸಾವೇರಿ. ಆದಿತಾಳ]

ಮಾತಾಡಬಾರದೆನೇ, ಸೀತಾದೇವಿ, ಮಾಡಬಾರದೇನೆ ॥ ಇತ್ಯಾದಿ ಪದ್ಯಗಳು.

ಬಹಳ ಸೊಗಸಾಗಿದ್ದುವಲ್ಲದೆ ಆ ಪದ್ಯಗಳ ಅರ್ಥ ಹೇಳುವಾಗ ನನ್ನನ್ನೇ ನಾನು ಮರೆತು ಮಾತಾಡುವಂತೆ ಮಾಡಿದ್ದುವು. ಈ ವಿಷಯವಾಗಿ ಅಂದಿನ ಸಭಾಧ್ಯಕ್ಷರೇ ಭಾಗವತರನ್ನು ಮುಕ್ತ ಕಂಠದಿಂದ ಹೊಗಳಿದ್ದರು.

ಕಲಾಪ್ರೇಮ

ದಿವಂಗತ ಭಾಗವತರು ಕಲಾಭಿವೃದ್ಧಿಗಾಗಿ ತುಂಬಾ ದುಡಿದವರು. ಅವರು ಪಡ್ರೆಯಲ್ಲಿ ವಾಸವಾಗಿದ್ದ ಕಾಲದಲ್ಲಿ ಅಲ್ಲಿಯೇ ಒಂದು ಯಕ್ಷಗಾನ ಸಂಘವನ್ನು ಸ್ಥಾಪಿಸಿ ವಾರಕ್ಕೊಂದು ಯಕ್ಷಗಾನ ಕೂಟವನ್ನು ನಡೆಸುತ್ತಿದ್ದರು. ಈ ಸಂಘದಲ್ಲಿ ಕೋಟಿ ಹರಿಯಣ್ಣ ಭಟ್ಟರು ಮತ್ತು ಸೆಟ್ಟಿಬಯಲು ನಾರಾಯಣ ಭಟ್ಟರು ಕೂಡ ಮೃದಂಗವಾದಕರಾಗಿಯೂ. ದಿ। ಶ್ರೀಪತಿ ಶಾಸ್ತ್ರಿಗಳು, ದಿ। ಪಂಬತಡ್ಕ ಶ್ರೀನಿವಾಸ ಕಡಂಬಳಿತ್ತಾಯರು, ದಿ। ಕೋಟಿ ಸುಬ್ರಾಯ ಭಟ್ಟರು ಸಹ ಪ್ರಮುಖ ಪಾತ್ರಧಾರಿಗಳಾಗಿದ್ದರು. ಆ ಕಾಲದಲ್ಲಿ ಶ್ರೀ ಭಾಗವತರು ಪದ್ಯ ಹಾಡಲು ಕೆಲಮಂದಿ ವಿದ್ಯಾರ್ಥಿಗಳಿಗೆ ಶಿಕ್ಷಣಕೊಡುತ್ತಿದ್ದರು. ಅವರ ಶಿಷ್ಯರಾಗಿ ಈಗಲೂ ಕೆಲವರು ಪದ್ಯ ಹಾಡುತ್ತಾರೆ. ಮಾತ್ರವಲ್ಲ ಅವರ ಮೊಮ್ಮಗ ನಾರಾಯಣ ಭಟ್ಟರು ಈಗ ಪ್ರಸಿದ್ಧ ಭಾಗವತರಾಗಿರುವುದು, ಯಕ್ಷಗಾನ ಪ್ರಪಂಚದಲ್ಲಿ ಎಲ್ಲರೂ ತಿಳಿದಿರುವ ವಿಚಾರ. ಭಾಗವತರ ಯಕ್ಷಗಾನ ಸಂಘವು ಸಜೀವವಾಗಿದ್ದ ಕಾಲದಲ್ಲಿಯೇ ಮಲ್ಲಮಠದಲ್ಲಿ, ನವರಾತ್ರೆಯ ಪೂಜೆಯ ವೇಳೆ ಒಂದು ಯಕ್ಷಗಾನವು ಜರಗಿತ್ತು. ನನಗೂ ಆಮಂತ್ರಣ ವಿದ್ದುದರಿಂದ ನಾನು ಸಹ ರಾತ್ರೆ ಅಲ್ಲಿಗೆ ಹೋಗಿದ್ದೆ. ಆ ದಿನ ಸೇತು ಬಂಧನ, ಅಂಗದ ಸಂಧಾನವು ಕಥಾಭಾಗವಾಗಿತ್ತು. ದಿ। ಗೋಳಿತಡ್ಕ ಶಂಕರ ಭಟ್ಟರು ರಾವಣ ಮತ್ತು ಶ್ರೀಪತಿ ಶಾಸ್ತ್ರಿಗಳು ವಿಭೀಷಣನ ಪಾತ್ರಧಾರಿಗಳಾಗಿದ್ದರು. ಕಣ್ಣೂರು ಸುಬ್ರಾಯ ಉಡುವಣ್ಣಾಯರು ಮತ್ತು ನಾನು ಅಂಗದ, ಪ್ರಹಸ್ತರ ಪಾತ್ರವನ್ನು ನಿರ್ವಹಿಸಿದ್ದೆವು. ಮರುದಿನ ಶ್ರೀ ಭಾಗವತರನ್ನು ಸಶಿಷ್ಯರಾಗಿ ನಮ್ಮಲ್ಲಿಗೆ ಬರುವಂತೆ ನಾವು ಆಮಂತ್ರಿಸಿದುದರಿಂದ ನವರಾತ್ರೆ ಪೂಜೆಯ ಕೊನೆಯ ದಿನ ನಮ್ಮಲ್ಲಿಗೆ ಅವರೆಲ್ಲರೂ ಬಂದು ಒಂದು ಯಕ್ಷಗಾನ ಕೂಟವು ಬಹಳ ಸೊಗಸಾಗಿ ಜರಗಿದ್ದಿತು. ಆ ದಿನ ಅವರ ಶಿಷ್ಯರು ಕೆಲವರು ಪದ್ಯ ಹಾಡಿದುದನ್ನು ನಾನು ಕೇಳಿದ್ದೆ. ಅಂದು ಪಂಚವಟಿ ವಾಲಿ ಸಂಹಾರವು ಕಥಾಭಾಗವಾಗಿತ್ತು. ಈ ರೀತಿಯಲ್ಲಿ ಬಲಿಪ ಭಾಗವತರಿಗೂ ನನಗೂ ಪ್ರಾರಂಭವಾದ ಸ್ನೇಹವು ವರ್ಷಕಳೆದಂತೆ ಅಭಿವೃದ್ಧಿಯಾಗುತ್ತಾ ಬಂದಿತಲ್ಲದೆ ಮುಂದೆ ಅವರಿಗೆ ನನ್ನ ಮೇಲೆ ಆತ್ಮೀಯವಾದ ಒಂದು ಪ್ರೇಮವನ್ನೇ ಉಂಟುಮಾಡಿತು. ಆ ದೆಸೆಯಿಂದಲೇ ಅವರು ನನ್ನನ್ನು ಕಂಡಾಗಲೆಲ್ಲಾ ನನ್ನ ಹೆಸರೆತ್ತಿ ಕರೆಯುವ ಬದಲಿಗೆ ಕೇವಲ ಅಣ್ಣನೆಂದೇ ಸಂಬೋಧಿಸುತ್ತಿದ್ದರು. ಮಾತ್ರವಲ್ಲ ಅವರ ಬಳಿಯಲ್ಲಿಯೇ ನನಗೂ ಒಂದು ಸ್ಥಾನವನ್ನು ಕಲ್ಪಿಸಿಕೊಡುತ್ತಿದ್ದರು. ಯಕ್ಷಗಾನ ಬಯಲಾಟದ ಸಭೆಗಳಲ್ಲಾದರೂ, ನನ್ನನ್ನು ಕಂಡಾಗ ಪ್ರೀತಿಯಿಂದ ಕರೆದು ಮೃದಂಗ ಬಾರಿಸುವಂತೆ ಪ್ರೇರೇಪಿಸುತ್ತಿದ್ದರು. ಈ ರೀತಿಯ ಯಕ್ಷಗಾನ ಕೂಟಗಳು ಮಲ್ಲಮಠದಲ್ಲಿ ಮಾತ್ರವಲ್ಲ ಅಗಲ್ಪಾಡಿ ಮಠದಲ್ಲಿಯೂ, ನಮ್ಮ ಮನೆಯಿಂದ ಕೇವಲ ನಾಲ್ಕು ಮೈಲು ದೂರದಲ್ಲಿ ಪಡುದಿಕ್ಕಿಗಿರುವ ಶ್ರೀ ಎಡನೀರು ಮಠದಲ್ಲಿಯೂ, ಧಾರಾಳ ನಡೆದಿವೆ. ಕುಂಬ್ಳೆ ಸೀಮೆಯ ಯಕ್ಷಗಾನ ಕಲೆಗೆ ಇನ್ನೊಂದು ಆಧಾರಸ್ತಂಭದಂತಿದ್ದ ಶ್ರೀ ಎಡನೀರು ಮಠದ ಬ್ರಹ್ಮೀಭೂತರಾದ ಶ್ರೀ ಈಶ್ವರಾನಂದ ಭಾರತೀ ಶ್ರೀಪಾದಂಗಳವರು ಯಕ್ಷಗಾನ ಕಲಾಪ್ರೇಮಿಗಳು ಮಾತ್ರವಲ್ಲ, ಆ ಕಲೆಗಾಗಿ ಹೇರಳ ಧನವ್ಯಯವನ್ನು ಮಾಡಿದವರು. ಇವರ ಕಾಲದಲ್ಲಿ ಶ್ರೀ ಮಠದ ಆಶ್ರಯದಲ್ಲಿ ಬಲಿಪ ಭಾಗವತರ ಹಾಡುವಿಕೆಯ ಕೂಟಗಳು ಮತ್ತು ಆಟಗಳು ಕೂಡಾ ಧಾರಾಳ ಜರಗಿವೆ. ಪ್ರಕೃತ ಅವರ ಶಿಷ್ಯರಾಗಿರುವ ಶ್ರೀ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಸಹ ತನ್ನ ಗುರುಗಳ ಮೇಲು ಪಂಙ್ತಿಯನ್ನೇ ಅನುಸರಿಸುತ್ತಿರುವುದು ನಮಗೆಲ್ಲರಿಗೂ ಸಂತಸದ ವಿಚಾರವಾಗಿದೆ.

ಕಲಾ ಪ್ರೌಢಿಮೆ

ಭಾಗವತರ ಯಕ್ಷಗಾನ ಪಾಂಡಿತ್ಯವು ಅದ್ವಿತೀಯವಾಗಿತ್ತು. ಅವರ ಹಿರಿಯರಿಂದಲೇ ಪರಂಪರೆಯಾಗಿ ಬಂದ ಯಕ್ಷಗಾನವು ಇವರಲ್ಲಿ ಪರಿಪೂರ್ಣತೆಯನ್ನು ಪಡೆದಿತ್ತು. ಕರ್ಣಮನೋಹರವಾದ ಅವರ ಶಾರೀರ ಮತ್ತು ದೈವದತ್ತವಾದ ಶ್ರುತಿ ಮತ್ತು ಲಯಗಳ ಜ್ಞಾನ ಇವು ಅವರ ಹಿರಿಮೆಗೆ ಕಾರಣಗಳಾಗಿದ್ದುವಲ್ಲದೆ, ಬಾಲ್ಯದಲ್ಲಿ ಉತ್ತಮ ಶಿಕ್ಷಣವೂ ಅವರಿಗೆ ದೊರಕಿತ್ತು. ಹತ್ತೊಂಭತ್ತನೆಯ ಶತಮಾನದಲ್ಲಿ ಕುಂಬ್ಳೆ ಸೀಮೆಯಲ್ಲಿ ಉತ್ತಮ ಸಂಗೀತಜ್ಞರೂ, ಸಂಪತ್ ಸಮೃದ್ಧರೂ, ಉದಾರಿಗಳೂ, ಕಲಾಪ್ರೇಮಿಗಳೂ ಆಗಿದ್ದ ದಿವಂಗತ ಕೂಡ್ಲು ಸುಬ್ರಾಯ ಶಾನುಭಾಗರೇ ಇವರ ಗುರುಗಳಾಗಿದ್ದರು. ಕೆಲವು ವರ್ಷಗಳ ಕಾಲ ಇವರ ಮನೆಯಲ್ಲಿಯೇ ಇದ್ದು ಇವರ ಪ್ರೀತಿಯ ಶಿಷ್ಯರಾಗಿ, ಶ್ರುತಿ, ಸ್ವರ, ಲಯಗಳ ಸರಿಯಾದ ಜ್ಞಾನವನ್ನು ಸಂಪಾದಿಸಿಕೊಂಡರು. ಆದುದರಿಂದಲೇ ಅವರು ಪದ್ಯಹಾಡುವಾಗ ಶ್ರುತಿ ತಪ್ಪುತ್ತಿರಲಿಲ್ಲ. ಮಾತ್ರವಲ್ಲ ಏನೂ ಆಯಾಸವಿಲ್ಲದವನಂತೆ, ನಗು ನಗುತ್ತ ಪದ್ಯ ಹಾಡುತ್ತಿದ್ದರು. ಯಕ್ಷಗಾನಕ್ಕೆ ಅಗತ್ಯವಿರುವ ಕೆಲವು ರಾಗಗಳನ್ನು ಶಾಸ್ತ್ರೀಯವಾಗಿ ಹಾಡುತ್ತಿದ್ದರು. ನಾಟಿ ಶಂಕರಾಭರಣ, ಕೇದಾರಗೌಳ, ಕಲ್ಯಾಣಿ, ಕಾಂಭೋಜಿ, ತೋಡಿ, ಪಂತುವರಾಳಿ, ಆನಂದಭೈರವಿ, ಭೈರವಿ, ಬೆಹಾಗು, ನವರೋಜ, ಸುರುಟಿ, ಶ್ರೀರಾಗ, ಮಧ್ಯಮಾವತಿ, ಮೋಹನ, ಹಂಸಧ್ವನಿ, ಸಾವೇರಿ ಶುದ್ಧಸಾವೇರಿ ಇತ್ಯಾದಿ ರಾಗಗಳನ್ನು ಅವರು ಹಾಡುವಾಗ ನಮಗೆ ಸರಿಯಾಗಿ ರಾಗಗಳನ್ನು ಗುರುತಿಸಬಹುದಾಗಿತ್ತು. ಮಾತ್ರವಲ್ಲ ಪ್ರಸಂಗದ ಕಥಾಭಾಗದಲ್ಲಿಯ ಸಂದರ್ಭ ಸನ್ನಿವೇಶಗಳಿಗನುಸರಿಸಿ ವರ್ತಮಾನ ಕಾಲದಲ್ಲಿ ಯಾವ ರಸವು, ಅಲ್ಲಿ ಆವಿರ್ಭವಿಸಬೇಕಾಗಿದೆ, ಎಂಬುದನ್ನು ಚೆನ್ನಾಗಿ ವಿಚಾರಮಾಡಿ, ಆ ರಸೋತ್ಪಾದನೆಗೆ ಬೀಜಾವಾಪವಾಗಬಲ್ಲ ರಾಗವನ್ನೇ ಯಕ್ಷಗಾನದ ಪದ್ಯಕ್ಕೆ ಜೋಡಿಸಿ ಹಾಡುವ ಅವರ ಕ್ರಮವು ಬಹಳ ಸೊಗಸಾಗಿತ್ತು. ಭಾಗವತನಾದವನು ಈ ವಿಚಾರವನ್ನು ಚೆನ್ನಾಗಿ ಪರಿಶೀಲಿಸಿಯೇ ಪದ್ಯಹಾಡಬೇಕಾಗಿದೆ. ಇಲ್ಲವಾದರೆ, ಪಾತ್ರಧಾರಿಗೆ ಅರ್ಥ ಹೇಳುವುದೇ ಕಷ್ಟವಾಗುವುದು. ಮಾತ್ರವಲ್ಲ, ಸಭಿಕರಲ್ಲಿ ವಿರಸವನ್ನುಂಟುಮಾಡುವುದರಲ್ಲಿ ಅನುಮಾನವಿಲ್ಲ. ದೃಷ್ಟಾಂತವಾಗಿ ವೀರರಸ ಪ್ರೇರಕವಾದ ಶಂಕರಾಭರಣ ಕೇದಾರ ಗೌಳ ರಾಗಗಳನ್ನು ಹಾಡುವ ಬದಲಿಗೆ ತೋಡಿ, ಆನಂದ ಭೈರವಿ ರಾಗಗಳಲ್ಲಿ ಆ ಪದ್ಯಗಳನ್ನು ಭಾಗವತನು ಹಾಡಿದರೆ ಆಗ ಸಭಿಕರಲ್ಲಿ ವಿರಸವುಂಟಾಗಿ ಆ ಭಾಗವತರನ್ನು ಭಂಗಿಸಿಬಿಡುವುದರಲ್ಲಿ ಅನುಮಾನವಿಲ್ಲ. ಅಂತೆಯೇ ಕರುಣಾರಸ, ಶಾಂತರಸಗಳನ್ನುಂಟುಮಾಡುವ ಸಾವೇರಿ, ಪಂತುವರಾಳಿ, ತೋಡಿ, ಆನಂದ ಭೈರವಿ ಇತ್ಯಾದಿ ರಾಗಗಳನ್ನು ಹಾಡಬೇಕಾದ ಸಂದರ್ಭದಲ್ಲಿ, ವೀರರಸಪ್ರಧಾನವಾದ ಶಂಕರಾಭರಣ, ಕೇದಾರಗೌಳ, ಇತ್ಯಾದಿ ರಾಗಗಳನ್ನು ಹಾಡಿದರೂ ಸಹ ಅದು ಕಲೆಯ ಕೊಲೆಯಲ್ಲದೆ ಬೇರೇನೂ ಅಲ್ಲ. ಇದನ್ನು ಸಭಿಕರು ಸಹಿಸಲಾರರು. ಯಾಕೆಂದರೆ ಸಂಗೀತದ ಗಂಧವಿಲ್ಲದ ಹಳ್ಳಿಯ ಜನರು ಸಹ ಯಕ್ಷಗಾನದ ಪದ್ಯಗಳನ್ನು ಚೆನ್ನಾಗಿ ಕೇಳಿ ಬಲ್ಲವರು. ಆದುದರಿಂದಲೇ ಕಟ್ಟಳೆಗೆ ವಿರೋಧವಾಗಿ ಪದ್ಯ ಹಾಡುವುದನ್ನು ಅವರು ಎಂದೂ ಸಹಿಸರು. ಸಭಾತ್ಯಾಗ ಮಾಡುವುದರ ಮೂಲಕ ಭಾಗವತರಿಗೆ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡದೆ ಬಿಡರು. ಈ ವಿಚಾರವನ್ನು ಬಲಿಪ ಭಾಗವತರು ಚೆನ್ನಾಗಿ ತಿಳಿದವರಾದ ಕಾರಣ ಅವರ ಪದ್ಯವನ್ನು ಕೇಳಿದವನು ಅಲ್ಲಿಂದ ಕದಲದೆ ಕೊನೆಯ ತನಕ ಕುಳಿತು ಕೇಳುವಂತೆ ಮಾಡುತ್ತಿದ್ದರು. ಇದು ಇವರ ಹಾಡುವಿಕೆಯ ಮಹತ್ವ.

ಭಾಗವತರ ಸ್ವರಜ್ಞಾನಕ್ಕಿಂತಲೂ, ಅವರ ಲಯಜ್ಞಾನವು, ಬಹಳ ವಿಶೇಷವಾಗಿತ್ತು. ಒಂದು ಪದ್ಯವನ್ನು ಒಂದು ಲಯದಲ್ಲಿ ಪ್ರಾರಂಭಿಸಿದರೆ ಆ ಲಯವನ್ನು ಲವಲೇಶವಾದರೂ ಬಿಡದೆ ಕಾಪಾಡುತ್ತಿದ್ದರು. ಇದರ ಅನುಭವವು ಸರಿಯಾಗಿ ತಿಳಿಯಬೇಕಾದರೆ ಅವರ ಜೊತೆಗೆ ಹಿಮ್ಮೇಳದವ

(ಮೃದಂಗ ಮತ್ತು ಚೆಂಡೆ ಬಾರಿಸುವವ) ನಾದಾಗ ಮಾತ್ರ ಸಾಧ್ಯ. ಪಕ್ಕ ವಾದ್ಯದವನು ಇದಿರು ಲಯದಿಂದ ವಾದ್ಯ ಬಾರಿಸಿದನಾದರೆ ಆಗಲೇ ಅವನು ತಾಳ ತಪ್ಪಿದುದನ್ನು ಸಭಿಕರು ತಿಳಿಯುವಂತೆ ಮಾಡಿ, ಅವನ ತೇಜೋವಧೆಯಾದುದನ್ನು ನಾನು ಎಷ್ಟೋ ಸಭೆಗಳಲ್ಲಿ ನೋಡಿದ್ದೇನೆ. ಆದುದರಿಂದಲೇ ಬಲಿಪರ ಬಳಿಯಲ್ಲಿ ಕುಳಿತು ವಾದ್ಯ ಬಾರಿಸಲು ಸಾಮಾನ್ಯ ಪಕ್ಕವಾದ್ಯದವರು ಹೆದರುತ್ತಿದ್ದರು. ಭಾಗವತರ ಪ್ರೀತಿಯ ತಾಳಗಳೆಂದರೆ, ತಿತ್ರಥೈ, ಅಷ್ಟತಾಳ, ಏಕತಾಳಗಳಾಗಿದ್ದುವು. "ಶ್ರುತಿರ್ಮಾತಾ, ಲಯಃ ಪಿತಾ" ಎಂಬ ಶಾಸ್ತ್ರಕಾರರ ವಚನದಂತೆ, ಸಂಗೀತವೆನ್ನುವ ಶಿಶುವಿಗೆ ಶ್ರುತಿಯೇ ತಾಯಿ. ಲಯವೇ ತಂದೆಯೆಂದು ಸಾರಲ್ಪಟ್ಟಿದೆಯಾದರೂ ಈ ಎರಡು ಜ್ಞಾನಗಳೂ ಸರಿಯಾಗಿರುವ ಯಕ್ಷಗಾನ ಭಾಗವತರು ತೀರಾ ವಿರಳ. ಶ್ರುತಿಜ್ಞಾನವಿದ್ದರೆ ಲಯಜ್ಞಾನವಿಲ್ಲ, ಲಯ ಗೊತ್ತಿದ್ದವನಿಗೆ ಶ್ರುತಿ ಸಿಕ್ಕುವುದಿಲ್ಲ, ಎನ್ನುವ ಪರಿಸ್ಥಿತಿಯೇ ಹೆಚ್ಚು.

ಯಕ್ಷಗಾನದಲ್ಲಿ ಉತ್ತಮ ಭಾಗವತನೆಂದನ್ನಿಸಬೇಕಾದರೆ ಮೇಲೆ ಹೇಳಿದ ಎರಡು ಜ್ಞಾನಗಳಲ್ಲದೆ ಮೂರನೆಯದಾದ ಸಾಹಿತ್ಯ ಜ್ಞಾನವು ಕೂಡ ಅತೀ ಅಗತ್ಯ. ಈ ಜ್ಞಾನವಿಲ್ಲದ ಕೆಲವು ಭಾಗವತರು ಪದ್ಯ ಹಾಡುವಾಗ ಸಾಹಿತ್ಯದ ಕೊಲೆಯೇ ಆಗಿಬಿಡುತ್ತದೆ. ಯಕ್ಷಗಾನ ಕವಿಗಳು, ಪದ್ಯ ರಚಿಸುವಾಗ ತಾಳದ ಆವರ್ತನವನ್ನು ಸೂಚಿಸುವಲ್ಲಿ ಗೆರೆಗಳನ್ನು ಹಾಕುವುದು ರೂಢಿಯಾಗಿದೆ. ಕೆಲವು ಸಂದರ್ಭಗಳಲ್ಲಿ ಈ ಗುರುತು ಶಬ್ದದ ಮಧ್ಯದಲ್ಲಿ ಬರುವುದೂ ಉಂಟು. ಅಂತಹ ಸ್ಥಳಗಳಲ್ಲಿ ಸಾಹಿತ್ಯ ಜ್ಞಾನವಿಲ್ಲದ ಭಾಗವತನು ಗುರುತು ಕಂಡಲ್ಲಿಯೇ ನಿಲ್ಲಿಸಿ, ರಾಗವೆಳೆಯುವುದೂ ಉಂಟು. ಆಗ ಶಬ್ದದ ಒಂದೆರೆಡು ಅಕ್ಷರಗಳು ಮಧ್ಯೆ ತುಂಡಾಗಿ ಆ ಶಬ್ದದ ಗುರುತು ಸಿಗುವುದೇ ಕಷ್ಟವಾಗುವುದು. ಮಾತ್ರವಲ್ಲ ಕೆಲವೆಡೆಯಲ್ಲಿ ಶಬ್ದದ ಅರ್ಥವೇ ಬದಲಾಗಿಬಿಡುವುದೂ ಉಂಟು. ದೃಷ್ಟಾಂತಕ್ಕಾಗಿ ಕೆಳಗಿನ ಪದ್ಯವನ್ನು ನೋಡಿರಿ.

ಮುದದಿಂದ ನಿನ್ನ ಕೊಂ । ಡಾಡುವೆನು ಅನವರತ ॥

ಎಂಬ ಝಂಪೆ ತಾಳದ ಪದ್ಯದಲ್ಲಿ ಸಾಹಿತ್ಯ ಜ್ಞಾನವಿಲ್ಲದವರು ಈ ಪದ್ಯ ಹಾಡುವಾಗ, ಮುಂದದಿಂದ ನಿನ್ನ ಕೊಂ । ಎಂದು ನಿಲ್ಲಿಸಿ ರಾಗಾಲಾಪನೆ ಮಾಡಿ ಮುಗಿತಾಯ ಪ್ರಾರಂಭಿಸುತ್ತಾರೆ. ಎರಡನೇಬಾರಿ ಹೇಳುವಾಗಲೂ ಕೊಂ ಎಂಬಲ್ಲಿಯೇ ನಿಲ್ಲಿಸಿ "ಡಾಡುವೆನು ಅನವರತ" ಎಂದೇ ಹಾಡುವರು. ಆದರೆ ಸಾಹಿತ್ಯ ಜ್ಞಾನವಿದ್ದವರು ಮಾತ್ರ ಮುದದಿಂದ ನಿನ್ನ ಎಂದು ಕೊನೆಗೊಳಿಸಿ ಕೊಂ ಎಂಬಕ್ಷರವನ್ನು ಎರಡನೆಯ ಚರಣಕ್ಕೆ ಸೇರಿಸಿಯೇ ಹಾಡುತ್ತಾರೆ. ಅಂತೆಯೇ, ಪ್ರಹ್ಲಾದನ ಪಿತ ಎಂಬ ಏಕತಾಳದ ಪದ್ಯವನ್ನು ಹಾಡುವಾಗ, ಪ್ರಹ್ಲಾದನ ಪಿತ ಎಂಬಲ್ಲಿ ಪ್ರಾರಂಭದ ಗುರು ಅಕ್ಷರಗಳನ್ನು ಲಘುವಾಗಿ ಉಚ್ಚರಿಸಿ ನಾಲ್ಕನೆಯ ಅಕ್ಷರವಾದ ನಕಾರಕ್ಕೆ ದೀರ್ಘಕೊಟ್ಟು ತಾಳಕ್ಕೆ ಸರಿ ಬರುವಂತೆ ಹೇಳುತ್ತಾರೆ. ಆಗ, ಪ್ರಹ್ಲಾದನ ಪಿತ ಎಂಬ ವಾಕ್ಯವು ಪ್ರಹ್ಲಾದನಾಪಿತ, ಎಂದಾಗಿ ಅಪಾರ್ಥವನ್ನುಂಟುಮಾಡುತ್ತದೆ. ಹೀಗಿರುವ ಹಲವು ದೃಷ್ಟಾಂತಗಳನ್ನು ನಾವು ಕಾಣಬಹುದಲ್ಲದೆ, ಭಾಗವತನು ಹಾಡಿದ ಪದ್ಯದ ಅರ್ಥವನ್ನು ಪಾತ್ರಧಾರಿಯು ಹೇಳಿ ಮುಗಿಸಿದರೂ, ಸಾಹಿತ್ಯಜ್ಞಾನವಿಲ್ಲದ ಭಾಗವತನಿಗೆ ಆ ವಿಚಾರ ಗೊತ್ತಾಗದೆ, ಸುಮ್ಮನಿರುತ್ತಾನೆ. ಆಗ ಪಾತ್ರಧಾರಿಯೇ ಮುಂದಿನ ಪದ್ಯ ಹಾಡುವಂತೆ ಎಚ್ಚರಿಸಬೇಕಾದ ಪರಿಸ್ಥಿತಿಯೂ ಬರುತ್ತದೆ. ಆದುದರಿಂದ ಯಕ್ಷಗಾನ ಭಾಗವತನಿಗೆ ಸಂಗೀತದ ಹಾಗೆಯೇ ಸಾಹಿತ್ಯಜ್ಞಾನವೂ ಅತೀ ಅಗತ್ಯ.

ಬಲಿಪ ನಾರಾಯಣ ಭಾಗವತರು ಸಾಕಷ್ಟು ಸಾಹಿತ್ಯ ಜ್ಞಾನವನ್ನು ಸಂಪಾದಿಸಿರುವುದರಿಂದ ಪದ್ಯಹಾಡುವಾಗ ಮೇಲೆ ಹೇಳಿದಂತಹ ಪ್ರಮಾದಗಳು ಬಾರದಂತೆ ಬಹಳ ಜಾಗರೂಕತೆಯಿಂದ ವರ್ತಿಸುತ್ತಿದ್ದರು. ಮಾತ್ರವಲ್ಲ, ಸ್ವತಃ ಪದ್ಯಗಳನ್ನು ರಚಿಸಬಲ್ಲ ಕವಿಗಳೂ ಆಗಿದ್ದರು. ಅವರ ಯಕ್ಷಗಾನ

ಕೃತಿಗಳಲ್ಲಿ ಹೆಚ್ಚಿನವು ಪ್ರಕಟವಾಗಿಲ್ಲವಾದರೂ, ಅವರು ಬರೆಯುತ್ತಿದ್ದ ಯಕ್ಷಗಾನ ಪ್ರಸಂಗದ ಹಲವು ಪದ್ಯಗಳನ್ನು ವಿಟ್ಲದ ಅವರ ಮನೆಯಲ್ಲಿ ನಾನು ಅವರಿಂದಲೇ ಕೇಳಿರುವೆನು. ಸಂದರ್ಭ ದೊರೆತಾಗ ಅವರ ಮನಸ್ಸಿಗೆ ಹಿತವಾಗುವಂತೆ, ಮಿತವಾಗಿ ಮಾತನಾಡುವ ಪಾತ್ರಧಾರಿಯು ದೊರೆತಾಗ, ಸನ್ನಿವೇಶಕ್ಕನುಸಾರವಾಗಿ ತನ್ನದೇ ಆದ ಹೊಸ ಪದ್ಯಗಳನ್ನು ರಚಿಸಿ ಹಾಡಿ ಪಾತ್ರಧಾರಿಗೆ ಹುರುಪನ್ನು ಹುಟ್ಟಿಸುವುದಲ್ಲದೆ ಸಭಿಕರನ್ನು ಸಂತೋಷಪಡಿಸುತ್ತಲೂ ಇದ್ದರು. ಈ ರೀತಿಯ ಒಂದು ಘಟನೆಯು ನನ್ನ ನೆನಪಿನಲ್ಲಿ ಈಗಲೂ ಉಳಿದಿದೆ.

ಕಾಸರಗೋಡಿನಲ್ಲಿರುವ ಕೊರಕ್ಕೋಡು ಭವಾನಿಶಂಕರ ರಾಯರ ಮನೆಯಲ್ಲಿ ವಿನಾಯಕ ಚೌತಿಹಬ್ಬದ ವೇಳೆಯಲ್ಲಿ ಯಕ್ಷಗಾನ ಕೂಟವು ಜರಗುವ ಪದ್ಧತಿಯು ಬಹಳ ಹಿಂದಿನ ಕಾಲದಿಂದಲೇ ವಾಡಿಕೆಯಾಗಿತ್ತು. ಸಾಮಾನ್ಯ ಇಪ್ಪತ್ತು ವರ್ಷಗಳ ವೊದಲು ಕೆಲವು ವರ್ಷ ಶ್ರೀ ಭಾಗವತರು ಅಲ್ಲಿಯ ಯಕ್ಷಗಾನ ಕೂಟಕ್ಕೆ ತಪ್ಪದೆ ಬರುತ್ತಿದ್ದರು. ಆ ಕಾಲದಲ್ಲಿ ಹಲವು ಯಕ್ಷಗಾನ ಕೂಟಗಳಲ್ಲಿ ನಾನೂ ಭಾಗವಹಿಸಿದ್ದೆನು. ಅದೊಂದು ದಿನದ ಯಕ್ಷಗಾನ ಕೂಟಕ್ಕೆ ಭಾರತದೊಳಗಣ ರಾಜಸೂಯಾಧ್ವರವು ಕಥಾಭಾಗವಾಗಿತ್ತು. ಶ್ರೋತೃಗಳು ತುಂಬಾ ನೆರೆದಿದ್ದ ಕಾರಣ ಆ ದಿನ ಭಾಗವತರು ಬಹಳ ಉತ್ಸಾಹದಿಂದ ಪದ್ಯ ಹಾಡುತ್ತಿದ್ದರು. ಆ ದಿನ ನಾನು ಶಿಶುಪಾಲನ ಪಾತ್ರವನ್ನು ವಹಿಸಬೇಕಾಗಿತ್ತು. ಶ್ರೀ ಕೃಷ್ಣನ ಅಗ್ರಪೂಜೆ ಮುಗಿದ ಮೇಲಲ್ಲದೆ, ಶಿಶುಪಾಲನ ಪ್ರವೇಶವಿಲ್ಲವೆಂಬ, ನಿಶ್ಚಯದಿಂದ ತಟಸ್ಥನಾಗಿ ಕುಳಿತಿದ್ದ ನನ್ನನ್ನು ಭಾಗವತರ ಆಶುಕವಿತೆಯ ಒಂದು ಪದ್ಯವು ಬಡಿದೆಬ್ಬಿಸಿತು. ರಾಜಸೂಯ ಪ್ರಸಂಗದಲ್ಲಿಲ್ಲದ ಪದ್ಯವನ್ನು ಭಾಗವತರು ಹಾಡಲು ತೊಡಗಿದಾಗ, ನನ್ನ ಲಕ್ಷ್ಯವೂ ಆ ಕಡೆಗೆ ತಿರುಗಿತು. ಆ ದಿನದ ಧರ್ಮರಾಯನ ಪಾತ್ರಧಾರಿಗಳು ಸಹ ಪದ್ಯದ ಅರ್ಥವನ್ನು ತಪ್ಪದೆ ವಿವರಿಸುವಷ್ಟು ಸಮರ್ಥರಾಗಿದ್ದುದರಿಂದಲೇ ಭಾಗವತರ ಹೊಸ ಪದ್ಯಕ್ಕೆ ಅರ್ಥ ಹೇಳುವುದು ಅವರಿಗೆ ಕಷ್ಟವಾಗಲಿಲ್ಲ. ಶ್ರೀ ಕೃಷ್ಣನ ಅಗ್ರಪೂಜೆಯ ಮೊದಲೇ ಧರ್ಮರಾಯನು, ದೂತನೊಬ್ಬನನ್ನು ಕರೆದು, ಲೇಖನವಿತ್ತು, ಶಿಶುಪಾಲನಲ್ಲಿಗೆ ಕಳುಹಿಸುವುದೇ ಆ ಪದ್ಯದ ಅರ್ಥವಾಗಿತ್ತು. ಎರಡನೆಯ ಪದ್ಯವು ಶಿಶುಪಾಲನು ಓಲಗದಲ್ಲಿರುವಾಗ ದೂತರು ಬಂದು ಲೇಖನವಿತ್ತು ನಮಸ್ಕರಿಸುವುದಾಗಿತ್ತು. ಈ ಪದ್ಯವನ್ನು ಕೇಳಿದ ಕೂಡಲೇ ನಾನು ಸಹ ಶಿಶುಪಾಲನ ಪಾತ್ರಧಾರಿಯಾಗಲು ನಿರ್ಬಂಧಿತನಾದೆ. ಮೂರು ನಾಲ್ಕನೆಯ ಪದ್ಯಗಳು, ಶಿಶುಪಾಲನು ತನ್ನ ಸಭಿಕರಿಗೆ ಲೇಖನದ ಸಾರಾಂಶವನ್ನು ವಿವರಿಸುವುದಾಗಿತ್ತು. ಮತ್ತೆರಡು ಪದ್ಯಗಳು ಶಿಶುಪಾಲನು ಸಪರಿವಾರನಾಗಿ ಯಾಗಕ್ಕೆ ಹೊರಟು ಬರುವ ಸಂಭ್ರಮವನ್ನು ವರ್ಣಿಸುವವುಗಳು. ಇಂದ್ರಪ್ರಸ್ಥಕ್ಕೆ ಚೇದಿರಾಜನು ತಲಪಿದುದನ್ನು ತಿಳಿದ ಯುಧಿಷ್ಠಿರನು ರಾಜಯೋಗ್ಯವಾದ ರೀತಿಯಲ್ಲಿ ಇದಿರ್ಗೊಂಡು ಮನ್ನಿಸುವ ಭಾಗವಾಗಿತ್ತು. ಮುಂದಿನ ಪದ್ಯಗಳು ಧರ್ಮರಾಯನು, ತನ್ನ ಯಾಗವು ಸಾಂಗವಾಗಿ ನೆರವೇರುವಂತೆ ಸಹಕರಿಸಬೇಕೆಂದು ಕೇಳಿಕೊಳ್ಳುವ, ಮತ್ತು ಶಿಶುಪಾಲನು ಬಹಳ ಸಂತುಷ್ಟನಾಗಿ ತನ್ನ ಸಂಪೂರ್ಣ ಸಹಕಾರದ ನಂಬಿಕೆಯನ್ನೀಯುವಷ್ಟು, ಪದ್ಯಗಳನ್ನು ಹೊಸತಾಗಿ ಹಾಡಿ. ಪಾತ್ರಧಾರಿಗಳಿಗೂ ಸಭಿಕರಿಗೂ ಆನಂದವನ್ನುಂಟು ಮಾಡಿದ ಅಂದಿನ ಅವರ ಚಮತ್ಕಾರವು ಚಿರಸ್ಮರಣೀಯ.

ಯಕ್ಷಗಾನ ಬಯಲಾಟಗಳಲ್ಲಿ ಸಹ ಬಲಿಪರು ಈ ರೀತಿಯ ಹೊಸಪದ್ಯಗಳನ್ನು ಹಾಡುವುದು ಮತ್ತು ಜೋಡಾಟಗಳಂತಹ ಸ್ಪರ್ಧೆಗಳಲ್ಲಿ ಹೊಸ ವೇಷಗಳನ್ನು ಬರಮಾಡಿ ಕುಣಿಸುವುದು, ಇತ್ಯಾದಿ ಚಮತ್ಕಾರಗಳನ್ನು ಮಾಡಿ ತೋರಿಸುವಷ್ಟು ಪಾಂಡಿತ್ಯ ಉಳ್ಳವರಾಗಿದ್ದರು. ದಿವಂಗತ ಭಾಗವತರಿಗೂ ನನಗೂ ಇರುವ ನಲುವತ್ತು ವರ್ಷಗಳ ಒಡನಾಟದಲ್ಲಿ ಎಷ್ಟು ಯಕ್ಷಗಾನ ಕೂಟಗಳು ಜರಗಿವೆ ಎಂಬುದನ್ನು ಈ ಹೊತ್ತು ನನ್ನಿಂದ ಹೇಳಲು ಸಾಧ್ಯವಿಲ್ಲವಾದರೂ, ಅವು ಕೆಲವು ಶತಕಗಳಾಗಬಹುದೆಂದು ನನ್ನ ಎಣಿಕೆ. ಇಷ್ಟು ದೀರ್ಘಕಾಲವಾದರೂ ಮರೆಯದೆ ಉಳಿದಿದ್ದ ಕೆಲವು ಘಟನೆಗಳನ್ನು ಮಾತ್ರ ವಿವರಿಸಿದೆನು.

ಮೇಲೆ ಹೇಳಿದ ಸಮಾರಂಭಗಳು ಮಾತ್ರವಲ್ಲ ಇವರ ಹಾಡುಗಾರಿಕೆಯಿಂದಲೇ ಯಶಸ್ವಿಯಾಗಿ ಜರಗಿದ ಇನ್ನೊಂದು ಯಕ್ಷಗಾನ ಕೂಟವು ಕೂಡ ನಾನು ಮರೆಯುತಕ್ಕುದಲ್ಲ, ಇತ್ತೀಚೆಗೆ ಹತ್ತು ವರ್ಷಕ್ಕೆ ಮೊದಲು ಕುಂಬ್ಳೆ ಸೀಮೆಯ ಬದಿಯಡ್ಕ ನವಜೀವನ ಹೈಸ್ಕೂಲಿನ ವಠಾರದಲ್ಲಿ ೧೯೫೫ನೇ ಇಸವಿಯ ದಶಂಬರ ತಿಂಗಳ ಕೊನೆಯಲ್ಲಿ ನಾಲ್ಕು ದಿನಗಳಲ್ಲಿ ನಡೆಸಿದ ಯಕ್ಷಗಾನ ಕಲೋತ್ಸವ ಮತ್ತು ಅಖಿಲ ಕರ್ನಾಟಕ ಯಕ್ಷಗಾನ ಪರಿಷತ್ತಿನಲ್ಲಿ ಸಹ ಇವರು ನನ್ನೊಂದಿಗೆ ತುಂಬಾ ಸಹಕರಿಸಿದ್ದರು. ನಾಲ್ಕು ದಿನಗಳ ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರಸಿದ್ದ ನಾಲ್ಕು ಜನ ಪಂಡಿತರು ಅಧ್ಯಕ್ಷರಾಗಿದ್ದರು. ಕೆ. ಬಿ. ಜಿನರಾಜ ಹೆಗ್ಗಡೆ B. A. B. L., ಇವರು ಮೊದಲನೆಯ ದಿನವೂ ಶ್ರೀ ಪೇಜಾವರ ಸೀತಾರಾಮಾಚಾರ್ಯರು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು ಎರಡನೆಯ ದಿನವೂ ತಾ. 30–12–1955ರಂದು ಜರಗಿದ ಯಕ್ಷಗಾನ ಸಾಹಿತ್ಯ ಪರಿಷತ್ತಿನಲ್ಲಿ ಮತ್ತು ಅಂದಿನ ಯಕ್ಷಗಾನ ಕಲೋತ್ಸವದಲ್ಲಿಯೂ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದವರು, ಇದಕ್ಕೂ ಮೊದಲು ೧೯೫೪ರಲ್ಲಿ ಶಿರಸಿಯಲ್ಲಿ ಜರಗಿದ ಪ್ರಥಮ ಯಕ್ಷಗಾನ ಪರಿಷತ್ತಿನ ಅಧಕ್ಷರೂ ಆಗಿದ್ದ, ಶ್ರೀ ಪಾಂಡೇಶ್ವರ ಗಣಪತಿರಾಯರು. ಇವರು ಉತ್ತಮ ಸಾಹಿತಿಗಳೂ, ವಾಗ್ಮಿಗಳೂ ಆಗಿರುವರೆಂಬುದಕ್ಕೆ ಅಂದಿನ ಅಧ್ಯಕ್ಷರ ಭಾಷಣವೇ ಸಾಕ್ಷಿಯಾಗಿದೆ, ಕೊನೆಯ ದಿನ ನಮ್ಮ ಸೀಮೆಯವರೇ ಆದ ಕವಿ ಕಯ್ಯಾರ ಕಿಂಞಣ್ಣರೈ M. A. ಇವರು ಅಧ್ಯಕ್ಷರಾಗಿದ್ದರು. ಪರಿಷತ್ತಿನ ಕಾರ್ಯಕ್ರಮದಲ್ಲಿ ಪ್ರತಿ ದಿನವೂ ಇಬ್ಬರು ಭಾಗವತರು ಪದ್ಯಹಾಡಿದ್ದರಾದರೂ, ಬಲಿಪ ನಾರಾಯಣ ಭಾಗವತರು ಪದ್ಯ ಹಾಡಿದ ದಿನ (ತಾ. 28–12–1955) ಅವರೊಬ್ಬರೇ ಬೆಳಗಿನ ತನಕ ಭಾಗವತರಾಗಿದ್ದರು. ಇದು ಅವರ ಪಾಂಡಿತ್ಯ ಮತ್ತು ಹಿರಿಮೆಗೆ ದೊರೆತ ಪ್ರಶಸ್ತಿಯಾಗಿದೆ. ಮಾತ್ರವಲ್ಲ, ದಿವಂಗತ ಬಲಿಪ ಭಾಗವತರು ಭಾಗವಹಿಸಿದ ಯಕ್ಷಗಾನ ಪರಿಷತ್ತುಗಳಲ್ಲಿ ಇದೇ ಕೊನೆಯದೆಂದು ನನ್ನ ಎಣಿಕೆ.

ಉಪಸಂಹಾರ

ಭಾಗವತ ಶಬ್ದಕ್ಕೆ, ಸಭಾ ಲಕ್ಷಣ ಪುಸ್ತಕದಲ್ಲಿ ಈ ರೀತಿ ವಿವರಣೆ ಕೊಟ್ಟಿದ್ದಾರೆ. "ಭಕಾರೋ ಭಗವದ್ಭಕ್ತಃ ಗಕಾರೋ, ಗರ್ವವರ್ಜಿತ; । ವಕಾರೋ, ವಾಕ್ಯ ಪಾಠೀಚ, ತಕಾರಸ್ತತ್ವನಿರ್ಣಯಃ" ॥

ಮೇಲೆ ಹೇಳಿದ ನಾಲ್ಕು ಲಕ್ಷಣಗಳೂ ಬಲಿಪ ಭಾಗವತರಲ್ಲಿ ಸರಿಯಾಗಿದ್ದುವು. ಮೊದಲನೆಯದಾದ, ಭಗವದ್ಭಕ್ತ ಎನ್ನುವ ವಿಶೇಷಣವು ಅವರಿಗೆ ಚೆನ್ನಾಗಿ ಅನ್ವಯಿಸುತ್ತಿತ್ತು. ಪುರಾಣಗಳಲ್ಲಿ ಸಹ ಭಾಗವತ ಶಬ್ದಕ್ಕೆ ಇದೇ ಅರ್ಥ ಕೊಟ್ಟಿದ್ದಾರೆ. ಭಗವಂತನ ಭಕ್ತರಲ್ಲಿ ಅಗ್ರಗಣ್ಯರಾದ, ವಿಭೀಷಣ, ವಿದುರ, ಅಕ್ರೂರ ಮೊದಲಾದವರನ್ನು ಭಾಗವತಜನಪರಶು, ಭಾಗವತಕುಲಮೌಳಿ, ಭಾಗವತಕುಲತಿಲಕ, ಇತ್ಯಾದಿ ವಿಷೇಣಗಳಿಂದ ಸಂಬೋಧಿಸಿದುದನ್ನು ನಾವು ಯಕ್ಷಗಾನ ಪ್ರಬಂಧಗಳಲ್ಲಿ ಧಾರಾಳ ಕಾಣಬಹುದಾಗಿದೆ. ಮಾತ್ರವಲ್ಲ ಯಕ್ಷಗಾನ ಭಾಗವತನು ಭಗವಂತನ ಮೇಲೆ ಭಕ್ತಿಯಿಟ್ಟು ಪದ್ಯ ಹಾಡಿದರೆ ಮಾತ್ರ ಅವನ ಕೆಲಸವು ಸಾಂಗವಾಗಿ ನೆರವೇರಬಲ್ಲುದಲ್ಲದೆ ಅನ್ಯಥಾ ಕಷ್ಟಸಾಧ್ಯ. ಅದುದರಿಂದಲೇ ಸಾಮಾನ್ಯ ಯಾವ ಭಾಗವತನಾದರೂ ಪ್ರಾರಂಭಕ್ಕೆ ದೇವತಾ ಸ್ತುತಿಯನ್ನು ಹಾಡದೆ ಕಥಾಪ್ರಾರಂಭ ಮಾಡುವುದಿಲ್ಲ,

ಯಕ್ಷಗಾನ ಕೂಟಗಳಲ್ಲಿ ಪದ್ಯ ಹಾಡುವಾಗ ಬಲಿಪರು ಹೆಚ್ಚಾಗಿ ದೇವೀ ಸ್ತುತಿಯನ್ನೇ ಪ್ರಾರಂಭದಲ್ಲಿ ಹಾಡುತ್ತಿದ್ದರು. ಇದು ಅವರ ಇಷ್ಟದೇವತೆಯು ದುರ್ಗಾದೇವಿಯೆಂಬುದನ್ನು ರುಜುಪಡಿಸುತಿತ್ತು. ಅವರು ದೇವಿಯ ಕುರಿತು ಹಾಡುವ ಪ್ರೀತಿಯ ಪದ್ಯವು ಇದಾಗಿತ್ತು.

(ರಾಗ ಮಧ್ಯಮಾವತಿ ರೂಪಕ)

ಪರಮೇಶ್ವರಿ ಪಾರ್ವತಿಸತಿ। ವರದೇ ಶ್ರೀ ವನದುರ್ಗಾ ॥ ಪಲ್ಲ ॥ ತರುಣಾರುಣ ಶತ ಕೋಟಿಕಿರಣಾ ನನೆಮಾಂಪಾಹಿ ॥ ಅ. ಪಲ್ಲವಿ ॥ ಜಗದ್ಭರಿತೆ ಜನಾರ್ದನಿಶಿವೆ। ಜಗದೇಕಶರಣ್ಯೇ॥ ತ್ರಿಗುಣಾತ್ಮಿಕೆತ್ರಿದ ಶಾರ್ಚಿತೆ। ಮಿಗೆಕರಯುಗಮಂಮುಗಿವೆಂ। ಅಗಜೇ ಶ್ರೀ ಜಗದಂಬಿಕೆ ॥ ೧ ॥ ಈ ಪದ್ಯವನ್ನು ಭಾಗವತರು ಬಹಳ ಭಕ್ತಿ ಪುರಸ್ಸರವಾಗಿ, ರಸವತ್ತಾಗಿ, ಹಾಡುತ್ತಿದ್ದರು. ಮೇಲಿನ ಪದ್ಯದ ಚರಣಗಳಲ್ಲಿ ನಾಲ್ಕನೇ ಚರಣವನ್ನು ಎರಡನೇ ಕಾಲದಲ್ಲಿ ಹಾಡಿದರೆ ಮಾತ್ರ ಸರಿ ಹೋಗಬಹುದಲ್ಲದೆ ನಾಲ್ಕು ಚರಣಗಳನ್ನು ಒಂದೇ ರೀತಿಯಿಂದ ಹಾಡಲು ಸಾಧ್ಯವಿಲ್ಲ. ಮಾತ್ರವಲ್ಲ ಚರಣಗಳನ್ನು ಮುಗಿಸಿ ಮರಳಿ ಪಲ್ಲವಿಯನ್ನು ಹಾಡುವಾಗ ಬಲಿಪರು ತಿತ್ತಿಥೈ ತಾಳದಲ್ಲಿ ಬಹಳ ಚಂದವಾಗಿ ಹಾಡುತ್ತಿದ್ದರು. ಅಲ್ಲದೆ ದೇವರಲ್ಲಿ ಅವರಿಗೆ ಅಪಾರವಾದ ಭಕ್ತಿ ಇದ್ದುದರಿಂದಲೇ ಒಂದು ಕಾಲದಲ್ಲಿ ಹರಿದಾಸರಾಗಿ ಹರಿಕತೆ ಮಾಡಲು ಸಹ ತೊಡಗಿದ್ದರೆಂದು ನಾನು ಕೇಳಿ ತಿಳಿದ ವಿಚಾರ.

ಎರಡನೆಯದಾಗಿ ಅವರು, ಗರ್ವವರ್ಜಿತರಾಗಿದ್ದರು. ಗರ್ವಿಷ್ಠ ಜನರನ್ನು ಕಂಡರೆ ಸಹ ಅವರಿಗೆ ಹಿತವಾಗುತ್ತಿರಲಿಲ್ಲ. ಆದುದರಿಂದಲೇ ಪಂಡಿತ, ಪಾಮರ, ಧನಿಕ, ಬಡವ ಎಂಬ ಭೇದವನ್ನೆಣಿಸದೆ ಯಕ್ಷಗಾನಕ್ಕೆ ಯಾರು ಆಮಂತ್ರಿಸಿದರೂ ತಪ್ಪದೆ ಬರುತ್ತಿದ್ದರು. ಯಾರಲ್ಲಿ ಮಾತನಾಡುವಾಗಲೂ ಬಹಳ ವಿನಯದಿಂದ ವರ್ತಿಸುತ್ತಿದ್ದರು. ಆಡಂಬರವಿಲ್ಲದ ಅವರ ವೇಷ, ಭೂಷಣಗಳು ಸಹ ಅವರ ಸಾತ್ವಿಕ ಸ್ವಭಾವವನ್ನು ಎತ್ತಿ ತೋರಿಸುತ್ತಿದ್ದುವು.

ಮೂರನೆಯದಾದ ವಾಕ್ಯಪಾಠೀ ಎನ್ನುವ ಲಕ್ಷಣವು ಇವರಲ್ಲಿ ಸಂಪೂರ್ಣ ಸೇರಿತ್ತು. ವಾಕ್ಯಪಾಠೀ ಎನ್ನುವ ಶಬ್ದಕ್ಕೆ. ವಾಕ್ಯಗಳನ್ನು ಸರಿಯಾಗಿ ಪಠಿಸಿದವ. ಅರ್ಥಾತ್ ಶಬ್ದಗಳನ್ನು ಸರಿಯಾಗಿ ಉಚ್ಚರಿಸುವವ ಎಂದರ್ಥ. ಹೆಚ್ಚಿನ ಭಾಗವತರಲ್ಲಿ ಈ ಗುಣ ಇರುವುದಿಲ್ಲ. ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸದಿರುವುದು, ಗುರು ಲಘು ಅಕ್ಷರಗಳ ಜ್ಞಾನವಿಲ್ಲದೆ ಇರುವುದು, ಅಲ್ಪಪ್ರಾಣ, ಮಹಾಪ್ರಾಣಗಳ ಉಚ್ಚಾರವು ಸರಿಯಿಲ್ಲದಿರುವುದನ್ನು ನಾವು ಕೆಲವರಲ್ಲಿ ಕಾಣಬಹುದು. ಆದರೆ ಬಲಿಪ ಭಾಗವತರು ಈ ವಿಷಯದಲ್ಲಿ ಬಹಳ ತಿದ್ದಿದವರಾಗಿದ್ದರು. ವಾಕ್ಯಪಾಠೀ ಎನ್ನುವ ಶಬ್ದಕ್ಕೆ ಮೇಲೆ ಹೇಳಿದ ವಿವರಣೆಯಿಂದಲೂ, ಸ್ವಲ್ಪ ಮುಂದೆ ಹೋದರೆ. ಇದಕ್ಕೂ ಹೆಚ್ಚಿನ ಅರ್ಥವನ್ನು ನಾವು ಕಲ್ಪಿಸಬಹುದಾಗಿದೆ. ಕೇವಲ ಶಬ್ದೋಚ್ಚಾರಣೆಯು ಸರಿಯಾಗಿದ್ದ ಮಾತ್ರಕ್ಕೆ ಅವನನ್ನು ಉತ್ತಮ ಭಾಗವತನೆನ್ನಲಾಗುವುದಿಲ್ಲ. ವಾಕ್ಯಪಾಠೀ ಎನ್ನುವುದಕ್ಕೆ ತಾನು ಸಭೆಯಲ್ಲಿ ಕುಳಿತು ಹೇಳಬೇಕಾದ ಎಲ್ಲಾ ವಾಕ್ಯಗಳನ್ನು ಅರ್ಥಾತ್ ಪದ್ಯಗಳನ್ನು ಬಾಯಿಪಾಠ ಮಾಡಿದವನೆಂದು ನಾವು ಅರ್ಥ ಮಾಡಿದರೆ ತಪ್ಪಾಗದು. ಯಾಕೆಂದರೆ ಯಕ್ಷಗಾನ ಬಯಲಾಟಗಳಲ್ಲಿ ಅಥವಾ ಕೂಟಗಳಲ್ಲಾದರೂ, ಪುಸ್ತಕದ ಸಹಾಯದಿಂದ ಪದ್ಯ ಹಾಡುವ ಭಾಗವತರನ್ನು ಉತ್ತಮ ಭಾಗವತರೆನ್ನಲು ಬರುವುದಿಲ್ಲ. ಅವರಿಗೆ ಸಭಿಕರನ್ನು ನೋಡುತ್ತ ಪದ್ಯ ಹಾಡಲು ಸಾಧ್ಯವಿಲ್ಲ. ಅರ್ವಾಚೀನ ಭಾಗವತರಲ್ಲಿ ಹೆಚ್ಚಿನವರು ಈ ಸಾಲಿಗೆ ಸೇರಿದವರೆಂದು ವಿಷಾದಪೂರ್ವಕ ಹೇಳಬೇಕಾಗಿದೆ. ಆದರೆ ಹಿಂದಿನವರು ಪ್ರಸಂಗಗಳ ಪದ್ಯಗಳನ್ನು ಬಾಯಿಪಾಠ ಮಾಡಿಕೊಳ್ಳದೆ, ರಂಗ ಪ್ರವೇಶ ಮಾಡುತ್ತಿರಲಿಲ್ಲ. ಬಲಿಪ ಭಾಗವತರು ಈ ಸಾಲಿಗೆ ಸೇರಿದವರು. ರಾಮಾಯಣ, ಭಾರತ ಭಾಗವತಗಳ ಯಾವ ಪ್ರಸಂಗವನ್ನಾದರೂ ಪುಸ್ತಕದ ಸಹಾಯವಿಲ್ಲದೆನೇ ಹಾಡುತ್ತಿದ್ದರು. ಆಧುನಿಕ ಯಕ್ಷಗಾನ ಕೃತಿಯ ಪುಸ್ತಕವನ್ನಿತ್ತು, ಪದ್ಯ ಹಾಡಬೇಕೆಂದು ಕೇಳಿಕೊಂಡರೂ ಸಹ ಅವರು ಅದಕ್ಕೆ ಒಪ್ಪುತ್ತಿರಲಿಲ್ಲ. ಪುಸ್ತಕ ನೋಡಿ ಪದ್ಯ ಹಾಡಲು ನನಗೆ ಬರುವುದಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಿ ಬಿಡುತ್ತಿದ್ದರು.

ನಾಲ್ಕನೆಯದಾದ, ತತ್ವನಿರ್ಣಯವು ಇವರಲ್ಲಿ ಪರಿಪೂರ್ಣವಾಗಿತ್ತು. ತತ್ವನಿರ್ಣಯ ಶಬ್ದವನ್ನು ನಾವು ಹೀಗೆ ವ್ಯಾಖ್ಯಾನಿಸಬಹುದು. ತತ್ವ ಎಂದರೆ ಇದಮಿತ್ಥಂ ಇದು ಹೀಗೆ ಎನ್ನುವ ನಿಶ್ಚಯ

ವುಳ್ಳವನು. ಯಾವ ಪದ್ಯ ಹೇಗೆ ಹಾಡಬೇಕು ಯಾವ ತಾಳ ಹೇಗೆ ಬಾರಿಸಬೇಕು, ಯಾವ ತಾಳಕ್ಕೆ ಹೇಗೆ ಮುಗಿತಾಯ ಬೇಕು ಇತ್ಯಾದಿ ಯಕ್ಷಗಾನದ ನಿಬಂಧನೆಗಳು ಅವರಿಗೆ ಚೆನ್ನಾಗಿ ತಿಳಿದಿದ್ದುವು. ಅಥವಾ ತತ್ವವೆಂದರೆ ವೇದಾಂತ ತತ್ವಗಳೆಂದು ನಾವು ತಿಳಿದರೆ ದ್ವೈತ ಅದ್ವೈತ, ಇತ್ಯಾದಿ ವೇದಾಂತ ಸಿದ್ಧಾಂತಗಳಲ್ಲಿ ತನ್ನದೇ ಆದ ನಿಶ್ಚಿತಾಭಿಪ್ರಾಯವುಳ್ಳವನು ಎಂಬರ್ಥ ಬರುತ್ತದೆ. ಭಾಗವತನು ಭಗವಂತನಲ್ಲಿ. ನಿಶ್ಚಲವಾದ ನಂಬಿಕೆಯುಳ್ಳವನಾಗಿರಬೇಕೆಂಬುದೇ ಇದರ ಸಾರಾಂಶವು. ಮೇಲೆ ಹೇಳಿದ ಎಲ್ಲಾ ಗುಣಗಳೂ ಜೊತೆಗೂಡಿದ್ದ ದಿವಂಗತ ಬಲಿಪ ನಾರಾಯಣ ಭಾಗವತರ ಭಾಗ್ಯವು ಬಹಳ ವಿಶೇಷವಾದದ್ದು. ಸಾಂಸಾರಿಕವಾದ ಅಥವಾ ಶಾರೀರಿಕವಾದ ಯಾವ ತಾಪತ್ರಯಗಳೂ ಇಲ್ಲದೆ ಕೇವಲ ಕಲೆಗಾಗಿಯೇ ತನ್ನ ಜೀವನವನ್ನು ಮುಡಿಪಾಗಿರಿಸಿದ ಅವರು ಚಿರಸ್ಮರಣೀಯರು. ಅಂತೆಯೇ ಅವರ ಅಗಲುವಿಕೆಯು ಕಲಾವಿದರಿಗೆ ಮಾತ್ರವಲ್ಲ ಕಲಾಪ್ರೇಮಿಗಳಿಗೂ ಕೂಡ ಸಹಿಸಲಾರದ ಸಂಕಟವನ್ನುಂಟುಮಾಡಿತೆಂಬುದರಲ್ಲಿ ಅನುಮಾನವಿಲ್ಲ. ಅಳಿವುದು ಕಾಯ, ಉಳಿಯುವುದು ಕೀರ್ತಿ ಎಂಬ ನಾಣ್ನುಡಿಯಂತೆ ಅವರ ದೇಹವು ಕಣ್ಮರೆಯಾದರೂ, ಹಲವು ಯಕ್ಷಗಾನದ ಮಹಾ ಸಭೆಗಳಲ್ಲಿ, ಯಕ್ಷಗಾನ ಪರಿಷತ್ತುಗಳಲ್ಲಿ ಅದ್ವಿತೀಯರಾಗಿ ಮೆರೆದ ಅವರ ಕೀರ್ತಿಜ್ಯೋತಿ ಯಕ್ಷಗಾನ ಪ್ರಪಂಚದಲ್ಲಿ ಬಹುಕಾಲ ಬೆಳಗುವುದರಲ್ಲಿ ಅನುಮಾನವಿಲ್ಲ.

ನೆನಹು

ಶ್ರೀ ಮುಳಿಯಾಲ ಮಾಸ್ತರ್ ಕೃಷ್ಣ ಭಟ್ಟ

ಯಕ್ಷಗಾನವು ನಮ್ಮ ನಾಡಿನ ಶ್ರೇಷ್ಠ ಕಲೆಗಳಲ್ಲೊಂದು. ಅದರ ಹುಟ್ಟೂರು ಕುಂಬಳೆ ಯೆಂದು ಹಲವರ ಮತ. ಕುಂಬಳೆ, ಯಕ್ಷಗಾನ ಕವಿಯಾದ ಪಾರ್ತಿಸುಬ್ಬನ ಊರು. ಅವನ ಕವಿತೆ ಬಹಳ ಸರಳವಾಗಿದ್ದರೂ, ಹಾಡಲು ಮತ್ತು ಅರ್ಥವಿವರಿಸಲು ಬಹಳ ಕಷ್ಟ. ಅವನ ಕವಿತೆಯನ್ನು ರಾಗ, ತಾಳ, ಲಯ ಬದ್ಧವಾಗಿ ಹಾಡುವುದರಲ್ಲಿ ದಿ। ಶ್ರೀ ಬಲಿಪ ನಾರಾಯಣ ಭಾಗವತರಿಂದ ಮಿಕ್ಕಿದವ ರಿಲ್ಲ. ಅರ್ಥವಿವರಣೆಯ ಅನುಭವವನ್ನು ಅವರಿಂದಲೇ ತಿಳಿಯಬೇಕಷ್ಟೆ. ಆ ಕುರಿತು ಅವರು ಯಕ್ಷಗಾನ ಕೂಟಗಳಲ್ಲಿ ಆಗಾಗ ತಮ್ಮ ಅನುಭವಗಳನ್ನು ಹೇಳುತ್ತಿದ್ದರು. ಅದು ಸರಿಯೆಂದು ಶ್ರೀರಾಮಪಾದುಕಾ ಪಟ್ಟಾಭಿಷೇಕ ಪ್ರಸಂಗದಿಂದ ಮೊದಲ್ಗೊಂಡು ರಾವಣವಧೆ ತನಕ ಶ್ರೀ ಬಲಿಪರು ಹಾಡುವ ಪದ್ಯಗಳನ್ನು ಕೇಳಿದರೆ ಯಾರಿಗೂ ತೋರದಿರದು. ಅವರಂತಹ ಗಾನಮಾಧುರ್ಯ ಯಕ್ಷಗಾನ ಪ್ರಪಂಚದಲ್ಲೇ ಬೇರಿಲ್ಲ ವೆನ್ನಬಹುದು. ಅಚ್ಚಾದ ಪುಸ್ತಕಗಳಲ್ಲಿ ಪ್ರಕ್ಷಿಪ್ತಭಾಗವನ್ನು ಬಿಟ್ಟು ಪಾರ್ತಿಸುಬ್ಬನು ಬರೆದ ನಿಜವಾದ ಪದ್ಯಗಳು ಗೊತ್ತಿದ್ದುದು ಅವರೊಬ್ಬರಿಗೆ ಮಾತ್ರ. ನಾನು ಅವರ ಹಾಡುಗಾರಿಕೆಯಲ್ಲಿ ಹಲವು ಸಲ ಅರ್ಥ ಹೇಳಿದ್ದೇನೆ. ನಮ್ಮಲ್ಲಿಗೆ ಅವರು ಆಗಾಗ ಬರುತ್ತಿದ್ದರು. ಯಾವಾಗಲೂ ಅವರು ಯಕ್ಷಗಾನದ ವಿಚಾರವನ್ನೇ ಮಾತಾಡುತ್ತಿದ್ದರು. ಯಕ್ಷಗಾನದಲ್ಲಿ ಅವರಿಗೆ ಸಂಪೂರ್ಣ ಸಿದ್ಧಿಯಾಗಿದೆಯೆಂಬುದನ್ನು ಅವರ ಅನುಭವದಿಂದ ತಿಳಿದುಕೊಳ್ಳಬಹುದು. ಪಾರ್ತಿಸುಬ್ಬನ ಕವಿತೆಗಳನ್ನು ಅವರು ಹಾಡುತ್ತಿದ್ದಾಗ ಪ್ರಸಂಗ ಪುಸ್ತಕಗಳನ್ನು ನೋಡಿ ಅರ್ಥ ಹೇಳುವವರಿಗೆ ಬಹಳ ಕಷ್ಟವಾಗುತ್ತಿತ್ತು. ಯಾಕೆಂದರೆ ಪುಸ್ತಕ ದಲ್ಲಿರುವ ಕೆಲವು ಪದ್ಯಗಳು ಸುಬ್ಬನು ಬರೆದುದಲ್ಲವೆಂದು ಅವರು ಹೇಳುತ್ತಿದ್ದರು. ನಿಜವಾದ ಪದ್ಯ ಗಳನ್ನು ಹೇಳಿ ತೋರಿಸುತ್ತಿದ್ದರು; ಪಂಚವಟಿ ಪ್ರಸಂಗದ –"ಮಾರೀಚಾನಿಶಾಚರಸಂತತ" ಎಂಬ ಪದ್ಯ ವನ್ನು ಶ್ರೀ ಬಲಿಪರು ಹಾಡುವುದನ್ನು ಕೇಳಿದರೆ, ಇತರ ಭಾಗವತರು ಇವರಿಂದ ಕಲಿಯಬೇಕಷ್ಟೆ ಎಂದು ತೋರುತ್ತಿತ್ತು. ಆ ಪದ್ಯವನ್ನು ಹಾಡುವುದು ಕಷ್ಟವೆಂದು ಹೇಳುತ್ತಿದ್ದರು.

ಶ್ರೀ ಬಲಿಪರಿಗೆ ಗೊತ್ತಿಲ್ಲದ ಪ್ರಸಂಗವಿಲ್ಲ. ಯಕ್ಷಗಾನ ಸಮುದ್ರದ ಆಳವನ್ನು ತಿಳಿದ ಮಂದರ ಪರ್ವತವೆಂದರೆ ಅವರೇ. ಹಲವು ಬಯಲಾಟದ ವೇಷದವರಿಗೆ, ಯಕ್ಷಗಾನದ ಅರ್ಥಧಾರಿ ಗಳಿಗೆ ಕಾಲಕ್ಕೆ ಸರಿಯಾಗಿ ಪದ್ಯಕ್ಕೆ ಹೊಂದಿಕೊಂಡು ಅರ್ಥ ಹೇಳುವ ರೀತಿಯನ್ನು ಅವರು ಮಂದಟ್ಟು ಮಾಡುತ್ತಿದ್ದುದು ಮರೆಯುವಂತಿಲ್ಲ. ಅವರು ಪದ್ಯ ಹೇಳುವುದರಲ್ಲಿ ಇನ್ನೊಂದು ವೈಶಿಷ್ಟ್ಯವಿತ್ತು. ೧ನೇ ಕಾಲ, ೨ನೇ ಕಾಲ, ೩ನೇ ಕಾಲಗಳಲ್ಲಿಯೂ ಅವರು ಹೇಗೆ ಹಾಡುತ್ತಿದ್ದರೆಂದು ಲೇಖನದಿಂದ ವಿವ ರಿಸುವುದು ಕಷ್ಟ.

ಯಕ್ಷಗಾನವೆಂದ ಮಾತ್ರಕ್ಕೆ ಶ್ರೀ ಬಲಿಪರ ನೆನಪಾಗಿಯೇ ಆಗುವುದು. ಅವರ ಸ್ವರ ಬಹಳ ಇಂಪು ಮತ್ತು ಬಹುದೂರ ಕೇಳುವಂತಹದು. ಮೂವತ್ತು ವರ್ಷಗಳ ಹಿಂದೆ ಅವರ ಹಾಡುಗಾರಿಕೆ

ಯೆಂದರೆ, ಮೂರು–ನಾಲ್ಕು ಸಾವಿರದವರೆಗೂ ಜನಸಂದಣಿ ನೆರೆಯುತ್ತಿತ್ತು. ಜನರ ಗೊಂದಲವೆಷ್ಟಿದ್ದರೂ ಅವರ ಪದ್ಯ ಪ್ರತಿಯೊಬ್ಬರನ್ನೂ ಆ ಕಡೆಗೆಳೆಯುತ್ತಿತ್ತು. ಇದು ನನ್ನ ಪ್ರತ್ಯಕ್ಷ ಅನುಭವ. ಆಗ ಅವರ ಮೆಚ್ಚಿನ ಪ್ರಸಂಗ–"ಕುಮಾರ ವಿಜಯ." ಅದನ್ನು ಹಾಡುವ ಕ್ರಮವನ್ನು ಕೇಳಿದ ಪ್ರತಿಯೊಬ್ಬ ಕಲಾಭಿಮಾನಿಗೂ ಬದುಕಿರುವ ತನಕ ಅದು ಮರೆಯಲಾರದು. "ಏನಿದು ದುಗುಡಾ ಪ್ರಿಯಾ॥ ಯಾರಿವಳಮಮ ಬಲುಪಯ್ಯಾರಿ" ಈ ಪದ್ಯಗಳನ್ನು ಹಾಡಿದ್ದು ಈಗಲೂ ನೆನಪಾಗುತ್ತ ಇದೆ.

ತಾಳಮದ್ದಳೆಗಳಲ್ಲಿಯೂ, ಅವರ ಸ್ಥಾನಮಾನ ಬಹಳ ಹಿರಿದು. ೧೯೩೦ರಲ್ಲಿ ಮಂಗಳೂರು ಜೆ. ಸಿ. ಕ್ಲಬ್‌ನಲ್ಲಿ ಉತ್ತಮ ಕಲಾವಿದರ ಕೂಡುವಿಕೆಯಿಂದ ಒಂದು ಯಕ್ಷಗಾನ ಕೂಟವಾಗಿತ್ತು. "ಅತಿಕಾಯ ಇಂದ್ರಜಿತು ಕಾಳಗ" ಅಂದಿನ ಕಥೆ. ಆ ದಿನ ಹಾಡಿದ ಅತಿಕಾಯನ ನೀತಿಯ ಪದ್ಯಗಳು ಮತ್ತು ಇಂದ್ರಜಿತು ಕಾಳಗದ "ದೀಕ್ಷೆಯನು ಬಿಸುಟೆದ್ದು" ಎಂಬಲ್ಲಿಂದ ಇಂದ್ರಜಿತು ಲಕ್ಷ್ಮಣರ ಯುದ್ಧದ ವೀರರಸದ ಪದ್ಯಗಳು ಯಕ್ಷಗಾನ ಪಟು ದಿ। ಶ್ರೀ ಕಿಲ್ಲೆಯವರನ್ನು ತಾರಕಕ್ಕೇರಿಸಿತ್ತು. ಇಂದ್ರಜಿತು ಪಾತ್ರವನ್ನು ಕಿಲ್ಲೆಯವರು ವಹಿಸಿದ್ದರು. ಆ ನೆನಹು ಈಗಲೂ ಅಚ್ಚಳಿಯದೆ ನನ್ನ ಹೃದಯದಲ್ಲಿ ನೆಲೆನಿಂತಿದೆ.

ಆಗ ಜೋಡಾಟದ ಕಾಲ. "ದಿವಾಣ" ಎಂಬಲ್ಲಿ ಪಾಂಡವಾಶ್ವಮೇಧದ ಸುಧನ್ವ ಬಬ್ರುವಾಹನ ವೀರವರ್ಮ ಕಾಳಗ ಕಥಾಭಾಗವಾಗಿತ್ತು. ಶ್ರೀ ಬಲಿಪರು ಆಗ ಕುಂಡಾವು ಮೇಳದ ಭಾಗವತರು. ಅವರಿಗೆ ಜೋಡಾಟದಲ್ಲಿ ಆಸಕ್ತಿಯಿರಲಿಲ್ಲ. ಆಗಲೇ ನನಗವರ ಪರಿಚಯವಿತ್ತು. ಅವರು ೧ನೇ ೨ನೇ ಕಾಲಗಳಲ್ಲಿ ಆ ದಿನ ಪದ್ಯ ಹೇಳುತ್ತಯಿದ್ದುದು ಯಾರಿಗೂ ಕೇಳಿಸುತ್ತಿರಲಿಲ್ಲ. ಜನಸಂದಣಿ ಕಿಕ್ಕಿರಿದಿತ್ತು. ಊರಿನ ಪ್ರಮುಖರನೇಕರು ಬಲಿಪರನ್ನು 'ಪದ್ಯ ಸರಿಯಾಗಿ ಹೇಳಿ ಕೇಳುವುದಿಲ್ಲ'ವೆಂದು ಒತ್ತಾಯಿಸುತ್ತಾಯಿದ್ದರು. ಅವರು ಹೇಳಲೇ ಇಲ್ಲ. ನಾನೂ ಆಟಕ್ಕೆ ಹೋಗಿದ್ದೆ. ನಾನೊಬ್ಬ ಪರಿಚಯದವನೆಂದು ತಿಳಿದ ಹಲವರು ಒಮ್ಮೆ ನೀವು ಬಲಿಪರಿಗೆ ಹೇಳಿನೋಡಿಯೆಂದರು. ಜನರ ವತ್ತಾಯಕ್ಕಾಗಿ ರಂಗಸ್ಥಳದ ಹಿಂದೆ ಹೋಗಿ ನಿಂತೆ. ಹೇಳಲು ಮನಸ್ಸು ಅಂಜಿತು. ಹೇಗೋ ಹೇಳಿದೆ. ನೋಡೋಣ ಎಂದು ಪಿಸುಮಾತಿನಲ್ಲಿ ಹೇಳಿದರು. ಹಲವರು ನಿರಾಶೆಯಿಂದ ಮನೆಗೆ ಹೊರಟರು. ವೀರವರ್ಮನ ಪ್ರವೇಶವಾಗಿ ಅರ್ಜುನನಿಗಿದಿರು ಬಂದೊಡನೆಯೇ "ಪಾರ್ಥನೆಂಬವನೇನೀನು" ಎಂಬ ಪದ್ಯ ಹಾಡಿದ್ದೇ ಹಾಡಿದ್ದು. ಮೂರು ಮೈಲುದೂರ ಮರಳಿದ ಜನರು ಕೇಳಿ ಓಡಿ ಬಂದು ಪ್ರತಿ ಪದ್ಯಕ್ಕೂ ಕೈ ಚಪ್ಪಾಳೆ ಹೊಡೆದು ಸಂತೋಷ ಸಾಗರದಲ್ಲೇ ತೇಲಾಡಿದ ಸನ್ನಿವೇಶ ಅಂದು ಬಂದವರು ಇಂದಿದ್ದರೆ ನೆನಪಾಗದಿರಲಾರದು.

ಇನ್ನೊಂದು ವಿಟ್ಲದ ಜೋಡಾಟ. ಅತಿಕಾಯ ಇಂದ್ರಜಿತು ಕಾಳಗದಲ್ಲಿ "ಬಿದ್ದ ಸೇನೆ ಕಂಡು ರಾಮ" ಎಂಬ ಪದ್ಯ ಹಾಡುವಾಗ ಇದಿರು ರಂಗಸ್ಥಳದವರು ಸ್ತಬ್ಧರಾಗಿ ನಿಲ್ಲುವಂತಾಗಿತ್ತು. ಇದು ಪ್ರತ್ಯಕ್ಷ ಕೇಳಿದ ಮತ್ತು ನೋಡಿದ ಅನುಭವ.

ಅಡ್ಯನಡ್ಕ ಶಾಲೆಯಲ್ಲಿ ಒಂದು ಬಾರಿ "ಪಂಚವಟಿ ವಾಲಿಸಂಹಾರ" ಕಥಾಭಾಗದ ಯಕ್ಷಗಾನ, "ಆರೆಲೋಮನುಜಾ" "ಅಂಜಬೇಡೆಲೆ ಸೀತೆ" "ವಾನರರಧಿಪತಿ" ಮುಂತಾದ ಪದ್ಯಗಳು ಮಳೆಗೆ ಒದ್ದೆಯಾಗಿಕೊಂಡು ಜನರು ಶಾಲೆಯಲ್ಲಿ ಸ್ಥಳ ಸಾಲದೆ ಹೊರಗೆ ನಿತ್ತುಕೊಂಡು ಕೇಳುವಷ್ಟು ಸೊಗಸಾಗಿದ್ದವು. ವೃದ್ಧರಾದ ಅವರು ಸಾಯ ಶ್ರೀದುರ್ಗಾ ಪರಮೇಶ್ವರೀ ಮಠದಲ್ಲಿ ಕಠಿಣ ಜ್ವರವಿರುವಾಗ "ಅಂಗದ ಸಂಧಾನ" ಪ್ರಸಂಗ ಹಾಡಿದ್ದು ನೆನಸಿದರೆ, ಯಕ್ಷಗಾನ ದೇವಿಯ ಒಲುಮೆ ಅವರಿಗೆ ಯಾವ ರೀತಿಯಲ್ಲಿದೆಯೆಂದು ವ್ಯಕ್ತವಾಗದಿರದು. ಯಕ್ಷಗಾನ ಕಲಾಮಾತೆಯ ಸೇವೆಯನ್ನು ಮಾಡುವುದರೊಂದಿಗೆ ಅವರು ಶ್ರೀ ಜಗದಂಬೆಯ ಸೇವೆಯನ್ನು ಮರೆಯುತ್ತಿರಲಿಲ್ಲವೆಂದು ಅವರು ಶ್ರೀ ದೇವಿಯ ಸ್ಥಳಗಳಿಗೆ ಹೋದ ಸಂದರ್ಭಗಳಲ್ಲಿ ನಾನು ತಿಳಿದುಕೊಂಡಿದ್ದೇನೆ. ಮೊನ್ನೆ ಮೊನ್ನೆ ಶ್ರೀ ಬಲಿಪರು ದೈವಾಧೀನ

ರಾಗುವುದಕ್ಕಿಂತ ನಾಲ್ಕು ದಿನಗಳ ಹಿಂದೆ ಮಲ್ಲ ಶ್ರೀ ದುರ್ಗಾಪರಮೇಶ್ವರಿ ಅಮ್ಮನ ಸಂದರ್ಶನಕ್ಕೆ ಹೋಗಿದ್ದರು. ಆಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಮಧ್ಯಾಹ್ನ 2 ಘಂಟೆ ಸಮಯವಾಗಿತ್ತು. ನಾನು ಹಿಂತಿರುಗಿ ಹೊರಡಲು ಸಿದ್ಧನಾಗಿದ್ದೆನು. ಆಗಲೇ ಮಠದ ಯಜಮಾನರನ್ನು ಕರೆದು ಮರು ದಿನ ಅವರ ಬಾಬ್ತು ಶ್ರೀ ದೇವಿಯ ಸನ್ನಿಧಿಯಲ್ಲಿ ಯಕ್ಷಗಾನ ಕಲಾ ಸೇವೆಯಾಗಬೇಕೆಂದು. ಎರಡು ಸಲ ಇಲ್ಲಿ ಸೇವೆ ಮಾಡಬೇಕೆಂದು ಪೆರ್ಲದವರೆಗೆ ಬಂದು ಹಿಂದೆ ಹೋಗಿರುತ್ತೇನೆ. ಈ ಸಲವಾದರೂ ಒಮ್ಮೆ ಸೇವೆಯಾಗಬೇಕೆಂದು ಮೃದಂಗವಾದನಕ್ಕೆ ಶ್ರೀ ನೆಡ್ಲೆ ನರಸಿಂಹ ಭಟ್ಟರನ್ನು ಕರೆದು ತರಲು ನನ್ನೊಡನೆ ಹೇಳಿದರು. ನಿರ್ವಾಹವಿಲ್ಲದೆ ಒಪ್ಪಿದೆ. ಮರುದಿನ ಕಾರ್ತಿಕ ಹುಣ್ಣಿಮೆ, ಆ ದಿನ ರಾತ್ರೆ ೯ ಘಂಟೆಗೆ ನರಸಿಂಹ ಭಟ್ಟ ಮತ್ತು ನಾನು ಮಲ್ಲಕ್ಕೆ ತಲಪುವಾಗ ಬಲಿಪರು ಮಲಗಿಕೊಂಡೇ ಇದ್ದರು. ಕಠಿಣಜ್ವರ, ಕಣ್ಣುನೋವು ನಿತ್ರಾಣ, ಇಡೀ ದಿನ ಆಹಾರ ಸ್ನಾನ ಏನೂ ಮಾಡಿರಲಿಲ್ಲ. ಅವರ ಬಾಬ್ತು ಸೇವೆಗೆ ಪುತ್ತಿಗೆ ಜ್ಯೋಸರನ್ನು ಬರಹೇಳಿದ್ದಾರೆಂದು ಮಠದ ಯಜಮಾನ ಅಚ್ಚುತ ಭಟ್ಟರು ನನ್ನೊಡನೆ ಹೇಳಿದರು. ರಾತ್ರೆ ಪೂಜೆ ಪ್ರಸಾದ ವಿತರಣೆ ಇತ್ಯಾದಿ ಕಾರ್ಯಕ್ರಮಗಳು ಕೊನೆಗೊಂಡವು. ಯಜಮಾನರು ಕಾರ್ಯಕ್ರಮ ಪ್ರಾರಂಭಮಾಡಲು ನನ್ನೊಡನೆ ಹೇಳಿದರು. ಬಲಿಪರ ವಿಚಾರ ನೀವೆ ಮಾತಾಡಿ. ಬಂದು ಮಲಗಿದವರು ಏಳಲೇ ಇಲ್ಲ. ಅಂತು ಸೇವೆಯಾಗಲಿ'. ಎಂದರು ನಾನು ಬಲಿಪ ಭಾಗವತರನ್ನು ಹತ್ತಿರ ಹೋಗಿ ಕರೆದೆ. ಕಾರ್ಯಕ್ರಮವನ್ನು ಹೇಗೆ ಮಾಡುವುದೆಂದು ಕೇಳಿದೆ. ಶ್ರೀ ನರಸಿಂಹ ಭಟ್ಟರು ಚೆಂಡೆ ಮದ್ದಳೆ ಪರಿಮಾಡಲಿ ಎಂದು ಹೇಳಿದರು. ಬಹಳ ನಿತ್ರಾಣವಿದ್ದ ಬಲಿಪರು ಆ ದಿನ ಹಾಡಿದ ಪದ್ಯಗಳನ್ನು ಕೇಳಿದರೆ, ಅವರ ಯೌವನ ಕಾಲದ ಪದ್ಯಗಳು ನೆನಪಾಗುತ್ತಿತ್ತು. ಎಲ್ಲರಿಗೂ ಆಶ್ಚರ್ಯವಾಯಿತು. ನಾನು ಕೂಡ ದೇವಿಯ ಕೃಪೆ ಎಂದುಕೊಂಡೆ. ಸಾಮಾನ್ಯ ಎರಡು ಘಂಟೆ ಕಾಲ ಹಾಡಿ ನನಗೆ ಆಯಾಸವಾಗುತ್ತದೆಂದರು. ಜೋಯಿಸರ ಕೈಗೆ ಜಾಗಟೆಕೊಟ್ಟರು. ಜೋಯಿಸರು ಅವರ ಕಾಲು ಹಿಡಿದು ಜಾಗಟೆ ಪಡೆದುದನ್ನು ಕಾಣುವಾಗ ಬಲಿಪರ ಯೋಗ್ಯತೆ ಎಷ್ಟಿದೆಯೆಂದು ವ್ಯಕ್ತವಾಗುವುದು. ಅಲ್ಲಿಂದಲೇ ಅನಾರೋಗ್ಯದಿಂದ ಮಲಗಿದವರು ಅನಂತರ ನಾಲ್ಕೇ ದಿನಗಳಲ್ಲಿ ಮಂಗಳೂರಲ್ಲಿ ಸ್ವರ್ಗಸ್ಥರಾದರು. ಸಾಯುವ ತನಕ ಯಕ್ಷಗಾನ ಪ್ರಪಂಚದಲ್ಲೇ ದುಡಿದು ಆ ಕಲಾ ಮಾತೆಯ ಸೇವೆಯಲ್ಲೇ ಜೀವನವನ್ನು ಕೊನೆಗೊಳಿಸಿದ ಅವರ ಮಹತ್ವ ನಿಜವಾಗಿಯೂ ಆದರ್ಶಪ್ರಾಯವಾಗಿತ್ತು.

ಅವರ ಪರಿಚಯ ನನಗೆ ಕೆಲವು ವರ್ಷಗಳಿಂದಯಿದೆ. ಅವರ ಹಾಡುಗಾರಿಕೆಯ ಅನೇಕ ಕೂಟಗಳಲ್ಲಿ ನಾನು ಭಾಗವಹಿಸಿ, ಅವರ ಅನುಭವವನ್ನು ಕೇಳಿಕೊಂಡಿದ್ದೇನೆ. ೩೦ ವರ್ಷಗಳಿಂದ ಹೆಚ್ಚಿನ ಕೂಟಗಳಲ್ಲಿ ಅವರೊಡನೆ ಸಹಕರಿಸಿದ್ದೆ. ನನ್ನ ಅನುಭವ ಪ್ರಕಾರ ಅವರು ಯಕ್ಷಗಾನದ ಭೀಷ್ಮ, ಮಹಾ ಭಾರತದಲ್ಲಿ ಭೀಷ್ಮನು ಎಷ್ಟು ಪ್ರಾಜ್ಞನೂ, ಧೀರನೂ ಆಗಿದ್ದನೋ ಅಷ್ಟೇ ಯಕ್ಷಗಾನದಲ್ಲಿ ಶ್ರೀ ಬಲಿಪ ನಾರಾಯಣ ಭಾಗವತರಿದ್ದರು.

ಅಯ್ಯನ ಕಟ್ಟೆಯಲ್ಲಿ ಒಂದು ಪ್ರಸಿದ್ಧ ತಾಳಮದ್ದಳೆಯಾಗಿತ್ತು. ಆದಕ್ಕೆ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ತಾತಾಚಾರ್ಯರು ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಅರ್ಥಧಾರಿಗಳು ಮತ್ತು ಭಾಗವತರು ಬಂದಿದ್ದರು. ಎರಡು ದಿನಗಳ ಕೂಟ. ಶ್ರೀ ಬಲಿಪರು, 'ಕುಮಾರ ವಿಜಯ' ಪ್ರಸಂಗ ಹಾಡಿದ್ದರು. ಮಹಾ ಮೇಧಾವಿಗಳಾದ ಅಂದಿನ ಅಧ್ಯಕ್ಷರು ಶ್ರೀ ಬಲಿಪರಿಗೆ "ಯಕ್ಷಗಾನ ರತ್ನ" ಎಂಬ ಬಿರುದು ಕೊಟ್ಟಿದ್ದರು. ಬಲಿಪರು ಕೇವಲ ಯಕ್ಷಗಾನ ಭಾಗವತರಾಗಿದ್ದುದು ಮಾತ್ರವಲ್ಲ, ಹರಿಕಥಾ ನಿರೂಪಣೆಯನ್ನು ಮಾಡುತ್ತಿದ್ದರು. ೧೯೨೪ರಲ್ಲಿ ಅಡ್ಯನಡ್ಕ ಶಾಲೆಯಲ್ಲಿ ಅವರು ಹರಿಕೀರ್ತನೆ ಮಾಡಿದ್ದರು. ಅವರ ಪುರಾಣಾನುಭವ, ಕವಿತಾಶಕ್ತಿ, ಸಾಮಾನ್ಯವಾದುದಲ್ಲ. ತಾಳಜ್ಞಾನದಲ್ಲಿ ಎಷ್ಟು ಬುದ್ಧಿವಂತರೆಂದು ಪ್ರಸಿದ್ಧ ಮೃದಂಗವಾದಕರಿಂದ ತಿಳಿಯಬಹುದು. ನಾನೇ ಪ್ರತ್ಯಕ್ಷ ನೋಡಿದ್ದೇನೆ. ಅವರೇ ತಾಳವನ್ನು ಹೇಳಿ ಮದ್ದೆಗಾರರನ್ನು ತಿದ್ದುತಿದ್ದರು. ಯಕ್ಷಗಾನ ಕಲೆಗೆ ಬೇಕಾದ ಎಲ್ಲಾ

ಸಾಹಿತ್ಯ ಅವರಲ್ಲಿ ತುಂಬಿತ್ತು. "ಯಕ್ಷಗಾನ ಉಜ್ಜೀವನ ಸಂಘ"ದಲ್ಲಿ ಅವರಿದ್ದರು. ಆಗ ದಿ। ಪಂಜೆ ಮಂಗೇಶ್‌ರಾಯರ ಕಾಲ. ಯಕ್ಷಗಾನ ಜನಮೆಚ್ಚುಗೆಯಾಗುವಂತೆ ಮಾಡಿದ ಹೆಚ್ಚಿನ ಪರಿಶ್ರಮ ಶ್ರೀ ಬಲಿಪರದ್ದು. ಅವರು ಆಗಾಗ ಅರ್ಥಧಾರಿಗಳಿಗೆ ಒಂದು ಸೂಚನೆ ಕೊಡುತ್ತಿದ್ದರು. ಪದ್ಯ ಹೇಳುವ ಕಾಲದ ಎರಡು ಪಾಲು ಸಮಯದಲ್ಲಿ ಅರ್ಥ ಮುಗಿಸಬೇಕು, ಅರ್ಥದಲ್ಲಿ ರಸಪ್ರಧಾನವಿರಬೇಕು ಮಾತು ಚಿಕ್ಕದು – ಅರ್ಥ ಹೆಚ್ಚಿರಬೇಕು ಇದು ಅವರ ಅಭಿಪ್ರಾಯ. ಯಕ್ಷಗಾನ ಕಲೆಗೆ ಕಳೆಕೊಟ್ಟು ಅದನ್ನು ಬೆಳಗಿಸಿದ, ಅಳಿಯದಂತೆ ಮಾಡಿದ ಆ ಕೀರ್ತಿ ಶ್ರೀ ಬಲಿಪರಿಗೇ ಸಲ್ಲಬೇಕಾದ್ದು. ಅವರು ಅಳಿದರೂ ಯಕ್ಷಗಾನವನ್ನು ಅವರು ಉಳಿಸಿದ್ದರಿಂದ ಅವರ ಹೆಸರು ಸದಾ ನೆನಪಾಗದಿರದು. ಅವರ ಮೇಲ್ಪಂಕ್ತಿಯಿಂದ ಯಕ್ಷಗಾನ ಕಲಾದೇವಿ ಬೆಳಗಲಿ ! ಮುಂದಿನ ಜನಾಂಗ ಯಕ್ಷಗಾನವನ್ನು ಉಳಿಸುವಂತಾಗಲಿ.

ಶ್ರೀ ಬಲಿಪ ನಾರಾಯಣ ಭಾಗವತರು ಮತ್ತು ನಾನು

ಶ್ರೀ ತುದಿಯಡ್ಕ ವಿಷ್ಣಯ್ಯ.

ಯಂಕ್ಷಗಾನದ ಆಚಾರ್ಯಪುರುಷರಾದ ಕೈ. ವಾ. ಬಲಿಪ ನಾರಾಯಣ ಭಾಗವತರ ಹೆಸರು ಯಕ್ಷಗಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಶೋಭಿಸುವಂತಹದು. ಅವರ ಸತತ ಪರಿಶ್ರಮದಿಂದ ಯಕ್ಷಗಾನ ಕಲೆಯು ಸರ್ವಾಂಗ ಸುಂದರವಾಗಿ ಶೋಭಿಸಿ ಅಕ್ಷರ ಜ್ಞಾನವಿಲ್ಲದ ಸಾಮಾನ್ಯ ಜನತೆಯಿಂದ ಹಿಡಿದು ವಿದ್ವಾಂಸರ ಸಮೂಹದಲ್ಲೂ ತನ್ನ ಪ್ರಭಾವ ಬೀರಿ ಮನ್ನಣೆಯ ಮಣೆಯನ್ನು ಹಾಕಿಸಿಕೊಂಡಿತು. ಹಾಡುಗಾರಿಕೆ; ನೃತ್ಯ; ಅರ್ಥಹೇಳುವಿಕೆ; ಚೆಂಡೆ ಮದ್ದಳೆ ಬಾರಿಸುವಿಕೆ, ಮುಂತಾದ ಯಕ್ಷಗಾನದ ಕಲೆಯ ಅಂಗಗಳನ್ನು ಪರಿಷ್ಕರಿಸಿ, ಆಯಾ ಅಂಗಗಳ ಮಹತ್ತನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸಿ, ಅವುಗಳಿಗೆ ನಿರ್ದಿಷ್ಟ ದಾರಿಯನ್ನು ಗೊತ್ತುಪಡಿಸಿ, ಸಮಗ್ರ ಕಲೆಯ ವ್ಯಾಪ್ತಿಯನ್ನು ಜನತೆಯ ಮುಂದಿಟ್ಟು ರಸಿಕ ಲೋಕದ ಸಹೃದಯರ ಹೃದಯದಲ್ಲಿ ಶಾಶ್ವತ ಸ್ಥಾನವನ್ನು ಪಡೆದು ತುಂಬುಜೀವನ ನಡೆಸಿ ಕೀರ್ತಿವಂತರಾಗಿ ಶ್ರೀ ಬಲಿಪರು ಸರ್ವೇಶ್ವರನ ಸನ್ನಿಧಿಗೈದಿವರು. ಬಾಲ್ಯದಿಂದಲೂ ಅವರೊಡನಾಡಿಗಳಾಗಿದ್ದು ಯಕ್ಷಗಾನ ಕಲೆಯ ನಾನಾ ಅಂಗಗಳಲ್ಲಿ ಹಲವಾರು ವರುಷ ನಿರಂತರ ಪರಿಶ್ರಮಿಸಿದ ಅನುಭವಿಗಳು ನೂರಾರು ಮಂದಿ ಇದ್ದಾರೆ, ಅವರ ಶಿಷ್ಯವರ್ಗಕ್ಕೆ ಸೇರಿದವರ ಸಂಖ್ಯೆಯಂತೂ ಅಪಾರ. ಅವರ ಪಾಂಡಿತ್ಯವನ್ನು ವಿವಿಧ ದೃಷ್ಟಿಕೋನದಿಂದ ವೀಕ್ಷಿಸಿ ಮೆಚ್ಚಿಕೊಂಡ ವಿದ್ವತ್ಪಕ್ಷಪಾತಿಗಳ ಗುಂಪೂ ದೊಡ್ಡದಾಗಿಯೇ ಇದೆ. ಆದುದರಿಂದ ಬಲಿಪರಿಗಿಂತ ಎಲ್ಲಾ ವಿಷಯಗಳಲ್ಲೂ ಎಷ್ಟೋ ಕಿರಿಯವನಾದ ನಾನು ಬಣ್ಣ ಬಣ್ಣದ ವಿವಿಧ ರೇಖೆಗಳಿಂದ ಅವರ ಚಿತ್ರವನ್ನು ಚಿತ್ರಿಸಿ ಮಹಾನುಭಾವರ ಮುಂದೆ ತೋರಿಸಲಸಾಧ್ಯವಾದರೂ ನಾಲ್ಕೆಂಟು ವರುಷ ಅವರೊಡನಾಡಿದಾತ. ಅವರನ್ನು ಹೇಗೆ ತಿಳಿದುಕೊಂಡ ಎಂಬುದನ್ನು ಗ್ರಹಿಸಲು ಸಹಕಾರಿಯಾದೀತು ಎಂಬ ಭಾವನೆಯಿಂದ "ವರ ಕಾಂಚನಾದ್ರಿಯ ಕನ್ನಡಿಯಲಿ ತೋರ್ಪಂತೆ" ಎಂಬ ಕವಿ ವಾಣಿಯನ್ನು ನೆನೆದು ಈ ಲೇಖನವನ್ನು ಬರೆದಿದ್ದೇನೆ. ಲೇಖನದಲ್ಲಿ ಬರುವ ಸಂಭಾಷಣೆಗಳನ್ನೂ, ಬಲಿಪರು ಹೇಳಿದ್ದು :— ಎಂದಿರುವ ಮಾತುಗಳನ್ನೂ ಆದಷ್ಟುಮಟ್ಟಿಗೆ ಹಿಂದೆ ನಡೆದಂತೆ ಬರೆದಿದೆ. ಈ ಕಾರಣದಿಂದಾಗಿ ಆ ಮಾತುಗಳ ಶೈಲಿ ಒಂದಿಷ್ಟು ಬೇರೆ ಎನಿಸಬಹುದಾದರೂ, ಬಲಿಪರು ಮಾತಾಡುತ್ತಿದ್ದ ರೀತಿ; ವಿಷಯ ಮನದಟ್ಟಾಗುವಂತೆ ಉಪಯೋಗಿಸುತ್ತಿದ್ದ ಉದಾಹರಣೆಗಳು, ಅಗ್ರಾಹ್ಯವಾದುದನ್ನು ಖಂಡಿಸುವಾಗ ಅವರ ಮಾತಿನ ಹರಿತ; ಇವುಗಳನ್ನು ಗಮನಿಸಲು ಕಿಂಚಿತ್ ಸಹಾಯವಾದೀತು.

ಬಲಿಪರ ಕುರಿತಾದ ನನ್ನ ನೆನಪಿನಲ್ಲಿರುವ ವಿಷಯುಗಳನ್ನೊಳಗೊಂಡ ಲೇಖನವನ್ನಪೇಕ್ಷಿಸಿ ಬಂದ ಪತ್ರವನ್ನೋದುತ್ತಿದ್ದಂತೆ ನನಗೆ ಮೂವತ್ತೆರಡು ವರುಷಗಳ ಹಿಂದಣ ಒಂದು ದಿನದ ನೆನಪಾಯಿತು.

ಆದಿನ ಬೆಳಗ್ಗೆ ಸಾಧಾರಣ ಏಳುವರೆ ಘಂಟೆ ಇರಬಹುದು, ನನ್ನ ತಂದೆಯವರೊಂದಿಗೆ ಒಬ್ಬ ಹಿರಿಯರು ಮನೆಗೆ ಬಂದರು. ತಕ್ಕಮಟ್ಟಿಗೆ ಎತ್ತರದ ಆಳು, ವಿಶಾಲ ಎದೆ, ವಿಸ್ತಾರವಾದ ಹಣೆ, ಅರಸಿನದ ಹಾಗಿದ್ದ ಮೈ ಬಣ್ಣ; ತಲೆಯಲ್ಲಿ ಜುಟ್ಟು; ಹಾಕಿಕೊಂಡದ್ದು ಇಡಿಕೈ ಅಂಗಿ; ಉಟ್ಟದ್ದು ಮುಂಡು; ಹೆಗಲ ಮೇಲೆ ಆರು ಮೊಳಕ್ಕೆ ಕಡಿಮೆ ಇಲ್ಲದಷ್ಟು ಉದ್ದದ ಒಂದು ಶಾಲು, ಕೈಯಲ್ಲೊಂದು ಸಣ್ಣ ಪೆಟ್ಟಿಗೆ ಇತ್ತು.

ಒಳಗೆ ಬಂದವರೇ ಚಾವಡಿಯಲ್ಲಿ ಅವರಿಗಾಗಿ ಬಿಡಿಸಿದ ಚಾಪೆಯಲ್ಲಿ ಕುಳಿತುಕೊಂಡರು. ತುಸು ಹೊತ್ತಾದ ಮೇಲೆ ಒಳಗೆ ಕಾಫಿ ಸಿದ್ಧವಾದುದನ್ನು ತಿಳಿದುಕೊಂಡ ತಂದೆಯವರು "ಬನ್ನಿ ಭಾಗವತರೇ ಕಾಫಿ ಕುಡಿಯುವ" ಎಂದರು. ಕಾಫಿ ಕುಡಿದಾದ ಮೇಲೆ ಪುನಃ ಚಾಪೆಯಲ್ಲಿ ಬಂದು ಕುಳಿತು ಅವರು ತಮ್ಮ ಸಣ್ಣ ಪೆಟ್ಟಿಗೆಯ ಮುಚ್ಚಳ ತೆಗೆಯ ತೊಡಗಿದರು. 'ಅಳಿಲು, ಆನೆ,' ಅ, ಆ, ಎಂದು ಓದುವ ಪ್ರಾಯದವನಾಗಿದ್ದ ನಾನು ದೂರ ನಿಂತು ಕುತೂಹಲದಿಂದ ಅವರು ಪೆಟ್ಟಿಗೆಯ ಮುಚ್ಚಳ ತೆಗೆಯುವುದನ್ನೆ ನೋಡುತ್ತಿದ್ದೆ. ಆದರೆ ಅವರು ಅದರ ಮುಚ್ಚಳ ತೆಗೆದಾಗ ನಾನು ಕಂಡದ್ದೇನು? ಒಂದು ಸೂಡಿಯಷ್ಟು ವೀಳ್ಯದೆಲೆ, ನಾಲ್ಕಾರು ಅಡಿಕೆ, ಒಂದು ತುದಿಯಲ್ಲಿ ಸುಣ್ಣ ಇನ್ನೊಂದು ತುದಿಯಲ್ಲಿ ಹೊಗೆಸೊಪ್ಪು ತುಂಬಿಸಿದ ಬೆಳ್ಳಿಯ ಅಂಡೆ. ಅದನ್ನೆಲ್ಲಾ ಹೊರತೆಗೆದಿಟ್ಟು ವೀಳ್ಯ ಹಾಕಿಕೊಂಡರು.

ಅಷ್ಟರಲ್ಲಿ ತಂದೆಯವರು ಇನ್ನೊಂದು ಚಾಪೆ ಬಿಡಿಸಿ ಅದರ ಮೇಲೊಂದು ಜಮಖಾನೆ ಹಾಸಿ ದಿಂಬು ಇಟ್ಟು "ಭಾಗವತರೇ ಮಲಗಿಕೊಳ್ಳಿ" ಎಂದರು. ನನಗೆ ಎಲ್ಲಿಲ್ಲದ ಆಶ್ಚರ್ಯ! ಬೆಳಗಿನ ಈ ಹೊತ್ತಿನಲ್ಲಿ ಇಷ್ಟು ಆರೋಗ್ಯವಂತರಾಗಿರುವವರನ್ನು ಯಾಕೆ ಮಲಗಿಕೊಳ್ಳಲು ಹೇಳುತ್ತಾರೆ? ಎಂದು. ಬಂದವರು ಬಲಿಪ ನಾರಾಯಣ ಭಾಗವತರೆಂದೂ ಹಿಂದಿನ ರಾತ್ರಿ ಸುಳ್ಯಕ್ಕೆ ಆಟದಲ್ಲಿ ಹಾಡಲು ಬಂದವರನ್ನು ನನ್ನ ತಂದೆಯವರು ಬೆಳಗ್ಗೆ ಆಟ ಮುಗಿದ ಕೂಡಲೇ ಮನೆಗೆ ಕರೆದುಕೊಂಡು ಬಂದರೆಂದೂ, ಆ ಸಂಜೆ ಪುನಃ ಹೋಗುತ್ತಾರೆಂದೂ ನನಗೆ ಆ ಮೇಲೆ ತಿಳಿಯಿತು.

ಇದು ನಾನು ಮೊತ್ತಮೊದಲು ಬಲಿಪರನ್ನು ನೋಡಿದ ನನ್ನ ನೆನಪಿನಲ್ಲಿರುವ ಸಂದರ್ಭ.

ಇದರ ನಂತರ ಆಗಾಗ ನಮ್ಮ ಮನೆಗೆ ಅವರು ಬರುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಆಗ ತಂದೆಯವರೂ ಅವರೂ ಹೆಚ್ಚಾಗಿ ಆಟದ ವಿಷಯವನ್ನೇ ಮಾತಾಡುತ್ತಿದ್ದರು. ಅದು ಸಂಪೂರ್ಣ ನನಗೆ ಅರ್ಥವಾಗದಿದ್ದರೂ, ವೇಷ, ಚೆಂಡೆ ಮದ್ದಳೆ, ಪ್ರಸಂಗ ಇತ್ಯಾದಿ ಶಬ್ದಗಳು ನನ್ನ ಕಿವಿಗೆ ಬೀಳುತ್ತಿದ್ದವು. ಕೆಲವು ವೇಳೆ ನಾನೂ ಆಟಗಳಿಗೆ ಹೋಗುತ್ತಿದ್ದೆ. ಇದರ ಪರಿಣಾಮವಾಗಿ ಹಾಳೆಯ ಕಿರೀಟ; ಅಡಿಕೆ ಮರದ ಬಿಲ್ಲು ಬಾಣಗಳು; ಚೆಂಡೆ ಬಾರಿಸುವ ಕೋಲುಗಳು ನನ್ನ ಸಂಗ್ರಹದಲ್ಲಿ ಜಮೆಯಾಗತೊಡಗಿದವು. "ನೋಡಿ ನಿರ್ಮಲ ಜಲಸಮೀಪದಿ" ಎಂಬ ಪಂಚವಟಿಯ ಪದ್ಯ ಬಾಯಿಯಲ್ಲಿ ನೆಲಸಿತು. ಒಂದು ಸಲ ನನ್ನಲ್ಲಿದ್ದ ಚೆಂಡೆ ಕೋಲುಗಳನ್ನು ಕಂಡ ಬಲಿಪರು "ಇವು ನಿನ್ನವೆಯೊ? ನನ್ನಲ್ಲಿಗೆ ಬಾ ಚೆಂಡೆ ಬಾರಿಸಲು ಕಲಿಸಿ ಕೊಡುತ್ತೇನೆ" ಎಂದರು.

ಇದಾದ ಮೂರು ನಾಲ್ಕು ವರುಷಗಳ ನಂತರ ಹೈಸ್ಕೂಲಿನಲ್ಲಿ ಕಲಿಯಲೆಂದು ಆಗಿನ ಪುತ್ತೂರು ತಾಲೋಕಿಗೆ ಒಂದೇ ಒಂದಾಗಿದ್ದ ಪುತ್ತೂರು ಬೋರ್ಡು ಹೈಸ್ಕೂಲಿಗೆ ಹೋದೆ. ಅಲ್ಲಿ ಕಲಿಯುತ್ತಿರುವಾಗ ಅವರ ಹಾಡುಗಾರಿಕೆ ಇದ್ದ ಆಟಗಳನ್ನು ನೋಡುತ್ತಿದ್ದೆನಾದರೂ ಅವರೊಡನೆ ಮಾತಾಡಲು ಹೋಗುತ್ತಿರಲಿಲ್ಲ. ಏನೋ ಅಂಜಿಕೆ. ಪುತ್ತೂರಿನಿಂದ ಎಂಟು ಮೈಲು ದೂರವಿರುವ ಉಪ್ಪಿನಂಗಡಿಯಲ್ಲಿ ಜರಗುತ್ತಿದ್ದ 'ಮಖೆ' ಎಂಬ ಜಾತ್ರೆಯ ಸಮಯದಲ್ಲಿ ತುಂಬಾ ಆಟಗಳು ಆಗುತ್ತಿದ್ದವು. ಒಂದು ಸಲ ಬಲಿಪರ ಹಾಡು ಕೇಳಲು ಸಂಜೆ ಶಾಲೆಬಿಟ್ಟು ಪುತ್ತೂರಿನಿಂದ ಅಲ್ಲಿಗೆ ನಡೆದುಕೊಂಡು ಹೋಗಿ ಆಟ ನೋಡಿ ಬೆಳಗ್ಗೆ ನಡೆದುಕೊಂಡೇ ಬಂದು ಶಾಲೆಗೆ ಹೋಗಿದ್ದೆ.

ಹೈಸ್ಕೂಲು ಮುಗಿಸಿ ಮಂಗಳೂರಿನಲ್ಲಿ ಕಾಲೇಜಿಗೆ ಸೇರಿದೆ. ಅಲ್ಲಿರುವಾಗ ಪಟ್ಟಣದಲ್ಲಿ ನಡೆಯುತ್ತಿದ್ದ ತಾಳಮದ್ದಳೆಗಳಲ್ಲಿ ಸಣ್ಣ ಪುಟ್ಟ ಅರ್ಥ ಹೇಳತೊಡಗಿದೆ. ಇದರಿಂದಾಗಿ ಮಂಗಳೂರಿನಿಂದ ಮನೆಗೆ ಬರುವಾಗ ಪದವೀಧರನಾಗಿ ಬಾರದಿದ್ದರೂ ಯಕ್ಷಗಾನ ಪದಕ್ಕೆ ಅರ್ಥ ಹೇಳುವ ಅರ್ಥಧಾರಿಯಾಗಿ ಬಂದೆ.

ಮನೆಯಲ್ಲಿ ನೆಲೆನಿಂತ ಮರುವರುಷ ನನ್ನ ಸ್ನೇಹಿತರೊಬ್ಬರು ವಿಟ್ಲ ಪೇಟೆಯಲ್ಲಿ ಒಂದು ತಾಳಮದ್ದಳೆಗೆ ಏರ್ಪಾಡು ಮಾಡಿ ನನ್ನನ್ನು ಬರಹೇಳಿದರು. ಅವರ ಹೇಳಿಕೆ ಪ್ರಕಾರ ವಿಟ್ಲಕ್ಕೆ ಹೋದೆ. ಅಂದು ಹಾಡುಗಾರಿಕೆಗೆ ಒಪ್ಪಿದ್ದ ಶ್ರೀ ಬಲಿಪರು ರಾತ್ರಿ ಸಾಧಾರಣ ಒಂಭತ್ತು ಘಂಟೆಗೆ ಬಂದರು. ಆಗ ಅವರು ವಿಟ್ಲ ಪೇಟೆಯಿಂದ ಸುಮಾರು ಮೂರು ಮೈಲು ದೂರವಿರುವ ನಿಡ್ಯಾಳ ಎಂಬಲ್ಲಿ ವಾಸಿಸುತ್ತಿದ್ದರು. ಮೈಮೇಲೆ ಅಂಗಿ ಇರಲಿಲ್ಲ. ಕೇವಲ ಒಂದು ಮುಂಡು ಮಾತ್ರ ಉಟ್ಟುಕೊಂಡು ಹೆಗಲ ಮೇಲೊಂದು ಬೈರಾಸು ಹಾಕಿಕೊಂಡಿದ್ದರು. ಕೈಯಲ್ಲೊಂದು ದೊಡ್ಡ ದೊಣ್ಣೆ ಹಾಗು ಎಲೆಯಡಿಕೆ ಪೆಟ್ಟಿಗೆ ಮಾತ್ರ ಇತ್ತು. ಶರೀರ ತುಂಬಾ ಕೃಶವಾಗಿತ್ತು, ಹಿಂದಣ ದೇಹ ಸೌಂದರ್ಯವೆಲ್ಲಾ ಮಾಯವಾಗಿತ್ತು; ಏನೂ ಸೌಖ್ಯವಿಲ್ಲ. ಮನೆಯಿಂದ ಇಲ್ಲಿಗೆ ಬರಲು ಎರಡು ಘಂಟೆ ಹಿಡಿಯಿತು. ಹಿಂದೆ ಇವರ ಒತ್ತಾಯಕ್ಕೆ ಒಪ್ಪಿಬಿಟ್ಟೆ. ಈಗ ತುಂಬಾ ಕಷ್ಟ ಕಾಣುತ್ತದೆ" ಎಂದು ನಮ್ಮಲ್ಲಿ ಹೇಳಿದರು. ನನಗಾದರೊ ಇವರು ಈದಿನ ಹೇಗೆ ಹಾಡಿಯಾರು? ಬೇರೆ ಯಾರನ್ನಾದರೂ ಹೇಳಬಾರದಿತ್ತೆ? ಎನಿಸಿತು.

ರಾತ್ರಿ ಹತ್ತು ಘಂಟೆಗೆ ತಾಳಮದ್ದಳೆ ಪ್ರಾರಂಭವಾಯಿತು. ರಾವಣವಧೆ ಪ್ರಸಂಗ ನಾಲ್ಕಾರು ಪದ್ಯ ಕೆಮ್ಮಿಕೊಂಡೇ ಹೇಳಿದರು. ರಾವಣ ಮಂಡೋದರಿ ಸಂವಾದದಲ್ಲಿ ಒಂದು ಹಾಡು ಬರುತ್ತದೆ "ರಾಮ ಲಕ್ಷ್ಮಣರ ಸಹಿತಾ । ಕಪಿ ಭಟ । ಸ್ತೋಮವನು ಗೆಲಿದು ಮತ್ತಾ ॥ ಹೋಮಮುಖದಿಂ ದನುಜರಾ । ಎಬ್ಬಿಸುವೆ । ಕಾಮಿನಿಯೆ ಕೇಳು ವಿವರಾ ॥" ಈ ಹಾಡನ್ನು ಅವರು ಹಾಡಿದಾಗ ನನಗೆ ರೋಮಾಂಚನವಾಯಿತು. ಅಸೌಖ್ಯದಿಂದ ಬಳಲುತ್ತಿದ್ದ ಬಲಿಪರೆಯೋ ಈ ಹಾಡನ್ನು ಹಾಡಿದ್ದು ಎಂದು ಕಣ್ಣಗಲಿಸಿ ನೋಡಿದೆ. ಆಮೇಲೆ ಕೆಮ್ಮು ಕಾಣಿಸಿಕೊಳ್ಳಲಿಲ್ಲ. ಬೆಳಗಿನ ತನಕ ಸರಾಗ ಹಾಡಿದರು. ಬೆಳಗಾದ ಮೇಲೆ ನನ್ನನ್ನೂ ನನ್ನೊಂದಿಗೆ ಇದ್ದ ನನ್ನ ಅಣ್ಣನನ್ನೂ ಕರೆದು ಮನೆಗೆ ಹೋಗೋಣ ಎಂದರು. ಅವರ ಮಾತಿನಂತೆ ಹೋಗಿ ಎರಡು ದಿನ ಇದ್ದು ಬಂದೆವು.

ಆಮೇಲಣ ಬೇಸಗೆಯಲ್ಲೊಂದು ದಿನ ಕಟೀಲು ಮೇಳ ಸಳ್ಯಕ್ಕೆ ಬಂತು. ಮೊದಲ ದಿನದ ಆಟಕ್ಕೆ ನಾನು ಹೋಗಲಿಲ್ಲ. ಮರುದಿನ ಬೆಳಗ್ಗೆ ಮೇಳದ ವೇಷಧಾರಿಯಾದ ಪಡ್ರೆ ಚಂದು ಮನೆಗೆ ಬಂದು ಮೇಳದ ಖಾಯಂ ಭಾಗವತರು ಊರಿಗೆ ರಜೆಯಲ್ಲಿ ಹೋದ ಕಾರಣ ಹಾಡುಗಾರಿಕೆಗೆ ಬಲಿಪರು ಬಂದಿದ್ದಾರೆ, ನೀವು ಆಟಕ್ಕೆ ಬರಬೇಕಂತೆ" ಎಂದು ತಿಳಿಸಿದರು. ಬಲಿಪರು ಆಗ ಸುಳ್ಯದಲ್ಲಿದ್ದ ನನ್ನ ಅಣ್ಣನ ಮನೆಯಲ್ಲಿ ಉಳಿದುಕೊಂಡಿದ್ದರು. ರಾತ್ರಿ ಆಟ ನಡೆಯುವ ಸ್ಥಳಕ್ಕೆ ನಾನು ಹೋದ ಕೂಡಲೆ ನನಗೆ ಅಂದಿನ ಪ್ರಸಂಗವಾದ ಬಿಲ್ಲಹಬ್ಬ ಕಂಸವಧೆಯಲ್ಲಿ ಉತ್ತರಾರ್ಧದ ಕಂಸನ ಪಾತ್ರ ಮಾಡಲು ಸೂಚನೆ ಬಂತು. ಅದಕ್ಕೆ ಹಿಂದಣ ವರುಷ ಒಂದು ಯಕ್ಷಗಾನ ನಾಟಕದಲ್ಲಿ ವೇಷ ಮಾಡಿದ್ದೆ, ಇಷ್ಟು ಅನುಭವ ಬಲಿಪರ ಹಾಡುಗಾರಿಕೆಯಲ್ಲಿ ಕಟೀಲು ಮೇಳದಲ್ಲಿ ಕಂಸನ ಪಾತ್ರ ಮಾಡಲು ಸಾಕೆ? ಎಂದು ಅಂಜಿಕೆಯಾಯಿತು. ಸಾಧ್ಯವಿಲ್ಲವೆನ್ನಲೂ ಆಗಲಿಲ್ಲ. ಮನಸಿನಲ್ಲಿಯೇ ದೇವರನ್ನು ನೆನೆದು ಬಲಿಪರಿಗೆ ಅಡ್ಡ ಬಿದ್ದು "ಕಂಸನ ಪಾತ್ರ ಮಾಡುತ್ತೇನೆ" ಎಂದೆ. ನನ್ನನ್ನು ಕುಳ್ಳಿರಿಸಿಕೊಂಡು ಕಂಸನ ಪದ್ಯಗಳನ್ನೆಲ್ಲ ಹೇಳಿ ಎಲ್ಲೆಲ್ಲಿ ಏನೇನು ಮಾಡಬೇಕು – ಇದಕ್ಕೆ ರಂಗಸ್ಥಳದ ಮಾಹಿತಿ ಎನ್ನುತ್ತೇವೆ – ಎಂದು ಹೇಳಿದರು. ಕಂಸನಾಗಿ ರಂಗಸ್ಥಳ ಪ್ರವೇಶ ಮಾಡಿದೆ, ಅವರ ಸೂಚನೆಯಂತೆ ಕೆಲಸ ನಿರ್ವಹಿಸಿದೆ. ಬೆಳಗ್ಗೆ ಕೆಲವರು ನನ್ನ ಪಾತ್ರದ ಬಗ್ಗೆ ಮೆಚ್ಚಿಗೆ ಸೂಚಿಸಿದಾಗ ಅದರಲ್ಲಿ ಬಹುಪಾಲು ಬಲಿಪರಿಗೆ ಸೇರಬೇಕಾದ್ದು ಎಂದುಕೊಂಡೆ.

ಇದರ ನಂತರ ಆಗಾಗ ಮಳೆಗಾಲದಲ್ಲಿ ಅವರ ಮನೆಗೆ ಹೋಗಿ ನಾಲ್ಕೈದು ದಿನ ಇದ್ದು ಬರುತ್ತಿದ್ದೆ. ಆ ಸಂದರ್ಭದಲ್ಲೆಲ್ಲಾ ಯಕ್ಷಗಾನದ್ದೇ ಮಾತು. ತಮ್ಮ ಎಳವೆಯಲ್ಲಿ ಯಕ್ಷಗಾನ ಹೇಗಿತ್ತು. ತಾವು ಯಕ್ಷಗಾನ ರಂಗಕ್ಕೆ ಪ್ರವೇಶ ಮಾಡಬೇಕಾದರೆ ಪಟ್ಟ ಪರಿಶ್ರಮ; ಯಕ್ಷಗಾನದಲ್ಲಿ ಸ್ವತಃ ಮಾಡಿದ ಸುಧಾರಣೆಗಳು; ಕಥಕ್ಕಳಿಗೂ ಯಕ್ಷಗಾನಕ್ಕೂ ಇರುವ ವ್ಯತ್ಯಾಸ; ಯಕ್ಷಗಾನದ ಒಂದು ಅಂಗದಲ್ಲಿ ಸ್ವಲ್ಪ ತಿಳುವಳಿಕೆ ಇದ್ದ ಮಾತ್ರಕ್ಕೆ ಸರ್ವಜ್ಞನೆಂದು ವರ್ತಿಸುವುದರಿಂದ ಕಲೆಯ ಮೇಲೆ ಉಂಟಾಗುವ ಕೆಟ್ಟ ಪರಿಣಾಮ; ಇತ್ಯಾದಿ ವಿಚಾರಗಳನ್ನು ಹೇಳುತ್ತಿದ್ದರು. ಒಂದು ಸಲ ಪಾರ್ತಿಸುಬ್ಬನ ವಿಚಾರವನ್ನೂ ಆತನ ಪ್ರಸಂಗಗಳಲ್ಲಿ ಮಾತ್ರ ಕಾಣಬರುವ ವೈಶಿಷ್ಟ್ಯವನ್ನೂ ಆತನ ಕಾಲ ವಿಚಾರವಾಗಿ ತಾವು ಮಾಡಿಕೊಂಡಿದ್ದ ಟಿಪ್ಪಣಿಗಳನ್ನೂ ಓದಿಹೇಳಿದರು. ಆಗಾಗ ಮಧ್ಯರಾತ್ರಿಯವರೇಗೂ ಕುಳ್ಳಿಸಿರಿಕೊಂಡು ತಾವು ರಚಿಸಿದ ಪ್ರಸಂಗಗಳನ್ನು ಓದಿ ಹೇಳುತ್ತಿದ್ದರು. ಅವರು ರಚಿಸಿದ ಪ್ರಸಂಗಗಳ ಪೈಕಿ 'ಅಹಲ್ಯಾಶಾಪ' ಒಂದೇ ಅಚ್ಚಿನ ಮನೆಕಂಡದ್ದು. ಉಳಿದವೆಲ್ಲಾ ಹಸ್ತ ಪ್ರತಿಯಲ್ಲಿ ಅಡಗಿವೆ; ಹಾಗೂ ಅವರು ಹೇಳುವಾಗ ಕೇಳಿದವರ ಕಿವಿಯಲ್ಲಿ ಅಲ್ಪಸ್ವಲ್ಪ ಇವೆ.

ಅವರು ಕೇವಲ ಯಕ್ಷಗಾನ ಕವಿಗಳಾಗಿರಲಿಲ್ಲ, ಹರಿಕಥೆಗಳಲ್ಲಿ ಉಪಯೋಗಿಸಬಹುದಾದ ಹಾಡುಗಳನ್ನೂ ರಚಿಸಿದ್ದರು. ಸೀತಾಕಲ್ಯಾಣದ ಕಥೆಗೆ ಸೇರಿಸಬಹುದಾದ ಹಾಡುಗಳನ್ನು ಒಂದು ಸಲ ಓದಿ ಹೇಳಿದ್ದರು. ಇನ್ನೊಮ್ಮೆ ಏನೋ ಮಾತಾಡುತ್ತಿರುವಾಗ ಜನರು ನಾವು ಏನು ಮಾಡಿದರೂ ಟೀಕಿಸುತ್ತಾರೆ, ಟೀಕಿಸುವವರಿಗೆ ಅದೇ ಒಂದು ಕಸುಬಾಗಿರುತ್ತದೆ; ನಾವು ಅದಕ್ಕೆ ಕಿವಿಕೊಡಬಾರದು ಎನ್ನುತ್ತ ಒಂದು ಕಪ್ಪು ಹೊದಿಕೆಯ ಹಳೆ ಡೈರಿಯನ್ನು ತೆಗೆದು ಆ ಕುರಿತಾಗಿ ತಾವು ಬರೆದಿದ್ದ ಹತ್ತಿಪ್ಪತ್ತು ಪದ್ಯಗಳನ್ನು ಓದಿ ಹೇಳಿದರು. ಅದು ಸಾಂಗತ್ಯವೊ ಕಂದಪದ್ಯಗಳೊ ಷಟ್ಪದಿಯೊ ಎಂದು ಹೇಳಲು ಈಗ ನನಗೆ ನೆನಪು ಸಾಲದು.

ಶ್ರೀ ಬಲಿಪರು ಬಹು ರುಚಿಕಟ್ಟಾಗಿ ಅಡುಗೆ ಮಾಡುತ್ತಿದ್ದರು. ಒಂದು ಲೋಟೆ ಚಾ ಮಾಡಲಿ ಅಥವಾ ಶ್ಯಾವಿಗೆ ಪಾಯಸವನ್ನೇ ಮಾಡಲಿ ಅವರ ಹಾಡುಗಾರಿಕೆಯಂತೆ ಅದರಲ್ಲೂ ಅವರ ವೈಶಿಷ್ಟ್ಯ ಎದ್ದು ಕಾಣುತ್ತಿತ್ತು. ಮಾತಾಡುತ್ತಿದ್ದಂತೆ ಅಡಿಗೆ ಪೂರೈಸುತ್ತಿದ್ದುದನ್ನೂ, ತಿಂಡಿತಿನಸುಗಳನ್ನು ತಯಾರಿಸುತ್ತಿದ್ದ ಬಗೆಯನ್ನೂ ನೋಡಿದಾಗ ನನಗೆ ನಳ ಚಕ್ರವರ್ತಿಯ ನೆನಪಾಗುತ್ತಿತ್ತು. ಅವರು ಮನೆಗೆ ಸಂಭಾರ ಜೀನಸುಗಳನ್ನು ತರುವಾಗಲೂ ಅತ್ಯುತ್ತಮವಾದುದನ್ನು ಹುಡುಕಿ ತರುತ್ತಿದ್ದರು. ಒಂದು ಎಸಳು ಹೊಗೆಸೊಪ್ಪು ತರುವುದಿದ್ದರೂ ಹುಡುಕಾಟ ನಡೆಯುತ್ತಿತ್ತು.

ಯಕ್ಷಗಾನದ ವಿಚಾರದಲ್ಲಿ ತುಂಬಾ ಅನುಭವವಿರುವ ನನ್ನ ತಂದೆಯವರಿಗೆ ಹತ್ತಿರ ಹತ್ತಿರ ಅರುವತ್ತು ವರುಷದಿಂದ ಬಲಿಪರ ಪರಿಚಯ ಮತ್ತು ಸ್ನೇಹ. ಅವರು ಒಂದು ಸಲ ಬಲಿಪರ ಹಾಡು ಕೇಳಲೆಂದೇ ನಮ್ಮಲ್ಲಿಂದ ಹದಿನಾರು ಮೈಲು ದೂರವಿರುವ ಬೆಳ್ಳಾರೆಗೆ ನನ್ನ ಅಣ್ಣನನ್ನೂ ಭಾವನವರಾದ ಕೃಷ್ಣ ರಾಯರನ್ನೂ ಕರೆದುಕೊಂಡು ನಡೆದುಕೊಂಡೇ ಹೋಗಿ ತಿರುಗಿ ನಡೆದುಕೊಂಡೇ ಬಂದ ವಿಚಾರ ನನ್ನ ನೆನಪಿನಲ್ಲಿದೆ. ಅವರು ಬಲಿಪರನ್ನು ಮಾತ್ರ ಭಾಗವತರೆಂದೂ ಉಳಿದವರನ್ನು ಹೆಸರು ಹೇಳಿ ಇಂಥಾ ಭಾಗವತರೆಂದೂ ಹೇಳುವ ವಾಡಿಕೆ. ಬಲಿಪರ ಶಿಷ್ಯರ ಪೈಕಿ ಅಲ್ಪಕಾಲದಲ್ಲೇ ಹೆಸರು ಗಳಿಸಿ ಅಕಾಲದಲ್ಲಿ ನಿಧನರಾದ ಬಳಕಿಲ ಈಶ್ವರಪ್ಪಯ್ಯನವರನ್ನು ಬಲಿಪರಲ್ಲಿಗೆ ನನ್ನ ತಂದೆಯವರೇ ಕಲಿಯಲೆಂದು ಕರೆದುಕೊಂಡು ಹೋದವರು. ಬಲಿಪರ ಕುರಿತಾದ ನಮ್ಮ ದೀರ್ಘ ಅನುಭವವನ್ನು ಅವರು ಆಗಾಗ ಹೇಳುತ್ತಾರೆ ಅದು ತುಂಬಾ ಸ್ವಾರಸ್ಯವೂ ಅದ್ಭುತ ರಮ್ಯವೂ ಆಗಿದೆ.

ಬಲಿಪರದು ಒಂದು ವಿಲಕ್ಷಣ ವ್ಯಕ್ತಿತ್ವ. ಆ ಶರೀರ ಶಾರೀರಗಳೆರಡೂ ತಾವು ಹೇಳಿದಂತೆ ಕೇಳಬೇಕೆಂದು ದೇವರಲ್ಲಿ ವರಪಡೆದು ಬಂದಿದ್ದರೆಂದು ಕಾಣುತ್ತದೆ. ಮನಸ್ಸಾದರೆ ಎರಡು ಮೂರು

ಜನರ ಆಹಾರವನ್ನು ತಿನ್ನುತ್ತಿದ್ದರು, ಹಾಗೆಯೇ ಆಹಾರ ಇಲ್ಲದೆಯೂ ಇರುತ್ತಿದ್ದರು. ಅಂಗೈ ದಪ್ಪದ ಆರೇಳು ಗೋಧಿ ರೊಟ್ಟಿಯನ್ನು ಸಿಪ್ಪೆ ತೆಗೆಯದ ಎರಡು ಅಡಿಕೆ ಗಾತ್ರದ ಬೆಣ್ಣೆಯೊಂದಿಗೆ ತಿನ್ನುವುದನ್ನು ನಮ್ಮ ಮನೆಯಲ್ಲೇ ನಾನು ನೋಡಿದ್ದೇನೆ. ನಾಲ್ಕಾರು ವರ್ಷಗಳ ಹಿಂದೆ ಪುತ್ತೂರಿನ ಹತ್ತಿರ ಅವರು ಒಂದು ತಾಳಮದ್ದಳೆಯಲ್ಲಿ ಹಾಡಲು ಒಪ್ಪಿಕೊಂಡರು. ಅದಕ್ಕೆ ನಾಲ್ಕು ದಿನ ಇರುವಾಗ ಭಾಗಮಂಡಲದಲ್ಲಿ ಆಡುತ್ತಿದ್ದ ತಮ್ಮ ಆಟದಲ್ಲಿ ಹಾಡಲು ಯಾವುದೋ ಮೇಳದವರು ಅವರನ್ನು ಕರೆದುಕೊಂಡು ಹೋದರು. ಅಲ್ಲಿ ಆಟ ಮುಗಿಸಿ ತಾಳಮದ್ದಳೆಯ ದಿನ ಸಂಜೆ ಪುತ್ತೂರಿಗೆ ಬಂದರು. ಭಾಗಮಂಡಲದಲ್ಲಿ ತುಂಬಾ ಛಳಿ ಇದ್ದ ಕಾರಣ ಬೆರಳ ತುದಿ, ತುಟಿ ಎಲ್ಲಾ ಒಡೆದಿತ್ತು. ಬೆಳಗ್ಗೆ ಹೊರಟವರಿಗೆ ಬಸ್ಸು ಸಿಗದೆ ದಾರಿಯಲ್ಲಿ ಒಂದು ಲೋಟೆ ಕಾಫಿ ಕುಡಿಯಲೂ ಕಷ್ಟವಾಯಿತಂತೆ. ಛಳಿಗೆ ಒಡೆದ ಬೆರಳುಗಳನ್ನು ನನಗೆ ತೋರಿಸಿ "ಹಿಂದೆ ಮದ್ದಳೆಗಾರನಾಗಿ ಮೇಳದಲ್ಲಿರುವಾಗಲೂ ಹೀಗೆ ಬೆರಳು ಒಡೆದಿರಲಿಲ್ಲ" ಎಂದರು. ಪುತ್ತೂರಿನಿಂದ ಒಟ್ಟಾಗಿ ತಾಳಮದ್ದಳೆ ನಡೆಯುವ ಮನೆಗೆ ಹೋದೆವು. ಅಲ್ಲಿ ಹೋದ ಕೂಡಲೇ ನಮ್ಮನ್ನು ಊಟಕ್ಕೆಬ್ಬಿಸಿದರು. ನಾವು ಊಟ ಮಾಡಿದೆವು. ಬಲಿಪರು ಮಾತ್ರ "ಊಟ ಮಾಡಿದರೆ ಹಾಡಲು ಸಾಧ್ಯವೇ ಇಲ್ಲ" ಎಂದು ಸ್ವಲ್ಪ ಕಾಫಿ ಕುಡಿದು ಬೆಳಗಿನ ತನಕ ಎಂದಿನಂತೆ ಹಾಡಿದರು. ಮರುದಿನ ಮಧ್ಯಾಹ್ನದ ವರೆಗೆ ಪುತ್ತೂರಲ್ಲಿದ್ದು ಸಂಜೆ ಮನೆಗೆ ಹೋದರು.

ಅವರು ದಿನಗಟ್ಟಲೆ ನಿದ್ರಿಸಿದ್ದನ್ನು ನಾನು ನೋಡಲಿಲ್ಲ, ಆದರೆ ಹಗಲು ಸ್ವಲ್ಪವೂ ನಿದ್ರಿಸದೆ ಪ್ರಯಾಣ ಮಾಡುತ್ತಾ ನಾಲ್ಕಾರು ದಿವಸ ರಾತ್ರಿ ಎಡೆಬಿಡದೆ ಹಾಡಿದುದನ್ನು ನಾನು ನೋಡಿದ್ದೇನೆ. ಒಂದೊಂದು ಸಲ ಹಗಲು ಕುಳಿತಲ್ಲೇ ಎರಡು ನಿಮಿಷ ಕಣ್ಣುಮುಚ್ಚಿ "ನನ್ನ ನಿದ್ರೆಯಾಯಿತು" ಎನ್ನು ತ್ತಿದ್ದರು. ಆ ಮೇಲೆ ಹಗಲಿಡೀ ಎಚ್ಚರವಾಗಿದ್ದು ರಾತ್ರಿ ಪುನಃ ಜಾಗಟೆ ಹಿಡಿಯುತ್ತಿದ್ದರು. "ನಿದ್ದೆ ಬಿಡಲು ಸಾಧ್ಯವಿಲ್ಲದವರಿಗೆ ಮೇಳದ ತಿರುಗಾಟ ಸಲ್ಲ" ಎಂದು ಆಗಾಗ ಅವರು ಹೇಳುತ್ತಿದ್ದು ದನ್ನು ನಾನು ಕೇಳಿದ್ದೇನೆ.

ನಮ್ಮ ಮನೆಯಲ್ಲಿ ಜರಗಿದ ಒಂದು ತಾಳಮದ್ದಳೆಯಲ್ಲಿ ಅವರು ಹಾಡಲು ಬಂದಾಗ ಇದೊಂದು ಸಂಗತಿ ನಡೆಯಿತು. ತಾಳಮದ್ದಳೆ ಆರಂಭಿಸುವುದು ಎಂಬ ಹೊತ್ತಿಗೆ ಮದ್ದಳೆ ಬಾರಿಸಲು ಬಂದಿದ್ದ ಕುದ್ರೆಕ್ಕೂಡ್ಲು ಶ್ರೀರಾಮ ಭಟ್ಟರು ಒಂದು ಸಿಗರೇಟಿಗೆ ಬೆಂಕಿ ಹಚ್ಚುವ ಮನಸ್ಸು ಮಾಡಿದರು. ಇದನ್ನರಿತ ಬಲಿಪರು ಸಿಗರೇಟನ್ನು ತೆಗೆದುಕೊಂಡು ರಾಮ ಭಟ್ಟರಲ್ಲಿ ಬೆಂಕಿ ಹಚ್ಚಲು ಹೇಳಿದರು. ಆಮೇಲೆ ಬಲಗೈಯ ಐದು ಬೆರಳುಗಳನ್ನೂ ಜೋಡಿಸಿ ಸಿಗರೇಟನ್ನು ಹಿಡಿದು, ಹೆಬ್ಬೆರಳು ಮತ್ತು ತೋರುಬೆರಳುಗಳ ಸಂದಿನಲ್ಲಿ ಬಾಯಿಟ್ಟು ಎಡಗೈಯನ್ನು ಜೋಡಿಸಿ ಒಂದು ಝುರುಕಿ ಎಳೆದರು. ಆ ಒಂದು ಝುರುಕಿಗೇ ಮುಕ್ಕಾಲು ಪಾಲು ಸಿಗರೇಟು ಉರಿದು ಬೆಂಕಿ ಬೆರಳಿಗೆ ಮುಟ್ಟುವಂತಾಯಿತು. ಅಷ್ಟು ಸಾಮರ್ಥ್ಯ ಆ ಎದೆಗುಂಡಿಗೆಗೆ ಇದ್ದ ಕಾರಣವೇ ಎಂದು ತೋರುತ್ತದೆ, ಸುಳ್ಯದಲ್ಲಿ ಅವರು ಆಟದಲ್ಲಿ ಹಾಡಿದರೆ ಬೆಳಗಿನ ಝಾವಕ್ಕೆ ಮೂರು ಮೈಲು ದೂರ ಇರುವ ನಮ್ಮ ಮನೆಗೆ ಧ್ವನಿವರ್ಧಕ ವಿಲ್ಲದ ಆ ಕಾಲದಲ್ಲೂ ಕೇಳಿಸುತ್ತಿತ್ತು.

ಸುಳ್ಯದಲ್ಲಿ ಒಮ್ಮೆ ಆಟ ಮುಗಿದು ಹೊರಡುವಾಗ ಅಲ್ಲೇ ಇದ್ದ ಕಬ್ಬಿನ ನೀರು ಮಾರುವವನ ಆಲೆ ಕಾಣಿಸಿತು. ಅಲ್ಲಿಗೆ ಹೋಗಿ ಕುಳಿತು ಅವನಲ್ಲಿ ಕಬ್ಬಿನ ನೀರು ತೆಗೆಸಿ ಒಂದು ಕುತ್ತಿಯಷ್ಟು ಕುಡಿ ದರು. ಜನವರಿ ತಿಂಗಳ ಛಳಿಗೆ ಅಷ್ಟು ಬೆಳಗ್ಗೆ ಕುಡಿದ ಕಬ್ಬಿನ ನೀರು ಅವರ ಶರೀರ ಶಾರೀರಗಳ ಮೇಲೆ ಯಾವ ಕೆಟ್ಟ ಪರಿಣಾಮವನ್ನೂ ಉಂಟುಮಾಡದ್ದು ಆಶ್ಚರ್ಯವೇ! ಇಷ್ಟು ಮಾತ್ರವಲ್ಲದೆ ಅಲ್ಲಿಂದ ಬರುವಾಗ ಎರಡು ಇಡೀ ಕೋಲು ಕಬ್ಬು ತಂದು ನಮ್ಮ ಮನೆಯಲ್ಲಿ ಕುಳಿತು "ಇದು ಸ್ವರಕ್ಕೆ ಒಳ್ಳೆದು" ಎನ್ನುತ್ತಾ ಎರಡು ಮಾರಿನಷ್ಟು ಉದ್ದದ ತುಂಡನ್ನು ಚೂರಿಯ ಸಹಾಯವಿಲ್ಲದೆ ಹಲ್ಲಿನಲ್ಲೇ ಕಚ್ಚಿ ತಿಂದರು. ಒಂದು ಮೊಳದಷ್ಟು ಉದ್ದದ ತುಂಡನ್ನು ಹಾಗೆ ತಿಂದಾಗ ನನ್ನ ಬಾಯಿಮಾತ್ರ ಅಸಹ ಕಾರ ಹೂಡಿತು.

ಅವರ ಹೆಸರಿನ ಮುಂದೆ ಬಲಿಪ ಎಂದಿದೆಯಷ್ಟೆ, ಅದು ಅವರ ಹಿರಿಯರೊಬ್ಬರು ಬಲಿಪ ಜಾತಿಯ ಹುಲಿಯನ್ನು ಉರಿಯುವ ಕೊಳ್ಳಿ ತೋರಿಸಿ ಓಡಿಸಿದ ಕಾರಣ ಬಂದದ್ದು ಎಂದು ಹೇಳುತ್ತಾರೆ ಇದು ಹೌದೋ ಅಲ್ಲವೋ ಎಂದು ಅವರಲ್ಲಾಗಲಿ ಅವರ ಕುಟುಂಬದವರಲ್ಲಾಗಲಿ ನಾನು ಈ ವರೆಗೆ ಕೇಳಲಿಲ್ಲ. ಈ ಕೆಳಗಿನ ಘಟನೆ ನಡೆದದ್ದನ್ನು ಕಣ್ಣಾರೆ ನೋಡಿದ ನನಗೆ ಅದರ ಅಗತ್ಯ ಕಾಣಿಸಲಿಲ್ಲ.

ಒಂದು ರಾತ್ರಿ ಬಲಿಪರ ಹಿಂದಿನ ಮನೆಯು– ಎಂದರೆ ನಿಡ್ಳಾಳ ಮನೆಯ ಜಗಲಿಯುಲ್ಲಿ ನಾನೂ ಅವರೂ ಮಲಗಿದ್ದೆವು. ಆಗ ಅವರಲ್ಲಿದ್ದ ಬೇಟೆನಾಯಿಗಳ ಹಾಗಿದ್ದ ಎರಡು ಒಳ್ಳೆಯ ನಾಯಿಗಳು ಅವರ ಕಾಲ ಬುಡದಲ್ಲಿ ಮಲಗಿದ್ದವು. ಮಧ್ಯ ರಾತ್ರಿಯ ಹೊತ್ತಿಗೆ ಆ ಎರಡೂ ನಾಯಿಗಳೂ "ಬೊಬ್ಬೋ" ಎಂದು ಜೋಡು ಕಹಳೆ ಊದಿದವು. ಎಚ್ಚರಗೊಂಡ ಬಲಿಪರು "ಎಲಾ ನಿನ್ನ ಸಾಧನೆಯೇ" ಎಂದವರೇ ಕೈಯಲ್ಲೊಂದು ದೊಣ್ಣೆ ಹಿಡಿದುಕೊಂಡು "ಛೂ; ಛೂ" ಎನ್ನುತ್ತಾ ಮನೆಯ ಹಿಂದಿನ ಗುಡ್ಡಕ್ಕೆ ಓಡಿದರು. ಅರ್ಧ ಘಂಟೆಯ ನಂತರ ತಿರುಗಿ ಬಂದು "ಒಂದು ಹುಲಿ ಎರಡು ದಿವಸಗಳಿಂದ ನಾಯಿಗಳನ್ನು ಹಿಡಿಯಲು ಹವಣಿಸುತ್ತದೆ. ಎಲ್ಲೋ ಹೋಯಿತು" ಎಂದರು. ಈ ರೀತಿಯ ಇನ್ನೂ ಹತ್ತೆಂಟು ವಿವರಗಳನ್ನು ಹೇಳಬಹುದು. ಆದರೆ ಯಕ್ಷಗಾನಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ಬರೆವರೆ ಹೆಚ್ಚು ಉಚಿತವಾದೀತು ಏಕೆಂದರೆ ಅವರು ಬಲಿಪ ನಾರಾಯಣ ಭಾಗವತರಲ್ಲವೆ?

ಇತ್ತಣ ಯಕ್ಷಗಾನ ಬಯಲಾಟದಲ್ಲಿ ಕೋಡಂಗಿಯಿಂದ ಹಿಡಿದು ಸ್ತ್ರೀವೇಷದ ತನಕ ಒಬ್ಬರು ಹಾಡುತ್ತಾರೆ. ಅವರಿಗೆ "ಸಂಗೀತಗಾರ" ಎಂದು ಹೆಸರು. ಆಮೇಲೆ ಭಾಗವತರು ಹಾಡುತ್ತಾರೆ. ಸಂಗೀತಗಾರನಾಗಿ ಸಾಕಷ್ಟು ಅನುಭವ ಪಡೆದೇ ಹಿಂದಿನವರು ಭಾಗವತರಾಗುತ್ತಿದ್ದರು. ಇದನ್ನು "ತಂದೆ ಸಂಗೀತಗಾರನಾಗಿದ್ದರೆ ಮಗ ಭಾಗವತನಾದಾನು" ಎಂಬ ಗಾದೆಯೂ ಧ್ವನಿಸುತ್ತದೆ. ಕೆಲವು ವರುಷಗಳ ಹಿಂದೆ ಅವರು ಸುಳ್ಯಕ್ಕೆ ಒಂದು ಮೇಳದೊಂದಿಗೆ ಬಂದಾಗ ಒಂದು ರಾತ್ರಿ ಸಂಗೀತಗಾರ ಸಮಯಕ್ಕೊದಗಲಿಲ್ಲ. "ಏನು ಮಾಡುವುದು? ಸೋತಿತಲ್ಲ" ಎಂದರು ಮೇಳದ ಯಜಮಾನರು. "ಅಷ್ಟೆ ತಾನೆ, ನನಗೇನೂ ಅದು ಹೊಸತಲ್ಲ" ಎಂದು ಬಲಿಪರು ಜಾಗಟೆ ತೆಗೆದುಕೊಂಡು ಕೋಡಂಗಿ ಕುಣಿಸುವಲ್ಲಿಂದ ಮಂಗಳದ ತನಕ, ರಾತ್ರಿ ಎಂಟು ಘಂಟೆಯಿಂದ ಬೆಳಗಿನ ವರೆಗೂ ಹಾಡಿದರು. ಆದರೂ ಅವರ ದೇಹಕ್ಕಾಗಲಿ ಕಂಠಕ್ಕಾಗಲಿ ಶ್ರಮ ಎನಿಸಲಿಲ್ಲ.

ಆಟದಲ್ಲಾಗಲಿ ತಾಳಮದ್ದಳೆಯಲ್ಲಾಗಲಿ ತಪ್ಪಿದವರನ್ನು ಹೇಳಿಕೊಟ್ಟು ತಿದ್ದುತ್ತಿದ್ದರು. ಇದು ದಾರಿಗೆ ಬರುವ 'ಬಾಬಲ್ಲ' ಎಂದು ಕಂಡರೆ ನಿಷ್ಠುರರಾಗುತ್ತಿದ್ದರು. ಒಮ್ಮೆ ಪಂಚವಟಿ ಪ್ರಸಂಗದ ತಾಳ ಮದ್ದಳೆ ನಡೆದಿತ್ತು ಘೋರ ರೂಪಿನ ರಾಕ್ಷಸಿ ಶೂರ್ಪನಖಿ ರಾಮನ ರೂಪವನ್ನು ಕಂಡು ಮರುಳಾಗಿ ಸುಂದರಾಂಗಿಯಾಗುತ್ತಾಳೆ. ಆಗ ಒಂದು ದ್ವಿಪದಿ ಬರುತ್ತದೆ. "ಹದಿನಾರು ವತ್ಸರದ ಹೆಣ್ಣಾದಳವಳು। ಮುದದಿಂದ ಶೃಂಗಾರವಾಗಿ ಮತ್ತವಳು" ಎಂದು 'ಶೃಂಗಾರವಾಗಿ ಮತ್ತವಳು' ಎಂಬುದಕ್ಕೆ ಅರ್ಥಧಾರಿ ಸ್ತ್ರೀಯರ ಶೃಂಗಾರದ ನಾನಾ ಪ್ರಕಾರಗಳನ್ನು ವಿವರಿಸುತ್ತಾ "ಒಂದು ಜಡೆ; ಎರಡು ಜಡೆ, ಚಕ್ರಸೂಡಿ; ಎಂದು ಈಗಿನ ಕಾಲದ ಕೇಶಸಂಸ್ಕಾರಗಳನ್ನೆಲ್ಲಾ ವಿವರಿಸತೊಡಗಿದರು. ಬಲಿಪರಿಗೆ ಏನು ಕಂಡಿತೋ? ಅರ್ಥಧಾರಿಯ ಮಾತು ನಿಲ್ಲುವುದಕ್ಕೆ ಮೊದಲೇ "ಇನ್ನೊಂದು ಕ್ರಮ ಇದೆ, ಅದು ತಲೆಯನ್ನು ಬೋಳಿಸುವುದು "ಎಂದು ಗಟ್ಟಿಯಾಗಿಯೇ ಹೇಳಿದರು. ಶೂರ್ಪನಖಿಯ ಶೃಂಗಾರ ಅಲ್ಲಿಗೇ ಮುಗಿಯಿತು.

ಅವರು ಪದ್ಯ ಹಾಡಬೇಕಾದರೆ ಹಿಮ್ಮೇಳದ ಇತರ ಪರಿಕರಗಳು ಅಚ್ಚುಕಟ್ಟಾಗಿರಬೇಕಿತ್ತು. ಒಮ್ಮೆ ಎಲ್ಲರೂ ಕೂಡಿ ಇನ್ನೇನು ತಾಳಮದ್ದಳೆ ಪ್ರಾರಂಭಿಸುವುದು ಎನ್ನುವಷ್ಟರಲ್ಲಿ ಮದ್ದಳೆ ಬಾರಿಸ

ಲೆಂದು ಬಂದವರು ಮದ್ದಳೆ ಶ್ರುತಿಯಲ್ಲಿ ಉಂಟೋ ಎಂದು ನೋಡಲು ಹಾರ್ಮೋನಿಯನ್ನು ಬಾರಿಸಿದರು. ಅದರಲ್ಲಿ ಗಾಳಿ ಅಲ್ಲಲ್ಲಿ ಹೋಗುತ್ತಿದ್ದು 'ಆಂವು ಆಂವು' ಎಂದು ಅಭ್ಯಾಸವಿಲ್ಲದವರು ಶಂಖ ಊದಿದ ಹಾಗೆ ನಾದ ಹೊರಟಿತು. ಇದನ್ನು ನೋಡಿದ ಬಲಿಪರು "ಈ ಹಾರ್ಮೋನಿಯಂನಲ್ಲಿ ಹಾಡಲು ಸಾಧ್ಯವೇ ಇಲ್ಲ ಎಂದರು. ಆಮೇಲೆ ವ್ಯವಸ್ಥಾಪಕರಲ್ಲೊಬ್ಬರು ಕಾರು ಮಾಡಿಕೊಂಡು ಹೋಗಿ ಬೇರೆ ಒಳ್ಳೆಯ ಹಾರ್ಮೋನಿಯಂ ತಂದ ಮೇಲೆ ಒಂದು ಘಂಟೆ ತಡವಾಗಿ ತಾಳಮದ್ದಳೆ "ಮುದದಿಂದ" ಪ್ರಾರಂಭವಾಯಿತು. ಇನ್ನೊಂದು ಸಲ ಜಾಗಟೆಯ ವಿಚಾರದಲ್ಲೂ ಹೀಗೆಯೇ ಆಯಿತು. ಆಮೇಲೆ ತಾವು ಅತ್ತಿತ್ತ ಹೋಗುವಾಗ ಕೊಂಡೊಯ್ಯುತ್ತಿದ್ದ ಚೀಲದಲ್ಲಿ ತಮ್ಮ ಜಾಗಟೆ ಕೋಲುಗಳನ್ನು ಸದಾ ಇಟ್ಟಿರುತ್ತಿದ್ದರು.

ಇತ್ತಣ ಆಟಗಳಲ್ಲಿ ಇತ್ತೀಚೆಗೆ ಹೊಸ ಪ್ರಸಂಗಗಳು ಪ್ರವೇಶ ಮಾಡಿದವು. ತುಳು ಭಾಷೆಯ ಪ್ರಸಂಗಗಳು ಧಾಳಿಯಿಟ್ಟವು. ಟೆಂಟ್ (Tent)ನಲ್ಲಿ ಆಡುವ ಆಟಗಳಲ್ಲಿ ಹಣ ಸಂಗ್ರಹದ ದೃಷ್ಟಿಯಿಂದ ಆ ಪ್ರಸಂಗಗಳು ತುಂಬಾ ಸಹಕಾರಿ ಎಂಬ ಅಭಿಪ್ರಾಯ ಕೆಲವರಲ್ಲಿ ಇತ್ತು. ಇಂತಹ ಸಂದರ್ಭದಲ್ಲಿ ನಾಲ್ಕು ದಿವಸದ ಮಟ್ಟಿಗೆ ಒಂದು ಮೇಳದಲ್ಲಿ ಹಾಡಲು ಬಲಿಪರು ಸುಳ್ಯಕ್ಕೆ ಬಂದಿದ್ದಾಗ ಎರಡನೆಯ ರಾತ್ರಿ ನಾನೂ ಅವರೂ ಬೇರೆ ಇನ್ನೂ ಕೆಲವರು ಮಾತಾಡುತ್ತಿದ್ದಲ್ಲಿ ಮೇಳದ ಯಜಮಾನರು ಬಂದರು. ಆಗ ಈ ಕೆಳಗಿನಂತೆ ಸಂಭಾಷಣೆ ನಡೆಯಿತು.

ಮೇಳದ ಯಜಮಾನರು:- ನಾಳೆ ಯಾವ ಪ್ರಸಂಗ ಆಡುವುದು ?

ಬಲಿಪರು:- ಯಾವುದೂ ಆದೀತು

ಮೇ. ಯ:- ಯಾವುದಾದರೂ ಹೊಸ ಪ್ರಸಂಗ ಆಡಿದರೆ ಆದೀತು.

ಬಲಿಪರು:- ಹೊಸ; ಎಂದರೆ ?

ಮೇ. ಯ:- ಎಂದರೆ ಈ ತನಕ ಇಲ್ಲಿ ಯಾರೂ ಆಡದ್ದು.........

ಮೇಳದ ಯಜಮಾನರು ಮಾತಿನ ಜಾಡು ಸಿಕ್ಕಿದ ಬಲಿಪರು:- ಆಡೋಣ; ಹೊಸಾ ಹೊಸತು ಈತನಕ ಯಾರೂ ಇಲ್ಲಿ ಆಡದ್ದು.

ಮೆ. ಯ:- ಯಾವ ಪ್ರಸಂಗ ಅದು ? ನಾಳೆ ಕರಪತ್ರ ಹಂಚಬೇಕು ಬೋರ್ಡು ಇಂದೇ ಬರೆಯಬೇಕು.

ಬಲಿಪರು:- ಹಾಗೆಯೇ ಬರೆಯಿರಿ. 'ಇದುವರೆಗೆ ಯಾರೂ ಆಡದ ಹೊಸ ಪ್ರಸಂಗ' ಎಂದು.

ಈ ಸಂಭಾಷಣೆಯನ್ನು ಕೇಳುತ್ತಿದ್ದ ಇನ್ನೊಬ್ಬರು:- ಹಾಗೆ ಬರೆದರೆ ನಾಳೆ ರಾತ್ರಿ ಆಟ ಆಡಬೇಕಲ್ಲ. ಯಾವ ಪ್ರಸಂಗ ಆಡುವುದು ?

ಬಲಿಪರು:- 'ಹೊಸಾ ಹೊಸತು' ಎಂದು ಹೇಳಿದೆನಲ್ಲ. ತಾಯಿಯನ್ನು ಮಗ ಮದುವೆಯಾಗುವ ಪ್ರಸಂಗ ಆಡೋಣ ಇದುವರೆಗೆ ಇಲ್ಲಿ ಯಾರಾದರೂ ಆಡಿದ್ದಾರೇನು ? ಎಂದು ನನ್ನ ಮುಖ ನೋಡಿದರು. ಇಲ್ಲಿಗೇ ಆ ಮಾತುಕತೆ ಮುಗಿಯಿತು. ಮರುದಿವಸ ಯಾವುದೋ ಪುರಾಣ ಪ್ರಸಂಗ ಆಡಲಾಯಿತು.

ಈಗಣ ತುಳು ಪ್ರಸಂಗಗಳ ವಿಚಾರದಲ್ಲಿ ಅವರಿಗೆ ಎಷ್ಟೊಂದೂ ಸಮಾಧಾನವಿರಲಿಲ್ಲ. "ಈ ಭೂತಗಳು ಬಂದು ದಶಾವತಾರವನ್ನು ಮೂಲೆಗುಂಪಾಗಿಸಿದವು" ಎನ್ನುತ್ತಿದ್ದರು. ಈಗಾಗಲೇ ಬೇಕಾದಷ್ಟು ಪುರಾಣ ಪ್ರಸಂಗಗಳಿವೆ, ಅವುಗಳಲ್ಲಿ ಎಷ್ಟೋ ಪ್ರಸಂಗಗಳನ್ನು ಆಟ ಆಡುವುದೇ ಇಲ್ಲ; ಅಲ್ಲದೆ ಹೊಸ ಪ್ರಸಂಗ ಬರೆಯುವವರಿಗೆ ಪುರಾಣದ ಗನಿ ಇನ್ನೂ ಸಂಪದ್ಭರಿತವಾಗಿಯೇ ಇದೆ. ಎಂಬುದು ಅವರ ಅಭಿಪ್ರಾಯವಾಗಿತ್ತು.

ಬಲಿಪರಿಗೆ ಹಿಂದುಸ್ಥಾನಿ ಸಂಗೀತವನ್ನು ಕೇಳುವುದರಲ್ಲಿ ತುಂಬಾ ಆಸ್ಥೆ ಇತ್ತು. ಹಿಂದುಸ್ಥಾನಿ ಸಂಗೀತದವರು ಶ್ರುತಿಗೆ ಕೊಡುವ ಪ್ರಾಧಾನ್ಯವನ್ನು ಅವರು ತುಂಬಾ ಮೆಚ್ಚಿಕೊಂಡಿದ್ದರು.

ಆ ಪದ್ಧತಿಯ ಸಂಗೀತದ ಪ್ರಸ್ತಾಪ ಬಂದಾಗಲೆಲ್ಲಾ ತಾವು ಕಂಡಿದ್ದ ಯಾವನೋ ಒಬ್ಬ ಗವಾಯಿಯ ಕಥೆಯನ್ನೂ ಅವನ ಹಾಡುಗಾರಿಕೆಯ ವೈಶಿಷ್ಟ್ಯವನ್ನೂ ವಿವರಿಸುತ್ತಿದ್ದರು.

ಅವರಿಗೆ ದಕ್ಷಿಣಾದಿ ಸಂಗೀತದಲ್ಲಂತೂ ಸಾಕಷ್ಟು ಪರಿಶ್ರಮವಿತ್ತು ಎಂಬುದನ್ನು ಅವರ ಹಾಡುಗಾರಿಕೆಯನ್ನು ಕೇಳಿದವರಿಗೂ, ಅವರ ಪ್ರಸಂಗಗಳನ್ನು ನೋಡಿದವರಿಗೂ ತಿಳಿದಿರುವ ಅಂಶ. ಅವರ ಗುರುಗಳಾಗಿದ್ದ ದಿವಂಗತ ಕೂಡ್ಲು ಶ್ರೀ ಸುಬ್ರಾಯ ಶ್ಯಾನುಭಾಗರು ಯಕ್ಷಗಾನದಲ್ಲಿ ಎಂತೋ ಅಂತೇ ದಕ್ಷಿಣಾದಿ ಸಂಗೀತದಲ್ಲೂ ನುರಿತ ವಿದ್ವಾಂಸರಾಗಿದ್ದರಂತೆ.

ಅತಿಕಾಯ ಕಾಳಗದಲ್ಲಿ ಚಾರಕನಿಗೆ ಬರುವ "ಖಳರಾಯ ಲಾಲಿಸೈಬಿನ್ನಪವ" ಎಂಬ ಹಾಡು ಮುಖಾರಿ ರಾಗದಲ್ಲಿ ಹಾಡುವುದು ಎಂದು ಪುಸ್ತಕದಲ್ಲಿ ಮುದ್ರಿತವಾಗಿದೆ. ಆದರೆ ಅದನ್ನು ಹಾಡುವುದನ್ನು ಕೇಳುವಾಗ ಮುಖಾರಿ ರಾಗದಲ್ಲಿ ಹಾಡುವುದು ಎಂದು ಖಚಿತವಾಗುವುದಿಲ್ಲ" ಎಂಬ ನನ್ನ ಅನುಮಾನವನ್ನು ಒಂದು ಸಲ ವ್ಯಕ್ತಪಡಿಸಿದೆ. ಅದಕ್ಕೆ ಅವರು "ಅದು ಮುಖಾರಿ ರಾಗದಲ್ಲಿ ಹಾಡಬೇಕಾದ ಹಾಡೇ. ಆದರೆ ಅದನ್ನು ಹೇಗೆ ಹೇಗೋ ಹಾಡುತ್ತಾರೆ. ಮುಖಾರಿ ರಾಗ ಭಕ್ತಿ ಕರುಣಾರಸ ಪ್ರಧಾನವಾದ ರಾಗ ಎಂದು ತ್ಯಾಗರಾಜರು ಮುಖಾರಿ ರಾಗದಲ್ಲಿ ರಚಿಸಿದ "ಎಂತ ನಿನ್ನ ವರ್ಣಿಂತುನು ಶಬರೀ" ಎಂಬ ಕೀರ್ತನೆಯನ್ನು ವಿಸ್ತಾರವಾಗಿ ಹಾಡಿ ತೋರಿಸಿ "ಖಳರಾಯ ಲಾಲಿಸೈ" ಎಂಬ ಹಾಡನ್ನು ಯಕ್ಷಗಾನದ ಕ್ರಮದಲ್ಲಿ ಹಾಡಿ ತೋರಿಸಿ ಅದರಲ್ಲಿ ಇರುವ ಇದರಲ್ಲಿ ಬಿಟ್ಟ ಅಂಶವನ್ನು ವಿವರಿಸಿದರು. ಅದನ್ನು ಇನ್ನೊಬ್ಬರಿಗೆ ತಿಳಿಯಹೇಳಲು ಇಂದು ನನಗೆ ಅಸಾಧ್ಯ ವಾದರೂ ಅವರ ವಿವರಣೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಇದೆ.

ಇನ್ನೊಂದು ಸಲ ಪಟ್ಟಾಭಿಷೇಕದ "ತಮ್ಮ ಇನಿತ್ಯಾಕೊ ಕೋಪ" ಎಂಬ ಹಾಡನ್ನು ಮೂರು ನಾಲ್ಕು ಬೇರೆ ಬೇರೆ ರಾಗಗಳಲ್ಲಿ ಬೇರೆ ಬೇರೆ ತಾಳಗಳೊಂದಿಗೆ ಹೇಳಿ ಯಾವುದು ಆ ಸಂದರ್ಭಕ್ಕೆ ಉಚಿತ ಎಂದು ವಿವರಿಸಿದರು.

ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡಮಿಯು ಸಾವಿರದ ಒಂಭೈನೂರ ಅರುವತ್ತ ಮೂರನೇ ಇಸವಿಯಲ್ಲಿ ಅವರಿಗಿತ್ತ ಪ್ರಶಸ್ತಿ ಸ್ವೀಕಾರಕ್ಕಾಗಿ ಬೆಂಗಳೂರಿಗೆ ಹೋದಾಗ ಅವರೊಂದಿಗೆ ನಾನೂ ಇದ್ದೆ. ಪ್ರಶಸ್ತಿ ಸ್ವೀಕಾರದ ಮರುದಿನ ಆಕಾಶವಾಣಿಯವರು ತಾಳ ಮದ್ದಳೆಯ ಕಾರ್ಯ ಕ್ರಮವನ್ನು ಧ್ವನಿ ಮುದ್ರಿಸಿಕೊಳ್ಳಲು ಅವರನ್ನು ಬರಹೇಳಿದರು. ಬೆಳಗ್ಗೆ ಹತ್ತು ಘಂಟೆಗೆ ಹೋದೆವು. ಅಲ್ಲಿ ಹಾಡುಗಾರಿಕೆಗೆ ಶ್ರುತಿಯಾಗಿ ಹಾರ್ಮೋನಿಯಂ ಉಪಯೋಗಿಸುವಂತಿಲ್ಲವಂತೆ. ತಂಬೂರಿ ಯನ್ನೇ ಉಪಯೋಗಿಸಬೇಕಂತೆ. ಈ ಸಂಗತಿ ಅಲ್ಲಿಗೆ ಹೋದಾಗ ತಿಳಿಯಿತು. ಯಾವಾಗಲೂ ಶ್ರುತಿಗೆ ಹಾರ್ಮೋನಿಯನ್ನೇ ಉಪಯೋಗಿಸುತ್ತಿದ್ದ ಬಲಿಪರು "ಅದಿಲ್ಲದೆ ಆಗಲಿಕ್ಕಿಲ್ಲ" ಎಂದು ಎಲ್ಲಿ ಹೊರಟು ಬಿಡುತ್ತಾರೋ ಎಂದು ಹೆದರಿಕೆಯಾಯಿತು. ನಿಲಯಕ್ಕೆ ಸೇರಿದವರೊಬ್ಬರು "ಅವರು ಯಾವ ಶ್ರುತಿಯಲ್ಲಿ ಹಾಡುತ್ತಾರೆ" ಎಂದು ಕೇಳಿದಕ್ಕೆ "ಹಾರ್ಮೋನಿಯಂಸಲ್ಲಾದರೆ ಬಿಳಿ ನಾಲ್ಕಕ್ಕೆ" ಎಂದೆ. ಅವರು ಅಷ್ಟಕ್ಕೇ ಶ್ರುತಿ ಮಾಡಿದ ಒಂದು ತಂಬೂರಿಯನ್ನು ತಂದಿತ್ತರು. ಬಲಿಪರು ಸ್ವಲ್ಪವೂ ಪ್ರಯಾಸ ಪಡದೆ ಆ ತಂಬೂರಿ ಶ್ರುತಿಗೇ ಹಾಡಿದರು. ಈ ಅಂಶದ ಸತ್ಯ ಆ ಕಾರ್ಯಕ್ರಮವನ್ನು ಆಕಾಶವಾಣಿಯವರು ಪ್ರಸಾರ ಮಾಡಿದಾಗ ಕೇಳಿದವರು ಮನಗಂಡಿರಬಹುದು. ಇನ್ನು ಪ್ರಸಾರ ಗೊಂಡಾಗ ಕೇಳುವವರು ಮನಗಾಣಬಹುದು.

ಅಲ್ಲಿ ಇನ್ನೊಂದು ಕುತೂಹಲ ಪ್ರಸಂಗ ನಡೆಯಿತು. ನಿಲಯದ ನಿರ್ದೇಶಕರು ತಾಳಮದ್ದ ಳೆಯ ಧ್ವನಿ ಮುದ್ರಿಕೆಯನ್ನು ಅಲ್ಲೇ ತಿರುಗಿ ಕೇಳುತ್ತಿರುವಾಗ; ಒಬ್ಬ ವ್ಯಕ್ತಿ ಅದನ್ನು ಕಿವಿಗೊಟ್ಟು ಆಲಿಸುತ್ತಿದ್ದರು. ಹೊರಗೆ ಬರುವಾಗ ತಾನು ಮಹಾರಾಷ್ಟ್ರದ ಹಲವಾರು ಜಾನಪದ ಸಂಗೀತದ

ಪ್ರಕಾರಗಳನ್ನು ಸಂಗ್ರಹಿಸಿದ್ದೇನೆಂತಲೂ, ಯಕ್ಷಗಾನದ ಹಾಡುಗಾರಿಕೆಯನ್ನು ಹಿಂದೆ ಕೇಳಿದ್ದರೂ ಈ ಹಾಡುಗಾರಿಕೆ ತುಂಬಾ ಸೊಗಸಾಗಿವೆಯೆಂತಲೂ, ಹೇಳಿ ಆಟದ ವಿವರವನ್ನೆಲ್ಲ ನಮ್ಮಲ್ಲಿ ಕೇಳಿದರು. ಅವರು ಮಾತಾಡಿದ್ದು ಆಂಗ್ಲ ಭಾಷೆಯಲ್ಲಿ ನಾವು ನಮಗೆ ತಿಳಿದಂತೆ ಉತ್ತರಿಸಿ ಆ ವಿಚಾರದಲ್ಲಿ ಸಂಪೂರ್ಣ ವಿವರಣೆಯನ್ನೀಯಲು ಬಲಿಪರೇ ಸಮರ್ಥರು ಎಂದೆವು. ಆದರೆ ಇಂಗ್ಲಿಷು ಬರಬೇಕಲ್ಲ. ಪರಿಸ್ಥಿತಿಯನ್ನರಿತ ಬಲಿಪರು ಅವರು ಮಹಾರಾಷ್ಟ್ರದ ಜಾನಪದ ಸಂಗೀತ ಸಂಗ್ರಹಿಸಿದವರಾದ ಕಾರಣ ಮರಾಠಿ ಭಾಷೆ ತಿಳಿದಿರಬೇಕೆಂದು ಊಹಿಸಿ ಮರಾಠಿಯಲ್ಲೇ ಮಾತಾಡ ತೊಡಗಿದರು. ಅವರಿಬ್ಬರ ಸಂಭಾಷಣೆಯ ಕೊನೆಯಲ್ಲಿ ಬಲಿಪರೊಂದಿಗೆ ಮಾತಾಡಿದ ಅವರು ಯಕ್ಷಗಾನ ಆಟ ನೋಡಲಾಗಲಿಲ್ಲವಲ್ಲಾ ಎಂದು ತಮ್ಮ ದುಃಖವನ್ನು ನಮ್ಮಲ್ಲಿ ಹೇಳಿಕೊಂಡರು.

ತಾಳಮದ್ದಳೆಯ ಅರ್ಥಧಾರಿಯಾಗಲಿ ಬಯಲಾಟದ ವೇಷಧಾರಿಯಾಗಲಿ ಮಿತಿ ಮೀರಿ ಉದ್ದುದ್ದ ಮಾತಾಡುವುದನ್ನು ಅವರು ವಿರೋಧಿಸುತ್ತಿದ್ದರು. ಒಮ್ಮೆ ಯಾರೋ ಒಬ್ಬ ಪಾತ್ರಧಾರಿ ಮಿತಿಮೀರಿ ಮಾತಾಡಿದ ಕಾರಣ ಬೆಳಗಾಗುವಾಗ ಪ್ರಸಂಗ ಮುಗಿಯಲು ಅವಸರ ಅವಸರದಿಂದ ಓಡಿಸಬೇಕಾಯಿತು. ಇದರಿಂದ ಸಿಟ್ಟುಗೊಂಡ ಬಲಿಪರು "ನಿಮಗೆಲ್ಲ ಭಾಗವತನ ಕಷ್ಟ ಗೊತ್ತಿಲ್ಲ ವೇಷಧಾರಿಗಾದರೆ ಅವನ ಪಾತ್ರದ ಒಂದೇ ವಿಚಾರ; ಭಾಗವತನಿಗಾದರೆ ರಾತ್ರಿ ಹನ್ನೊಂದು ಘಂಟೆಯಿಂದ ಬೆಳಗಾಗುವುದೊರಳಗೆ ಹತ್ತಿಪ್ಪತ್ತು ವೇಷವನ್ನು ರಂಗಸ್ಥಳಕ್ಕೆ ತಂದು ಕಥೆ ಮುಗಿಸುವ ಹೊಣೆಗಾರಿಕೆ ಇದೆ" ಎಂದರು. ಈ ಕುರಿತಾಗಿ ಮಾತಾಡುತ್ತಾ ನನ್ನಲ್ಲಿ "ಒಂದು ಪದ್ಯವನ್ನು ಹಾಡಲು ಭಾಗವತ ಎಷ್ಟು ಹೊತ್ತನ್ನು ತೆಗೆದುಕೊಳ್ಳುತ್ತಾನೋ ಅರ್ಥಧಾರಿಯು ಆ ಪದ್ಯದ ಅರ್ಥವನ್ನು ಸಾಧಾರಣ ಅಷ್ಟೇ ಹೊತ್ತಿನಲ್ಲಿ ಹೇಳಿ ಮುಗಿಸಬೇಕು. ನೀನು ಕಂಬಳ ನೋಡಿದ್ದೀಯಲ್ಲ, ಈ ತುದಿಯಿಂದ ಕೋಣಗಳನ್ನು ಮೆಲ್ಲಗೆ ಆ ತುದಿಗೆ ನಡೆಸಿಕೊಂಡು ಹೋಗಿ ಅಲ್ಲಿಂದ ತಿರುಗಿಸಿ ಓಡಿಸುತ್ತಾರೆ. ಈ ತುದಿಯಿಂದ ಎಷ್ಟು ದೂರ ನಡೆಸಿಕೊಂಡು ಹೋಗುತ್ತಾರೊ, ಆ ತುದಿಯಿಂದ ಅಷ್ಟೇ ದೂರ ಓಡಿಸುತ್ತಾರೆ. ಐವತ್ತು ಹೆಜ್ಜೆ ನಡೆಸಿ ನೂರು ಮಾರು ಓಡಿಸುವುದಿಲ್ಲ. ಹಾಗೆಯೇ ಹಾಡು ಮತ್ತು ಅರ್ಥ; ಭಾಗವತನ ಸ್ಥಾನ ನಮ್ಮ ಊಟದಲ್ಲಿ ಅನ್ನ ಇದ್ದ ಹಾಗೆ. ಅನ್ನವೇ ಕೆಟ್ಟರೆ ಎಷ್ಟು ಬಗೆ ಮೇಲೋಗರ ಇದ್ದರೂ ಏನು ಪ್ರಯೋಜನ? ಎಂದರು.

"ಈಗಿನ ಆಟಗಳಲ್ಲಿ ಅಥವಾ ತಾಳಮದ್ದಳೆಗಳಲ್ಲಿ ರಾತ್ರಿ ಬೆಳಗಾಗುವ ವರೆಗೆ ಕೇವಲ ಐವತ್ತು ಅರವತ್ತು ಪದ್ಯಗಳನ್ನು ಹೇಳಿದರೆ ಸಾಕಾಗುತ್ತದೆ. ಅರ್ಥ ಮಾತಾಡುವವರಿಗೆ ಆಯಾಸವಾದಾಗ ವಿಶ್ರಾಂತಿಗಾಗಿ ಭಾಗವತರು ಹಾಡಬೇಕಾದದ್ದು ಎಂದು ತೋರುತ್ತದೆ" ಎನ್ನುತ್ತಿದ್ದರು. ಅವರು ಆಡಿಸುತ್ತಿದ್ದ ಆಟಗಳಲ್ಲಿ ಒಂದು ರಾತ್ರಿಯಲ್ಲಿ ಸಾಧಾರಣ ಇನ್ನೂರೈವತ್ತಕ್ಕೂ ಮಿಕ್ಕಿ ಪದ್ಯಗಳನ್ನು ಹಾಡುತ್ತಿದ್ದರು.

ಅವರು ಹಾಡುತ್ತಿದ್ದ ಶೈಲಿ; ಬಳಸುತ್ತಿದ್ದ ತಾಳ ವಿನ್ಯಾಸಗಳು ಕೇಳುವಾಗ ಈ ದಾರಿ ಬಹು ಸುಲಭ ಎಂದು ಕಂಡರೂ ಅನುಕರಿಸಲು ಹೋದಾಗ ಮಾತ್ರ ಅದರ ಕ್ಲಿಷ್ಟತೆಯು ಅರಿವಾಗುತ್ತದೆ. ದಿನ ನಿತ್ಯ ಯಾವ ಹಾಡನ್ನು ಹೇಗೆ ಹೇಳಿದರೆ ಸೊಗಸು; ಯಾವ ತಾಳಕ್ಕೆ ಮದ್ದಳೆಯು ಯಾವ ನಡೆಯನ್ನು ನುಡಿಸಿದರೆ ಚೆನ್ನ, ಎಂದು ಯೋಚಿಸುತ್ತಿದ್ದರು.

ನಮ್ಮ ಮನೆಯಲ್ಲೊಮ್ಮೆ ಸಾಧಾರಣ ನಲುವತ್ತು ವರುಷಗಳ ಹಿಂದೆ ಬಲಿಪರಿಂದಲೇ ಚೆಂಡೆ ಮದ್ದಳೆ ಬಾರಿಸಲು ಕಲಿತವರು ಮಾತಿನೆಡೆಯಲ್ಲಿ "ಮುದದಿಂದ ಎಂಬ ಪದ್ಯಕ್ಕೆ ಹೀಗೆ ಬಾರಿಸಬೇಕೆಂದು ಹೇಳಿಕೊಟ್ಟಿದ್ದೀರಿ" ಎಂದರು. ಆ ಮಾತಿಗೆ ಬಲಿಪರು "ಅದು ಅಂದಲ್ಲವೇ? ಆ ಮೇಲೆ ಈಗ ಎಷ್ಟು ವರುಷವಾಯಿತು, ಇಲ್ಲಿ ತಾಳ ಬೆಳೆದಿದೆ ಅದು ಇಷ್ಟು ದೊಡ್ಡದಾಗಿದೆ ನೋಡು" ಎನ್ನುತ್ತಾ ಆ ಹಾಡನ್ನು ಹೇಳಿ ಅದಕ್ಕೆ ಬಾರಿಸಬಹುದಾದ ಮದ್ದಳೆಯ ನಾನಾ ನಡೆಗಳನ್ನು ಬಾಯಲ್ಲಿ ಹೇಳಿ ತೋರಿಸಿದರು.

ಇನ್ನೊಮ್ಮೆ ಯಾರೋ ಒಬ್ಬರು "ನೀವೆಲ್ಲ ಹಳೆಕಾಲದವರು ಈಗ ಕಾಲ ಬದಲಾಗಿದೆ" ಎಂದು ಅವರ ಕ್ರಮಕ್ಕೆ ಹಳೆಯ ಸಂಪ್ರದಾಯ ಎಂಬ ಧ್ವನಿ ಇಟ್ಟು ಮಾತಾಡಿದರು. ಆಕರ್ಣಪರಿಯಂತ ಸೆಳೆದು ಬಿಟ್ಟ ಬಾಣದಂತೆ ಬಂತು ಅವರ ಉತ್ತರ.– "ಹೌದಪ್ಪ ನಾವು ಹಳೆಯ ಕಾಲದವರೆ, ಆದರೆ ಗಟ್ಟಿ ಮುಕ್ಕಾಲಿನ ಹಾಗೆ, ಅದು ಚಲಾವಣೆಯಲ್ಲಿ ಎಷ್ಟು ಸವೆದರೂ ಈಗಿನ ಮುಕ್ಕಾಲಿನಷ್ಟು ಹಗುರ ವಾಗಲಿಕ್ಕಿಲ್ಲ.

ಮಗದೊಮ್ಮೆ ರಾತ್ರಿ ನಾವು ಏಳೆಂಟು ಜನ ಒಂದು ತಾಳಮದ್ದಳೆಗೆ ನಡೆದುಕೊಂಡು ಗದ್ದೆಯ ಹುಣಿಯಲ್ಲಿ ಹೋಗುತ್ತಿದ್ದವು. ಒಂದೇ ಪೆಟ್ರೋಮೆಕ್ಸ್ ಲೈಟು ಬೆಳಕಿಗೆ. ಅದನ್ನು ಹಿಡಿದವರು ಬಲಿಪ ರಿಂದ ಮೂರು ನಾಲ್ಕು ಜನರ ಮುಂದಿದ್ದರು. ದಾರಿ ಇಕ್ಕಟ್ಟು ಎಂದು ತಿಳಿದ ಲೈಟಿನ ಹಿಂದೆ ಇದ್ದವರು "ಭಾಗವತರು ಹಿಂದೆ ಬಿದ್ದಿದ್ದಾರೆ. ಲೈಟು ಅವರ ಹತ್ತಿರ ನಿಲ್ಲಲಿ" ಎಂದು ಲೈಟಿನವರಿಗೆ ಸೂಚಿಸಿದರು. ಅದನ್ನು ಕೇಳಿದ ಭಾಗವತರು ಈ ವರೆಗೆ ಹಿಂದೆ ಬೀಳಲಿಲ್ಲ ಇನ್ನು ಹಿಂದೆ ಬೀಳಲಿಕ್ಕೂ ಇಲ್ಲ" ಎಂದರು. ಆ ಮಾತು ನಡೆದೇ ಹೋಯಿತು.

ಅವರು ವಿಟ್ಲ ಪೇಟೆಯಲ್ಲಿ ವಾಸಿಸುತ್ತಿದ್ದಾಗ ನಡೆದ ಒಂದು ವಿನೋದ ಘಟನೆ ಇನ್ನೂ ಹಚ್ಚ ಹಸುರಾಗಿ ನನ್ನ ಮನಸ್ಸಿನಲ್ಲಿದೆ. ಯಾರೋ ಒಬ್ಬ ಸಂಗೀತ ಶಿಕ್ಷಕರು ತಮ್ಮ ಶಿಷ್ಯರಿಂದ ಮತ್ತು ಇತರ ಕಲಾವಿದರಿಂದ ಎರಡು ದಿನ; ಬಲಿಪರ ಹಾಡುಗಾರಿಕೆಯಿಂದ ಕೂಡಿದ ತಾಳಮದ್ದಳೆ ಕೊನೆಯ ದಿನ ಹೀಗೆ ಮೂರು ದಿನದ ಕಾರ್ಯಕ್ರಮ ಹಾಕಿಕೊಂಡರು. ಅರ್ಥಧಾರಿಗಳಲ್ಲೊಬ್ಬನಾಗಿ ನನಗೆ ಕರೆ ಬಂತು ಮೃದಂಗವಾದಕರಾಗಿ ಬಲಿಪರ ಶಿಷ್ಯರಲ್ಲೊಬ್ಬರೂ ನನ್ನ ಭಾವನವರೂ ಆದ ಪುತ್ತೂರಿನ ಕೃಷ್ಣರಾಯರು ಗೊತ್ತಾಗಿದ್ದರು. ತಾಳಮದ್ದಳೆಯ ದಿನ ರಾತ್ರಿ ಎಂಟು ಘಂಟೆಗೆ ನಾವಿಬ್ಬರೂ ಬಲಿಪರಲ್ಲಿಗೆ ಹೋದೆವು. ಅಲ್ಲಿ ಏನೋ ಮಾತಾಡುತ್ತಿರುವಾಗ ಒಬ್ಬ ಹುಡುಗ ಬಂದು "ಅಜ್ಜಾ ಇವತ್ತು ತಾಳಮದ್ದಳೆ ಇಲ್ಲವಂತೆ ಎಲ್ಲರಿಗೂ ನಿದ್ರೆ ಬಾಧಿಸುತ್ತದೆಯಂತೆ ಹಾಗೆ ತಿಳಿಸಲು ಹೇಳಿದರು" ಎಂದ. "ನಮಗೂ ಒಂದು ಬಾಧೆ ತಪ್ಪಿತು" ಎಂದು ಹೇಳಿ ಬಲಿಪರು ಮಧ್ಯರಾತ್ರಿಯ ವರೆಗೂ ನಮ್ಮನ್ನು ಕುಳ್ಳಿರಿಸಿಕೊಂಡು ತಾವು ಹೊಸ ತಾಗಿ ರಚಿಸಿದ್ದ ಪ್ರಸಂಗವನ್ನು ಓದಿ ಹೇಳಿದರು. ಅವರ ಬಳಿಯಲ್ಲಿದ್ದ ನಮಗೆ ತಾಳಮದ್ದಳೆ ತಪ್ಪಿ ದ್ದಕ್ಕಾಗಿಯಾಗಲಿ ಪ್ರಯಾಣಮಾಡಲು ಹಣ ಖರ್ಚಾದ್ದಕ್ಕಾಗಿಯಾಗಲಿ ವ್ಯಥೆಯಾಗಲಿಲ್ಲ,

ಮೊದ ಮೊದಲು ಶಿಷ್ಯನಂತೆಯೂ ಕೊನೆ ಕೊನೆಗೆ ಸ್ನೇಹಿತನಂತೆಯೂ ನನ್ನನ್ನವರು ನಡೆಸಿ ಕೊಂಡರು. ನಾನು ಅವರನ್ನು ಕಂಡಾಗಲೆಲ್ಲ ನಾನಾಗಿ ಅವರ ಕ್ಷೇಮ ಸಮಾಚಾರವನ್ನು ಕೇಳುವ ಮೊದಲೆ ಅವರಾಗಿ "ಏನು? ಎಲ್ಲಿಂದ ಬಂದದ್ದು? ತಂದೆಯವರು ಏನು ಮಾಡುತ್ತಾರೆ?" ಎಂದು ವಿಚಾರಿಸುತ್ತಿದ್ದರು. ಸ್ವತಹ ನುರಿತ ಕೃಷಿಕರಾಗಿದ್ದ ಅವರು ನಾನು ನಮ್ಮ ಭೂಮಿಯಲ್ಲಿ ಯಾವ ಯಾವ ಹೊಸ ಕೃಷಿಯನ್ನು ಮಾಡಿದ್ದೇನೆಂದು ಕೇಳಿ, ನಮ್ಮ ಭೂಮಿಯನ್ನೆಲ್ಲಾ ತಿರುಗಾಡಿ ನೋಡಿ ಅನುಭವವಿದ್ದುದರಿಂದ, ಇಂಥಲ್ಲಿ ಹೀಗೆ ಮಾಡು ಎಂದು ಸೂಚನೆ ಕೊಡುತ್ತಿದ್ದರು. ನನ್ನ ಮೇಲೆ ಪ್ರೀತಿಯಿಟ್ಟು ಪ್ರಶಸ್ತಿ ಸ್ವೀಕಾರಕ್ಕಾಗಿ ಬೆಂಗಳೂರಿಗೆ ಹೋದಾಗ ನನ್ನನ್ನೂ ಕರೆದುಕೊಂಡು ಹೋದರು. ಅವರಿಂದಾಗಿ ಆಕಾಶವಾಣಿಯ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸುವಂತಾಯಿತು. ಇದನ್ನೆಲ್ಲ ನೆನೆದು ನಾನೇ ಮುಂದಾಳಾಗಿ ನಿಂತು ಊರವರ ಸಹಕಾರದಿಂದ ಸುಳ್ಯದಲ್ಲಿ ಒಂದು ಸಮಾರಂಭವನ್ನು ಪ್ರಾಧ್ಯಾಪಕರಾದ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಏರ್ಪಡಿಸಿ ಬಲಿಪರಿಗೆ ಹಿರಿ ಯರಿಂದ ಮಾನಪತ್ರ;ಬೆಳ್ಳಿತಟ್ಟೆ;ಶಾಲು ಧೋತ್ರಗಳನ್ನು ಕೊಡಿಸಿ ನನ್ನ ಮಳಲ ಭಕ್ತಿಯನ್ನು ಸಮರ್ಪಿಸಿದೆ.

ಆದರೆ ಅವರಲ್ಲಿ ಮಾತ್ರ ಕಂಡು ಬರುತ್ತಿದ್ದ ಹಾಡುಗಾರಿಕೆಯ ಕೆಲವು ವೈಶಿಷ್ಟ್ಯಗಳನ್ನು ಧ್ವನಿ ಮುದ್ರಿಸಿಕೊಳ್ಳಬೇಕೆಂಬ ನನ್ನ ಯೋಚನೆ ಮಾತ್ರ ಫಲಿಸಲಿಲ್ಲ. ಸ್ವಂತ ಸಲಕರಣೆಗಳಿಲ್ಲದೆ ಆ ಕೆಲಸ ಕಷ್ಟ ಎಂದು ಕಂಡಿತು. ಅವನ್ನು ಸಂಗ್ರಹಿಸುವ ಮೊದಲೇ ಅವರು ನಾದಬ್ರಹ್ಮನಲ್ಲಿ ಐಕ್ಯವಾದರು.

ಮರಣದ ಕೆಲವು ದಿನಕ್ಕೆ ಮೊದಲು ಪುತ್ತೂರಿನಲ್ಲಿರುವ ನನ್ನ ಭಾವನವರಾದ ಕೃಷ್ಣರಾಯರಲ್ಲಿ ಬಂದು ನನ್ನನ್ನೂ ನನ್ನ ತಂದೆಯವರನ್ನೂ ಒಮ್ಮೆ ನೋಡಬೇಕೆಂದೂ ಅದಕ್ಕಾಗಿ ಹೋಗೋಣ ಎಂದೂ ಹೇಳಿದರಂತೆ. ಅದಕ್ಕೆ ನನ್ನ ಭಾವನವರು "ಸ್ವಲ್ಪ ದಿವಸ ಕಳೆಯಲಿ, ಅವರ ಮನೆಗೆ ಈಗ ಹೋಗಲು ಮನೆಯ ಹತ್ತಿರವಿರುವ ಹೊಳೆಯಲ್ಲಿ ಕಾರು ದಾಟುವುದಿಲ್ಲ. ಒಂದು ತಿಂಗಳು ಕಳೆದರೆ ಕಾರು ಹೊಳೆಯನ್ನು ಸುಲಭವಾಗಿ ದಾಟುತ್ತದೆ." ಎಂದರಂತೆ. "ಆಯಿತು" ಎಂದು ಹೋದ ಬಲಿಪರು ತಿರುಗಿ ಬರಲೇ ಇಲ್ಲವಂತೆ. ಯಾವ ಕಾರಣಕ್ಕಾಗಿ ನನ್ನನ್ನೂ ನನ್ನ ತಂದೆಯವರನ್ನೂ ನೋಡಲು ಅವರು ಅಪೇಕ್ಷಿಸಿದರು ಎಂದು ನಮ್ಮಿಬ್ಬರಿಗೂ ಈವರೆಗೆ ಹೊಳೆದಿಲ್ಲ.

ಅವರ ಬಾನುಲಿ ಭೇಟಿ ಕಾರ್ಯಕ್ರಮದಲ್ಲಿ "ಯಕ್ಷಗಾನದ ಕುರಿತಾಗಿ ನನಗೆ ಇನ್ನೂ ಕೆಲವು ಅನುಮಾನಗಳಿವೆ ಆದರೆ ಅವುಗಳನ್ನು ಯಾರಲ್ಲಿ ಹೇಳಲಿ? ನನ್ನ ಗುರುಗಳಂತೂ ಮೊದಲೇ ಹೋಗಿದ್ದಾರೆ." ಎಂದಿದ್ದಾರೆ. ನನಗೂ ಯಕ್ಷಗಾನದ ಕುರಿತಾಗಿ ಇನ್ನೂ ಇರುವ ಕೆಲವು ಸಮಸ್ಯೆಗಳಿಗೆ ಹಾಗೆಯೇ ಆಯಿತು. ಅವರಿರುವಾಗ ಯಕ್ಷಗಾನದ ವಿಚಾರದಲ್ಲಿ ಯಾರಾದರೂ ಕದನಕ್ಕೆ ಇದಿರಾದಾಗ ನನ್ನ ಬತ್ತಳಿಕೆಯ ಬಾಣಗಳು ಬರಿದಾಯ್ತು ಎಂದು ಕಂಡು ಬಂದರೆ "ಹೋಗುವ ಬಲಿಪರಲ್ಲಿ ಕೇಳುವ" ಎಂದು ಬ್ರಹ್ಮಾಸ್ತ್ರವನ್ನು ಹೂಡಲಾಗುತ್ತಿತ್ತು. ಈಗ–? ಆ ಕಂಠಶ್ರೀ; ಸರಸ ಕವಿತಾಶಕ್ತಿ; ಅರ್ಥಜ್ಞಾನ; ತಾಳಲಯ; ಅಪೂರ್ವ ಸ್ಮರಣ ಶಕ್ತಿ: ಮನಮುಟ್ಟಿ ಬೋಧಿಸುವ ಸಾಮರ್ಥ್ಯ, ಎಲ್ಲಕ್ಕೂ ಕಳಸ ಪ್ರಾಯವಾಗಿ ಜೊತೆಗಿದ್ದ ಎಂಟೆದೆ; ಇವನ್ನೆಲ್ಲಾ ಒಂದೆಡೆಯಲ್ಲಿ ಇನ್ನೆಲ್ಲಿ ನೋಡಲಿ?

ಆಕಾಶವಾಣಿಯ ಕಾರ್ಯಕ್ರಮ ಮುಗಿಸಿಕೊಂಡು ಈಚೆಗೆ ಬರುವಾಗ ಅವರ ಬಾನುಲಿ ಭೇಟಿ ಕಾರ್ಯಕ್ರಮವನ್ನು ಧ್ವನಿಮುದ್ರಿಸಿಕೊಳ್ಳುವಾಗ ಪ್ರಶ್ನೆ ಹಾಕಿದ ಡಾ। ರಂಗನಾಥರು "ನೀವು ವರದಾಚಾರ್ಯರ ಪಾತ್ರಗಳನ್ನು ನೋಡಿದ್ದೀರಂತಲ್ಲ ಅವರ ನಟನೆಯ ಕುರಿತಾಗಿ ನಿಮ್ಮ ಅಭಿಪ್ರಾಯವೇನು? ಎಂದು ಕೇಳಿದರು. ಆಗ ಬಲಿಪರು "ಒಂದೇ ಮಾತಿನಲ್ಲಿ ಹೇಳುವುದಾದರೆ ವರದಾಚಾರ್ಯರು ರಂಗಕ್ಕೆ ಬಂದಾಗ ಉಳಿದವರೆಲ್ಲ ಅವರಿಗಿಂತ ಎಷ್ಟೋ ಚಿಕ್ಕವರೆಂದು ಕಾಣುತ್ತಿತ್ತು." ಎಂದರು ದಿವಂಗತ ಬಲಿಪ ನಾರಾಯಣ ಭಾಗವತರು ಯಕ್ಷಗಾನ ರಂಗದಲ್ಲಿರುವಾಗ ನನಗೂ ಹಾಗೇ ಕಾಣುತ್ತಿತ್ತು.

ಶ್ರೀ ಬಲಿಪ ನಾರಾಯಣ ಭಾಗವತರು

ಶ್ರೀ ಪೆರಡಾಲ ಕೃಷ್ಣಯ್ಯ ವಿದ್ವಾನ್.
ನಿವೃತ್ತ ಕನ್ನಡ ಪ್ರಾಧ್ಯಾಪಕ, ಮಹಾಜನ ಸಂಸ್ಕೃತ ಕಲಾಶಾಲೆ, ಪೆರಡಾಲ.

ಕಾಸರಗೋಡು ತಾಲೂಕಿನ ಕುಂಬಳೆ ಸೀಮೆ ತೆಂಕು ತಿಟ್ಟನ ಯಕ್ಷಗಾನ ಬಯಲಾಟಗಳ ತವರೂರು. ಕೀರ್ತಿಶೇಷ ಕವಿ, ಭಾಗವತ, ದಿ। ಶ್ರೀ ಪಾರ್ತಿ ಸುಬ್ಬನವರು ಸುಮಾರು ಇನ್ನೂರು ವರ್ಷಗಳ ಮೊದಲು ಜೀವಿಸಿದ್ದು ಏಳು ಸಂಧಿ ರಾಮಾಯಣವನ್ನೂ ಶ್ರೀಕೃಷ್ಣನ ಬಾಲಲೀಲೆ ಬಿಲ್ಲ ಹಬ್ಬಗಳನ್ನೂ ಲಲಿತವಾದ ಪದಗಳಿಂದ ಯಕ್ಷಗಾನ ಪ್ರಸಂಗಗಳಾಗಿ ಬರೆದು ದಶಾವತಾರ ಆಟಗಳಲ್ಲಿ ಅಭಿನಯಗೊಳಿಸಿ ಪಂಡಿತರ ಪಾಮರರ ಮನೋರಂಜನೆಯನ್ನು ಧರ್ಮಾಸಕ್ತಿಯನ್ನೂ ಪೋಷಿಸಿದರು. ಅವರ ಪರಿಶ್ರಮದ ಫಲವಾಗಿ ಕುಂಬಳೆ ಹಾಗೂ ಕೂಡಲ ದಶಾವತಾರ ಮೇಳಗಳು ಹುಟ್ಟಿಕೊಂಡು ಯಕ್ಷಗಾನವು ಜನಜನಿತವಾಯಿತು.

ಕಳೆದ ಶತಮಾನದ ಕೊನೆಯ ಮತ್ತು ಈ ಶತಮಾನದ ಆದಿ ಭಾಗಗಳಲ್ಲಿ ಬಾಳಿದ ದಿವಂಗತ ಶ್ರೀ ಕೂಡಲ ಸುಬ್ರಾಯ ಶ್ಯಾನುಭಾಗರು ಈ ಸೀಮೆಯಲ್ಲಿ ಸಕಲ ಕಲಾ ಕೋವಿದರಾಗಿದ್ದವರು. "ಕೊರಳಿಲ್ಲದವನಿಗೆ ಬೆರಳು" ಎಂದು ಹೇಳುವ ಸಂಗೀತಾಭ್ಯಾಸಿಗಳ ಮಾತಿಗೆ ಅಪವಾದವಾಗಿ ಹಾಡುಗಾರಿಕೆ, ವಾದ್ಯವಾದನ ಹೊರತು ಚಿತ್ರಕಲೆ, ರತ್ನ ಪರೀಕ್ಷೆ ಮೊದಲಾದ ಕುಶಲ ಕಲೆಗಳೆಲ್ಲ ಇವರಿಗೆ ಕರತಲಾಮಲಕವಾಗಿದ್ದುವು. ಅವರು ಶ್ರೀಮಂತ ಕವಳಿಗೆ ಶ್ಯಾನುಭಾಗರ ಮನೆತನದವರೂ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಆಡಳಿತೆದಾರರೂ ಆಗಿ ಒಂದು ಅನ್ನ ಸತ್ರವನ್ನೂ ದಶಾವತಾರ ಮೇಳವನ್ನೂ ನಡೆಸಿ ಬರುತ್ತಿದ್ದರು. ತಾನು ಬಾಲ್ಯದಲ್ಲಿ ದಕ್ಷಿಣಾದಿ ಸಂಗೀತವನ್ನು ಚೆನ್ನಾಗಿ ಅಭ್ಯಸಿಸಿ ಫಿಡ್ಲ್, ವೀಣೆ, ಜಲತರಂಗ, ಕೊಳಲು, ನಾಗಸ್ವರ, ಮೃದಂಗ, ತಬಲೆ, ಹಾರ್ಮೋನಿಯಮ್ ಮೊದಲಾದ ವಾದ್ಯಗಳಲ್ಲೂ ಪ್ರವೀಣರಾಗಿದ್ದುದಲ್ಲದೆ ಯಕ್ಷಗಾನ ಹಾಡುಗಾರಿಕೆಗೂ ಮನಸ್ಸುಕೊಟ್ಟು ತಮ್ಮ ಮೇಳಕ್ಕೆ ತಿರುಗಾಟ ಭಾಗವತರು ಬೇರೆ ಇದ್ದರೂ ಕೂಡಲಲ್ಲಿ ಆಗುವ ಆಟಗಳಲ್ಲಿ ಉತ್ಸಾಹಗೊಂಡು ತಾವೇ ಭಾಗವತರಾಗಿ ನಿತ್ತು ಕವಿ ಪಾರ್ತಿ ಸುಬ್ಬನವರ ರಾಮಾಯಣದ ಪ್ರಸಂಗಗಳನ್ನು ಆಮೂಲಾಗ್ರವಾಗಿ ಹಾಡಿ ಜನತೆಯನ್ನು ಸಂತೋಷಪಡಿಸುತ್ತಿದ್ದರು.

ಈ ಮಹಾಪುರುಷನ ಶಿಷ್ಯ ಪರಂಪರೆಯಲ್ಲಿ ದಿ। ಶ್ರೀ ಬಲಿಪ ನಾರಾಯಣ ಭಾಗವತರು ಅಗ್ರಗಣ್ಯರು. ಬಾಲ್ಯದಲ್ಲೇ ಸದ್ಗುರುವಿನ ಆಶ್ರಯವನ್ನು ಪಡೆದು ಕೂಡಲಲ್ಲೇ ವಾಸವಾಗಿದ್ದು ಸಂಗೀತಾಭ್ಯಾಸವನ್ನು ಚೆನ್ನಾಗಿ ಮಾಡಿ ಗುರುವಿನ ಅಪೇಕ್ಷೆಯಂತೆ ದಶಾವತಾರ ಮೇಳವನ್ನು ಪ್ರವೇಶಿಸಿದರು. ಆಟದ ಪೂರ್ವರಂಗದಲ್ಲಿ ಬರುವ ಸಭಾಲಕ್ಷಣವನ್ನು ನಿರೂಪಿಸಿ ನಿತ್ಯವೇಷಗಳನ್ನು ಕುಣಿಸುವ ಸಂಗೀತಗಾರನಾಗಿ ಮೊದಲು ಕೆಲಸ ಮಾಡಿ ಒಂದೆರಡು ವರ್ಷ ಕಳೆದ ಮೇಲೆ ಮುಖ್ಯ ಭಾಗವತರ ಪದವಿಗೇರಿದರು. ದಶಾವತಾರ ಮೇಳದ ಭಾಗವತರಿಗೆ ಆ ಕಾಲದಲ್ಲಿ ಜನರು ಮುಂಗೇಚ,

ಎಂಕೇಚ, ಕುಂಡೋಚ, ಎಂದೆಲ್ಲ ಅಡ್ಡ ಹೆಸರಿಡುವ ಹಾಗೆ ದಿ। ಶ್ರೀ ಬಲಿಪ ಭಾಗವತರನ್ನೂ "ಕೂಕಿಲ ಭಾಗವತ" ಎಂದು ಆಡಿಕೊಳ್ಳುತ್ತಿದ್ದರು. ಇದಕ್ಕೆ ಶ್ರೀಯುತರ ಕೋಕಿಲ ಕಂಠವೇ ಕಾರಣವೆಂದು ನನಗೆ ಕಾಣುತ್ತದೆ. ಆ ಕಾಲದ ಬಯಲಾಟದಲ್ಲಿ ಭಾಗವತರು ನಿಲುವಂಗಿಯನ್ನು ತೊಟ್ಟು ಉತ್ತರೀಯ ಹಾಕಿ ಗರ್ಭಸುತ್ತಿನ ರುಮಾಲು ಕಟ್ಟಿ ರಂಗಸ್ಥಳದಲ್ಲಿ ನಿಲ್ಲುವ ಪದ್ಧತಿ ಇತ್ತು. ಶ್ರೀ ಬಲಿಪ ಭಾಗವತರು ಈ ಕ್ರಮವನ್ನು ತೊರೆದು ತನ್ನ ನಿತ್ಯದ ಸಾದಾ ಉಡುಪಿನಲ್ಲೇ, ಬಂದು ನಿಲ್ಲುವ ಪರಿಪಾಟಿಯನ್ನು ಬಳಕೆಗೆ ತಂದರು. ಈಗ ಎಲ್ಲಾ ಭಾಗವತರೂ ಇದನ್ನೇ ಅನುಸರಿಸುತ್ತಾರೆ. ಶ್ರೀ ಕೂಡಲ ಸುಬ್ರಾಯ ಶ್ಯಾನಭಾಗರು ದಿವಂಗತರಾದ ಮೇಲೆ ಶ್ರೀ ಬಲಿಪ ಭಾಗವತರು ಬೇರೆ ಬೇರೆ ಮೇಳಗಳನ್ನು ಸೇರಿ ಹಾಡುಗಾರಿಕೆ, ರಂಗಸಜ್ಜಿಕೆ. ಪಾತ್ರಗಳ ವೇಷಭೂಷಣ, ಕುಣಿತ, ಅರ್ಥ ವಿವರಣೆ ಮೊದಲಾದ ಅಂಗಗಳಲ್ಲಿ ನವಸಂಸ್ಕಾರವನ್ನು ಪ್ರಚಾರಕ್ಕೆ ತಂದರು. ಅದಲ್ಲದೆ ಆ ಕಾಲದಲ್ಲಿ ಕೀರ್ತನೆಯಲ್ಲಿ ವಿಖ್ಯಾತರಾದ ಕೀರ್ತಿಶೇಷ ಮೂಲ್ಕಿ ಶ್ರೀ ಲಕ್ಷ್ಮೀನಾರಾಯಣ ಹರಿದಾಸರ ಒಡನಾಟದಲ್ಲಿ ಕೆಲವು ಸಮಯವಿರುತ್ತಿದ್ದು ಶ್ರೀ ಬಲಿಪ ಭಾಗವತರು ಕೆಲವು ರಾಗದ ಮಟ್ಟುಗಳನ್ನೂ ಹರಿಕಥಾ ನಿರೂಪಣೆಯ ಕ್ರಮವನ್ನೂ ಅಭ್ಯಸಿಸಿದ ಹಾಗೆ ತಿಳಿದುಬರುತ್ತದೆ. ಶ್ರೀ ಭಾಗವತರು ಯಕ್ಷಗಾನ ಕೂಟಗಳ ಪ್ರಾರಂಭದಲ್ಲಿ ಹಾಡುವ ದೇವತಾ ಸ್ತೋತ್ರವು ದಿ। ಹರಿದಾಸರ ಕೃತಿಗಳಲ್ಲೊಂದಾಗಿರುವುದು ಇದಕ್ಕೆ ಸಾಕ್ಷಿಯಾಗಿರುತ್ತದೆ.

ಶ್ರೀ ಭಾಗವತರ ರಾಗ ತಾಳ ಜ್ಞಾನಗಳು ಅನುಪಮವಾಗಿದ್ದುವು. ಅವರು ಉಪಯೋಗಿಸುತ್ತಿದ್ದ ಜಾಗಟೆಯ ಸ್ವರಕ್ಕೆ ಸರಿಯಾಗಿ ಮದ್ದಳೆ ಚೆಂಡೆಗಳ ನಾದವು ಮಿಳಿತವಾಗಬೇಕಿತ್ತು. ಆ ಮೇಲೆ ರಾಗಾಲಾಪನೆ ಮಾಡಿ ಹಾಡತೊಡಗಿದರೆ ಶ್ರೋತೃಗಳ ಹೃದಯದಲ್ಲಿ ಆನಂದದ ಅಲೆಗಳೇಳುತ್ತಿದ್ದುವು. ಅವರ ಹಿಮ್ಮೇಳದಲ್ಲಿ ಮೃದಂಗವಾದನ ಮಾಡುತ್ತಿದ್ದವರಲ್ಲಿ ಮೂಡಬಿದ್ರೆಯಲ್ಲಿರುವ ಶ್ರೀ ಕೆಮ್ಮಣ್ಣು ನಾರಣಪ್ಪಯ್ಯನವರು ಮೊದಲಿಗರು. ಶ್ರೀ ಭಾಗವತರು ಒಂದು ಯಕ್ಷಗಾನ ಪ್ರಸಂಗವನ್ನು ಮನಸ್ಸಿಟ್ಟು ಒಮ್ಮೆ ಓದಿದರೆ ಅವರಿಗೆ ಅದು ಮುಖಪಾಠವಾದಂತೆಯೇ ಸರಿ ಎಂದೂ ನನ್ನ ಭಾವನೆ. ಆಟಗಳನ್ನು ಮಾಡಿಸುವವರು ಯಾವ ಕಥೆಯಾಗಬೇಕೆಂದರೂ ಆಡಿಸುವ ಸಾಮರ್ಥ್ಯವಂತರಾದುದರಿಂದ ಅವರ ಧಾರಣಾಶಕ್ತಿಗೆ ತಲೆದೂಗಲೇ ಬೇಕು. ಆದರೂ ಅವರ ಒಲವು ಮುಖ್ಯವಾಗಿ ದಿ। ಪಾರ್ತಿಸುಬ್ಬನವರ ಯಕ್ಷಗಾನ ಕೃತಿಗಳ ಮೇಲಿತ್ತು.

ನಾನು ನೀರ್ಚಾಲಿನಲ್ಲಿರುವ ಪೆರಡಾಲ ಮಹಾಜನ ಸಂಸ್ಕೃತ ಕಲಾ ಶಾಲೆಯ ಪ್ರಾರಂಭದಲ್ಲಿ ಅಂದರೆ ಕ್ರಿ.ಶ. ೧೯೧೧ರಲ್ಲಿ ಉಪಾಧ್ಯಾಯನಾಗಿ ಸೇರಿ ಕನ್ನಡ ಪ್ರಾಧ್ಯಾಪಕನಾಗಿ ನಲವತ್ತೆಂಟು ವರ್ಷ ಸೇವೆ ಸಲ್ಲಿಸಿ ಕ್ರಿ. ಶ. ೧೯೫೯ರಲ್ಲಿ ನಿವೃತ್ತನಾದವನು. ಈ ಅವಧಿಯ ನಡುವೆ ಕ್ರಿ. ಶ. ೧೯೧೯ರಿಂದ ೧೯೨೨ರ ತನಕ ಶ್ರೀ ಬಲಿಪ ನಾರಾಯಣ ಭಾಗವತರ ಬಾವನೆಂಟನಾದ ದಿ। ಶ್ರೀ ಮೈಕಾನ ಶ್ರೀಪತಿ ಶಾಸ್ತ್ರಿಗಳವರೂ ಈ ಸಂಸ್ಥೆಯಲ್ಲಿ ಉಪಾಧ್ಯಾಯರಾಗಿದ್ದರು. ಆ ಸಮಯದಲ್ಲಿ ಶ್ರೀ ಭಾಗವತರು ಇಲ್ಲಿಗೆ ಆಗಾಗ ಬರುತ್ತಿದ್ದು ಇಲ್ಲಿ ಒಂದು ಯಕ್ಷಗಾನ ಕೂಟವು ಜರಗಿದ ಸಂದರ್ಭದಲ್ಲಿ ನನಗೆ ಶ್ರೀ ಭಾಗವತರ ಪ್ರಥಮ ಪರಿಚಯವಾಯಿತು. ಶ್ರೀ ಭಾಗವತರು ಹಾಡುವುದರಲ್ಲಿ ನಿಪುಣರಿದ್ದ ಹಾಗೆ ಶ್ರೀ ಶಾಸ್ತ್ರಿಗಳವರು ಅರ್ಥ ವಿವರಣೆಯಲ್ಲಿ ಪ್ರವೀಣರು. ಧೀರೋದ್ಧತನಾಯಕರನ್ನುಳಿದು ಅವರ ಶ್ರೀರಾಮ ಅಕ್ರೂರ ಮೊದಲಾದ ಧೀರೋದಾತ್ತಾದಿ ನಾಯಕರ ಪಾತ್ರಗಳ ಅರ್ಥ ವಿವರಣೆಯು ಉತ್ಕೃಷ್ಟವಾದುದು. ಪ್ರತಿಪಕ್ಷದ ಪಾತ್ರಧಾರಿಗಳಿಗಾಗಲೀ ಶ್ರೋತೃಗಳಿಗಾಗಲೀ ಬೇಸರವಾಗದ ಹಾಗೆ ಭಾವ ಗರ್ಭಿತವಾಗಿ ಪಾತ್ರ ಪ್ರಯೋಜನವನ್ನರಿತು ಮಾತಾಡಲು ಸಮರ್ಥರಾಗಿದ್ದರು.

ಆಮೇಲೆ ಶ್ರೀ ಭಾಗವತರು ದಶಾವತಾರದ ಮೇಳಗಳ ತಿರುಗಾಟದ ನಡುವೆ ನೀರ್ಚಾಲಿಗೆ ಆಗಾಗ ಬರುತ್ತಿದ್ದುದರಿಂದ ನಮ್ಮ ಪರಿಚಯವು ಗಾಢ ಮೈತ್ರಿಯಾಗಿ ಪರಿಣಮಿಸಿತು. ಶ್ರೀ ಭಾಗವ

ತರು ಕವಿತ್ವದಲ್ಲಿಯೂ ಪರಿಶ್ರಮ ವಹಿಸಿ ಬರೆದ "ಅಹಲ್ಯಾ ಶಾಪ" ಎಂಬ ಹೊಸ ಯಕ್ಷಗಾನ ಕೃತಿಯನ್ನೂ "ಪ್ರಹ್ಲಾದ ಚರಿತ್ರೆ" ಎಂಬ ಸುಧಾರಿಸಿದ ಪ್ರಸಂಗವನ್ನೂ ವಿಮರ್ಶೆಗಾಗಿ ನನಗೆ ತೋರಿಸಿದ್ದರು. ಅವುಗಳ ಶೋಧನೆಯಲ್ಲಿ ಕೆಲವು ಅಕ್ಷರ ಸ್ಖಾಲಿತ್ಯಗಳಲ್ಲದೆ ಬೇರೆ ದೋಷಗಳೇನೂ ನನಗೆ ಕಂಡುಬರಲಿಲ್ಲ. ಅವರು ಬೇರೆ ಕಥೆಗಳನ್ನೂ ಯಕ್ಷಗಾನವಾಗಿ ಬರೆದಿರಬಹುದು. ನಾನು ಬರೆದಿದ್ದ ಯಕ್ಷಗಾನ "ಯಾದವಾಭ್ಯುದಯ" ಮತ್ತು "ಗೆಲವಿನ ಕತ್ತಿ" ಎಂಬ ಪ್ರಸಂಗಗಳನ್ನು ವಿಮರ್ಶಿಸಲು ಶ್ರೀ ಭಾಗವತರಿಗೆ ಒಪ್ಪಿಸಿದ್ದೆ. ಅವರು ಪದ್ಯಗಳ ರಾಗಕ್ಕೆ ತಕ್ಕಂತೆ ತಾಳ ಹಾಕಿ ಆಮೂಲಾಗ್ರವಾಗಿ ಓದಿ ನೋಡಿ ಮೆಚ್ಚುಗೆಯನ್ನು ಪ್ರಕಟಿಸಿದುದಲ್ಲದೆ ಅವುಗಳ (ಪ್ರತಿಗಳನ್ನು ಪಡಕೊಂಡು) ರಂಗ ಪ್ರಯೋಗದಲ್ಲಿ ತರಲು ಯತ್ನಿಸುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು.

ಕಳೆದ ಶತಮಾನದಲ್ಲಿ ಬಾಳಿದ್ದ ದಿ। ನಾರಂಪಾಡಿ ನಾರಾಯಣ ಭಾಗವತರೇ ಮೊದಲಾದ ದಶಾವತಾರದ ಮೇಳಗಳಲ್ಲಿ ತಿರುಗಾಟ ನಡೆಸುತ್ತಿದ್ದ ವಿದ್ವಾಂಸರು. ಮಳೆಗಾಲದಲ್ಲಿ ರಾಮಾಯಣ, ಭಾರತ, ಭಾಗವತ ಮೊದಲಾದ ಗ್ರಂಥಗಳನ್ನು ಓಲೆಯಲ್ಲಿ ಮುದ್ದಾದ ಅಕ್ಷರಗಳಿಂದ ಪ್ರತಿ ಮಾಡುವ ಕೆಲಸವನ್ನು ಕೈಗೊಳ್ಳುತ್ತಿದ್ದರು. ಇಂಥ ಗ್ರಂಥಗಳು ಕೆಲವು ಪುರಾತನ ಮನೆಗಳಲ್ಲಿ ಈಗಲೂ ಕಾಣಬರುತ್ತವೆ. ಶ್ರೀ ಬಲಿಪ ಭಾಗವತರಿಗೆ ಮೇಳದ ಸಂಚಾರ ಮುಗಿದೊಡನೆ ಯಕ್ಷಗಾನ ಕೂಟಗಳಿಗೆ ಕರೆಬರುತ್ತಿತ್ತು. ಈಗಿನ ಸುಧಾರಿತ ಕ್ರಮದಿಂದ ಪಾತ್ರಗಳ ಅರ್ಥವಿವರಣೆ ಮಾಡುವ ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ದಿ। ಶ್ರೀ ಮೈಕಾನ ಶ್ರೀಪತಿ ಶಾಸ್ತ್ರಿ, ದಿ। ಶ್ರೀ ಕವಿಭೂಷಣ ವೆಂಕಪ್ಪ ಸೆಟ್ಟಿ, ದಿ। ಶ್ರೀ ಆರ್ಕುಳ ಸುಬ್ರಾಯಾಚಾರಿ ಮೊದಲಾದವರ ಸಾನ್ನಿಧ್ಯವುಳ್ಳ ಶ್ರೀ ಬಲಿಪ ಭಾಗವತರ ಹಾಡುಗಾರಿಕೆಯ ಯಕ್ಷಗಾನ ಕೂಟವು ಒಂದು ಸಂಸ್ಥೆಗೆ ಸಮಾನವಾಗಿತ್ತೆಂದರೆ ಅತಿಶಯೋಕ್ತಿಯಲ್ಲ.

ಇಂಥ ಮಹಾನುಭಾವರನ್ನು ಕಳೆದ ಕ್ರಿ. ಶ. ೧೯೬೩ರಲ್ಲಿ ಕರ್ಣಾಟಕ ಸಾಹಿತ್ಯ ಅಕಾಡಮಿಯು ಪುರಸ್ಕರಿಸಿ ನಿಧಿ ಸಮರ್ಪಿಸಿ ಗೌರವಿಸಿದುದು ಯೋಗ್ಯವಾಗಿದೆ. ಯಕ್ಷಗಾನ ಸಭಾ ಲಕ್ಷಣದಲ್ಲಿ ಬರುವ "ಭಕಾರೋ ಭಗವದ್ಭಕ್ತ; ಭಾವ ಸಂಪೂರ್ಣ; ಗಕಾರೋ ಗರ್ವ ವರ್ಜಿತ; ವಕಾರೋ ವಾಕ್ಯ ಪಾರೀಣ; ತಕಾರಸ್ತತ್ವ ನಿರ್ಣಯ; (ತಾಳ ನಿರ್ಣಯ) ಎಂಬ ಭಾಗವತರ ಲಕ್ಷಣವು ಶ್ರೀ ಬಲಿಪ ನಾರಾಯಣ ಭಾಗವತರಲ್ಲಿ ಪೂರ್ಣ ಸಮಾವೇಶಗೊಂಡಿದೆ ಎಂದು ನನಗನಿಸುತ್ತದೆ. ಹೀಗೆ ಪುರಸ್ಕೃತರಾದ ಶ್ರೀ ಭಾಗವತರನ್ನು ಮಾನಪತ್ರವಿತ್ತು ಗೌರವಿಸುವ ಸಮಾರಂಭಗಳು ಈ ತಾಲೂಕಿನ ಹಲವೆಡೆಗಳಲ್ಲಿ ಅಭಿಮಾನಿಗಳಿಂದ ಏರ್ಪಡಿಸಲ್ಪಟ್ಟುದು ಶ್ಲಾಘನೀಯವಾಗಿದೆ.

ಕಳೆದ ೧೩-೧೧-'೬೪ರಲ್ಲಿ ಅಗಲ್ಪಾಡಿ ಅನ್ನಪೂರ್ಣೇಶ್ವರೀ ಹೈಸ್ಕೂಲಿನಲ್ಲಿ ಪೂರ್ವಾಹ್ನ ಹೊಸ ಕಟ್ಟೋಣದ ಉದ್ಘಾಟನೆಯೂ ಸಾಯಾಹ್ನ ಶ್ರೀ ಬಲಿಪ ಭಾಗವತರ ಮಾನಪತ್ರ ಸಮರ್ಪಣೆಯು ಸಮಾರಂಭವೂ ಏರ್ಪಡಿಸಲಾಗಿತ್ತು. ಪೂರ್ವಾಹ್ನದ ಕಾರ್ಯಕ್ರಮವು ಎಡನೀರು ಮಠದ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿದ ಮೇಲೆ ಸಾಯಾಹ್ನದ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ನಿಯುಕ್ತರಾದ ಶ್ರೀ ಕಳ್ಳಿಗೆ ಮಹಾಬಲ ಭಂಡಾರಿ, ಎಂ. ಎ. ಎಲ್. ಎಲ್. ಬಿ., ಇವರಿಗೆ ಸಕಾಲಕ್ಕೆ ಬರಲು ಅನನುಕೂಲವಾದ ಕಾರಣ ಅಂದಿನ ಸಮಾರಂಭದ ಅಧ್ಯಕ್ಷತೆಯ ಭಾರವು "ಪಡೆ ನೋಡಲ್ ಬಂದವರಂ ಗುಡಿಪೊರಿಸಿದರ್" ಎಂಬ ಹಾಗೆ ನನಗೆ ಹೊರಿಸಲಾಯಿತು. ಆ ಸಂದರ್ಭದಲ್ಲಿ ನಾನು "ಕನ್ನಡ ಮಾಸ್ತರರ ಕೃತಿಗಳು" ಎಂಬ ನನ್ನ ಗ್ರಂಥವನ್ನು ಕಾಣಿಕೆಯಾಗಿ ಸಮರ್ಪಿಸಿ ಶ್ರೀ ಭಾಗವತರನ್ನು ಗೌರವಿಸಿ ಬರೆದ ಪದ್ಯವನ್ನೂ ಓದಿ ನನ್ನ ಸೌಹಾರ್ದವನ್ನು ಪ್ರಕಟಿಸಿದೆ. (ಆ ಪದ್ಯವು ಇದರ ಕೊನೆಯಲ್ಲಿ ಬರೆಯಲಾಗಿದೆ.) ಅದೇ ನಮ್ಮೊಳಗಾದ ಕೊನೆಯ ಭೇಟಿ. ಅಂದು ಶ್ರೀ ದೇರಜೆ ಸೀತಾರಾಮಯ್ಯ, ಪೆರ್ಲದ ಶ್ರೀ ಕೃಷ್ಣಭಟ್ ವಿದ್ವಾನ್, ಶ್ರೀ ಪುಂಡೂರು ಗೋಪಾಲ ಕೃಷ್ಣ ಪುಣಿಂಚತ್ತಾಯರೇ ಮೊದಲಾದವರು ಸನ್ನಿಹಿತರಾಗಿದ್ದು ನಡೆದ ಯಕ್ಷಗಾನ ಕೂಟದಲ್ಲಿ ನೆರೆದ ಶ್ರೋತೃ ಸಂದಣಿ

ಯು ಅಪೂರ್ವವಾಗಿತ್ತು. ಶ್ರೀ ಭಾಗವತರು ನನಗಿಂತ ಎರಡು ವರ್ಷ ಹಿರಿಯರೆಂದು ನನ್ನ ನೆನಪು. ಆದರೂ ನನಗಿಂತ ಆರೋಗ್ಯವಂತರಾಗಿ ಕಾಣುತ್ತಿದ್ದರಲ್ಲದೆ ಒಳ್ಳೆಯ ಅರ್ಥಧಾರಿಗಳೂ ದೊಡ್ಡ ಸಭೆಯೂ ಸೇರಿದರೆ ಶ್ರೀ ಭಾಗವತರಿಗೆ ಹದಿನಾರು ವರ್ಷದ ಯುವಕನ ಹುರುಪು ಬರುತ್ತಿತ್ತೆಂದು ನನಗೆ ಕಾಣುತ್ತಿತ್ತು. ಬೆಳಗಾಗುವ ತನಕ ಶ್ರೋತೃಗಳು ತದೇಕಚಿತ್ತರಾಗಿ ಗಮನಿಸಿ ಪರಮಾನಂದ ಭರಿತರಾದರು.

ಶ್ರೀ ಬಲಿಪ ಭಾಗವತರ ಕಂಠ ಮಾಧುರ್ಯದಲ್ಲಿ ವಾರ್ಧಕ್ಯವು ಕಂಡುಬರುತ್ತಿರಲಿಲ್ಲ. ಇಷ್ಟು ಬೇಗನೆ ಸ್ವರ್ಗಸ್ಥರಾಗಬಹುದೆಂದು ಯಾರೂ ಭಾವಿಸಿರಲಾರರು. ಅವರ ಯಕ್ಷಗಾನ ಕಲಾಸೇವೆಯು ಆಟದ ರಂಗಸ್ಥಳದಲ್ಲಿ ಅಸಾಧ್ಯವಾದರೂ ಯಕ್ಷಗಾನ ಕೂಟಗಳಲ್ಲಿ ಆಗಾಗ ನಡೆದು ಇನ್ನೂ ಕೆಲವು ಕಾಲ ಜನ ಮನೋರಂಜನೆಯನ್ನು ಮಾಡುತ್ತಿರಬೇಕಾಗಿತ್ತು. ಆದರೆ ದೈವಚಿತ್ತಕ್ಕೆ ಅದು ಬೇಡವಾದುದಕ್ಕೆ ತುಂಬ ವ್ಯಥೆಯಾಗುತ್ತದೆ. ಶ್ರೀ ಭಾಗವತರು ಹಲವು ಶಿಷ್ಯರಿಗೆ ತನ್ನ ಕಲೆಯನ್ನು ಉಪದೇಶಿಸಿರಬಹುದು. ಅವರಲ್ಲಿ ತನ್ನ ಖಾಸಾ ತಮ್ಮನ ಮಗ ಪಡ್ರೆ ಗ್ರಾಮದ ಕುಂಟಿಕಾನದಲ್ಲಿರುವ ಶ್ರೀ ಮಾಧವ ಭಟ್ಟರ ಮಗ ಶ್ರೀ ಬಲಿಪ ನಾರಾಯಣ ಭಟ್ಟರ ಮೇಲೆ ಭಾಗವತರಿಗೆ ತುಂಬ ಮಮತೆ. ಅವರನ್ನು ತನ್ನ ಉತ್ತರಾಧಿಕಾರಿ ಎಂದೆಣಿಸಿ ತನ್ನ ಜ್ಞಾನಭಂಡಾರವನ್ನು ಧಾರೆ ಎರೆದು ಕೊಟ್ಟಿದ್ದಾರೆ. ಜೊತೆಯಲ್ಲಿ ಕರಕೊಂಡು ಹೋಗಿ ತನ್ನ ಜಾಗಟೆಯನ್ನು ಕೊಟ್ಟು ಹರಸಿದುದರಿಂದ ಮೊಮ್ಮಗ ಶ್ರೀ ಬಲಿಪ ನಾರಾಯಣ ಭಟ್ಟರು ಇನ್ನು ಮೇಲೆ ಶ್ರೀ ಬಲಿಪ ಭಾಗವತರಾಗಲಿಕ್ಕಿದ್ದಾರೆ. ಜನರು ಕಂಠ ಮಾಧುರ್ಯಕ್ಕೆ ಒಲಿದು ಅವರನ್ನು "ಕುಂಞಿ ಬಲಿಪ" (Master Balipa) ಎಂದು ಕರೆಯ ತೊಡಗಿದ್ದಾರೆ. ಈ ಮೊಮ್ಮಗ ಶ್ರೀ ಬಲಿಪ ಭಾಗವತರು ದಶಾವತಾರ ಮೇಳದಲ್ಲಿ ಪದಾರ್ಪಣೆ ಮಾಡಿ ಅಜ್ಜನಂತೆ ಕಾರ್ಯ ನಿರ್ವಹಿಸತೊಡಗಿದುದು ಬಹಳ ಸಂತೋಷ. ಶ್ರೀ ಭಗವಂತನು ತರುಣ ಬಲಿಪ ಭಾಗವತರಿಗೆ ಆಯುರಾರೋಗ್ಯ ಭಾಗ್ಯಗಳನ್ನಿತ್ತು ಅಜ್ಜ ಬಲಿಪ ಭಾಗವತರ ಕಲಾಸೇವೆಯು ಮುಂದುವರಿಯುವಂತೆ ಅನುಗ್ರಹಿಸಲಿ. ದಿವಂಗತ ಶ್ರೀ ಬಲಿಪ ಭಾಗವತರ ಆತ್ಮಕ್ಕೆ ಚಿರಶಾಂತಿ ಲಭಿಸಲಿ. ಅವರ ಕೀರ್ತಿಯು ಕನ್ನಡ ನಾಡಿನಲ್ಲಿ ಶಾಶ್ವತವಾಗಿರಲಿ. ಅವರ ಶಿಷ್ಯ ಪರಂಪರೆಯು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲಿ ಎಂದು ನನ್ನ ಹಾರ್ದಿಕವಾದ ಆಕಾಂಕ್ಷೆ.

ಶ್ರೀ ಬಲಿಪ ನಾರಾಯಣ ಭಾಗವತ ಸ್ತವ

ರಾಗ ಕಲ್ಯಾಣಿ ತಾಳ ಝಂಪೆ

ಶಾರದಾ ದೇವಿ ದಯದೋರಿ ವರವಿತ್ತ ಶ್ರೀ ।
ನಾರಾಯಣಾಖ್ಯ ಬುಧವರ್ಯನೆ ನಮಸ್ತೇ ॥ ॥ ಪಲ್ಲ ॥
ರಾಗ ತಾಳೋಪೇತ ಭಾವದಿಂ ಹಾಡುತಿಹ,
ಭಾಗವತರೊಳು ನೀ ನಿರತ ಪರಿಶ್ರಮದಿ ॥
ಯೋಗಸಿದ್ಧಿಯ ಪಡೆದು ಗಮಕಕೆ ರಸಜ್ಞ ತಲೆ,
ದೂಗೆ ಮನರಂಜನೆಯ ನೊದಗಿಪ ಸಹೃದಯ ॥ ಶಾರದಾ ॥ ೧ ॥

ಬನ್ನೂರು ಮೊದಲು ನಾರಂಪಾಡಿ ಪುತ್ತೂರು
ಮಾನ್ಯತೆ ಪಡೆಯೆ ಬಳಿಕ ಬಲಿಪ ಮಾಂಬಾಡಿ,
ಗಣ್ಯರ್ಕೈವರು ಭಾಗವತರು ನಾರಾಯಣರೋ ।
ಉನ್ನತವೆ ಬಲಿಪ ಸಲೆ ಯಕ್ಷಗಾನ ದಲಿ ॥ ಶಾರದಾ ॥ ॥ ೨ ॥

ಪಾರ್ತಿಸುಬ್ಬನು ಬರೆದ ರಾಮಾಯಣ ಪ್ರಸಂಗ ।
ಚಿತ್ರಹಾರಿ ಸುಧಾರಣೆಯನು ಧಾಟಿಯಲಿ ॥
ಮತ್ತೆ ಕೂಡಲ ಶ್ಯಾನಭಾಗ ಶೋಧಿಸಲು ಕೃತ ।
ಕೃತ್ಯ ನೀನ್ನೈ ಜನತೆಗೆರೆದು ಕಿವಿಗಮೃತ ॥ ಶಾರದಾ ॥ ೩ ॥

ಕರ್ಣಾಟ ಸಾಹಿತ್ಯ ಕಲ್ಪವೃಕ್ಷಕೆ ಜಿನಪು ।
ರಾಣ ಕಾಂಡಂ ಷಟ್ಪದೀ ಕಾವ್ಯ ಶಾಖೆ ॥
ಷಣ್ಣ ಹಬ್ಬವ ಶ್ರವಣದೊಡನೀವ ಯಕ್ಷಗಾ ।
ನಂ ನೋಡೆ ತಳಿರು ಪೂವಣ್ಗಳಿಣೆಯಲ್ತೆ ! ॥ ಶಾರದಾ ॥ ೪ ॥

ಸರಸತಿಗೆ ಸಂಗೀತ ಸಾಹಿತ್ಯವೆಂದು ಸ್ತನ ।
ವೆರಡೆಂಬರಾರ್ಯರ್ನೀ ಸಂಗೀತ ಸೇವೆ ॥
ವಿರಚಿಸಿ ಕೃತಾರ್ಥನಹೆ ಸಾಹಿತ್ಯ ಸೇವಕನ,
ಕಿರುಗಾಣಿಕೆಯಿಂದೆಮ್ಮ ಕಾಯಲುದನೇಶ ॥ ಶಾರದಾ ॥ ೫ ॥

ಯಕ್ಷಗಾನ ಕಲಾತಪಸ್ವಿ
ಶ್ರೀ ಬಲಿಪ ನಾರಾಯಣ ಭಾಗವತರು

ಶ್ರೀ ಕ. ಪು. ಸೀತಾರಾಮ ಕೆದಿಲಾಯ, ಶಿಶಿಲ.

ಶ್ರೀ ಬಲಿಪ ನಾರಾಯಣ ಭಾಗವತರ ನಿಧನದಿಂದ ಯಕ್ಷಗಾನ ಕಲಾಕ್ಷೇತ್ರಕ್ಕೆ ತುಂಬಲಾರದ ಅಪಾರ ನಷ್ಟವಾಗಿದೆ. ಅವರಿಗೆ ದಷ್ಟಪುಷ್ಟವಾದ ದೃಢಕಾಯ, ಗಂಭೀರವಾದ ಮುಖ, ಸುಮಧುರವಾದ ಕಂಠಸ್ವರಗಳು ದೈವದತ್ತವಾಗಿಯೇ ಬಂದಿದ್ದುವು. ಅವರು ಸಮಗ್ರ ಕರ್ಣಾಟಕದಲ್ಲಿಯೇ ಅತಿ ಪ್ರಸಿದ್ಧರಾದ ಯಕ್ಷಗಾನ ಭಾಗವತರಾಗಿದ್ದರು. ಅವರಂತೆ ಯಕ್ಷಗಾನದ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲ ಯಕ್ಷಗಾನ ಭಾಗವತರೇ ಬೇರೆ ಇರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅವರ ಹಾಡುಗಾರಿಕೆಯನ್ನು ಕೇಳಿದ ಪಂಡಿತ ಪಾಮರರೆಲ್ಲರೂ ಮೆಚ್ಚಿ ತಲೆದೂಗುತ್ತಿದ್ದರು.

ಅವರು ಅದ್ವಿತೀಯ ಯಕ್ಷಗಾನ ಭಾಗವತರು ಮಾತ್ರವೇ ಅಲ್ಲ; ಯಕ್ಷಗಾನದ ಸಮಸ್ತ ಕಲಾ ವಿಷಯಗಳನ್ನೂ ತಿಳಿದ ಪರಿಣತ ಕಲಾವಿದರಾಗಿದ್ದರು. ಯಕ್ಷಗಾನ ಕಲಾಪ್ರದರ್ಶನದ ರಂಗ ಸಜ್ಜಿಕೆ ಹೇಗಿರಬೇಕು? ಪಾತ್ರಧಾರಿಗಳು ಧರಿಸುವ ವೇಷಭೂಷಣಗಳು ಹೇಗಿರಬೇಕು? ಅರ್ಥ ವಿವರಣೆ ಹೇಗಿರಬೇಕು? ನೃತ್ಯಾಭಿನಯ ಹೇಗಿರಬೇಕು? ಚೆಂಡೆ ಮದ್ದಳೆಗಳನ್ನು ಹೇಗೆ ಬಾಜಿಸಬೇಕು? ಎಂದು ಪ್ರಶ್ನಿಸಿದರೆ, ಎಲ್ಲಾ ವಿಚಾರಗಳನ್ನೂ ಬೋಧಿಸಬಲ್ಲ ಮಹನೀಯರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ದಶಾವತಾರ ಮೇಳಗಳಲ್ಲಿ ಅನೇಕ ವರ್ಷಗಳ ವರೆಗೆ ಹಾಡುಗಾರರಾಗಿ ತಮ್ಮ ಮಾರ್ಗದರ್ಶನದಿಂದಲೇ ಬಯಲಾಟಗಳನ್ನು ಯೋಗ್ಯರೀತಿಯಲ್ಲಿ ನಡೆಯಿಸುತ್ತಿದ್ದರು. ಯಕ್ಷಗಾನ ಬಯಲಾಟಗಳಲ್ಲಿ ಹಿಂದೆ ಇದ್ದ ದೋಷಗಳನ್ನು ಹೋಗಲಾಡಿಸಿ, ಜನರ ಮೆಚ್ಚುಗೆಗೆ ಪಾತ್ರವಾಗುವ ಪ್ರಯೋಗ ರೀತಿಯನ್ನು ಬಳಕೆಗೆ ತಂದಿದ್ದರು.

ಯಕ್ಷಗಾನ ಕಲಾ ನೈಪುಣ್ಯವನ್ನು ಪಡೆದ ಶ್ರೀ। ಬಲಿಪರು ಪ್ರಸಿದ್ಧ ಯಕ್ಷಗಾನ ಕವಿಗಳೂ ಆಗಿದ್ದರು. ಹಿಂದೆ ಯಕ್ಷಗಾನ ಪ್ರಸಂಗಗಳಾಗಿದ್ದ ಕಥಾ ವಸ್ತುಗಳನ್ನೇ ಹೆಚ್ಚಾಗಿ ಅವರು ಆರಿಸಿಕೊಂಡಿದ್ದರೂ ಅವುಗಳನ್ನು ನವೀನ ರೀತಿಯಲ್ಲಿ ಯಕ್ಷಗಾನ ಕಲಾ ಪ್ರದರ್ಶನಕ್ಕೆ ಅನುಕೂಲವಾಗುವಂತೆ ಅಳವಡಿಸಿಕೊಂಡು ವಿವಿಧ ಜಾತಿಯ ಹಾಡುಗಳಲ್ಲಿ ಬರೆದಿದ್ದರು. ಅವರು ಬರೆದ ಸುಮಾರು ಇಪ್ಪತ್ತು ಯಕ್ಷಗಾನ ಪ್ರಬಂಧಗಳು ಯಕ್ಷಗಾನ ಸಾಹಿತ್ಯ ನಿಧಿಗೆ ಅಮೂಲ್ಯವಾದ ಕಾಣಿಕೆಗಳಾಗಿವೆ.

ನನಗೆ ಬಾಲ್ಯದಲ್ಲಿಯೇ ಯಕ್ಷಗಾನ ಬಯಲಾಟಗಳನ್ನು ನೋಡುವುದೆಂದರೆ ಬಹಳ ಇಷ್ಟ. ಆಗಾಗ ನಾನು ಬಯಲಾಟಗಳಿಗೆ ಹೋಗಿ ಶ್ರೀ। ಬಲಿಪರ ಹಾಡುಗಾರಿಕೆಯನ್ನು ಕೇಳಿ ಸಂತೋಷಪಡುತ್ತಿದ್ದೆನು. ಅವರು ಭಾಗವತರಾಗಿ ಭಾಗವಹಿಸಿದ ಸಂದರ್ಭವನ್ನು ಸ್ಮರಿಸಿದರೆ ಈಗಲೂ ಅವರ ರೂಪ

ಕಣ್ಣೆದಿರಿನಲ್ಲಿ ಕಾಣುತ್ತದೆ; ಇಂಪಾದ ಕಂಠಸ್ವರ ಕಿವಿಗಳಿಗೆ ಕೇಳಿಸುತ್ತಿದೆ. ನನಗೆ ಮಾತ್ರವೆಂದೇನು? ಅವರ ಹಾಡುಗಾರಿಕೆಯನ್ನು ಕೇಳಿದವರಿಗೆ ಈ ಅನುಭವ ಆಗದೆ ಇರಲಾರದು.

ಅವರು ಯಕ್ಷಗಾನ ದಶಾವತಾರ ಮೇಳಗಳೊಡನೆ ಸಂಚರಿಸುವುದನ್ನು ಬಿಟ್ಟ ಬಳಿಕ ವಿಟ್ಲದಲ್ಲಿದ್ದ ಅವರ ಮನೆಗೆ ಆಗಾಗ ಹೋಗಿ ಸಂದರ್ಶಿಸಿ ಬರುತ್ತಿದ್ದೆ. ಅವರೊಡನೆ ನಾನು ಸಂಭಾಷಿಸುವಾಗ ನನ್ನನ್ನು ಕಿರಿಯನೆಂಬ ಅಭಿಪ್ರಾಯದಿಂದ ಅವರು ಎಂದೂ ಅವಜ್ಞೆ ಗೈಯುತ್ತಿರಲಿಲ್ಲ. ಅವರು ಯಾರೊಡನೆಯೂ ನಿರಹಂಕಾರದಿಂದ ಮಾತಾಡುತ್ತಿದ್ದರು. ಯಕ್ಷಗಾನದ ವಿಷಯವನ್ನು ಮಾತಾಡುವಾಗ ಅವರಿಗೆ ಸಮಯದ ಪರಿವೆಯೇ ಇರುತ್ತಿರಲಿಲ್ಲ. ಹಲವು ಸಾರಿ ನಾವು ಇಡೀ ರಾತ್ರಿ ಸಂಭಾಷಣೆ ಮಾಡಿದ ಸಂದರ್ಭಗಳೂ ಇವೆ. ಅವರಿಗೆ ತಮ್ಮ ಅಭಿಪ್ರಾಯಗಳನ್ನು ತಿಳುಹಿಸುವ ಉತ್ಸಾಹ; ನನಗೆ ಅವರ ವಿಚಾರ ಪೂರ್ಣವಾದ ಮಾತುಗಳನ್ನು ಕೇಳುವ ಕುತೂಹಲ– ಇದರಿಂದಾಗಿ ಹೊತ್ತು ಕಳೆದುದೇ ತಿಳಿಯುತ್ತಿರಲಿಲ್ಲ. ಅವರ ಪಾಂಡಿತ್ಯ ಪೂರ್ಣವಾದ ಮಾತುಗಳನ್ನು ಕೇಳಿದ ನೆನಪೂ, ಅವರು ಕೊಟ್ಟ ಉಪಾಹಾರವನ್ನು ಸೇವಿಸಿದ ಸ್ಮರಣೆಯೂ ನನ್ನ ಸ್ಮೃತಿಪಟಲದಲ್ಲಿ ಇನ್ನೂ ಅಚ್ಚಳಿಯದೆ ಉಳಿದಿವೆ.

ಅವರಿಗೆ ನನ್ನ 'ಯಕ್ಷಗಾನ ಛಂದಸ್ಸು' ಎಂಬ ಪುಸ್ತಕವನ್ನು ಓದಲು ಕಳುಹಿಸಿದ್ದೆನು. ಅದರಲ್ಲಿ ಯಕ್ಷಗಾನದ ಹಾಡುಗಳ ವಿವಿಧ ರೀತಿಯ ಛಂದಸ್ಸುಗಳನ್ನು ನಾನು ಗುರುತಿಸಿ ತೋರಿಸಿದ ವಿಷಯವನ್ನು ನೋಡಿ, ನನ್ನ ಅಭಿಪ್ರಾಯವನ್ನು ಮೆಚ್ಚಿ ಪತ್ರ ಬರೆದಿದ್ದರು "ಪಂಚವಟಿ ರಾಮಾಯಣ - ವಾಲಿ ಸುಗ್ರೀವರ ಕಾಳಗ" ಎಂಬ ಯಕ್ಷಗಾನ ಪ್ರಬಂಧದ ವಿವಿಧ ಪ್ರತಿಗಳನ್ನು ಸಂಪಾದಿಸಿ ಪರಿಷ್ಕರಿಸಿ ಬರೆಯಬೇಕೆಂದು ನಾನು ಯೋಚಿಸಿ ಒಮ್ಮೆ ಅವರಲ್ಲಿಗೆ ಹೋಗಿದ್ದೆನು. ಅವರೊಡನೆ ಆ ಪ್ರಸಂಗದ ಹಸ್ತಪ್ರತಿ ಇದೆಯೇ ಎಂದು ವಿಚಾರಿಸಿದಾಗ ಇಲ್ಲವೆಂದು ಹೇಳಿದರು. ಆಗ ನಾನು ನಿರಾಶೆ ಗೊಂಡುದನ್ನು ನೋಡಿ, ತಮಗೆ ಹೇಳಲು ಬರುವಷ್ಟನ್ನು ಹಾಡುವೆನೆಂದು ಹೇಳಿ ಕಂಠಪಾಠವಾಗಿರುವ ಪದ್ಯಗಳನ್ನು ಹಾಡತೊಡಗಿದರು. ಅವರು ಹೇಳಿದ ಪದ್ಯಗಳನ್ನು ನಾನು ಬರೆದುಕೊಂಡೆನು. ಮುದ್ರಿತ ಪುಸ್ತಕಗಳ ಪಾಠಕ್ಕೂ ಅವರು ಹೇಳಿದ ಪ್ರಸಂಗದ ಪಾಠಕ್ಕೂ ಕೆಲವೆಡೆಗಳಲ್ಲಿ ವ್ಯತ್ಯಾಸಗಳು ಕಂಡುಬಂದುವು. ವೃದ್ಧರಾದುದರಿಂದ ಸ್ವಾಭಾವಿಕವಾಗಿ ಅವರಿಗೆ ಕೆಲವು ಪದ್ಯಗಳು ಮರೆತು ಹೋಗಿದ್ದುವು. ಆದುದರಿಂದ ಅವರಿಗೆ ಹಿಂದೆ ಕಂಠಪಾಠವಾಗಿ ಬರುತ್ತಿದ್ದ ಪೂರ್ಣ ಪ್ರಬಂಧದ ಎಲ್ಲಾ ಪದ್ಯಗಳನ್ನು ಸಂಗ್ರಹಿಸಲು ಸಾಧ್ಯವಾಗಲಿಲ್ಲ. ಅನಂತರ ಅವರಿಂದ ಹಾಡಿಸಿ ಕೇಳಿ ಬರೆದುಕೊಂಡ ಪದ್ಯಗಳ ಹಸ್ತಪ್ರತಿ ದಿ। ಶ್ರೀ ಮುಳಿಯ ತಿಮ್ಮಪ್ಪಯ್ಯನವರ "ಪಾರ್ತಿಸುಬ್ಬ" ಹಿಂದೆ ಪ್ರಕಟವಾಗಿದ್ದ "ಯಕ್ಷಗಾನ ಅರಣ್ಯ ಕಾಂಡ" ಮತ್ತು "ಯಕ್ಷಗಾನ ಪಂಚವಟಿ ರಾಮಾಯಣ ವಾಲಿ ಸುಗ್ರೀವರ ಕಾಳಗ"ಗಳನ್ನು ನೋಡಿ ಅರ್ಥಾಭಾಸವುಂಟಾಗುವಲ್ಲಿ ಕೆಲವು ಪದ್ಯಗಳನ್ನು ವ್ಯತ್ಯಾಸ ಮಾಡಿ, "ಪಂಚವಟಿ ರಾಮಾಯಣ ವಾಲಿ ಸುಗ್ರೀವರ ಕಾಳಗ" ಪ್ರಸಂಗದ ನೂತನ ಹಸ್ತಪ್ರತಿಯನ್ನು ಸಿದ್ಧ ಪಡಿಸಿದೆನು, ಅದನ್ನು ಶ್ರೀ ಬಲಿಪರು ನೋಡಿ ಮೆಚ್ಚಿಕೊಂಡರು. ಅದು ಪ್ರಕಟವಾದೊಡನೆ ಒಂದು ಪ್ರತಿಯನ್ನು ಅವರಿಗೆ ಕಳುಹಿಸಿದ್ದೆನು.

ಅವರು ಬರೆದ ಯಕ್ಷಗಾನ ಕೃತಿಗಳ ಕೆಲವು ಪದ್ಯಗಳನ್ನು ನನ್ನ ಮುಂದೆ ಹಾಡಿ ತೋರಿಸಿದ್ದರು. ಆ ಪ್ರಸಂಗಗಳ ಪದ್ಯಗಳು ಲಲಿತವಾಗಿವೆ; ಅರ್ಥಗರ್ಭಿತವಾಗಿವೆ. ಹಾಡಲು ಅನುಕೂಲವಾಗಿವೆ. ಅವರ ಪುಸ್ತಕಗಳನ್ನು ಪ್ರಕಟಿಸಬೇಕೆಂದು ನಾನು ವಿಜ್ಞಾಪಿಸಿದಾಗ, ಅವರು, ನನ್ನೊಡನೆ ಅವುಗಳನ್ನು ಒಮ್ಮೆ ನೋಡಿ ಛಂದೋದೋಷವಿದ್ದರೆ ತಿಳುಹಿಸಬೇಕೆಂದು ಹೇಳಿದ್ದರು. ಕಿರಿಯನಾದ ನನ್ನಲ್ಲಿ ಅವರು ಈ ರೀತಿಯಾಗಿ ಹೇಳಿದುದನ್ನು ಎಣಿಸಿದಾಗ ಅವರೆಷ್ಟು ನಿಗರ್ವಿಯೆಂದು ಅರಿಯಬಹುದಾಗಿದೆ. "ಇನ್ನೊಮ್ಮೆ ಬಂದಾಗ ಯಾವುದಾದರೊಂದು ಪ್ರಸಂಗ ಪುಸ್ತಕವನ್ನು ಕೊಂಡು ಹೋಗಿ ನನ್ನ ಬುದ್ಧಿಗೆ ನಿಲುಕುವ ವಿಷಯವನ್ನು ನಿಮ್ಮ ಮುಂದಿಡುವೆ"ನೆಂದು ಹೇಳಿದ್ದೆನು. ಆದರೆ, ಅವರನ್ನು ಮತ್ತೊಮ್ಮೆ ನೋಡಿ ಮಾತಾಡುವ ಭಾಗ್ಯವು ನನಗೆ ಲಭಿಸಲಿಲ್ಲ.

ನಮ್ಮೊಳಗೆ ನಡೆದ ಸಂಭಾಷಣೆಯ ಸಂದರ್ಭದಲ್ಲಿ ಅವರು ಹೇಳಿದ ಕೆಲವು ಅಭಿಪ್ರಾಯಗಳ ಸಾರಾಂಶವನ್ನು ಸಂಕ್ಷೇಪವಾಗಿ ಸೂಚಿಸುತ್ತೇನೆ. ಯಕ್ಷಗಾನದ ಶ್ರೇಷ್ಠ ಭಾಗವತರೂ, ಕವಿಗಳೂ, ಕಲಾವಿದರೂ ಆಗಿದ್ದ ಅವರ ಅಭಿಪ್ರಾಯಗಳನ್ನು ತಿಳಿದರೆ ಯಕ್ಷಗಾನ ಕಲಾಭಿಮಾನಿಗಳಿಗೆ ಪ್ರಯೋಜನವಾಗಬಹುದೆಂದು ನನ್ನ ಎಣಿಕೆ. ಯಕ್ಷಗಾನದ ಪದ್ಯಗಳನ್ನು ಹಾಡುವಾಗ ಮಾರ್ಗೀಯ ಸಂಗೀತ ಕ್ರಮವನ್ನೇ ಅನುಸರಿಸುವುದು ಸಮಂಜಸವಲ್ಲವೆಂದೂ, ಸಂಗೀತ ಶಾಸ್ತ್ರದಲ್ಲಿ ಸೂಚಿಸಿದ ರಾಗ ತಾಳಗಳು ಯಕ್ಷಗಾನದಲ್ಲಿ ಇದ್ದರೂ, ಅವುಗಳನ್ನು ಒಂದು ವಿಶಿಷ್ಟ ಸಂಪ್ರದಾಯದಲ್ಲಿ ಹಾಡಬೇಕೆಂದೂ ಹೇಳಿ, ಯಕ್ಷಗಾನದ ವೀರರಸದ ಒಂದು ಹಾಡನ್ನು ಮಾರ್ಗೀಯ ಸಂಗೀತ ಕ್ರಮದಲ್ಲಿಯೂ, ಯಕ್ಷಗಾನದ ಧಾಟಿಯಲ್ಲಿಯೂ ಹಾಡಿತೋರಿಸಿದ್ದರು. ಆಗ ನನಗೆ ಯಕ್ಷಗಾನ ಹಾಡುಗಾರಿಕೆಗೂ ಶಾಸ್ತ್ರೀಯ ಸಂಗೀತಕ್ಕೂ ಇರುವ ವ್ಯತ್ಯಾಸವು ಸ್ಪಷ್ಟವಾಗಿ ತಿಳಿದು ಯಕ್ಷಗಾನವನ್ನು ಅದರ ಧಾಟಿಯಲ್ಲಿಯೇ ಹಾಡುವುದು ವಿಹಿತವೆಂದು ಮನವರಿಕೆಯಾಯಿತು. ಅರ್ಥಧಾರಿಗಳು ಸಂಭಾಷಣೆಯ ಸಮಯದಲ್ಲಿ–ತಾವು ಮೇಲಾಗಬೇಕೆಂದು ಅಸೂಯೆಯಿಂದ ಪ್ರತಿಸ್ಪರ್ಧಿಗಳಾಗಿ ಪಾತ್ರಗೌರವವನ್ನು ತೊರೆದು ಕಥೆಗೆ ಹೊಂದಿಕೊಳ್ಳದ ವಾದವನ್ನು ಮಾಡಬಾರದೆಂದು ಸೂಚಿಸಿದ್ದರು. ಯಕ್ಷಗಾನದ ವೇಷಧಾರಿಗಳು ನಾಟಕ ಚಲಚ್ಚಿತ್ರಗಳ ಪಾತ್ರಗಳಂತೆ ವೇಷಭೂಷಣಗಳನ್ನು ಧರಿಸಬಾರದೆಂದು ಅಭಿಪ್ರಾಯಪಟ್ಟಿದ್ದರು.

ದೈವಭಕ್ತಿ, ಧರ್ಮ, ನೀತಿಗಳನ್ನು ಬೋಧಿಸುವ ಪೌರಾಣಿಕ ಕಥಾನಕಗಳೇ ಯಕ್ಷಗಾನ ಕಲಾ ಪ್ರದರ್ಶನಕ್ಕೆ ಉಚಿತವೆಂದೂ, ತುಳುನಾಡಿನ ಭೂತಗಳ ಕತೆಗಳನ್ನೂ ಚಾರಿತ್ರಿಕ ವಿಷಯಗಳನ್ನೂ ಯಕ್ಷಗಾನ ಪ್ರಸಂಗಗಳಾಗಿ ಮಾಡಿ ಪ್ರಯೋಗ ನಡೆಯಿಸುವುದು ಹಿತವಲ್ಲವೆಂದೂ ನುಡಿದಿದ್ದರು.

ಯಕ್ಷಗಾನ ರಾಮಾಯಣ ಪ್ರಸಂಗಗಳ ಕರ್ತೃ ಕುಂಬಳೆಯ ಪಾರ್ತಿಸುಬ್ಬನೆಂದೂ, ತಮ್ಮ ಪೂರ್ವಜರಿಗೆ ಆತನ ಪರಿಚಯವಿತ್ತೆಂದೂ, ತಮ್ಮ ದೃಢ ನಿರ್ಧಾರವನ್ನು ವ್ಯಕ್ತಪಡಿಸಿದ್ದರು.

ಅವರು ತಿಳುಹಿಸಿದ ವಿಚಾರಗಳು ಮನನೀಯವಾಗಿವೆ. ಯಕ್ಷಗಾನ ಕಲಾಭಿಮಾನಿಗಳು ಅವರ ಹಿತವಚನಗಳ ಕಡೆಗೆ ಲಕ್ಷ್ಯವನ್ನು ಹರಿಸುವುದು ವಿಹಿತ.

ಶ್ರೀ। ಬಲಿಪರು ಯಕ್ಷಗಾನದ ಕುರಿತು ಸದಾ ಚಿಂತನಪರರಾಗಿದ್ದರು. ಅವರು ತಮ್ಮ ಹಾಡುಗಾರಿಕೆಯಿಂದ ಸಮಕಾಲೀನ ಜನತೆಗೆ ಪರಿಚಿತರಾಗಿದ್ದರು. ದಶಾವತಾರ ಮೇಳಗಳೊಡನೆ ಸಂಚರಿಸುವಾಗ ಅನೇಕ ಕಲಾವಿದರಿಗೆ ಮಾರ್ಗದರ್ಶನ ಮಾಡಿದ್ದರು; ಹಲವು ಶಿಷ್ಯರಿಗೆ ಹಾಡುಗಾರಿಕೆಯನ್ನು ಕಲಿಸಿದ್ದರು. ತಮ್ಮ ಜೀವಮಾನದಲ್ಲಿ ಸಕಲ ಕಲಾವಿದರಿಂದಲೂ ಮನ್ನಣೆ ಪಡೆದಿದ್ದರು. ನಮ್ಮ ಮೈಸೂರು ರಾಜ್ಯ ಸರಕಾರದ ಸಾಹಿತ್ಯ ಎಕಾಡೆಮಿಯಿಂದ ಪ್ರಶಸ್ತಿಯನ್ನೂ ನಿವೃತ್ತಿವೇತನವನ್ನೂ ಗಳಿಸಿದ್ದರು, ಯಕ್ಷಗಾನ ಕಲಾಕ್ಷೇತ್ರದಲ್ಲಿ ಅಗ್ರಗಣ್ಯ ಸ್ಥಾನವನ್ನೂ ಯಶಸ್ಸನ್ನೂ ಸಂಪಾದಿಸಿದ್ದರು. ಉತ್ತಮವಾದ ಯಕ್ಷಗಾನ ಕೃತಿಗಳನ್ನು ರಚಿಸಿ ಮುಂದಿನ ಪೀಳಿಗೆಯೂ ತಮ್ಮ ಹೆಸರನ್ನು ನೆನೆಯುವಂತೆ ಮಾಡಿ ಕೀರ್ತಿಶೇಷರಾದರು.

ಯಕ್ಷಗಾನ ಕಲೆಯ ಅಭಿವೃದ್ಧಿಗಾಗಿ ತಮ್ಮ ತನು, ಮನ, ಧನಗಳನ್ನು ಅರ್ಪಿಸಿದ ಶ್ರೀ ಬಲಿಪ ನಾರಾಯಣ ಭಾಗವತರನ್ನು ಯಕ್ಷಗಾನ ಕಲಾಭಿಮಾನಿಗಳು ಎಂದೂ ಮರೆಯುವಂತಿಲ್ಲ.

ಯಕ್ಷಗಾನದ ರಸಋಷಿ
ಶ್ರೀ ಬಲಿಪ ನಾರಾಯಣ ಭಾಗವತರು

ಶ್ರೀ ಕೆ. ಗೋಪಾಲಕೃಷ್ಣ ಶ್ಯಾನುಭಾಗ ಕೂಡ್ಲು – ಕಾಸರಗೋಡು

ಯಕ್ಷಗಾನದ ಹೆಸರೆತ್ತಿದೊಡನೆ, ಜನಪದ ಸಾಹಿತ್ಯದ ಅಂತರ್ಬಾಹ್ಯಗಳು ನವಿರೇರಿ–ನೋಡುತ್ತಿವೆ ಕಾಸರಗೋಡನ್ನು. ಕಾಸರಗೋಡು ವಿಶಿಷ್ಟ ಇಲ್ಲಿನ ಕೂಡಲು ಮನೆತನ, ರಸಿಕರಂಜನವಾದ, ಜನಪದ ಜೀವನದ ಹೃದಯ ಸರ್ವಸ್ವವಾದ, ಸಂಸ್ಕೃತಿಯ ಸಿಹಿಯೊಸಗೆಯಾದ – ಯಕ್ಷಗಾನಕ್ಕೆ ಅಪಾರವಾದ ಕೊಡುಗೆಯನ್ನಿತ್ತಿದೆಯೆಂಬುದು ಪ್ರಸ್ತಾವ್ಯವಿದೆ. ಒಂದು ಕಾಲದಲ್ಲಿ ಯಕ್ಷಗಾನವು ಸಾಮಾನ್ಯ ವರ್ಗಕ್ಕೆ ಸೇರಿದುದೆಂದು ದೂರೀಕರಿಸಲ್ಪಟ್ಟ ಕಾಲದಲ್ಲಿ ಅದನ್ನು ಆದರಾಭಿಮಾನಗಳಿಂದ ಪೂಜಿಸಿ, ಉನ್ನತ ಕಲಾವಿದರನ್ನದರ ಆರಾಧಕರನ್ನಾಗಿ ಮಾಡಿ, ಯಕ್ಷಗಾನಕ್ಕೆ ಸಾಹಿತ್ಯ ಮುಕುಟವನ್ನೇರಿಸಿದ ಕೀರ್ತಿ – ಕೂಡ್ಲು ಮನೆತನಕ್ಕಿದೆಯೆಂದರೆ ಈ ಮಾತು ತಪ್ಪಾಗದು.

ಅಲ್ಲಿ ದಿ। ಕೂಡ್ಲು ಸುಬ್ರಾಯ ಶ್ಯಾನುಭಾಗರು ! ಬಲಿಪರಂತಹ ಮೇಧಾವೀ ಕಲಾವಿದರನ್ನು ಯಕ್ಷಗಾನ ಸಾಹಿತ್ಯಕ್ಕೆ ಕೊಡುಗೆ ನೀಡಿದ ಮಹನೀಯರು. ಸಂಗೀತ, ಚಿತ್ರ, ಕೈಗಾರಿಕೆ ಮೊದಲಾದ ಕುಶಲಕಲೆಗಳಲ್ಲೊಂದು ಮಾತ್ರವಲ್ಲ, ಈ ಕಲೆಗಳ ವಿವಿಧಗಳಾದ ಮಿಡಿತಗಳನ್ನು ಚೆನ್ನಾಗಿ ಅರ್ಥವಿಸಿದ ಮಹೋನ್ನತ ಕಲಾವಿದರವರು. ಕಲಾಪ್ರಶಸ್ತಿಯೊಂದಿಗೆ - ಸಮಾಜದಲ್ಲಿ, ಸೀಮೆಯಲ್ಲಿ ಗಣ್ಯಮಹನೀಯರೆನಿಸಿ - ಊರವರಿಂದ, ಅಧಿಕಾರಿಗಳಿಂದ ಮನ್ನಣೆಗಳಿಸಿದ ಸೌಜನ್ಯ, ಸೌಮನಸ್ಯ, ಸೌಹಾರ್ದಗಳ ಎರಕವಾಗಿದ್ದರವರು.

ಅವರದು ಸಾರ್ಥಕತೆಯ ತುಂಬು ಜೀವನ; ಶಿಷ್ಯಸಂಪತ್ತಿನ ಸುಪುಷ್ಕಲ ಜೀವನ.

ಇಂತಹ ಮಹನೀಯರ ಶಿಷ್ಯರಾಗಿ, ಕೂಡ್ಳು ಮನೆತನದ ಛಾಯೆಯಲ್ಲಿ ಬಳೆದು ಬಂದ ಕಲಾವಿದರು – ಶ್ರೀ ಬಲಿಪರೆಂಬಲ್ಲಿ ಅಭಿಮಾನವಿದೆ. ಶಿಷ್ಯರಾಗಿ, ಕಲಾಸೇವಕರಾಗಿ ಬೆಳಗಿದ ಶ್ರೀ ಬಲಿಪರು ದಿ। ಸಂಬ್ರಾಯ ಶ್ಯಾನುಭಾಗರ ಅನುಗ್ರಹದ ಮುಂದೆ, ದಿ। ಸದಾಶಿವ ಶ್ಯಾನುಭೋಗರ ತುಂಬು ಹರಕೆಯ ಮುಂದೆ ಒಂದು ಸುದಿನವಲ್ಲಿ, ಶುಭಮುಹೂರ್ತದಲ್ಲಿ ಶಿರಿಬಾಗಿಲಲ್ಲಿ ಜರಗಿದ 'ಬಯಲಾಟ'ದಂದು ಇಚ್ಲಂಪಾಡಿ ಮೇಳದಲ್ಲಿ ಜಾಗಟೆ ಹಿಡಿವ ಭಾಗ್ಯವನ್ನು ಪಡೆದರು. ಅಂದು ಹಿಡಿದ ಜಾಗಟೆ, ಅಂದು ಹೃತ್ಪೂರ್ವಕವಾಗಿ ಹೊರಟು ಬಂದ ನಾದ, ನಾದದ ಅಲೆಗಳಲ್ಲಿ ತೇಲಿಬಂದ ಸಾಹಿತ್ಯದ ಮಧುರವಾತ – ಶ್ರೀ ಬಲಿಪರನ್ನು ಯಕ್ಷಗಾನ ಸಾಹಿತ್ಯದ ರಸಋಷಿಯನ್ನಾಗಿಸಿತು; ಅವರ ಕೀರ್ತಿಗೆ – ವ್ಯಕ್ತಿತ್ವದ ಮುದ್ರೆಯೊತ್ತಿದ, ದಿ। ಸುಬ್ರಾಯ ಶ್ಯಾನುಭಾಗರ ಪುಣ್ಯ ನಾಮದೊಂದಿಗೆ ಕೂಡಿನಿಂತಿದೆ ಈ ರಸಋಷಿಯ ಘನನಾಮಧೇಯವು.

*   *   *   *   *   *

ಸುಮಾರು 1900ರ ಒಂದು ದಿನ. ಶ್ಯಾನುಭಾಗರ ಆತ್ಮೀಯ ಮಿತ್ರರಾದ ಶ್ರೀ ನೇಜಿಕಾರು ವಿಷ್ಣು ಭಟ್ಟರೆಂಬವರು – ಕೂಡ್ಲಿನಲ್ಲಿ ಸಂಭ್ರಮದಿಂದ ಜರಗಿದ ನವರಾತ್ರಿ ಮಹೋತ್ಸವದ ಕಾಲದಲ್ಲಿ ಎಳೆಯ ಬಾಲಕನೊಬ್ಬನನ್ನು ಕೂಡಿ ಬಂದಿದ್ದರು. ಆ ಬಾಲಕ ವಿಷ್ಣುಭಟ್ಟರ ಮೊಮ್ಮಗ; ಬಲಿಪ ಮಹಾದೇವ ಭಟ್ಟ ಮತ್ತು ದುರ್ಗಾದೇವಿ (ದುಗ್ಗಮ್ಮ) ಎಂಬವರ ಪುತ್ರ ಸತತಾಭ್ಯಾಸದಿಂದ ಯಕ್ಷ ಗಾನ ಸರಸ್ವತಿಯನ್ನು ಆರಾಧಿಸಿ – ಧನ್ಯತೆಯನ್ನು ಸಾಧಿಸಿದ ಕಲಾವಿದ.

ಶ್ಯಾನುಭಾಗರು ನೆಟ್ಟನೋಟದಿಂದ ಬಾಲಕನನ್ನು ನೋಡುತ್ತ, ಆ ಬಾಲಕನಲ್ಲಿ ಗುಪ್ತವಾಗಿ ನೆಲೆಸಿದ್ದ ಕಲಾವಂತಿಕೆಯ ಹೃದಯವನ್ನು ಗುರುತಿಸಿ ತನ್ನ ಗೆಳೆಯರಾದ ವಿಷ್ಣುಭಟ್ಟರನ್ನೊಡಂಬಡಿಸಿ, ತಮ್ಮಲ್ಲಿರಿಸಿಕೊಂಡರು. ತಾನು ಮನದಲ್ಲಿರಿಸಿದ್ದ ಕಾಮನೆಯೊಂದು ಹೂವಾಗಿ ಅರಳಿದ ಬಗ್ಗೆ ಭಟ್ಟರೂ ಆನಂದಿಸಿದರು. ಅಂತೂ ಅದೇ ನವರಾತ್ರಿಯ "ವಿದ್ಯಾದಶಮಿ"ಯ ಪುಣ್ಯ ದಿನದ ಶುಭಮುಹೂರ್ತ ದಲ್ಲಿ – ಶ್ಯಾನುಭಾಗರಿಂದ ಶ್ರೀ ಬಲಿಪರಿಗೆ ಸಂಗೀತಾಭ್ಯಾಸದ ಓನಾಮಕ್ಕೆ ನಾಂದಿ ದೊರಕಿತು. ಶ್ರೀ ಶಾರದೆಯು ಬಲಿಪರನ್ನು – ಸುಶ್ರಾವ್ಯ ಕಂಠದ ಯುವಕ ಕಲಾವಿದರನ್ನು ಗುರುವಿನ ಅನುಗ್ರಹದೊಂದಿಗೆ ಹರಸಿದಳು; ಅವರ ಜೀವನ ತುಂಬಿ ಬರುವಂತೆ ಮಂಗಲದ ತನಿಯೊಸಗೆ ನೀಡಿದಳು.

ಕೇವಲ ಸಂಗೀತದ ವಾತಾವರಣ ಮಾತ್ರ ಈ ಕಲಾವಿದರಿಗೆ ದೊರಕಿದುದಲ್ಲ. ದಶಾವತಾರ ಗಳ ದಿವ್ಯಲೀಲೆಯನ್ನು ಸಾರುವ ಯಕ್ಷಗಾನದ ನಿರಂತರವಾದ ಆರಾಧನೆಯೂ ನಡೆಯುತ್ತಿರುವ ಈ ಮನೆಯಲ್ಲಿ ಸಂಗೀತಾಸಕ್ತರಾದ ಶ್ರೀ ಬಲಿಪರ ಮನಸ್ಸು ಅತ್ತ ಕಡೆ ಹರಿಯಿತು. ಶಿಷ್ಯ ನಿವೇದನೆ ನಡೆ ಯಿತು. ಶ್ಯಾನುಭಾಗರು ಒಪ್ಪಿದರು. ಅಲ್ಲಿಂದ ಯಕ್ಷಗಾನದ ಪರಿಚಯವಾಗತೊಡಗಿತು; ಬಯ ಲಾಟದ ಸಂವಿಧಾನಗಳನ್ನರಿತುಕೊಂಡರು; ಯಕ್ಷಗಾನದ ಅತ್ಯವಶ್ಯ ಭಾಗಗಳಾದ ಹಾಡುಗಾರಿಕೆ, ಮೃದಂಗ – ಚೆಂಡೆ ವಾದನಗಳ ಮರ್ಮವನ್ನರಿತರು. ಹೀಗೆ ಬಲಿಪ ಭಾಗವತರು ಯಕ್ಷಗಾನವನ್ನು ಅಭ್ಯಾಸ ಮಾಡುತ್ತಿರುವಾಗ, – ಒಂದು ವರ್ಷ – ಕೂಡ್ಲು ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ 'ಗೆಜ್ಜೆ ಕಟ್ಟುವ' ಸುಸಂದರ್ಭ ಕೂಡಿಬಂತು. ಶ್ಯಾನುಭಾಗರು, ತನ್ನ ಶಿಷ್ಯನನ್ನು ಶ್ರೀದೇವರ ಸನ್ನಿಧಿ ಯಲ್ಲಿ ನಿಲ್ಲಿಸಿ, ದೇವರನ್ನು ಭಕ್ತಿಪುರಸ್ಸರವಾಗಿ ಪ್ರಾರ್ಥಿಸಿ – ಶಿಷ್ಯನಿಗೆ 'ಜಾಗಟೆ'ಯನ್ನು ಅನುಗ್ರಹಿಸಿ ದರು. ಅಂದಿನ ಸೇವೆ – ಭಕ್ತಿಯ ಗಾನವಾಯಿತು. ಸೊಗಸಾಗಿ ಕಲಾಪ್ರದರ್ಶನ ಜರಗಿತು. ಶ್ರೀ ಗೋಪಾಲಕೃಷ್ಣನು 'ಗುರುಶಿಷ್ಯರ' ಈ ಮಧುರ ಬಾಂಧವ್ಯವನ್ನು ಹರಸಿರಬೇಕು. ಅಂದಿನ ದಿನ ಊರ ವರಿಗೊಂದು ಹಬ್ಬ; ರಸಿಕರಿಗೆ ರಸದೌತಣ; ಶಿಷ್ಯನಿಗೊಂದು ಭಾಗ್ಯಸಂಧಿ; ಗುರುವಿಗೆ ಕೃತಾರ್ಥತೆಯ ಸುಸಂಧಿ !

ಕಲಾವಿದರ - ಮೇಲ್ಮೆ!

ಬಲಿಪರು – ಕಲಾವಿದರಾಗಿ ಬೆಳಗಿ ಬರುತ್ತಿದ್ದ ಆ ಕಾಲದಲ್ಲಿ ನಮ್ಮ ನಾಡಿನಲ್ಲಿ ಖ್ಯಾತಿಗಳಿಸಿದ ಮೇಳಗಳೆಂದರೆ ಕೂಡಲು, ಧರ್ಮಸ್ಥಳ, ಕಟೀಲು ಮತ್ತು ಮೂಲ್ಕಿ ಇಷ್ಟೆ. ಇವುಗಳಲ್ಲಿ ಕೂಡಲು ಮೇಳಕ್ಕೆ ಪ್ರಥಮ ಪ್ರಾಶಸ್ತ್ಯವಿತ್ತೆಂದರೆ – ಅದು ಅಂದಿನ ಜನರಾಡುತ್ತಿದ್ದ ಮಾತಿನ ಪಡಿದನಿಯಾಗಿದೆ. ಇವೆಲ್ಲವೂ ತೆಂಕುತಿಟ್ಟಿನ ಸಂಪ್ರದಾಯದಲ್ಲಿ ಜನರಂಜನೆ ಮಾಡುತ್ತಿದ್ದ ಕಲಾ ಸಂಸ್ಥೆಗಳು. ಈ ಕಲಾಸಂಸ್ಥೆ ಗಳು ಪ್ರಗತಿಯತ್ತ ಸಾಗುತ್ತಿರುವಾಗಲೇ, ಇಚ್ಲಂಪಾಡಿ ಮೇಳವೆಂಬ ಮತ್ತೊಂದು ಸಂಸ್ಥೆ ಕುಡಿವರಿಯಿತು ಇದೇ ಇಚ್ಲಂಪಾಡಿ ಮೇಳಕ್ಕೂ, ಕೂಡಲು ಮೇಳಕ್ಕೂ – ಒಂದು ದಿನ 'ಜೋಡಾಟ'ವೆಂಬ ನಿಶ್ಚಯ

ವಾಯಿತು. 'ಜೋಡಾಟ'ವು ಉಭಯ ಮೇಳಗಳೊಳಗಿನ ಸಾಮರ್ಥ್ಯವನ್ನು – ಸ್ಪರ್ಧಾ ರೂಪವಲ್ಲಿ ಪ್ರಕಾಶಗೊಳಿಸುವ ಸಾಧನವಾಗಿದೆ. ಜೋಡಾಟಕ್ಕೆ ಸಿದ್ಧವಾದ ಮೇಳಗಳು ಅಂದಿನ ದಿನ ಹೊಂದಿಸುವ ಯೋಜನೆಗಳು ಪ್ರೇಕ್ಷಕರ ಕುತೂಹಲವನ್ನು ಕೆರಳಿಸುವಲ್ಲಿ ಸಮರ್ಥವಾದವುಗಳು. ಸರಿ ಜೋಡಾಟದ ಏರ್ಪಾಡಾಯಿತು. ಇಚ್ಲಂಪಾಡಿ ಮೇಳದಲ್ಲಿ ಅಂದು ಖ್ಯಾತಿಯಾರ್ಜಿಸಿದ್ದ ಕುಂಡೋಚ – ಭಾಗವತಿಕೆಗೆ, ಕೂಡ್ಲು ಮೇಳದಲ್ಲಿ ಮುಲ್ಕಿ ಎಂಕಣ್ಣ ಭಾಗವತರು ಹಾಡುಗಾರಿಕೆಗೆ.

ಆಟದ ಸಿದ್ಧತೆಯಾಗುತ್ತಾ ಬಂತು. ಆಟದ ಕಾಲಕ್ಕೆ ಬರುವೆನೆಂದು ಭರವಸೆಯಿತ್ತು ತೆರಳಿದ್ದ ಕೂಡ್ಲು ಮೇಳದ ಭಾಗವತರು ಬರಲಿಲ್ಲ. ಮೇಳದವರು ಗಾಬರಿಯಾದರು; ಭಾಗವತರು ಬರುವ ನಿರೀಕ್ಷೆ ವಿಫಲವಾಗುತ್ತ ಬಂತು. ಶ್ಯಾನುಭಾಗರಲ್ಲಿ ಅರಿಕೆಯಾಯಿತು. ಆದರೆ ಶ್ರೀ ದೇವರ ಪೂರ್ಣಾನುಗ್ರಹವಿದ್ದ ಕೂಡ್ಲು ಮೇಳದ ಒಡೆಯರೂ, ಸರಸ್ವತೀ ಕೃಪಾಕಟಾಕ್ಷ ಪೂರ್ಣರೂ ಆದ ಶ್ಯಾನುಭಾಗರು ಅಳುಕಲಿಲ್ಲ; ಭಾಗವತರು ಬಂದೇ ಬರುವರೆಂದು ಆಶ್ವಾಸನೆ ನೀಡಿದರು.

ಗೊತ್ತು ಮಾಡಿದ್ದ – ಜಾಗ ಸಿರಿಬಾಗಿಲಲ್ಲಿ ! ರಂಗಸ್ಥಳದಲ್ಲಿ ದೀಪ ಜ್ವಲನವಾಯಿತು. ನಿತ್ಯ ವೇಷಗಳು ನಡೆದುವು. ಇನ್ನೇನು ಮುಖ್ಯ ಸ್ತ್ರೀ ಪಾತ್ರದ ಪ್ರವೇಶವಾಗಬೇಕು. ಎಂಕಣ್ಣ ಭಾಗವತರು ಯೋಚನೆಯ ಎಣಿಕೆಗಿಂತಲೂ ದೂರವೆ ! ರಂಗಸ್ಥಳದ ಪಕ್ಕದಲ್ಲಿ ಕುಳಿತಿದ್ದ ಶ್ಯಾನುಭಾಗರು ಧಿಗ್ಗನೆ ಎದ್ದು, ಚೌಕಿಗೆ ಬರುತ್ತ ಶ್ರೀ ಬಲಿಪರನ್ನು ಬಳಿಗೆ ಕರೆದು ಆಶೀರ್ವದಿಸುತ್ತ, ಶ್ರೀ ಗೋಪಾಲಕೃಷ್ಣನನ್ನು ಧ್ಯಾನಿಸಿ ಜಾಗಟೆಯನ್ನು ಶಿಷ್ಯನಿಗೆ ನೀಡುತ್ತ "ಜೋಡಾಟ"ದ ಭಾಗವತಿಕೆಗೆ ಅನುಮತಿ ನೀಡಿದರು. ಅಳುಕುವ ಶಿಷ್ಯನೇ ಬಲಿಪರು ! ಗುರುಚರಣಗಳಲ್ಲಿ ವಂದಿಸಿ, "ಕೃಷ್ಣಾ – ನೀನೇ ದಾರಿತೋರಿಸು" ಎಂದು ಅಡಿಯಿಟ್ಟರು ರಂಗಸ್ಥಳಕ್ಕೆ. "ಸ್ತ್ರೀವೇಷ"ದ ಕುಣಿತವಾಗುತ್ತಲೆ ಹರ್ಷ ನಿರ್ಭರರಾದ ಪ್ರೇಕ್ಷಕರು ಕೈಚಪ್ಪಾಳೆ ಬಡಿದು ಹರ್ಷೋದ್ಗಾರವೆಬ್ಬಿಸಿದರು.

ಇನ್ನೇನು—ಪ್ರಸಂಗಾರಂಭ ! ನಿಬ್ಬೆರಗಾಗಿ ಪ್ರೇಕ್ಷಕರು ನೋಡುತ್ತಿದ್ದರು. ನಾದದಲೆಯಲ್ಲಿ–ಕಥಾವಾಹಿನಿ ಸಾಗುತ್ತಿತ್ತು. ಇದಿರು ಮೇಳದ ಭಾಗವತರು ಪೆಚ್ಚಾಗಿ ನೋಡುತ್ತಿದ್ದರು. "ಸಣ್ಣ ಮಾಣಿಯೊಂದು – ತನ್ನನ್ನು ತಲೆತಗ್ಗಿಸುವಂತೆ ಮಾಡಿದನಲ್ಲಾ" ಎಂದು ಕುಂಡೋಚ ಭಾಗವತರು ಯೋಚನೆಗೀಡಾದರು. ಆಟ ಮುಗಿಯಿತು. ಕೂಡ್ಲು ಮೇಳ ಅಂದು ಹೊಸದೊಂದು ದಾಖಲೆಯನ್ನೆಸಗಿತು. ಶ್ಯಾನುಭಾಗರು ಕೃತಾರ್ಥತೆಯ ಉಸಿರೆಳೆದರು. ಅವರ ಹೃದಯ 'ಶಿಷ್ಯ–ಸಂಪತ್ತ'ನ್ನು ನೋಡಿ ಆನಂದತುಂದಿಲವಾಯಿತು. ಮುಂಜಾನೆ ಮಂಗಲ ಹಾಡಿದ ಶ್ರೀ ಬಲಿಪರು ಗುರುಗಳನ್ನು ವಂದಿಸಿದರು. ಗುರುಗಳು ಶಿಷ್ಯನನ್ನು ಆನಂದ ಬಾಷ್ಪದಿಂದ ತಂಪಾಗಿಸಿದರು,

ಅಂದಿನಿಂದ–ಬಲಿಪರು ಖ್ಯಾತರಾದರು ! ಕೂಡ್ಲು ಮನೆತನದ ಮಾತು, ಬಲಿಪರ ಹಿರಿತನ – ಮನೆಮಾತಾಯಿತು.

ಬದಲಾವಣೆ

ಯಕ್ಷಗಾನ ಕ್ಷೇತ್ರದಲ್ಲಿ ಖ್ಯಾತರಾಗುತ್ತಿದ್ದ ಕಾಲದಲ್ಲಿಯೇ, ಶ್ರೀ ಬಲಿಪರ ಮನಸ್ಸು—ಇನ್ನೊಂದು ಶಾಖೆಗೆ ತಿರುಗಿತು. ಒಂದು ನವರಾತ್ರಿಯ ಕಾಲದಲ್ಲಿ ಮುಲ್ಕಿಯ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನೆಂಬವರೊಬ್ಬರು ಕೂಡ್ಲಿನಲ್ಲಿ ಹರಿಕಥೆ ನಡೆಸಿದರು, ಹರಿದಾಸರ ವಾಕ್-ಕೌಶಲ್ಯ, ನಿರೂಪಣೆ ಇವನ್ನು ಕಂಡ ಬಲಿಪರು – ತನಗೂ ಈ ವಿಧಾನ ಕಲಿಯಬೇಕೆಂದು ಅವರನ್ನು ಅನುಸರಿಸಿದರು. ವರಕವಿಗಳಾದ ಹರಿದಾಸರಿಂದ ಬಲಿಪರ ಆಶೆ ಪೂರ್ತಿಗೊಳ್ಳಲಿಲ್ಲ. ಏಕೆಂದರೆ ಅದು ಹರಿದಾಸರು ಅಭ್ಯಾಸ ಮಾಡಿದ ಕಲೆಯಲ್ಲಿ ತಾನಾಗಿ ಪ್ರಸಾರಹೊಂದುವ ವಿಧಾನ. ಆದುದರಿಂದ ಹೆಚ್ಚಿನ ಪ್ರಯೋ

ಜನವನ್ನು ಗಳಿಸದೆ ಹೋದರೂ, ಹಿಂದಿರುಗಿದ ಬಲಿಪರು ಈ ಪ್ರದೇಶದ ಕೆಲವೆಡೆ ಹರಿಕಥೆ ಮಾಡಿದರೂ–ಅದಾರ ಮೆಚ್ಚುಗೆಯನ್ನೂ ಗಳಿಸಲಾರದೆ ಹೋಯಿತು. ಆದುದರಿಂದ ಬಲಿಪರೀ ಉದ್ಯಮವನ್ನು ಬಿಟ್ಟು–ಯಕ್ಷಗಾನದ ಕರೆಗೇನೆ ಓಗೊಟ್ಟರು. ಬೇಸಗೆಯಲ್ಲಿ ಯಕ್ಷಗಾನ. ಮಳೆಗಾಲದಲ್ಲಿ ಗುರುವಿನ ಬಳಿ ವಿದ್ಯಾಭ್ಯಾಸ.

ಒಂದು ದಿನ

ಕೂಡ್ಲಿನಲ್ಲಿ– ಶ್ರೀದೇವರ ಸನ್ನಿಧಿಯಲ್ಲಿ ಕುಂಭ ಮಾಸದ ಹುಣ್ಣಿಮೆಯ ರಥೋತ್ಸವ. ಆಗ ಎಲ್ಲಿದ್ದರೂ ಮೇಳ–ಆ ದಿನ ಆಟವಾಡಬಾರದು. ಅದು ಕಟ್ಟಾಜ್ಞೆ. ಏಕೋ ಏನೊ–ಅಂದು ಕುಂಬ್ಳಾಜೆಯಲ್ಲಿ ಆಟವೆಂದು ನಿರ್ಣಯವಾಗಿತ್ತು. ಆಕ್ಷೇಪ–ಅನುಮತಿಗಳ ತುಮುಲ ಸಂಘರ್ಷಣೆಯಲ್ಲಿ ಅನುಮತಿಯೆ ಗೆದ್ದು "ಅತಿಕಾಯ ಇಂದ್ರಜಿತು ಕಾಳಗ" ಪ್ರಸಂಗವಾರಂಭವಾಯಿತು. ಅತಿಕಾಯನ ಪ್ರವೇಶವಾಗಿ ಭಾಗವತರು ಜಾಗಟೆಯೆತ್ತಿ "ಅತಿಕಾಯನೆ ನೀಕೇಳು ರಿಪು। ಮಥನಕೆ ಪೋಪೆಯೊ ಪೇಳು" ಎಂಬ ಹಾಡು ಧ್ವನಿಸುವಾಗಲೇ, ಜಾಗಟೆ ದಾರ ಕಡಿದು ಕೆಳಬೀಳಬೇಕೆ? ಹೆಬ್ಬೆರಳು ಹರಿದು ರಕ್ತದ ಓಕುಳಿಯಾಯಿತು. ಭಾಗವತರಿಗರ್ಥವಾಯಿತು. ಅಂತೂ–ವಿಚಾರ ವಿಮರ್ಶೆಗಾಗಿ ಜ್ಯೋತಿಷ್ಯರನ್ನು ಕೇಳಿದಾಗ "ಆಜ್ಞಾಭಂಗವೇ" ಕಾರಣವೆಂದಾಯಿತು. ತಪ್ಪಿಗೆ ಕ್ಷಮೆಯಾಚನೆ ನಡೆಯಿತು. ಆದರೂ ಮೂರು ತಿಂಗಳ ಕಾಲ ಭಾಗವತರು ಈ ನೋವಿನಿಂದ ಮುಕ್ತರಾಗಲಿಲ್ಲವಂತೆ. ಇದೇ ಬಗೆಯ ಒಂದು ಅನುಭವ–ಇಂದಿಗೂ ಯಕ್ಷಗಾನ ಕಲಾರಾಧನೆ ಮಾಡುತ್ತಿರುವ ಶ್ರೀ ಪುತ್ತಿಗೆ ರಾಮಕೃಷ್ಣ ಜೋಯಿಸರಿಗೂ ಆದುದುಂಟಂತೆ!

ಗುರು ವಿಯೋಗ

ಬಲಿಪರು–ಭಾಗವತರಾಗಿ ಮೆರೆಯುತ್ತಿದ್ದರು. ಸುಶ್ರಾವ್ಯ ಕಂಠ, ನಟರನ್ನು ಪ್ರೋತ್ಸಾಹಿಸುವ ವಿಧಾನ, ಪ್ರೇಕ್ಷಕರನ್ನು ಆಕರ್ಷಿಸುವ ಸಂವಿಧಾನ, ಹಾಡುಗಾರಿಕೆಯ ನವ ವಿಧಾನ–ಇವೆಲ್ಲವೂ ಸಾಗುತ್ತಿರುವಂತೆ ಕೂಡ್ಲು ಮೇಳದ ಖ್ಯಾತಿ ಸರ್ವತ್ರ ಕೇಳಿಸುತ್ತಿದ್ದಂತೆ–ಒಂದು ದಿನ ವಿಧಿ ಸುಬ್ರಾಯ ಶ್ಯಾನುಭಾಗರನ್ನು 'ರಾಜ–ಕುರು'ವಿನ ನೆಲೆಯಲ್ಲಿ ಬಲೆಗೆಳೆಯಿತು. ಈ ಕಾಲದಲ್ಲೇ ಗುರುಶಿಷ್ಯ ಸಂಮಿಲನವೊಮ್ಮೆ ನಡೆಯಿತು, ಅಂದಿನ ಗುರುಶಿಷ್ಯ ಸಂಭಾಷಣೆ, ವಿಯೋಗದ ನೋವು, ಕೃತಾರ್ಥತೆಯ ಜೀವನದ ನಿಲುವು, ಇವನ್ನು ಭಾಗವತರು ಕೊನೆಯ ವರೆಗೂ ಮರೆತಿಲ್ಲ. ಏಕೆಂದರೆ ಆ ದಿನಗಳು ಬಲಿಪರನ್ನು ಕಂಗೆಡಿಸಿದ್ದುವು. ಗುರುವಿನಲ್ಲಿರುವ ಅಪಾರವಾದ ವಿಶ್ವಾಸವೇ ಗುರುವನ್ನು ಅಗಲಲಾಗದ ನೋವೇ—ಬಲಿಪರನ್ನು ನೆನವಿನ ದೂರಕ್ಕೆ ಒಯ್ಯುತ್ತಿದ್ದುವು. ಆ ಭೇಟಿಯಲ್ಲಿ ಕಣ್ಣೀರು ಸುರಿಸಿಯೇ ಬಲಿಪರು ಸಾಗಿದರು.........

ಆ ದಿನಗಳ ಮುಂದೆ, ಒಂದೆಡೆ ಬಯಲಾಟ. ಆಟವಾಗುತ್ತಿದ್ದಂತೆ, ಯಾರೋ ಬಂದು ಸುಬ್ರಾಯ ಶ್ಯಾನುಭಾಗರು ಇಹಲೋಕವನ್ನುಳಿದ ವಾರ್ತೆಯರುಹಿದರು. ಅಶ್ರುಭರಿತ ನೇತ್ರಗಳಲ್ಲಿಯೇ ಜಾಗಟೆಯನ್ನು ಕೆಳಗಿಟ್ಟು, ನೀರಲ್ಲಿ ಮುಳುಗಿ, ಗುರುವಿಗೆ ಶ್ರದ್ಧಾಂಜಲಿಯರ್ಪಿಸಿದರು. "ಗುರುದೇವೋಭವ" ಎಂಬ ಸೂಕ್ತಿಯನ್ನು ಶಿಷ್ಯಲೋಕದ ಅರಿವಿಗಾಗಿ ಬಲಿಪರು ಪಾಲಿಸಿದರು. ಗುರುವಿನ ಪೂರ್ಣಾನುಗ್ರಹಕ್ಕೆ ಪಾತ್ರರಾದ ಬಲಿಪರ ಜೀವನ ಕೃತಾರ್ಥವಲ್ಲದೆ ಇನ್ನೇನು? ಶಿಷ್ಯನಾಗಿ ಗುರುವಿನ ಮುಂದೆ

ನಿಲ್ಲಬೇಕಾದ ಕರ್ತವ್ಯಗಳನ್ನು ನೆರವೇರಿಸಿ – ಶಿಷ್ಯ ಧರ್ಮವನ್ನು ಪೂರ್ತಿಯಾಗಿಸಿದರು. ತನಗೆ ದೊರೆತ ರಾಜ್ಯ ಪ್ರಶಸ್ತಿಯ ಕಾಲದಲ್ಲಿ, ತನ್ನನ್ನು ಗೌರವಿಸಿದ ವಿವಿಧ ಸಂದರ್ಭಗಳಲ್ಲಿ ಶ್ರೀ ಬಲಿಪರು ತನ್ನ ಗುರುವನ್ನು ನೆನಸಿಕೊಳ್ಳುವ ಸಂದರ್ಭದಲ್ಲಿ; ಕೃತಜ್ಞತೆಯನ್ನು ಸಲ್ಲಿಸದ ಸಮಾರಂಭವಿಲ್ಲ, ಏಕೆಂದರೆ ಅವರದು ತುಂಬುಜೀವನ. ಗುರು ಅನುಗ್ರಹದಿಂದ ಬಲಿತ ಹೃದಯ; ಪಕ್ವವಾದ ಉದಾರವಾದ ಸಂಸ್ಕೃತಿ !

ಅಂತಿಮ ದಿನಗಳು!

ಕೂಡಲು ಮೇಳಕ್ಕೆ ಇದಿರಾಗಿ ಅವರೀವರೆಗೆ ಉದ್ಯಮಿಸಿಲ್ಲ, ತನ್ನ ಕೊನೆಯುಸಿರಿನ ವರೆಗೆ– ಕೂಡ್ಲು ಮೇಳದ ಉಜ್ವಲ ಭವಿಷ್ಯವನ್ನು ಚಿಂತಿಸಿದ್ದಾರೆ. ಮರಣದ ಕೊಂಚ ದಿನಗಳ ಮೊದಲು, ಶ್ರೀ ಗೋಪಾಲಕೃಷ್ಣನ ದಿವ್ಯಾನುಗ್ರಹದಿಂದ ಬೆಳಗುತ್ತಿರುವ ಕೂಡ್ಲು ಮೇಳದಲ್ಲಿ ತನ್ನ ಕೊನೆಯ ಸೇವೆಯನ್ನು ಸಲ್ಲಿಸಿ –ಮನದಿಚ್ಛೆಯನ್ನು ಪೂರೈಸಿದ್ದಾರೆ; ಶ್ರೀ ಗೋಪಾಲಕೃಷ್ಣನ ದಿವ್ಯ ದರ್ಶನವನ್ನು ಪಡೆದು, ತನ್ನ ತುಂಬು ಜೀವನವನ್ನು ಧನ್ಯವಾಗಿಸಿದ್ದಾರೆ.

ತನ್ನನ್ನು ರೂಪಿಸಿದ, ಕಲಾಕ್ಷೇತ್ರಕ್ಕೆ ಧಾರೆಯೆರೆದು ಅದೇ ಕೂಡ್ಲು ಮನೆಯಲ್ಲಿ, ಎಲ್ಲರೊಡನೆ ಬೆರೆತು ಮಾತನಾಡಿ, ಉಪಹಾರವನ್ನು ಕೈಕೊಂಡು, ಹೊರಟು ಹೋಗುವಾಗ ಆಡಿದ "ಇದು ನನ್ನ ಕೊನೆಯ ಸೇವೆ; ಇನ್ನು ನಾನೀ ಮೊದಲು ನಿಶ್ಚಯಿಸಿ, ನಡೆದು ಬಂದಂತೆ–ಸೇವೆಗೆ ಬರುವುದು ಖಂಡಿತ ವಿಲ್ಲ; ಏಕೋ –ಏನೋ ಹಾಗೆ ಹೇಳುತ್ತಾನೆ ಗೋಪಾಲಕೃಷ್ಣ; ಎಲ್ಲ ಅವನಿಚ್ಛೆ. ಈವರೆಗೂ ಹಾಗೆ. ನಾನು ನಿಮಿತ್ತ ಮಾತ್ರ !" ಈ ಮಾತನ್ನು ಯಾರೂ ಮರೆಯರು, ಈ ಮಾತನ್ನಾಡಿದ ಭಾಗವತರು ಮತ್ತೊಮ್ಮೆ ಕೂಡ್ಲಿಗೆ ಬರಲಿಲ್ಲ. ಆ ಮಾತಿನ 10–12 ದಿನಗಳೊಳಗೆ ಅವರು ತನ್ನ ಪಾರ್ಥಿವ ಶರೀರವನ್ನುಳಿದು ತೆರಳಿದರೆಂಬ ವಾರ್ತೆ ದೊರಕಿತು.

ಮಹೋನ್ನತ ಯಕ್ಷಗಾನ ಕಲಾವಿದ ಬಲಿಪ ನಾರಾಯಣ ಭಾಗವತರು ಇಹಲೋಕ ಯಾತ್ರೆ ಯನ್ನು ಮುಗಿಸಿದರು ನಿಜ! ಆದರೆ, ಕೀರ್ತಿ ಮಾತ್ರ ಅಚ್ಚಳಿಯದೆ ಕಲಾಕ್ಷೇತ್ರದಲ್ಲಿದೆ. ಅದೆಂದೂ ಮಾಯವಾಗದು. ಮಾಯವಾಗದ ರೇಖೆಯದು.

ಆತ್ಮ ನಿವೇದನೆ

ಇದೇ ಮನೆಯಲ್ಲಿ ಜನಿಸಿ, ಈ ಪರಂಪರೆಯ ನೆರಳಲ್ಲಿ ಕಲೆಯ ಸೇವೆಯನ್ನು ಮಾಡುವ ಭಾಗ್ಯವನ್ನು ಹೊಂದಿದ ನನಗೆ— ಈ ಕಲಾವಿದರ, ಈ ರಸಋಷಿಯ ಅತುಲ ಪ್ರೀತಿಯನ್ನು ಗಳಿಸುವ ಅವಕಾಶ ದೊರಕಿದುದು ಅಭಿಮಾನವೆನಿಸಿದೆ. ಶ್ರೀ ಬಲಿಪರಿಗೆ—ಅದೇಕೋ ನನ್ನಲ್ಲಿ ಬಹು ಮಮತೆ, ತುಂಬ ಸಲುಗೆ. ಅವರಿರಿಸಿದ ಅಪಾರ ವಿಶ್ವಾಸವು ಈ ಸೇವೆಯನ್ನು ಮಾಡುವಲ್ಲಿ ನನ್ನನ್ನು ಪ್ರೋತ್ಸಾ ಹಿಸಿತು—ಎಂದರೆ ತಪ್ಪಾಗಲಾರದು. ಕಲಾವಿದರವರ ತುಂಬು ಜೀವನವನ್ನು ಕಣ್–ಮುಟ್ಟ ಕಾಣುವ, ಮನದಣಿಯೆ ಕಂಡು ಅಭಿಮಾನಿಸುವ ಅವಕಾಶ ನನಗೆ ದೊರಕಿದೆ, -- ಎಂಬುದೆ ನನಗಿರುವ ಆನಂದ...

ಕಲಾಕ್ಷೇತ್ರದ– ಯಕ್ಷಗಾನದ ಮಧುರೋದ್ಯಾನದಲ್ಲಿ ಬಹುಕಾಲ ಸಂಚಾರವೆಸಗಿ, ಮನ ದೊಂದಿಗೆ ಶರೀರ, ಶರೀರದೊಂದಿಗೆ—ಸಂಸ್ಕಾರ ಇವನ್ನು ಪುನೀತವಾಗಿಸಿದ ಆ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾರೈಸುವೆ.

ಪೂಜ್ಯಶ್ರೀ ಬಲಿಪ ನಾರಾಯಣ ಭಾಗವತರೊಡನೆ ರಸನಿಮಿಷ

ಶ್ರೀ ಯು. ವಿ. ನಾೈಕ್

ನಾನು 1954ರಲ್ಲಿ ಶ್ರೀ ಗಣಪತಿ ಪ್ರತಾಪ ಎಂಬ ಯಕ್ಷಗಾನ ಪ್ರಸಂಗ ಬರೆಯುವಾಗ ಜಿಲ್ಲೆಯ ಖ್ಯಾತ ಭಾಗವತರೂ - ಯಕ್ಷಗಾನ ಸನಾತನಿಗಳೂ - ತೀಕ್ಷ್ಣ ವಿಮರ್ಶಕರೂ ಆದ ಶ್ರೀ ಬಲಿಪ ನಾರಾಯಣ ಭಾಗವತರನ್ನು ಭೇಟಿಯಾಗಿ ಕೆಲವು ಸಂದೇಹಗಳನ್ನು ನಿವೃತ್ತಿ ಮಾಡಿಕೊಳ್ಳಬೇಕೆಂದು ಅವರ ಅನ್ವೇಷಣೆಗೆ ಆರಂಭಿಸಿದೆ.

ಖ್ಯಾತ ಭಾಗವತರೆಂದಾದ ಮೇಲೆ ಅವರ ಭೇಟಿ ನಿರೀಕ್ಷಿಸಿದಷ್ಟು ಸುಲಭವಿಲ್ಲವೆಂಮ ಆ ಬಳಿಕ ನನಗೆ ಗೊತ್ತಾಯಿತು. ಹೇಗೂ ಒಂದುವರೆ ತಿಂಗಳ ನಂತರ ವಿಟ್ಲದ ಒಂದು ಕೋಣೆಯಲ್ಲಿ ನಮ್ಮ ಮೊಕ್ತ ಮಾತುಕತೆಗಳು ನಡೆದವು.

"ಯಕ್ಷಗಾನ ಪ್ರಸಂಗ ರಚನೆಯ ಕುರಿತು ತಮ್ಮ ಅಭಿಪ್ರಾಯವನ್ನು ಕೇಳಲು ಬಂದವನು ನಾನು, ಉಜ್ರೆಯ ನಿವಾಸಿ. ಕೆಲವು ಯಕ್ಷಗಾನ ಪ್ರಸಂಗಗಳ ಕವಿ. ತಮ್ಮನ್ನು ದಶಾವತಾರ ಆಟದ ಬಯಲಾಟಗಳಲ್ಲಿ ಕಂಡ ಪರಿಚಯ - ತಮ್ಮ ಅಗಾಧ ಪಾಂಡಿತ್ಯದತ್ತ ಲಕ್ಷಿಸಿ - ಆ ಯಕ್ಷಗಾನದ ಕುರಿತು ಸ್ವಲ್ಪ ವಿಚಾರ ವಿನಿಮಯ ಮಾಡಲು ಬಂದಿರುವೆನು" ಎಂದೆ.

ಆಗ ಭಾಗವತರು ನಗುತ್ತಾ "ಸಂಗೀತದಂತೆ ವಿಜ್ಞಾನ ಮಯವಾದ ಕಲೆ ಇದಲ್ಲ. ಇದೊಂದು ಜನಜೀವನದಲ್ಲಿ ಹಾಸು ಹೊಕ್ಕಾಗಿ ಮನರಂಜನೆಗಾಗಿ ಮಾತ್ರ ಹರಡಿರುವ ಗ್ರಾಮ್ಯ ಜಾನಪದಕಲೆ - ಇದರಲ್ಲಿ ನಾನು ಕಂಡುಕೊಂಡಂತೆ ಮತ್ಸರ ಜಾಸ್ತಿ. ತಿಳಿದವರಿಗೆ ಗರ್ವ, ಹೇಳಿ ಕೊಡಬೇಕೆಂದು ಉತ್ಸಾಹದಿಂದ ಬಳಿಸಾರಿ ಸೇವಿಸಿದರೂ, ಪೀಡಿಸಿದರೂ ಸಾಕಷ್ಟು ಹೇಳಿಕೊಟ್ಟು ಶಿಷ್ಯರನ್ನು ಬುದ್ಧಿವಂತ ರಾಗಿ ಮಾಡೋಣ ಎಂಬ ಉದಾರತೆಯಿಲ್ಲ. ಎಲ್ಲಾ ಒಣಜಂಭ, ಕೆಲವರಿಗೆ ಕಲೆಯಲ್ಲಿ ಪರಿಣತಿಯಿಲ್ಲ ದಿದ್ದರೂ ತುಂಬಾ ತಿಳಿದವರಂತೆ ಹೆಮ್ಮೆ. ವಿದ್ಯಾವಂತರ ಸಂಪರ್ಕ ಕಡಿಮೆ ಪಂಡಿತರ ಕೈವಾಡ ವಿರಳ. ಆದುದರಿಂದ ಈ ಕಲೆಯು ಗ್ರಾಮೀಣ ಸಾಮಾನ್ಯ ಜನತೆಯ ಮನೋರಂಜನೆಯ ಸಾಧನವಾಗಲು ಕಾರಣವಾಗಿದೆ ಎಂದು ನಾನು ಊಹಿಸುತ್ತೇನೆ ಎಂದರು.

ಆಗ ನಾನು "ಹಳೆ ಪ್ರಸಂಗಗಳೂ ಛಂದಸ್ಸಿಗೆ ಸರಿಯಾಗಿಲ್ಲ - ಕೆಲವು ತಪ್ಪು ಕಂದಪದ್ಯ ಗಳಿವೆ. ರಾಗ ಛಾಯೆ - ಲಕ್ಷಣಗಳು ವಿವಿಧ ರೀತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಹಲವಾರು ಪ್ರಸಂಗ ಗಳನ್ನು ನೋಡಿ ವಿಮರ್ಶಿಸಿದರೂ ಸಮಾನತೆಯಿಲ್ಲ - ಇದೆಲ್ಲಾ ಕೊರತೆಯಲ್ಲವೇ ? ಎಂದೆ.

ಅದಕ್ಕೆ ಅವರು ತಲೆಯಾಡಿಸುತ್ತಾ "ಹೌದದು. ಆದರೆ ಹಳಬರು ಅಷ್ಟಾದರೂ ಸೇವೆ ಮಾಡಿದ್ದಾರಲ್ಲಾ, ಸ್ವಲ್ಪ ತಪ್ಪುಗಳಿರಬಹುದು. ಅವರು ಪಾಂಡಿತ್ಯದಿಂದ ಬರೆದ ಪ್ರಸಂಗಗಳು ಅವಲ್ಲ.

ಅವೆಲ್ಲಾ ಕಲೆಯ ಮೇಲಿನ ಅತೀವ ವಾತ್ಸಲ್ಯದಿಂದ - ಅನುಪಮ ಪ್ರೇಮದಿಂದ ಬರೆದು ಗೀಚಿದ ಕಬ್ಬಗಳು. ಅಷ್ಟಾದರೂ ಬರೆದು ಕಲಾಸೇವೆ ಮಾಡಿದ - ಸನಾತನ ಪುರಾಣಗಳನ್ನು ಪ್ರಚಾರಪಡಿಸಿದ ಆ ಪುಣ್ಯಾತ್ಮರು ಅಷ್ಟಾದರೂ ನಮಗೆ ಮಾರ್ಗದರ್ಶನ ಮಾಡಿದ್ದಾರಲ್ಲಾ. ಅದಕ್ಕಾಗಿ ಅವರನ್ನು ಸದಾ ನೆನೆಯಬೇಕು" ಎಂದರು.

ನನ್ನ ಗಣಪತಿ ಪ್ರತಾಪ ಪ್ರಸಂಗ ತೋರಿಸಿದೆ, ಓದಿನೋಡಿ ಕೆಲವು ಸಲಹೆಗಳನ್ನು ನೀಡುತ್ತಾ ತಾವು ಬರೆದ "ಅಹಲ್ಯಾ ಶಾಪ" ಎಂಬ ಹಸ್ತಪ್ರತಿಯನ್ನು ಓದಿಹೇಳುತ್ತಾ "ನೋಡಿ - ಯಾವ ಪ್ರಸಂಗವನ್ನು ಬೇಕಾದರೂ ಬರೆಯಿರಿ. ಛಂದಸ್ಸಿಗೆ ಸ್ವಲ್ಪ ಕೊರತೆಯಾದರೂ ಆಗಲಿ - ಭಾವ ಚೆನ್ನಾಗಿರಬೇಕು. ಜನತೆಗೆ ಉತ್ತಮ ಭಕ್ತಿ - ಹಿರಿಯರಲ್ಲಿ ಆದರ - ಆದರ್ಶ ಪ್ರೇಮ, ಗುಣ ನಡತೆಗಳನ್ನು ಅನುಕರಿಸಿಕೊಳ್ಳಲು ಅನುಕೂಲವಾಗುವಂತಹ ನವರಸಭರಿತವಾದ ಪುರಾಣಾಂತರ್ಗತ ಸಾಹಿತ್ಯವನ್ನೇ ನಿರ್ಮಾಣ ಮಾಡಲು ಮುಂದಾಗಿರಿ ನಿಮಗೆ ನನ್ನ ಆಶೀರ್ವಾದ" ಎಂದರು.

ಅಲ್ಲಿಂದ ಮುಂದೆ ನಾನವರನ್ನು ಕಂಡುದು ಕಡಿದುದ್ಯಾವರ ಗ್ರಾಮದ ಆಲಂದಡ್ಕ ಶ್ರೀ ರಾಮಕೃಷ್ಣ ಪ್ರಭುಗಳ ಮನೆಯಲ್ಲಿ ಜರಗಿದ ಚೌತಿಯ ಯಕ್ಷಗಾನ ತಾಳಮದ್ದಳೆಯಂದು. ಬಹುಶಃ 1963ರಲ್ಲಿ ಎಂದು ನೆನೆಸುತ್ತೇನೆ. ಆಗ ವಂದಿಸಿ ಉಪಕಾರ ಸ್ಮರಣೆ ಮಾಡುವಾಗ "ಇದು ನನ್ನ ಕೊನೆಯ ಭಾಗವತಿಕೆ ನ್ಯಾಕರೇ, ಇನ್ನು ನನ್ನ ಸೇವೆ ಬಹುಕಾಲವಿಲ್ಲ" ಎಂದು ಹೇಳಿದ ಮಾತು ಈಗ ನೆನೆಯುತ್ತಾ...

ಆ ಮಹಾನುಭಾವರು ನಾವು ಅಭ್ಯಾಸಮಾಡಿ ಆನಂದ ಹೊಂದುವ ಕಲೆಯಲ್ಲಿ ಬಹುಕಾಲ ಸೇವೆಮಾಡಿ, ನಮಗೆಲ್ಲಾ ಆದರ್ಶರಾಗಿ ಜೀವನ ಸಾಗಿಸಿದ್ದಕ್ಕೆ, ಅವರ ಆತ್ಮವು ಅಮರವಾಗಿ ಸದಾ ಕಾಲ ಅಪ್ರತ್ಯಕ್ಷವಾಗಿದ್ದು ನಮಗೆ ಚೇತನ ನೀಡಿ ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

ಹಾಡುತ್ತಿರುವಾಗಲೇ ಉಸಿರು ನಿಂತರೆ ಅದೇ ಪರಮಭಾಗ್ಯ

ಶ್ರೀ ಸಾಯ ಕೃಷ್ಣ ಭಟ್ಟ

ಯಕ್ಷಗಾನದ ಹುಚ್ಚ

ಸುಮಾರು ಇಪ್ಪತ್ತು - ಇಪ್ಪತ್ತೈದು ವರ್ಷಗಳ ಹಿಂದೆ ಒಂದು ದಿನ ನಾನು ನಮ್ಮ 'ಸಾಯ' ಮನೆಯಿಂದ ಅಡ್ಯನಡ್ಕಕ್ಕೆ ಹೋಗುತ್ತಿದ್ದಾಗ ಮಾರ್ಗದ ಬದಿಯ ಗೋಳಿ ಮರದ ಕಟ್ಟೆಯಲ್ಲಿ ಏಕಾಕಿಯಾಗಿ ಕುಳಿತ ಒಬ್ಬ ವ್ಯಕ್ತಿಯು ಯಕ್ಷಗಾನ ಪದ್ಯಗಳನ್ನು ಇಂಪಾಗಿ ಹಾಡುತ್ತಿರುವುದನ್ನು ಕಂಡೆ. ಈ ವಿಚಿತ್ರ ವ್ಯಕ್ತಿ ಯಾರಾಗಿರಬಹುದೆಂದು ನನಗೆ ಆಶ್ಚರ್ಯವಾಯಿತು. ಹತ್ತಿರ ಹೋಗಿ ಸ್ವಲ್ಪ ಹೊತ್ತು ಆಲಿಸುತ್ತ ನಿಂತುಕೊಂಡೆ. ಪೂರ್ವವಯಸ್ಸು ಮೀರಿ ವೃದ್ಧಾಪ್ಯ ಬಂದಿದ್ದರೂ ತೇಜಸ್ಸಿನಿಂದ ಕೂಡಿದ ಮುಖಮುದ್ರೆ. ಹೊಳೆಯುವ ಕಣ್ಣುಗಳು, ಅಚ್ಚುಕಟ್ಟಾದ ಮೈಕಟ್ಟು, ನೋಡಿದಾಗಲೇ ಎಂಥವನನ್ನಾದರೂ ಆಕರ್ಷಿಸುವಂತಹ ಭವ್ಯವಾದ ಆಕೃತಿ. ನಾನು ಬಳಿಯಲ್ಲಿ ನಿಂತುದನ್ನು ನೋಡಿ ಅವರಾಗಿಯೇ ನನ್ನನ್ನು ಮಾತನಾಡಿಸಿದರು.

"ಯಾರಿವನು ಹುಚ್ಚು ಮನುಷ್ಯ? ಒಬ್ಬನೇ ಕುಳಿತು ಹಾಡುತ್ತಿದ್ದಾನಲ್ಲ; ಇವನಿಗೇನಾಗಿದೆ ಎಂದು ಆಶ್ಚರ್ಯಪಡುತ್ತೀರೋ? ಹಾಗೇನೂ ಇಲ್ಲ. ನಾನೊಬ್ಬ ಹುಚ್ಚ ಹುಚ್ಚನೆ, ಆದರೆ ಯಕ್ಷಗಾನದ ಹುಚ್ಚ. ಬಲಿಪ ಭಾಗವತ ಎಂದರೆ ನಾನೇ. ಪದ್ಯಗಳನ್ನು ಸರಿಯಾಗಿ ಹಾಡುವ ಕ್ರಮವನ್ನು ಅಭ್ಯಾಸ ಮಾಡುತ್ತಿದ್ದೇನೆ ಅಷ್ಟೆ."

ಬಲಿಪ ನಾರಾಯಣ ಭಾಗವತರ ಹೆಸರನ್ನೂ ಕೀರ್ತಿಯನ್ನೂ ಈ ಮೊದಲೇ ನಾನು ತುಂಬ ಕೇಳಿದ್ದೆ. ಆದರೆ ವ್ಯಕ್ತಿಯನ್ನು ಪ್ರತ್ಯಕ್ಷ ಕಂಡಿರಲಿಲ್ಲ. ಅವರ ಮಾತು ಕೇಳಿ ನನಗೆ ತುಂಬ ಆಶ್ಚರ್ಯವೂ ಸಂತೋಷವೂ ಆಯಿತು. ಅಡ್ಯನಡ್ಕಕ್ಕೆ ಹೋಗುವ ಕೆಲಸವನ್ನು ಅಲ್ಲೇ ಮರೆತು ಅವರನ್ನು ಒತ್ತಾಯಿಸಿ ಮನೆಗೆ ಕರೆದುಕೊಂಡು ಹೋದೆ. ಕಾಫಿ, ಊಟ ವಿಶ್ರಾಂತಿಗಳಿಗೆ ವ್ಯವಸ್ಥೆಮಾಡಿ ಸಂಜೆಯ ತನಕ ಗೌರವದಿಂದ ಉಪಚರಿಸಿದೆ. ಸಾಯಂಕಾಲವಾಗುತ್ತಲೇ ಅವರು ಅಂದಿನ ಬಯಲಾಟ ನಡೆಯುವ ರಂಗಸ್ಥಳದತ್ತ ಹೊರಟು ಹೋದರು.

ಹೀಗೆ ವಿಚಿತ್ರ ರೀತಿಯಲ್ಲಿ ನನ್ನ ಮತ್ತು ಬಲಿಪರ ಪ್ರಥಮ ಭೇಟಿ ಮತ್ತು ಪರಿಚಯ ಪ್ರಾರಂಭವಾಯಿತು. ವಯಸ್ಸಿನಲ್ಲಿ ತುಂಬ ಹಿರಿಯರಾಗಿದ್ದ ಅವರ ದೃಷ್ಟಿಯಲ್ಲಿ ನಾನೊಬ್ಬ 'ಮಾಣಿ' ಯೇ ಆಗಿದ್ದರೂ ಅವರೇಕೋ ಕಂಡಾಗಲೆಲ್ಲ ನನ್ನನ್ನು 'ಯಜಮಾನರೇ' ಎಂದೇ ಸಂಬೋಧಿಸುತ್ತಿ

ದ್ದರು. ನಾನೂ ಕೂಡ ಅತ್ಯಂತ ಆತ್ಮೀಯತೆಯಿಂದ ಅವರನ್ನು "ಅಜ್ಜರೇ" ಎಂದೇ ಕರೆಯುತ್ತಿದ್ದೆ. ಅಂದಿನಿಂದ ಆರಂಭವಾದ ನನ್ನ - ಅವರ ಪರಿಚಯ, ಸ್ನೇಹ, ದಿನದಿಂದ ದಿನಕ್ಕೆ ಗಾಢವಾಗುತ್ತ ಅವರು ಕೊನೆಯುಸಿರನ್ನು ಎಳೆಯುವ ತನಕ ಸ್ಥಿರವಾಗಿಯೇ ಉಳಿದಿತ್ತು.

ಯಕ್ಷಗಾನದಲ್ಲಿ ಆಸಕ್ತಿ ಉಂಟಾಯಿತು

ಎಳೆಯ ವಯಸ್ಸಿನಲ್ಲಿ ನನಗೆ ಯಕ್ಷಗಾನದಲ್ಲಿ ವಿಶೇಷ ಆಸಕ್ತಿಯಾಗಲಿ ಅಭಿರುಚಿಯಾಗಲಿ ಇರಲಿಲ್ಲ. ಊರಿನ ನಿರುದ್ಯೋಗಿಗಳಿಗೆ ಅದೊಂದು ಕಾಲಕ್ಷೇಪದ ಹವ್ಯಾಸ ಎಂಬ ಅಸಡ್ಡೆಯಿಂದಲೇ ನಾನು ಅದನ್ನು ಕಾಣುತ್ತಿದ್ದೆ. ಆದರೆ ಬಲಿಪರ ಪರಿಚಯವಾದ ಮೇಲೆ, ಒಂದೆರಡು ಬಾರಿ ಅವರ ಇಂಪಾದ ಹಾಡುಗಾರಿಕೆಯನ್ನು ಕೇಳಿದ ಮೇಲೆ ನಾನು ತನ್ನಷ್ಟಕ್ಕೆ ಆ ಕಲೆಯ ಕಡೆಗೆ ಆಕರ್ಷಿಸಲ್ಪಟ್ಟೆ. ಕೆಲವು ಕಡೆ ನಮ್ಮ ಸಮೀಪದ ಪರಿಚಯದವರಲ್ಲಿ ತಾಳಮದ್ದಳೆ ಕೂಟಗಳು ನಡೆಯುವಾಗ ಸಣ್ಣ ಸಣ್ಣ ಪಾತ್ರಗಳನ್ನು ಸ್ವೀಕರಿಸಿ ಅರ್ಥ ಹೇಳುವ ಚಾಪಲ್ಯ ಉಂಟಾಗುವಷ್ಟೂ ಈ ಅಭಿರುಚಿ ಬೆಳೆಯಿತು. ಯಕ್ಷಗಾನರಂಗವನ್ನು ಪ್ರವೇಶಿಸುವ ಹೊಸ ಕಲಾವಿದರನ್ನು ಬಲಿಪರು ವಿಶೇಷ ಆದರದಿಂದ ಪ್ರೋತ್ಸಾಹಿಸುತ್ತಿದ್ದರು. ಎಂತಹ ಅನುಭವವಿಲ್ಲದ ಅರ್ಥಧಾರಿಯಾದರೂ ಅವನಿಗೆ ತಿಳಿಯುವಂತೆ ಪದ್ಯವನ್ನು ಸ್ಫುಟವಾಗಿ, ಶಬ್ದಗಳನ್ನು ಸರಿಯಾಗಿ ವಿಂಗಡಿಸಿ ಎರಡು ಮೂರು ಸಲ ಹಾಡಿ ಅವನು ನಾಲ್ಕು ಮಾತುಗಳ ಅರ್ಥ ಹೇಳುವಂತೆ ಮಾಡುತ್ತಿದ್ದರು. ಹೆಚ್ಚು ಕಡಿಮೆಯಾದರೆ ಕೂಡಲೇ ತಿದ್ದಿ, ಸರಿಪಡಿಸಿ ಹಾಗಲ್ಲ ಹೀಗೆ ಎಂದು ಹೇಳಿಕೊಡುತ್ತಿದ್ದರು.

ನನಗೂ ಯಕ್ಷಗಾನದಲ್ಲಿ ಅಭಿರುಚಿ ಉಂಟಾಗಿದೆ ಎಂಬ ವಿಚಾರ ತಿಳಿದ ಬಳಿಕ ನಮ್ಮ ಮನೆಗೆ ಅನೇಕ ಮಂದಿ ಯಕ್ಷಗಾನ ಕಲಾವಿದರು, ಭಾಗವತರು, ಮೃದಂಗ - ಚೆಂಡೆವಾದಕರು, ಅರ್ಥಧಾರಿಗಳು ಹೆಚ್ಚಾಗಿ ಬರತೊಡಗಿದರು. ಹಲವರನ್ನು ನಾನು ಆಮಂತ್ರಿಸಿ ಕರೆಸುತ್ತಲೂ ಇದ್ದೆ. ಹಾಗೆ ಬಂದವರನ್ನು ನನ್ನಿಂದ ಸಾಧ್ಯವಾಗುವ ಮಟ್ಟಿಗೆ ವಿಶೇಷ ಗೌರವದಿಂದಲೇ ಆದರಿಸುತ್ತಿದ್ದೆ. ಹೀಗಾಗಿ ನಮ್ಮ ಮನೆಯಲ್ಲಿ, ನಮ್ಮ ಸಾಯ ಶ್ರೀ ದುರ್ಗಾಪರಮೇಶ್ವರೀ ಮಠದಲ್ಲಿ ಹಲವು ಯಕ್ಷಗಾನ ಕೂಟಗಳು ಜರಗಿದವು.

ಮಠದಲ್ಲಿ ಕರ್ಣಪರ್ವ

ನಮ್ಮ ಶ್ರೀ ದುರ್ಗಾಪರಮೇಶ್ವರೀ ಮಠದಲ್ಲಿ ಪ್ರತಿ ವರ್ಷವೂ ನವರಾತ್ರಿಯ ಒಂಭತ್ತು ದಿನಗಳಲ್ಲಿ ವಿಶೇಷ ಪೂಜೆ, ಸಂತರ್ಪಣೆ ಇತ್ಯಾದಿಗಳು ನಡೆಯುವ ವಾಡಿಕೆ. ಆಗ ನಮ್ಮ ಬಂಧುಗಳೂ ಅತಿಥಿ ಅಭ್ಯಾಗತರೂ ಪ್ರತಿದಿನವೂ ಮಠದಲ್ಲಿ ಬಂದು ಸೇರುತ್ತಾರೆ. ಈ ಸಂದರ್ಭದಲ್ಲಿ ಪುರಾಣ ವಾಚನ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನೂ ಏರ್ಪಡಿಸುವುದಿದೆ.

೧೯೪೭ನೇ ಇಸವಿಯಲ್ಲಿ ಹಲವು ಮಿತ್ರರ ಅಪೇಕ್ಷೆಯಂತೆ ಮೊದಲ ಬಾರಿಗೆ ಶ್ರೀ ಬಲಿಪ ನಾರಾಯಣ ಭಾಗವತರನ್ನು ಕರೆಸಿ ಒಂದು ಯಕ್ಷಗಾನ ಕೂಟವನ್ನು ಏರ್ಪಡಿಸಿದೆವು. "ಕರ್ಣಪರ್ವ" ಪ್ರಸಂಗವನ್ನು ಆರಿಸಲಾಗಿತ್ತು. ಹೆಸರಾಂತ ಅರ್ಥಧಾರಿಗಳು ಯಾರೂ ಅಂದು ವಿಶೇಷವಾಗಿ ಇರಲಿಲ್ಲ. ಆದರೂ ಬೆಳಗಿನ ತನಕ ಯಕ್ಷಗಾನ ಕೂಟವು ಅತ್ಯಂತ ಆಕರ್ಷಕ ರೀತಿಯಲ್ಲಿ ಜರಗಿತು. ಇದಕ್ಕೆ ಬಲಿಪ

ಭಾಗವತರ ಹಾಡುಗಾರಿಕೆಯೇ ಪ್ರಧಾನ ಕಾರಣವಾಗಿತ್ತು. ಕರ್ಣನು ಸೇನಾಪತಿಯಾಗಿ ಶಲ್ಯನ ಸಾರಥ್ಯವನ್ನುಪಡೆದು ಯುದ್ಧಭೂಮಿಯನ್ನು ಪ್ರವೇಶಿಸಿ ವೀರವಾಣಿಯನ್ನು ಆಡುವ ವೀರರಸದ ಪದ್ಯಗಳನ್ನು ಬಲಿಪರು ಹಾಡಿದಾಗ ಅರ್ಥಧಾರಿಯ ಅರ್ಥವಿವರಣೆ ಇಲ್ಲದಿದ್ದರೂ ಶ್ರೋತೃಗಳಲ್ಲಿ ವೀರರಸವು ತಾನಾಗಿ ಉಕ್ಕಿ ಹರಿಯುತ್ತದೆ. ಹಾಗೆಯೇ ಮುಂದೆ ಶಲ್ಯನು ಸಾರಥ್ಯವನ್ನು ತೊರೆದು ತೆರಳಿದ ಮೇಲೆ ಕರ್ಣನಿಗೆ ಉಂಟಾದ ದುಃಸ್ಥಿತಿಯನ್ನು ಚಿತ್ರಿಸುವ ಕರುಣಾರಸದ ಪದ್ಯಗಳನ್ನು ಅವರು ಹಾಡಿದಾಗ ಕೇಳುವವರ ಕಣ್ಣುಗಳಿಂದ ಕಣ್ಣೀರು ತಾನಾಗಿ ಮಿಡಿಯುತ್ತದೆ. ಈ ಯಕ್ಷಗಾನ ಕೂಟದ ಪರಿಣಾಮದಿಂದಲೋ ಏನೋ ಆ ವರ್ಷದಿಂದ ೧೯೬೬ರ ತನಕ ಪ್ರತಿವರ್ಷವೂ ನವರಾತ್ರಿಯ ಸಂದರ್ಭದಲ್ಲಿ ಒಂದಾದರೂ ಯಕ್ಷಗಾನಕೂಟವು ತಪ್ಪದೆ ನಡೆದು ಬಂದಿದೆ. ಕೆಲವು ವರ್ಷಗಳಲ್ಲಿ ಒಂದಕ್ಕಿಂತ ಹೆಚ್ಚು ತಾಳಮದ್ದಳೆಗಳಾದದ್ದೂ ಉಂಟು. ಬಲಿಪ ಭಾಗವತರೂ ಅವಕಾಶವಿದ್ದಾಗಲೆಲ್ಲ ಬಂದು ಭಾಗವಹಿಸುತ್ತಿದ್ದರು.

'ಕಲೆಗೆ ಅಪಚಾರ ಮಾಡಲಾರೆ'

ಇದರೆಡೆಯಲ್ಲಿ ನಾಲ್ಕು ವರ್ಷಗಳ ಹಿಂದೆ ಒಂದು ಸಲ ಬಲಿಪರನ್ನೇ ಕರೆಸಿ ಒಂದು ತಾಳಮದ್ದಳೆ ಆಗಬೇಕೆಂದು ನಿಶ್ಚಯಿಸಿ ಅವರನ್ನು ಆಮಂತ್ರಿಸಿದೆವು. ತಮಗೆ ತೀವ್ರವಾದ ಜ್ವರ ಬರುತ್ತಿದ್ದರೂ ಲೆಕ್ಕಿಸದೆ ನಮ್ಮ ಹೇಳಿಕೆ ಸಿಕ್ಕಿದೊಡನೆಯೇ ಅವರು ಮನೆಗೆ ಬಂದರು. ರಾತ್ರಿ ಊಟವನ್ನೂ ಮಾಡಲಿಲ್ಲ. ಅಂದಿನ ಕೂಟದಲ್ಲಿ ಪದ್ಯ ಹಾಡುವ ಸ್ಥಿತಿಯಲ್ಲಿ ಅವರಿರಲಿಲ್ಲ. ಹಾಗಾಗಿ ಒಂದು ಲೋಟ ಬಿಸಿ ಕಾಫಿಯನ್ನೂ ಎರಡು ಕಂಬಳಿಗಳನ್ನೂ ಕೊಟ್ಟು "ಅಜ್ಜರೇ, ನೀವು ಸ್ವಸ್ಥ ಮಲಗಿ ವಿಶ್ರಾಂತಿ ಪಡೆಯಿರಿ. ನಮ್ಮ ಭಾಗವತರು ಸರವು ಕೃಷ್ಣ ಭಟ್ಟರು ಬಂದಿದ್ದಾರೆ. ತಾಳಮದ್ದಳೆಯನ್ನು ನಾವು ಹೇಗಾದರೂ ನಿರ್ವಹಿಸುತ್ತೇವೆ–" ಎಂದು ಹೇಳಿ ನಾವೆಲ್ಲ ಮಠಕ್ಕೆ ಹೋದೆವು. ಅಂದು ಬಲಿಪರ ಹಾಡುಗಾರಿಕೆ ಇಲ್ಲವಲ್ಲ ಎಂಬ ಬೇಸರವಿದ್ದರೂ, ಅಸ್ವಸ್ಥರಾಗಿದ್ದರೂ ನಮ್ಮ ಮೇಲಿನ ಪ್ರೀತಿಯಿಂದ ಬಂದರಲ್ಲ ಎಂಬ ಅಭಿಮಾನವೂ ತೃಪ್ತಿಯೂ ನನಗಿತ್ತು.

ಮಠದಲ್ಲಿ ಪೂಜೆ, ಪ್ರಸಾದ ವಿತರಣೆ ಮುಂತಾದ ವಿಧಿಗಳನ್ನೆಲ್ಲ ಪೂರಯಿಸಿ ಸುಮಾರು ಒಂದು ಗಂಟೆಯ ಬಳಿಕ ನಾವೆಲ್ಲ ತಾಳಮದ್ದಳೆಗೆ ಸಿದ್ಧರಾಗಿ ಸಭೆಸೇರಿ ಕುಳಿತುಕೊಂಡೆವು. ಅಷ್ಟರಲ್ಲಿ ಸುಮಾರು ೧೦೩ ಡಿಗ್ರಿಯಷ್ಟು ಜ್ವರದಿಂದ ಮನೆಯಲ್ಲಿ ಮಲಗಿದ್ದ ಬಲಿಪರು ಎದ್ದು ಬಂದು ಮೆಲ್ಲನೆ ನಡುಗುತ್ತ ಸಭೆಯ ಮುಂದೆ ಪ್ರತ್ಯಕ್ಷರಾದರು. ನೋಡಿದ ನಮಗೆಲ್ಲ ಆಶ್ಚರ್ಯವಾಯಿತು. ಬಹುಶಃ ಮನೆಯಲ್ಲಿ ಒಬ್ಬರೇ ಮಲಗಿರುವುದಕ್ಕೆ ಬೇಸರಪಟ್ಟು, ಸಭೆಯ ಹತ್ತಿರದಲ್ಲಿ ಕುಳಿತು ವಿಶ್ರಮಿಸೋಣ ಎಂದು ಬಂದಿರಬಹುದೆಂದು ಭಾವಿಸಿ ನಾನು ಕೂಡಲೇ ಅವರಿಗೆ ಚಾಪೆ–ತಲೆದಿಂಬುಗಳನ್ನು ಕೊಟ್ಟು "ಇಲ್ಲಿ ಮಲಕ್ಕೊಳ್ಳಿ ಅಜ್ಜರೇ" ಎಂದು ಹೇಳಿದೆ. ಆಗ ಅವರು ನೇರವಾಗಿ ಭಾಗವತರ ಸ್ಥಾನದಲ್ಲೇ ಬಂದು ಕುಳಿತು ಪ್ರಯಾಸದಿಂದ ನಗುತ್ತ ಹೇಳಿದ ಮಾತು ಇಂದಿಗೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. "ಶ್ರೀ ದೇವಿಯ ಸನ್ನಿಧಿಯಲ್ಲಿ ಹಾಡಬೇಕೆಂದು ನೀವು ನನ್ನನ್ನು ಆಮಂತ್ರಿಸಿದ್ದೀರಿ. ಈ ಜ್ವರದ ನೆಪದಿಂದ ನಾನು ನನ್ನ ಕರ್ತವ್ಯವನ್ನು ಮಾಡದಿರಲು ಸಾಧ್ಯವೇ ? ಬಹುಶಃ ನನ್ನ ಕರ್ತವ್ಯನಿಷ್ಠೆಯನ್ನು ದೇವರು ಪರೀಕ್ಷಿಸುತ್ತಿರಬಹುದು. ಒಂದು ವೇಳೆ ಜ್ವರ ಜೋರಾಗಿ ನಾನು ಜಾಗಟೆಯನ್ನು ಕೈಯಲ್ಲಿ ಹಿಡಿದು ಹಾಡುತ್ತಿರುವಾಗಲೇ ಈ ಉಸಿರು ನಿಂತು ಹೋದರೆ ಅದರಷ್ಟು ದೊಡ್ಡ ಭಾಗ್ಯ ಇನ್ನಾವುದು ? ಕಲೆಗೆ ಅಪಚಾರ ಮಾಡಲು ಸಾಧ್ಯವಿಲ್ಲ. ಈ ದಿನದ ಮಟ್ಟಿಗೆ ಭಾಗವತ ನಾನೇ".

ಅಂದು "ಇಂದ್ರಜಿತು ಕಾಳಗ" ಪ್ರಸಂಗವನ್ನು ಆರಿಸಲಾಗಿತ್ತು. ಮೊದಲಿನಿಂದ ಕೊನೆಯ ತನಕ ಜ್ವರದ ಸ್ಪರ್ಶ ಕೂಡ ಇಲ್ಲದವರಂತೆ ರಸವತ್ತಾಗಿ ಹಾಡಿದರು. ಹೇಗೆ ಹಾಡಿದರೋ ಅದು ಅವರಿಗೇ ಗೊತ್ತು.

ಮರುದಿನ ಮಧ್ಯಾಹ್ನದ ಪೂಜೆಗೆ ನಮ್ಮಲ್ಲಿಗೆ ಬಂದಿದ್ದ ವಯಸ್ಸಾದ ಮಹನೀಯರೊಬ್ಬರು, "ನಿನ್ನೆ ಮಠದಲ್ಲಿ ತಾಳಮದ್ದಳೆ ಇತ್ತೋ? ಬೆಳಗಿನ ಜಾವಕ್ಕೆ ನಮ್ಮಲ್ಲಿಗೆ ಪದ ಕೇಳುತ್ತಾ ಇತ್ತು." ಎಂದು ಹೇಳಿದರು. ಅವರ ಮನೆ ನಮ್ಮಲ್ಲಿಂದ ಸುಮಾರು ಎರಡು ಮೈಲಿಗಿಂತ ಹೆಚ್ಚು ದೂರದಲ್ಲಿದೆ.

ಇವರ ಮಾತನ್ನು ಕೇಳಿದಾಗ ಹಿಂದೊಮ್ಮೆ ಬಲಿಪರ ಅಭಿಮಾನಿಯೊಬ್ಬರು ಹೇಳಿದ ಮಾತು ಅಕ್ಷರಶಃ ಸತ್ಯವಾಗಿರಬೇಕೆಂದು ನನಗೆ ಮನವರಿಕೆಯಾಯಿತು. ಆಗ ಅವರ ಮಾತಿಗೆ ಅಸಡ್ಡೆಯಿಂದ ತಲೆದೂಗಿದೆನಾದರೂ ಅದು ಸತ್ಯವಾಗಿರಬಹುದೆಂದು ನಾನು ನಂಬಿರಲಿಲ್ಲ. ಒಂದು ಜೋಡಾಟಕ್ಕೆ ಹೋಗಿದ್ದ ಅವರು ಆರಂಭದಲ್ಲಿ ಬಲಿಪರ ಪದ್ಯ ಸ್ವಾರಸ್ಯವಿಲ್ಲ ಎಂದು ಎದ್ದು ಹೋದವರು ಮೂರು ಮೈಲು ದೂರ ಹೋದ ಮೇಲೆ ಅಲ್ಲಿಂದ ಭಾಗವತರ ವೀರ ರಸದ ಪದ್ಯಗಳ ಏರು ಸ್ವರವನ್ನು ಕೇಳಿ ಹಿಂತಿರುಗಿ ಬಂದಿದ್ದರಂತೆ.

ಉಜ್ವಲ ಪ್ರಕಾಶ ಬೀರಿ ದೀಪ ಆರಿತು

ಕಳೆದ 1966ನೇ ವರ್ಷದ ನವರಾತ್ರಿಯ ಸಂದರ್ಭದಲ್ಲಿ ನಾಲ್ಕು ದಿನ ಮುಂಚಿತವಾಗಿಯೇ ಅವರು ನಮ್ಮಲ್ಲಿಗೆ, ಶ್ರೀ ದೇವಿಯ ಸನ್ನಿಧಿಯಲ್ಲಿ ತಾನೊಮ್ಮೆ ಹಾಡಬೇಕೆಂಬ ಸಂಕಲ್ಪ ಮಾಡಿರುವೆನೆಂದೂ, ಯಕ್ಷಗಾನ ನಡೆಯುವ ದಿನವನ್ನು ತಿಳಿಸಿದರೆ ಬರುವೆನೆಂದೂ ಹೇಳಿ ಕಳುಹಿಸಿದ್ದರು. 75–76 ವರ್ಷ ಪ್ರಾಯವಾದ ಮುದುಕರು ಇಡೀ ರಾತ್ರಿ ಪದ ಹೇಳುವುದು ಪ್ರಯಾಸವಾದೀತು. ಆದರೂ ಅವರ ಅಪೇಕ್ಷೆಯಂತೆ ಆರಂಭದ ಹತ್ತು ಪದ್ಯ ಅವರೇ ಹಾಡಲಿ, ಎಂದು ಅಭಿಪ್ರಾಯಪಟ್ಟು ಮೂರನೆಯ ಪೂಜೆಯಾಗುವ ದಿನ ತಾಳಮದ್ದಳೆಯ ವ್ಯವಸ್ಥೆ ಮಾಡಿದೆವು. ಆ ದಿನ ನಮ್ಮ ಮಠಕ್ಕೆ ಶ್ರೀಕುದುರೆ ಕೂಡ್ಲು ರಾಮ ಭಟ್ಟರು, ಶ್ರೀ ನೆಡ್ಲೆ ನರಸಿಂಹ ಭಟ್ಟರು, ಶ್ರೀ ದಿವಾಣ ಭೀಮ ಭಟ್ಟರೇ ಮೊದಲಾಗಿ ನಾಲ್ಕಾರು ಮಂದಿ ಪ್ರಸಿದ್ಧ ಮೃದಂಗ–ಚೆಂಡೆವಾದಕರೂ, ಶ್ರೀದೇರಜೆ ಸೀತಾರಾಮಯ್ಯ, ಶ್ರೀ ಪೆರ್ಲ ಕೃಷ್ಣ ಭಟ್ಟರೇ ಮೊದಲಾಗಿ ಹಲವು ಮಂದಿ ಪ್ರಸಿದ್ಧ ಅರ್ಥಧಾರಿಗಳೂ ಬಂದಿದ್ದರು, ಅಂದಿನ ಬಲಿಪರ ಉತ್ಸಾಹ ಮೂವತ್ತು ವರ್ಷದ ಯುವಕನ ಉತ್ಸಾಹವನ್ನೂ ಮೀರಿಸುವಂತಿತ್ತು. ತಾಳಮದ್ದಳೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ದೇವರ ಮುಂದೆ ಕಾಣಿಕೆ ಇಟ್ಟು–ಉದ್ದಂಡ ನಮಸ್ಕಾರ ಮಾಡಿ ಪ್ರಸಾದವನ್ನು ಸ್ವೀಕರಿಸಿ ಬಂದು ಭಾಗವತನ ಸ್ಥಾನದಲ್ಲಿ ಕುಳಿತುಕೊಂಡರು. "ಅನಾರೋಗ್ಯದಿಂದ ಆಸ್ಪತ್ರೆಗೆ ಸೇರಿ ಹತ್ತಿ ಪ್ಪತ್ತು ದಿನ ಚಿಕಿತ್ಸೆ ಪಡೆದ ಮೇಲೆ ಕಳೆದ ಏಳೆಂಟು ತಿಂಗಳುಗಳಲ್ಲಿ ಎಲ್ಲಿಯೂ ಪದ ಹೇಳಲಿಲ್ಲ. ಈಗ ಮತ್ತೊಮ್ಮೆ ದೇವರ ಅನುಗ್ರಹ ಪಡೆದೇ ಪ್ರಾರಂಭಿಸಿಬಿಡುವುದೆಂದು ಆಲೋಚಿಸಿದ್ದೆ. ಹಾಗೇ ಆಯಿತು."ಎಂದು ಹೇಳುತ್ತ ಭಾಗವತಿಕೆಯನ್ನು ಪ್ರಾರಂಭಿಸಿದರು. ವೃದ್ಧರಾಗಿ ನಿಃಶ್ಶಕ್ತರಾಗಿದ್ದ ಇವರಿಂದ ಹೆಚ್ಚು ಹೊತ್ತು ಪದ ಹೇಳುವುದು ಸಾಧ್ಯವಾಗಲಾರದು ಎಂದು ನಾವು ಭಾವಿಸಿದ್ದೆವು. ಆದರೆ ಅವರು ಅಂದಿನ ಭಾಗವತಿಕೆಯನ್ನು ಪೂರ್ಣ ನಿರ್ವಹಿಸಿದ್ದಲ್ಲದೆ, ಮುಂದೆಯೂ ಎರಡು ದಿನ ನಮ್ಮಲ್ಲಿದ್ದು 'ಪಂಚವಟಿ' 'ಸೀತಾಪಹಾರ' ಮುಂತಾದ ಪ್ರಸಂಗಗಳನ್ನು ಹಾಡಿ ಒಂದೆರಡು ತಾಳ ಮದ್ದಳೆಗಳನ್ನು ಮುಗಿಸಿದರು. ಆ ದಿನಗಳಲ್ಲಿ ಅವರಲ್ಲಿ ಕಂಡುಬರುತ್ತಿದ್ದ ಆ ಉತ್ಸಾಹ "Last flicker of the candle"–ಎಂಬ ಗಾದೆಯಂತೆ ಆಯಿತೆಂದು ಕೆಲ ದಿನಗಳ ತರುವಾಯ ನಮಗೆ ಗೊತ್ತಾಯಿತು.

ನವರಾತ್ರಿ ಕಳೆದು ನಮ್ಮಲ್ಲಿಂದ ಹೋದ ಮೇಲೆ ಅವರು ವಿಶೇಷವಾಗಿ ಎಲ್ಲಿಯೂ ಹಾಡಿದ ಸುದ್ದಿಯನ್ನು "ನಾನು ಕೇಳಲಿಲ್ಲ. ಎಳವೆಯಿಂದಲೇ ಅವರ ಅತ್ಯಂತ ಆತ್ಮೀಯ ಸ್ನೇಹಿತರೂ ಬಂಧುಗಳೂ ಆಗಿದ್ದ ಪಡ್ರೆ ದಿ। ಶ್ರೀಪತಿ ಶಾಸ್ತ್ರಿಗಳ ಶ್ರಾದ್ಧದ ದಿನ ಅಲ್ಲಿಗೆ ಹೋಗಿದ್ದರಂತೆ. ಅಲ್ಲಿ ತಮ್ಮ ಊರಿನ ಹಳೆಯ ಮಿತ್ರರೂ ಬಂಧುಗಳೂ ಕೂಡಿದ್ದ ಸಭೆಯಲ್ಲಿ ಮಧ್ಯರಾತ್ರಿಯ ತನಕ ಸೊಗಸಾಗಿ ಹಾಡಿದ್ದರಂತೆ. ಅಲ್ಲಿಂದ ಮಧೂರಿಗೆ ಹೋಗಿ ನಂತರ ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ತಮ್ಮ ಕೊನೆಯ ಭಾಗವತಿಕೆಯ ಕಾಣಿಕೆಯನ್ನು ಸಮರ್ಪಿಸಿದರೆಂದು ನಾನು ಕೇಳಿದೆ. ಮಲ್ಲದಿಂದ ತೀವ್ರ ಅಸ್ವಸ್ಥರಾಗಿದ್ದ ಬಲಿಪರನ್ನು ಮಂಗಳೂರಿಗೆ ಕರೆದೊಯ್ದರೆಂದೂ, ಅಲ್ಲಿ ಅವರು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದರೆಂದೂ ಆಮೇಲೆ ನಮಗೆ ವಾರ್ತೆ ದೊರೆಯಿತು.

ದಿ। ಬಲಿಪ ನಾರಾಯಣ ಭಾಗವತರಂತಹ ಉದ್ದಾಮ ಕಲಾವಿದರ ಕುರಿತು ನಾನು ವಿಶೇಷವೇನನ್ನೂ ಬರೆಯಲು ಸಾಮರ್ಥ್ಯವುಳ್ಳವನಲ್ಲ. ಆದರೂ ಅವರ ಮೇಲೆ ನನಗಿದ್ದ ಅಪಾರ ಭಕ್ತಿ ಶ್ರದ್ಧೆಗಳ ಪ್ರತೀಕವಾಗಿ ಈ ಎರಡು ಮಾತುಗಳನ್ನು ಕಾಣಿಕೆಯ ರೂಪದಲ್ಲಿ ಬರೆದು ಅರ್ಪಿಸಿದ್ದೇನೆ.

ಬಹುಮುಖ ಪ್ರತಿಭೆಯ ವಿಚಿತ್ರ ವ್ಯಕ್ತಿ

ಶ್ರೀ ಸೈಪಂಗಲ್ಲು ವಾಸುದೇವ ಭಟ್ಟ, ಪಡ್ರೆ.

ಉದ್ದ ತೋಳಿನ ನಿಲುವಂಗಿ, ಹೆಗಲ ಮೇಲೆ ಕಂದು ಬಣ್ಣದ ದಪ್ಪ ಶಾಲು, ಮಾಸಿದ ಒರಟು ಖದ್ದರ್ ಪಂಚೆ ಧರಿಸಿದ ವ್ಯಕ್ತಿಯೊಬ್ಬರನ್ನು ಬೆರಳಿಂದ ತೋರಿಸಿ, "ಅಲ್ಲಿ ನೋಡು ಅವರೇ ಬಲಿಪ ನಾರಾಯಣ ಭಾಗವತರು." ಎಂದು ನನ್ನ ತೀರ್ಥರೂಪರು ಪರಿಚಯ ಮಾಡಿ ಕೊಟ್ಟಾಗ ನನಗಿನ್ನೂ ಎಂಟು ವರ್ಷ ಪ್ರಾಯ. ನನ್ನ ತಂದೆಯವರು, ಪ್ರಸಿದ್ಧ ಮೃದಂಗವಾದಕರಾಗಿದ್ದ ದಿವಂಗತ ಶ್ರೀ ಸೈಪಂಗಲ್ಲು ನಾರಾಯಣ ಭಟ್ಟರು — ಊರಿನ ವಾಡಿಕೆಯ ಮಾತಿನಲ್ಲಿ ಹೇಳುವುದಾದರೆ, ಮದ್ದಳೆ ನಾರಾಯಣ ಭಟ್ಟರು — ಮೂರು ನಾಲ್ಕು ವರ್ಷಗಳ ಕಾಲ ಮೃದಂಗವಾದಕರಾಗಿ ಬಲಿಪರೊಂದಿಗೆ ತಿರುಗಾಟ ಮಾಡಿದ್ದರು. ಅವರಿಗೆ ಬಲಿಪ ಭಾಗವತರ ವಿಚಾರದಲ್ಲಿ ಪೂಜ್ಯ ಗುರುಭಾವವಿದ್ದಿತೆಂದು ಅವರ ಮಾತು ಮತ್ತು ವ್ಯವಹಾರಗಳಿಂದ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಬಲಿಪರು ವರ್ಷದಲ್ಲಿ ಅನೇಕ ಬಾರಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಊರಿಗೆ ಪ್ರಸಿದ್ಧ ಭಾಗವತರಾದರೂ ಎಳೆಯ ಹುಡುಗರಾಗಿದ್ದ ನಮ್ಮ ಪಾಲಿಗೆ ಬಲಿಪರು ಮಕ್ಕಳನ್ನು ಬಹಳ ಪ್ರೀತಿಯಿಂದ ಕಾಣುವ ಒಬ್ಬ ಅಜ್ಜ ಮಾತ್ರವಾಗಿದ್ದರು.

ಸಣ್ಣ ಪ್ರಾಯದಲ್ಲಿ ತಂದೆಯವರೊಂದಿಗೆ ಹಲವು ಬಯಲಾಟಗಳಿಗೆ ನಾನು ಹೋಗಿದ್ದೆ. ಮದ್ದಳೆಗಾರರ ಮಗನಾದುದರಿಂದ ಆಗ ಭಾಗವತರ ಬಳಿಯಲ್ಲೇ ಕುಳಿತು ಆಟ ನೋಡುವ ವಿಶೇಷ 'ಮರ್ಯಾದೆ' ನನಗೆ ಲಭಿಸುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಅದೆಷ್ಟೋ ಬಾರಿ ಬಲಿಪರು ಕ್ರೂರ ರಾಕ್ಷಸರ ದೊಡ್ಡ ದೊಡ್ಡ ವೇಷಗಳು ಬಂದಾಗ ಏನೇನೋ ಹೇಳಿ ನನ್ನನ್ನು ಹೆದರಿಸಿ ಕೂಗಿಸಿ ಮತ್ತೆ ರಮಿಸಿದ ನೆನಪು ಈಗಲೂ ಅಚ್ಚಳಿಯದೆ ಉಳಿದಿದೆ.

ಎಲ್ಲ ಭಾಗವತರೂ ತಾಳ ಹಾಕುತ್ತಾರೆ, ಹಾಡುತ್ತಾರೆ, ಬಲಿಪರೂ ಅಷ್ಟೆ. ಎಳೆಯವರಾಗಿದ್ದ ನಮ್ಮ ಬುದ್ಧಿಗೆ ಅವರಲ್ಲಿ ಪ್ರತ್ಯೇಕ ವೈಶಿಷ್ಟ್ಯವೇನೂ ಕಾಣುತ್ತಿರಲಿಲ್ಲ; ಆದರೆ ಹಿರಿಯರು, "ಹಾಡುಗಾರಿಕೆಗೆ ಬಲಿಪರಂತೆ" ಎಂಬ ಸುದ್ದಿ ಕೇಳಿದಾಗ ಪದ್ಯ ಕೇಳಲು ಆತುರಪಡುತ್ತಿದ್ದುದನ್ನು ನೋಡಿ ಆಶ್ಚರ್ಯಪಟ್ಟುದೂ ಉಂಟು. ಪ್ರಾಯಪ್ರಬುದ್ಧರಾದ ಮೇಲೆ ಬಲಿಪರ ವಿಶೇಷತೆ ನಮಗೂ ತಾನಾಗಿಯೇ ಚೆನ್ನಾಗಿ ಅರ್ಥವಾಯಿತು.

ಯಕ್ಷಗಾನದ ಹಾಡುಗಾರಿಕೆಯನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ, ಇಂಪಾದ ಸ್ವರದಿಂದ ಲಯಬದ್ಧವಾಗಿ, ಸರಿಯಾಗಿ ಅರ್ಥವಾಗುವಂತೆ ಪದಗಳನ್ನು ವಿಂಗಡಿಸುತ್ತ ಬಲಿಪರು ಹಾಡುತ್ತಿರುವುದನ್ನು ಕೇಳಿದರೆ ಯಾರಾದರೂ ಆ ಗಾನಲಹರಿಯಲ್ಲಿ ತನ್ಮಯನಾಗಲೇ ಬೇಕು. ಹಾಡುವಾಗ ಮುಖ ವಿಕಾರಗಳುಂಟಾಗುವುದು, ಆಯಾಸಪಡುವುದು ಇತ್ಯಾದಿ ಯಾವ ನ್ಯೂನತೆಯೂ ಬಲಿಪರಲ್ಲಿರಲಿಲ್ಲ.

ಪಾರ್ತಿ ಸುಬ್ಬ ಮೆಚ್ಚಿನ ಕವಿ

ತಾಳಮದ್ದಳೆ ಕೂಟಗಳಲ್ಲಿ ಆರಂಭಕ್ಕೆ ಮೊದಲು "ಈವತ್ತು ಪ್ರಸಂಗ ಯಾವುದಾಗಬಹುದೆಂದು" ಬಲಿಪರನ್ನು ಕೇಳಿದರೆ, "ಯಾವುದೂ ಆದೀತು" ಎಂದೇ ಅವರು ಸಾಧಾರಣವಾಗಿ ಉತ್ತರಿಸುತ್ತಿದ್ದರು. ನೆರೆದವರೆಲ್ಲ ಕೂಡಿ ಆಲೋಚಿಸಿ ಪಾರ್ತಿ ಸುಬ್ಬನ ಕೃತಿಗಳಲ್ಲಿ ಯಾವುದಾದರೊಂದನ್ನು ಆರಿಸಿದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತು. ಮನಃಪೂರ್ವಕವಾಗಿ ಬೆಳಗಿನ ತನಕ ಸೊಗಸಾಗಿ ಹಾಡುತ್ತಿದ್ದರು. ಬದಲಾಗಿ ಬೇರೆ ಯಾವುದಾದರೂ ಪ್ರಸಂಗದ ಹೆಸರನ್ನು ಸೂಚಿಸಿದರೆ, ತುಸು ಅಸಡ್ಡೆಯಿಂದ 'ಹ್ಞಾಂ ಆಗಬಹುದು' ಎಂದು ಅರ್ಧ ಸಮ್ಮತಿಯನ್ನು ಸೂಚಿಸುತ್ತಿದ್ದರು. "ಅಡಿಗೆಯವರು ನಾವು. ಪಾಕಮಾಡುವುದು ನಮ್ಮ ಕೆಲಸ. ನೀವು ಬಪ್ಪಂಕಾಯಿ ಕೊಟ್ಟರೂ ಆದೀತು. ತೊಂಡೆಕಾಯಿ ಕೊಟ್ಟರೂ ಆದೀತು. ತರಕಾರಿಗೆ ತಕ್ಕ ರುಚಿ ಇದ್ದೀತು" ಎಂದು ಹೇಳುತ್ತಿದ್ದರು.

ಪಟ್ಟಾಭಿಷೇಕದಿಂದ ಮೊದಲುಗೊಂಡು ಕುಂಭಕರ್ಣಕಾಳಗದ ವರೆಗಿನ ಪ್ರತಿಯೊಂದು ಪ್ರಸಂಗದ ಪ್ರತಿಯೊಂದು ಪದ್ಯವೂ ಬಲಿಪರಿಗೆ ಅತ್ಯಂತ ಪ್ರಿಯವಾಗಿತ್ತು. ಆಯಾ ಪಾತ್ರವೇ ಮಾತನಾಡಿದಂತೆ ತನ್ಮಯತೆಯಿಂದ ಹಾಡುತ್ತಿದ್ದರು. ರಾಗ ತಾಳಗಳ ವಿವಿಧ ಚಮತ್ಕಾರಗಳನ್ನು ತೋರಿಸುತ್ತಿದ್ದರು.

ಕರ್ತವ್ಯ ನಿಷ್ಠೆ

ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿಯೇ ತೀರಬೇಕೆಂಬ ಛಲ ಬಲಿಪ ಭಾಗವತರಲ್ಲಿ ನೆಲೆ ನಿಂತಿತ್ತು. ಬಯಲಾಟಗಳಲ್ಲಿ ತಾಳಮದ್ದಳೆಯ ಕೂಟಗಳಲ್ಲಿ ಸಾವಿರಾರು ಜನ ಬಂದು ಸೇರಿರಲಿ, ಕೇಳುವ ಕುತೂಹಲವುಳ್ಳ ಕೆಲವೇ ಮಂದಿ ಇರಲಿ, ಅವರು ತಮ್ಮ ಪಾಲಿನ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು.

ಒಂದು ಬಾರಿ ಅಳಕೆಯ ಸಮೀಪ ಒಂದು ಬಯಲಾಟ ನಿಶ್ಚಯವಾಗಿತ್ತು. ಬಲಿಪರ ಹಾಡುಗಾರಿಕೆಗೆ ಮರುಳಾಗಿದ್ದ ನನ್ನ ಸೋದರಮಾವನ ಒತ್ತಾಯದಿಂದ ಏಳು ಎಂಟು ಮೈಲು ನಡೆದು ನಾನೂ ಅವರೊಂದಿಗೆ ಅಂದಿನ ಆಟ ನೋಡಲು ಹೊರಟಿದ್ದೆ. ಸಂಜೆಯಿಂದಲೇ ಆಕಾಶದಲ್ಲಿ ಮೋಡ ಮುಸುಕಿ ಹನಿಮಳೆ ಬರುತ್ತಿದ್ದುದರಿಂದ ನಾವು ಆಟದ ಗದ್ದೆಯ ಬಳಿಗೆ ರಾತ್ರೆ ಹತ್ತು ಗಂಟೆಯ ಸುಮಾರಿಗೆ ಬಂದು ನೋಡಿದಾಗ ವಿಶೇಷವಾಗಿ ಪ್ರೇಕ್ಷಕರು ಯಾರೂ ಬಂದಿರಲಿಲ್ಲ, ಕೇವಲ ಹತ್ತಿಪ್ಪತ್ತು ಜನರು ಅತ್ತಿಂದಿತ್ತ ಓಡಾಡುತ್ತ ಆಟ ಇದೆಯೋ ಇಲ್ಲವೊ ಎಂಬ ಸಂದೇಹದಲ್ಲಿದ್ದರು. ಆ ಹೊತ್ತಿಗೆ ಮತ್ತೊಮ್ಮೆ ಮಳೆ ಜೋರಾಗಿ ಬಂದು ಸುತ್ತಲೆಲ್ಲ ನೀರು ತುಂಬಿಕೊಂಡಿತು. ಸಿಡಿಲು ಮಿಂಚುಗಳ ಆರ್ಭಟೆಯೂ ಇತ್ತು. ಅಂದಿನ ಆಟ ಮುಕ್ತಾಯವಾದಂತೆಯೇ ಎಂದು ಹೆಚ್ಚಿನವರು ತೀರ್ಮಾನಿಸಿದರು.

ಬಲಿಪರು ಚೌಕಿಯ ಒಂದು ಮೂಲೆಯಲ್ಲಿ ಚಳಿಗೆ ದಪ್ಪ ಶಾಲೊಂದನ್ನು ಹೊದ್ದು ಕುಳಿತು ವೀಳ್ಯ ಮೆಲ್ಲುತ್ತ ಇದ್ದರು, ಆಟದ ಪೆಟ್ಟಿಗೆಗಳ ಮುಚ್ಚಳ ತೆರೆದಿರಲಿಲ್ಲ. ವೇಷಧಾರಿಗಳು ಅಲ್ಲಲ್ಲಿ ಬಿದ್ದುಕೊಂಡಿದ್ದರು. ಇಷ್ಟು ದೂರ ನಡೆದು ಹೋದ ನಮಗೆ ತುಂಬ ನಿರಾಶೆಯಾಯಿತು.

ಗಂಟೆ ಹನ್ನೆರಡಾದಾಗ ಮಳೆ ನಿಂತಿತು. ಆಕಾಶ ತಿಳಿಯಾಯಿತು. ಅಲ್ಲಿ ಇಲ್ಲಿ ಕೆಲವು ನಕ್ಷತ್ರಗಳು ಗೋಚರಿಸಿದವು. ಬಲಿಪರು ಕುಳಿತಲ್ಲಿಂದ ಮೇಲೆದ್ದರು. ವೇಷಧಾರಿಗಳನ್ನು ಕರೆದು ಎಬ್ಬಿಸಿ ಒಟ್ಟುಗೂಡಿಸಿದರು, ಆಟ ಆಗಲೇಬೇಕೆಂದು ಆಜ್ಞಾಪಿಸಿದರು.

ಚೌಕಿಯಲ್ಲಿ "ಕೇಳಿ" ಬಾರಿಸಿ, ಆರತಿಯ ಶಾಸ್ತ್ರ ಮುಗಿಸಿ ಎರಡು ಹುಡುಗರಿಗೆ ಬಿಳಿ ನಾಮ ಎಳೆದು ಕೋಡಂಗಿಗಳನ್ನು ರಂಗಸ್ಥಳಕ್ಕೆ ಕಳುಹಿಸಿದರು. ನಿತ್ಯವೇಷಗಳ ಕುಣಿತವೂ ಮುಗಿಯಿತು. ಸಂಗೀತ ಭಾಗವತನೂ, ಕೆಲಮಂದಿ ಪ್ರಮುಖ ವೇಷಧಾರಿಗಳೂ, "ಮಳೆ ಬರುತ್ತಿದೆ, ಆಟ ಇಲ್ಲ" ಎಂದು ತೀರ್ಮಾನಿಸಿ ಎಲ್ಲಿಗೋ ಹೋಗಿ ಮಲಗಿದ್ದಾರೆ ಎಂದು ಆಗ ಬಲಿಪರಿಗೆ ತಿಳಿದು ಬಂತು. ಇದ್ದವರೇ ಸಾಕೆಂದು ಹೇಳಿ ಸ್ವತಃ ಅವರೇ ಜಾಗಟೆ ಹಿಡಿದು ರಂಗಸ್ಥಳಕ್ಕೆ ಬಂದರು. ಸ್ತ್ರೀವೇಷದ ಕುಣಿತದಿಂದ ಬೆಳಗಿನ ತನಕ ಸಂಪೂರ್ಣ ಭಾಗವತಿಕೆಯನ್ನು ನಿರ್ವಹಿಸಿದರು.

ಅಂದು "ಪಾರಿಜಾತ" ಪ್ರಸಂಗವಾಗಿತ್ತು. ನಾರದ, ಕೃಷ್ಣ, ಸತ್ಯಭಾಮೆ, ರುಕ್ಮಿಣಿ – ಕೇವಲ ನಾಲ್ಕೇ ಪಾತ್ರಗಳಿಂದ ಇಡೀ ಆಟವನ್ನು ಆಡಿ ತೋರಿಸಿದರು. ಪ್ರೇಕ್ಷಕರ ಸಂಖ್ಯೆ ಕಡಿಮೆ ಎಂದು ಸ್ವಲ್ಪವೂ ಆಲಸ್ಯ ಮಾಡಲಿಲ್ಲ, ಮನಃಪೂರ್ವಕವಾಗಿ ಬೆಳಗಿನ ತನಕ ಸೊಗಸಾಗಿ ಹಾಡಿದರು. ಬಗೆಬಗೆ ಯಲ್ಲಿ ವೇಷಗಳನ್ನು ಕುಣಿಸಿದರು. ಆಟಕ್ಕೆ ಬಂದ ಕೆಲವೇ ಜನರಿಗೆ ಅವರ್ಣನೀಯವಾದ ತೃಪ್ತಿ ಯುಂಟಾಯಿತು. ಬಾರದ ಸಾವಿರಾರು ಮಂದಿಗೆ ಸುದ್ದಿ ಕೇಳಿ ಇಂತಹ ಸುಸಂದರ್ಭ ಕೈ ತಪ್ಪಿ ಹೋಯಿ ತಲ್ಲ ಎಂದು ತೀವ್ರ ಪಶ್ಚಾತ್ತಾಪವೂ ಆಯಿತು.

ಉತ್ತಮ ಭಾಷಣಗಾರ

ಹಾಡುಗಾರಿಕೆಯಲ್ಲಿ ಅದ್ವಿತೀಯ ಭಾಗವತರಾಗಿದ್ದಂತೆ ಬಲಿಪರು ಉತ್ತಮ ವಾಗ್ಮಿಯೂ ಆಗಿದ್ದರೆಂದು ಇತ್ತೀಚೆಗೆ ನಮಗೆ ತಿಳಿದು ಬಂತು. ಪೆರ್ಲದಲ್ಲಿ "ಕಲಾವರ್ಧಕ ಸಂಘ" ಎಂಬ ಸಂಸ್ಥೆ ಯೊಂದು ಉದ್ಭವಿಸಿತು. ಸಾಹಿತ್ಯ, ಕಲೆ, ಮುಂತಾದ ವಿಷಯಗಳಿಗೆ ಪ್ರೋತ್ಸಾಹ ನೀಡುವ ಈ ಸಂಸ್ಥೆ ಯನ್ನು ಉದ್ಘಾಟಿಸಲು ಶ್ರೀಯುತರನ್ನು ಕರೆಯಲಾಗಿತ್ತು. ಭಾಷಣದ ಅಭ್ಯಾಸವಿಲ್ಲದ ಬಲಿಪರು ಏನಾದರೂ ಒಂದೆರಡು ಮಾತುಗಳನ್ನಾಡಿ ಉದ್ಘಾಟನೆಯ 'ಶಾಸ್ತ್ರ'ವನ್ನು ಪೂರಯಿಸುತ್ತಾರೆಂದು ನಾವೆಲ್ಲ ತಿಳಿದಿದ್ದೆವು. ಆದರೆ ಭಾಷಣಕ್ಕೆಂದು ಎದ್ದು ನಿಂತವರು, ಸ್ವಲ್ಪವೂ ಅಳುಕಿಲ್ಲದೆ ಅಸ್ಖಲಿತವಾಣಿ ಯಲ್ಲಿ ಸುಮಾರು ನಾಲ್ವತ್ತೈದು ನಿಮಿಷಗಳ ಕಾಲ ಯಕ್ಷಗಾನದ ಉಗಮ, ಬೆಳವಣಿಗೆ, ವೈಶಿಷ್ಟ್ಯ ಮುಂತಾದ ವಿಚಾರಗಳನ್ನು ವಿಶದವಾಗಿ ವಿವರಿಸಿ ತಮ್ಮ ಮಾತನ್ನು ಮುಗಿಸಿದರು. ಬಲಿಪರು ಉತ್ತಮ ಭಾಷಣಗಾರರೂ ಹೌದೆಂದು ತಿಳಿದು ಶ್ರೋತೃಗಳಿಗೆ ಆಶ್ಚರ್ಯವೂ ಆನಂದವೂ ಉಂಟಾಯಿತು. ಮುಂದೆ ತಮಗಾಗಿ ಏರ್ಪಡಿಸಿದ್ದ ಸತ್ಕಾರ ಸಮಾರಂಭಗಳಲ್ಲಿಯೂ ಅವರು ನಿರರ್ಗಳವಾಗಿ ಮಾತ ನಾಡಿದ್ದರು.

ಮೃದಂಗ ಚೆಂಡೆಗಳ ವಾದಕರೂ ಆಗಿದ್ದರು

ಒಂದು ದಿನ ನಮ್ಮ ಮನೆಯಲ್ಲಿ ಯಾವುದೋ ಸಮಾರಂಭಕ್ಕೆಂದು ಹತ್ತೈವತ್ತು ಜನ ಸೇರಿ ದ್ದರು. ಬಲಿಪರೂ ಬಂದಿದ್ದರು. ಮೃದಂಗವಾದಕರೊಬ್ಬರಿದ್ದಿದ್ದರೆ ಈವತ್ತೊಂದು ತಾಳಮದ್ದಳೆ ಮಾಡಬಹುದಿತ್ತು, ಎಂದು ಯಾರೋ ಒಬ್ಬರು ಪ್ರಸ್ತಾಪವೆತ್ತಿದರು, ಮದ್ದಳೆಗೆ ಜನ ಉಂಟು, ಭಾಗವತರು ಯಾರಿದ್ದಾರೆ ಹೇಳಿ, ಎಂದು ಬಲಿಪರು ಕೇಳಿದರು. ಪಡ್ರೆಯಲ್ಲಿ ಭಾಗವತರ ಸಂಖ್ಯೆ ಏನೂ ಕಡಿಮೆಯಾಗಿರಲಿಲ್ಲ. ಒಬ್ಬನನ್ನು ಭಾಗವತಿಕೆಗೆ ಕುಳ್ಳಿರಿಸಿ ತಾನು ಮದ್ದಳೆ ಬಾರಿಸುತ್ತ ಅಂದಿನ ತಾಳಮದ್ದಳೆಯನ್ನು ಅವರು ಪೂರಯಿಸಿದರು.

ಇನ್ನೊಂದು ದಿನ ನಮ್ಮಲ್ಲಿ ನಡೆದ ಒಂದು ಯಕ್ಷಗಾನ ಕೂಟಕ್ಕೆ ಬಂದಿದ್ದ ಶ್ರೀ ಕುದುರೆಕೂಡ್ಲು ರಾಮ ಭಟ್ಟರು ಪ್ರಾರಂಭದಲ್ಲಿ ಪೀಠಿಕೆ ಬಾರಿಸುವ ಸಿದ್ಧತೆಯಾದಾಗ ತಾನು ಕೈಯಲ್ಲಿ ಜಾಗಟೆ ಹಿಡಿದು ಬಲಿಪರೊಡನೆ, "ಯಾವಾಗಲೂ ನಿಮ್ಮ ತಾಳಕ್ಕೆ ನಾನು ಚೆಂಡೆ ಬಾರಿಸುವುದು, ಈವತ್ತು ನಾನು ಜಾಗಟೆ ಹಿಡಿಯುತ್ತೇನೆ ನೀವು ಚೆಂಡೆ ಬಾರಿಸಿ" ಎಂದು ವಿನೋದದಿಂದ ನಗುತ್ತ ಹೇಳಿದರು. ಕೂಡಲೇ ಬಲಿಪರು ಚೆಂಡೆಯನ್ನು ಹತ್ತಿರಕ್ಕೆಳೆದು ಪೀಠಿಕೆಯನ್ನು ಆರಂಭಿಸಿಯೇ ಬಿಟ್ಟರು. ಸುಮಾರು ಮುಕ್ಕಾಲು ಗಂಟೆಯ ಕಾಲ ವಿವಿಧ ತಾಳಗತಿಗಳಲ್ಲಿ ಅವರು ಅದ್ಭುತವಾಗಿ ಚೆಂಡೆ ಬಾರಿಸಿದರು. ಶ್ರೋತೃಗಳು ಮಂಕುಬಡಿದವರಂತೆ ಸ್ತಬ್ಧರಾಗಿ ಆಲಿಸಿದರು. ಪೀಠಿಕೆ ಮುಕ್ತಾಯವಾದಾಗ ಹಾಸ್ಯಪ್ರಿಯರಾದ ಶ್ರೀ ರಾಮಭಟ್ಟರು, "ನೀವು ಹೀಗೆ ಚೆಂಡೆ ಬಾರಿಸಿದರೆ ಇನ್ನು ನಮ್ಮ ಅನ್ನಕ್ಕೆ ಪೆಟ್ಟು ಬಿದ್ದಂತೆಯೇ" ಎಂದು ಹೇಳಿದರು.

ಹೀಗೆ ವಿದ್ವಾಂಸನೂ, ಅನುಭವಿಯೂ, ಉತ್ತಮ ವಾಗ್ಮಿಯೂ, ಯಕ್ಷಗಾನದ ಸರ್ವಾಂಗೀಣ ಪಂಡಿತನೂ ಆಗಿರುವ ಒಬ್ಬನೇ ವ್ಯಕ್ತಿ ದೊರೆಯುವುದು ದುರ್ಲಭ. ಬಲಿಪ ನಾರಾಯಣ ಭಾಗವತರೊಬ್ಬರೇ ಅಂತಹ ಮಹಾನ್ ವ್ಯಕ್ತಿಯಾಗಿದ್ದರು.

ಕಳೆದ ಮೂರು ನಾಲ್ಕು ವರ್ಷಗಳಿಂದ ನಮ್ಮ ಮನೆಯಲ್ಲಿ ಪ್ರತಿ ಶುಕ್ರವಾರವೂ ಶ್ರೀ ಪೆರ್ಲ ಕೃಷ್ಣ ಭಟ್ಟರ ನೇತೃತ್ವದಲ್ಲಿ ಯಕ್ಷಗಾನ ಅಭ್ಯಾಸಿಗಳ ಒಂದು ಗೋಷ್ಠಿ ನಡೆಯುತ್ತಲಿದೆ. ಗೀತೆ, ಪುರಾಣ ಇತ್ಯಾದಿ ಪ್ರಾಚೀನ ಗ್ರಂಥಗಳ ಪ್ರವಚನ ಕಾರ್ಯಕ್ರಮಗಳೂ ಇಲ್ಲಿ ಆಗಾಗ ನಡೆಯುತ್ತವೆ. ಹಲವು ಬಾರಿ ಬಲಿಪರು ನಮ್ಮ ಶುಕ್ರವಾರದ ಕೂಟಗಳಿಗೆ ತಾವಾಗಿ ಬಂದಿದ್ದರು. ಭಾಗವತಿಕೆಯನ್ನು ಮಾಡಿದ್ದರು. ಎಳೆಯವರಾದ ನಮಗೆ ಅನೇಕ ಹಿತೋಪದೇಶಗಳನ್ನು ಮಾಡಿ ಹರಸಿದ್ದರು. ಯಕ್ಷಗಾನ ವ್ಯವಸಾಯಿಗಳ ಮೇಲೆ ಅವರಿಗಿದ್ದ ಪ್ರೀತಿ ವಾತ್ಸಲ್ಯಗಳನ್ನು ನೆನೆದಾಗ ಕಣ್ಣು ಹನಿಗೂಡುತ್ತದೆ. ಈ ಹಿರಿಯ ಅಜ್ಜನನ್ನು ಕಳಕೊಂಡ ನಾವೆಲ್ಲ ತಬ್ಬಲಿಗಳಾಗಿದ್ದೇವೆ.

ಶ್ರದ್ಧಾಂಜಲಿ

ಶ್ರೀ ಸರವು ಭಾಗವತ ಕೃಷ್ಣ ಭಟ್ಟ.

ವಿಸ್ತಾರ ಗಾಂಭೀರ್ಯಗಳಲ್ಲಿ ಸಣ್ಣ ತೊರೆಗೂ ಮಹಾಸಾಗರಕ್ಕೂ ಯಾವುದೇ ಸಮಾನತೆ ಇಲ್ಲದಿದ್ದರೂ, ತೊರೆಯು ಸಾಗರದಲ್ಲಿ ಲೀನವಾದಾಗ ಅವೆರಡರಲ್ಲೂ ಏಕತ್ವವುಂಟಾಗುತ್ತದೆ. ಅಂತೆಯೇ ಪೂಜ್ಯ ದಿ। ಬಲಿಪ ನಾರಾಯಣ ಭಾಗವತರೆಂಬ ಸಾಗರದಲ್ಲಿ ಒಂದು ಚಿಕ್ಕ ತೊರೆಯಂತಿರುವ ನಾನು ಅವರ ಶಿಷ್ಯನಾಗಿರುವ ಭಾಗ್ಯವನ್ನು ಪಡೆದುದರಿಂದ ಒಂದು ರೀತಿಯಲ್ಲಿ ಸಂಬಂಧಿತನಾಗಿದ್ದೇನೆ. ಆದ್ದರಿಂದಲೇ ಭಕ್ತಿಪೂರ್ವಕವಾಗಿ ಕಾಣಿಕೆಯ ರೂಪದಲ್ಲಿ ಎರಡು ಮಾತುಗಳನ್ನು ಬರೆಯುವ ಸಾಹಸ ಮಾಡುತ್ತಿದ್ದೇನೆ.

ಮಹಾಕವಿಗಳ ಗಣನೆ ಮಾಡಿದಾಗ ಕಾಳಿದಾಸನ ಹೆಸರು ಹೇಳಿದ ಮೇಲೆ ಅವನಿಗೆ ಸಮಾನನಾದ ಮತ್ತೊಬ್ಬ ಕವಿಯ ಹೆಸರು ಸಿಗದಿದ್ದುದರಿಂದ ಎರಡನೆಯ ಬೆರಳಿಗೆ 'ಅನಾಮಿಕಾ' ಎಂಬ ಹೆಸರು ಬಂತೆಂದು ಯಾರೋ ಬುದ್ಧಿವಂತರು ಚಮತ್ಕಾರವಾಗಿ ಹೇಳಿದ್ದಾರೆ. ಯಕ್ಷಗಾನ ಭಾಗವತರ ಗಣನೆ ಮಾಡುವಾಗಲೂ ಬಹುಶಃ ಬಲಿಪ ಭಾಗವತರ ಹೆಸರನ್ನು ಮೊದಲನೆಯದಾಗಿ ಉಚ್ಚರಿಸಿದರೆ ಇಂತಹದೇ ಪರಿಸ್ಥಿತಿ ಉಂಟಾದೀತೆಂದು ನನಗನ್ನಿಸುತ್ತದೆ.

ಇಂದಿಗೆ ಸುಮಾರು ೨೮ ವರ್ಷಗಳ ಹಿಂದೆ, ಬಲಿಪ ನಾರಾಯಣ ಭಾಗವತರು ಕಲಾಪರಿಣತಿಯನ್ನು ಹೊಂದಿ ಕೀರ್ತಿಯ ಶಿಖರವನ್ನೇರಿದ್ದಾಗ ಅನೇಕ ಬಯಲಾಟ ತಾಳಮದ್ದಳೆಗಳಲ್ಲಿ ಅವರ ಅನುಪಮವಾದ ಗಾನವೈಖರಿಯನ್ನು ಕೇಳಿ ಯೌವನದ ಉತ್ಸಾಹದಲ್ಲಿದ್ದ ನಾನು ಯಕ್ಷಗಾನ ಹಾಡುಗಾರಿಕೆಯ ಕಡೆಗೆ ಆಕರ್ಷಿತನಾದೆ. ಬಲಿಪರಂತೆ ಉತ್ತಮ ಭಾಗವತನಾಗುವುದೇ ಜೀವನದ ಪರಮೋದ್ದೇಶವೆಂದು ನಿರ್ಧರಿಸಿದೆ.

ವಿಟ್ಲದ ಸಮೀಪ ನಿಡ್ಯಾಳ ಎಂಬಲ್ಲಿ ಆಸ್ತಿ ಮನೆ ಮಾಡಿಕೊಂಡು ಗೃಹಸ್ಥಜೀವನವನ್ನು ಕೈಗೊಂಡಿದ್ದ ಭಾಗವತರ ಬಳಿಗೆ ಹೋಗಿ ವಿನೀತನಾಗಿ ಶಿಷ್ಯ ವೃತ್ತಿಯನ್ನು ಸ್ವೀಕರಿಸಿದೆ. ನನ್ನ ಹೊರತು ಏಳೆಂಟು ಮಂದಿ ಇತರ ವಿದ್ಯಾರ್ಥಿಗಳೂ ಆಗ ಅವರ ಶಿಷ್ಯರಾಗಿದ್ದರು. ಬಲಿಪರ ಗುರುಗಳಾಗಿದ್ದ ದಿ। ಕೂಡ್ಲು ಶ್ರೀ ಸುಬ್ರಾಯ ಶಾನುಭಾಗರು, 'ಪ್ರತಿಫಲಾಪೇಕ್ಷೆ ಇಲ್ಲದೆ ಪ್ರೀತಿಯಿಂದ ಕೊಟ್ಟ ಉಪದೇಶವೇ ನಿಜವಾದ ವಿದ್ಯಾದಾನ.' ಎಂದು ತಮ್ಮ ಶಿಷ್ಯನಿಗೆ ಕೊಟ್ಟ ನಿರೂಪದ ಫಲವೋ ಏನೋ, ಊಟ ವಸತಿಗಳ ವ್ಯವಸ್ಥೆಯೊಂದಿಗೆ ವಿದ್ಯೆಯನ್ನೂ ಶ್ರೀಯುತರು ನನಗೆ ದಯಪಾಲಿಸಿದರು.

ಎರಡು ಮೂರು ವರ್ಷಗಳ ಕಾಲ 'ಸಂಗೀತ ಭಾಗವತನಾಗಿ' ನಾನು ಗುರುಗಳೊಂದಿಗೆ ತಿರುಗಾಟ ಮಾಡಿದ್ದೇನೆ. ಕವಿ ಪಾರ್ತಿಸುಬ್ಬನು ರಚಿಸಿದ ರಾಮಾಯಣದ ಎಲ್ಲ ಪ್ರಸಂಗಗಳೂ, ಕೃಷ್ಣಲೀಲೆ, ಕಂಸವಧೆ, ಕುಮಾರ ವಿಜಯ. ಕೃಷ್ಣಾರ್ಜುನ ಕಾಳಗ, ಅಶ್ವಮೇಧ ಮುಂತಾದ ಕೆಲವು ಪ್ರಸಂಗ

ಗಳೂ ಬಲಿಪರಿಗೆ ಅತ್ಯಂತ ಪ್ರಿಯವಾಗಿದ್ದವು. ತೋಡಿ, ನಾಟಿ, ಭೈರವಿ, ಕಲ್ಯಾಣಿ ಕಾಂಬೋಜಿ, ಶಂಕರಾಭರಣ, ಮಧ್ಯಮಾವತಿ, ಆರಭಿ, ಮೋಹನ, ಸಾವೇರಿ ಮುಂತಾದ ರಸಪೋಷಕವಾದ ರಾಗಗಳನ್ನೇ ಅವರು ಹೆಚ್ಚಾಗಿ ಬಳಸುತ್ತಿದ್ದರು. ಯಾವ ಮೇಳವೇ ಆಗಿರಲಿ, ಭಾಗವತರು ಬಲಿಪರೆಂದಾದರೆ, ಮೇಳದ ಯಜಮಾನ, ಹಿಮ್ಮೇಳದವರು, ವೇಷಧಾರಿಗಳು ಮುಂತಾಗಿ ಪ್ರತಿಯೊಬ್ಬನೂ ಅವರನ್ನು ಹೊಂದಿಕೊಂಡು ಅವರ ಹೇಳಿಕೆಯಂತೆ ನಡೆಯುಬೇಕಾಗಿತ್ತು-ನಡೆಯುತ್ತಿದ್ದರು. ವೀಳ್ಯ ಕೊಟ್ಟು ಆಟ ಆಡಿಸುವ ಆಧ್ಯವ್ಯಕ್ತಿಗಳೂ ಕೂಡ, "ಆಟ ಒಳ್ಳೆಯದಾಗಬೇಕು, ಪ್ರಸಂಗ ನೀವು ಆರಿಸಿದ್ದು"– ಎಂಬಷ್ಟೂ ಅವರಿಗೆ ಅಧಿಕಾರವನ್ನು ಒಪ್ಪಿಸಿಕೊಡುತ್ತಿದ್ದರು. ಪ್ರಸಿದ್ಧ ಚೆಂಡೆ ಮದ್ದಳೆ ವಾದಕರು, ಹೆಸರಾಂತ ವೇಷಧಾರಿಗಳು ಮೇಳದಲ್ಲಿ ಇದ್ದರೂ ಸರಿ, ಇಲ್ಲದಿದ್ದರೂ ಸರಿ, ಭಾಗವತರು ಬಲಿಪರೆಂದಾದರೆ ಸಾಕು, ಆ ವರ್ಷ ಆ ಮೇಳಕ್ಕೇ ಪ್ರಥಮಸ್ಥಾನ ದೊರೆಯುತ್ತಿತ್ತು.

ಒಂದು ಸಲ ನಾವಿದ್ದ ಇರ ಸೋಮನಾಥೇಶ್ವರ (ಕುಂಡಾವು) ಮೇಳಕ್ಕೂ ಕದ್ರಿ ಮೇಳಕ್ಕೂ ಮಾಣಿ ಎಂಬಲ್ಲಿ ಜೋಡಾಟ ನಿಶ್ಚಯವಾಗಿತ್ತು. ಜೋಡಾಟಕ್ಕೆ ವೀಳ್ಯ ತೆಗೆದುಕೊಂಡಾಗ ತನ್ನ ಸಲಹೆ ಕೇಳಿಲ್ಲವೆಂಬುದೊಂದು, ಹಾರ್ಮೋನಿಯಮ್, ಮೃದಂಗ ಮುಂತಾದ ಉಪಕರಣಗಳು ಸರಿಯಾಗಿಲ್ಲದಿರುವುದು ಇನ್ನೊಂದು ಹೀಗೆ ಒಂದೆರಡು ಕಾರಣಗಳಿಂದ ಬಲಿಪರು ಸ್ವಲ್ಪ ಅಸಮಾಧಾನಗೊಂಡಿದ್ದರು. ಜೋಡಾಟವೆಂದಾಗ ಸ್ವಾಭಾವಿಕವಾಗಿ ಸ್ಪರ್ಧೆ, ದ್ವೇಷ, ಅಸೂಯೆಗಳು ಇದ್ದೇ ಇರುತ್ತವೆ. ಇದೊಂದೂ ಬಲಿಪರಿಗೆ ಸೇರುತ್ತಿದ್ದಿಲ್ಲ. ಯಾವ ಉತ್ಸಾಹವೂ ಇಲ್ಲದೆ ಅವರು ಅಸಡ್ಡೆಯಿಂದಲೇ, ಮಧ್ಯರಾತ್ರಿ ಕಳೆಯುವ ತನಕ ನೀನೇ ಪದ ಹೇಳೆಂದು ನನಗೆ ಆಜ್ಞಾಪಿಸಿದರು. ಆಮೇಲೆ ಅವರೇ ಹಾಡತೊಡಗಿದರು. ಭಾಗವತರ ಔದಾಸೀನ್ಯದಿಂದ ನಮ್ಮ ರಂಗಸ್ಥಳದ ಆಟ ಬಹಳ ನೀರಸವಾಗಿತ್ತು. ಎದುರು ಪಕ್ಷದವರು ಮೆರೆಯುತ್ತಿದ್ದರು. ಪರಿಸ್ಥಿತಿಯನ್ನು ನೋಡಿ ಖಿನ್ನರಾದ ಮೇಳದ ಯಜಮಾನ ಶ್ರೀ ಕೊರಗ ಶೆಟ್ಟರು ನನ್ನ ಬಳಿ ಬಂದು, "ಭಾಗವತರಲ್ಲಿ ಹೇಳಿ ಹೇಗಾದರೂ ನಮ್ಮ ಮರ್ಯಾದೆ ಉಳಿಸಿಕೊಡುವಂತೆ ನೀವೇ ಹೇಳಬೇಕೆ"ಂದು ಸೂಚಿಸಿದರು. ಬಲಿಪರು ನನ್ನ ಮೇಲಿಟ್ಟಿದ್ದ ಪ್ರೀತಿಯ ಧೈರ್ಯದಿಂದ ನಾನು ಮೆಲ್ಲನೆ ಅವರ ಬಳಿ ಸಾರಿ ಯಜಮಾನರ ಅಭಿಪ್ರಾಯವನ್ನು ತಿಳಿಸಿದೆ.

"ವೇಷದವರಿಗೆ ಪಟ್ಟೆ ಪೀತಾಂಬರ, ಚಿನ್ನದ ಕಿರೀಟ ಎಲ್ಲ ಮಾಡಿಸುತ್ತಾರೆ. ಬೇಕಿದ್ದರೆ ಹುಲಿಯ ಹಾಲನ್ನೂ ತಂದುಕೊಡುತ್ತಾರೆ. ಭಾಗವತನಿಗೆ ಸರಿಯಾದ ಶ್ರುತಿ, ಮದ್ದಳೆ, ಚೆಂಡೆ ಇದೆಯೇ ನೋಡುವುದಿಲ್ಲ. ಇವರಿಗೆ ಜೋಡಾಟ ಯಾಕೆ? ಜೋಡಾಟದ ಮರ್ಯಾದೆ ಯಾಕೆ?" ಎಂದು ನನ್ನ ಮಾತು ಕೇಳಿ ಕುಳಿತಲ್ಲಿಂದಲೇ ಗುಡುಗಿದರು.

ಒಡನೆಯೇ ಎಲ್ಲೆಲ್ಲಿಗೋ ಆಳುಗಳನ್ನಟ್ಟಿ ಅರ್ಧಗಂಟೆಯೊಳಗೆ ಒಳ್ಳೆ ಹಾರ್ಮೋನಿಯಂ, ಮೃದಂಗ ಇತ್ಯಾದಿಗಳನ್ನು ತರಿಸಲಾಯಿತು. ಬಿಳಿ ನಾಲ್ಕಕ್ಕಿದ್ದ ಶ್ರುತಿಯನ್ನು ಐದಕ್ಕೆ ಏರಿಸಿ ಚೆಂಡೆ ಮದ್ದಳೆಗಳನ್ನು ಬಿಗಿದು ಭಾಗವತರು, ಮಧ್ಯಮಾವತಿ ರಾಗದಲ್ಲಿ "ಮುನಿರಾಯ ಕೇಳೆನ್ನ! ಮನದ ಯೋಚನೆಯ" ಎಂಬ ಪದ್ಯವನ್ನು ಸಿಂಹಗರ್ಜನೆಯಂತೆ ಹಾಡಿದರು. ಅಸದೃಶವಾದ ಈ ಕಂಠಧ್ವನಿಯನ್ನು ಕೇಳಿ ಇಡೀ ಸಭೆಯೇ ಸಿಡಿಲು ಬಡಿದಂತೆ ಸ್ತಬ್ಧವಾಯಿತು. ಎದುರು ಪಕ್ಷದ ಭಾಗವತರು, ವೇಷಧಾರಿಗಳಾದಿಯಾಗಿ ಎಲ್ಲರೂ ನಿಂತ ಹೆಜ್ಜೆಯಲ್ಲೇ ಮೂಕರಾಗಿ ಈ ಕಡೆ ದಿಟ್ಟಿಸತೊಡಗಿದರು. ಅಂದು ಬೆಳಗಿನ ತನಕ ಬಲಿಪರ ಹಾಡುಗಾರಿಕೆಯು ಹಾಗೆಯೇ ಮುಂದುವರಿದು ಜೋಡಾಟದಲ್ಲಿ ಜಯ ನಮ್ಮ ಪಾಲಿಗಾಯಿತು.

ಒಳ್ಳೆ ಸ್ಫೂರ್ತಿಯಿಂದ ಬಲಿಪರು ಚೆನ್ನಾಗಿ ಹಾಡಬೇಕಿದ್ದರೆ ಅವರಿಗೆ ಸ್ವಲ್ಪ ಅಮಲಿನ ವಸ್ತುವನ್ನು ಕೊಡಬೇಕೆಂದು ಗುಟ್ಟಾಗಿ ಯಾರೋ ಹೇಳಿದ ಮಾತನ್ನು ನಂಬಿ, ಒಂದು ಕಡೆ ಆಟದಲ್ಲಿ ಅವರು ಹಾಡುತ್ತಿದ್ದಾಗ ಸೀಯಾಳದಲ್ಲಿ ಶರಾಬು ತುಂಬಿಸಿ ಕುಡಿಯಲು ಕೊಟ್ಟರು. ಅದನ್ನು ಕೈಯಲ್ಲಿ ಹಿಡಿದು

ಬಾಯ ಹತ್ತಿರ ತಂದಾಗಲೇ ಬಲಿಪರಿಗೆ ಅದರಲ್ಲೇನಿದೆ ಎಂದು ತಿಳಿಯಿತು. ಆದರೂ ಸ್ವಲ್ಪ ಕುಡಿದಂತೆ ಮಾಡಿ, ಥಟ್ಟನೆ ಕೈಯಲ್ಲಿದ್ದ ಎಳನೀರನ್ನು ಬಿಸುಟು ಹಾಡಲು ಕುಳಿತಲ್ಲಿಂದಲೇ ಬಳಬಳನೆ ವಾಂತಿ ಮಾಡಿದರು, ಹೊಟ್ಟೆಯಲ್ಲಿ ತಡೆಯಲಾರದ ಸಂಕಟವಾದಂತೆ ನರಳುತ್ತ ಅಲ್ಲೇ ರಥದ ಮೇಲೆ ಮಲಗಿಬಿಟ್ಟರು. ಆಟ ಅಲ್ಲಿಗೇ ನಿಂತುಹೋಯಿತು. ಬಂದವರಿಗೆಲ್ಲ ಗಾಬರಿಯಾಯಿತು. ಗಣ್ಯಮಾನ್ಯವ್ಯಕ್ತಿಗಳೆಲ್ಲ ಸಮೀಪಕ್ಕೆ ಬಂದು, 'ಏನು, ಏನಾಯಿತು' ಎಂದು ಕೇಳುತ್ತ ಉಪಚರಿಸಿದರು.

ಆಟ ಅರ್ಧದಲ್ಲೇ ಕೊನೆಗೊಂಡದ್ದರಿಂದ ಸ್ವಲ್ಪ ಹೊತ್ತಿನಲ್ಲಿ ಸಭೆ ಚದರಿತು. ಗುರುಗಳಿಗೆ ಇದೆಂತಹ ವಿಪತ್ತು ಬಂತೆಂದು ಭಯಪಟ್ಟು ಕಂಗಾಲಾಗಿದ್ದ ನಾನು ಯಾರು ಇಲ್ಲದ ಸಂದರ್ಭ ನೋಡಿ ಹತ್ತಿರ ಹೋಗಿ "ಈಗ ಹೇಗಿದ್ದೀರಿ ?" ಎಂದು ವಿಚಾರಿಸಿದೆ.

"ಹೇಗೆ ಇರುವುದು ? ಇರಬೇಕಾದಂತೆಯೇ ಇದ್ದೇನೆ. ನನಗೆ ಅಂಥಾದ್ದೇನೂ ಆಗಿಲ್ಲ. ಇವರ ಹಣೆಬರಹ ಎಲ್ಲರಿಗೂ ತಿಳಿಯಲಿ ಎಂದೇ ಒಂದು ಒಳ್ಳೆ ನಾಟಕ ಆಡಿದೆ" ಎಂದು ಹೇಳಿದರು.

ಕಾಲಕ್ಕೆ ಸರಿಯಾಗಿ ಊಟ, ನಿದ್ದೆ, ವಿಶ್ರಾಂತಿ ಇತ್ಯಾದಿ ಯಾವುದೇ ನಿಯಮವನ್ನು ಭಾಗವತರು ಸರಿಯಾಗಿ ಪಾಲಿಸುತ್ತಿದ್ದಿಲ್ಲವಾದರೂ ಅವರು ಆರೋಗ್ಯವಂತರಾಗಿಯೇ ಇದ್ದರು. ಆದರೆ ಕೆಲವೊಮ್ಮೆ ಬಯಲಾಟಗಳಲ್ಲಿ, ರಸಭಾವಗಳನ್ನರಿಯದೆ, ಪಾತ್ರಗೌರವದ ಪರಿಜ್ಞಾನವಿಲ್ಲದೆ ಸ್ವಪ್ರತಿಷ್ಠೆಗಾಗಿಯೇ ಅಸಂಬದ್ಧ ಲಾಗ ಹಾಕುತ್ತಾ ಮನ ಬಂದಂತೆ ಮಾತನಾಡುವ ವೇಷಧಾರಿಗಳು ಸಿಕ್ಕಿದಾಗ, ತಾಳಮದ್ದಳೆಗಳಲ್ಲಿ ತನ್ನ ಮಾತೇ ಮೇಲೆ ನಿಲ್ಲಬೇಕೆಂಬ ಛಲದಿಂದ ಸುಮ್ಮನೆ ವಾದ ಬೆಳೆಸುವ ಅರ್ಥಧಾರಿಗಳು ಸಂಧಿಸಿದಾಗ, ತಲೆನೋವು ಹೊಟ್ಟೆನೋವು, ಮುಂತಾದ ಅಸ್ವಸ್ಥತೆಗಳನ್ನು ಬರಿಸಿಕೊಂಡು ಅವರು ಕಾರ್ಯಕ್ರಮಗಳನ್ನು ಅರ್ಧದಲ್ಲೇ ನಿಲ್ಲಿಸಿ ಬಿಡುತ್ತಿದ್ದರು.

ಮೇಳದವರು, ತಾಳಮದ್ದಳೆಯ ಅರ್ಥಧಾರಿಗಳು ಎಂದಾಗ ಸಾರ್ವಜನಿಕರು ಮೂಗು ಮುರಿದು ತಿರಸ್ಕಾರದಿಂದ ಕಾಣುವ ಒಂದು ಕಾಲ ಇತ್ತು. ಅವಿದ್ಯಾವಂತರಾದ ನೀತಿಗೆಟ್ಟ ಜನರ ಕೈಯಲ್ಲಿ ತೊಳಲಾಡುತ್ತಿದ್ದ ಯಕ್ಷಗಾನ ಕಲೆಯನ್ನು ವಿದ್ವಾಂಸರೂ, ಆಚಾರವಂತರೂ ಆದರಿಸಿ ಮೆಚ್ಚುವಂತೆ ಶ್ರೀ ಬಲಿಪ ಭಾಗವತರೇ ಮಾಡಿದವರು ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ವೇಷ, ಕುಣಿತ, ಅರ್ಥ, ಅಭಿನಯ ಮುಂತಾಗಿ ಈ ಕಲೆಯ ಪ್ರತಿಯೊಂದು ಅಂಗವನ್ನೂ ತಿದ್ದಿ ಅದಕ್ಕೆ ಒಂದು ನಿರ್ದಿಷ್ಟ ಸ್ವರೂಪವನ್ನು ಅವರೇ ಕೊಟ್ಟವರು. ಸ್ವತಃ ಅವರ ಶಿಷ್ಯರಾಗಿದ್ದು, ಇಲ್ಲವೇ ಅವರ ಪ್ರಭಾವಕ್ಕೆ ಒಳಗಾಗಿ ಅದೆಷ್ಟು ಮಂದಿ ಹೆಸರಾಂತ ಕಲಾವಿದರಾದರೋ – ಎಣಿಸುವುದೇ ಕಷ್ಟ.

ತನ್ನ ಬಳಿಗೆ ಬಂದ ಶಿಷ್ಯನು ಶ್ರದ್ಧಾಳು, ವಿನಯಪರ, ಗುಣವಂತ ಎಂದು ಅವರಿಗೆ ತೋರಿದರೆ ಸಾಕು, ಅವನನ್ನು ಪ್ರಕಾಶಕ್ಕೆ ತರಲು ಅವರು ಸರ್ವಪ್ರಯತ್ನವನ್ನೂ ಮಾಡುತ್ತಿದ್ದರು. ಕಾಡುಮಠ ಎಂಬಲ್ಲಿ ನಡೆದ ಒಂದು ತಾಳಮದ್ದಳೆಯ ಕೂಟದಲ್ಲಿ ಅವರು ನನ್ನ ವಿಷಯವಾಗಿ ತೋರಿದ ಆಸ್ಥೆಯನ್ನು ನಾನೆಂದಿಗೂ ಮರೆಯಲಾರೆ. ಅಂದಿನ ಹಾಡುಗಾರಿಕೆಗೆ ವಿಶೇಷವಾಗಿ ಅವರನ್ನೇ ಆಮಂತ್ರಿಸಿದ್ದರು. ನಾನು ಜತೆಯಲ್ಲಿ ಹೋಗಿದ್ದೆ. ಕಾರಣಾಂತರದಿಂದ ಆ ದಿನ ಬಲಿಪರೊಂದಿಗೆ ಮೃದಂಗ ನುಡಿಸಲು ಆಹ್ವಾನಿತರಾದ ಪ್ರಸಿದ್ಧ ಮೃದಂಗವಾದಕರು ಬಂದಿರಲಿಲ್ಲ. ಸಾಧಾರಣ ಮದ್ದಳೆ ಬಾರಿಸುವವರು ಒಂದಿಬ್ಬರು ಇದ್ದರು. ಅವರನ್ನೇ ಜತೆಗೂಡಿ ಹಾಡುಗಾರಿಕೆಯನ್ನು ನಿರ್ವಹಿಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡದೆ, "ಕಿಟ್ಟಪ್ಪ, ಈವತ್ತು ಭಾಗವತ ನೀನು, ನಾನು ಮದ್ದಳೆ ಬಾರಿಸುತ್ತೇನೆ. ಕುಳಿತುಕೊ" ಎಂದು ಬಲಾತ್ಕಾರದಿಂದಲೇ ನನ್ನನ್ನು ನೇಮಿಸಿದರು. ಅವರ ಮೃದಂಗವಾದನದಲ್ಲಿ ಬೆಳಗಿನ ತನಕ ನಾನು ಹಾಡಿದೆ. ಅಂದು ನೆರೆದವರು, "ಚಿಂತೆ ಇಲ್ಲ. ಬಲಿಪರ ಶಿಷ್ಯ ಹೌದು". ಎಂದು ನನ್ನ ಬಗ್ಗೆ ಆಡಿಕೊಳ್ಳುವಂತಾಯಿತು.

ಶ್ರೀ ಬಲಿಪ ಭಾಗವತರ ಸಾಮರ್ಥ್ಯ – ಪ್ರಭಾವಗಳಿಂದಲೇ ತೆಂಕುತಿಟ್ಟಿನ ಸಂಪ್ರದಾಯದ ನಮ್ಮ ಬಯಲಾಟಗಳು, ಬಡಗು ತಿಟ್ಟಿನ ಪ್ರಚಾರವೇ ಹೆಚ್ಚಾಗಿರುವ ಭಟ್ಕಳ, ಆಗುಂಬೆ, ಹೊಸನಗರ, ತೀರ್ಥಹಳ್ಳಿ ಮುಂತಾದ ಅನೇಕ ಸ್ಥಳಗಳಲ್ಲಿ ಮಾತ್ರವಲ್ಲದೆ ಜಿಲ್ಲೆಯ ಹೊರನಾಡುಗಳಲ್ಲಿಯೂ ಹೆಚ್ಚಿನ ಕೀರ್ತಿಯನ್ನು ಗಳಿಸಿದವು.

ಯಕ್ಷಗಾನವು ಕೆಲವರಿಗೆ ಕೇವಲ ಒಂದು ಹವ್ಯಾಸ ಮಾತ್ರ; ಹಲವರಿಗೆ ಜೀವಿಕೆಯ ಒಂದು ವೃತ್ತಿ; ಇತರರಿಗೆ ಮನೋರಂಜನೆಯ ಒಂದು ಸಾಧನ; ಆದರೆ ಬಲಿಪರ ಪಾಲಿಗೆ ಅದೊಂದು ತಪಸ್ಸೇ ಆಗಿತ್ತು. ಅದರ ಪೂರ್ಣಸಿದ್ಧಿಗಾಗಿ ಅವರು ದುಡಿದರು. ಔತಣದ ಊಟದಲ್ಲಿ ಪಾಯಸ – ಭಕ್ಷ್ಯಗಳಂತೆ, ಪಲ್ಯದಿಂದ ಮಜ್ಜಿಗೆಯ ವರೆಗಿನ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ವೈಶಿಷ್ಟ್ಯವೂ ಪ್ರಾಧಾನ್ಯವೂ ಇದ್ದಂತೆ ಯಕ್ಷಗಾನ ಕತೆಗಳಲ್ಲಿ ಪ್ರತಿಯೊಂದು ಪಾತ್ರವೂ ಒಂದಕ್ಕೊಂದು ಪೋಷಕವಾಗಿ ಪೂರ್ಣತೆಯನ್ನು ಪಡೆದಿರಬೇಕೆಂದು ಅವರು ಹೇಳುತ್ತಿದ್ದರು.

ಭಾಗವತರ ಬಂಧುಗಳೂ ಸ್ನೇಹಿತರೂ ಆಗಿದ್ದ ಪ್ರಸಿದ್ಧ ಸಂಗೀತ ವಿದ್ವಾಂಸ ಗವಾಯಿ ರಾಮರಾಯರೆಂಬವರು ಒಂದು ಸಲ ಬಲಿಪರೊಡನೆ, "ನೀವು ಈ ಯಕ್ಷಗಾನದಲ್ಲಿ ಕಾಲ ಕಳೆಯುವ ಬದಲು ಚೆನ್ನಾಗಿ ಸಂಗೀತವನ್ನು ಅಭ್ಯಾಸ ಮಾಡಿದ್ದರೆ, ನಿಮ್ಮ ಕಂಠಮಾಧುರ್ಯದಿಂದ ಉಚ್ಚಮಟ್ಟದ ಸಂಗೀತಗಾರರೆಂದು ಕೀರ್ತಿಗಳಿಸಬಹುದಿತ್ತು." ಎಂದು ಹೇಳಿದ್ದರು. ಬಲಿಪರು ಈ ಮಾತಿಗೆ ಪ್ರತ್ಯುತ್ತರ ಕೊಡಲಿಲ್ಲ. ಸ್ವಲ್ಪ ತಡೆದು ಶ್ರೀ ರಾಮರಾಯರೇ ಹೇಳಿದರು. "ಒಂದು ವಿಧದಲ್ಲಿ ನೋಡಿದರೆ ಇದೂ ಒಳ್ಳೇದೇ ಆಯಿತು. ಸಂಗೀತಗಾರರಾಗಿದ್ದರೆ, ಹತ್ತರೊಂದಿಗೆ ಹನ್ನೊಂದು ಎಂದು ಮಾತ್ರ ಆಗುತ್ತಿತ್ತು. ಯಕ್ಷಗಾನದಲ್ಲಿ ನೀವು ಓರ್ವ ಶಕಪುರುಷರೇ ಆಗಿದ್ದೀರಿ."

ಈ ಮಾತು ಅಕ್ಷರಶಃ ಸತ್ಯವಾಗಿದೆ. ಯಕ್ಷಗಾನದ ಶಕಪುರುಷ ಶ್ರೀ ಬಲಿಪ ನಾರಾಯಣ ಭಾಗವತರ ಶಿಷ್ಯರಲ್ಲಿ ನಾನೂ ಒಬ್ಬನಾಗಿದ್ದೇನೆ ಎಂದು ಹೇಳುವ ಭಾಗ್ಯವಾದರೂ ನನಗೆ ಬಂತಲ್ಲ ಎಂಬ ತೃಪ್ತಿಯೇ ನನಗೆ ಸಮಾಧಾನವನ್ನುಂಟು ಮಾಡಿದೆ.

ಪೂಜ್ಯ ಗುರುಗಳಾದ
ಶ್ರೀ ಬಲಿಪ ನಾರಾಯಣ ಭಾಗವತರು

ಶ್ರೀ ಐ. ವಿ. ಕೃಷ್ಣರಾವ್, ಪುತ್ತೂರು.

ಸಾಧಾರಣ 30 ವರ್ಷಗಳ ಹಿಂದಿನ ಮಾತು. ಒಂದು ದಿನ ಇತ್ತೀಚೆಗೆ ದಿವಂಗತರಾದ ನನ್ನ ಮಾವ ಶ್ರೀ ತುದಿಯಡ್ಕ ಈಶ್ವರಪ್ಪಯ್ಯನವರಲ್ಲಿ ಇದ್ದೆ. ಮಧ್ಯಾಹ್ನ ಊಟವಾದ ಕೂಡಲೇ ಅವರು, "ಬೆಳ್ಳಾರೆಯ ಹತ್ತಿರ ಭಾಗವತರ ಹಾಡುಗಾರಿಕೆಯ ಆಟವಿದೆ. ಬರುತ್ತಿಯೋ" ಎಂದು ನನ್ನಲ್ಲಿ ಕೇಳಿದರು. ಆಟದಲ್ಲಿ ತುಂಬಾ ಅಭಿರುಚಿ ಇದ್ದ ನಾನು ಸಂತೋಷದಿಂದ" ಬರುತ್ತೇನೆ ಎಂದೆ. ಸಾಧಾರಣ 3 ಘಂಟೆಯ ಹೊತ್ತಿಗೆ ಮಾವನವರೂ ಅವರ ಮಗ ಶ್ರೀ ರಾಮಕೃಷ್ಣ ರಾಯರೂ, ನಾನೂ ಹೊರಟು ಪ್ರಸಂಗ ಪ್ರಾರಂಭ ಆಗುವುದರೊಳಗೆ ಆಟ ನಡೆಯುವಲ್ಲಿಗೆ ತಲಪಿದೆವು. ಆಟ ಪ್ರಾರಂಭವಾಯಿತು. ಶ್ರೀ ಬಲಿಪರು ಹಾಡಲು ಕುಳಿತರು. ಅವರು ಹಾಡುತ್ತಿದ್ದ ರೀತಿಯನ್ನು ನೋಡಿ ಮಾವನವರು "ಇವತ್ತು ಯಾಕೋ ಭಾಗವತರಿಗೆ ಮನಸ್ಸು ಸರಿಯಿಲ್ಲ, ಸರಿ ಹಾಡುವುದೇ ಇಲ್ಲ" ಎಂದರು. ಸ್ವಲ್ಪ ಹೊತ್ತು ಹಾಗೆಯೇ ಕಳೆಯಿತು. ಸಾಧಾರಣ ಮೂರು ಘಂಟೆಯ ಹೊತ್ತಿಗೆ ಅವರು ಎದ್ದು ಶ್ರೀ ಬಲಿಪರ ಹತ್ತಿರ ಹೋಗಿ "ನಿಮ್ಮ ಹಾಡು ಕೇಳಲೆಂದೇ ಮನೆಯಿಂದ ಇಲ್ಲಿ ತನಕ ನಡೆದುಕೊಂಡೇ ಬಂದೆ" ಎಂದರು. ಆಗ ಶ್ರೀ ಬಲಿಪರು "ಒಂದೂ ಸರಿಯಿಲ್ಲ ಏನು ಮಾಡುವುದು" ಎಂದು ಹೇಳಿದರು. ಅನಂತರ ಕೆಲಹೊತ್ತು ಕಳೆಯಿತು. ಅಂದಿನ ಪ್ರಸಂಗವಾಗಿದ್ದ ಕೃಷ್ಣಾರ್ಜುನ ಕಾಳಗದಲ್ಲಿ ಬತ್ತಳಿಕೆಯಲ್ಲಿದ್ದ ಗಯನ ತಲೆಯನ್ನು ಮಾಯೆಯಿಂದ ಕೃಷ್ಣನು ಕತ್ತರಿಸಿ ಕುಳಿತಾಗ ಅರ್ಜುನನಿಗೆ ಇರುವ "ಹೋಯಿತು ಹೊತ್ತು ನೀನೋಡು ಭಾವಯ್ಯ" ಎಂಬ ಪದ್ಯ ಬಂತು. ಅದನ್ನು ಶ್ರೀ ಬಲಿಪರು ಹಾಡುವ ಕಾಲಕ್ಕೆ ಒಂದು ಹೊಸ ಲೋಕವೇ ನಿರ್ಮಾಣವಾದಂತೆ ನನಗೆ ಕಾಣಿಸಿತು. ಆ ಮೇಲೆ ಬೆಳಗಿನ ತನಕವೂ ಶ್ರೀ ಬಲಿಪರು ಅದ್ಭುತವಾಗಿ ಹಾಡಿದರು. ಆಟ ಮುಗಿದಾಗ ನನ್ನ ಮಾವನವರು "ಹದಿನಾರು ಮೈಲು ನಡೆದದ್ದು ಸಾರ್ಥಕವಾಯಿತು. ಬೆಳಗಿನ ಝಾವದಲ್ಲಿ ಅವರು ಹಾಡಿದ ಆ ಪದ್ಯಗಳಿಗೆ ಏನು ಕೊಟ್ಟರೂ ಕಡಿಮೆಯೇ" ಎಂದು ನಮ್ಮಲ್ಲಿ ಹೇಳಿದರು. ಹೀಗೆ ನಮ್ಮ ಮಾವನವರಿಂದಾಗಿ ನನಗೆ ಶ್ರೀ ಬಲಿಪರನ್ನು ಪ್ರಥಮಮೊದಲು ನೋಡುವ ಸುಯೋಗ ಒದಗಿತ್ತು,

ನನಗೆ ಬಾಲ್ಯದಿಂದಲೂ ಯಕ್ಷಗಾನದಲ್ಲಿ ತುಂಬಾ ಆಸಕ್ತಿ. ನನ್ನ ತಂದೆಯವರು ಆ ಕಾಲದಲ್ಲಿ ಪ್ರಸಿದ್ಧಿ ಹೊಂದಿದ ಇಚ್ಲಂಪಾಡಿ, ಮತ್ತು ಈಗಲೂ ಪ್ರಸಿದ್ಧವಾಗಿರುವ ಕೂಡ್ಲು ಮೇಳಗಳ ನಾಲ್ಕೈದು ಆಟಗಳನ್ನಾದರೂ ವರ್ಷಂಪ್ರತಿ ಆಡಿಸುತ್ತಿದ್ದರು. ಮಳೆಗಾಲದಲ್ಲಿ ಪ್ರಸಿದ್ಧ ವೇಷಧಾರಿಗಳಲ್ಲಿ ಕೆಲವರಾದರೂ ಹಲವಾರು ದಿವಸ ನಮ್ಮ ಮನೆಯಲ್ಲಿ ಇದ್ದು ಹೋಗುತ್ತಿದ್ದರು. ನನ್ನ ಎಳೆ ಪ್ರಾಯದಲ್ಲಿ ಪ್ರಸಿದ್ಧ ಬಣ್ಣದ ವೇಷಧಾರಿಯಾದ ಒತ್ತೆಕಿವಿ ಸುಬ್ಬನವರು ನನ್ನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು

ಅಂಗಳದಲ್ಲಿ ತಿರುಗಾಡಿದ ನೆನಪು ಈಗಲೂ ನನಗಿದೆ. ಹೀಗಾಗಿ ಎಲಿಮೆಂಟರಿ ಶಾಲೆಗೆ ಬರುವಾಗ ಮಕ್ಕಳ ಕೂಟದಲ್ಲಿ, ಭಾಗವತಿಕೆಯಲ್ಲಿ, ಚೆಂಡೆಮದ್ದಳೆ ಬಾರಿಸುವುದರಲ್ಲಿ, ವೇಷ ಹಾಕುವುದರಲ್ಲಿ, 'ಸೈ, ಎನಿಸಿಕೊಂಡಿದ್ದೆ. ಆದರಲ್ಲೂ ಸಣ್ಣ ಪುಟ್ಟ ತಾಳಮದ್ದಳೆಗಳಲ್ಲಿ ಚೆಂಡೆ ಮದ್ದಳೆ ಬಾರಿಸುವ ಸಾಮರ್ಥ್ಯ ಇತ್ತು. ನಾನು ಶ್ರೀ ಬಲಿಪರ ಹಾಡುಗಾರಿಕೆಯನ್ನು ಕೇಳಿದ ಆ ದಿವಸವೆ ಅವರ ಭಾಗವತಿಕೆಗೆ ಮಾರುಹೋಗಿದ್ದೆ. ಯಾವಾಗ ಅವರ ಹಾಡು ಕೇಳುವ ಸುಯೋಗ ಇನ್ನೊಮ್ಮೆ ಒದಗುವುದೋ ಎಂದು ಹಾರೈಸುತ್ತಿದ್ದೆ.

ಪ್ರಾಯಶಃ 1941ನೇ ಇಸವಿ ಎಂದು ಕಾಣುತ್ತದೆ. ವಿಟ್ಲದಲ್ಲಿ ಒಂದು ಜೋಡಾಟ ನಡೆಯಿತು. ಒಂದು ಮೇಳದಲ್ಲಿ ಶ್ರೀ ಬಲಿಪರೇ ಭಾಗವತರಾಗಿದ್ದರು. 'ಅಭಿಮನ್ಯು-ಕರ್ಣಪರ್ವ' ಪ್ರಸಂಗ. ಆಟ ಆರಂಭವಾದಾಗ ಶ್ರೀ ಬಲಿಪರು ಅಂಗಿ ತೆಗೆದು ಉದಾಸೀನರಾಗಿ, ನೀರಸವಾಗಿ ಹಾಡತೊಡಗಿದರು. ಸಮಸಪ್ತಕರ ಹತ್ತಿರ ಅರ್ಜುನನು ಇದಿರಾದಾಗ ಬಲಗಾಲ ಮೇಲೆ ಎಡಗಾಲನ್ನು ಎಳೆದಿಟ್ಟು 'ಘಡಯಾಮಿನಿಚರ ಭಳಿರೆ' ಎಂಬ ಹಾಡನ್ನು ಹಾಡಿದಾಗ ನನಗೆ ರಂಗಸ್ಥಳವಿಡೀ ನಡುಗಿದಂತೆ ಕಂಡು, ಕುಳಿತ ಸಾವಿರಾರು ಜನರ ಮೇಲೆ ಹಾಡಿನ ಒಂದು ದೊಡ್ಡ ತೆರೆ ಅಪ್ಪಳಿಸಿದಂತೆ ಕಂಡಿತು.

1943ರಿಂದ 1951ರ ತನಕ ನಾನು ಈ ಊರನ್ನು ಬಿಟ್ಟು ಬೆಂಗಳೂರಿನಲ್ಲಿ ಇರುತ್ತಿದ್ದುದರಿಂದ ಯಕ್ಷಗಾನದ ಸಂಪರ್ಕವೇ ಕಡಿದುಹೋಗಿ ನನಗೆ ಬರುತ್ತಿದ್ದ ಅದರ ಎಲ್ಲಾ ಅಂಗಗಳೂ ಮರೆತುಹೋಗಿದ್ದವು. 1952ನೇ ಇಸ್ವಿಯಲ್ಲಿ ಪುನಹ ಪುತ್ತೂರಲ್ಲೇ ಬಂದು ನೆಲಸಿದೆ. ಆ ವರ್ಷ ನನ್ನ ಕುಟುಂಬದ ಒಂದು ಮನೆಯಲ್ಲಿ ಒಂದು ಲಗ್ನ ಸಮಾರಂಭ ನಡೆಯಿತು. ಅದೇ ದಿನ ರಾತ್ರಿ ಶ್ರೀ ಬಲಿಪರ ಶಿಷ್ಯರಾದ ಶ್ರೀ ಬಳಕಿಲ ಈಶ್ವರಪ್ಪಯ್ಯನವರ ಭಾಗವತಿಕೆಯಲ್ಲಿ ತಾಳಮದ್ದಳೆ ನಡೆಯಿತು. ಹಿಂದೆ ನನಗೆ ಮದ್ದಳೆ ಬಾರಿಸಲು ಬರುತಿತ್ತು ಎಂದು ಅರಿತಿದ್ದ ಅವರು ನನ್ನನ್ನು ಮದ್ದಳೆ ಬಾರಿಸಲು ಕುಳ್ಳಿರಿಸಿದರು. ಆದರೆ ಆಗ ನನಗೆ ಬಾರಿಸಲು ಸಾಧ್ಯವೇ ಆಗಲಿಲ್ಲ. "ಎಲ್ಲಾ ಮರೆತಿದ್ದಿ, ನಿನಗೆ ಮದ್ದಳೆಗೆ ಚಾಪು ಹಾಕಲು ಆರು ತಿಂಗಳು ಬೇಕಾದೀತು" ಎಂದು ಹೇಳಿದರು. ಆ ಮಾತಿನಿಂದಾಗಿ ಹಠಹಿಡಿದು, ಇಂದಿಗೂ ಯಕ್ಷಗಾನ ಕ್ಷೇತ್ರದಲ್ಲಿ ಚೆಂಡೆ ಮದ್ದಳೆ ಬಾರಿಸುವ ಶ್ರೇಷ್ಠ ಕಲಾವಿದರಲ್ಲೊಬ್ಬರಾದ ಶ್ರೀ ಪುತ್ತೂರು ನಾರಾಯಣ ಶೆಟ್ಟರಲ್ಲಿ ಕಲಿತು 6 ತಿಂಗಳಲ್ಲೇ ಶ್ರೀ ಬಳಕಿಲ ಈಶ್ವರಪ್ಪಯ್ಯನವರ ಭಾಗವತಿಕೆಗೇ ಮದ್ದಳೆ ಬಾರಿಸಿ "ಹುಡುಗನಿಗೆ ಹಟ ಉಂಟು. ತಲೆ ಚುರುಕು ಉಂಟು" ಎಂದು ಹೇಳಿಸಿಕೊಂಡೆ.

ಹೇಗೋ ನನ್ನ ಈ ವಿದ್ಯೆ, ಯಕ್ಷಗಾನದ ಅತ್ಯಂತ ಶ್ರೇಷ್ಠ ಮದ್ದಳೆಗಾರರಾದ ಶ್ರೀ ಕುದುರೆಕೂಡ್ಲು ರಾಮ ಭಟ್ಟರ ಕಣ್ಣಿಗೆ ಬಿತ್ತು. ಒಂದು ದಿನ ಅವರು ಒತ್ತಾಯದಿಂದ ಕಬಕದಲ್ಲಿ ಶ್ರೀ ಬಲಿಪರ ಹಾಡುಗಾರಿಕೆಯಲ್ಲಿ ನಡೆಯುತ್ತಿದ್ದ ಆಟದಲ್ಲಿ ನನ್ನನ್ನು ಮದ್ದಳೆ ಬಾರಿಸಲು ಕುಳ್ಳಿರಿಸಿದರು. ಶ್ರೀ ಬಲಿಪರನ್ನು ಕಂಡ ಕೂಡಲೇ ನನಗೆ ಮೈ ಇಡೀ ಬೆವರಿತು. ಅಂಜುತ್ತಲೇ ಮದ್ದಳೆ ಬಾರಿಸತೊಡಗಿದೆ. ಒಂದೆರಡು ಸಲ ನನ್ನ ಪೆಟ್ಟುಗಳು ಹಿಂದುಮುಂದೆಯಾದಾಗ "ಛೇ ಹಾಗಲ್ಲ ಹೀಗೆ" ಎಂದು ರಂಗಸ್ಥಳದಲ್ಲೇ ಶ್ರೀ ಬಲಿಪರು ಮದ್ದಳೆಯನ್ನು ಬಾರಿಸಿ ತೋರಿಸಿದರು. ನಾನು ಬಾರಿಸುವುದು ಸರಿಯಾಗುವವರೆಗೂ ಬಿಡುತ್ತಲೇ ಇರಲಿಲ್ಲ. ನನಗೋ ತುಂಬಿದ ಸಭೆಯಲ್ಲಿ ಅವರು ಹೀಗೆ ಮಾಡಿದಾಗ ಕಣ್ಣೀರೇ ಬಂತು. ಅಂತೂ ಬೆಳಗಾಯಿತು. ಬೆಳಗಾದ ಕೂಡಲೇ ನನ್ನನ್ನು ಹತ್ತಿರ ಕರೆದು ನನ್ನ ಪೂರ್ವೋತ್ತರಗಳನ್ನೆಲ್ಲಾ ವಿಚಾರಿಸಿದರು. ಆ ಮಾತಿನೆಡೆಯಲಿ ನನ್ನ ತಂದೆಯವರ ಪರಿಚಯ ಅವರಿಗೆ ಚೆನ್ನಾಗಿತ್ತೆಂಬ ಸಂಗತಿ ನನಗೆ ಗೊತ್ತಾಯಿತು. ಅಲ್ಲಿಂದಲೇ "ಇವತ್ತು ಕಾಣ್ಯೂರಿನಲ್ಲಿ ಕಟೀಲು ಮೇಳದ ಆಟದಲ್ಲಿ ಹಾಡಲು ಹೋಗುತ್ತೇನೆ. ನೀನೂ ಬಾ" ಎಂದು ನನ್ನನ್ನು ಒತ್ತಾಯದಿಂದ ಕರೆದುಕೊಂಡು ಹೋದರು. ಅಲ್ಲಿ ಮದ್ದಳೆ ಬಾರಿಸಲು ಅವರೇ ಕರೆದು ಕುಳ್ಳಿರಿಸಿಕೊಂಡರು. ಹೀಗೆ ನಾನು ಅವರ ಶಿಷ್ಯವರ್ಗಕ್ಕೆ ಸೇರಿಹೋದ.

ಅನಂತರ ಆಗಾಗ ಅವರು ಭಾಗವತಿಕೆಗೆ ಹೋಗುವಲೆಲ್ಲಾ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಎರಡು ಮೂರು ವರ್ಷಗಳತನಕ ನನ್ನನ್ನು ತಿದ್ದುವ ಕೆಲಸವನ್ನು ಕೈಗೊಂಡರೆಂದು ಹೇಳಬಹುದು. ಆಟ ಅಥವಾ ತಾಳಮದ್ದಳೆ ಆಗುವ ಮುಂಚೆಯೂ ನಂತರ ಏನಾದರೂ ಹೇಳ ಬೇಕಾದ್ದನ್ನು ಹೇಳಿಕೊಡುತ್ತಿದ್ದರು. ಅಂತು ಕೊನೆ ಕೊನೆಗೆ ಯಾರಾದರೂ ಅವರ ಹಾಡುಗಾರಿಕೆಯನ್ನು ಬಯಸಿ "ಹಿಮ್ಮೇಳಕ್ಕೆ ಯಾರನ್ನು ಹೇಳಬೇಕು" ಎಂದು ಅವರನ್ನು ಕೇಳಿದಾಗ "ಕೃಷ್ಣಯ್ಯ" (ನನ್ನನ್ನು ಅವರು ಹಾಗೆಯೇ ಹೇಳುವ ಕ್ರಮ) ನನ್ನು ಹೇಳಿ ಎಂದು ಅವರು ಹೇಳುವಷ್ಟಕ್ಕಾದೆ.

ಈ ಎಲ್ಲಾ ದೃಷ್ಟಿಯಿಂದ ನೋಡಿದಾಗ ಅವರ ಗುರು ಪಾತ್ರ ನನ್ನ ಮಟ್ಟಿಗೆ ಬಹು ಹಿರಿದಾಗಿದೆ. ಒಂದು ಪದ್ಯಕ್ಕೆ ಮದ್ದಳೆಯನ್ನೋ, ಚೆಂಡೆಯನ್ನೂ ಬಾರಿಸಿದ್ದನ್ನು ಕೇಳಿದಾಗಲೇ ಅವರಿಗೆ ವಾದಕನ ಶಕ್ತಿ ತಿಳಿದು ಹೋಗುತಿತ್ತು. ಒಬ್ಬ ವೇಷಧಾರಿ ರಂಗಸ್ಥಳವನ್ನು ಪ್ರವೇಶಿಸಿ, ಒಂದು ಪದ್ಯಕ್ಕೆ ಕೆಲಸ ಮಾಡಿದಾಗ ಅವನ ಸಾಮರ್ಥ್ಯವನ್ನು ಅಳೆದು ಬಿಡುತ್ತಿದ್ದರು. ಒಂದು ದಿನ ನೇರಳೆಕಟ್ಟೆ ಎಂಬಲ್ಲಿ ಅವರ ಭಾಗವತಿಕೆಯಲ್ಲಿ ಒಂದು ಆಟವಾಯಿತು. ಅವರೇ ತಿಳಿಸಿದಂತೆ ಹಿಮ್ಮೇಳಕ್ಕೆ ನಾನು ಹೋಗಿದ್ದೆ. ಯಾವುದೊ ಒಂದು ಪದ್ಯಕ್ಕೆ ನಾನು ಚೆಂಡೆ ಬಾರಿಸುವಾಗ ವೇಷಧಾರಿ ತಾಳ ಬಿಟ್ಟು ಕುಣಿಯತೊಡಗಿದ. ನಾನು ಅವನ ಕುಣಿತಕ್ಕೆ ಸರಿಯಾಗಿ ಚೆಂಡೆ ಬಾರಿಸಹೋದಾಗ ಅವರು "ಚೆಂಡೆ ಬಾರಿಸುವುದು ತಾಳಕ್ಕೆ, ತಾಳ ಬಿಟ್ಟು ಕುಣಿಯುವವನಿಗಲ್ಲ. ಕುಣಿಯುವವ ತಾಳಕ್ಕೆ ಸರಿಯಾಗಿ ಕುಣಿಯಬೇಕು" ಎಂದು ನನ್ನನ್ನು ಗದರಿಸಿದರು.

ಅವರ ಹತ್ತಿರ ಮದ್ದಳೆ ಬಾರಿಸಲು ಕುಳಿತು ಅವರ ಮುಖವನ್ನು ನೋಡಿದರೆ ಏನೋ ಅಂಜಿಕೆಯಾಗುತಿತ್ತು. ಅಂಥ ಒಂದು ಶಕ್ತಿ ಅವರ ಮುಖದಲ್ಲಿತ್ತು. ನಾನು ಯಾವಾಗಲೂ ಮದ್ದಳೆ ಬಾರಿಸುವಾಗ ಅವರ ಮುಖವನ್ನು ನೋಡುತ್ತಲೇ ಇರಲಿಲ್ಲ. ಕೊನೆಯವರೇಗೂ ಅವರ ಹತ್ತಿರ ಕುಳಿತಾಗ ನನ್ನ ಮನಸ್ಸಿನಲ್ಲಿ ಭಯ ಇರುತ್ತಿದ್ದರೂ ಅವರು ಮಾತ್ರ ನನ್ನನ್ನು ಒಬ್ಬ ಅಪ್ಪನಂತೆ ನಡೆಸಿಕೊಂಡರು. ತಾನು ಕಲಿಸಿ ಕೊಟ್ಟ ಶಿಷ್ಯ ಎಂಬ ವಿಚಾರ ಅಂತರಂಗದಲ್ಲಿದ್ದರೂ ನಡವಳಿಕೆಯಲ್ಲಿ ತೋರಿಸಿ ಕೊಡುತ್ತಿದ್ದಿಲ್ಲ. ನಾನು ಅವರನ್ನು ಅಜ್ಜಾ" ಎಂದು ಕರೆಯುತ್ತಿದ್ದರೂ ಅವರ ಇತರ ವ್ಯವಹಾರಗಳಲ್ಲೆಲಾ ನನ್ನ ಅಭಿಪ್ರಾಯವನ್ನು ಕೇಳುತ್ತಿದ್ದರು. ಕೆಲವು ಅಗತ್ಯ ಕಾರ್ಯಗಳನ್ನು ನನ್ನ ಮೂಲಕವೇ ಮಾಡಿಸ್ಲುತ್ತಿದ್ದರು. 1965 ನೇ ಇಸವಿಯಲ್ಲಿ ಶ್ರೀ ಅಗರಿ ಶ್ರೀನಿವಾಸ ಭಾಗವತರು ರಚಿಸಿದ ಶ್ರೀದೇವಿ ಲಲಿತೋಪಾಖ್ಯಾನದ ನೂರ ಒಂದನೇ ಆಟದಲ್ಲಿ ಅವರಿಗೆ ಮಾಡಿದ ಸನ್ಮಾನಕ್ಕೆ ಶ್ರೀ ಬಲಿಪರ ಸಂದೇಶವನ್ನು ಒಯ್ದು ಮುಟ್ಟಿಸುವ ಕೆಲಸವನ್ನು ಶ್ರೀ ಬಲಿಪರು ನನಗೆ ವಹಿಸಿದ್ದರು. ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡಮಿ 1963ನೇ ಇಸವಿಯಲ್ಲಿ ಅವರಿಗಿತ್ತ ಪ್ರಶಸ್ತಿ ಸ್ವೀಕಾರಕ್ಕಾಗಿ ಅವರು ಬೆಂಗಳೂರಿಗೆ ಹೋದಾಗ ನನ್ನನ್ನೂ ಕರೆದುಕೊಂಡು ಹೋದರು. ಇದರಿಂದಾಗಿ ಆಕಾಶವಾಣಿಯಲ್ಲಿಯೂ ಅವರ ಹಾಡುಗಾರಿಕೆಗೆ ಹಿಮ್ಮೇಳದಲ್ಲಿ ನಾನು ಭಾಗವಹಿಸುವ ಸುಯೋಗ ಒದಗಿತ್ತು.

ಅವರು ಪುತ್ತೂರಿಗೆ ಬಂದಾಗ ಆಗಾಗ ನಮ್ಮ ಮನೆಗೇ ಬರುತ್ತಿದ್ದರು. ಅವರು ರಚಿಸಿದ ಕೊನೆಯದಾದ "ಅಂಜನಾ ವಿಲಾಸ" ಎಂಬ ಪ್ರಸಂಗವನ್ನು ನನ್ನ ಮನೆಯಲ್ಲೇ ಅವರೇ ನನಗೆ ಓದಿ ಹೇಳಿದ್ದರು. ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡಮಿಯ ಪ್ರಶಸ್ತಿ ಅವರಿಗೆ ದೊರೆಯುವ ಮೊದಲೇ ನಾನು ಪ್ರಸಿದ್ಧ ಸಾಹಿತಿಗಳಾದ ಶ್ರೀ ಉಗ್ರಾಣ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಪುತ್ತೂರಿನಲ್ಲಿ ಶ್ರೀ ಇರಾ ಸೋಮನಾಥೇಶ್ವರ ಮೇಳದ ಒಂದು ಆಟದಲ್ಲಿ ಮೇಳದ ಯಜಮಾನರಾದ ಶ್ರೀ ಕಲ್ಲಾಡಿ ಕೊರಗ ಶೆಟ್ಟರ ಸಹಕಾರದೊಂದಿಗೆ ಮಾನಪತ್ರವನ್ನೂ ಉಡುಗೊರೆಗಳನ್ನೂ ಅರ್ಪಿಸಿದೆ.

ಆಮೇಲೆ ಅವರಿಗೆ ಈ ರೀತಿಯ ಸನ್ಮಾನಗಳು ವೈಭವದಿಂದ ಅನೇಕ ಕಡೆಗಳಲ್ಲಿ ಜರಗಿದಾಗ ನಡೆದ ಹೆಚ್ಚಿನ ತಾಳಮದ್ದಳೆಗಳಲ್ಲಿ ನಾನೂ ಭಾಗವಹಿಸುವ ಅವಕಾಶ ದೊರಕಿತ್ತು.

ಮರಣದ ಕೆಲವೇ ದಿನಗಳ ಮೊದಲು ಅವರು ನನ್ನಲ್ಲಿಗೆ ಬಂದಾಗ, ನನಗೆ ಆರಂಭದಲ್ಲಿ ಚೆಂಡೆ ಮದ್ದಳೆ ಹೇಳಿಕೊಟ್ಟ ಪುತ್ತೂರಿನ ಶ್ರೀ ನಾರಾಯಣ ಶೆಟ್ಟರು ಅವರೊಡನೆ ಯಕ್ಷಗಾನದ ಹಳೆ ಸಂಪ್ರದಾಯದ ರೀತಿಯ ರಂಗಸ್ಥಳದಲ್ಲಿ ನಿಲ್ಲುವಲ್ಲಿಂದ ಪ್ರಸಂಗ ಪೀಠಿಕೆಯ ತನಕದ ಎಲ್ಲಾ ಕ್ರಮಗಳನ್ನು ಬರೆದು ಕೊಡಬೇಕಾಗಿ ಕೇಳಿಕೊಂಡರು. ನಾನು ಸಹ "ಈ ಕಾಲದಲ್ಲಿ ಅದರ ಅಗತ್ಯ ತುಂಬಾ ಇದೆ. ಅದನ್ನು ನಿಮ್ಮಲ್ಲಿ ಅಲ್ಲದೆ ಬೇರೆ ಯಾರೊಡನೆ ಕೇಳಲಿ" ಎಂದು ಅವರನ್ನು ಒತ್ತಾಯಿಸಿದೆ. "ಇನ್ನೊಮ್ಮೆ ಬಂದಾಗ ಬರೆದು ತರುತ್ತೇನೆ" ಎಂದು ಹೇಳಿದವರು ಹಿಂತಿರುಗಿ ಬರಲೇ ಇಲ್ಲ. ಅದನ್ನು ಪಡೆಯುವ ಭಾಗ್ಯವನ್ನು ವಿಧಿ ನಮಗೊದಗಿಸಲಿಲ್ಲ.

ಕಲಾ ಸ್ನೇಹಿತನ ಸ್ಮರಣೆ

ಶ್ರೀ ಕೆಮ್ಮಣ್ಣು ನಾರ್ಣಪ್ಪಯ್ಯ

ದೇಹ ಅಳಿದ ಮೇಲೆ ಉಳಿಯುವುದು ಕೀರ್ತಿ. ಇಂತಹ ಕೀರ್ತಿಶೇಷರಾಗಲು ಹುಟ್ಟಿ ಬಂದವರಿದ್ದಾರೆ. ಹುಟ್ಟಿದ ಮೇಲೆ ತಮ್ಮ ತಪಸ್ಸಿನಿಂದ ಅದನ್ನು ಬೆಳೆಯಿಸಿಕೊಂಡವರಿದ್ದಾರೆ. ಅಂಥವರಲ್ಲಿ ಕೀರ್ತಿಶೇಷ ಬಲಿಪ ನಾರಾಯಣ ಭಾಗವತರೊಬ್ಬರು. ಈಗ ಕೀರ್ತಿಶೇಷರಾಗಿರುವ ಶ್ರೀ ಬಲಿಪ ನಾರಾಯಣ ಭಾಗವತರು ಮಧುರ ಶಾರೀರವುಳ್ಳವರಾಗಿ ಹುಟ್ಟಿ, ತನ್ನ ಹುಟ್ಟಿನ ಶಕ್ತಿಯನ್ನು ಯೋಗ್ಯ ತಪಸ್ಸಿನಿಂದ ಬೆಳೆಯಿಸಿಕೊಂಡು ಪರಿಪೂರ್ಣ ಕಲಾವಿದರಾಗಿ ಕನ್ನಡ ನಾಡಿನಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮೂಲೆ ಮೂಲೆಯಲ್ಲೂ ತಮ್ಮ ಕೀರ್ತಿಯನ್ನು ಹಬ್ಬಿಸಿದರು.

ಕೀರ್ತಿಶೇಷ ಬಲಿಪ ನಾರಾಯಣ ಭಾಗವತರು ನನ್ನ ಬಾಹ್ಯ ಚಕ್ಷುಗಳಿಗೆ ಅಗೋಚರರಾದರೂ ನನ್ನ ಹೃದಯದಲ್ಲಿ ಸದಾ ಕಾಣುತ್ತಿರುವರು. ಆ ಕಲಾಮಹಿಮನ ಕುರಿತು ನನ್ನ ನೆನಪಿನ ಘಟನೆಗಳನ್ನು ಈ "ಕಲಾಸ್ನೇಹಿತನ ಸ್ಮರಣೆ"ಯಲ್ಲಿ ಪೋಣಿಸಿ ಅದನ್ನು ಅವರಿಗೇ ಅರ್ಪಿಸಿರುತ್ತೇನೆ.

ಶ್ರೀ ಬಲಿಪ ನಾರಾಯಣ ಭಾಗವತರ ಮತ್ತು ನನ್ನ ಒಡನಾಟವು ೧೯೧೩ನೇ ಇಸವಿಯಿಂದಲೇ ಪ್ರಾರಂಭವಾಗಿದೆ. ಅಂದಿನಿಂದ ಮೊನ್ನೆ ಮೊನ್ನೆಯ ವರೆಗಿನ ಒಡನಾಟದಲ್ಲಿ ಒಂದು ಆತ್ಮೀಯ ಸ್ನೇಹವು ಬೆಳೆಯುತ್ತ ಬಂದುದು ಈಗ ನನಗೆ ಸ್ಪಷ್ಟವಾಗಿ ಗೋಚರವಾಗುತ್ತಿದೆ. ಅದರೊಂದಿಗೆ ಅವರ ಪ್ರಸನ್ನ ಮೂರ್ತಿಯ ಹಿಂದಿರುವ ಸಹನಶೀಲ ಗುಣವೂ ನನಗೀಗ ಹೊಳೆಯುತ್ತದೆ.

ಶ್ರೀ ಬಲಿಪ ನಾರಾಯಣ ಭಾಗವತರು ಮಲ್ಲದಮಠದ ಶ್ರೀ ಅನ್ನಪೂರ್ಣೇಶ್ವರೀ ಅಮ್ಮನವರ ಭಕ್ತರು. ಕೀರ್ತಿಶೇಷ ಕೂಡ್ಲು ಸುಬ್ರಾಯ ಶ್ಯಾನುಭಾಗರ ಪರಮ ಪ್ರೀತಿಯ ಶಿಷ್ಯರು. ಕೀರ್ತಿಶೇಷರ ಸಂಪೂರ್ಣ ಶ್ರೇಯಸ್ಸಿನ ಮೂಲ ಕಾರಣ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕೂಡ್ಲು ಸುಬ್ರಾಯ ಶ್ಯಾನುಭಾಗರು.

ಶ್ರೀ ಬಲಿಪ ನಾರಾಯಣ ಭಾಗವತರು ಇಂದಿನಿಂದ ೫೪ ವರ್ಷಗಳ ಹಿಂದೆ ಕಾರ್ಕಳ ತಾಲೂಕು ನಿಟ್ಟೆ ಗ್ರಾಮದ ಕೆಮ್ಮಣ್ಣು ಶ್ರೀ ದುರ್ಗಾ ಪರಮೇಶ್ವರೀ ಅಮ್ಮನವರ ದಶಾವತಾರ ಮೇಳಕ್ಕೆ ಬಂದಿದ್ದರು. ಮದ್ದಳೆಗಾರರಾಗಿ ಶ್ರೀ ಮೂಲ್ಕಿ ಸುಬ್ಬಣ್ಣಯವರೂ ಬಂದಿದ್ದರು.

ಸೇವೆ ಆಟದ ಮರುದಿನ ನನ್ನ ತೀರ್ಥರೂಪರೊಡನೆ, ಅವರಿಬ್ಬರೂ ಒಂದು ಮಾತು ಕೇಳಿದರು. "ಎರಡುವರ್ಷದ ಮಟ್ಟಿಗೆ ನಿಮ್ಮ ನಾರಾಯಣನನ್ನು ನಮ್ಮೊಡನೆ ಕಳುಹಿಸಬೇಕು." ಈ ಮಾತನ್ನು ಕೇಳಿದ ನನ್ನ ತೀರ್ಥರೂಪರು ಭಾಗವತರ ಹಾಗೂ ಮದ್ದಳೆಗಾರರಲ್ಲಿ ಅವರಿಗಿದ್ದ ಪೂಜ್ಯ ಭಾವನೆಯಿಂದ ನನ್ನನ್ನು ಅವರಿಗೊಪ್ಪಿಸಿಕೊಟ್ಟರು. ಅಂದಿನಿಂದ ಬಲಿಪ ನಾರಾಯಣ ಭಾಗವತರು ಮತ್ತು ಸುಬ್ಬಣ್ಣ ಮದ್ದಳೆಗಾರರು ನನ್ನ ಪರಮಪೂಜ್ಯ ಗುರುಗಳಾದರು.

ಶ್ರೀ ಬಲಿಪ ನಾರಾಯಣ ಭಾಗವತರು ಇಂದಿನಿಂದ ೫೪ ವರ್ಷಗಳ ಹಿಂದೆ (ಸುಮಾರು ೧೯೧೩ರಲ್ಲಿ) ಪಾವಂಜೆ ಮೇಳದಲ್ಲಿ ಭಾಗವತರಾಗಿರುವಾಗ, ಸುಮಾರು ಎರಡು – ಮೂರು ವರ್ಷಗಳ ಕಾಲ, ಹರಿದಾಸ ಮೂಲ್ಕಿ ಲಕ್ಷ್ಮೀನಾರ್ಣಪ್ಪಯ್ಯನವರ ಪ್ರೀತಿಯ ಶಿಷ್ಯರಾಗಿ, ಅವರಿಂದ ಸಮ- ವಿಷಮ, ತಾಳ – ಲಯ, ಕವಿತೆ ಇತ್ಯಾದಿಗಳನ್ನು ಕಲಿತು ಕೊಂಡರು. ಅಂದು ನಾವು ಆಡುತ್ತಿದ್ದ ಪ್ರತಿಯೊಂದು ಆಟಕ್ಕೂ ಮೂಲ್ಕಿ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರು ಬಂದು ಆಟವನ್ನು ನೋಡಿ ಗುಣದೋಷ ಗಳನ್ನು ಹೇಳುತಿದ್ದರು.

ಈ ರೀತಿಯಲ್ಲಿ ನಾಲ್ಕಾರು ವರ್ಷಗಳು ಕಳೆಯುವಾಗ ಯಕ್ಷಗಾನಕ್ಕೆ ಶುಭೋದಯವಾಗುವ ಒಂದು ಯೋಗ ಬಂದಂತಾಯಿತು. ೧೯೨೧ರ ನಂತರವೆಂದು ಹೇಳಬಹುದು. ಮಂಗಳೂರು ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಉಳ್ಳಾಲ ಮಂಗೇಶರಾಯರು ಆ ತರಬೇತಿ ಶಾಲೆಯ ಲ್ಲೊಂದು ಯಕ್ಷಗಾನ ಪುನರುಜ್ಜೀವಿನೀ ಸಭಾ ಎಂಬ ಹೆಸರಿನದೊಂದು ಯಕ್ಷಗಾನ ಕೂಟವನ್ನೇರ್ಪಡಿಸಿ, ತರಬೇತಿ ಹೊಂದುವ ಉಪಾಧ್ಯಾಯರಲ್ಲಿ ಈ ಜನತೆಯ ಕಲೆಯಲ್ಲಿ ಅಭಿರುಚಿಯುಂಟಾಗುವಂತೆ ಮಾಡಿದರು.

ಆ ಕಾಲದಲ್ಲಿ ಎಂದರೆ ೧೯೨೧, ೧೯೨೨, ೧೯೨೩ರ ಸಾಲಿನಲ್ಲಿ ಶ್ರೀ ಉಳ್ಳಾಲ ಮಂಗೇಶ ರಾಯರು, ಶ್ರೀ ಬಲಿಪ ನಾರಾಯಣ ಭಾಗವತರ ಕೂಡುವಿಕೆಯಿಂದಲೂ ಮೂಲ್ಕಿ ಸುಬ್ಬಣ್ಣ ಮದ್ದಳೆ ಗಾರರೂ, ಕದ್ರಿ ಕಿಟ್ಟಣ್ಣ ಮದ್ದಳೆಗಾರರು ಮತ್ತು ನಾನು ; ಮತ್ತು ಅರ್ಥಧಾರಿಗಳಾಗಿ ಸಾಬಾಜಿ ಶ್ರೀನಿವಾಸ ರಾಯರು, ಪಡ್ರೆ ಶ್ರೀಪತಿ ಶಾಸ್ತ್ರಿಗಳು, ಕೆ. ಪಿ. ವೆಂಕಪ್ಪ ಶೆಟ್ಟಿ, ಭಾರತಿ ರಾಮಚಂದ್ರ ಶಾಸ್ತ್ರಿಗಳು, ನೀರೆ ತಿಮ್ಮಪ್ಪ ಹೆಗ್ಡೆಯವರು, ತೆಕ್ಕಟ್ಟೆ ಬಾಬಣ್ಣ ಶ್ಯಾನುಭಾಗರು, ತಲೆಪ್ಪಾಡಿ ನಾಂಙಪ್ಪರೈಗಳು, ಮುನ್ನೂರು ಶಿವರಾಮಯ್ಯನವರು ಮುಂತಾದ ವಿದ್ವಜ್ಜನರ ಸೇರುವಿಕೆಯಿಂದ ಮಂಗಳೂರು ತರಬೇತಿ ಶಾಲೆಯಲ್ಲಿ ಹಲವಾರು ತಾಳಮದ್ದಳೆ (ಯಕ್ಷಗಾನಕೂಟ) ಗಳು ಜರಗಿರುತ್ತವೆ. ಹಾಗೆಯೇ ಪ್ರಸಿದ್ಧ ವೇಷಧಾರಿಗಳಾಗಿ ಕೀರ್ತಿ ಶೇಷರಾಗಿರುವ ಕುಂಬಳೆ ಗುಂಡನವರು, ಕುಂಬಳೆ ನರಸಿಂಹನವರು ಮುಂತಾದ ವರ ಕೂಡುವಿಕೆಯಿಂದಾಗುತಿದ್ದ ದಶಾವತಾರ ಆಟಗಳಿಗೂ ಶ್ರೀ ಬಲಿಪ ನಾರಾಯಣ ಭಾಗವತರೂ ನಾನೂ ಹೋಗುತ್ತಿದ್ದೆವು. ವೇಷಧಾರಿ ಕುಂಬಳೆ ನರಸಿಂಹನವರ ಮೇಲೆ ಬಲಿಪರಿಗೂ ನನಗೂ ಗುರು ಭಾವನೆಯಿತ್ತು. ಕಾರಣ, ರಂಗಸ್ಥಳದ ರೀತಿ ನೀತಿಯನ್ನೂ ನಾಟ್ಯಾಭಿನಯವನ್ನೂ ವೇಷ ಕಟ್ಟುವುದನ್ನೂ ನಮಗೆ ಬೋಧಿಸಿದ್ದರು. ೧೯೧೪ರಲ್ಲಿ ಕಟೀಲು ದೇವಸ್ಥಾನದ ಮೊಕ್ತೇಸರರಾದ ಶ್ರೀ ಕೊಡತ್ತೂರು ಗುತ್ತು ರಾಮಣ್ಣ ಶೆಟ್ರು ಕೊಳೂರು ದೆಪ್ಪಣೆಯಲ್ಲಿ ಪಾವಂಜೆ, ಕಟೀಲು, ನಿಟ್ಟೆ, ಮತ್ತು ಬೋಳಾರ – ಎಂಬೀ ನಾಲ್ಕು ಮೇಳಗಳ ಆಟವಾಡಿಸುತಿದ್ದರು. ಆ ನಾಲ್ಕು ಮೇಳಗಳ ಆಟಕ್ಕೆ ನೆರೆದಿದ್ದ ಸುಮಾರು ೪೦,೦೦೦ ಜನರು ಶ್ರೀ ಬಲಿಪ ಭಾಗವತರ ಹಾಡುವಿಕೆಗಾಗಿ ಮನಸಾರೆ ಹೊಗಳುತಿದ್ದರು. ತಾಳ ಲಯಬದ್ಧವಾದ ಜಾಗಟೆಯ ಕುಣಿತದೊಡನೆ, ಸುಮಧುರವಾದ ಸುಶ್ರಾವ್ಯವಾದ ಸಂಗೀತ ಸುಧೆಯು ಹರಿಯುತಿದ್ದು ಮೈಲು ದೂರಕ್ಕೂ ಕೇಳುತಿತ್ತೆಂದರೆ ಅದೊಂದು ನವೀನ ಸೃಷ್ಟಿಯೆನ್ನಬೇಕು. ಆಗ ತಾನೆ ಲಯವಾಗುತ್ತಿರುವ ಹಳೆ ಪದ್ಧತಿಯ ಒಳಿತನ್ನು ಉಳಿಸಿಕೊಂಡು ಹೊಸ ಪದ್ಧತಿಯ ನವೀನತೆ ಯನ್ನು ದಶಾವತಾರ ಆಟದ ಪದವಲ್ಲಿ ಜೋಡಿಸಿದವರೇ ದಿವಂಗತ ಬಲಿಪ ಭಾಗವತರು.

೧೯೧೪ರಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ನಡೆದ ಜೋಡು ಆಟದಲ್ಲಿ ಆ ಕಾಲದ ಪಟ್ಟಾಧಿ ಕಾರಿ ದಿವಂಗತ ಚಂದಯ್ಯ ಹೆಗ್ಗಡೆಯವರು ಮತ್ತು ಕಾರ್ಕಳ ದಾನಶಾಲಾ ಮಠದ ಅಂದಿನ ಸ್ವಾಮಿ ಯವರು ದಿವಂಗತ ಭಾಗವತರನ್ನು ತುಂಬಾ ಹೊಗಳಿ ಬಹುಮಾನಿಸಿ ಆಶೀರ್ವದಿಸಿದ್ದರು. ೧೯೧೮ರ ನಂತರ ಕೆಲವು ವರ್ಷಗಳಲ್ಲಿ ಮಳಲಿ ಚೆಲುವಯ್ಯ ಬಲ್ಲಾಳರ ಮನೆಯಲ್ಲಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಹಲವು ತಾಳಮದ್ದಳೆಗಳಾಗಿವೆ. ಅದರಂತೆ ಮಳಲಿ ಮತ್ತು ಕಟ್ಟೇಮಾರು ಮನೆ

ಎದುರು ಆಟವಾಗುವಾಗ ದಿವಂಗತ ಬಲಿಪ ಭಾಗವತರನ್ನೂ ನನ್ನನ್ನೂ ಕರೆಸುತ್ತಿದ್ದರು. ಕೀರ್ತಿ ಶೇಷ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ತೆಂಕು ಮತ್ತು ಬಡಗು ತಿಟ್ಟಿನ ಯಕ್ಷಗಾನ ಕಲಾಭಿಮಾನಿಗಳಿದ್ದು, ಶ್ರೀ ಬಲಿಪ ನಾರಾಯಣ ಭಾಗವತರ ವಿದ್ವತ್ತಿಗೆ ತುಂಬಾ ಮೆಚ್ಚಿದ್ದು ಗೌರವಿಸಿದ್ದರು.

೧೯೫೫ರಲ್ಲಿ ನಿಟ್ಟೆಗುತ್ತಿನಲ್ಲಿ ಜರಗಿದ ತಾಳಮದ್ದಳೆಗೆ ಅಧ್ಯಕ್ಷರಾಗಿ ಬಂದಿದ್ದ ಉಡುಪಿಯ ಪಂಡಿತ ವೆಂಕಟ್ರಮಣಾಚಾರ್ಯರು ಬಲಿಪ ಭಾಗವತರ ವಿದ್ವತ್ತಿಗೆ ಮೆಚ್ಚಿ ಸ್ವರ್ಣಪದಕವಿತ್ತು ಗೌರವಿಸಿದರು. ಅದೇ ತಾಳಮದ್ದಳೆಗೆ ಬಂದಿದ್ದ ದಿವಂಗತ ನಾರಾಯಣ ಕಿಲ್ಲೆಯವರು ಪ್ರಥಮ ಬಾರಿ ಅರ್ಥ ಹೇಳಲಿಕ್ಕೆ ಪ್ರಾರಂಭಿಸಿ, ಅಂಗದನ ಅರ್ಥ ಹೇಳಿದ್ದರು. ಅಂದಿನಿಂದ ದಿವಂಗತ ಕಿಲ್ಲೆಯವರು ಬಲಿಪ ಭಾಗವತರನ್ನು ಗುರುಭಾವನೆಯಿಂದ ಗೌರವಿಸುತಿದ್ದರು.

೧೯೬೩ರಲ್ಲಿ ಮಡಿಕೇರಿಯಲ್ಲಿ ಜರಗಿದ ಕೊಡಗು ಕನ್ನಡ ಸಾಹಿತ್ಯ ಪರಿಷತ್ತಿನ ಸಭೆಯಲ್ಲಿ ಒಂದು ಯಕ್ಷಗಾನ ತಾಳಮದ್ದಳೆ ಜರಗಿತು. ಅಂದು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಬಲಿಪ ಭಾಗವತರನ್ನು ಪ್ರಶಂಸಿದರು. ಅದೇ ವರ್ಷದಲ್ಲೆಂಬಂತೆ, ಮಂಗಳೂರು ಪೆಂಟ್ಲೆಂಡ್ ಪೇಟೆಯಲ್ಲಿ ಶ್ರೀ ರಾಮಕೃಷ್ಣ ಕಾರಂತರ ಮನೆಯಲ್ಲಿ ಒಂದು ವಿಶೇಷ ತಾಳಮದ್ದಳೆ ಜರಗಿತು. ಅಂದು ಐದಾರು ಸಾವಿರ ಜನ ನೆರೆದಿದ್ದು ಬಲಿಪರ ಹಾಡುಗಾರಿಕೆಗೆ ಮೆಚ್ಚಿಹೋದರು.

೧೯೬೩ರಲ್ಲಿ ಮದ್ರಾಸಿನ ಎಕ್ಮೋರಿಯದ ಸಾರ್ವಜನಿಕ ಸಭಾಮಂದಿರದಲ್ಲಿ ಗಿರಿಜಾ ಕಲ್ಯಾಣ ಆಟವಾಯಿತು. ಅಲ್ಲಿ ಡಾ। ಯು. ರಾಮರಾಯರು ಆ ಕಾಲದ ಮೇಯರ್ ಸಂಬಂಧಮ್ ಮೊದಲಿಯಾರ್, ಬೆನಗಲ್ ನರಸಿಂಗ ರಾವ್, ಮುಂತಾದ ಘನ ಮನುಷ್ಯರನ್ನು ಆಮಂತ್ರಿಸಿದ್ದರು. ಅವರೆಲ್ಲರೂ ನಮ್ಮ ಬಲಿಪ ಭಾಗವತರ ವಿದ್ವತ್ತಿನ ಪದಕ್ಕೆ ಮೆಚ್ಚಿಹೋದರು.

ಈ ಕಾಲದಲ್ಲಿ ಬಲಿಪರ ಕೀರ್ತಿ ವಿಶಾಲವಾಗಿ ಹಬ್ಬಿತು. ತಿರುಮಲೆ ತಾತಾಚಾರ್ಯ ಶರ್ಮರೂ, ಫಲಿಮಾರು ಮಠದ ಮೊದಲಿನ ಸ್ವಾಮಿಯವರೂ, ಪೇಜಾವರ ಮಠದ ಸ್ವಾಮಿಯವರೇ ಮೊದಲಾದವರು ಅವರನ್ನು ಮೆಚ್ಚಿ ಹೊಗಳಿದರು.

೧೯೪೨ರಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ವಿಜೃಂಭಣೆಯಿಂದಾದ ಮದುವೆಯಲ್ಲೊಂದು ವಿಶೇಷ ತಾಳಮದ್ದಳೆ ಜರಗಿತು. ಅಂದಿನ ಸಭೆಯಲ್ಲಿ ಆಸ್ಥಾನ ವಿದ್ವಾನ್ ದೇವೇಂದ್ರಪ್ಪನವರು, ಸೇಸಪ್ಪನವರು, ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು, ಶ್ರೀ ಕೆ. ರಘುಚಂದ್ರ ಬಲ್ಲಾಳರು, ಶ್ರೀ ಅ. ನ. ಕೃಷ್ಣರಾಯರು, ಶ್ರೀ ಕೆ. ಎಸ್. ಧರಣೇಂದ್ರಯ್ಯ, ಶ್ರೀ ಶಿವಮೂರ್ತಿ ಶಾಸ್ತ್ರಿ, ಶ್ರೀ ಹುರುಳಿ ಭೀಮರಾಯರು, ಶ್ರೀ ಶಿವರಾಮ ಕಾರಂತರೇ ಮೊದಲಾದ ಮಹನೀಯರು ಬಲಿಪರ ಪದವನ್ನು ಕೇಳಿ ಮೆಚ್ಚಿ ಹೊಗಳಿದರು. ಶ್ರೀ ಮಂಜಯ್ಯ ಹೆಗ್ಗಡೆಯವರು ಬಲಿಪರನ್ನು ವಿಶೇಷವಾಗಿ ಸನ್ಮಾನಿಸಿದರು. ಶಿವರಾಮ ಕಾರಂತರು ಬಲಿಪರ ಹಲವು ಪದಗಳನ್ನು ಟೇಪ್ ರಿಕಾರ್ಡು ಮಾಡಿಕೊಂಡರು.


ರಾಜ್ಯ ಪ್ರಶಸ್ತಿಗಾಗಿ ಪ್ರತ್ಯಕ್ಷ ಪರೋಕ್ಷ ಪ್ರಯತ್ನಗಳಾಗಿ ಅದನ್ನು ಗಳಿಸಿಕೊಂಡವರು ಇದ್ದಾರಂತೆ. ಆದರೆ ಕೀರ್ತಿಶೇಷ ಬಲಿಪ ನಾರಾಯಣ ಭಾಗವತರಿಗೆ ಆ ಸನ್ಮಾನ ತಾನಾಗಿ ಬಂದುದು. ಇವರ ಇಳಿ ವಯಸ್ಸಿನಲ್ಲಿ ನಿವೃತ್ತ ಜೀವನದ ಶಾಂತತೆಯಲ್ಲಿ ಇರುವಾಗ ಈ ಗೌರವದ ರಾಜ್ಯ ಪ್ರಶಸ್ತಿ ದೊರೆಯಿತು. ಬೆಂಗಳೂರಿನಲ್ಲಿ ಜರಗಿದ ಒಂದು ಸಮಾರಂಭದಲ್ಲಿ ಈ ಪ್ರಶಸ್ತಿಯ ವಿತರಣೆಯಾಯಿತು. ಅದೇ ದಿನ ರಾತ್ರಿ ಬೆಂಗಳೂರು ಆಕಾಶವಾಣಿಯವರು, ಅ. ನ. ಕೃಷ್ಣರಾಯರು, ಆಸ್ಥಾನ ವಿದ್ವಾನ್ ದೇವೇಂದ್ರಪ್ಪ, ಮುಂತಾದವರಿದ್ದು ಬಲಿಪರನ್ನು ಹಾಡಿಸಿದರು. ಅದನ್ನು ಮತ್ತೆ ಟೇಪ್ ರಿಕಾರ್ಡು ಮಾಡಲಾಯಿತು.

ಮತ್ತೊಂದು ದಿನ ಬಲಿಪರು ನನ್ನನ್ನೂ ಕರೆಸಿದ್ದರು. ಅಂದು ಶಿವರಾಮ ಕಾರಂತರು ಕೆಲವು ರಾಗಗಳ ಪದಗಳನ್ನು ಚೆಂಡೆ ಮದ್ದಳೆಗಳ ಕೂಡುವಿಕೆಯಿಂದ ಬಲಿಪರಿಂದ ಹಾಡಿಸಿದರು; ಮತ್ತು ಅದರ ಟೇಪ್ ರಿಕಾರ್ಡು ಮಾಡಿಸಿದರು.

ಹೀಗೆ ಬಲಿಪರೂ ನಾನೂ ತಾಳಮದ್ದಳೆ, ದಶಾವತಾರ ಆಟದ ಒಂದು ಕಲಾರಂಗದ ಒಡನಾಡಿಗಳು. ಈ ಒಡನಾಟದಲ್ಲಿ ಅವರ ಸ್ನೇಹವನ್ನು ನಾನು ಪಡೆದದ್ದು ಅದೊಂದು ಪ್ರಸಾದವೆಂದೇ ಭಾವಿಸುತ್ತಿದ್ದೇನೆ. ನನ್ನ 15ನೇ ವರ್ಷ ಪ್ರಾಯದಿಂದ ಮೊದಲ್ಗೊಂಡು ಈ ವರೇಗೆ ನನ್ನ ಜೀವನದಲ್ಲಿನ ಒಳಿತು ಕೆಡಕುಗಳಲ್ಲಿ ನನ್ನ ದಾತಾರರಾದ ಶ್ರೀ ಮಂಜಯ್ಯ ಹೆಗ್ಗಡೆಯವರು, ಕಟ್ಟೆಮಾರು ಶ್ರೀ ರಘುಚಂದ್ರ ಬಲ್ಲಾಳರು, ಗುರುಗಳಾದ ಸುಬ್ಬಣ್ಣ ಮದ್ದಳೆಗಾರರು, ಶ್ರೀ ಬಲಿಪ ನಾರಾಯಣ ಭಾಗವತರು – ಇವರನ್ನೆಲ್ಲ ದೇಹಾಂತ್ಯದ ವರೆಗೆ ಸ್ಮರಿಸಿಕೊಂಡಿರುವೆನು.

ಕೀರ್ತಿಶೇಷ ಬಲಿಪ ನಾರಾಯಣ ಭಾಗವತರು ತನಗೊಲಿದು ಬಂದ ವಿದ್ಯಾಲಕ್ಷ್ಮಿಯನ್ನು ತನ್ನ ಜೀವನದ ಆಡಂಬರಕ್ಕಾಗಿ ವಿಕ್ರಯಿಸಲಿಲ್ಲ; ಹಣಕ್ಕಾಗಿ ಹಾತೊರೆಯಲಿಲ್ಲ; ಆತ್ಮಾಭಿಮಾನದಿಂದ ಕಲಾ ಸೇವೆಗೈದಿದ್ದಾರೆ. ಅವರು ಗುಣಕ್ಕಾಗಿ ಬಗ್ಗಿದವರಲ್ಲದೆ ಹಣಕ್ಕಾಗಿ ಬಗ್ಗಿದವರಲ್ಲ. ಅವರ ಜೀವನದಲ್ಲಿ ಪರೇಂಗಿತಜ್ಞತೆ ತುಂಬಿತ್ತು !


ಈ ಕಲಾ ಸ್ನೇಹಿತನ ಸ್ಮರಣೆಯನ್ನು ಶ್ರೀ ಅನ್ನಪೂರ್ಣೇಶ್ವರೀ ಅಮ್ಮನವರ ಚರಣಕ್ಕೆ ಮನಸಾ ಸಮರ್ಪಿಸುತ್ತೇನೆ.




ಅಭಿನಂದನಾ ಸಭೆಯಲ್ಲಿ ಮಾನಪತ್ರಕ್ಕೆ ಪ್ರತ್ಯುತ್ತರವನ್ನು ಕೊಡುತ್ತಿದ್ದಾರೆ.



ಯಕ್ಷಗಾನ ಕೂಟದಲ್ಲಿ ಭಾಗವತರಾಗಿ...



ಶ್ರೀ ಪರ್ತಜೆ ವೆಂಕಟರಮಣ ಭಟ್ಟರು ಮಾನಪತ್ರವನ್ನು ಸಮರ್ಪಿಸುತ್ತಿದ್ದಾರೆ.



ಎಣ್ಮಕಜೆ ಪಂಚಾಯತಿನ ಅಧ್ಯಕ್ಷ ಶ್ರೀ ಕೆ. ವೈ. ನಾರಾಯಣ ರೈ ಅವರು ಬೆಳ್ಳಿಯ ಜಾಗಟೆ ಕೋಲನ್ನು ಅರ್ಪಿಸುತ್ತಿದ್ದಾರೆ.

ಭಾಗ ೩

ಯಕ್ಷಗಾನ

ಯಕ್ಷಗಾನವೂ
ದಿ। ಬಲಿಪ ನಾರಾಯಣ ಭಾಗವತರೂ

ಶ್ರೀ ಕುಬಣೂರು ಬಾಲಕೃಷ್ಣರಾವ್, ಎಡ್ವೊಕೇಟ್ Ex-ಎಮ್. ಎಲ್. ಸಿ. ಮಂಗಳೂರು.

ಕಲೆಗೆ ಕಲಾವಿದನ ಸಂಬಂಧವಿರುವುದು ಕಲೆಯ ವಿಶೇಷವಾದ ಪ್ರಚಾರಕ್ಕೆ ಮತ್ತು ಅದರ ಬಹಳವಾದ ಉನ್ನತಿಗೆ ಕಲಾವಿದನು ಕಾರಣೀಭೂತನಾದರೆ ಮಾತ್ರ, ಸಾಮಾನ್ಯ ಕಲಾವಿದರನ್ನು ಸಮಯ ಹೋದ ಹಾಗೆ ಜನತೆ ನೆನಪಿನಲ್ಲಿಡುವದಿಲ್ಲ. ಆದರೆ ಅತಿ ಮೇಲ್ಮಟ್ಟದ ಕಲಾವಿದನಿಗೂ ಕಲೆಗೂ ಪ್ರತ್ಯೇಕಿಸಲಾರದ ಸಂಬಂಧವಿರುವದರಿಂದ ಅಂತಹವನ ನೆನಪು ಯಾವ ಕಾಲಕ್ಕೂ ಜನತೆಯ ಸ್ಮೃತಿ ಪಥದಲ್ಲಿ ಅಚ್ಚಳಿಯದೆ ಇದ್ದೆ ಇರುತ್ತದೆ. ಯಕ್ಷಗಾನದ ಸೇವೆ ಸಲ್ಲಿಸಿದ ಕಲಾವಿದರಲ್ಲಿ ಅಂತಹ ಸ್ಥಾನವನ್ನು ಈ ವರೆಗೆ ಪಡೆದಿರುವ ಮಹಾನುಭಾವರನ್ನು ಕೈ ಬೆರಳಿನಿಂದ ಎಣಿಕೆ ಮಾಡಬಹುದು. ಅಂತಹ ಅತಿ ವಿರಳ ಪುರುಷರಲ್ಲಿ ದಿ। ಬಲಿಪ ನಾರಾಯಣ ಭಾಗವತರೂ ಒಬ್ಬರೆಂದರೆ ತಪ್ಪಾಗಲಾರದು. ಯಕ್ಷಗಾನವು ಪ್ರಚಾರದಲ್ಲಿರುವಷ್ಟು ಸಮಯ ಜನತೆ ದಿ। ಬಲಿಪರನ್ನು ಸ್ಮರಿಸದಿರಲಾರದು.

ಯಕ್ಷರು ಹಾಡುತ್ತಿದ್ದ ಮಾರ್ಗವನ್ನು ಅವಲಂಬಿಸಿರುವದು ಯಕ್ಷಗಾನ. ಗಂಧರ್ವರು ಹಾಡುತ್ತಿದ್ದ ರೀತಿಗೆ ಗಂಧರ್ವಗಾನವೆನ್ನುತ್ತಾರೆ. ಗಂಧರ್ವ ಗಾನದಂತೆಯೆ ಯಕ್ಷಗಾನವೂ ಸಂಗೀತವೆ. "ಗೀತಂ ವಾದ್ಯಂ ನರ್ತನಂ ಚ ತ್ರಯಂ ಸಂಗೀತ ಮುಚ್ಯತೇ"-ಗಾನ, ವಾದ್ಯ, ನರ್ತನ- ಇವು ಮೂರು ಸಂಗೀತದಲ್ಲಿ ಸೇರಿರುತ್ತವೆ. ಆದರೆ ಯಕ್ಷಗಾನದಲ್ಲಿ ಸಂಗೀತದಷ್ಟೆ ಸಾಹಿತ್ಯವೂ ಸೇರಿರುತ್ತದೆ. "ಸಹ ಹಿತೇನ," ಹಿತದಿಂದ ಕೂಡಿರುವದು ಸಾಹಿತ್ಯ, ಯಾವುದರ ಸಹಾಯದಿಂದ ಧರ್ಮ ಪ್ರಚಾರ ಮಾಡಬಹುದೊ ಮತ್ತು ಯಾವುದರ ಸಂಪರ್ಕದಿಂದ ನಮ್ಮ ನೈತಿಕ ಮಟ್ಟವನ್ನು ತಿದ್ದಿಕೊಳ್ಳಬಹುದೊ ಅದೇ ಸಾಹಿತ್ಯ. ಅಂತಹ ವಿಶಿಷ್ಟ ಗುಣವು ಯಕ್ಷಗಾನದಲ್ಲಿರುತ್ತದೆ. ಯಕ್ಷಗಾನದ ಕಥಾ ವಸ್ತುಗಳು ಇತಿಹಾಸ ಮತ್ತು ಪುರಾಣಗಳಿಂದ ಆಯ್ದುಕೊಂಡವುಗಳಾಗಿರುತ್ತವೆ. ಹಿಂದಕ್ಕೆ ನಮ್ಮನ್ನು ಒಯ್ಯುತ್ತಿರವದೆ ಪುರಾಣ. ನಮ್ಮ ಪೂರ್ವಜರ ಚರಿತ್ರೆಯನ್ನು ನಮಗೆ ತಿಳಿಸುವುದೆ ಪುರಾಣ. ಸೃಷ್ಟಿ ಮತ್ತು ಲಯಗಳನ್ನು ವಿವರಿಸಿ ಪರಮಾತ್ಮನ ಬೇರೆ ಬೇರೆ ಅವತಾರಗಳ ಕಥೆಗಳನ್ನು ಕೂಡಿಕೊಂಡಿರುವುದೇ ಪುರಾಣ. ಉತ್ತಮರ ಚರಿತೆಗಳನ್ನು ಕೇಳುವುದರಿಂದ ನಮ್ಮ ಗುಣಗಳನ್ನು ಬೆಳೆಸಿ ದೋಷಗಳನ್ನು ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಇವುಗಳಿಗೆ ಬೇಕಾದ ಸಾಧನಗಳು ಯಕ್ಷಗಾನ ಪ್ರಸಂಗಗಳಲ್ಲಿ ದೊರೆಯುತ್ತವೆ. ಸದಾ ತಪ್ಪು ದಾರಿಗೆ ಸೆಳೆಯಲು ಇಂದ್ರಿಯಗಳು ಯತ್ನಿಸುತ್ತವೆ. ಇಂದ್ರಿಯಗಳ ಸೆಳೆತಕ್ಕೆ ಮನಸ್ಸು ಸುಲಭವಾಗಿ ಬಲಿ ಬೀಳುತ್ತದೆ. ಅಂತಹ ಸನ್ನಿವೇಶಗಳಲ್ಲಿ ಒಳ್ಳೆಯದು ಯಾವದು ಕೆಟ್ಟದು ಯಾವದು ಯಾವುದನ್ನು ಹಿಡಿಯಬಹುದು ಯಾವುದನ್ನು ಬಿಡಬಹುದು – ಈ ಗೊಂದಲದಲ್ಲಿ ಬಿದ್ದಾಗ ಪರಮಾತ್ಮನ ನೆನಪೇ ಆ ಸಂಕಷ್ಟದಲ್ಲಿ ಮನುಷ್ಯನನ್ನು ಪಾರಾಗುವಂತೆ ಮಾಡಬಲ್ಲುದು. ಅದೇ ಜ್ಞಾನವನ್ನು ಕೊಡ

ತಕ್ಕ ಏಕೈಕ ಸಾಧನ, ಇದು ಯಕ್ಷಗಾನದಿಂದ ಸುಲಭವಾಗಿ ದೊರೆಯುತ್ತದೆ. ಯಕ್ಷಗಾನದಲ್ಲಿ ಅಡಕವಾಗಿರುವ ತತ್ವಗಳನ್ನು ಅನುಷ್ಠಾನ ಮಾಡಿದರೆ ಸರ್ವಪ್ರಾಣಿಸಾಧಾರಣವಾದ ಇಹದ ಸುಖವು ಲಭಿಸುವದಲ್ಲದೆ ವಿಶಿಷ್ಟ ಸಾಧನ ಸಾಧ್ಯವಾದ ಪರದ ಮೋಕ್ಷವೂ ದೊರೆಯುವದು.

ಯಕ್ಷಗಾನವು ಕೇವಲ ಮನರಂಜನೆಯನ್ನು ಮಾಡತಕ್ಕ ಕಲೆಯೆಂದು ತಿಳಿಯುವದು ಪೂರ್ಣ ಸರಿಯಲ್ಲ. ಜ್ಞಾನೋಪದೇಶ ಮಾಡಿ ನಮ್ಮನ್ನು ಉದ್ಧರಿಸುವಂತಹ ಸಾಧನವು ಯಕ್ಷಗಾನವೆಂದರೆ ಆ ರೀತಿಯ ಮನರಂಜನೆ ಯಕ್ಷಗಾನದಿಂದಾಗುವದೆಂದರೆ ತಪ್ಪಾಗಲಾರದು.

ಯಕ್ಷಗಾನವು ಅನಾದಿಯಿಂದಲೂ ಇದೆ. ಹಿಂದಕ್ಕೆ ಅದರಲ್ಲಿ ಸುಶಿಕ್ಷಿತರು ಭಾಗವಹಿಸುತ್ತಿದ್ದಿಲ್ಲ. ಅದು ಸಾಮಾನ್ಯರ ಸೊತ್ತಾಗಿತ್ತು. ಹಿಂದಕ್ಕೆ ಪ್ರಸಂಗಗಳೂ ಅಚ್ಚಾಗಿದ್ದಿಲ್ಲ. ಯಕ್ಷಗಾನದ ಕಥೆ ಪುರಾಣಗಳಿಂದ ಆರಿಸಲ್ಪಡುತ್ತಿತ್ತು. ಒಂದು ರಾತ್ರಿ ಹಾಡಿ ಆಡಿ ತೋರಿಸುವಷ್ಟು ಭಾಗಕ್ಕೆ ಒಂದು ಪ್ರಸಂಗವೆನ್ನುತ್ತಾರೆ. ಹಾಡುವವರಿಗೆ ಭಾಗವತರೆಂದು ಹೆಸರು. ಭಾಗವತರು ಶ್ರುತಿ ಇಟ್ಟುಕೊಂಡೆ ಹಾಡುತ್ತಾರೆ. ತೆಂಕುತಿಟ್ಟಿನ ಭಾಗವತರು ಜಾಗಟೆಯನ್ನು ಉಪಯೋಗಿಸುವರಾದರೆ ಬಡಗುತಿಟ್ಟಿನ ಭಾಗವತರು ತಾಳವನ್ನು ಬಾರಿಸಿ ಪದ ಹೇಳುತ್ತಾರೆ. ಪದ್ಯದ ಜತೆಯಲ್ಲಿ ಮೃದಂಗ ಬಾರಿಸುತ್ತಾರೆ. ಅದನ್ನು ಬಾರಿಸುವವರಿಗೆ ಮದ್ದಳೆಗಾರರೆಂದು ಹೆಸರು. ಯಕ್ಷಗಾನಕ್ಕೆ ಬಾರಿಸುವದು ಮದ್ದಳೆ, ಸಂಗೀತಕ್ಕೆ ಬಾರಿಸುವದು ಮೃದಂಗ. ಮದ್ದಳೆ ತಾಳಮದ್ದಳೆಗಳಿಗೆ ಬೇಕೆ ಬೇಕು. ದಶಾವತಾರ ಆಟಕ್ಕೂ ಬೇಕು, ಆದರೆ ಚೆಂಡೆ ಬಾರಿಸುವದು ದಶಾವತಾರ ಆಟಕ್ಕೆ ಮಾತ್ರ. ತಾಳಮದ್ದಳೆಗಳಿಗೆ ಚೆಂಡೆಯು ಅಗತ್ಯವಿಲ್ಲ. ಕುಣಿತಕ್ಕೆ ಚೆಂಡೆ ಅತ್ಯಗತ್ಯ.

ಯಕ್ಷಗಾನವನ್ನು ತಾಳಮದ್ದಳೆ ಮತ್ತು ದಶಾವತಾರ ಆಟ, ಯಾ, ಭಾಗವತರ ಆಟ ಹೀಗೆ ಎರಡು ವಿಧವಾಗಿ ವಿಭಾಗಿಸಬಹುದು. ವೇಷಭೂಷಣಗಳಿಲ್ಲದೆ ಕುಣಿತವಿಲ್ಲದೆ ಕುಳಿತುಕೊಂಡು ಪದ್ಯದ ರಸದಲ್ಲಿಯೇ ಬೇರೆ ಬೇರೆ ಪಾತ್ರಗಳನ್ನು ಬೇರೆ ಬೇರೆ ವ್ಯಕ್ತಿಗಳು ವಹಿಸಿಕೊಂಡು ಅರ್ಥ ಹೇಳಿ ಮಾಡುವ ಕೂಟಗಳಿಗೆ ಯಕ್ಷಗಾನ ತಾಳಮದ್ದಳೆಗಳೆಂದು ಹೆಸರು. ವೇಷಹಾಕಿ ರಂಗಸ್ಥಳದಲ್ಲಿ ಭಾಗವತರು ಪದ್ಯ ಹಾಡುವಾಗ ತಾಳಕ್ಕೆ ಸರಿಯಾಗಿ ಕುಣಿದು ಆಯಾಯ ಪಾತ್ರಗಳ ಅರ್ಥ ಹೇಳುವದೇ ದಶಾವತಾರಾಟ ಯಾ ಭಾಗವತರಾಟ. ದಶಾವತಾರ ಆಟ ಅನಾದಿಯಿಂದಲೂ ಇದೆ. ಕೆಲವು ಕಾಲದ ಹಿಂದೆ ಹಳ್ಳಿಗಳಲ್ಲಿ ಮಾತ್ರ ಯಕ್ಷಗಾನವು ಹೆಚ್ಚಿನ ಪ್ರಚಾರದಲ್ಲಿದ್ದಿದ್ದರೆ ಈಗ ಪಟ್ಟಣಗಳಲ್ಲಿಯೂ ಅದಕ್ಕೆ ಸಾಕಷ್ಟು ಗೌರವ ಮತ್ತು ಪ್ರೋತ್ಸಾಹಗಳು ದೊರೆಯುತ್ತವೆ. ಸಿನೆಮಾಗಳಿಂದ ಜನರ ನೈತಿಕ ಮಟ್ಟಕ್ಕೆ ಪೆಟ್ಟಾಗುವದನ್ನು ತಡೆಗಟ್ಟಬೇಕಾದರೆ ಅದು ಯಕ್ಷಗಾನದಿಂದ ಮಾತ್ರ ಸಾಧ್ಯ.

ಹಿಂದಕ್ಕೆ ಯಕ್ಷಗಾನದಲ್ಲಿ ಪದವೀಧರರೂ ಹೆಚ್ಚಿನ ವಿದ್ವಾಂಸರೂ ಭಾಗವಹಿಸುತ್ತಿರಲಿಲ್ಲ. ಈಗ ಬಹುಮಂದಿ ಸುಶಿಕ್ಷಿತರೂ ಪದವೀಧರರೂ ಅದರಲ್ಲಿ ಭಾಗವಹಿಸುವ ಕಾರಣ ಅದು ತುಂಬ ಜನಾದರಣೀಯವಾಗಿದೆ. ಪಾಮರರ ಸಂಖ್ಯೆಗಿಂತ ಪಂಡಿತರ ಸಂಖ್ಯೆಯು ಅದನ್ನು ಈಗ ಕೇಳುವದು ಹೆಚ್ಚು.

ತೆಂಕು ತಿಟ್ಟಿನ ಭಾಗವತರಲ್ಲಿ ಸಾಮಾನ್ಯ ಮೂರು ವಿಧವಾಗಿ ವಿಭಾಗಿಸಬಹುದು. ದಿ। ಮಂಜುನಾಥ ಭಾಗವತರು ಮೊದಲುಗೊಂಡ ಹಳೆ ಭಾಗವತರು ಒಂದು ಸಂಪ್ರದಾಯ ಹಿಡಿದು ಬರೆ ಯಕ್ಷಗಾನದ ರಾಗವೆಂದು ಹಾಡುತ್ತಿದ್ದರು. ಅದರಲ್ಲಿ ಹೆಚ್ಚಿನ ಸಂಗೀತ ಮಿಶ್ರವಿರಲಿಲ್ಲ. ಯಕ್ಷಗಾನವನ್ನು ಕ್ರಮಬದ್ಧವಾಗಿ ಸಂಗೀತ ರಾಗಗಳ ಅನುಕರಣೆಯಿಂದ ಹಾಡುವುದಕ್ಕೆ ಆರಂಭ ಮಾಡಿದವರು ದಿ। ಬಲಿಪ ನಾರಾಯಣ ಭಾಗವತರೆ, ಇವರಿಂದ ಭಾಗವತರ ಎರಡನೆಯ ಪಂಗಡ ಆರಂಭವಾಯಿತು. ಈಗಿನ ಭಾಗವತರನೇಕರು ಸಂಗೀತದ ಬಳಕೆಯನ್ನು ಯಕ್ಷಗಾನದಲ್ಲಿ ಬಹಳ ಮಟ್ಟಿಗೆ ಹೆಚ್ಚಿಸಿಕೊಂಡು

ಬಂದಿರುತ್ತಾರೆ. ಅವರಲ್ಲಿ ಸಂಗೀತ ರತ್ನ ಕೆ. ಮಹಾಬಲ ನೋಂಡರು, ಶ್ರೀ ದಾಮೋದರ ಮಂಡೆಚ್ಚರು ಮತ್ತು ದಿ। ವ್ಯೆಂದಪ್ಪು ರೈಗಳು - ಈ ಮೂರು ಮಂದಿ ಅಗ್ರಗಣ್ಯರು.

ಭಾಗವತರುಗಳು ಹಿಂದಕ್ಕೆ ಪ್ರಸಂಗಗಳನ್ನು ಕಂಠಪಾಠಮಾಡಿ ಹೇಳುತ್ತಿದ್ದರು. ಈಗಿನ ಭಾಗವತರು ಪ್ರಸಂಗಗಳನ್ನು ಕಂಠಪಾಠ ಮಾಡುವದಿಲ್ಲ. ಪ್ರಸಂಗ ಪುಸ್ತಕಗಳನ್ನಿಟ್ಟುಕೊಂಡು ಓದಿಕೊಂಡು ಪದ್ಯ ಹೇಳುತ್ತಾರೆ. ಪ್ರಸಂಗಗಳನ್ನು ಕಂಠಪಾಠ ಮಾಡುವದರಿಂದ ಪ್ರಯೋಜನವೂ ಇದೆ. ಬಾಧಕವೂ ಇದೆ. ಕಂಠಪಾಠಮಾಡಿ ಹೇಳಿದರೆ ಭಾಗವತನ ಸಂಪೂರ್ಣ ಗಮನವು ತಾನು ಹಾಡುವದರಲ್ಲಿಯೂ ತನ್ನ ಸ್ವರದ ಮೇಲೂ ಬೀಳುತ್ತದೆ. ಅದರಿಂದ ಸ್ವರದ ಕೇಳಿಸುವಿಕೆಯು ವಿಸ್ತಾರವಾಗಿ ಹರಡುವದು. ಪುಸ್ತಕ ನೋಡಿ ಓದಿಕೊಂಡು ಹಾಡಿದರೆ ಆಗಾಗ್ಗೆ ಕೆಳಗೆ ಪುಸ್ತಕವನ್ನೇ ನೋಡಬೇಕಾದುದರಿಂದ ಹಾಡುವುದಕ್ಕೂ ತಡೆ ಬರುತ್ತದೆ. ಪದೇ ಪದೇ ಕೆಳಗೆ ನೊಡಬೇಕಾಗುತ್ತದೆ. ಗಮನವು ಪುಸ್ತಕದ ಕಡೆಗೂ ಹಾಡುವಿಕೆಗೂ ಹಂಚಿಹೋಗಿ ಅಷ್ಟೊಂದು ನಿರ್ಭೀತಿಯಿಂದ ತಡೆಯಿಲ್ಲದೆ ಹಾಡಲು ಸಾಧ್ಯವಾಗುವುದಿಲ್ಲ. ಕಂಠಪಾಠ ಮಾಡಿ ಹಾಡಿದರೆ ವೇಷಧಾರಿಗಳ ಕುಣಿತದ ಕಡೆಗೆ ಭಾಗವತನು ಸಂಪೂರ್ಣ ಗಮನ ಕೊಡಲು, ಸಾಧ್ಯವಾಗುತ್ತದೆ. ವೇಷಧಾರಿಯು ತಪ್ಪಿಬಿದ್ದಲ್ಲಿ ಪದ್ಯವನ್ನು ಕುಂಠಿತಗೊಳಿಸಲೂ ಸಾಧ್ಯವಾಗುತ್ತದೆ. ಅಥವಾ ಜಾಗಟೆಯ ಪೆಟ್ಟಿನಿಂದ ತಾಳ ಹೊಡೆದು ಅವನನ್ನು ಎಚ್ಚರಿಸಲೂ ಸಾಧ್ಯವಾಗುತ್ತದೆ. ಈಕಾರ್ಯ ಪುಸ್ತಕದಿಂದ ಪ್ರಸಂಗ ಓದಿ ಹೇಳುವ ಭಾಗವತನಿಗೆ ತುಂಬ ಕಷ್ಟಸಾಧ್ಯ. ಆದರೆ ಕಂಠಪಾಠದಲ್ಲಿ ಒಂದು ತೊಂದರೆಯಿದೆ, ಕಂಠಪಾಠಮಾಡಿ ಹೇಳುವವನು ಒಂದರ ಹಿಂದೆ ಒಂದು ಎಂಬಂತೆ ಎಲ್ಲಾಪದ್ಯಗಳನ್ನು ಹೇಳಬೇಕು. ಹಾಗೆ ಹೇಳಿಕೊಂಡು ಹೊದರೇನೆ ಎಲ್ಲಾ ಪದ್ಯಗಳು ನೆನಪಿಗೆ ಬಂದಾವು ಹೊರತು ಎಲ್ಲಾ ಪದ್ಯಗಳನ್ನು ಬಿಟ್ಟು ಬಿಟ್ಟು ಹೇಳಲು ಸಾಧ್ಯವಾಗಲಾರದು. ಆದುದರಿಂದ ಕಡಿಮೆ ಸಮಯ ದೊರಕಿದಲ್ಲಿ ಕಥಾಭಾಗವನ್ನು ಸಣ್ಣದು ಮಾಡಲು ಕಂಠಪಾಠದಿಂದ ಹೇಳುವ ಭಾಗವತರಿಗೆ ಬಹಳ ಕಷ್ಟ. ಸಮಯ ಸಂಕೋಚದಿಂದ ಬಿಟ್ಟು ಬಿಟ್ಟು ಪದ್ಯ ಹೇಳಬೇಕಾದ ಸಂದರ್ಭ ಬಂದಲ್ಲಿ ಅರ್ಥಧಾರಿಗಳಿಗೆ ಅಥವಾ ವೇಷಧಾರಿಗಳಿಗೆ ಅಂತಹ ಬಿಟ್ಟ ಪದ್ಯಗಳು ತಿಳಿದು ಬರುವದಿಲ್ಲ. ಉತ್ತಮ ಅರ್ಥಧಾರಿಯು ಅಥವಾ ವೇಷಧಾರಿಯು ಮುಂದಿನ ಪದ್ಯ ಎತ್ತಿ ಕೊಟ್ಟೇ ಅರ್ಥ ನಿಲ್ಲಿಸುವ ಸಂಪ್ರದಾಯ. ಆದುದರಿಂದ ಭಾಗವತರು ಬಿಡುವ ಪದ್ಯಗಳು ಅವನಿಗೆ ಗೊತ್ತಿರಲೇಬೇಕು. ಅದಕ್ಕಾಗಿ ಪ್ರಸಂಗ ಪುಸ್ತಕದಲ್ಲಿ ಗುರುತು ಹಾಕಿ ಮೊದಲೆ ನಿಶ್ಚಯಿಸಿ ಬಿಟ್ಟರೆ ಬಿಡುವ ಪದ್ಯಗಳು ಎಲ್ಲರಿಗೂ ತಿಳಿದಂತಾಗುತ್ತದೆ. ಆ ಕಾರಣದಿಂದಾಗಿ ಈಗಿನ ಭಾಗವತರುಗಳು ಕಂಠಪಾಠ ಮಾಡುವದನ್ನು ಬಿಟ್ಟು ಪುಸ್ತಕನೋಡಿ ಹೇಳುವ ರೂಢಿಯನ್ನೆ ಇಟ್ಟುಕೊಂಡಿರುತ್ತಾರೆ. ಹಿಂದಿನವರು ಯಕ್ಷಗಾನವೆಂದರೆ ಅದನ್ನೆ ಒಂದು ವ್ಯವಸಾಯವಾಗಿಟ್ಟುಕೊಂಡಿದ್ದರು. ಈಗ ಹಾಗಲ್ಲ, ಯಕ್ಷಗಾನದಲ್ಲಿ ಕೆಲಸ ಮಾಡುವವರು ಇತರ ಬೇರೆ ಬೇರೆ ವೃತ್ತಿಗಳನ್ನು ಮಾಡುವವರಾಗಿರುತ್ತಾರೆ. ಆ ಕಾರಣದಿಂದಲೂ ನೂರಾರು ಪ್ರಸಂಗಗಳನ್ನು ಕಂಠಪಾಠ ಮಾಡುವಷ್ಟು ಬಿಡುವು ಅವರಿಗೆ ದೊರೆಯುವದಿಲ್ಲ. ಹೆಚ್ಚು ಕಷ್ಟಪಟ್ಟು ಮಾಡಿದರೆ ಪರಿಶ್ರಮಕ್ಕೆ ತಕ್ಕ ಪ್ರತಿಫಲವೂ ದೊರೆಯುವದಿಲ್ಲ. ತಾಳಮದ್ದಳೆಗಳಲ್ಲಿ ಅವಶ್ಯವಿರುವ ಭಾಗಗಳನ್ನು ಮಾತ್ರ ಸ್ವೀಕರಿಸುವುದರಿಂದ ಪದ್ಯಗಳನ್ನು ಪುಸ್ತಕ ನೋಡಿ ಓದಿಕೊಂಡು ಹೇಳುವದೆ ಅರ್ಥಧಾರಿಗಳಿಗೆ ತುಂಬ ಅನುಕೂಲವಾಗುವದು.

ದಿ। ಬಲಿಪ ನಾರಾಯಣ ಭಾಗವತರು ನೂರಾರು ಪ್ರಸಂಗಗಳನ್ನು ಕಂಠಪಾಠ ಮಾಡಿಕೊಂಡೆ ಹಾಡುತ್ತಿದ್ದರು. 'ಸಂಪೂರ್ಣ ರಾಮಾಯಣ' 'ಸಂಪೂರ್ಣ ಮಹಾ ಭಾರತ'– ಮೊದಲಾದ ಪುರಾಣಗಳನ್ನು ಕ್ರಮದಂತೆ ಆಟ ಆಡಿಸುತ್ತಿದ್ದ ಭಾಗವತರಲ್ಲಿ ಅವರು ಅಗ್ರಗಣ್ಯರು. ಸ್ವರವನ್ನು ಸಾಕದೆ, ಯಾವ ಪಥ್ಯವನ್ನೂ ಮಾಡದೆ, ಸಿಕ್ಕಿದ್ದನ್ನು ತಿಂದು, ವರ್ಷವಿಡೀ ತನ್ನ ಕಂಠವನ್ನು ಯಾವದೆ ಒಡಕು ಅಥವಾ ಬಾಧಕವಿಲ್ಲದೆ ದಿನದಿಂದ ದಿನಕ್ಕೆ ಸ್ವರ ಹೆಚ್ಚಿಸಿ ಕೊಂಡೇ ಪದ್ಯ ಹೇಳುತ್ತಿದ್ದ ಏಕೈಕ ಭಾಗವತರೆಂದರೆ ದಿ। ಬಲಿಪ ನಾರಾಯಣ ಭಾಗವತರು. ಕಳೆದ ಐದು ದಶಕಗಳಿಂದ 'ಭಾಗವತರು'

ಎಂಬ ಹೆಸರನ್ನು ಹೇಳಿದರೆ ಜನತೆ ತಿಳಿಯುತ್ತಿದ್ದುದು ದಿ| ಬಲಿಪರನ್ನೆ. ಅವರ ಹಿಂದೆ ಆ ಸ್ಥಾನ ದಿ| ಮಂಜುನಾಥ ಭಾಗವತರಿಗಿತ್ತು. ತೆಂಕು ತಿಟ್ಟಿನ ಯಕ್ಷಗಾನದಲ್ಲಿ ಈ ವರೆಗೆ ಅಷ್ಟೊಂದು ಪ್ರತಿಭೆ ಬಂದುದು ಅವರೀರ್ವರಿಗೆ ಮಾತ್ರ. ದಿ| ಮಂಜುನಾಥ ಭಾಗವತರ ಹೆಸರನ್ನೂ ದಿ| ಬಲಿಪರು ಮರೆಸಿದರೆಂದರೂ ಅತಿಶಯೋಕ್ತಿಯಾಗಲಾರದು.

ಯಕ್ಷಗಾನ ತಾಳಮದ್ದಳೆ ಧರ್ಮ ಪ್ರಚಾರ ಕಾರ್ಯದಲ್ಲಿ ದಶಾವತಾರ ಆಟಕ್ಕಿಂತಲೂ ಹೆಚ್ಚಿನ ಪ್ರಯೋಜನವನ್ನು ಮಾಡುತ್ತದೆ. ತಾಳಮದ್ದಳೆಯಲ್ಲಿ ಅರ್ಥ ಪ್ರಧಾನ, ಆಟದಲ್ಲಿ ಕುಣಿತಕ್ಕೆ ಪ್ರಾಶಸ್ತ್ಯ. ಅರ್ಥಧಾರಿಗಳು ಘನ ವಿದ್ವಾಂಸರಾದುದರಿಂದ ಶ್ರೋತೃಗಳ ಮನಸ್ಸಿನ ಸಂಶಯಗಳನ್ನು ತೆಗೆದು ಪ್ರಸಂಗದ ಘಟನೆಗಳನ್ನು ಸರಿಯಾಗಿ ವಿವರಿಸಿ ಉತ್ತಮರ ನಡತೆ ಯಾವ ಕಾರಣದಿಂದ ಅನುಕರಣೀಯವೆಂಬುದಾಗಿ ಬೋಧಿಸುತ್ತಾರೆ. ಇದರಿಂದಾಗಿ ವಿದ್ವಾಂಸರೂ ತಾಳಮದ್ದಳೆಗಳನ್ನು ಮೆಚ್ಚುತ್ತಾರೆ.

ಅರ್ಥ ಮಾತನಾಡುವಾಗ ಚರ್ಚೆ ಬರುವ ಸಂಭವ ಹೆಚ್ಚು. ಸಂಶಯ ನಿವೃತ್ತಿಗೆಂದು ಆರಂಭ ಮಾಡಿದ ವಾದ ಸ್ವಪ್ರತಿಷ್ಠೆಯನ್ನು ಸಾಧಿಸಲು ಮುಂದುವರಿಸಿದರೆ ಕೇಳುವವರಿಗೂ ಬೇಸರ, ಹೇಳುವವರಿಗೂ ಯಾತನೆಯನ್ನುಂಟುಮಾಡುತ್ತದೆ. ವಾದದಲ್ಲಿ ವ್ಯಕ್ತಿಗೆ ಸೋಲು ಅಥವಾ ಗೆಲುವು ಎಂದು ಭಾವಿಸುವುದು ಶುದ್ಧ ತಪ್ಪು. ಶ್ರೀರಾಮನ ಪಾತ್ರ ಗೆಲ್ಲಲೇಬೇಕು; ರಾವಣನ ಪಾತ್ರ ಸೋಲಲೇ ಬೇಕು. ವಾಲಿ ಸೋಲಲೇ ಬೇಕು; ಶ್ರೀರಾಮ ಗೆಲ್ಲಲೇಬೇಕು ಶ್ರೀ ಕೃಷ್ಣ ಗೆಲ್ಲಲೇ ಬೇಕು; ಕೌರವ ಸೋಲಲೇ ಬೇಕು; ಆದರೆ ಉತ್ತಮ ವಾಗ್ಮಿಗಳು ಅದನ್ನು ಅದಲು ಬದಲು ಮಾಡಿದರೆ ಅದರಿಂದ ಕಥೆಗೂ ದೋಷ, ಪರಿಣಾಮವಾಗಿ ಧರ್ಮಪ್ರಚಾರಕ್ಕೆ ಬದಲು ಅಧರ್ಮ ಸ್ಥಾಪನೆ ಮಾಡಿದಂತಾಗುತ್ತದೆ. ಇದರಿಂದ ಸಮಾಜದ ನೈತಿಕ ಮಟ್ಟವನ್ನು ಹಾಳುಮಾಡಿದಂತಾಗುತ್ತದೆ. ಅರ್ಥಧಾರಿಗಳು ದಾರಿಬಿಟ್ಟು ಹೋದಲ್ಲಿ ದಿ| ಬಲಿಪರು ಅವರನ್ನು ಆಗಾಗ್ಗೆ ಎಚ್ಚರಿಸುತ್ತಿದ್ದರು. ಹಿಂದಕ್ಕೆ ಅರ್ಥ ಮಾತನಾಡುವವರು ಅಷ್ಟೊಂದು ಸುಶಿಕ್ಷಿತರಾಗಿರಲಿಲ್ಲವಾದ ಕಾರಣ ಅವರನ್ನು ಹತೋಟಿಯಲ್ಲಿಡುವ ಜವಾಬ್ದಾರಿ ಭಾಗವತರಿಗಿತ್ತು. ಆಗ ಸಭೆಗೆ ಅಧ್ಯಕ್ಷರನ್ನು ನೇಮಿಸುವ ಕ್ರಮವಿರಲಿಲ್ಲ. ಕ್ರಮೇಣ ಯಕ್ಷಗಾನ ತಾಳಮದ್ದಳೆಗಳಲ್ಲಿ ಅಧ್ಯಕ್ಷರನ್ನು ನೇಮಿಸುವ ಸಂಪ್ರದಾಯ ಆರಂಭವಾಯಿತು. ಅದರಿಂದಲೂ ಹೆಚ್ಚಿನ ಪ್ರಯೋಜನ ಬರಲಿಲ್ಲ. ಈಗ ಅರ್ಥಧಾರಿಗಳು ಜವಾಬ್ದಾರಿ ಅರಿತು ಮಾತನಾಡುವ ಕಾರಣ ವೃಥಾ ಚರ್ಚೆ ಬರುವದು ಬಹಳ ಕಡಿಮೆ. ಇದರಿಂದ ಯಾರಿಗೂ ಮಾನಹಾನಿ ಮಾಡಿದಂತಾಗುತಿದ್ದಿಲ್ಲ.

ದಿ| ಬಲಿಪ ನಾರಾಯಣ ಭಾಗವತರು ವೃಥಾ ಚರ್ಚೆ ಆರಂಭವಾದಲ್ಲಿ ಅದನ್ನು ಕಡಿಮೆ ಮಾಡಲು ಅವರದ್ದೇ ಒಂದು ರೀತಿಯನ್ನನುಸರಿಸುತ್ತಿದ್ದರು. ಅವರಿಗೆ ಒಳ್ಳೆಯ ಅರ್ಥಜ್ಞಾನವೂ ಇದ್ದಕಾರಣ ತಪ್ಪಿಹೋದವನಿಗೆ ಪದ್ಯ ಕಡಿಮೆ ಮಾಡುವುದಲ್ಲದೆ ಅವನ ಪಾತ್ರದ ಪದ್ಯಗಳನ್ನು ಮನಸ್ಸಿಟ್ಟು ಹಾಡುತ್ತಿರಲಿಲ್ಲ. ಇತರರ ಪದ್ಯಗಳನ್ನು ಒಳ್ಳೆಯದಾಗಿ ಹಾಡಿ ತನ್ನ ಪದ್ಯಗಳನ್ನು ಉದಾಸೀನತೆಯಿಂದ ಹಾಡುವಾಗ ಅಂತಹವನ ತಪ್ಪು ಸಭೆಗೂ ತಿಳಿದುಬರುವಂತಾಗಿ ಕೂಡಲೆ ತಿದ್ದಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತಿತ್ತು.

ತೆಂಕುತಿಟ್ಟಿನ ಯಕ್ಷಗಾನವನ್ನು ಟೀಕೆಮಾಡಿ ಲಾಭಪಡೆದ ಮಹನೀಯರೂ ಇದ್ದಾರೆ, ಆದರೆ ಅವರು ಬರೆದ ಗ್ರಂಥಗಳೂ ಮಾಡಿದ ಭಾಷಣಗಳೂ ನ್ಯಾಯಕ್ಕೆ ವಿರೋಧವೆಂದು ದಿ| ಬಲಿಪ ನಾರಾಯಣ ಭಾಗವತರು ಗಳಿಸಿದ ಕೀರ್ತಿ, ಪಡೆದ ಜನಾನುರಾಗ ಸಾಕ್ಷ್ಯವನ್ನು ಕೊಡುತ್ತವೆಂದರೂ ತಪ್ಪಾಗಲಾರದು. ಕೊನೆಯುಸಿರ ವರೆಗೂ ಏಕರೀತಿಯಲ್ಲಿ ಪದ್ಯ ಹೇಳಿ ಜನರು ಸಂಪೂರ್ಣ ಮೆಚ್ಚಿದ ಭಾಗವತರು ದಿ| ಬಲಿಪರು. ಯಕ್ಷಗಾನ ಕವಿ ಸಾರ್ವಭೌಮ ಪಾರ್ತಿ ಸುಬ್ಬನು ಬರೆದ ರಾಮಾಯಣದ ಪ್ರಸಂಗಗಳನ್ನು ಹಾಡುವುದೆಂದರೆ ದಿ| ಬಲಿಪರಿಗೂ ತುಂಬ ಸಂತೋಷ. ಪಾರ್ತಿ ಸುಬ್ಬನು ಕುಂಬಳೆ

ಯವನು. ಅವನನ್ನು ಉತ್ತರಕ್ಕೆ ಕೊಂಡುಹೋಗಬೇಕೆಂದು ಒಬ್ಬಿಬ್ಬರು ಮಾಡಿದ ಸಾಹಸ ಅವರಿಗೆ ಲಾಭದಾಯಕವಾದರೂ ಜನತೆ ಮೆಚ್ಚಲಿಲ್ಲ. ಘನ ವಿದ್ವಾಂಸರುಗಳಾದ ದಿ। ಮುಳಿಯ ತಿಮ್ಮಪ್ಪಯ್ಯ ನವರು ಮತ್ತು ಶ್ರೀ ಕುಕ್ಕಿಲ ಕೃಷ್ಣ ಭಟ್ಟರು ಬರೆದ ಗ್ರಂಥಗಳಿಂದ ಅದರ ಅಸಮಂಜಸತೆ ಪ್ರತ್ಯಕ್ಷ ಭಾಸ ವಾಗುತ್ತದೆ. ಆ ಮಹಾ ವ್ಯಕ್ತಿಯ ಪರಿಚಯವನ್ನು ರುಜುಗೊಳಿಸುವ ದಾಖಲೆಗಳೆ ಯಕ್ಷಗಾನದ ಆಧಾರಸ್ಥಂಭದಂತಿದ್ದ ಕೂಡ್ಲು ಶ್ಯಾನುಭಾಗರ ಮನೆಯಲ್ಲೆ ಇರುತ್ತಿದ್ದು ಆ ಮನೆತನದವರಿಗೆ ಪಾರ್ತಿ ಸುಬ್ಬನು ಇರುತ್ತಿದ್ದ ಸ್ಥಳ ಸಂಪೂರ್ಣವಾಗಿ ತಿಳಿದಿರುತ್ತದೆ. ಅವನ ವಂಶಜರೂ ಕುಂಬಳೆ ಸೀಮೆಯಲ್ಲೆ ಇರುತ್ತ ಅವನನ್ನು ಬೇರೆ ಕಡೆಗೆ ಎಳೆದುಕೊಂಡು ಹೋಗಲು ಯತ್ನಿಸಿದುದು ನಿರರ್ಥಕವೆಂದು ಹೇಳ ಬೇಕಾಗಿದೆ. ದಿ। ಬಲಿಪರಲ್ಲಿಯೂ ನಾನು ಕೇಳಿದಲ್ಲಿ ಪಾರ್ತಿಸುಬ್ಬನು ಕುಂಬಳೆಯವನೆಂದೆ ಅವರು ಸ್ಪಷ್ಟವಾಗಿ ನುಡಿದಿದ್ದಾರೆ.

ಯಾರಾದರೂ ಏನಾದರೂ ಮಾಡಿ ಜನರನ್ನಾಕರ್ಷಿಸಿದರೆ ಕೆಲವರು ಆಶ್ಚರ್ಯಪಡುವ ಸಂದರ್ಭಗಳೂ ಕೆಲವೊಮ್ಮೆ ಇರುತ್ತವೆ. ಅಂತಹವರನ್ನು ಬೇರೆ ಬೇರೆ ಬಿರುದುಗಳಿಂದ ಇಷ್ಟಬಂದಂತೆ ಕೆಲವರು ಶ್ಲಾಘಿಸಿದುದೂ ಇದೆ. ಆದರೆ "ಯಕ್ಷಗಾನದ ಕಲಾ ತಪಸ್ವಿ" ಎಂಬ ಬಿರುದನ್ನು ಕೊಡುವ ದಾದರೆ ಅದಕ್ಕೆ ಕಳೆದ ಐದು ದಶಕಗಳಲ್ಲಿ ಅರ್ಹರು ದಿ। ಬಲಿಪ ನಾರಾಯಣ ಭಾಗವತರೊಬ್ಬರೇ. ಇತರರನ್ನು ಹಾಗೆ ಸಂಬೋಧಿಸಿದರೆ ಅಪಾತ್ರದಲ್ಲಿ ದಾನಮಾಡಿದಂತಾಗುವುದು. "ಯಸ್ಯ ಕಸ್ಯ ತರೋರ್ಮೂಲಂ ಯೇನ ಕೇನಾಪಿ ಪೇಷಯೇತ್ । ಯಸ್ಮೈ ಕಸ್ಮೈ ಪ್ರದಾತವ್ಯಂ ಯದ್ವಾ ತದ್ವಾ ಭವಿಷ್ಯತಿ॥" ಅಂದರೆ ಯಾವುದಾದರೂ ಒಂದು ಗಿಡದ ಬೇರನ್ನು ಯಾವುದಾದರೊಡನೆಯಾದರೂ ಅರೆದು ಯಾರಿಗಾದರೂ ಕೊಟ್ಟರೆ ಏನಾದರೂ ಅನರ್ಥ ಸಂಭವಿಸದಿರಲಾರದು. ಅದರಂತೆಯೆ ಒಂದು ಕಡೆಯ ಯಕ್ಷಗಾನವನ್ನು ಮಾತ್ರ ಉತ್ತಮವೆಂದು ಹೇಳಿ, ತೆಂಕುತಿಟ್ಟಿನ ಯಕ್ಷಗಾನವನ್ನು ಅಲ್ಪಮಟ್ಟ ದ್ದೆಂದು ವಿವರಿಸಿ ಯಕ್ಷಗಾನವೆಂದರೆ ಅರ್ಥವೇ ಬೇಡವೆಂದು ಹೇಳಿ ಬರೆ ಕಥಕ್ಕಳಿಯ ಸ್ಥಾನಕ್ಕಿಳಿಸಿ ಅದರಿಂದ ಕಲಾ ತಪಸ್ವಿಯಾಗಲು ಎಂದಿಗೂ ಸಾಧ್ಯವಾಗಲಾರದು. ತೆಂಕುತಿಟ್ಟಿನಲ್ಲಿ ಎಷ್ಟೊಂದು ಅತ್ಯುನ್ನತ ಸ್ಥಾನವನ್ನು ಪಡೆದ ಯಕ್ಷಗಾನ ವೇಷಧಾರಿಗಳಿದ್ದರು ಮತ್ತು ಈಗಲೂ ಇದ್ದಾರೆಂಬುದು "ಮಧುಪುರ"ದ ಲೇಖನಗಳನ್ನೂ ಭಾವಚಿತ್ರಗಳನ್ನೂ ನೋಡಿದರೆ ತಿಳಿದುಬರುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಈಗ ಅನೇಕ ಭಾಗವತರಿದ್ದಾರೆ, ಮೃದಂಗವಾದಕರಿದ್ದಾರೆ, ಅರ್ಥಧಾರಿಗಳಿದ್ದಾರೆ, ವೇಷಧಾರಿ ಗಳಿದ್ದಾರೆ, ಹೆಚ್ಚಿನ ಮಂದಿ ಬಹಳ ಪ್ರಖ್ಯಾತಿಯನ್ನು ಪಡೆದವರೆ.

ಕಲೆಯಲ್ಲಿ ತಾನು ಭಕ್ತಿ ವಿಶ್ವಾಸಗಳನ್ನಿಡಬೇಕು, ಅದರ ಉಪಾಸನೆ ಮಾಡಬೇಕು, ಅತಿ ವಿಶ್ವಾಸದಿಂದ ಅದನ್ನು ಅಭ್ಯಾಸ ಮಾಡಬೇಕು. ಅದರಿಂದ ತನ್ನನ್ನು ತಿದ್ದಿಕೊಳ್ಳಲು ಸಾಧ್ಯವಾಗುತ್ತ ದೆಂದು ತಿಳಿದು ತಾನು ತನ್ನ ನಡತೆಯನ್ನು ತಿದ್ದಿಕೊಳ್ಳಬೇಕು. ಅನಂತರ ತನ್ನ ನಡತೆಯ ನಿದರ್ಶನ ದಿಂದಲೂ ತಾನು ಮಾಡುವ ಪ್ರಚಾರದಿಂದಲೂ ಇತರರಿಗೆ ಅದನ್ನು ಬೋಧಿಸಬೇಕು. ಅದನ್ನು ಮೊದಲು ನಿಂದಿಸಿ ಅನಂತರ ಸ್ವಪ್ರಯೋಜನಕ್ಕೆ ಅದನ್ನು ಹೊಗಳುವದು ಕಲಾರಾಧನೆಯಲ್ಲ. ಯಾವ ಕಲೆಯೆ ಆಗಲಿ ಯಾರೊಬ್ಬನ ಸ್ವಂತ ಸೊತ್ತಲ್ಲ. ಕೆಲಸ ಮಾಡಿದವರಿಗೆಲ್ಲ ಅದು ಒಲಿಯುತ್ತದೆ. ಆದುದರಿಂದ ಕಲೆಯ ಮೇಲೆ ವಿಶ್ವಾಸವಿಟ್ಟು ಇತರ ಕಲಾವಿದರನ್ನು ನಿಂದಿಸದೆ ಅಥವಾ ತಾನೊಬ್ಬನೆ ಎಲ್ಲವನ್ನು ತಿಳಿದವನೆಂದು ಭಾವಿಸದೆ ಅದನ್ನು ಉಪಾಸನೆ ಮಾಡಿಕೊಂಡು ಜನತೆಯ ಮುಂದೆ ಸೇವಾ ರೂಪದಲ್ಲಿ ಪ್ರಚಾರಮಾಡಿಕೊಂಡು ಬಂದರೆ ಅದು ಕಲಾತಪಸ್ಸು; ಹಾಗೆ ಮಾಡತಕ್ಕವನು ಕಲಾ ತಪಸ್ವಿ. ದಿ। ಬಲಿಪ ನಾರಾಯಣ ಭಾಗವತರು ಆ ದೃಷ್ಟಿಯಿಂದ ಯಕ್ಷಗಾನ ಕಲಾ ತಪಸ್ವಿ, ಅನೇಕ ಸುವರ್ಣ ಪದಕಗಳನ್ನೂ, ರಾಜ್ಯ ಪ್ರಶಸ್ತಿಯನ್ನೂ ಪಡೆದ ಮಹಾನುಭಾವರು ದಿ। ಬಲಿಪರು. ತನ್ನ ಹಾಡುವಿಕೆಯ ಧರ್ಮ ಮತ್ತು ಪ್ರೌಢಿಮೆಯಿಂದ ಎಲ್ಲರ ಮನಸ್ಸನ್ನು ಸೂರೆಗೊಂಡವರು ದಿ। ಬಲಿಪರೆ.

ದಿ। ಬಲಿಪರ ಪದ್ಯವೆಂದರೆ ಆಮಂತ್ರಣವಿಲ್ಲದೇನೆ ಪ್ರಚಾರ ಮಾಡದೇನೆ ಸಾವಿರಾರು ಸಂಖ್ಯೆಯಲ್ಲಿ ಜನರು ಬಂದು ಸೇರುತ್ತಿದ್ದರು. ಎರಡು ಮೂರು ಮೈಲುಗಳ ದೂರದಿಂದ ಅವರ ಸ್ವರ ಕೇಳಿ ದಶಾವತಾರ ಆಟಗಳಿಗೆ ಜನರು ಓಡಿ ಬಂದುದೂ ಇದೆ. ಜೋಡಾಟಗಳಲ್ಲಿ ಅಥವಾ ಮೂರು ನಾಲ್ಕು ಮೇಳಗಳ ಆಟಗಳಲ್ಲಿ ನಾಲ್ಕು ಚೆಂಡೆಗಳ ಶಬ್ದಗಳ ಮಧ್ಯೆ ಎದ್ದು ನಿಂತು ಕೇಳುತ್ತಿದ್ದುದು ದಿ। ಬಲಿಪ ನಾರಾಯಣ ಭಾಗವತರ ಸ್ವರವೆ. ಅಂತಹ ಭಾಗವತರ ವಿಷಯ ಸ್ಮರಿಸುವಾಗ "ನ ಭೂತೋ ನ ಭವಿಷ್ಯತಿ" ಅಂತಹವರು ಈವರೆಗೆ ಹುಟ್ಟಿಲ್ಲ. ಇನ್ನು ಹುಟ್ಟುವದು ಸಂಶಯವೆಂದು ನನಗೆ ಭಾಸವಾಗುತ್ತದೆ. ಕಳೆದ 38 ವರ್ಷಗಳಿಂದ ಯಕ್ಷಗಾನದಲ್ಲಿ ಶಕ್ತಿಮೀರಿ ಕೆಲಸಮಾಡಿ ಎಲ್ಲ ಪ್ರದರ್ಶನಗಳನ್ನೂ ಕಂಡು, ಎಲ್ಲಾ ಪ್ರೌಢಿಮೆಗಳನ್ನೂ ನೋಡಿ ಎಲ್ಲಾ ಕಡೆಗಳ ಯಕ್ಷಗಾನವನ್ನೂ ಪರಿಶೀಲಿಸಿ ಎಲ್ಲರೊಡನೆಯೂ ಬೆರೆತು ಕೆಲಸಮಾಡಿ ಈ ಅಭಿಪ್ರಾಯಕ್ಕೆ ನಾನು ಬಂದವನಾಗಿರುತ್ತೇನೆ. "ಗುಣಾಃ ಗುಣಿಷು ಪೂಜಾಸ್ಥಾನಂ"– ಗುಣವಂತರಲ್ಲಿ ಗುಣಕ್ಕೆ ತಕ್ಕುದಾದ ಮನ್ನಣೆ ಸಲಲೇ ಬೇಕು. ಇದು ಶಿಷ್ಟ ಸಂಪ್ರದಾಯ.

ಅನಾರೋಗ್ಯವಾದರೂ, ಹೇಳಿದ ಮಾತಿನಂತೆ ದಿ। ಬಲಿಪರು ಒಪ್ಪಿಕೊಂಡಲ್ಲಿಗೆ ಹೋಗಿಯೆ ಬರುತ್ತಿದ್ದರು. ಪದ್ಯ ಹೇಳುವದಕ್ಕೆ ಆರಂಭಿಸಿದರೆಂದರೆ ಅದರಲ್ಲಿ ಉದಾಸೀನವಿರಲಿಲ್ಲ. ಒಂದು ಕಡೆಯಲ್ಲಿ ಒಳ್ಳೆಯದು ಇನ್ನೊಂದು ಕಡೆಯಲ್ಲಿ ಹಾಳು ಎಂತ ಪದ್ಯ ಹೇಳುವುದರಲ್ಲಿ ಪ್ರತ್ಯೇಕತೆ ಅವರಿಗಿರಲಿಲ್ಲ.

ಇತರ ಯಕ್ಷಗಾನ ಕಲಾವಿದರನ್ನು ಕಂಡರೆ ದಿ। ಬಲಿಪರಿಗೆ ತುಂಬ ಪ್ರೀತಿ. ಯಾರಲ್ಲಿಯೂ ಅವರು ಮತ್ಸರಿಯಾಗಿರಲಿಲ್ಲ. ಪರನಿಂದೆ ಅವರಿಗಿರಲಿಲ್ಲ. ಹಟಹಿಡಿದು ಕೆಲಸ ಮಾಡುವ ಸ್ವಭಾವ ಅವರಿಗಿತ್ತು.

ಕಾಸರಗೋಡು ತಾಲೂಕಿನ ಪಡ್ರೆಗ್ರಾಮದ ಅಂಗರಾಜೆ ಎಂಬಲ್ಲಿ ಜನ್ಮವೆತ್ತಿದ ದಿವಂಗತ ಬಲಿಪರು ಕವಿ ಸಾರ್ವಭೌಮ ಪಾರ್ತಿಸುಬ್ಬನಿಂದ ಪ್ರಕಾಶಕ್ಕೆ ಬಂದ ತೆಂಕುತಿಟ್ಟಿನ ಯಕ್ಷಗಾನ ಪರಂಪರೆಗೆ ಆಧಾರ ಸ್ತಂಭವೊ ಎಂಬಂತಿದ್ದರೆಂಬುದು ನಿಸ್ಸಂದೇಹ. ಈಗಲೂ ನೂರಾರು ಮಂದಿ ಹೆಸರಾಂತ ಯಕ್ಷಗಾನ ಕಲಾವಿದರು ಕಾಸರಗೋಡು ತಾಲೂಕಿನಲ್ಲಿದ್ದಾರೆ. ಇದರಿಂದಾಗಿ ಕಾಸರಗೋಡು ಮೈಸೂರಿಗೆ ಸೇರತಕ್ಕದ್ದೆಂಬ ಬಲವಾದ ವಾದ ಹೊರಡಲು ಒಂದು ಮುಖ್ಯವಾದ ಕಾರಣವಾಯಿತು. ಆದುದರಿಂದ ಯಕ್ಷಗಾನದ ಹೆಸರಿರುವ ತನಕ ದಿ। ಬಲಿಪ ನಾರಾಯಣ ಭಾಗವತರ ಹೆಸರೂ ಇರುವದೆಂಬುದು ನಿಸ್ಸಂದೇಹವಾದ ಮಾತು. ಅವರಂತೆ ಎಲ್ಲರೂ ಯಕ್ಷಗಾನ ಕಲಾತಪಸ್ವಿಗಳಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಶ್ರಮಿಸಿದರೆ ದಿನೇದಿನೇ ಅಧಃ ಪತನವನ್ನು ಹೊಂದುತ್ತಿರುವ ಸಮಾಜ ಯಕ್ಷಗಾನದಿಂದ ಅಭಿವೃದ್ಧಿಯನ್ನು ಹೊಂದುವದರಲ್ಲಿ ಎಳ್ಳಷ್ಟಾದರೂ ಸಂಶಯುವಿರಲಾರದು. "ಸರ್ವೇಜನಾಃ ಸುಖಿನೊ ಭವಂತು, ಸಮಸ್ತ ಸನ್ಮಂಗಳಾನಿ ಭವಂತು" ಎಂಬ ಧ್ಯೇಯವನ್ನಿಟ್ಟುಕೊಂಡು ಎಲ್ಲಾ ಯಕ್ಷಗಾನ ಕಲಾವಿದರೂ ಜನತೆಯ ಸೇವೆ ಮಾಡಿದರೆ ದಿ। ಬಲಿಪ ನಾರಾಯಣ ಭಾಗವತರು ಮೆರೆದಂತಹ ಕಲಾರಂಗದಲ್ಲಿ ಅವರಿಗೂ ಉತ್ತಮ ಸ್ಥಾನ ಖಂಡಿತವಾಗಿಯೂ ದೊರೆಯುವದು. ಭಕ್ತಿಯಿಂದ ಹೇಗೆ ದೇವರ ಸಾನ್ನಿಧ್ಯವನ್ನು ಪಡೆಯುವುದು ಸಾಧ್ಯವೊ ಅಂತೆಯೆ ವಿಶ್ವಾಸದಿಂದ ಕೂಡಿದ ಸೇವೆಯಿಂದ ಕಲಾಪ್ರೌಢಿಮೆಯನ್ನು ಹೊಂದಿ ಉತ್ತಮರ ಸ್ಥಾನವನ್ನು ಪಡೆಯಲು ಸಾಧ್ಯವಿದೆ. ಇದು ಎಲ್ಲ ಕಲಾವಿದರೂ ನೆನಪಿನಲ್ಲಿಡತಕ್ಕ ಮುಖ್ಯ ವಿಷಯು. ಇದು ದಿ। ಬಲಿಪ ನಾರಾಯಣ ಭಾಗವತರ ಜೀವನದಿಂದ ಜನತೆ ತಿಳಿದುಕೊಳ್ಳಬೇಕಾದ ಪಾಠ.

ಯಕ್ಷಗಾನ ಕೂಟ ಅಥವಾ ತಾಳಮದ್ದಲೆ

ವಿದ್ವಾನ್ ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿ, "ಯಕ್ಷಗಾನ ವಾಚಸ್ಪತಿ".

ಯಕ್ಷಗಾನವೆಂಬುದು ನಮ್ಮ ಜಿಲ್ಲೆಯ ಒಂದು ಸಮಷ್ಟಿ ಕಲೆ. "ಯಕ್ಷಗಾನ ಬಯಲಾಟ" ಅಥವಾ "ದಶಾವತಾರ ಆಟ"ವೆಂಬುದು ಅದರ ಪೂರ್ಣ ರೂಪ. "ಯಕ್ಷಗಾನ ಕೂಟ" ಅಥವಾ "ತಾಳಮದ್ದಲೆ" ಎಂಬುದು ಇದರ ಅಪೂರ್ಣ ರೂಪ. ಮೊದಲನೆಯದು ಬಹಳ ಪ್ರಾಚೀನ. ಎರಡನೆಯದು ಅರ್ವಾಚೀನ. ಇದು ತನ್ನ ಎರಡು ರೂಪಗಳ ಮೂಲಕವೂ ನಮ್ಮಲ್ಲಿ ಜನಜಾಗೃತಿಯನ್ನುಂಟು ಮಾಡುತ್ತಿದೆ. ಇದರ ಹುಟ್ಟು– ಬೆಳವಣಿಗೆ ಮುಂತಾದವುಗಳನ್ನು ನಿಷ್ಕೃಷ್ಟವಾಗಿ ತಿಳಿಸುವುದು ಕಷ್ಟ. ಆದರೂ ಇತರ ಗ್ರಂಥಗಳ ಮತ್ತು ಕೆಲವು ವ್ಯವಹಾರಗಳ ಸನ್ನಿವೇಶಗಳ ಸಹಾಯದಿಂದ ನಾನು ಈ ಯಕ್ಷಗಾನದ ಎರಡನೆಯ ಸ್ವರೂಪದ ವಿಷಯವಾಗಿ ಸ್ವಲ್ಪ ಬರೆಯಲು ಯತ್ನಿಸುತ್ತೇನೆ.

ನಮ್ಮ ಭಾರತೀಯ ಸಂಸ್ಕೃತಿಯು ಅತಿ ಪ್ರಾಚೀನವಾದುದು. ಇದು ನಮ್ಮ ವೇದಗಳಲ್ಲಿ ಸೂಕ್ಷ್ಮ ರೂಪದಲ್ಲಿ ನಿರೂಪಿಸಲ್ಪಟ್ಟು, ಅನಂತರದ ಶಾಸ್ತ್ರ ಗ್ರಂಥಗಳಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟು ಕೊನೆಗೆ ರಾಮಾಯಣ–ಭಾರತ ಮತ್ತು ಭಾಗವತಾದಿ ಪುರಾಣಗಳಲ್ಲಿ ಉದಾಹರಣ ಪ್ರತ್ಯುದಾಹರಣ ರೂಪಗಳಾದ ಕಥೆ ಕವನಗಳಿಂದ ಸುಲಭವಾದ ಶೈಲಿಯಿಂದ, ಬಹು ವಿಸ್ತಾರವಾಗಿ ವರ್ಣಿಸಲ್ಪಟ್ಟಿರುವುದು. ಈ ಗ್ರಂಥಗಳು ವಿದ್ವಜ್ಜನರ ವಿನೋದಕ್ಕಾಗಿಯೂ, ಸಂಸ್ಕೃತವನ್ನರಿಯದ ಸಾಮಾನ್ಯ ಜನರ ಅನುಭವಕ್ಕಾಗಿಯೂ, ಬೇರೆ ಬೇರೆ ಕ್ಷೇತ್ರ ಪ್ರದೇಶಗಳಲ್ಲಿ ತಜ್ಞರಾದ ವಿದ್ವಜ್ಜನರಿಂದ, ವಿವಿಧ ರೀತಿಯಿಂದ ವಿವರಿಸಲ್ಪಡುತ್ತಿದ್ದುವು.

ಹೀಗಿದ್ದರೂ ಜನತೆಗೆ ಕಾಲಕರ್ಮಗಳ ದೋಷದಿಂದ ತಮ್ಮ ತಮ್ಮ ಜೀವನ ಸಮಸ್ಯೆಯು ದಿನೇ ದಿನೇ ಪ್ರಬಲವಾಗುತ್ತಲೂ ಕಠಿನವಾಗುತ್ತಲೂ ಬಾಧಿಸತೊಡಗಿದುದರಿಂದ, ಆ ಹಿರಿಯ ಗ್ರಂಥಗಳ ವಿವರಣ, ಶ್ರವಣ–ಮನನಾದಿಗಳಲ್ಲಿ ಹಲವರಿಗೆ ನಿರುತ್ಸಾಹವೂ ಉಳಿದವರಿಗೆ ಅನಾದರವೂ ಉಂಟಾಗಿ ಆ ನಮ್ಮ ಪವಿತ್ರ ಸಂಸ್ಕೃತಿಗಳು ಗ್ರಂಥಗಳಲ್ಲೇ ಉಳಿಯಬೇಕಾಯಿತು.

ಆ ಸಮಯದಲ್ಲಿ ನಮ್ಮ ಸಂಸ್ಕೃತಿಯ ಮೇಲೆ ಜನತೆಗೆ ತಾನಾಗಿಯೇ ಆದರೋತ್ಸಾಹಗಳನ್ನುಂಟುಮಾಡುವ ಹೊಸ ಉಪಾಯವೊಂದನ್ನು ನಮ್ಮ ಹಿರಿಯರು ಕಂಡುಕೊಳ್ಳಬೇಕಾಯಿತು. ಅದಕ್ಕಾಗಿ ಅವರು ಕೈಗೊಂಡ ಸುಲಭ ಸಾಧನವೇ "ಯಕ್ಷಗಾನ ಕೂಟ"ವೆಂಬ ಸಮಷ್ಟಿ ಕಲೆ. ಇದು ಆಗ ತಾನೆ ಸೃಷ್ಟಿಸಲ್ಪಟ್ಟ ಹೊಸ ಕಲೆಯೇನೂ ಅಲ್ಲ. ಪೂರ್ವ ಕಾಲದಲ್ಲಿ ಬ್ರಹ್ಮದೇವನಿಂದ ಇಂದ್ರನ ವಿಜಯೋತ್ಸವದಲ್ಲಿ ಪ್ರದರ್ಶಿಸುವ ಸಲುವಾಗಿ ನಿರ್ಮಿಸಲ್ಪಟ್ಟು, ಕಾಲಾಂತರದಲ್ಲಿ ಭಗವಾನ್ ಶ್ರೀಕೃಷ್ಣನಿಂದ ವಜ್ರನಾಭ ಸುನಾಭರೆಂಬ ದುಷ್ಟರನ್ನು ನಿಗ್ರಹಿಸುವುದಕ್ಕಾಗಿ, ವಜ್ರಪುರದಲ್ಲಿ ಪ್ರದ್ಯುಮ್ನಾದಿಗಳ ಮೂಲಕ ಪ್ರದರ್ಶನ ಮಾಡಿಸಲ್ಪಟ್ಟಿತೆಂದು ವ್ಯಾಸಮುನಿಯ ಹರಿವಂಶದಲ್ಲಿ ನಿರೂಪಿ

ಸಲ್ಪಟ್ಟು, ಕಾಲಕ್ರಮದಿಂದ ನಮ್ಮ ನಾಡಿನಲ್ಲೂ ಪ್ರಚರಿಸುತ್ತಿದ್ದ, ಯಕ್ಷಗಾನ ಬಯಲಾಟವೆಂಬ ಸಮಷ್ಟಿ ಕಲೆಯ ಅಪೂರ್ಣ ರೂಪವೇ ಆಗಿದೆ.

ದೇವತೆಗಳಿಗಾಗಿ ಬ್ರಹ್ಮನಿರ್ಮಿತವಾದ ಆ ಪ್ರಾಚೀನ ಕಲೆಯು ನಾಟ್ಯಪ್ರಧಾನವಾಗಿದ್ದುದರಿಂದಲೂ, ಬಯಲಿನಲ್ಲಿ ಪ್ರದರ್ಶಿತವಾದುದರಿಂದಲೂ, ಅದು ಯಕ್ಷಗಾನವೇ ಹೊರತು ೨ನೆಯ ಶತಮಾನದಿಂದೀಚೆಗೆ ಪ್ರಚಾರಕ್ಕೆ ಬಂದ ನಾಟಕವಲ್ಲ, ಮತ್ತು ಹರಿವಂಶದಲ್ಲಿ ನಿರೂಪಿಸಿದಂತೆ, ವಜ್ರಪುರಿಯಲ್ಲಿ ನಡೆಯಿಸಲ್ಪಟ್ಟ ಪ್ರದರ್ಶನದ ಸನ್ನಿವೇಶಗಳೂ ಅದು ಯಕ್ಷಗಾನವೆಂದೇ ಹೇಳುವಂತಿವೆ. ಸುಮಾರು ೪೦ ವರುಷಗಳ ಹಿಂದೆ ನಾನು ಓದಿ ನೋಡಿದ ವಜ್ರನಾಭ ಸುನಾಭ ಕಾಳಗವೆಂಬ ಕೈ ಬರಹದ ಯಕ್ಷಗಾನ ಪ್ರಸಂಗವು ಸಹ ಮೇಲಿನ ಅಭಿಪ್ರಾಯವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತಿತ್ತು. ಈ ಕಾರಣಗಳಿಂದ ಯಕ್ಷಗಾನವು ಅತಿ ಪ್ರಾಚೀನ ಕಾಲದಲ್ಲುಂಟಾಗಿ, ಕಾಲಕ್ರಮೇಣ ಬಳೆದುಬಂದು ಒಂದು ನಿರ್ದಿಷ್ಟ ರೂಪವನ್ನು ತಳೆಯಿತೆನ್ನಬಹುದು.

ಬಯಲಾಟವು ಸಾರ್ವಕಾಲಿಕವಾಗಿ (ಮಳೆಗಾಲದಲ್ಲಿ ಸಹ) ಬಯಲಲ್ಲಿ ಪ್ರದರ್ಶಿಸಲು ಅಸಾಧ್ಯವಾದುದರಿಂದಲೂ, ವೇಷಭೂಷಣಾದಿ ಸಕಲೋಪಕರಣಗಳಿಂದೊಡಗೂಡಿದ ಮತ್ತು ನುರಿತ ನಿರ್ದಿಷ್ಟ ವೇಷಧಾರಿಗಳಿಂದೊಡಗೂಡಿದ ಅದರ ಮೇಳವನ್ನು ಊರಿಂದೂರಿಗೆ ಬೇಕಾದಂತೆ ಸಾಗಿಸಿ ಪ್ರದರ್ಶನ ಕಾರ್ಯವನ್ನೆಸಗುವುದು ಸುತರಾಂ ಕಷ್ಟಸಾಧ್ಯವಾದುದರಿಂದಲೂ, ಅದಕ್ಕಿಂತ ಬಹು ಸುಲಭವಾಗಿ, ಸಾರ್ವಕಾಲಿಕವಾಗಿ ಸಾರ್ವತ್ರಿಕವಾಗಿ ಪ್ರದರ್ಶಿಸಲು ಸಾಧ್ಯವಿರುವ ಯಕ್ಷಗಾನ ಕೂಟವು ಹಳ್ಳಿಗಳ ಸಾರ್ವಜನಿಕ ಸೇವೆಗೆ ಅತ್ಯುತ್ತಮವಾದ ಸಾಧನವೆಂಬುದನ್ನು ಯಾರೂ ಒಪ್ಪಲೇಬೇಕು.

ಯಕ್ಷಗಾನ ಕೂಟದಲ್ಲಿ – ಮನೋರಂಜಕಗಳಾದ ಗೀತ – ವಾದ್ಯ – ಮತ್ತು ವಚನಗಳೆಂಬ ಮೂರು ಲಲಿತ ಕಲೆಗಳು ಪರಸ್ಪರವಾಗಿ ಹೆಣೆದು ಕೊಂಡಿರುವುದರಿಂದ, ಇದು ತ್ರಿಮಧುರದಂತೆ ಅತಿ ಮಧುರವಾಗಿದೆ. ಬೇರೆ ಬೇರೆ ರಾಗ ತಾಳಗಳೊಡನೆ ರಸ ಭಾವಗಳಿಗೆ ಅನುಗುಣವಾಗಿ ಹಾಡುವುದಕ್ಕೆ ಅನುಕೂಲವಾಗುವಂತೆ ರಚಿಸಿದ ಗೀತಮಯ ಸಾಹಿತ್ಯ ಗ್ರಂಥಗಳು (ಪ್ರಸಂಗಗಳು) ಈ ಯಕ್ಷಗಾನ ಕಲೆಗೆ ಸೂತ್ರಗಳಂತಿವೆ. ಇವುಗಳನ್ನು ಹಿಮ್ಮೇಳವಾಗಿ ಭಾಗವತನೆಂಬ ಸೂತ್ರಧಾರನು ಶ್ರುತಿ - ಲಯ ತಾಳ - ಬದ್ಧವಾಗಿ ಹಾಡುವನು ಇವನ ಹಾಡುಗಳಿಗೆ ಹೊಂದಿಕೆಯಾಗಿ, ಮೃದಂಗಾದಿ ವಾದ್ಯಗಳು ಇವನ ಇಕ್ಕಡೆಗಳಲ್ಲಿ ಬಾರಿಸಲ್ಪಡುವವು. ಭಾಗವತನ ಮುಂಭಾಗದಲ್ಲಿ ವಕ್ತೃಗಳು ಸಾಮಾಜಿಕರಿಗಭಿಮುಖವಾಗಿ ಕುಳಿತು, ಪ್ರಸಂಗಗಳಲ್ಲಿರುವ ಪಾತ್ರಗಳನ್ನು ಪೃಥಕ್ ಪೃಥಕ್ಕಾಗಿ ವಹಿಸಿಕೊಂಡು, ಹಾಡಿದ ಪದ್ಯಾರ್ಥಗಳ ಎಲ್ಲೆಯನ್ನು ಮೀರದಂತೆ, ಉದ್ದಿಷ್ಟ ಪಾತ್ರಗಳ ರಸ - ಭಾವ - ಗುಣ - ಸ್ವಭಾವಗಳು ಕೆಡದಂತೆ, ತಮ್ಮಲ್ಲಿರುವ ಪುರಾಣಾದಿ ಗ್ರಂಥಾನುಭವಗಳ ಹಿನ್ನೆಲೆಯಲ್ಲಿ, ಮಾತುಗಳ (ಅರ್ಥಗಾರಿಕೆಯ) ಜಾಣ್ಮೆಯಿಂದಲೇ, ಆಯಾ ಪಾತ್ರಗಳನ್ನು ತನ್ಮಯತೆಯಿಂದ ಚಿತ್ರಿಸಿ, ಸಾಮಾಜಿಕರಲ್ಲಿ ರಸಭಾವಗಳನ್ನು ದ್ರೇಕಿಸಿ, ಆನಂದದಿಂದ ಮೈಮರೆಯುವಂತೆ ಮಾಡುವರು.


ಇದರಿಂದ - ಬರಿಯ ಪುರಾಣೇತಿಹಾಸಾದಿ ಗ್ರಂಥಗಳ ಶ್ರವಣ – ಮನನ – ಪ್ರವಚನಗಳಲ್ಲಿ, ಅಸಡ್ಡೆ ಅನಾದರ ಅಸ್ವಾರಸ್ಯ ಹೊಂದಿದ, ಅಜ್ಞರು – ವಿಜ್ಞರು – ಬಾಲರು ವೃದ್ಧರು – ಬಾಲೆಯರು - ಮಹಿಳೆಯರು ಮುಂತಾದ ಸಕಲರು ಹಾಡಿನ ಮಾಧುರ್ಯಕ್ಕೆ ಬಾಯಿ ತೆರೆದು, ವಾದ್ಯಗಳ ವಿಚ್ಛಿತ್ತಿ ವಿಶೇಷಗಳಿಗೆ ಬೆರಗಾಗಿ, ಪಾತ್ರಧಾರಿಗಳ ಸಂವಾದ - ವಿವಾದ ಪೂರ್ವಪಕ್ಷ - ಸಿದ್ಧಾಂತಾತ್ಮಕಗಳಾದ ವಚನ ರಚನೆಗಳ ನವರಸಗಳನ್ನುಂಡುಂಡು, ಪರಮಾನಂದದಿಂದ ಮೈಮರೆತು, ತಮ್ಮ ಹೃದಯಗಳಲ್ಲಿ ನಮ್ಮ ಪ್ರಾಚೀನ ಪವಿತ್ರ ಸಂಸ್ಕೃತಿಯನ್ನು ನೆಲೆಗೊಳಿಸುವಂತಾಗುವುದು. ಲಲಿತ ಕಲೆಗಳ ಲೋಕೋಪಕಾರಕತ್ವವೂ ಮೈದೋರಿದಂತಾಗುವುದು.

ಈ ಕಲೆಗೆ ಯಕ್ಷಗಾನವೆಂಬ ಹೆಸರು ಬರಲು ಕಾರಣವೇನು? "ಯಕ್ಷ್" ಎಂಬ ಧಾತುವಿಗೆ 'ಪೂಜೆ' ಎಂಬರ್ಥ. ಅದಕ್ಕೆ "ಅ" ಎಂಬ ಪ್ರತ್ಯಯ ಸೇರಿ, "ಯಕ್ಷ" ಎಂದಾದಾಗ, "ಪೂಜಿಸುವವನು" ಎಂದರ್ಥವಾಗುವುದು. ಪೂಜೆಯು – ಭಗವದ್ವಿಷಯವಕವಾದುದು. ಆದುದರಿಂದ "ಯಕ್ಷ" ಎಂದರೆ "ಭಗವದ್ಭಕ್ತ" ಎಂದು ನಿಷ್ಕೃಷ್ಟಾರ್ಥ. "ಗಾನ"ವೆಂದರೆ ಹಾಡು "ಯಕ್ಷರ ಗಾನವು ಯಾವ ಕಲಾ ಸಮುದಾಯದಲ್ಲಿ (ಸಮಷ್ಟಿ ಕಲೆಯಲ್ಲಿ) ಇರುವುದೋ ಅದು - ಯಕ್ಷಗಾನ" ಎಂಬ ವಿಗ್ರಹ ವಾಕ್ಯದೊಡನೆ ಇಲ್ಲಿ ಬಹುವ್ರೀಹಿ ಸಮಾಸವೆಂದರಿಯಬೇಕು. ಭಗವದ್ಭಕ್ತ ಎಂದರೆ "ಭಾಗವತ" ಎಂಬುದು ಸುಪ್ರಸಿದ್ಧವಾಗಿದೆ. ನಮ್ಮ ಯಕ್ಷಗಾನದ ಹಾಡುಗಾರನಿಗೆ "ಭಾಗವತ"ನೆಂಬುದೇ ಗುಣನಾಮವಷ್ಟೆ! ಹರಿವಂಶದಲ್ಲಿ ಹೇಳಿದ ವಜ್ರಪುರಿಯ ಪ್ರದರ್ಶನಗಾರರ ಮೇಳದಲ್ಲಿ ಹಾಡುಗಾರನಾಗಿದ್ದ ಭದ್ರ ನಟನೆಂಬವನು ಕೇವಲ ಭಗವದ್ಭಕ್ತನಾಗಿದ್ದನೆಂದೇ ಅಲ್ಲಿ ಸ್ಪಷ್ಟ ಪಡಿಸಿದೆ. ಇದರಿಂದ ಯಕ್ಷಗಾನದಲ್ಲಿ - ಹಾಡುಗಾರನು ಭಗವದ್ಭಕ್ತನಾಗಿರಬೇಕೆಂದೂ, ಇದರಲ್ಲಿ ಅವನೇ ಪ್ರಧಾನ ಪುರುಷನಾಮದರಿಂದ, "ಪ್ರಧಾನ ವ್ಯಪದೇಶ" ನ್ಯಾಯದಂತೆ, ಅವನ ಸಂಬಂಧವಾಗಿಯೇ ಈ ಕಲೆಗೆ - "ಯಕ್ಷಗಾನ"ವೆಂಬ ಹೆಸರು ಅನ್ವರ್ಥನಾಮವಾಗಿದೆಯೆಂದು ತಿಳಿಯಬರುವುದು. "ಹಾಗಿದ್ದರೆ - ಇದಕ್ಕೆ ಪ್ರಸಿದ್ಧವಾದ ಭಕ್ತ ಶಬ್ದವನ್ನೇ ಉಪಯೋಗಿಸಿ, "ಭಕ್ತಗಾನ"ವೆಂಬ ಹೆಸರನ್ನಿಡದೆ, ಅಪ್ರಸಿದ್ಧವಾದ ಯಕ್ಷ ಶಬ್ದವನ್ನುಪಯೋಗಿಸಿ, "ಯಕ್ಷಗಾನ"ವೆಂಬ ಹೆಸರನ್ನೇಕೆ ಇಡಬೇಕಿತ್ತು?" ಎಂದು ಯಾರೂ ಶಂಕಿಸಬಾರದು. ಹೆಸರಿಡುವುದು ಕಲಾವಿದರ ಇಚ್ಛಾನುಸಾರವಾಗಿದೆ. ಇದು ಹಳಗಾಲದಿಂದ ರೂಢಿಗೆ ಬಂದ ಹೆಸರು, ಆ ಕಾಲದಲ್ಲಿ "ಭಕ್ತ" ಎಂಬ ಅರ್ಥದಲ್ಲಿ "ಯಕ್ಷ" ಎಂಬ ಶಬ್ದವೇ ರೂಢವಾಗಿರಲೂಬಹುದು. ಕಾಲದ ಬದಲಾವಣೆಗನುಗುಣವಾಗಿ ಶಬ್ದಗಳ ರೂಢಿಯು ಬದಲಾಗುವುದು ಪ್ರಸಿದ್ಧವಿದೆ.

ಯಕ್ಷಗಾನದಲ್ಲಿ ಪಾತ್ರಧಾರಿಗಳಿಗೆ ಮಾತಿನ ಸ್ವಾತಂತ್ರ್ಯವಿದೆ. ಅವರು ನಾಟಕದ ಪದ್ಧತಿಯಂತೆ ಬರೆದಿಟ್ಟ ಮಾತುಗಳನ್ನೇ ಆಡಬೇಕಾಗಿಲ್ಲ. ಸ್ವತಂತ್ರ ವಾಕ್ಯಗಳಿಂದಲೇ ಮಾತಾಡತಕ್ಕದ್ದು. ಇದರಿಂದ ವಕ್ತೃವಿನಲ್ಲಿ ಅನುಭವ ಹೆಚ್ಚಿದಂತೆ ಮಾತಿನ ವೈಖರಿಯೂ, ವಿಷಯಗಳ ವೈವಿಧ್ಯವೂ ಹೆಚ್ಚಾಗಲು ಸಾಧ್ಯವಿದೆ. ಆತನ ಬುದ್ಧಿ ವಿಕಾಸ ಹೊಂದುವುದಕ್ಕೂ ಅವಕಾಶವಿದೆ. ಒಂದೇ ಪಾತ್ರವನ್ನು ಒಬ್ಬನೇ ಹಲವು ಬಾರಿ ವಹಿಸಿಕೊಂಡರೂ, ಸರ್ತಿಯಿಂದ ಸರ್ತಿಗೆ ಮಾತುಗಾರಿಕೆಯಲ್ಲಿ ವಿಚ್ಛಿತ್ತಿ ವಿಶೇಷಗಳು ಸಹಜವಾದುದರಿಂದ, ಶ್ರೋತೃಗಳಿಗೆ ಅನಾದರವುಂಟಾಗುವಂತಿಲ್ಲ. ಹಾಡುಗಾರನಿಗೆ ಸಹ ತನ್ನ ಅನುಭವಾನುಸಾರವಾಗಿ, ರಸಗಳಿಗೊಪ್ಪುವ ಯಾವ ರಾಗ ತಾಳಗಳಿಂದ ಬೇಕಾದರೂ ಹಾಡಬಹುದು. ಸಂದರ್ಭಕ್ಕೆ ಹೊಂದಿಕೆಯಾಗಿ, ಸಂಭಾಷಣೆಯ ಪದ್ಯಗಳನ್ನು ನ್ಯೂನಾತಿರೇಕ ಗೊಳಿಸಬಹುದು. ಆದರೆ ಈ ಸ್ವಾತಂತ್ರ್ಯವು ಹಾಡುವವರಿಗಾಗಲಿ ವಕ್ತೃಗಳಿಗಾಗಲಿ ಬಹುಕಾಲದ ವ್ಯವಸಾಯದಿಂದ ಮಾತ್ರ ಸಾಧ್ಯವೆಂಬುದು ಮನನೀಯವಾಗಿದೆ. ಪುರಾಣ ಶೈಲಿಯಲ್ಲಿ ಪ್ರಸಂಗಗಳು ಬರೆಯಲ್ಪಟ್ಟುದರಿಂದ ಪಾಮರರಿಗೆ ಸಹ ಯಕ್ಷಗಾನದ ಕಥೆಯನ್ನು ತಿಳಿದುಕೊಳ್ಳಲು ನಾಟಕದಂತೆ ಕಷ್ಟವಾಗಲಾರದು. ಇದಿಷ್ಟು ಈ ಕಲೆಯಲ್ಲಿರುವ ಅನ್ಯಾದೃಶವಾದ ವೈಶಿಷ್ಟ್ಯವಾಗಿದೆ.

ಮುಖ್ಯವಾಗಿ ಯಕ್ಷಗಾನವು ಸಾರ್ವತ್ರಿಕವಾಗಿ, ಸಾಮಾನ್ಯ ಜನತೆಯಲ್ಲಿ ಹಿಂದಿನ ಕಾಲದ ಶ್ರೀ ರಾಮ, ಯುಧಿಷ್ಠಿರ, ಹರಿಶ್ಚಂದ್ರ, ಭಗೀರಥ, ನಳ, ಮುಂತಾದ ಮಹಾವ್ಯಕ್ತಿಗಳ ಪರಿಚಯ, ಧರ್ಮ, ನೀತಿ, ಆತ್ಮತತ್ವ, ಭಕ್ತಿಮಾರ್ಗ, ಮುಂತಾದವುಗಳ ತಿಳಿವು, ಪ್ರಾಚೀನ ಕಾಲದ ವ್ಯವಹಾರ, ಉತ್ತಮ ನಾಗರಿಕತೆ, ಸಾಂಸಾರಿಕ ಕಷ್ಟಗಳ ಸಹನೆ, ಬಳಲಿದ ಮನಸ್ಸಿಗೆ ವಿಶ್ರಾಂತಿ, ಚಿತ್ತವಿಕಾಸ, ಭಾಷಾಜ್ಞಾನ, ಆತ್ಮಸ್ವಾತಂತ್ರ್ಯ, ಕರ್ತವ್ಯನಿಷ್ಠೆ, ಸಹಜೀವನ, ಸಹಕಾರ, ಸುಖದು:ಖಗಳ ಸಹಾನುಭೂತಿ, ಮುಂತಾದವುಗಳನ್ನು ನಿರಾಯಾಸವಾಗಿ ಮನ ಮುಟ್ಟುವಂತೆ ಮಾಡಿ, ಹೊಸ ಚೈತನ್ಯವನ್ನು ಹುಟ್ಟಿಸಿ ಸನ್ಮಾರ್ಗದಲ್ಲಿ ಪ್ರವೃತ್ತಿಯುಂಟಾಗುವಂತೆ ಮಾಡುವುದು.

ಒಂದು ಕಾಲದಲ್ಲಿ ಕನ್ನಡ ನಾಟಕಾದಿಗಳು ವಿದ್ವತ್ಪೂರ್ಣವಾಗಿದ್ದು, ರಾಜಾಶ್ರಯವನ್ನು ಪಡೆದು, ವಿದ್ವಜ್ಜನರ ಮತ್ತು ನಾಗರಿಕರ ಹೃದಯಗಳನ್ನು ಸೂರೆ ಮಾಡಿದುದರ ಪರಿಣಾಮವಾಗಿ ನಮ್ಮ ಯಕ್ಷಗಾನವು - ಕೇವಲ ಹಳ್ಳಿಯ ಪಾಲಾಗಿ, ಗ್ರಾಮೀಣ ಕಲೆಯೆನಿಸಿ, ಬಡವರ ಸೊತ್ತಾಗಿ ಉಳಿಯಬೇಕಾಗಿತ್ತು. ಆದರೂ ಅದು ತನ್ನ ವರ್ಚಸ್ಸನ್ನು ಪೂರ್ಣ ಕಳೆದುಕೊಳ್ಳದೆ, ಗರಿಕೆಯ ಹುಲ್ಲಿನಂತೆ ಜನತಾ ಸೇವೆಯನ್ನು ಮಾಡುತ್ತಲೇ ಇತ್ತು. ಈಗ ಸುಮಾರು ೪೫ ವರುಷಗಳಿಂದಿತ್ತ ಅದು ಕಾಲ ಕರ್ಮಗಳ ಸಂಯೋಗದಿಂದ ಒಂದು ಹೊಸ ಚೈತನ್ಯವನ್ನು ಪಡೆದು ಮೆರೆಯ ತೊಡಗಿದೆ. ಈ ಕಲೆಯಲ್ಲಿ ಸಹಜವಾಗಿರುವ ಸಾರ್ವಜನಿಕ ನಿಷ್ಕಾಮ ಸೇವಾತತ್ಪರತೆಯನ್ನು ಕಂಡು, ನಾಗರಿಕರು ಶ್ರೀಮಂತರು, ಧೀಮಂತರು, ಮುಂತಾದ ಮಹಾವ್ಯಕ್ತಿಗಳು ಆದರಲ್ಲಿ ಪ್ರವೇಶಿಸಿ, ಸ್ವತಃ ವ್ಯವಸಾಯ ಮಾಡಿ, ಹಲವು ಸಂಘ ಸಂಸ್ಥೆಗಳ ಮೂಲಕ ಅದನ್ನು ಪುನರುಜ್ಜೀವನಗೊಳಿಸಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಈಗ ಇದು ತನ್ನ ಗತವೈಭವವನ್ನು ಪಡೆದು, ಜನಜೀವನದಲ್ಲಿ ಹಾಸು ಹೊಕ್ಕಾಗಿ, ತನ್ನ ವರ್ಚಸ್ಸಿನಿಂದ, ಇಡೀ ಕನ್ನಡನಾಡಿನ ಹಾಗೂ ಸರಕಾರದ ಗೌರವಾದರಗಳಿಗೆ ಪಾತ್ರವೆನಿಸಿರುವುದು ಪರಮಾನಂದದ ವಿಷಯವಾಗಿದೆ. ಈ ಕಲೆಯು ಉನ್ಮಾರ್ಗಗಾಮಿಯಾಗದೆ ಸನ್ಮಾರ್ಗಗಾಮಿಯಾಗಿ, ಜನತೆಯ ಕಲ್ಪವೃಕ್ಷವಾಗಿ, ಬೆಳಗಿ ಬಾಳಲೆಂದು ಕಲಾಮಯಿಯಾದ ಶ್ರೀ ವಾಗ್ದೇವಿಯನ್ನು ಭಕ್ತಿಯಿಂದ ಭಾವಿಸುತ್ತೇನೆ. ಇತಿ ಶಿವಂ.



ಯಕ್ಷಗಾನ ಕಲಾಮಾತೆ! ಜ್ಞಾನಪ್ರದಾತೆ!

ಶ್ರೀ ಮ। ಶಂಕರನಾರಾಯಣ ಸಾಮಗ, ಹರಿದಾಸ.

"ಯಕ್ಷಗಾನ" ಎಂಬ ಈ ಕಲೆಯ ವಿಚಾರದಲ್ಲಿ, ಅನೇಕ ಸಾಹಿತಿಗಳ – ವಿದ್ವಾಂಸರ ವಿಚಾರ ಬೋಧಾತ್ಮಕಗಳಾದ ಲೇಖನಗಳು, ಪ್ರಬಂಧಗಳು, ಪರಿಚಯಾತ್ಮಕ ವಿವರಣೆಗಳು ಪ್ರಕಾಶನ ಗೊಂಡಿವೆ; ಕರ್ನಾಟಕದಲ್ಲಿ ಬಹುಕಡೆಗಳಲ್ಲಿ ಅವು ಸಂಗ್ರಾಹ್ಯವಾಗಿವೆ. ಡಾ। ಶಿವರಾಮ ಕಾರಂತ, ದಿ। ಮುಳಿಯ ತಿಮ್ಮಪ್ಪಯ್ಯ, ದಿ। ಕೆ. ಪಿ. ವೆಂಕಪ್ಪ ಸೆಟ್ಟಿ. ದಿ। ಹಾಸಣಗೆ ಗಣಪತಿ ಭಟ್ಟ – ಮುಂತಾದ ಘನ ವಿದ್ವಾಂಸರನೇಕರ, ಯಕ್ಷಗಾನ ವಿಷಯಕ ವೈಚಾರಿಕ ಲೇಖನಗಳು, ಕರ್ನಾಟಕದ ಬಹುಮಂದಿಗೆ, ಆ ಕಲೆಯ ಕುರಿತಾದ ಜ್ಞಾನ ಉಂಟಾಗುವಂತೆ, ಸದ್ಬೋಧೆಯನ್ನಿತ್ತು ಉಪಕಾರ ಮಾಡುತ್ತವೆ. ಕುಮಟಾದಿಂದ (ಕೊನೆಗೆ ಹೊನ್ನಾವರದಿಂದ) ಹೊರಟು, ಕರ್ನಾಟಕದ ಅನೇಕ ಕಡೆಗಳಿಗೆ ಪ್ರಸಾರವಾಗುತ್ತಿದ್ದ "ಯಕ್ಷಗಾನ"ವೆಂಬ ಮಾಸಪತ್ರಿಕೆಯು ಈ ಕಲೆಯ ವಿವಿಧ ವಿಷಯಗಳನ್ನು ಕನ್ನಡ ಜನಕ್ಕೆ ಬೋಧಿಸಿ, ಈ ಕಲೆಯ ಮಾಹಿತಿಯನ್ನು ಮಾಡಿಕೊಟ್ಟಿತು. 'ಯಕ್ಷಗಾನ'ದ ವಿಷಯದಲ್ಲಿ, ಅದರ ಹಿರಿಮೆ, ಹಾಗೂ ಅದರಿಂದ ಜನಕ್ಕೆ ಸಿಗುವ ಪ್ರಯೋಜನ – ಇವುಗಳ ವಿಚಾರದಲ್ಲಿ ವಿದ್ವಾಂಸರು ಸಮಾನಾಭಿಪ್ರಾಯದವರಾದರೂ, ಅದರ ಸ್ವರೂಪ ವಿಚಾರದಲ್ಲಿ ಪರಸ್ಪರ ವ್ಯತ್ಯಸ್ತ ಅಭಿಪ್ರಾಯದವರೆಂದು ತಿಳಿದು ಬರುತ್ತದೆ ನಮ್ಮ ಕರ್ನಾಟಕದ ದಕ್ಷಿಣೋತ್ತರ ಜಿಲ್ಲೆಗಳಲ್ಲಿ ಹೆಚ್ಚಾಗಿ ವ್ಯಾಪ್ತಿಗೊಂಡಿರುವ ಅದರ ರೀತಿ ರೂಪ ಲಕ್ಷಣದ ಮೇರೆಗೆ, ಅದರ ಸ್ವತಂತ್ರವಾದ ನಿಜಸ್ವರೂಪ ದರ್ಶನವು ಯಾರಿಗೂ ಆಗುವುದಿಲ್ಲ – ಆಗಿಲ್ಲವೆಂದೇ ಹೇಳಬಹುದು; 'ಇದಮಿತ್ಥಂ' ಎಂದು ನಿರ್ಣಯಿಸಲ್ಪಡಲಾಗದಂತೆ, ಸ್ವಲ್ಪ ಸ್ವಲ್ಪ ವ್ಯತ್ಯಾಸವುಳ್ಳ ರೂಪಗಳಿಂದಲೇ ಅದರ ಪ್ರಯೋಗ ನಡೆಯುತ್ತದೆ – ಪ್ರದರ್ಶಿಸಲ್ಪಡುತ್ತದೆ. ಈ ಒಂದು ದಕ್ಷಿಣ ಕನ್ನಡ ಜಿಲ್ಲೆಯೊಳಗೆ, ಈ ಯಕ್ಷಗಾನ ಕಲಾಮಾತೆಯು, 'ಬಡಗು ತಿಟ್ಟು' ಮತ್ತು 'ತೆಂಕುತಿಟ್ಟು'ಗಳೆಂಬ ಪರಸ್ಪರ ಭಿನ್ನಸ್ವರೂಪ ತಾಳಿಕೊಂಡು ವರ್ತಿಸುತ್ತಿದ್ದಾಳೆ. ಈ ಎರಡು ತಿಟ್ಟುಗಳಲ್ಲಿ, ಗೀತ, ವಾದ್ಯ ವೇಷ, ನರ್ತನ – ಈ ಅಂಗಗಳಲ್ಲಿ ಸ್ವಲ್ಪ ಪರಸ್ಪರ ವತ್ಯಾಸವಿದೆಯಾದರೂ, ಜನಾಕರ್ಷಣೆಯ ದಿವ್ಯ ವರ್ಚಸ್ಸಿನಲ್ಲಿ – ಸಹೃದಯರನ್ನು ಸಂತೃಪ್ತಿಗೊಳಿಸುವುದರಲ್ಲಿ ಅರ್ಥಾತ್ ಸಾಮಾಜಿಕರನ್ನು ಮೆಚ್ಚಿಸುವ ನಿಜ ಸೌಂದರ್ಯದಲ್ಲಿ, ಈ ಎರಡೂ 'ತಿಟ್ಟು'ಗಳು ಸಮಾನಯೋಗ್ಯತೆಯವುಗಳೇ ಹೌದು. ಆದುದರಿಂದಲೇ ಈ ಜಿಲ್ಲೆಯಲ್ಲಿ ಈ ಎರಡೂ ತಿಟ್ಟುಗಳು ಸಮಾನವೃತ್ತಿವ್ಯಾಪ್ತಿಯನ್ನು ಪಡೆದಿವೆ. ಇನ್ನು, ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಯಕ್ಷಗಾನ ಕಲೆಯು ದಕ್ಷಿಣ ಕನ್ನಡದ ಎರಡೂ ತಿಟ್ಟುಗಳಿಂದ ಸ್ವಲ್ಪ ಭಿನ್ನವಾಗಿರುವ ಮತ್ತೊಂದು ಸ್ವರೂಪ – ಸುರೂಪ ಉಳ್ಳದ್ದಾಗಿದೆ. ಅದಕ್ಕೂ ಜನಮನಾಕರ್ಷಣೆಯ ಪ್ರಭಾವೀಸೌಂದರ್ಯವಿದೆ. ಇನ್ನು ಬಳ್ಳಾರಿಯತ್ತಣದ 'ವೀಧಿನಾಟಕ,' ಹುಬ್ಬಳ್ಳಿಯತ್ತಣದ 'ದೊಡ್ಡಾಟ,' ಹಾವೇರಿಯತ್ತಣದ 'ಅಗಳಿ ಆಟ,' ಇವೆಲ್ಲ 'ಯಕ್ಷಗಾನ' ಕಲೆ ಎಂಬ ಹೆಸರಿನಿಂದಲೇ ಅಲ್ಲಲ್ಲಿ ಬಳಕೆಯಾಗಿರುವ ಭಿನ್ನಭಿನ್ನಸ್ವರೂಪದ ಕಲಾಪ್ರದರ್ಶನಗಳು. ಹಾಗಾದರೆ, ಈ ಯಕ್ಷಗಾನ ಕಲಾಸ್ವರೂಪ

ವಿಚಾರದಲ್ಲಿ ಜನಸಾಮಾನ್ಯಕ್ಕೆ ಸಂಗ್ರಾಹ್ಯವಾಗಬೇಕಾದ ಸಮಾಧಾನ ಏನು? ನಮ್ಮ ಪ್ರತ್ಯಕ್ಷಾನುಭವದ ಮೇರೆಗೆ, ನಮ್ಮ ಪ್ರಾಮಾಣಿಕವಾದ ತರ್ಕಬುದ್ಧಿಯ ವಿವೇಚನೆಯ ಪ್ರಕಾರ, ಈ ಯಕ್ಷಗಾನ ಕಲಾಸ್ವರೂಪ ವಿಷಯದಲ್ಲಿ ನಾವು ಯಾವ ನಿರ್ಣಯವನ್ನು ಇಟ್ಟುಕೊಳ್ಳಬಹುದು?

ನಮ್ಮ ಕನ್ನಡವೆಂಬ ಒಂದೇ ಭಾಷೆಯಲ್ಲಿ, ಮಂಗಳೂರು, ಧಾರವಾಡ, ಬೆಂಗಳೂರು, ಕಾರವಾರ – ಇಂತಿಂಥ ಭಿನ್ನಭಿನ್ನ ಪ್ರದೇಶಗಳಿಗನುಸರಿಸಿ, ಭಾಷೆಯ ಬಾಹ್ಯಸ್ವರೂಪದ ಮಟ್ಟಿಗೆ, ವೈವಿಧ್ಯವು ತೋರಿ ಬರುವುದಿಲ್ಲವೇ? ಆಡುವ ಮಾತಿನ ರೀತಿಯಲ್ಲಿಯೋ, ಬರೆಯುವ ಒಕ್ಕಣೆಗಳ ಶೈಲಿಯಲ್ಲಿಯೋ, ಒಂದೇ ಕನ್ನಡ ಭಾಷೆಯಲ್ಲಿ, ಈ ಭಿನ್ನಭಿನ್ನ ಪ್ರದೇಶಗಳ ಸ್ಥಿತಿಗತಿಗಳ ಕಾರಣದಿಂದ, ಅಸಮಾನತೆಯು ತೋರಿಬರುವುದಿಲ್ಲವೇ? ಆದರೆ, ಸಾಹಿತ್ಯ ಅಂದರೆ ಭಾಷಾಶಾಸ್ತ್ರದ ದೃಷ್ಟಿಯಿಂದ, ಈ ಅಸಮಾನತೆಯು ಗಣ್ಯವಲ್ಲ; ಅದೇನು ದೋಷ ಮಹಾ? ಭಿನ್ನಭಿನ್ನ ಪ್ರದೇಶಗಳ ಒಂದೇ ಭಾಷೆಯಲ್ಲಿ ಬಾಹ್ಯಸ್ವರೂಪದ ಮಟ್ಟಿಗೆ ಏಕ ರೀತಿ ಇಲ್ಲದಿದ್ದರೂ, ವಿಚಾರ ಪ್ರಬೋಧನಾತ್ಮಕವಾದ ಸ್ವಾರಸ್ಯಾರ್ಥಗರ್ಭಿತವಾಗಿರುವ ಅದರ ಅಂತಸ್ಸತ್ವದ ಮೇಲಿಂದ ಅದರ ಸೌಂದರ್ಯವು ಸಂಗ್ರಹಿಸಲ್ಪಟ್ಟು, ಮನ್ನಣೆ ಪಡೆಯುತ್ತದೆ. ಪ್ರಾದೇಶಿಕ ಪರಿಸ್ಥಿತಿಗಳ ಪರಸ್ಪರ ವ್ಯತ್ಯಾಸದಿಂದ, ಒಂದೇ ಭಾಷೆಯ ಬಾಹ್ಯ ರೂಪದಲ್ಲಿ ಏಕರೀತಿ ಇಲ್ಲದೇ ಹೋದರೆ, ಆ ಭಾಷೆಯ ಸಾಹಜಿಕ ಸೌಂದರ್ಯಕ್ಕೆ – ಅದರ ವರ್ಚಸ್ಸಿಗೆ– ಅದರಿಂದ ಕುಂದು ಬರುವುದಿಲ್ಲ. ಇದೇ ನ್ಯಾಯವು ಯಕ್ಷಗಾನ ಕಲೆಗೆ ಅನ್ವಯಿಸುತ್ತದೆ. ಮಂಗಳೂರು, ಕುಂದಾಪುರ, ಕಾರವಾರ,– ಇವೆಲ್ಲ ಒಂದೇ ಕರ್ನಾಟಕದೊಳಗಣ ಭಿನ್ನಭಿನ್ನ ಪ್ರದೇಶಗಳು. ಪ್ರಾದೇಶಿಕ ಪರಸ್ಪರ ಭಿನ್ನತೆಗಳಿಗನುಸರಿಸಿ, ಜನಾಂತಃಕರಣದಲ್ಲಿ ಕಲಾವೃತ್ತಿ ಮೂಲಕವಾದ ರಸಾಸ್ವಾದನಾ ಅಭಿರುಚಿಯಲ್ಲಿಯೂ ಸಮಾನತಾ ಇರದೇ ಹೋಗಬಹುದು. ತತ್ಪರಿಣಾಮವಾಗಿ, ಕಲಾವ್ಯವಸ್ಥೆಯಲ್ಲಿಯೂ ಬಾಹ್ಯತಃ ಏಕ ರೀತಿ ಇರುವುದು ಅಶಕ್ಯವಾಗಬಹುದು. ಏವಂಚ ಈ ಯಕ್ಷಗಾನವೆಂಬ ಒಂದೇ ಕಲೆಯು ಒಂದೇ ಕರ್ನಾಟಕದೊಳಗಣ ಭಿನ್ನಭಿನ್ನ ಪ್ರದೇಶಗಳಲ್ಲಿ ಭಿನ್ನಭಿನ್ನವಾದ ಬಾಹ್ಯ ಸ್ವರೂಪಗಳನ್ನು ತಾಳಿಕೊಳ್ಳಬೇಕಾಗುತ್ತದೆ. ಆದರೆ, ಜನಕ್ಕೆ ಪ್ರಯೋಜನ ಕೊಡುವ ತನ್ನ ಸ್ವಯಂ ಸಾಮರ್ಥ್ಯದಲ್ಲಿ,– ತನ್ನ ಆ ಸೌಂದರ್ಯದಲ್ಲಿ - ಈ ಎಲ್ಲಾ ಬಾಹ್ಯ ಸ್ವರೂಪಗಳಲ್ಲಿ ಸಮಾನ ಯೋಗ್ಯತೆಯನ್ನು ಕಾಪಾಡಿಕೊಂಡಿದೆ. ಯಾವನೊಬ್ಬ ಯಕ್ಷಗಾನದ ಸಹೃದಯನು – ರಸಿಕನು – ತನ್ನ ಪ್ರದೇಶದಲ್ಲಿ ವ್ಯಾಪ್ತಿ ಇರುವ, ತನ್ನ ಅಭಿರುಚಿಗೆ ತಕ್ಕುದಾದ ಅದರದ್ದೊಂದು ರೀತಿ ರೂಪವನ್ನು ಅನುಭವಿಸಿ, ಅನುಭೋಗಿಸಿ, ಸಂತುಷ್ಟಿ ಪಡೆಯುತ್ತಾನಾದರೆ – ಅಭಿಮಾನಿಸುತ್ತಾನಾದರೆ, ತಥಾಸ್ತು. ಆದರೆ, ಹಾಗೆ ಅಭಿಮಾನ ಪೂರ್ವಕವಾಗಿ ಯಕ್ಷಗಾನದ ಅದೊಂದು ಬಗೆಯನ್ನು ಪರಿಗ್ರಹಿಸಿ ಸಂತೋಷ ಪಡೆದುದಕ್ಕೆ, ಇನ್ನೊಂದು ಪ್ರದೇಶದಲ್ಲಿ ಬಳಕೆಯಲ್ಲಿರುವ ಅದೇ ಯಕ್ಷಗಾನದ ಮತ್ತೊಂದು ರೀತಿಯನ್ನು ನಿಂದಿಸುವುದೋ, ದೂಷಿಸುವುದೋ ಮಾತ್ರ ದುರ್ವಿಚಾರವೇ ಸರಿ. ಹಾಗೆ ನಿಂದಿಸುವುದೆಂದರೆ, ಯಕ್ಷಗಾನ ಕಲಾಮಾತೆಗೆ ಅಪಚಾರ ಮಾಡಿದ ದೋಷವೇ ಹೌದು. ಬೇರೆ ಬೇರೆ ವರ್ಗದ ಅನೇಕ ಮಕ್ಕಳ ತಾಯಿಯು ಆ ಎಲ್ಲ ಮಕ್ಕಳನ್ನು ಒಂದೇ ರೀತಿಯಿಂದ ಎತ್ತಿಕೊಂಡೇ ಸ್ತನ್ಯನೀಡಬೇಕೆಂದಿಲ್ಲ; ಅಥವಾ ಮಕ್ಕಳನ್ನು ಲಾಲಿಸುವಾಗ ಎಲ್ಲ ಮಕ್ಕಳೊಡನೆಯೂ ಒಂದೇ ರೀತಿಯ ಕೊಂಡಾಟದ ಮಾತನ್ನೇ ಉಪಯೋಗಿಸಬೇಕೆಂದಿಲ್ಲ. ಅಂತೆಯೇ ಯಕ್ಷಗಾನ ಕಲಾಮಾತೆಯು, ತನ್ನ ವಾತ್ಸಲ್ಯಕ್ಕೋ ಅನುಗ್ರಹಕ್ಕೋ ಪಾತ್ರರಾಗುವ ತನ್ನ ಎಲ್ಲ ಕಲಾಪ್ರಿಯ ಸಂತಾನವನ್ನು ಪಾಲಿಸುವಾಗ ರೀತಿ ವೈವಿಧ್ಯವು. ಆದುದರಿಂದ, ಯಾವನೊಬ್ಬ ಸಹೃದಯನು, ತನ್ನ ಸ್ವಂತದ ಅಭಿರುಚಿಗೆ ಒಡಿಸದೆ ಆ ಕಲೆಯ ಮತ್ತೊಂದು ರೀತಿ ರೂಪ ದರ್ಶನವಾದರೆ, ಅದು ತನ್ನ ಸ್ವಮನೋವೃತ್ತಿಗೆ ಮೆಚ್ಚುಗೆಯಾಗದಿದ್ದರೂ, ಅದನ್ನು ತುಚ್ಛೀಕರಿಸುವುದೋ, ನಿಂದಿಸುವುದೋ ಸರಿಯಲ್ಲ. ಯಕ್ಷಗಾನದ ಭಿನ್ನಭಿನ್ನವಾಗಿರುವ ಎಲ್ಲ ತೆರನಾದ ಅದರ ಬಾಹ್ಯ ಸ್ವರೂಪಗಳಲ್ಲಿ ಸಮಾನ ಗೌರವಭಾವವಿರುತ್ತಾ, ತನ್ನ ಅಭಿರುಚಿಗೆ ಗ್ರಾಹ್ಯವಾಗುವ ಆ ಕಲೆಯ ಅದಾವುದೋ ಒಂದು

ಬಗೆಯಿಂದ ತೃಪ್ತಿ ಪಟ್ಟು ಪ್ರಯೋಜನ ಪಡೆವ ಸಾಧುತ್ವವನ್ನಿಟ್ಟುಕೊಂಡಿರಬೇಕಾದುದೇ ಪ್ರಾಮಾಣಿಕನಾದ ಸಹೃದಯನಿಗೆ ನ್ಯಾಯವು.

"ಸಾಹಿತ್ಯಮಪಿ ಸಂಗೀತಂ ಸರಸ್ವತ್ಯಾಸ್ತನದ್ವಯಂ" ಎಂಬೀ ಸೂಕ್ತಿಯು, ಕಲಾರೂಪಿಣಿಯಾಗಿರುವ ಸರಸ್ವತಿಯು ಸಾಹಿತ್ಯ ಮತ್ತು ಸಂಗೀತಗಳೆಂಬ ತನ್ನ ಸ್ತನದ್ವಯದಿಂದ ಜ್ಞಾನಾನಂದ ಸ್ತನ್ಯವನ್ನು ನೀಡಿ ತನ್ನ ಮಕ್ಕಳನ್ನು ಪಾಲಿಸುತ್ತಾಳೆ ಎಂಬ ವಿಚಾರ ಬೋಧೆಯನ್ನು ನೀಡುತ್ತದೆ. ಈ ಬೋಧನಾಸೂಕ್ತಿಯು ಸತ್ಯಾರ್ಥಪೂರ್ಣವಾದುದು, ಎಂಬುದಕ್ಕೆ ಯಕ್ಷಗಾನವು ಒಂದು ಪ್ರತ್ಯಕ್ಷ ಪ್ರಮಾಣವು. ಯಾಕೆಂದರೆ ಇದು ಸಾಹಿತ್ಯ ಸಂಗೀತಗಳ ಸಯುಕ್ತಿಕ ಮಿಶ್ರಣದಿಂದ ರೂಪಗೊಂಡ ಒಂದು ವರ್ಚಸ್ವೀ ಕಲೆಯೆಂದು, ಇದರ ಸಾಕ್ಷಾತ್ ಪ್ರಯೋಗದಿಂದ, ನಮ್ಮ ಪತ್ಯಕ್ಷಾನುಭವಕ್ಕೆ ಸ್ಪಷ್ಟವು. ಯಕ್ಷಗಾನದಲ್ಲಿರುವ ಅರ್ಥ ಹೇಳುವ ಪದ್ಧತಿಯಿಂದ, ಆ ಕಲೆಯ ಸಾಹಿತ್ಯಾಂಗವು ವೇದ್ಯವಾಗುತ್ತದೆ. ಯಕ್ಷಗಾನದಲ್ಲಿರುವ ಹಾಡುಗಾರಿಕೆ – ವೇಷ – ನರ್ತನ – ಇವುಗಳಿಂದ ಆ ಕಲೆಯ ಸಂಗೀತಾಂಗವು ವೇದ್ಯವಾಗುತ್ತದೆ. ಸಂಗೀತವೆಂದರೆ ಬರೇ ಹಾಡುಗಾರಿಕೆ ಮಾತ್ರವೇ ಅಲ್ಲವಷ್ಟೆ? ವಿದ್ವಾಂಸರು, ಸಂಗೀತವೆಂಬುದಕ್ಕೆ ಶಾಸ್ತ್ರರೀತ್ಯಾ 'ಗೀತಂ ಚ ವಾದ್ಯಂ ಚ ಸಂಗೀತಂ' ಎಂದೂ, 'ಗೀತಂ ವಾದ್ಯಂ ನೃತ್ಯಂ ಚ ಸಂಗೀತ ಮುಚ್ಯತೇ' ಎಂದೂ ವ್ಯಾಖ್ಯಾನ ಮಾಡುತ್ತಾರಷ್ಟೆ. ಪಂಡಿತರು ಮಾಡುವ ಅರ್ಥವಿವರಣೆ ಪ್ರಕಾರವಾದ ಈ ಸಂಗೀತದ ವಾಸ್ತವ ಸ್ವರೂಪವು ಯಕ್ಷಗಾನದಲ್ಲಿ ಸ್ಪಷ್ಟ ವೇದ್ಯವು. ಯಕ್ಷಗಾನದಲ್ಲಿ ಭಾಗವತನು ಶ್ರೋತೃಗಳಿಗೆ ಮನಂಬುಗುವಂತೆ ತನ್ನ ಹಾಡುಗಾರಿಕೆಯ ಮೂಲಕ ಕಥಾ ವಿಷಯವನ್ನು ನಿರೂಪಿಸುವಾಗ, ಅದರ ರಾಗ ತಾಳ ಲಯಗತಿಗಳನ್ನನುಸರಿಸಿ, ಮೃದಂಗ ಮತ್ತು ಚೆಂಡೆ ಎಂಬ ಪಕ್ಕವಾದ್ಯಗಳವರು ತಮ್ಮ ಕೌಶಲ್ಯದಿಂದ ಸಹವರ್ತಿಗಳಾಗಿ ಶ್ರೋತೃಗಳ ಮನಸ್ಸಿಗೆ ಸತ್ಪರಿಣಾಮವನ್ನುಂಟು ಮಾಡುತ್ತಾರೆ; ಅದನ್ನನುಸರಿಸಿ, ವೇಷಗಳ ನರ್ತನ ಅರ್ಥಾತ್ ಪಾತ್ರಾಭಿನಯ. ಹೀಗಾದುದರಿಂದ ಅಲ್ಲಿ 'ಸಂಗೀತ'ದ ವಾಸ್ತವ ರೂಪ ಪ್ರದರ್ಶನವು. ವಾಚಿಕ, ಆಂಗೀಕ, ಆಹಾರ್ಯ ಮತ್ತು ಸಾತ್ವಿಕಗಳೆಂದು ಹೇಳಲ್ಪಡುವ ನಾಲ್ಕು ಪ್ರಕಾರದ ಅಭಿನಯಗಳೂ ಈ ಯಕ್ಷಗಾನದಲ್ಲಿ ಸಾಕ್ಷಾತ್ತಾಗಿ ಇವೆ. ವಾಚಿಕಾಭಿನಯದ ಮೂಲಕ (ಅರ್ಥ ಹೇಳುವ ಪದ್ಧತಿ) ಸಾಮಾಜಿಕರಿಗೆ ಬೌದ್ಧಿಕ ಸಂತರ್ಪಣೆಯು; ಇನ್ನುಳಿದ ಅಭಿನಯಗಳು ಅರ್ಥಾತ್ ಆಂಗೀಕ, ಆಹಾರ್ಯ ಮತ್ತು ಸಾತ್ವಿಕಗಳು ಕ್ರಮದಂತೆ, ನರ್ತನ, ವೇಷ ಭೂಷಣ ಮತ್ತು ಅಂಗಭಂಗಿ – ಇವುಗಳಿಂದ ಪ್ರದರ್ಶಿಸಲ್ಪಡುತ್ತವೆ. ಈ ರೀತಿಯ ಈ ಕಲಾ ಪ್ರದರ್ಶನದಿಂದ ಸಾಮಾಜಿಕರು ವಿಭಾವ ಅನುಭಾವ ಸಂಚಾರೀ ಭಾವಗಳಿಂದ ಸೆಳೆಯಲ್ಪಟ್ಟು, ಸ್ಥಾಯಿ ಭಾವದಲ್ಲಿ ನಿಲ್ಲಿಸಲ್ಪಟ್ಟು, ಅವರಲ್ಲಿ ರಸೋತ್ಪತ್ತಿಯಾಗುವಂತಾಗುತ್ತದೆ. ಅಲ್ಲಿ ಅದು ಆನಂದಾನುಭವವು. ಇಂತು, ಯಕ್ಷಗಾನವು ತನ್ನ ಮಹಾಸೌಂದರ್ಯ ಸಾಮರ್ಥ್ಯ ಪ್ರದರ್ಶನದಿಂದ, ಜನಕ್ಕೆ ರಸಾನುಭವವನ್ನು ನೀಡಿ, ಆನಂದವನ್ನು ಉಣ್ಣಿಸುವ ಒಂದು ಪ್ರಭಾವೀ ಕಲೆ ಎಂಬುದನ್ನು ನಿಸ್ಸಂದೇಹವಾಗಿ ಒಪ್ಪಬಹುದು.

ಕೆಲವು ವೇಳೆ, ಕಲಾಕಾರನಲ್ಲಿ ವೃತ್ತಿನೈಪುಣ್ಯ ಸಾಲದೇ ಇರುವುದರಿಂದ, ಯಕ್ಷಗಾನದ ಸಹಜ ಸೌಂದರ್ಯಕ್ಕೆ ಹಾನಿ ಅಥವಾ ಊನ ಬರುವುದಿದೆ. ವಾಚಿಕಾಭಿನಯದಲ್ಲಿ ಭಾಷಾದೋಷವೋ, ಆಂಗೀಕಾಭಿನಯದಲ್ಲಿ ನೃತ್ಯದೋಷವೋ, ಆಹಾರ್ಯಾಭಿನಯದಲ್ಲಿ ಪ್ರಸಾಧನದೋಷವೋ (ವೇಷ-ಬಣ್ಣ ಇತ್ಯಾದಿಗಳ ದೋಷ) ಮತ್ತು ಸಾತ್ವಿಕಾಭಿನಯದಲ್ಲಿ ಅಂಗಭಂಗಿಯ ದೋಷವೋ ತೋರಿ ಬಂದು, ಅವರಿಂದ ಪ್ರೇಕ್ಷಕವರ್ಗಕ್ಕೆ ರಸಾಭಾಸದ ಅನುಭವವಾಗುವುದುಂಟು. ಇದು ಕಲಾಕಾರನ ವೈಯಕ್ತಿಕ ಅಥವಾ ಸ್ವಂತದ ದೋಷವೇ ಹೊರತು ಆ ಕಲೆಯ ದೋಷವೆಂಬ ವಿಕಲ್ಪನೆಯು ಸಲ್ಲದು. ಕಲಾಕಾರನಲ್ಲಿ ಸಾಕಷ್ಟು ತಜ್ಞತೆ ಇಲ್ಲದೆ, ಅವನ ಆ ವೃತ್ತಿಗೆ ಬೇಕಾಗುವಷ್ಟು ಪಾಂಡಿತ್ಯವು ಸಿದ್ಧಿಯಾಗಿರದೆ, ಯಕ್ಷಗಾನದ ಪ್ರದರ್ಶನ-ಪ್ರಯೋಗದಲ್ಲಿ, ಆ ಕಲೆಯ ಸಹಜ ಸೌಂದರ್ಯಕ್ಕೆ ಧಕ್ಕೆ ತಗಲುವುದುಂಟು.

ಆದರೆ, ಇದಕ್ಕಾಗಿ ಯಕ್ಷಗಾನ ಕಲಾಮಾತೆಯು ನಿಂದ್ಯಳಾಗಬಾರದು ಯಾವನೊಬ್ಬ ಹಾಡುಗಾರನು ತನ್ನ ಶಾರೀರ (ಕಂಠಧ್ವನಿ) ದೋಷದಿಂದಲೋ, ಪಾಂಡಿತ್ಯದ ಅಭಾವದಿಂದಲೋ, ಅಪಸ್ವರವನ್ನುಪಯೋಗಿಸಿದರೆ, ಅಥವಾ ರಾಗತಾಳಾದಿಗಳನ್ನು ಕೆಡಿಸಿದರೆ, ಅದರಿಂದ ಸಂಗೀತ ಕಲೆಯನ್ನೇ ದೂಷಿಸುವುದು ಸರಿಯೇ? ಅಂತೆಯೇ ಯಕ್ಷಗಾನದಲ್ಲಿ ಕೆಲವು ಸಂದರ್ಭಗಳಲ್ಲಿ ತೋರಿ ಬರಬಹುದಾದ ಕಲಾಕಾರನ ಸ್ವಂತದ ದೋಷಕ್ಕಾಗಿ, ಆ ಕಲೆಯ ಸೌಂದರ್ಯವನ್ನೇ ದೂಷಿಸಬಾರದು; ಅವರ ಘನತೆಯನ್ನೇ ಅಲ್ಲಗಳೆಯಬಾರದು. ಹಾಗಾದರೆ ಯಕ್ಷಗಾನದ ಘನತೆ ಏನು? ಅದರ ಹಿರಿಮೆಯು ಯಾವುದರಿಂದ? ಎಂಬುದರ ವಿವೇಚನೆಯು ನಮಗಿರಬೇಕು.

ನಮ್ಮ ದೇಶೀಯವಾದ, ಹರಿಕೀರ್ತನ, ಭಜನಾ, ಪುರಾಣವಾಚನ ಮುಂತಾದ ಪುರಾತನ ಕಾಲದಿಂದಲೂ ಜನರ ಬಳಕೆಯಲ್ಲಿರುವ ಕಲೆಗಳಿಗೆ ವಿಶೇಷ ಗೌರವ ಸಲ್ಲುತ್ತದೆ ಯಾಕೆಂದರೆ, ಅವುಗಳು ಬರೇ ಮನರಂಜನೆಯಷ್ಟನ್ನೇ ಉದ್ದೇಶದ ಇತಿಮಿತಿ ಇಟ್ಟುಕೊಳ್ಳದೆ, ಮನರಂಜನೆಯ ದ್ವಾರಾ, ಜನಾಂತಃಕರಣಕ್ಕೆ ಆತ್ಮೋತ್ಕರ್ಷತೆಯ ಅನುಭವವನ್ನು ನೀಡಿ, ಶ್ರೇಯಸ್ಸಾಧಕಗಳಾದ ಧರ್ಮ-ನೀತಿಗಳನ್ನು ಬೋಧಿಸಿ, ಏತದ್ರೀತ್ಯಾ ಜನತಾ ಕಲ್ಯಾಣಕ್ಕಾಗುವ ಜ್ಞಾನ ಪ್ರಬೋಧನಾತ್ಮಕ ಲೋಕ ಶಿಕ್ಷಣದ ಸದುದ್ದೇಶ ಪ್ರಪೂರಿತ ಪುಣ್ಯ ಪ್ರಭಾವಾನ್ವಿತ ಕಲೆಗಳಾಗಿವೆ. ಅವುಗಳಿಗೆ ಸದೃಶವಾಗಿಯೇ ಈ ಯಕ್ಷಗಾನವೂ ಸಹ ಲೋಕ ಶಿಕ್ಷಣದ ಮಹೋಪಕಾರೀ ಪುಣ್ಯ ಕಲೆಯು. ಯಕ್ಷಗಾನದಲ್ಲಿ, ಜ್ಞಾನ ಪ್ರಬೋಧನಾತ್ಮಕ ಸಾಮರ್ಥ್ಯವು, ಹರಿಕಥೆ ಪುರಾಣವಾಚನಾದಿ ಕಲೆಗಳಲ್ಲಿರುವುದಕ್ಕಿಂತ ಸ್ವಲ್ಪ ಹೆಚ್ಚಿಗೆ ಇದೆಯೆಂದೂ ತರ್ಕಿಸಬಹುದು. ಯಾಕೆಂದರೆ, ಸಾಹಿತ್ಯ ಸಂಗೀತಗಳ ಸಯುಕ್ತಿಕ ಮಿಶ್ರಣದಿಂದ ರೂಪಗೊಂಡ ಈ ಯಕ್ಷಗಾನವು, ಪೌರಾಣಿಕ ಕಥೆಗಳ ಅಭಿನಯ ಪ್ರದರ್ಶನವನ್ನು ತನ್ನ ಸ್ವರೂಪದಲ್ಲಿ ಇಟ್ಟುಕೊಂಡಿದೆ. ಇದರಿಂದ ಜ್ಞಾನ ಸಂಗ್ರಹಾರ್ಥದ ಬುದ್ಧಿಗೆ ಹೆಚ್ಚಿನದ್ದೊಂದು ಸೌಕರ್ಯವು. ಯಕ್ಷಗಾನವು, ವೇಷ-ನರ್ತನ ಇತ್ಯಾದಿ ಮನರಂಜನೆಯ ಅಂಗಗಳನ್ನು ತನ್ನ ಅಂತರ್ಗತ ಸಹಕಾರೀ ತಂತ್ರವನ್ನಾಗಿ ಬಳಸಿಕೊಳ್ಳುತ್ತಾ, ಸರ್ವಜನಸಂಗ್ರಹಣಕ್ಕಾಗುವ ಲಲಿತ ವಿಧಾನದಿಂದ ಶ್ರೇಯೋಮಾರ್ಗ ನಿರ್ದೇಶಕವಾದ ಸದ್ವಿಚಾರ ಬೋಧನೆಯನ್ನೇ ತನ್ನ ಉದ್ದೇಶದಲ್ಲಿಟ್ಟುಕೊಂಡಿದೆ. 'ವಾರ್ಯನ್ನಗೋಮಹಿಷೀ ದಾನೇನ ಬ್ರಹ್ಮದಾನಂ ವಿಶಿಷ್ಯತೇ' ಎಂಬೀ ಶಾಸ್ತ್ರಸೂಕ್ತಿಯಂತೆ, ಜನಪ್ರಗತಿಗೆ ಅರ್ಥಾತ್ ಲೋಕ ಕಲ್ಯಾಣಕ್ಕೆ ನಮ್ಮ ಸ್ಥೂಲ ಶರೀರೋಪಕಾರಕ ವಸ್ತುಗಳಾದ ಅನ್ನ ನೀರು ಇತ್ಯಾದಿಗಳ ದಾನಕ್ಕಿಂತಲೂ ನಮ್ಮ ಸೂಕ್ಷ್ಮಶರೀರೋಪಕಾರಕವಾದ ಅಂದರೆ ನಮ್ಮ ಮನಬುದ್ಧಿಗಳಿಗೆ ಉಪಕಾರಕವಾದ ಬ್ರಹ್ಮದಾನವೇ ಹಿರಿದು. ಬ್ರಹ್ಮದಾನವೆಂದರೆ, ಜ್ಞಾನ ಬೋಧಾ ವ್ಯವಸ್ಥೆಯು. ಯಕ್ಷಗಾನ ಕಲಾಮಾತೆಯು ಬ್ರಹ್ಮದಾನಶೀಲಳೆಂದು ಅವಳ ಸ್ವರೂಪ ವಿವೇಚನೆಯಿಂದ ವೇದ್ಯವಾಗುತ್ತದೆ. ಆದುದರಿಂದ ಲೋಕಹಿತವನ್ನುಂಟು ಮಾಡುವ ಕಲಾಮಾತೆಯರ ವರ್ಗದಲ್ಲಿ ಈ ಯಕ್ಷಗಾನ ಕಲಾದೇವಿಗೂ ಒಂದು ಗಣ್ಯಸ್ಥಾನವು. ಯಕ್ಷಗಾನ ದೇವಿಯು, ವೇಷ-ನೃತ್ಯಾದಿಗಳಾದ ತನ್ನ ಲಲಿತ ಸೌಂದರ್ಯದಿಂದ ಜನರ ಮನಸ್ಸನ್ನರಳಿಸಿ, ಅರ್ಥ ಹೇಳುವ ಪದ್ಧತಿಯು ತನ್ನ ಸಾಹಿತ್ಯಕ ಸೌಂದರ್ಯದಿಂದ ಜನರ ಬುದ್ಧಿಯನ್ನು ಕೆರಳಿಸಿ, ತನ್ನ ಸಮಗ್ರ ಸೌಂದರ್ಯದಿಂದ ಜನರ ಭಾವರಂಗದಲ್ಲಿ ಆನಂದ ಸಿದ್ಧಿಯನ್ನುಂಟು ಮಾಡುವ ಮಹಾ ಸುಂದರಿಯಾಗಿರುವುದರಿಂದ ಆಕೆಯ ಸೌಂದರ್ಯಸಂದರ್ಶನದ ಲಾಭ ಪಡೆದವರೇ ಧನ್ಯರು; ಆ ಕಲಾಮಾತೆಯ ಪುಣ್ಯಸ್ತನ್ಯವನ್ನುಂಡು ಆನಂದ ಪಡೆದವರೇ ಧನ್ಯರು.

ಯಕ್ಷಗಾನ ಶಕಪುರುಷ

ಶ್ರೀ ಹರಿದಾಸ ಗೋಪಾಲಕೃಷ್ಣ ಭಟ್ಟ, ಶೇಣಿ.

ಭಕ್ತರಲ್ಲಿ ಭಾವುಕರೆಂದೂ ಜ್ಞಾನಿಗಳೆಂದೂ ವಿಂಗಡಿಸಿ ಗುರುತಿಸುವ ಪರಿಪಾಠವುಂಟು, ಇದರಂತೆಯೇ ಯಾವುದೇ ಕಲೆಯ ಅಥವಾ ವಿದ್ಯೆಯ ಬಗೆಗಿರುವ ಅತೀವ ಆಸಕ್ತಿಯುಳ್ಳ ಅನನ್ಯ ಆರಾಧಕರಲ್ಲಿಯೂ ಈ ಎರಡು ವರ್ಗಗಳನ್ನು ಮಾಡಬಹುದಾದರೆ, ಯಕ್ಷಗಾನ ಸರಸ್ವತಿಯ ಜ್ಞಾನೀಭಕ್ತರ ಪಂಕ್ತಿಯಲ್ಲಿ ದಿವಂಗತ ಶ್ರೀ ಬಲಿಪ ನಾರಾಯಣ ಭಾಗವತರನ್ನು ಗಣ್ಯಸ್ಥಾನದಲ್ಲಿ ಕಾಣಬೇಕಾಗಿದೆ. ಭಕ್ತಕೋಟಿಯಲ್ಲಿ ಜ್ಞಾನಿಗಳ ಸಂಖ್ಯೆ ಇತಿಮಿತಿಯುಳ್ಳದ್ದಾಗಿರುವಂತೆಯೇ ಕಲಾವಿದರಲ್ಲಿಯೂ ಇಂತಹ ವಿಜ್ಞಾನಿಗಳು ಅಲ್ಪಸಂಖ್ಯಾಕರೇ ಇರುವರು. ಭಾವುಕಜನಕ್ಕೆ ಜ್ಞಾನೀಭಕ್ತರ ಸ್ವಾನುಭವಸಿದ್ಧ ನುಡಿಗಳು ಪ್ರಮಾಣವಾಕ್ಯವಾಗುವಂತೆ, ಯಕ್ಷಗಾನೋಪಾಸಿಗಳಿಗೆ ಶ್ರೀ ಬಲಿಪರಂತವರು ದಾರ್ಶನಿಕರೆನಿಸುತ್ತಾರೆ. ಇಂತವರನ್ನು ಮಂತ್ರದ್ರಷ್ಟಾರರೆಂದು ಗೌರವಿಸುವುದು ಸನಾತನ ಸಂಸ್ಕೃತಿಯ ಲಕ್ಷಣವೆನಿಸಿದೆ. ಈ ರೀತಿಯ ವ್ಯಕ್ತಿಗಳು, ಆವುದೋ ಒಂದು ವಿಷಯದ ಸತ್ಯಶೋಧನೆಗಾಗಿ ಹುಟ್ಟಿ ಅದಕ್ಕಾಗಿಯೇ ಬದುಕಿ, ಅದರಲ್ಲೇ ಕರಗಿ ಹೋಗುತ್ತಾರೆ. ಯಕ್ಷಗಾನ ಕ್ಷೇತ್ರದಲ್ಲಿ ದುಡಿದವರೂ ದುಡಿಯುವವರೂ ಆದ ಅದೆಷ್ಟು ಮಂದಿಗಳಿಲ್ಲ? ಆದರೆ, ತಾನೇ ಅದಾಗಿ; ಅದಿಲ್ಲದೆ ತಾನಿಲ್ಲವಾಗಿ, ಆಗಿಹೋದ ಶ್ರೀ ಬಲಿಪರಂತಿರುವ ಕಲಾತಪಸ್ವಿಗಳು ಬಹಳವಿಲ್ಲ, "ಎಷ್ಟನ್ನಾದರೂ ಹಾಡಕೂಡದು; ಅಪಾಯವಿದೆ." ಎಂದು ಕಡ್ಡಾಯವಾಗಿ ಡಾಕ್ಟರರು ಎಚ್ಚರಿಸಿದ್ದರೂ, 'ತನ್ನ ಬದುಕು ಯಕ್ಷಗಾನಕ್ಕಾಗಿ, ಅದಿಲ್ಲದ ಜೀವನವಾದರೂ ಏಕೆ?' ಎಂಬೀ ನಿರ್ಧಾರದಿಂದ, ಹಾಡುತ್ತಿದ್ದಂತೆಯೇ ಮೃತ್ಯುಶಯ್ಯೆಯನ್ನೇರಿ ಆತ್ಮಾರ್ಪಣೆಯನ್ನು ಗೈದ ಆ ದೊಡ್ಡ ಜೀವವನ್ನು ಯಕ್ಷಗಾನ ದಾರ್ಶನಿಕನೆಂದೇ ಕರೆಯಬೇಕಾಗಿದೆ.

ಕ್ರಿ. ಶ. 1940,ರಿಂದ ದಿವಂಗತರಿಗೆ ಸಮೀಪದವನಾಗಿ; ಶಿಷ್ಯನಂತಿದ್ದರೂ, ಸಲುಗೆಯ ಗೆಳೆಯನಂತೆ, ಮೊನ್ನೆಯವರೆಗೂ, ಅವರೊಂದಿಗೆ ವ್ಯವಹರಿಸುತ್ತಾ ಸಾಗಿ ಬಂದವನು ನಾನು. ಯಕ್ಷಗಾನಕ್ಕೆ ಸಂಬಂಧಿಸಿ, ಅವರಲ್ಲಿ ನಾನು ಚರ್ಚಿಸದೆ ಉಳಿದುಹೋದ ಯಾವ ವಿಷಯವೂ ಬಾಕಿಯಿಲ್ಲ. ಎಲ್ಲ ಪ್ರಶ್ನೆಗಳಿಗೂ, ವೈಜ್ಞಾನಿಕವಾಗಿಯೇ ಸಮರ್ಪಕವಾದ ಉತ್ತರ ಅವರಿಂದ ದೊರೆತಿದೆ. ಈ ಕಾರಣದಿಂದಲೇ, ಈ ಕಲೆಯ ಸರ್ವತಂತ್ರ ಸಮ್ರಾಟಪೀಠವು ಶ್ರೀ ಬಲಿಪರಿಗೇ ಮೀಸಲಾಗಿದೆಯೆಂದು ತೀರ್ಮಾನಿಸಿಕೊಂಡಿದ್ದೇನೆ. ಯಕ್ಷಗಾನದ ಸರ್ವ ವಿಚಾರಗಳಲ್ಲಿಯೂ ಉದ್ದಗಲಕ್ಕೆ ಸಂಚರಿಸಿ ಆಳತೆ ತಿಳಿದ ಅವರ ಸ್ಥಾನವು ಏಕಮೇವಾದ್ವಿತೀಯವಾದುದರಿಂದಲೇ "ಯಕ್ಷಗಾನದ ಶಕಪುರುಷ" ಅವರೆಂದು ಗೌರವಿಸುವುದಕ್ಕೆ ಧೈರ್ಯವುಳ್ಳವನಿದ್ದೇನೆ. ಆದರೆ ಈ ನಿಜವನ್ನು ತಿಳಿಯಲೆಳಸುವವರು ವೈಚಾರಿಕ ಮಾನದಂಡವನ್ನು ಕೈಗೆತ್ತಿಕೊಳ್ಳಬೇಕೆಂಬುದನ್ನು ಮರೆಯಬಾರದು. ಕೇವಲ ಆತ್ಮೀಯತೆಯನ್ನೇ ಅಳತೆಗೋಲನ್ನಾಗಿ ಮಾಡಿಕೊಂಡು, ದಿವಂಗತರ ನಡೆನುಡಿ, ಚೆಲುವು ನಿಲುವುಗಳನ್ನಷ್ಟೇ ಉಲ್ಲೇಖಿಸಿ ಆ ವ್ಯಕ್ತಿತ್ವದ ಹಿರಿಮೆ ಗರಿಮೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಬಹುದಾದರೂ, ಸತ್ವಪೂರ್ಣವಾದ

ಆ ಔನ್ನತ್ಯವನ್ನು ಗುರುತಿಸುವ ಸಂದರ್ಭದಲ್ಲಿ, ಅವರ ತಪಸ್ಸಿನ ಬಗೆಗೆ ವೈಜ್ಞಾನಿಕವಾಗಿ ಬೆಳಕು ಚೆಲ್ಲ ಬೇಕಾಗಿದೆ. ಆ ಸಾಹಸದ ಈ ಲೇಖನವು ಪೂರ್ಣವಲ್ಲವಾದರೂ, ಪೂರಕವಾದರೂ ಆದೀತೆಂದು ನನ್ನ ನಂಬುಗೆ.

ಯಕ್ಷಗಾನವು ನಮ್ಮ ನಾಡಿನ ವಿಶಿಷ್ಟ ಕಲೆಯೆಂದು ಇಂದು ನಾವೆಲ್ಲರೂ ಅಭಿಮಾನಗೊಂಡಿ ರುವುದು ನಿಜ. ಮಿಕ್ಕ ಯಾವ ಕಲಾಪ್ರದರ್ಶನವೂ ಮೂರು ನಾಲ್ಕು ತಾಸುಗಳಿಗೆ ಮೀರಿ, ಅದೆಷ್ಟು ರಸಾತ್ಮಕವಾಗಿದ್ದರೂ, ರಸಿಕ ಜನತೆಯನ್ನು ತಡೆಹಿಡಿಯಲಾರದ ಸಂದರ್ಭದಲ್ಲಿ, ರಾತ್ರಿಯಿಡೀ ಸಾವಿ ರಾರು ಜನರನ್ನು ಮಂತ್ರ ಮುಗ್ಧರನ್ನಾಗಿಸಿ ಸೆರೆ ಹಿಡಿದು ರಮಿಸುವ ಶಕ್ತಿಯು ನಮ್ಮ ಯಕ್ಷಗಾನಕ್ಕೆ ಮಾತ್ರವೇ ಮೀಸಲಿದೆಯೆಂಬುದು ನಮಗೆಲ್ಲರಿಗೂ ಪ್ರತ್ಯಕ್ಷಾನುಭವಕ್ಕೆ ಬಂದಿದೆ. ಆದರೆ, ಹಾಡು, ವಾದ್ಯ, ವೇಷಭೂಷಣ, ನರ್ತನ, ಅಭಿನಯ ಮತ್ತು ಮಾತುಗಾರಿಕೆಗಳೆಂಬೀ ವಿಭಾಗಗಳುಳ್ಳ ಯಕ್ಷಗಾನ ಕಲೆಯಲ್ಲಿ ಶ್ರೋತೃಗಳನ್ನು ವಿಶೇಷವಾಗಿ ಆಕರ್ಷಿಸಿದ ಶಕ್ತಿ ಯಾವ ವಿಭಾಗದ್ದು ? ಎಲ್ಲಾ ವಿಭಾಗಗಳೂ ಸಮರಸವಾಗಿರುವುದೇ ಇದರ ರಹಸ್ಯವೆ? ಎಂಬುದನ್ನು ಚರ್ಚಿಸದೆ ನಿಜವನ್ನು ಮನಗಾಣು ವುದು ಕಷ್ಟವಾಗಿದೆ. ಉತ್ತಮವಾದ ಸಂಗೀತ ಕಚೇರಿಗಳಲ್ಲಿಲ್ಲದ, ಗಾನ ಮಾಧುರ್ಯವಾಗಲಿ, ನವರಸಗಳನ್ನು ಮುಖ ಮುದ್ರೆಯಿಂದ ಪ್ರಕಟಿಸಿ, ತಾಳಲಯವಿನ್ಯಾಸಗಳನ್ನು ಗೆಜ್ಜೆ ಹೆಜ್ಜೆಗಳಿಂದ ತುಂಬಿ; ನಾಟ್ಯದೇವತೆಯ ಪೂರ್ಣರೂಪವನ್ನು ದರ್ಶಿಸುವ – ನೃತ್ಯಕಾರ್ಯಕ್ರಮದಲ್ಲಿಲ್ಲದ, ಕೌತುಕ ವಾಗಲಿ, ನಾಟಕವೇದಿಯಲ್ಲಿಲ್ಲದ ಅದ್ಭುತ ದೃಶ್ಯಾವಳಿಗಳ ಚಮತ್ಕಾರವಾಗಲಿ ಯಕ್ಷಗಾನದ ಸಂಗೀತ, ನರ್ತನ ಮತ್ತು ವೇಷಾಭಿನಯಗಳಲ್ಲಿವೆಯೆಂದು ಜನರು ಆಕೃಷ್ಟರಾಗುತ್ತಾರೆನ್ನುವುದು ಸಾಹಸದ ಮಾತಾದೀತು. ಈ ಅಂಗಗಳೇ ಇಲ್ಲದ ಬರೇ ಯಕ್ಷಗಾನ ಕೂಟಗಳು ಸಾವಿರಾರು ಮಂದಿ ಸುಸಂಸ್ಕೃತ ವಿದ್ವಜ್ಜನರ ಮನ್ನಣೆಯನ್ನು ಗಳಿಸಿವೆಯೆಂಬುದೇನೂ ಅತಿಶಯೋಕ್ತಿಯಲ್ಲವಲ್ಲ? ಸಂತೆಯಿಂದ ಸನ್ಯಾಸೀ ಮಠಗಳವರೆಗೂ, ಗ್ರಾಮನಗರಗಳೆಂಬ ಭೇದವಿಲ್ಲದೆ ವ್ಯಾಪಿಸಿ, ವಿಧಾನಸಭೆಯಲ್ಲಿಯೂ ಶ್ರೀ ಶ್ರೀ॥ ಜಗದ್ಗುರುಗಳ ವಿದ್ವತ್ ಸಭೆಗಳಲ್ಲಿಯೂ, ಈ ಕೂಟಗಳು ಮಾನ್ಯವಾಗಿವೆಯೆಂಬುದೂ ನಮಗೆಲ್ಲರಿಗೂ ಹೆಮ್ಮೆಯೇ ಸರಿ. ಈ ವಿಷಯವು ಈ ಕಲೆಯ ಅಂತರಂಗ ಪರೀಕ್ಷಣೆಗೆ ಹೆಚ್ಚು ಸಹಾಯಕವಾಗಿದೆ.

ಶ್ರೀ ಬಲಿಪರು ಹುಟ್ಟಿದ ಕಾಲದಲ್ಲಿ, ಈ ಕಲೆಯನ್ನು ಯಕ್ಷಗಾನವೆಂಬ ಹೆಸರಿನಿಂದಾಗಲಿ, ವಿಶಿಷ್ಟವಾದುದೆಂದಾಗಲೀ, ನಾಗರಿಕ ವಿದ್ವಜ್ಜನರು ಈ ನಾಡಿನಲ್ಲಿ ಕೊಂಡಾಡುತ್ತಿರಲಿಲ್ಲ. ಪೂರ್ವದಲ್ಲಿ ಇದು ಯಕ್ಷಗಾನವೆಂಬ ಶುದ್ಧ ಸಂಸ್ಕೃತ ಹೆಸರಿನಿಂದ ಪ್ರಸಿದ್ಧವಿದ್ದು, ವಿದ್ವಾಂಸರಿಂದಲೂ, ರಾಜಮಹಾ ರಾಜರುಗಳಿಂದಲೂ ಆದರಿಸಲ್ಪಟ್ಟ ವಿಶಿಷ್ಟ ಕಲೆಯಾಗಿದ್ದಿತೋ ಏನೋ! ಪ್ರಸ್ತುತ ಲೇಖನಕ್ಕೆ ಆ ಸಂಶೋಧನೆಯಿಂದ ಉಪಯೋಗವೇನೂ ಇಲ್ಲ. ಆದರೆ ದಿವಂಗತರ ಎಳವೆಯಲ್ಲಿ ಇಂದಿನ ಈ ಶ್ರೀಮಂತ ಕಲೆಯು ತೀರಾ ಬಡವಾಗಿದ್ದಿತು. ದಶಾವತಾರ ಮೇಳವೆಂದೂ, ಆಟವೆಂದೂ ಕರೆಸಿಕೊಂಡು ಸಭ್ಯ ಸಮಾಜದವರಿಂದ, ಸಂಪರ್ಕ ಕಡಿಯಲ್ಪಟ್ಟು ದುಸ್ಥಿತಿಯಲ್ಲಿ, ಅವಿದ್ಯಾವಂತರ ಕೈಗೂಸಾಗಿ ಅರೆಹೊಟ್ಟೆ ಯಲ್ಲಿ ಬದುಕಿ ಉಸಿರಾಡುತ್ತಿತ್ತು. ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ತನ್ನ ಭವ್ಯ ಪರಂಪರೆಯನ್ನು ಈ ಕಲೆ ಬೆಳೆಸಿಕೊಂಡು ಬಂದಿತ್ತಾದರೆ, ನಾಲ್ಕಾರು ದಶಕಗಳ ಹಿಂದೆ ಇದಕ್ಕೆ ಈ ಅಧೋಗತಿಯೇಕಾಯಿತೋ ತಿಳಿಯದಾಗಿದೆ. ಏಂತಿದ್ದರೂ, ಚೆನ್ನಾಗಿ ಲಾಲಿಸಿ ಪಾಲಿಸಿದರೆ, ಇದು ಮೈದುಂಬಿ ತನ್ನ ಕಾಲಲ್ಲೇ ತಾನು ನಿಲ್ಲುವಂತಾಗಿ, ಈ ನಾಡಿನ ವಿಶಿಷ್ಟ ಕಲೆಯಾಗಿ ಸ್ವತಂತ್ರವಾಗಿ ಬೆಳಗೀ ತೆಂದು, ಆಶಾವಾದದಿಂದ ಆ ದಿನದಲ್ಲಿ ಇದರ ದೀಕ್ಷೆಗೊಂಡವನು ತಾನೆಂದು ಚಿಕಿತ್ಸಕ ಬುದ್ಧಿಯ ಶ್ರೀ ಬಲಿಪರು ತನ್ನ ಸನ್ಮಾನ ಸಮಾರಂಭದ ಸಭಾವೇದಿಕೆಯೊಂದರಲ್ಲಿ ಘಂಟಾಘೋಷವಾಗಿ ಸಾರಿದು ದನ್ನು, ಅಂದಿನ ಸಭಿಕರಲ್ಲೊಬ್ಬನಾಗಿದ್ದ ನಾನು ಎಂದೆಂದೂ ಮರೆಯಲಾರೆ.

ಹೀಗೆ ಕಸದಿಂದ ರಸ ಹಿಂಡುವ ಸಾಹಸಕ್ಕೆ ಇಳಿದು ಗುರಿಮುಟ್ಟಿದ ರಸ ಋಷಿಗಳು ದಿ. ಬಲಿಪರು. ಲಕ್ಷ್ಮೀದೇವಿ ಹಡೆದು ಸರಸ್ವತೀದೇವಿ ಮೊಲೆಯೂಡಿ ಬೆಳೆಸಿದ ವರಪುತ್ರರು ದಿವಂಗತ, ಕೂಡ್ಲು ಶ್ರೀ ಸುಬ್ರಾಯ ಶ್ಯಾನುಭಾಗರೆಂಬ ಮಹಾಭಾಗರು. ಅವರ ಅಂತೇವಾಸಿಯಾಗಿ ಸಂಗೀತ ಸಾಹಿತ್ಯಗಳ ಧರ್ಮ ಮರ್ಮಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ, ಈ ದಶಾವತಾರ ಆಟದ ಭಾಗವತನಾಗಿ ಕಾರ್ಯ ಕ್ಷೇತ್ರಕ್ಕೆ ಅಂದು ಕಾಲಿಟ್ಟವರು, ವಿರಮಿಸಿದುದು ಮೊನ್ನೆ ಮೊನ್ನೆಯೇ. ಮೊದಲು ಕೆಲವರು ಈ ಬಯಲಾಟವನ್ನು ಭಾಗವತರಾಟವೆಂದು ಕರೆಯುತ್ತಿದ್ದರೆಂದು ಪ್ರತೀತಿ ಇದೆ. ಈ ಹೆಸರು ಅನ್ವರ್ಥವಿದೆಯೆಂದೂ, ಭಾಗವತನೇ ಇದರ ಜೀವನಾಡಿಯೆಂದೂ ಶ್ರೀ ಬಲಿಪರು ತನ್ನ ದುಡಿಮೆಯಿಂದ ಜನರನ್ನು ಪುರಾವೆಗೊಟ್ಟು ಒಪ್ಪಿಸಿದರು. ಅದೆಷ್ಟೋ ಸಲ "ಅರ್ಥಕ್ಕಲ್ಲ ಪದ, ಪದಕ್ಕೆ ಅರ್ಥ"ವೆಂದು ದಿವಂಗತರು ಹೇಳುತ್ತಿದ್ದುದುಂಟು. ಆಗ ಅರ್ಥಧಾರಿಗಳೆಂಬ ಕೆಲವರಿಗೆ ಮುಖಭಂಗವಾದುದೂ ಇರಬಹುದು. ಆದರೆ ಆ ಕಿರಿದಾದ ನುಡಿಯು ಹಿರಿದಾದ ಅರ್ಥವನ್ನು ಗ್ರಹಿಸಿದ ವ್ಯಕ್ತಿಯು ಯಥಾರ್ಥವಾಗಿಯೂ ಯಕ್ಷಗಾನದ ಅರ್ಥಧಾರಿ ಇಲ್ಲವೆ ಪಾತ್ರಧಾರಿಯಾಗುವುದರ ಜೊತೆಗೆ ಈ ಕಲೆಯ ವೈಶಿಷ್ಟ್ಯಪೂರ್ಣ ಅಂತಸ್ಸಾರವನ್ನೂ ಗ್ರಹಿಸುವ ಸಮರ್ಥನಾಗುವನು. ಹಾಗಾದರೆ ಮಾತ್ರ ಪದ ಹೇಳುವ ಉದ್ಯೋಗದ ಈ ಭಾಗವತಿಕೆಯ ಮರ್ಮವನ್ನು ವಿವೇಚಿಸಲು ಸಾಧ್ಯ. ಯಕ್ಷಗಾನವು ಅದರ ಸಾಹಿತ್ಯ ಸಂಪತ್ತಿನಿಂದಲೇ ವಿಶಿಷ್ಟಪೂರ್ಣವಾಗಿದೆಯೆಂಬ ಬುನಾದಿಯಿಂದಲೇ ಈ ಶಿಕ್ಷಣವಾರಂಭವಾಗಬೇಕು. ಯಕ್ಷಗಾನ ಪ್ರಬಂಧ ಅಥವಾ ಪ್ರಸಂಗಗಳನ್ನು ಕಂಠಪಾಠಮಾಡಿ, ಉಪಾಧ್ಯಾಯರ ಮುಂದೆ ಪದ್ಯಪಾಠವನ್ನೊಪ್ಪಿಸುವ ವಿದ್ಯಾರ್ಥಿಯಂತೆ ಜನರ ಮುಂದೆ ಪದ್ಯವನ್ನೊಪ್ಪಿಸುವ ವೃತ್ತಿಯಲ್ಲವಿದು. ಬಲು ದೊಡ್ಡ ಹೊಣೆಗಾರಿಕೆಯಿದ್ದು, ತಾನು ಹಾಡುವ ಹಾಡುಗಳ, ಸಾಹಿತ್ಯಸೌಂದರ್ಯವನ್ನು, ಅದರ ವಿವಿಧ ಭಾವಗಳೊಂದಿಗೆ, ಸಂಗೀತ ಮಾಧ್ಯಮದಲ್ಲಿ ಜನತೆಗೆ ನೀಡುವಷ್ಟು ಭಾಗವತನು ಪರ್ಯಾಪ್ತನಿರಬೇಕು. ಎಂದೆಂದಿಗೂ ಸಂಗೀತವೇ ಪ್ರಧಾನವಾಗಬಾರದು ಹಾಗಾದ ವೇಳೆಯಲ್ಲಿ ಕಾವ್ಯನಾದವು, ಗಾನತರಂಗಗಳಿಂದ ಮುಳುಗಿಹೋಗುವುದು. ಯಕ್ಷಗಾನವು ಸಂಗೀತ ಪ್ರಸಾರಕ್ಕಾಗಿ ಹುಟ್ಟಿಕೊಂಡುದಲ್ಲ. ಸಂಗೀತಗಾರರಿಗಾಗಿಯೇ ರಚಿಸಲ್ಪಟ್ಟ ಕೀರ್ತನೆಗಳ ಗುಣಧರ್ಮಗಳೇ ಬೇರೆ. ಸಂಗೀತ ಸಭೆಗಳಲ್ಲಿ ಕಾವ್ಯರಸಾಸ್ವಾದನೆಗಾಗಿ ಶ್ರೋತೃಗಳು ಸನ್ನಿಹಿತರಾಗುವುದೇನೂ ಅಲ್ಲ. ಅಲ್ಲಿ ಗಾನ ತಾನಗಳೇ ಜೀವಾಳ. ಆದರೆ ಯಕ್ಷಗಾನದಲ್ಲಿ ಪದ್ಧತಿಯೇ ಬೇರೆಯಾಗಿದೆ. ಸಂಗೀತವನ್ನು ಹಿತಮಿತವರಿತು ಉಪಯೋಗಿಸುವ ಕರ್ಮಕುಶಲತೆಯೊಂದಿಗೆ, ತಾನು ಹಾಡುವ ಕಾವ್ಯದ ಪ್ರತಿಯೊಂದು ನುಡಿಯ ಕಥಾನಕ ಬಣ್ಣಗಳನ್ನೂ ಕಡ್ಡಾಯವಾಗಿ ತಿಳಿದಿರಬೇಕು. ಸಂಗೀತದ, ರಾಗಗಳಿಗೂ ಯಕ್ಷಗಾನದ ರಾಗಗಳಿಗೂ ಹೆಸರಿನಲ್ಲಿ ವ್ಯತ್ಯಾಸವಿಲ್ಲ. ರೂಪಭೇದಗಳೂ ಇರಬೇಕಾಗಿಲ್ಲ. ಸಂಗೀತದ ಶಂಕರಾಭರಣವೊಂದು, ಯಕ್ಷಗಾನದ ಶಂಕರಾಭರಣ ಬೇರೊಂದು ಎಂಬೀ ವ್ಯತ್ಯಾಸವುಂಟಾಗಲು ಸಾಧ್ಯತೆಯೇ ಇಲ್ಲ. ಆದುದರಿಂದಲೇ ಯಕ್ಷಗಾನದ ಹಾಡುಗಾರರು ಸಂಗೀತ ಶಾಸ್ತ್ರವನ್ನು ಅಭ್ಯಾಸ ಮಾಡಿಯೇ ತೀರಬೇಕೆಂದು ಶ್ರೀ ಬಲಿಪರು ವಾದಿಸುತ್ತಿದ್ದರು. ಈ ಅಭ್ಯಾಸ ಸಿದ್ಧಿಯಾಗದಿದ್ದರೆ, ಯಕ್ಷಗಾನ ಶೈಲಿಗೆ ಸಂಗೀತವನ್ನು ಅಳವಡಿಸಿಕೊಳ್ಳಲಾಗುವುದಿಲ್ಲವೆಂದೂ, ಶೈಲಿ ಬದಲಾಯಿಸದಿದ್ದರೆ, ಗಂಧರ್ವಗಾನವನ್ನೂ ಯಕ್ಷಗಾನವನ್ನೂ ಬೇರೆ ಬೇರೆಯಾಗಿ ಗುರುತಿಸಲಾಗುವುದಿಲ್ಲವೆಂದೂ ತಿಳಿಯಬೇಕು. ರಾಗಲಕ್ಷಣಗಳನ್ನು ಕೆಡಿಸದೆ, ಬರೇ ಶೈಲಿ ಭೇದದಿಂದ ಹಾಡುವ ಪಾಂಡಿತ್ಯವೇನೂ ಸಣ್ಣದಲ್ಲ. ಒಂದೇ ವ್ಯಕ್ತಿಯನ್ನು ವಿಭಿನ್ನ ವೇಷದಿಂದ ರೂಪುಗೆಡದಂತೆ ಅಲಂಕರಿಸುವುದೂ ಒಂದು ಕಲೆಯಷ್ಟೆ.

ಪೂರ್ವದಲ್ಲೇ ಮಹಾಕವಿಗಳಿಂದ ರಚಿಸಲ್ಪಟ್ಟು, ಜನತೆಯಲ್ಲಿ ಬಹಳಷ್ಟು ಪ್ರಚಾರದಲ್ಲಿರುವ ಪೌರಾಣಿಕ ಕಥೆಗಳನ್ನು ಮತ್ತೊಮ್ಮೆ ಕಥೆಯನ್ನು ಬೋಧಿಸುವುದಕ್ಕಾಗಿಯೇ ಪಾರ್ತಿಸುಬ್ಬನೇ ಮುಂತಾದ ಕವಿಗಳು ತಮ್ಮ ಕಾವ್ಯಗಳನ್ನು ರಚಿಸಿದರೆಂದೇ ಹೇಳಿದರೆ ಅದು ಸಮಂಜಸವಾಗಲಾರದು. ತಮ್ಮ

ಕೃತಿಗಳಲ್ಲಿ ಪುರಾಣ ಕಥೆಗಳನ್ನು ತಮ್ಮ ಉದ್ದೇಶ ಸಾಧನೆಗೆ, ಎಷ್ಟಂಶ ಬೇಕೊ ಅಷ್ಟನ್ನೇ ಅವರು ಸ್ವೀಕರಿಸಿ ಕೊಂಡಿದ್ದಾರೆಂಬುದನ್ನು ವಿಮರ್ಶಕರು ಬಲ್ಲರು. ಕವಿಗಳಾಗಿ ಸ್ಫೂರ್ತಿಯಿಂದ ತಮ್ಮ ಪ್ರತಿಭೆಯನ್ನು ಹೊರಕ್ಕೆ ಚೆಲ್ಲಿ ಕರ್ಣಾಟಕ ವಾಙ್ಮಯವನ್ನು ತುಂಬಿದ್ದಾರವರು. ಇದನ್ನು ಅರಿತಿಲ್ಲದ ಭಾಗವತನು ಯಕ್ಷ ಗಾನವನ್ನು ತುಂಬುವುದು ಸಾಧ್ಯವಿಲ್ಲ. ದೇವರನಾಮಗಳನ್ನಾಗಲಿ, ವಚನಗಳನ್ನಾಗಲಿ ಮಿತಸಂಗೀತ ವನ್ನು ಬಳಸಿ, ಸಾಹಿತ್ಯದ ಸೊಗಸು ಎತ್ತಿಕಾಣುವಂತೆ ಹಾಡಿದಾಗ ಜನ ಆಲಿಸಿ ಮೈಮರೆವುದನ್ನು ನಾವು ಕಂಡಿಲ್ಲವೆ? ಯಕ್ಷಗಾನದ ಹಾಡುಗಾರನಿಗೂ ಈ ಸಿದ್ಧಿಯು ಪ್ರಾಪ್ತವಾಗಬೇಕು. ತಾಳಕ್ಕಾಗಿಯೋ ರಾಗ ಕ್ಕಾಗಿಯೋ ಅಕ್ಷರಗಳ ದೀರ್ಘಹ್ರಸ್ವಗಳನ್ನು ಗಮನಿಸದಿರಲಾಗದು. ಹಾಡಿನ ಛಂದಸ್ಸನ್ನರಿತು ತಾಳನಿರ್ಣ ಯದಿಂದ ಸಾಗಬೇಕೇ ಹೊರತು, ಮನಬಂದ ತಾಳಕ್ಕನುಸರಿಸಿ ಪದ್ಯವನ್ನೆಳೆದು ತಂದು ಮೂಲಛಂದಸ್ಸನ್ನು ಕೆಡಿಸಬಾರದು. ಈ ಶಿಸ್ತನ್ನು ಮುರಿದರೆ 'ಹಾಡಿದ್ದೇ ಪದ ಹಾಕಿದ್ದೇತಾಳ'ವೆಂಬಂತಾಗಿ ವ್ಯವಸ್ಥೆಯಿಲ್ಲದ ಭಾಗವತಿಕೆಯಾದೀತು. ಸಂಗೀತದಲ್ಲಿರುವಂತೆಯೇ ಇದರಲ್ಲೂ ಈ ನಿಯಮವನ್ನು ಪಾಲಿಸಬೇಕು. ರೂಪಕತಾಳವನ್ನು ಆದಿತಾಳವನ್ನಾಗಿಯೋ ಜಂಪೆಯನ್ನು ಏಕತಾಳವನ್ನಾಗಿಯೋ ಮಾಡಿ ಹಾಡಲು ಬಂದೀತಾದರೂ ಅದು ಸರಿಯಾದ ಕ್ರಮವಾಗದು. ಕೆಲವೊಮ್ಮೆ ವೇಷದ ಕುಣಿಕೆಗಾಗಿಯೋ, ರಂಜನೆ ಗಾಗಿಯೋ ಹಾಡಿನ ಗತಿ ಬದಲಾಯಿಸಬೇಕಾಗಿ ಬಂದಲ್ಲಿ ಸಾಹಿತ್ಯಕ್ಕೆ ಭಂಗ ಬಾರದಂತೆಯೂ, ಕವಿಗೆ ಅಪಚಾರವಾಗದಂತೆಯೂ ಎಚ್ಚರದಿಂದಿರಬೇಕು, ಎಂಬೀ ಪ್ರಜ್ಞೆಯೇ ಭಾಗವತನ ಪೂರ್ಣತೆಯ ರಹಸ್ಯ ವೆಂಬುದನ್ನು, ದಿವಂಗತರು ನುಡಿದು ದುಡಿದು ಈ ಕಲೆಯನ್ನು ಮುನ್ನಡೆಸಿದರು.

ಶ್ರೀ ಬಲಿಪರು ಹಾಡುತ್ತಾರೆಂದೇ, ಅಂದಿನ ಬಯಲಾಟಗಳು ಮೊದಲು ಮೂಗು ಮುರಿ ಯುತ್ತಿದ್ದವರಿಗೇನೇ ಪ್ರಿಯವಾಗತೊಡಗಿದವು. ಭಾಗವತಿಕೆಯೇ ಸಾವಿರಾರು ಮಂದಿಗಳನ್ನು ಆಕರ್ಷಿ ಸಿತು. ಮೊದಲಿಗಿದ್ದ ಅದೇ ವೇಷ, ಅದೇ ಭಾಷೆ, ಅದೇ ಜನಗಳೆಂಬಂತಿದ್ದರೂ, ಬಲಿಪರ ಹಾಡೊಂದೇ ಇಂತಹ ವಿಪರ್ಯಾಸವನ್ನುಂಟುಮಾಡಿತೆಂದರೆ ನಮಗೆ ಆಶ್ಚರ್ಯವೆನಿಸುವುದಿಲ್ಲವೇ? ಈ ಪರಮಾರ್ಥ ವನ್ನು ಪವಾಡವೆನ್ನಲಾಗುವುದಿಲ್ಲ. ಇದು ಅವರ ತಪಸ್ಸಿದ್ಧಿ. "ಆಟಕ್ಕಾಗಿ ಭಾಗವತರಲ್ಲ. ಭಾಗವತರಿ ಗಾಗಿ ಆಟ"ವೆಂದು ಪರಿಣಮಿಸಿ ಇದನ್ನು ಭಾಗವತರಾಟವೆಂದು ಹೆಸರಿಸಿದ ಜನಗಳ ಔಚಿತ್ಯ-ಬೋಧದ ಬಗೆಗೆ ಬಲ್ಲವರು ತಲೆದೂಗಬೇಕಾಯಿತು. ಆದರೂ ಶ್ರೀಯುತರು ತೃಪ್ತರಾಗಲಿಲ್ಲ. ವಾದ್ಯಗಾರರೂ ಪಾತ್ರಧಾರಿಗಳೂ ಇನ್ನೂ ಸುಧಾರಿಸಿಕೊಂಡಿಲ್ಲವೆಂಬುದು ಸ್ಪಷ್ಟವಿತ್ತು. ಭಾಗವತರಿಗೆ – ತಾನು ಬಂದಲ್ಲಿ ನಿಂದಲ್ಲಿ ರಾಜೋಪಚಾರ ಸಲ್ಲುತ್ತಿತ್ತು. ಆಟದ ಬಯಲಿಗೆ ವಾದ್ಯಘೋಷದೊಂದಿಗೆ ಕರೆದು ತರು ವವರೆಷ್ಟೋ ಮಂದಿಯಾದರೆ ಹಾರತುರಾಯಿಗಳನ್ನರ್ಪಿಸಿ ಸ್ವಾಗತಿಸುವವರು ಮತ್ತೆಷ್ಟೋ ಮಂದಿ. ತನ್ನ ಕಂಚಿನ ಕಂಠದಿಂದ ಹಾಡಲು ತೊಡಗಿದರೆ, ಸಾವಿರಾರು ಮಂದಿಯ ಆ ಮಹಾಸಭೆಯಲ್ಲಿಯೂ, ಸಾಸಿವೆ ಬಿದ್ದರೆ ಸದ್ದಾಗುವ ನೀರವತೆಯುಂಟಾಗಿ ಎಲ್ಲರ ದೃಷ್ಟಿಗಳೂ ಆ ಭವ್ಯಾಕೃತಿಯಲ್ಲಿ ಕೇಂದ್ರೀಕೃತ ಗಳಾಗುತ್ತಿದ್ದವು. ಆದರೆ ತನ್ನವರೇ ಆದ, ತನ್ನೊತ್ತಿನ ಮದ್ದಳೆಗಾರ, ಹಾಗೂ ವೇಷಧಾರಿಗಳಿಗೂ ಈ ಗೌರವ ಬರುವಂತಾಗಲೇಬೇಕೆಂದು ಶ್ರೀಯುತರು ಚಿಂತಿಸತೊಡಗಿದರು.

ಹೆಚ್ಚಿನ ವಾದನಗಾರರಿಗೆ, ತಾಳಗತಿಯು ಒಂದೇ ಲಯದಲ್ಲಿ ಒಂದು ಪರಿಧಿಯ ವರೆಗೆ ಸಾಗಿ, ಅಲ್ಲಿಂದ ಮುಂದೆ ನಡೆ ಬದಲಾಯಿಸುವಾಗ ಲಯವನ್ನು ಹೆಚ್ಚುಕಡಿಮೆ ಮಾಡಬಾರದೆಂಬ ನಿರ್ಣಯ ವೇನೂ ಇದ್ದಿರಲಿಲ್ಲ. ಹಾಡುವವರೋ, ಕುಣಿಯುವವರೋ – ಸಾಗಿದಂತೆ ತಾವೂ ತಾಳದಲ್ಲಿ ಹಿಂಬಾಲಿಸಿ ದರಾಯಿತೆಂದು ಮಾತ್ರವೇ ಅವರು ಎಣಿಸಿದಂತಿತ್ತು. ವಾದನಗಾರರು ಬರೇ ತಾಳದ ಗಣಿತಜ್ಞರಾದರೂ ಸಾಲದು. ತಾಳವೊಂದೇ ಆಗಿದ್ದರೂ, ಬೇರೆ ಬೇರೆ ಭಾವರಸಗಳ ಹಾಡುಗಳನ್ನು ಹಾಡುವಾಗ, ಆ ನಾದ ದೊಂದಿಗೆ ಸಮರಸವಾಗುವಂತೆ ವಾದ್ಯನುಡಿಸುವ ಮರ್ಮಜ್ಞರಾಗಿರಬೇಕು. ಭಾಗವತನ ಕೊರಳೂ, ಮದ್ದಳೆಯವನ ಬೆರಳೂ ಸಿಹಿಸಕ್ಕರೆಗಳಂತೆ–ಎರಡಾದರೂ ಒಂದೆಂಬಂತಿರಬೇಕು. ಎಂಬೀ ಅಭಿಪ್ರಾಯ

ದಿಂದ ದಿವಂಗತರು ಸ್ವತಹ ವಾದ್ಯವಾದನದಲ್ಲಿ ಪಳಗಿ ಇತರರಿಗೆ ಮಾರ್ಗದರ್ಶನ ಮಾಡಿದರು. ಅಂದಿನಿಂದ ಯಕ್ಷಗಾನದ ಚೆಂಡೆಮದ್ದಳೆಗಳೂ ಶ್ರೋತೃಗಳಿಗೆ ಆಕರ್ಷಣೀಯಗಳಾದುವು; ಮಾತ್ರವಲ್ಲ ಯಕ್ಷಗಾನದ ಗೀತವಾದ್ಯಗಳು ಕೈಚಾಚಿದಲ್ಲೆಲ್ಲ–ಸಿಕ್ಕುವ ಅಗ್ಗದ ವಸ್ತುಗಳಲ್ಲವೆಂದೂ, ಪ್ರಯಾಸ ಪಟ್ಟು ಭೂಗರ್ಭದಿಂದ ಅಗೆದರೆ ಮಾತ್ರ ಕೆಲವು ಭಾಗ್ಯವಂತರಿಗೆ ದೊರೆಯುವ ಕನಕರತ್ನಗಳಂತೆ. ಸಶ್ರಮ ಸಾಧನೆಯಿಂದಲೇ, ಮಿತವಾಗಿ ದೊರೆಯುವ ಪಾಂಡಿತ್ಯವೆಂದೂ ಜನರಿಗೆ ಮನವರಿಕೆಯಾಯಿತು.

ದಿ। ಭಾಗವತರೆಂದರೆ ವೇಷಧಾರಿಗಳೆಲ್ಲ ಅಳುಕುತ್ತಿದ್ದರು. ತಮಗಿದ್ದ ಲೋಪದೋಷಗಳು ಅವರಿಗೆ ಗೊತ್ತಾಗತೊಡಗಿದವು. ಕೇವಲ ನೃತ್ಯಾಭಿನಯಗಳಿಗೆ, ಹಿನ್ನಲೆಯ ಸಂಗೀತವನ್ನಲ್ಲ ಭಾಗವತರು ಹಾಡುತ್ತಿರುವುದೆಂದೂ, ಯಕ್ಷಗಾನಕಾವ್ಯವೆಂದರೆ ಅಭಿನಯ ಗೀತೆಗಳ ಸಂಕಲನವಲ್ಲವೆಂದೂ ಗೊತ್ತಾದಾಗ, ಚೆನ್ನಾಗಿ ಓದುಬರಹ ಬಾರದ ಅವರು ಚಡಪಡಿಸುವುದು ಸ್ವಾಭಾವಿಕವೇ. ಸಾಹಿತ್ಯಸಂಪನ್ನವಾದ ಕವಿವಾಣಿಯು ಭಾಗವತರ ಕಂಠದಿಂದ ಶುದ್ಧವಾಗಿ ಹಾಡಾಗಿ ಹೊರಹೊಮ್ಮಿದಾಗ, ಕಾವ್ಯ ಸೌಂದರ್ಯವನ್ನು ತಮ್ಮ ಸ್ವಂತ ಮಾತಿನಿಂದ ಪ್ರಕಟಪಡಿಸಿ, ವಿದ್ವಾಂಸರನ್ನು ಮೆಚ್ಚಿಸುವುದು ಸಣ್ಣ ಕೆಲಸವಲ್ಲ, ಬಣ್ಣ, ವೇಷಭೂಷಣ, ಕುಣಿತಗಳಿಂದ ಈ ಕೊರತೆಯನ್ನು ಮುಚ್ಚಿಬಿಡಲು ಸಾಧ್ಯವಿಲ್ಲ. ಯಕ್ಷಗಾನದ ಮಾತುಗಾರಿಕೆಯು, ನಾಟಕದ ಪಾತ್ರಧಾರಿಯ ಮಾತಿನಂತೆ, ಬರೆದಿಟ್ಟುದನ್ನು ಬಾಯಿಪಾಠ ಮಾಡಿ ಹೇಳುವ ಕ್ರಮದ್ದಲ್ಲ. ಕವಿಹೃದಯುವನ್ನರಿತು, ಕಾವ್ಯದ ರಸವಾಹಿನಿಗಳನ್ನು ಗುರುತಿಸಿ, ಪದ ಪ್ರಯೋಗಗಳ ಔಚಿತ್ಯವನ್ನು ತನ್ನ ಸ್ವಂತ ಪ್ರತಿಭೆಯಿಂದ ಕಂಡು, ಶುದ್ಧ ಭಾಷೆಯಲ್ಲಿ, ಪಾತ್ರೋಚಿತ ಸ್ಥಾಯಿಯಲ್ಲಿ ನಿರೂಪಿಸುವ ವಕ್ತಾರನಿಗೇ ಅದು ಸಾಧ್ಯ. ವಾಲ್ಮೀಕಿ ವ್ಯಾಸರನ್ನು ಸಾಕ್ಷಾತ್ಕರಿಸಿಕೊಂಡು, ಶ್ರುತಿಸ್ಮೃತಿಗಳನ್ನು ಅರಗಿಸಿಕೊಂಡವನಾದರೂ, ಯಕ್ಷಗಾನವ ಬಗೆಗೆ ಪ್ರತ್ಯೇಕ ಪರಿಣತಿಯನ್ನು ದೊರಕಿಸಿಕೊಳ್ಳಲಾರದೆ ಹೋದರೆ ಆ ವ್ಯಕ್ತಿಯಿಂದ ಯಕ್ಷಗಾನಕ್ಕೇನೂ ಲಾಭವಾಗದು. ಪಾರ್ತಿ ಸುಬ್ಬ ಪ್ರಭೃತಿಗಳ ಕಾವ್ಯ ಶ್ರೀಮಂತಿಕೆಯನ್ನು ಪ್ರಚಾರಪಡಿಸಲಿಕ್ಕೆಂದಿರುವ ರಾಮನೋ ರಾವಣನೋ, ವಾಲ್ಮೀಕಿಯನ್ನೋ, ವ್ಯಾಸರನ್ನೋ ಎತ್ತಿ ತೋರಿಸಲು ಹೊರಟರೆ ಹೇಗಾದೀತು? ಆದುದರಿಂದಲೇ "ಪದಕ್ಕೆ ಅರ್ಥ"ವೆಂದು ಭಾಗವತರು ಹೇಳುತ್ತಿದ್ದುದು. ಪದದೊಳಗಿನ ಅರ್ಥವನ್ನು ಬಿಡಿಬಿಡಿಯಾಗಿ ಬಿಡಿಸಿ ತೋರುವಲ್ಲಿ, ಮಹಾಕಾವ್ಯಗಳಿಂದ ಉಪಕಾರ ಪಡೆಯಬೇಕಾಗಿ ಬಂದಲ್ಲಿ ಅವುಗಳ ಪ್ರಯೋಜನ ಪಡೆಯಬಹುದು. ಕೆಲವೊಮ್ಮೆ ಈ ಋಣ ಅನಿವಾರ್ಯವೂ ಆಗಬಹುದು. ಪೌರಾಣಿಕ ಕಥಾಪಾತ್ರಧಾರಿಗಳಾದ ಮೇಲೆ, ಹುಟ್ಟುಸಾವುಗಳ ಗುಟ್ಟು, ಜೀವಾತ್ಮ ಪರಮಾತ್ಮಾದಿ ಶಬ್ದಗಳ ವ್ಯಾಪಕಾರ್ಥ, ವರ್ಣಾಶ್ರಮ ಪದ್ಧತಿ, ಧರ್ಮಾರ್ಥಗಳ ನೀತಿರೀತಿಗಳೆಂದು ಹಲವಾರು ವಿಚಾರಗಳ ಮೇಲೆ ಮಾತನಾಡಬೇಕಾಗುತ್ತದೆ, ಆಗ ಶಾಸ್ತ್ರಪುರಾಣಗಳ ಅನುಭವವು ಯಕ್ಷಗಾನದ ಕಾವ್ಯಶ್ರೀಗೆ ಶೋಭಾಯಮಾನವಾದ ಆಭರಣವಾಗಬಹುದು. ಆದರೆ, ಈ ತೆರನಾದ ವಿದ್ವಾಂಸರನ್ನು ಒಂದೇ ಸವನೆ ಬಯಲ ರಂಗಸ್ಥಳಕ್ಕೆ ತರುವುದು ಸುಲಭವಾಗಿರಲಿಲ್ಲ. ಆದರೆ ಶ್ರೀಯುತರು, ತಮ್ಮ ಮೈತ್ರಿಯ ಸಲುಗೆಯನ್ನು ಉಪಯೋಗಿಸಿಕೊಂಡು, ಶುದ್ಧ ವೈದಿಕರೂ ವಿದ್ವಾಂಸರೂ ಆಗಿದ್ದ ದಿವಂಗತ ಪಡ್ರೆ ಶ್ರೀಪತಿ ಶಾಸ್ತ್ರಿಗಳನ್ನೂ, ಇತರ ಮಹನೀಯ ವಿದ್ವಜ್ಜನರನ್ನೂ ಯಕ್ಷಗಾನ ಕೂಟಕ್ಕೆ ಬರುವಂತೆ ಮಾಡಿ, ತಾನು ಹಾಡಿ, ಅವರಿಂದ ಆಡಿಸಿ, "ಆಟದವರಿಂದಾಗದುದನ್ನು" ಕೂಟದವರಿಂದ ಮಾಡಿಸಿಕೊಂಡರು. ಬಣ್ಣ ಕುಣಿತಗಳಿಲ್ಲದಿದ್ದರೂ ಕಲೆ ಬದುಕಬಹುದು, ಸಾಹಿತ್ಯ ಸಂಪತ್ತನ್ನು ರಕ್ಷಿಸುವ ಭಾಗವತರು ಮತ್ತು ಅರ್ಥಧಾರಿಗಳಿಲ್ಲವಾದರೆ ಈ ಕಲೆಯು ತನ್ನ ಬಾಲ್ಯಕಾಲದಲ್ಲಿ ತಾನು ಕಂಡಿದ್ದ ಸ್ಥಿತಿಗೇ ಮರಳೀತೆಂದು ತನ್ನ ಬದುಕಿನ ಮೂಲಕ ನಾಡಿನ ಯಕ್ಷಗಾನ ಪ್ರೇಮಿಗಳ ಹೃದಯದಲ್ಲಿ ನೆನಪಿನ ದೀವಿಗೆಯನ್ನು ಹಚ್ಚಿ ಅಮರರಾದರು "ಯಕ್ಷಗಾನದ ಶಕಪುರುಷ" ದಿ। ಶ್ರೀ ಬಲಿಪ ನಾರಾಯಣ ಭಾಗವತರು.

"ಯಕ್ಷಗಾನ ರಾಕ್ಷಸ"

ಶ್ರೀ ದೇರಜೆ ಸೀತಾರಾಮಯ್ಯ.

ಈ ಶೀರ್ಷಿಕೆಯನ್ನು ಕಂಡಾಗ ಏನಿದು ? ಎಂದು ಅನಿಸಬಹುದು–ಓದುಗರಿಗೆ ಒಂದು ರೀತಿಯ ಸಖೇದ ಕೌತುಕವೇ ಮೂಡಬಹುದು; ಕ್ಷಮೆಯಿರಲಿ – ಇದು ಯಾರ ಕುರಿತಾದ ಅಪಚಾರವೂ ಅಲ್ಲ– ಬರಿಯ ಉಪಚಾರವೂ ಅಲ್ಲ – ಕೇವಲ ಒಂದು ವಿಚಾರ ಚಿಂತನೆಯು ಮಾತ್ರ.

ತನ್ನೆಲ್ಲ ಜೀವಮಾನವನ್ನು 'ಯಕ್ಷಗಾನ'ಕ್ಕಾಗಿಯೇ ಅವಿರತವಾಗಿ ದುಡಿದು ಸವೆಯಿಸಿದ ಶ್ರೀಗಂಧದಂಥಾ ಒಬ್ಬ ಧನ್ಯ ಜೀವಿಯನ್ನು – ಒಬ್ಬ ಕಲಾದಾರ್ಶನಿಕನನ್ನು ಸಂಸ್ಮರಿಸಿ, ಆ ಕುರಿತು ಕೈ ಕೊಂಡಿರುವ ಘನ ಕಾರ್ಯದಲ್ಲಿ – ಗುರುತರವಾದ ಈ 'ಬಲಿಪ' ಸ್ಮೃತಿ ಗ್ರಂಥದಲ್ಲಿ ಇಂತಹದೂ ಒಂದು ಬರೆಹವು ಕೂಡಿದ್ದರೆ ಚೆನ್ನು ಎಂದು ನನಗೆನಿಸಿತು. ಮೇಲಾಗಿ ಇದು ಯಾರ ಕುರಿತಾದ ಕೃತಜ್ಞತೆಯ ಕುರುಹೋ ಆ ಅವರಿಗೂ ಚಿಕಿತ್ಸಕ ಚಿಂತನೆಯು ಪ್ರಿಯವಾಗಿದ್ದಿತು. ಆದುದರಿಂದ ಸುವಿಚಾರ ವಿಶೇಷ ವೊಂದು ಸ್ವಾನುಭವ ಸಂದೇಹದೊಂದಿಗೆ ಸ್ವಭಾವ ಸಹಜವಾಗಿ ವ್ಯಕ್ತಗೊಂಡಾಗ ಅನ್ಯಥಾ ಎಣಿಸದೆ ಸಜ್ಜನಿಕೆಯಿಂದಲೇ ಆ ವಿಚಾರ ಸಮೀಕ್ಷೆಯನ್ನು ತೊಡಗೋಣ.

"ಯಕ್ಷಗಾನ ರಾಕ್ಷಸ" ಎಂಬುದನ್ನು ಪ್ರಪ್ರಥಮವಾಗಿ ನಾನು ಕೇಳಿದುದು ನಮ್ಮ ಒಬ್ಬ ಪ್ರಸಿದ್ಧ ಸಾಹಿತಿಗಳ ಮುಖದಿಂದ. ಅವರು ನಮ್ಮನ್ನು ಕೆಲವರನ್ನು ಕಂಡಾಗ "ಏನು ? ಯಕ್ಷಗಾನ ರಾಕ್ಷಸ"ರು ಎಂದು ಕೇಳುತ್ತಿರುತ್ತಾರೆ. ಈ ಸುದ್ದಿಯನ್ನು ಕೇಳಿದ ಕೆಲ ಕೆಲವರು "ಅದು ಅವರ ಕುಚೋದ್ಯ" ಎನ್ನುತ್ತಾರೆ. ನನಗೇಕೋ ಅದು ಹಾಗೆಯೇ ಆಗಿರಲಾರದು ಎಂದು ಅನಿಸುತ್ತದೆ. ಅವರೂ ಒಂದು ರೀತಿಯ 'ಯಕ್ಷಗಾನ' ಸಂಪರ್ಕವುಳ್ಳವರು; ಮೇಲಾಗಿ ಚಿಕಿತ್ಸಕ ವಿನೋದ ಪ್ರಿಯರು. ಆದುದರಿಂದ ಇದೇ ಸಂದರ್ಭದಲ್ಲಿ ನನ್ನೆಣಿಕೆಯಂತೆ ಅದರ ಉಚಿತಾರ್ಥ ವಿವೇಚನೆಗೆ ಪ್ರಯತ್ನಿಸೋಣ ಅನ್ನಿಸಿತು.

'ಯಕ್ಷಗಾನ'ಕ್ಕಾಗಿಯೇ ರಾತ್ರೆಯಿಡೀ ನಿದ್ರೆ ಬಿಟ್ಟು, ನಿಶಾಚರರಂತೆ ಓಡಾಡುವವರು – ಅನಿವಾರ್ಯವಾಗಿ ಕೂಡಾ ಕೆಲವೊಮ್ಮೆ ವ್ಯವಹರಿಸುವವರು ಎಂಬಿತ್ಯಾದಿಗಳಿಂದ 'ಯಕ್ಷಗಾನ ರಾಕ್ಷಸ'ರು ಎಂದು ಹೇಳುವುದಾದರೆ ಈ ಗೌರವಹಾನಿಯ ಹೊಂದಿಕೆಯು ಸ್ವಭಾವ ಸಹಜವಾಗಿ ವಿರಸಕ್ಕೋ, ವಿಕೋಪಕ್ಕೋ ಕಾರಣವಾಗಬಹುದು-ಬೇಡ-ನಾವು ಭೂಷಣಪ್ರದವಾದುದನ್ನೇ ಅರಸೋಣ. ನಮಗೆ ಶುಭ ಪ್ರತೀಕ್ಷೆಯೇ ಇರಲಿ. ದೊಡ್ಡವರೊಬ್ಬರು ಮನಮೆಚ್ಚಿ ಯಾವ ವೆಚ್ಚವೂ ಇಲ್ಲದೆ ಸಹಜವಾದ ಸಲುಗೆಯಿಂದ ಒಲಿದಿತ್ತ ದೊಡ್ಡ ಬಿರುದು ಅದು. ಯಾಕೆ ? ಯಕ್ಷಗಾನ ಬಯಲಾಟಗಳಲ್ಲಿ ರಾಕ್ಷಸ ಪಾತ್ರವು ದೊಡ್ಡ ಪಾತ್ರವು; ಅದರ ಕಿರೀಟ, ಮುಖ ವರ್ಣಿಕೆ, ಮಾತ್ರವಲ್ಲ ಆ ಪಾತ್ರನಿರ್ವಹಣೆಯ ಪರಿಶ್ರಮ, ಹಾಗೆಯೇ ಅದಕ್ಕನುಗುಣವಾದ ದೇಹ ದಾರ್ಢ್ಯತೆ, ಎಲ್ಲವೂ ದೊಡ್ಡದು; ದೊಡ್ಡದಿರಲೇ ಬೇಕಾದುದು. ಹಾಗಾಗಿ 'ಯಕ್ಷಗಾನ ರಾಕ್ಷಸ' ಎಂದರೆ ಯಕ್ಷಗಾನದಲ್ಲಿ ದೊಡ್ಡವನು ಎಂಬ ಅರ್ಥ

ಸಾಮ್ಯತೆಯನ್ನು ಕಲ್ಪಿಸಬಹುದು. ಇದನ್ನು ಅರ್ಥಪೂರ್ಣವಾಗಿಯೇ ನಾವು ಒಪ್ಪಿಕೊಳ್ಳಬಹುದು. ಚಾಣಕ್ಯ ಚಂದ್ರಗುಪ್ತರ ಕಥೆಯಲ್ಲಿ ಒಬ್ಬ 'ರಾಕ್ಷಸ'ನು ಬರುತ್ತಾನೆ. ಅವನು ಲಂಕೆಯವನೂ ಅಲ್ಲ-ಯಕ್ಷಗಾನದವನೂ ಅಲ್ಲ. ಅವನು 'ಅಮಾತ್ಯ' 'ರಾಕ್ಷಸ'ನು. ಅದು ಅವನ ಹುಟ್ಟು ಹೆಸರೇನೂ ಅಲ್ಲ. ರಾಜಮಂತ್ರಪ್ರವೀಣರಲ್ಲಿ ಅವನು ದೊಡ್ಡವನಾದುದರಿಂದ ಅವನನ್ನು ಹಾಗೆ 'ರಾಕ್ಷಸ' ಎನ್ನುತ್ತಿದ್ದರು. ರಾಜತಂತ್ರ ನಿರ್ಮಾತೃಗಳಲ್ಲಿ ಒಬ್ಬನಾದ ಕೌಟಿಲ್ಯನೇ ಅದನ್ನು ಒಪ್ಪಿ ಮೆಚ್ಚಿ ದೊಡ್ಡವನಾದ ಅವನನ್ನು ಸರ್ವಪ್ರಯತ್ನದಿಂದಲೂ ನಿರ್ಬಂಧಿಸಿ ಚಂದ್ರಗುಪ್ತನ ಮಂತ್ರಿಯನ್ನಾಗಿ ಮಾಡಿದನೆಂದು ಅದೇ ಆ ಇತಿಹಾಸವು ಹೇಳುತ್ತದೆ. ಹಾಗಾಗಿ ದೊಡ್ಡವರಿಗೆ "ರಾಕ್ಷಸ" ಎನ್ನುವ ಬಿರುದು ಮೊದಲಿಗೇ ಇದ್ದಂತೆ ನಾವು ಮನಗಾಣಬಹುದು. ಪೌರಾಣಿಕವಾಗಿಯೂ ಆದಿಯಲ್ಲಿ ಒಂದು ಕಥೆಯಿದೆ. ಒಂದು ವರ್ಗದವರು ವೇದಗಳಿಂದ "ಯಕ್ಷಾಮಹೇ" "ಪೂಜಿಸುತ್ತೇವೆ" ಎಂದು ಬ್ರಹ್ಮನೊಡನೆ ಹೇಳಿ ಯಕ್ಷರೆನ್ನಿಸಿಕೊಂಡರಂತೆ; ಇನ್ನೊಂದು ವರ್ಗದವರು "ರಕ್ಷಾಮಹೇ" "ರಕ್ಷಿಸುತ್ತೇವೆ" ಎಂದು ಹೇಳಿ 'ರಾಕ್ಷಸ'ರೆನ್ನಿಸಿಕೊಂಡರಂತೆ. ಇಲ್ಲಿಯೂ ರಕ್ಷಿಸುವವರು ದೊಡ್ಡವರೆಂದೇ ಹೇಳಬಹುದು. ಯಾಕೆ? ರಕ್ಷಿಸುವ ಹೊಣೆಯು ಬಹು ದೊಡ್ಡದಾದುದು.

'ಯಕ್ಷ್' ಎಂದರೆ ಪೂಜಿಸು, "ಯಕ್ಷ" ಎಂದರೆ ಪೂಜಿಸುವವನು ಎಂಬುದಾಗಿ ಕೆಲವು ವಿದ್ವಾಂಸರು ಹೇಳುತ್ತಾರೆ. "ಯಕ್ಷ"ರು ಎಂದರೆ ಒಂದು ಜನವರ್ಗವೆಂತಲೂ, ಅವರು ಸಂಪತ್ತಿನ ಅಧಿದೇವತೆಯಾದ ಲಕ್ಷ್ಮಿಯನ್ನು ಆರಾಧಿಸುವವರೆಂದೂ ಹೇಳುತ್ತಾರೆ. ಕಾರಣ ಆ ಯಕ್ಷರಿಗೆ ಲಕ್ಷ್ಮಿ ಪ್ರಾಪ್ತಿಯಾಗಿದೆಯೋ ಏನೋ? ನಿತ್ಯ ಕಾಣುತ್ತಿರುವ ನಮ್ಮ ಯಕ್ಷಗಾನದವರಿಗೆ ಮಾತ್ರ ಅದು ಬಿಸಿಲ್ಗುದುರೆಯೇ ಆಗಿದೆ.

'ಕಲೆ' ಎಂದರೆ ಏನು? ತನ್ನ ಅನುಭವವನ್ನು ತಾನು ಅನುಭವಿಸಿದಂತೆಯೇ ಇನ್ನಿತರರೂ ಅನುಭವಿಸುವಂತೆ ಅಭಿವ್ಯಕ್ತನಗೊಳಿಸುವ ಕಾರ್ಯದ ಕುಶಲತೆಯನ್ನು 'ಕಲೆ' ಎನ್ನುತ್ತಾರೆ. ಇದನ್ನು ಕಾಣುವುದೆಲ್ಲಿ? ಕಲಾವಿದನ ಕರ್ಮಸಿದ್ಧಿಯಲ್ಲಿ–ಅಪರ ಶುದ್ಧಿಯಲ್ಲಿ. ಕಾಣುವ ಕಣ್ಣೂ ಸವಿಯುವ ಸಹೃದಯತೆಯೂ ನಮ್ಮಲ್ಲಿದ್ದರೆ ನಾವು ಆ ಕಲಾದರ್ಶನದ ಸೌಭಾಗ್ಯವನ್ನು ಪಡೆದು ಆನಂದಗೊಳ್ಳಬಹುದು. ಕೇವಲ ಚಪಲತೆಯ ಹುಚ್ಚಾಟಗಳನ್ನು 'ಕಲೆ' ಎಂದು ಹೇಳುವುದಕ್ಕಾದೀತೇ? ಹೇಗೆ? ಸ್ವಭಾವದಿಂದಲೇ ಸೌಂದರ್ಯದ ಆಸ್ವಾದಕನಾದ ಮನುಷ್ಯನು ವಿಶ್ವ ಸೃಷ್ಟಿಯ ಸೊಬಗನ್ನು ಕಂಡು ಉಂಡು, ಅದಕ್ಕೂ ಮೀರಿ ಮಿಗಿಲಾದುದನ್ನು ತಾನು ತನ್ನ ಕೈವಾಡದಿಂದಲೇ ನಿರ್ಮಿಸಿಕೊಂಡು ಆನಂದಗೊಳ್ಳಬೇಕೆಂಬ ಅವನ ಆಕಾಂಕ್ಷೆಯೇ 'ಕಲಾ' ಸೃಷ್ಟಿಗೆ ಹೇತುವಾಗಿರಬಹುದು. ಅರ್ಹತೆಗೆ ತಕ್ಕಂತೆ ಮಾತ್ರ ಅದು ಸಫಲತೆಯನ್ನು ಹೊಂದಬಹುದು. ಯಕ್ಷಗಾನವೂ ಒಂದು 'ಕಲೆ' ಎನ್ನುತ್ತೇವೆ–ನಿಜ ಆದರೆ?

"ಯಕ್ಷಗಾನ" ಎಂದರೆ ಏನು? ಅದೊಂದು ವಿಶಿಷ್ಟವಾದ ಕಲೆ. ವೈಶಿಷ್ಟ್ಯವೇನು? ಬಹಳಷ್ಟುಯಿದೆ, ಎಂದರೆ ಹೇಗಾಗಬಹುದು? ಇದು ಎಲ್ಲಿ ಹುಟ್ಟಿತು? ಹೇಗೆ? ಇದರ ಸ್ವಭಾವ ಸ್ವರೂಪಗಳ ನಿರ್ಣಯವೇನು? ಈ ಯಾವುದರ ಕುರಿತಾಗಿಯೂ ಶಾಸ್ತ್ರೀಯ ಹಾಗೂ ಚಾರಿತ್ರಿಕ ಆಧಾರಗಳೇನೂ ಇದ್ದಂತೆ ಕಂಡು ಬರುವುದಿಲ್ಲ. ಯಾವುದನ್ನು ನಾವು 'ಯಕ್ಷಗಾನ' ಎನ್ನುತ್ತೇವೆಯೋ? ಆ ಅದು ಮುಖ್ಯವಾಗಿ "ಯಕ್ಷಗಾನ" "ಆಟ"ವೆಂತಲೂ "ಯಕ್ಷಗಾನ" "ಕೂಟ"ವೆಂತಲೂ ಎರಡು ವಿಧವಾಗಿ ನಮ್ಮಲ್ಲಿ ಪ್ರಸಿದ್ಧಿಗೊಂಡಿರುವುದನ್ನು ಸದ್ಯ ನಾವು ಕಾಣುತ್ತೇವೆ. ಮೊದಲಿನದು ದೃಶ್ಯಪ್ರಧಾನವಾದುದಾದರೆ ಮತ್ತಿನದು ಶ್ರವ್ಯಪ್ರಧಾನವಾದುದು ಎಂದು ಕಂಡುಬರುತ್ತದೆ. ದೃಶ್ಯಪ್ರಧಾನವಾದುದನ್ನು 'ಆಟ', 'ಬಯಲಾಟ', 'ಭಾಗವತರಾಟ', 'ದಶಾವತಾರ' ಎಂದು ಮುಂತಾಗಿಯೂ–ಶ್ರವ್ಯಪ್ರಧಾನವಾದುದನ್ನು "ಪ್ರಸಂಗ", "ತಾಳಮದ್ದಳೆ", "ಜಾಗರ" ಎಂದು ಮುಂತಾಗಿಯೂ, ಅಲ್ಲಲ್ಲಿ

ಹೇಳುತ್ತಿರುವುದನ್ನು ನಾವು ಕೇಳುತ್ತೇವೆ. ಈಗಲೂ ಆ ಹೆಸರುಗಳು ತೊಡೆದು ಹೋದಂತೆ ಕಾಣುವುದಿಲ್ಲ. ಹಿಂದಿನಿಂದಲೂ ಇವೇ ಹೆಸರುಗಳು ರೂಢಿಯಲ್ಲಿದ್ದುವಾದರೆ "ಯಕ್ಷಗಾನ" ಎಂಬುದು ಪ್ರತ್ಯೇಕವಾಗಿ ಹೇಗೆ ಸೇರಿಕೊಂಡಿತೋ ತಿಳಿಯದು. 'ಆಟ'ಕ್ಕೂ, 'ಕೂಟ'ಕ್ಕೂ 'ಯಕ್ಷಗಾನ' ಎಂಬ ಪದವನ್ನು ಹಚ್ಚಿಯೇ ಹೇಳುತ್ತಿರುವುದು ಯಾಕೆ? "ಯಕ್ಷಗಾನ" ಎಂಬುದು ಇದರ ಹುಟ್ಟು ಹೆಸರೇ? ಆಗಿದ್ದರೆ ಹೀಗೆ ಹಚ್ಚಿ ಹೇಳುವುದೇಕೆ? ಅಲ್ಲವಾದರೆ–ಅದು ಕಂಡವರು ಇಟ್ಟ ಹೆಸರು ಎನ್ನಬಹುದೇ? ಹಾಗೆಯೇ ಆದರೆ ಕಾರಣವೇನು? ಮಾತ್ರವಲ್ಲ ಔಚಿತ್ಯವಾದರೂ ಏನು? ಅನೇಕರು 'ಏಕ್ಕಲಗಾನ' ಎನ್ನುತ್ತಾರೆ. ಇದು ಬಳಕೆ ಕಡಿಮೆ. 'ಯಕ್ಷಗಾನ'ವೇ 'ಏಕ್ಕಲಗಾನ'ವು ಹೇಗಾಗಿರಬಹುದು? ಅಥವಾ 'ಏಕ್ಕಲಗಾನ'ವೇ "ಯಕ್ಷಗಾನ"ವು ಹೇಗಾಗಿರಬಹುದು? ಇವೆರಡೂ ಒಂದೇ ಪದದ ರೂಪಾಂತರಗಳೆಂಬುದನ್ನು ಲಾಕ್ಷಣಿಕರು ಒಪ್ಪಿಯಾರೇ? ಬೇರೆಯೇ ಆದರೆ ಹಾಗೆಲ್ಲ ಹೇಳಿ ಯಾಕೆ ಗೊಂದಲವೆಬ್ಬಿಸಬೇಕು? ಕೇವಲ "ಯಕ್ಷಗಾನ" ಎಂದಷ್ಟೇ ಹೇಳಿದರೆ 'ಆಟ'ವೋ 'ಕೂಟ'ವೋ? ಎಂಬ ಸಂದೇಹವು ಸದ್ಯ ಸ್ವಾಭಾವಿಕವಾಗಿಯೇ ಮೂಡುತ್ತದೆ. 'ಯಕ್ಷಗಾನ'ದಲ್ಲಿ ಯಾವುದು? 'ಆಟ' ಇಲ್ಲವೆ 'ಕೂಟ' ಈ ಎರಡಕ್ಕೂ ಅದು ವಿಶೇಷಣವಾಗಿ ಅನ್ವಯಿಸಿದಂತೆ ತೋರುತ್ತದೆ. "ಅಲ್ಲಿ ಯಕ್ಷಗಾನವಿದೆ" ಎಂದು ಹೇಳುವಲ್ಲಿ 'ಆಟ'ವೋ? 'ಕೂಟ'ವೋ? ಎಂದು ಮತ್ತೆ ಪ್ರಶ್ನಿಸಿಯೇ ಉತ್ತರವನ್ನು ಪಡೆಯಬೇಕಾಗಿ ಬರುತ್ತದೆ. ಈ ಎರಡಕ್ಕೂ ಬೇರೆ ಬೇರೆಯೇ ಆದ ಹೆಸರುಗಳಿರುತ್ತಾ, ಮರುಪ್ರಶ್ನೆಯನ್ನೆತ್ತಿ ಸಮಾಧಾನ ಪಡೆಯಬೇಕಾದ ಅವಕಾಶವನ್ನುಂಟುಮಾಡುವ ಈ "ಯಕ್ಷಗಾನ"ವೆನ್ನುವ ಗೊಂದಲದ ಹೆಸರು ಏಕೆ ಹುಟ್ಟಿಕೊಂಡಿತು?

"ಯಕ್ಷಗಾನಕ್ಕೊಂದು ಭವ್ಯ ಪರಂಪರೆಯಿದೆ–ಈಗೀಗ ಅದು ಕುಲಗೆಟ್ಟು ಹೋಯಿತು" ಎಂದು ಅಲ್ಲಲ್ಲಿ ಕೆಲವರು ಆಡಿಕೊಳ್ಳುತ್ತಲೇ ಇದ್ದಾರೆ. ಈ ಪರಂಪರೆಯು ಎಲ್ಲಿಂದ? ಎಂದಿನಿಂದ? ಊಹಿಸಬೇಕೇ ಹೊರತು ಆಧಾರವೇನೂ ಇದ್ದಂತೆ ಕಾಣುವುದಿಲ್ಲ. ಅದು ಕುಲಕೆಟ್ಟಿರುವುದು ಮತ್ತೆ ಹೇಗೆ? ಅಂಥಾ ಅದರ ಕುಲವಾದರೂ ಯಾವುದು? ಕೆಲವು ವರ್ಷಗಳಿಂದ ಅಲ್ಲಲ್ಲಿ ಕಾಣಬರುವ ಯಾವ ಯಾವುದೋ ಬದಲಾವಣೆಗಳ ಕಾರಣದಿಂದ "ಕುಲಕೆಟ್ಟಿದೆ" ಎನ್ನುವುದೇ? ಹಾಗಾದರೆ ಇದು ಮೂಲದಲ್ಲಿ ಹೇಗಿತ್ತು? ಉತ್ತರವನ್ನು ಹೇಗೆ ಪಡೆಯುವುದು? ಹೀಗೆ ಆರೋಪಿಸುವವರು ಮತ್ತೆ ಏನನ್ನೂ ಆ ಕುರಿತು ಆಡುವುದಿಲ್ಲ. ಮತ್ತೆ ಹೇಗೆ? "ಸದ್ಯ ಸದುತ್ತರವನ್ನು ಕಾದಿರಿಸಲಾಗಿದೆ" ಎಂದು ಹೇಳುವುದೇ? ಅಲ್ಲಲ್ಲಿ ಆಗಾಗ ಆಗುತ್ತ ಬಂದ ಬದಲಾವಣೆಗಳು ಸರಿಯಲ್ಲವಾದರೆ–"ತೆಂಕುತಿಟ್ಟು, ಬಡಗುಮಟ್ಟು" ಎಂಬಿತ್ಯಾದಿ ಪ್ರಭೇದಗಳು ಹೇಗುಂಟಾದುವು? ಯಾಕೆ? ನಿಜವಾಗಿಯೂ ಈ ಕಲೆಗೆ ಲಾಕ್ಷಣಿಕವಾದ ಒಂದು ಸ್ವರೂಪ ನಿರ್ಣಯವಿಲ್ಲವೇ? ಆ ಕುರಿತಾದ ಯಾವ ಪ್ರಮಾಣಗಳೂ ಇಲ್ಲವೇ? ಇಲ್ಲ ಎಂದಾದರೆ ಮತ್ತೆ ನಾವು ರೂಢಿಯನ್ನೋ ದೇಶಾಚಾರವನ್ನೋ ನೋಡಬೇಕು. ಶಾಸ್ತ್ರೀಯವಲ್ಲವೆಂದಾದರೆ 'ದೇಸೀಯ'ವೇ ಆಗಿರಬೇಕು. ಅದೇ ಹೌದೆಂದಾದರೆ ಈ ಕಲೆಯು ಇನ್ನೂ ಸಾಕಷ್ಟು ಬೆಳೆಯಲಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾದೀತು; ಅಭಿಮಾನಿಗಳು ಅನ್ಯಥಾ ಭಾವಿಸಬಾರದು-ಇದು ಕೇವಲ ವಿಚಾರ ಚಿಂತನೆ ಎಂಬುದನ್ನು ದಯವಿಟ್ಟು ಮರೆಯಬಾರದು. ಇನ್ನೂ ಬೆಳೆಯದಿದ್ದ ಇದಕ್ಕೆ ಈಗಲೂ ಪ್ರಾಯೋಗಿಕ ಸಂಸ್ಕರಣಗಳು ಆಗುತ್ತಲೇ ಇವೆ ಎಂದು ಹೇಳಬಹುದೇ? ಬಹುಮಂದಿ ಪ್ರಯತ್ನಶೀಲರ ಬಹುರೀತಿಯ ಸಾಹಸದ ಕಾರಣದಿಂದಲೇ ಹೀಗಾಗಿರಬೇಕು ಎನ್ನಬಹುದೇ?

ಈ ಕಲೆಯ ಸ್ವಭಾವ ಗುಣಲಕ್ಷಣಗಳನ್ನೂ ಪ್ರಭಾವ ವಿಶೇಷಗಳನ್ನೂ ಇಂದಿನ ಹಾಗೂ ಸ್ವಲ್ಪ ಹಿಂದಿನ ಪರಿಸ್ಥಿತಿಗಳಲ್ಲಿ ಅನುಲಕ್ಷಿಸಿದರೆ–ಆ ತಕ್ಕಂತೆ ಇದನ್ನು "ಯಕ್ಷಗಾನ" ಎಂಬ ಹೆಸರಿನಿಂದ ಹೇಳಲು ಸರ್ವೋಚಿತವಾದ ಮಾರ್ಗವೇನೂ ಕಂಡಂತೆ ತಿಳಿದು ಬರುವುದಿಲ್ಲ. ಪ್ರಪ್ರಥಮವಾಗಿ ಇದನ್ನು

ಕಂಡುಕೊಂಡ ಆ ದ್ರಷ್ಟಾರರ ಇಲ್ಲವೆ ಕಂಡುಬಂದ ಕ್ಷೇತ್ರದ ಹೆಸರಾಗಿ ಆದರೂ ಆಗಿರುತ್ತಿದ್ದರೆ ಒಂದು ರೀತಿಯ ಸಮಾಧಾನವಿರುತ್ತಿತ್ತು. ಹೆಸರಿಗೆ ತಕ್ಕಂತೆ ಇದು ಇದ್ದಂತೆ ಕಾಣುವುದಿಲ್ಲ. ಇದು ಇರುವಂತೆ ಈ ಹೆಸರು ತಕ್ಕುದಾಗಿ ತೋರುವುದಿಲ್ಲ. ಹೀಗೆಂದು ಆಕ್ಷೇಪಿಸಿದರೆ ಅಪಚಾರವಾದೀತೇ? ಎಂಬ ಸಂದೇಹವು ಮೂಡುತ್ತದೆ.

ಗಣಿತ ಪಾಠಕ್ರಮದಲ್ಲಿ ಇಂಗ್ಲಿಷ್ ಪದ್ಧತಿಯಂತೆ ಗೊತ್ತಿಲ್ಲದ ಸಂಖ್ಯೆಯನ್ನು "ಯಕ್ಸ್" ಎಂದು ಸಂಕೇತಿಸುವ ಪರಿಪಾಠವಿದೆಯಷ್ಟೆ? ಅಂತೆಯೇ ಇದನ್ನು "ಯಕ್ಸ್‌ಗಾನ" ಎಂದರೆ ಆದೀತೇ? "ಮ್ಯಾಕ್ಸ್ ಮುಲ್ಲರ್" ಎಂಬವರನ್ನು "ಮೋಕ್ಷ ಮುಲ್ಲರು" ಎಂದು ಹೇಳುವ ಕಡಿ ಖಂಡಿತ ಕನ್ನಡ ವಾದಿಗಳು ನಾವು. ಮುಂದೆ ಅದೇ ಹಳೆಗನ್ನಡವಾಗಿ "ಮೋಕ್ಷ ಮುಳ್ಳರ್" ಎಂದು ಬೇಕಿದ್ದರೆ ಪರಿವರ್ತನೆಗೊಳ್ಳಲಿ. ಅದರಿಂದ ಮ್ಯಾಕ್ಸ್ ಮುಲ್ಲರ್ ಸಾಹೇಬರ ಕುಲವೇನೂ ಕೆಟ್ಟುಹೋಗಲಾರದು, ಕನ್ನಡೀಕರಿಸುವ ನಮ್ಮ ದುರಂತ ಜಾಣ್ಮೆಯ ಪ್ರಗತಿಯಾದೀತಷ್ಟೆ. ಯಾವ ಕಾರಣಕ್ಕಾಗಿಯೇ ಆಗಲಿ "ಯಕ್ಷಗಾನ"ವೆಂದು ನಾವು ಒಪ್ಪಿ ಇದನ್ನು ಅದೇ ಹೆಸರಿನಿಂದ ಕರೆಯುತ್ತೇವಷ್ಟೆ! ಮಲೆಯಾಳಿಯ "ಕಾಸಿನಿ ಎಟ್ಟ್" ಇಂಗ್ಲಿಷಿನಲ್ಲಿ "ಕ್ಯಾಶ್ಯುನಟ್" ಆಯಿತೆಂದೂ ಹೇಳುವವರಿದ್ದಾರೆ. ಅದರಂತೆ ಅವರೂ ಆಗಿಹೋದ ಮೇಲೆ ಆಕ್ಷೇಪವೇಕೆ? ನಡೆಯಲೂ ಆರದು. ನಮ್ಮ ಪರಮೋಚ್ಚ ನ್ಯಾಯಸ್ಥಾನದಲ್ಲೇ "ಆದುದು ಆಗಿಹೋಯಿತು–ಅದು ಆದಂತೆಯೇ ಇರಲಿ, ಮುಂದೆ ಮಾತ್ರ ಹಾಗಾಗಬಾರದು..." ಎಂಬಂಥಾ ನ್ಯಾಯದಾನವೇ ನಡೆದಾಗ ಹೀಗೆ ಆಕ್ಷೇಪಿಸುವುದು ಅನ್ಯಾಯವಾದೀತು. ಅಂತೂ ಈ ಒಂದು ಹೆಸರನ್ನು ಹಿಡಿದು ನಾವು ವ್ಯವಹರಿಸುತ್ತೇವೆ. ಈ ಹೆಸರಿಗಾದರೂ ಪ್ರಾಯ ಎಷ್ಟಾಗಿರಬಹುದು? ಇದು ರೂಢಿಯಲ್ಲಿ ಬಂದು ಕಾಲ ಎಷ್ಟಾಗಿರಬಹುದು? ನಿರ್ದಿಷ್ಟವಾಗಿ ಹೇಳುವುದು ಯಾವ ಆಧಾರದಿಂದ?

ಸುಮಾರು ಒಂದು ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಕಾಲದಿಂದ ಈ ಕ್ಷೇತ್ರದಲ್ಲಾಗುವ ತೀವ್ರ ಮಾರ್ಪಾಟುಗಳನ್ನು ಲಕ್ಷಿಸಿದರೆ ಅದಕ್ಕೂ ಸ್ವಲ್ಪ ಹಿಂದೆಯೇ ಈ ಇದು ಪರಿಷ್ಕರಿಸಲ್ಪಡಬೇಕು ಎಂಬ ಭಾವನೆಯು ಕೆಲವರಲ್ಲಿ ಬಂದಿರಬಹುದು ಎಂದು ಅನಿಸುತ್ತದೆ. ಯಾಕೆ ಮುದ್ರಿತ 'ಯಕ್ಷಗಾನ' ಪ್ರಸಂಗಗಳಲ್ಲಿ ಕವಿಗಳ ಹೆಸರು ಆಧಾರವೇ ಆಗಿದ್ದರೂ"...ಓ ..ಇಂಥವರಿಂದ...ಪರಿಷ್ಕರಿಸ್ಪಟ್ಟಿತು" ಎಂದು ಅಚ್ಚಾಗಿರುವುದನ್ನು ನಾವು ಕಾಣಬಹುದು. ಯಾವುದೋ ಅನಿವಾರ್ಯ ಕಾರಣದಿಂದ ಪರಿಷ್ಕರಣದ ಪ್ರಯತ್ನವು ಪ್ರಬಲವಾಗಿ ನಡೆಯುತ್ತ ಬಂದಿದೆ ಎಂಬುದನ್ನು ಊಹಿಸಿಕೊಳ್ಳಲೇಬಹುದು. ಪ್ರಾಯಶಃ ಸಾಮಾಜಿಕ ಮನ್ನಣೆಯೇ ಮುಂತಾದವುಗಳನ್ನು ಹೊಂದುವುದಕ್ಕಾಗಿಯೇ ಪರಿಷ್ಕಾರಗೊಳ್ಳುವುದು ಅವಶ್ಯವಾಗಿತ್ತು ಎಂದು ಅನಿಸುತ್ತದೆ. ಇದರ ಸಾಧುತ್ವವನ್ನು ನಾವು ಕೇಳುತ್ತಿರುವ ಪಳಮೆಗಳು ಪುಷ್ಟೀಕರಿಸಬಲ್ಲವೋ ನೋಡೋಣ.

"ಪಳಮೆಗಳು ಎಂದರೆ ಖಚಿತವಾದ ಆಧಾರಗಳಿಲ್ಲದಿದ್ದರೂ ನಂಬಿಕೆಗೆ ಅರ್ಹವಾದ ವಾಸ್ತವಿಕಾಂಶಗಳು. ಕರ್ಣೋಪಕರ್ಣವಾಗಿ ತಿಳಿದು ಬಂದಂಥಾ ಸಮಾಚಾರ ರೂಪದ ಐತಿಹ್ಯಗಳು–ಎಂದು ಹೇಳಬಹುದು. ಇಂಥವುಗಳಲ್ಲಿ ಬಹಳಷ್ಟು ಸತ್ಯಾಂಶಗಳು ರೂಢಿಗೊಂಡಿವೆ ಎಂಬುದನ್ನು ಸದ್ಯಸ್ಥಿತಿಯಲ್ಲಿಯೂ ಕೆಲವೊಮ್ಮೆ ನಾವು ಒಪ್ಪಿಕೊಳ್ಳಬೇಕಾಗಿ ಬರಬಹುದು. ಶಿಷ್ಟಾಚಾರದ ಕಾರಣದಿಂದ ಕೆಲ ಕೆಲವು ಗುಟ್ಟಿನಲ್ಲೇ ಪ್ರಕಟಗೊಂಡಿರುತ್ತವೆ. ಹೆಚ್ಚಾಗಿ ಇಂಥವುಗಳು ಸಾರ್ವಜನಿಕ ರಹಸ್ಯವಾಗಿ ಇಲ್ಲವೆ ಬಹಿರಂಗದ ಗುಟ್ಟಾಗಿ ವ್ಯಕ್ತಗೊಂಡಿರುತ್ತವೆ. ನೋಡೋಣ. "ಯಕ್ಷಗಾನ" "ಆಟ" (ಈಗೀಗ ನಾಟಕ ಎಂತಲೂ ಹೇಳುತ್ತಾರೆ) ಎಂಬುದನ್ನು ನಡೆಯಿಸಿಕೊಂಡು ಬರುವ ಆ ಪಂಗಡಕ್ಕೆ "ಮೇಳ" ಎಂದು ಹೇಳುತ್ತಾರೆ. ಪ್ರದರ್ಶನದ ಪ್ರಚಾರ ಪತ್ರಿಕೆಗಳಲ್ಲೆಲ್ಲಾ ಹಾಗೆ ನಿರೂಪಿಸುವುದನ್ನು ಸದ್ಯ ಬಿಟ್ಟು

ಬಿಟ್ಟಿದ್ದಾರೆ. ಆದರೂ ಜನ ಇಂದಿಗೂ ಹಾಗೆ ಹೆಚ್ಚಾಗಿ ಹೇಳುತ್ತಲೇ ಬರುತ್ತಾರೆ. "ಯಾವ ಮೇಳದ ಆಟ"? ಎಂದು ಕೇಳುವುದು ಹಿಂದಿನ ಕಾಲದಿಂದಲೂ ನಡೆದುಬಂದ ಪದ್ಧತಿಯಂತೆ. ಈ ಪದ್ಧತಿಗೆ ಕಾರಣವೇನಿರಬಹುದು? ಇಂಥಾ ಮೇಳಗಳು ಬಹ್ವಂಶ ಪ್ರಸಿದ್ಧದೇವಾಲಯಗಳ ಹೆಸರು ಹೇಳಿಯೇ ಈಗಲೂ ನಡೆದುಬರುತ್ತಿರುವುದನ್ನು ನಾವು ನೋಡುತ್ತೇವೆ. ದೇವಸ್ಥಾನಗಳಿಗೂ ಈ ಮೇಳಗಳಿಗೂ ಒಂದು ರೀತಿಯ ಸಂಬಂಧವಿದ್ದಂತೆ ಕಂಡುಬರುತ್ತದೆ. ಸ್ವಲ್ಪ ವರ್ಷಗಳ ಹಿಂದಿನ ವರೇಗೂ 'ಆಟ'ದವರನ್ನು 'ಮೇಳ'ದವರು ಎಂತಲೇ ಹೇಳುತ್ತಿದ್ದರು. ಈಗೀಗ ಅದರಲ್ಲಿ ಬಹುಮಂದಿ ನುರಿತ ಕಲಾವಿದರೇ ಭಾಗವಹಿಸುತ್ತಾರೆ. ಹಿಂದೆ ಮಾತ್ರ ಇಂಥಾ ಮೇಳದವರು ಸಾಮಾಜಿಕವಾದ ಮನ್ನಣೆಯನ್ನು ಪಡೆಯುತ್ತಿರಲಿಲ್ಲ. ಅವರು ಕೀಳು ಉದ್ಯೋಗದವರು ಎಂದೇ ಪರಿಗಣಿಸಲ್ಪಡುತ್ತಿದ್ದರು. ವೈಯಕ್ತಿಕವಾಗಿಯೂ ಅವರಲ್ಲಿ ಅನೇಕರು ವಿದ್ಯೆಯಿಲ್ಲದವರೂ, ಅಸಂಸ್ಕೃತರೂ, ದುಃಶ್ಚಾಳಿಗಳಿಂದ ಕೂಡಿದ್ದವರೂ, ಆಗಿರುತ್ತಿದ್ದರು. ಆ ದುರ್ನಾತದ ಕರಟುವಾಸನೆಯು ಈಗಲೂ ಒಮ್ಮೊಮ್ಮೆ ಸೂಕ್ಷ್ಮಾತಿಸೂಕ್ಷ್ಮವಾಗಿ ಅನುಭವಕ್ಕೆ ಬರುತ್ತದೆ. ಅಂತೆಯೇ ಹಿಂದೆ ಸಮಾಜವು ಒಟ್ಟಿನಲ್ಲಿ ಅವರನ್ನು ಪ್ರತ್ಯೇಕವಾಗಿ ಕಾಣುತಿತ್ತು. "ಮೇಳ" ಎಂಬ ಶಬ್ದಕ್ಕೆ ಕೋಶವು ಕೆಲವು ಅರ್ಥಗಳನ್ನು ನಿರ್ದೇಶಿಸಿದರೂ ರೂಢಿಯಲ್ಲಿ ಮಾತ್ರ ಇತ್ತಿತ್ತಿನವರೇಗೂ "ಮೇಳದವರು" ಎಂದರೆ ಕಡಿಮೆ ಗೌರವದ ಒಂದು ವಿಶಿಷ್ಟಜಾತಿಯ ವರ್ಗದವರು ಎಂಬುದಾಗಿಯೇ ಜನ ಹೆಚ್ಚಾಗಿ ನಿರ್ದೇಶಿಸುತ್ತಿತ್ತು. ಇಂಥವರಲ್ಲಿ "ಕೂಡಿಕೆ" ಎಂಬೊಂದು ನಿಕೃಷ್ಟ ಕಟ್ಟುಪಾಡಿನ ವಿವಾಹ ಪದ್ಧತಿಯನ್ನು ಹೆಚ್ಚಿನವರು ಅವಲಂಬಿಸಿಕೊಂಡು ಬರುತ್ತಿದ್ದರು ಎನ್ನುತ್ತಾರೆ. ಅವರಲ್ಲಿಯೇ ಕೆಲಕೆಲರು "ದೇವದಾಸಿ"ಯರೂ ಆಗಿರುತ್ತಿದ್ದರಂತೆ.

ಹಿಂದೆ ಪ್ರಸಿದ್ಧವಾದ ಅನೇಕ ದೇವಸ್ಥಾನಗಳಲ್ಲಿ ವರ್ಷಾಶನವನ್ನು ಪಡೆದು ದೇವದಾಸಿಯರು ನರ್ತನ ಸೇವೆಯನ್ನು ನಡೆಸುತ್ತಿದ್ದರೆಂಬುದನ್ನು ಸಾಧಾರಪೂರ್ವಕವಾಗಿಯೇ ಹೇಳುತ್ತಾರೆ. ಅಂಥಾ ದೇವಸ್ಥಾನಗಳ ಹಳೆಯ ಲೆಕ್ಕ ಪತ್ರಗಳಲ್ಲಿ ಈ ಕುರಿತಾದ ಉಲ್ಲೇಖಗಳು ಧಾರಾಳವಾಗಿ ದೊರಕುತ್ತವಂತೆ. ಒಂದು ಕಾಲದಲ್ಲಿ ಸಂಗೀತ ನರ್ತನಾದಿಗಳು ಕೂಡಾ ವೇಶ್ಯಾಂತಃಪುರಗಳ ಗುರುಕುಲದಲ್ಲೇ ಉಳಿದುಕೊಂಡಿದ್ದುವು ಎಂದು ಚಾರಿತ್ರಿಕವಾಗಿಯೇ ತಿಳಿದು ಬರುತ್ತದೆ. ಇಂಥವುಗಳು ಹಲಕೆಲವು ಶ್ರೀಮಂತ ದೇವರುಗಳಿಂದ ದತ್ತವಾದ ಉಂಬಳಿ ಉತ್ತಾರಗಳ ಬದುಕಿನಿಂದಲೇ ಹೆಚ್ಚಾಗಿ ನಡೆದು ಬರುತ್ತಿದ್ದುವು ಎನ್ನುತ್ತಾರೆ. ದೇವಾಲಯಗಳಲ್ಲಿ ಗ್ರಾಮೀಣವಾದ ಭೂತದ ಕೋಲಗಳು ನಡೆದು ಬರುತ್ತಿರುವುದನ್ನು ಈಗಲೂ ಕಾಣಬಹುದು. ಹಿಂದೆಯೂ ಧಾರಾಳವಾಗಿ ಇತ್ತು. ಒಮ್ಮೊಮ್ಮೆ ಇಂಥಾ ಭೂತದ ಕೋಲಗಳು ಮತ್ತೊಮ್ಮೊಮ್ಮೆ ಅಂಥಾ ನರ್ತನ ಸೇವೆಗಳು - ಅಥವಾ ಆ ಅಭ್ಯಾಸಗೋಷ್ಠಿಗಳು - ನಿತ್ಯವೂ ಅಲ್ಲಿದ್ದು ನೋಡುತ್ತಿದ್ದ ಕೆಲವರ ಮೇಲೆ ಏನೋ ಒಂದು ಪ್ರಭಾವವನ್ನು ಬೀರಿರಬಹುದು. ದೇವಾಲಯಗಳಲ್ಲಿ ದೇವರ ಸೇವೆಯ ಊಳಿಗಕ್ಕೆ ನಿಯತಗೊಂಡವರು ಕೆಲವರಿರುತ್ತಾರೆ. ಅವರಿಗೆ ಕೆಲಸವೂ ಹೆಚ್ಚಿಲ್ಲ - ಮಾಡಿದ್ದನ್ನೇ ಮಾಡುವುದು, ನೋಡಿದ್ದನ್ನೇ ನೋಡುವುದು - ಬಿಡುವೂ ಧಾರಾಳ. ಹೀಗೆ ಅಂಥಾ ಪರಿಸರದಲ್ಲಿ ಇದ್ದವರಲ್ಲಿ ಕೆಲವರ ಮನಸ್ಸು ಇಂಥವುಗಳನ್ನು ಅಣಕಿಸುವಲ್ಲಿ ಕುತೂಹಲಗೊಳ್ಳುವುದು ಸ್ವಾಭಾವಿಕವು. ಅಣಕಕ್ಕೆ ಮಕ್ಕಳ, ಮಕ್ಕಳಂತಹರ ಚಾಪಲ್ಯವೂ ಕಾರಣವಾಗಿ ಪರಿಣಮಿಸುವುದುಂಟು; ಅಣಕವೂ ಅಷ್ಟೇ. ಒಂದೊಬ್ಬಿಬ್ಬರ ಮೆಚ್ಚುಗೆಯಿಂದ ಅನುಕರಣವಾಗಿ ಪರಿಣಮಿಸುವುದೂ ಇದೆ. ಅದರಂತೆ ದೇವಸ್ಥಾನದ ಊಳಿಗದವರಲ್ಲಿ ಕೆಲಮಂದಿ ಚಪಲಚಿತ್ತರೂ ಅಲ್ಲಿನ ಆ ಕೆಲಮಂದಿ ಮಕ್ಕಳೂ ಕೂಡಿ ಏನೇನನ್ನೋ ಕಟ್ಟಿಕೊಂಡು ಲಾಗಹಾಕಿರಬಹುದು, ಮಕ್ಕಳಾಟಿಕೆಗೆ ಅದೇ ಸ್ವಭಾವದ ಆ ಅವರ ಅಭಿಮಾನಿಗಳು ಕೆಲವರು ಪ್ರೇರಕರೋ ಪ್ರೋತ್ಸಾಹಕರೋ ಆಗಿರಬಹುದು. ಕೇಳಿದ ಇನ್ನಿತರರಿಗೆ ಇದು 'ಆಟ' ಎಂದಿರಬಹುದು. ಇದೇ ಸ್ವಲ್ಪ ಹೆಚ್ಚಾಗಿ ಬೆಳೆದು ಅದೇ ತರಹದ ನೋಟಕರೂ ಹೆಚ್ಚಿರಬಹುದು, ಉತ್ಸಾಹ ಬಂದು ಅನೇಕರು ನೋಡಲಿ

ಎಂದು ಬಯಲಿಗೆ ಬಂದು ಆಡಿ 'ಬಯಲಾಟ' ಎಂದು ಹೇಳಿರಬಹುದು. ದೇವಸ್ಥಾನಗಳಲ್ಲಿ ಪುರಾಣ ಸೇವೆಯೂ ಇದೆ. ಆ ಉದ್ಯೋಗದವರು ಪುರಾಣ ಹೇಳಿ ಜನರಲ್ಲಿ ಭಕ್ತಿಯನ್ನು ಹುಟ್ಟಿಸಬೇಕಾದವರು, ನಿತ್ಯ ದೇವರ ಮುಂದೆ, ವಿಶೇಷವಾಗಿ ಬೇರೆ ಕಡೆ-ಹೀಗೆ ಪುರಾಣ ಹೇಳುವವರು ಆ ಎಲ್ಲರಲ್ಲಿ ಸ್ವಲ್ಪ ಹೆಚ್ಚು ತಿಳಿದವರಾಗಿರುವುದು ಸ್ವಾಭಾವಿಕವು. ಭಗವದ್ಭಕ್ತಿಯ ಕುರಿತು, ಭಗವನ್ಮಹಿಮೆಗಳ ಕುರಿತು ಕೀರ್ತಿಸುವ ಇಂಥವರನ್ನು ಕೆಲವು ಸಲ "ಭಾಗವತರು" ಎಂದು ಹೇಳುವುದಿದೆ; ಏನೋ ಮನ ಬಂದಂತೆ ಬಯಲಲ್ಲಿ ಆಗಾಗ ಹಾರುತ್ತಿರುವ ಅವರನ್ನು ಕಂಡು ಇವರಿಗೂ ಏನೋ ಅನ್ನಿಸಿರಬಹುದು. ಅಂತೆಯೇ ಈ ಭಾಗವತರೆಂಬವರು ಇವರೊಂದಿಗೆ ಕೂಡಿಕೊಂಡು, ದೇವತಾಕೀರ್ತನೆಗಳನ್ನು ಹಾಡಿ ಇವರನ್ನು ಕುಣಿಸಲು ಪ್ರಾರಂಭಿಸಿರಬಹುದು; ಮತ್ತೆ ಮತ್ತೆ ಅದರೊಂದಿಗೆ ಪುರಾಣ ಕಥೆಯೂ ಕೂಡಿದ್ದರೆ ಸೊಗಸು ಎಂದು ಅದನ್ನೂ ಹೊಂದಿಸಿರಬಹುದು. ಮಕ್ಕಳಿಂದ ಮೊದಲ್ಗೊಂಡಿರುವುದರಿಂದ ಶ್ರೀಕೃಷ್ಣನ ಮಕ್ಕಳಾಟದ ಕಥೆಯನ್ನು ಮೊದಲು ಹೊಂದಿಸಿ ಪ್ರಯೋಗಿಸಿರಲೂಬಹುದು. "ಆಟ"ದ ನಿತ್ಯ ವೇಷ [ಈಗೀಗ ಅದೆಲ್ಲ ಮಾಯವಾಗುತ್ತ ಬಂದಿದೆ] ಗಳನ್ನು "ಬಾಲಗೋಪಾಲರು" ಎನ್ನುವ ರೂಢಿಯಿದ್ದುದು ಇದೇ ಕಾರಣದಿಂದ ಆಗಿದ್ದರೂ ಆಗಿರಬಹುದು. ಮತ್ತೆ ಮತ್ತೆ ಪುರಾಣದ ಇನ್ನಿತರ ಕಥೆಗಳನ್ನು ಜೋಡಿಸಿರಬಹುದು. ಇದರಲ್ಲಿ ಭಾಗವತರು ಹಾಡಿ ಕುಣಿಸುವುದರಿಂದ ಇದನ್ನು ದೂರದವರು "ಭಾಗವತರಾಟ" ಎಂದು ಹೇಳಿರಬಹುದು; ಅಥವಾ ಶ್ರೀಕೃಷ್ಣನ ಕಥೆಯು ಶ್ರೀಮದ್ಭಾಗವತದ ಕಥೆಯು; ಮೊದಲು ಅದನ್ನೇ ಕೂಡಿಸಿದ್ದರಿಂದ "ಭಾಗವತದಾಟ" ಎಂದು ಹೇಳಿ ಮುಂದೆ ಅದೇ "ಭಾಗವತರಾಟ" ಎಂದು ಆಗಿರಲೂಬಹುದು. ಭಗವದ್ಭಕ್ತರ - ಭಾಗವತರಾದ ಆ ಪುರಾಣ ಪುರುಷರ– ಪುಣ್ಯ ಕಥೆಗಳನ್ನು ಹಾಡಿ ಆಡುವುದರಿಂದ "ಭಾಗವತರಾಟ" ಎಂದು ಆಗಿರಲೂಬಹುದು. ದೇವರ ನಾನಾ ಅವತಾರ ಮಹಾತ್ಮ್ಯಗಳನ್ನು ಕುರಿತಾದ ಕಥೆಗಳೇ ಮುಖ್ಯವಾಗಿ ಇದರಲ್ಲಿ ಕೂಡಿಕೊಂಡಿರುವುದರಿಂದ ಇದನ್ನು "ದಶಾವತಾರ" ಎಂದು ಹೇಳಿರಬಹುದು. ಹೇಗೋ ಹಾಡಿ, ಕೂಡಿ, ಕುಣಿದು ಏನೋ ಒಂದು ವಿಧವಾದ ರೂಪ ಕೊಟ್ಟಿರಬಹುದು. ಈ ವಿಧಾನವನ್ನು ಒಂದು ಕ್ರಮದಲ್ಲಿ ತರುವುದಕ್ಕಾಗಿ ಅಭ್ಯಾಸವೂ ನಡೆದಿರಬಹುದು. ಅಂಥಾ ಅಭ್ಯಾಸಕ್ಕೆ ವೇಷ, ಕುಣಿತ ಯಾವುದೂ ಬೇಡ; ಪದ ಹೇಳಿ ಕಥೆಯನ್ನು ಪಾತ್ರಗಳ ಬಾಯಿಮಾತಿನ ಮೂಲಕ ವ್ಯಕ್ತಪಡಿಸುವುದು - ಇದು ವೇಷ ಕಟ್ಟಿ ಕುಣಿಯುವ ಆಟಕ್ಕೂ ಬೇಕು; ಇದೇ ಕಥೆಯ ಜೀವಾಳವು. ಕಥಾಪರಿಚಯ ಮಾತಿನ ಅಭ್ಯಾಸ ಅದು ಆಗಿಯೇ ತೀರಬೇಕು; ಕುಣಿತವನ್ನು ಬೇರೆಯೇ ಕಲಿತು ಕೂಡಿಸುವುದು; ಇದು ಕೇವಲ ಪ್ರಸಂಗ ಪರಿಚಯ - ಅಭ್ಯಾಸ ಎಂದು ಏರ್ಪಟ್ಟಿರಬಹುದು. ಪ್ರಸಂಗ ಎಂದರೆ ಕಥಾ ಕಾವ್ಯವು. ಅಂತೆಯೇ ಇಂಥಾ ಅಭ್ಯಾಸಗೋಷ್ಠಿಯನ್ನು "ಪ್ರಸಂಗ" ಎಂದು ಹೇಳಿರಬಹುದು. ಇದರಲ್ಲಿ ವೇಷವಿಲ್ಲ ಕುಣಿತವಿಲ್ಲ. ಬರೇ "ತಾಳಮದ್ದಳೆ" ಎಂದಷ್ಟೇ ಹೇಳ ಹೊರಟು ಇದು ಮತ್ತೆ "ತಾಳಮದ್ದಳೆ" ಎಂದು ಅನ್ನಿಸಿಕೊಂಡಿರಬಹುದು. ಹೇಗೂ ಇದರಲ್ಲಿ ಪೌರಾಣಿಕ ಕಥಾವಿಸ್ತರವೇ ಮುಖ್ಯವು. ವ್ರತೋಪವಾಸಗಳಲ್ಲಿ ರಾತ್ರೆ ಜಾಗರಣೆಯನ್ನೂ ಮಾಡಬೇಕಷ್ಟೆ. ರಾತ್ರೆಗೆ ಇದನ್ನೇ ಮಾಡಿದರೆ ಅನುಕೂಲಕ್ಕೂ ಆಯಿತು ಅಭ್ಯಾಸಕ್ಕೂ ಆಯಿತು ಎಂದು ಇದನ್ನು ಬಳಸಿಕೊಂಡು "ಜಾಗರ" ಎಂದು ಹೇಳಿದ್ದರೂ ಹೇಳಿರಬಹುದು; ಅಥವಾ ಇದಕ್ಕಾಗಿ ರಾತ್ರೆ ನಿದ್ರೆ ಬಿಟ್ಟು ಜಾಗರಣೆ ಮಾಡುವುದೇ ಆದುದರಿಂದ "ಜಾಗರ" ಎಂದು ಹೇಳಿದರೋ ಏನೋ? ಅಂತೂ ಕಂಡು ಕೇಳಿ ಒಂದೊಂದು ಕಡೆ ಒಂದೊಂದು ಹೆಸರನ್ನೋ ತರಹವನ್ನೋ ಅಳವಡಿಸಿಕೊಂಡು ಬಂದಿರಬಹುದು; ಕೆಲವು ಮಂದಿ ಒಂದು ರೀತಿಯಿಂದ ಮೆಚ್ಚಿ ತಕ್ಕಷ್ಟು ಪ್ರೋತ್ಸಾಹವನ್ನೂ ಇತ್ತಿರಬಹುದು.

ಏನೋ ಒಂದನ್ನು ಹೇಗೋ ಕಂಡುಕೊಂಡು ಆಯಿತು. ಅದು ಜೀವನಕ್ಕೂ ಒಂದಿಷ್ಟು ಆಧಾರವಾದರೆ ಆಗಲಿ ಎಂದು ಭಾವಿಸಿ ಅದನ್ನು ಸಂಚಾರಯೋಗ್ಯವಾಗಿ ಪರಿವರ್ತಿಸಿಕೊಂಡಿರಲೂ

ಬಹುದು. ಇಂಥಾ ಕಾರ್ಯದಲ್ಲಿ ಸೇರಿಕೊಂಡವರು ಹೆಚ್ಚಾಗಿ ಆ ವಿಶಿಷ್ಟ ವರ್ಗದವರೆಂಬುದನ್ನು ಸೂಚ್ಯವಾಗಿ ನಿರ್ದೇಶಿಸುವುದಕ್ಕೋ ಅಥವಾ ಗುಂಪಾಗಿ ಕೂಡಿಕೊಂಡುದು ಎನ್ನುವುದಕ್ಕೋ ಈ ಸಂಚಾರೀ ಪರಿವಾರವನ್ನು ಜನ "ಮೇಳ" ಎಂದು ಕರೆದಿರಬಹುದು. ಇಂಥವುಗಳು ಅಲ್ಲಲ್ಲಿ ಏರ್ಪಟ್ಟು ಸಂಚರಿಸತೊಡಗಿದಾಗ ಇಂಥಲ್ಲಿಯ 'ಮೇಳ' ಎಂದು ನಿರ್ದೇಶಿಸುವಲ್ಲಿ ಆಯಾ ಊರು ದೇವಸ್ಥಾನಗಳ ಹೆಸರು ಹೇಳಿ ಕೂಡಿಸಿ ಕರೆದಿರಬಹುದು. ಆಯಾ ದೇವಸ್ಥಾನಗಳ ಕೀರ್ತಿ ಕಾರಣಿಕಗಳು ಹೆಚ್ಚಿ ಪಸರಿಸುವುದಕ್ಕೂ ಈ ಸಂಚಾರವು ಕಾರಣವಾಗಿ ಪರಿಣಮಿಸುವುದರಿಂದ ಆಯಾ ದೇವಸ್ಥಾನಗಳ ವತಿಯಿಂದ ತಕ್ಕಷ್ಟು ಆಸರೆಯು ಕೂಡಾ ಒದಗಿರಬಹುದು. ಅಂತೆಯೇ ದೇವರ ಸಂಸಾರವು ಸ್ವಸ್ಥಾನದಲ್ಲಿ ಪರಿವಾರವು ಸಂಚಾರದಲ್ಲಿ ಎಂದು ಆಗಿರಬಹುದು.

ಈ 'ಮೇಳ'ಗಳು ಸಂಚಾರೀ ಶೀಲವುಳ್ಳವುಗಳಾದುದರಿಂದ ಅಲ್ಲಲ್ಲಿನ ಭಿನ್ನ ಭಿನ್ನ ರುಚಿಗಳನ್ನು ಕೂಡಿಸಿಕೊಳ್ಳಬಾರದೆಂದೇನು? ನಿಯತವಾದ ಶಾಸ್ತ್ರವಾಗಲೀ ಕಟ್ಟುಪಾಡಾಗಲೀ ಇಲ್ಲದ ಮೇಲೆ ಕಂಡು ಕೇಳಿ ಮೆಚ್ಚಿಕೆಯಾದುದನ್ನು ಕೂಡಿಸಿಕೊಂಡಿರಬಹುದು. ಮಂಗಳೂರವರು ಮೈಸೂರು ಕಡೆ ಹೋದರೆ "ಏನ್ರೀ" "ಹ್ಯಾಗ್ರೀ" ಎಂದು ಕೆಲವು ಮಂದಿ ಪ್ರಾರಂಭಿಸಿಯೇ ಬಿಡುತ್ತಾರೆ. ಇಂಥಾ ಅಣಕವೇ ಅಭ್ಯಾಸಗೊಂಡು ಅನುಕರಣೆಯಾಗಿ ಅನುಷ್ಠಾನದಲ್ಲಿ ಸೇರಿ ಹೋಗುವುದು ಅಸ್ವಾಭಾವಿಕವೇನೂ ಅಲ್ಲ. ಕೆಲವೊಮ್ಮೆ ಹೆರವರನ್ನು ದೂಷಿಸಿಯೇ ತಮ್ಮದರ ಶ್ರೇಷ್ಠತೆಯನ್ನು ಸ್ಥಾಪಿಸುವ ಪರಿಪಾಠವು ನಮ್ಮಲ್ಲಿ ಧಾರಾಳವಾಗಿದೆ ಎಂಬುದನ್ನು ಪ್ರಾಮಾಣಿಕತೆಯಿಂದ ಒಪ್ಪಿಕೊಂಡರೇನು? ಹೇಗೂ "ತೆಂಕು ತಿಟ್ಟು" "ಬಡಗು ಮಟ್ಟು" ಎಂಬೆರಡು ಪ್ರಾದೇಶಿಕ ವ್ಯತ್ಯಾಸಗಳು ಸದ್ಯ "ಯಕ್ಷಗಾನ"ದಲ್ಲಿ ಇದ್ದೇ ಇವೆ. ತೆಂಕಿನ ರಾಕ್ಷಸ ಪಾತ್ರಕ್ಕೆ "ಕಥಕ್ಕಳಿ"ಯ ಸೋಂಕು ಎಂದರೆ ಬಡಗಿನ ಪಗಡೀ ವೇಷಕ್ಕೆ ಮರಾಠರ ಮುಂಡಾಸಿನ ಪ್ರಭಾವ ಎನ್ನುತ್ತಾರೆ; ದಕ್ಷಿಣದ ಚೆಂಡೆ ಭೂತದ ಡೋಲಿನ ಮಾದರಿ ಎಂದರೆ ಉತ್ತರದ ಚೆಂಡೆ ಭೂತಕುಣಿಸುವ ವಾದ್ಯದ 'ತಾಸೆ' ಎನ್ನುತ್ತಾರೆ. ಇವುಗಳ ಸತ್ಯಾಸತ್ಯತೆಗಳಿಗೆ ಸದ್ಯ ಸಂದೇಹವೇ ಆಧಾರವು. ಅಂತೂ ಇಂದಿನ ಸ್ಥಿತಿಯಲ್ಲಿ ಯಾವ ಯಾವುದೋ ಒಂದಕ್ಕೊಂದು ಸೇರಿ 'ಕೂಡಿಕೆ'ಯಾಗಿ ಇಂಥಾ ಮೇಳಗಳ ಸ್ವರೂಪವು ಏರ್ಪಟ್ಟಿರಬೇಕು ಎನ್ನೋಣವೇ? ಆದರೂ ಇದು "ಯಕ್ಷಗಾನ" ಎಂದು ಹೇಗಾಯಿತು?

ಕ್ರಮೇಣ ಕೆಲವು ಮಂದಿ ಇದನ್ನು ಯಾಕೋ ಮೆಚ್ಚುತ್ತ ಬಂದಿರಬೇಕು; ಕೆಲವು ಮಂದಿಯನ್ನು ಇದು ಇನ್ಯಾವುದೋ ಕಾರಣದಿಂದ ಆಕರ್ಷಿಸುತ್ತಾ ಬಂದಿರಬೇಕು. ಇದನ್ನೆಲ್ಲಾ ಅವಲೋಕಿಸಿದ ಸುಶಿಕ್ಷಿತರಲ್ಲಿ ಕೆಲವರು ಈ ಕುರಿತು ಆಲೋಚಿಸಿರಬಹುದು. ಅವರ ಚಿಂತನೆಗೆ ಇದೊಂದು ವಿಷಯವಾಗಿ ಪರಿಣಮಿಸಿರಬಹುದು; ಹಾಗೆಯೇ ಇದರಲ್ಲಿ ಒಂದು ಬಗೆಯ ಸೊಗಸಿದೆ,– ಸೌಂದರ್ಯವಿದೆ ಎಂದು ಅಂಥವರಿಗೆ ಅನ್ನಿಸಿರಬಹುದು. ಅಂತಹರಲ್ಲಿ ಕೆಲವರು ಚಿಕಿತ್ಸಕ ಬುದ್ಧಿಯಿಂದ ಇದನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ವಿವೇಚಿಸಿರಬಹುದು. ಹೇಗೆ? ಕುಣಿತವಿದೆ, ಗಾನವಿದೆ, ವಾದ್ಯವಾದನವಿದೆ, ವೇಷ ಭೂಷಣವಿದೆ, ಅಭಿನಯವೂಯಿದೆ, ಮೇಲಾಗಿ ಪ್ರಸಂಗ ಸಾಹಿತ್ಯವೂ ಇದೆ; ಸರಿಯಾಗಿ ಎಂದು ಅಲ್ಲದಿದ್ದರೂ ಇದೆಯಲ್ಲಾ! ಅದೂ ಇಂಥಾ ಕೀಳು ಜನರಲ್ಲೇ ಉಳಿಯಿತಲ್ಲಾ! ಏನು ಮಾಡಬಹುದು? ಎಂದು ಕೂಡಾ ಅವರು ಚಿಂತಿಸಿರಬಹುದು. ಇವರ ತಾಳ್ಮೆಯ ಕಿಲುಬು ತೊಡೆದು ಹೋಗಿ ಎಲ್ಲರಿಗೂ ಇದರಲ್ಲಿ ಭಾಗವಹಿಸಿ ಗೌರವವನ್ನೂ ಉಳಿಸಿ ಕೊಳ್ಳಲು ಅವಕಾಶವಾಗಲಿ - ಎಂದು ಅವರು ಹಾರೈಸಿರಬಹುದು. ಅದಕ್ಕಾಗಿ ಪ್ರಯತ್ನಿಸಿರಬಹುದು.

ದೇವಸ್ಥಾನ ಪರಿಸರಗಳೇ ಇದಕ್ಕೆ ಉಗಮಸ್ಥಾನವಾದರೆ - ಅಲ್ಲಿನ ಊಳಿಗದವರೇ ಬಹ್ವಂಶ ಇದರ ಹುಟ್ಟಿಗೆ ಕಾರಣರಿರಬೇಕು - ಹಾಗೆಂದಾದರೆ ಅವರಿಂದಲೇ ಕಂಡುಕೊಳ್ಳಲ್ಪಟ್ಟ ಇದು ಅವರ ಹೆಸರಲ್ಲಿಯೇ ಮುಂದೆ ವೃದ್ಧಿಗೊಳ್ಳುವುದು ವಿಹಿತವು. "ಯಕ್ಷ್" ಎಂದರೆ ಪೂಜಿಸು - "ಯಕ್ಷ" ಎಂದರೆ

ಪೂಜಿಸುವವನು, ದೇವಾಲಯದ ಊಳಿಗದವರು ದೇವರ ಸೇವೆಯನ್ನೇ ಮಾಡುವವರು. ಸೇವೆಯೂ ಒಂದು ವಿಧದ ಪೂಜೆಯೇ ಹೌದು. ಅದರಂತೆ-ದೇವಸ್ಥಾನದಲ್ಲಿ ದೇವರನ್ನು ವಿಧ ವಿಧವಾಗಿ ಪೂಜಿಸುವ ಮತ್ತು ಅದರಲ್ಲಿ ಸಹಕರಿಸಿ ಸಹಭಾಗಿಗಳಾಗುವ ಆ ಅವರೆಲ್ಲರೂ "ಯಕ್ಷರು" ಎಂದು ಕರೆಯಲ್ಪಡಲು ಸಾಧ್ಯವಿದೆ. "ಯಕ್ಷ"ರೆಂಬ ಒಂದು ಜನವರ್ಗವನ್ನು "ದೇವವರ್ಗ"ದವರು ಎನ್ನುತ್ತಾರೆ. ದೇವಸ್ಥಾನದಲ್ಲಿ ಊಳಿಗ ಮಾಡುವ ಆ ಅವರಿಗೆ ದೇವಸ್ಥಾನದಲ್ಲಿ ದೇವರ ಸಾಮಿಪ್ಯವು ಇತರರಿಗಿಂತ ಹೆಚ್ಚು. ಇತರರನ್ನು ವರ್ಗೀಕರಿಸುವಲ್ಲಿ ಇಂಥವರನ್ನು 'ದೇವವರ್ಗ'ದವರೆಂದೇ ಅನ್ನಬಹುದು. ದೇವರ ಎಣ್ಣೆಯನ್ನೇ ಮೈಮಂಡೆಗಳಿಗೆ ಎರೆದುಕೊಂಡು, ದೇವರ ಕೆರೆಯಲ್ಲೇ ಸ್ನಾನವನ್ನೂ ಮಾಡಿ, ದೇವರ ಅನ್ನವನ್ನೇ ಉಂಡು ದೇವ ಮಂದಿರದ ವಠಾರದಲ್ಲೇ ಉಳಿದುಕೊಳ್ಳುವ ದೇವರ ಊಳಿಗದವರನ್ನು ಲೋಕದಲ್ಲಿ 'ದೇವವರ್ಗ'ದವರು ಎನ್ನುವುದನ್ನು ಯಾಕೆ ಆಕ್ಷೇಪಿಸಬೇಕು? ದೇವರ ನರ್ತನಸೇವೆಯ ನರ್ತಕಿಯು 'ದೇವದಾಸಿ'ಯಾದರೆ-ಉಳಿದ ಸೇವೆಗೆ ನಿಯುಕ್ತರಾದವರು 'ದೇವವರ್ಗ'ದವರು ಎಂದು ಯಾಕಾಗಬಾರದು? ಹಾಗೆ ಒಪ್ಪಿಕೊಂಡರೆ ದೋಷವೇನೂ ಇರಲಾರದೆಂದು ನಂಬೋಣವೇ? ಹಾಗಾದರೆ ಈ ನಮ್ಮೆಣಿಕೆಯಂತೆ ಇದನ್ನು 'ಯಕ್ಷರಗಾನ' ಎಂದು ಹೇಳಿರಬಹುದೇ? ಹೇಗೂ ಸಂಗೀತವನ್ನು "ಗಂಧರ್ವಗಾನ" ಎಂದು ಕೆಲವರು ಹೇಳುತ್ತಾರೆ. ಆ ಸಾಲಿನ ಮನ್ನಣೆಗೆ ಇದು ತಕ್ಕುದಾಗಲಿ ಎಂದು ಆಶಿಸಿ ಸಯುಕ್ತಿಕವಾಗಿ ಇದನ್ನು "ಯಕ್ಷಗಾನ" ಎಂದು ಹೇಳಿದ್ದರೂ ಹೇಳಿರಬಹುದು. ಸದ್ಯ ಇತ್ತಿತ್ತ "ಕಿನ್ನರ ನೃತ್ಯ" ಎಂಬುದು ಕೂಡಾ ಒಮ್ಮೆ ಬಂದುಹೋಯಿತು. ಆದರೆ ಕಿನ್ನರರು ಬರಲಿಲ್ಲ-ಜೋಗಿಯ ಕಿಂದರಿಯೂ ಹೋಗಲಿಲ್ಲ. ಮುಂದೆ "ಸಿದ್ಧ"ರದೋ "ಸಾಧ್ಯ"ರದೋ ಏನಾದರೂ ಬಂದರೆ ಬೇಡ ಎನ್ನುವುದು ಹೇಗೆ? "ಭೂತ ಪ್ರೇತಗಳ ಕಥೆಗಳನ್ನೂ ಆಟ ಆಡಿ ಬೆಲೆ ಬರಿಸುವ ನಮ್ಮ ಜನಪ್ರೀತ ಮಧ್ಯಸ್ಥರು ಮುಂದೆ ಯಾವುದನ್ನು ಬಿಟ್ಟಾರು"? ಎಂದು ಕೆಲವರು ಒಂದು ಕಡೆಯಿಂದ ಹೇಳುತ್ತಲೇ ಇದ್ದಾರೆ. ಹೀಗೆ ಹೇಳುವುದು ಸರಿಯೋ? ಮಾಡುವುದು ಸರಿಯೋ? ನಿರ್ಧರಿಸುವುದು ಹೇಗೆ? ಯಾರು? ಕೇವಲ ಚಿಂತನೆಯಿಂದ ಏನು ಮಾಡುವುದಕ್ಕಾದೀತು?

ಈ "ಯಕ್ಷಗಾನ"ವೆಂಬುದು ಮುಖ್ಯವಾಗಿ ಒಂದು 'ಕಲೆ' ಎಂತಲೂ, ವಿಶೇಷವಾಗಿ ಒಂದು 'ಕಲಾಗುಚ್ಛ'ವೆಂತಲೂ ಹೇಳುತ್ತಾರೆ. ಇದು ಒಂದು ರೀತಿಯ ಜನಾದರಣೆಯನ್ನು ಪಡೆಯಲು ಇದರ ಭಾಗವತ ಕವಿಗಳು ಕಾರಣರಾಗಿರಬಹುದೇ? ಹೇಗೂ ಪ್ರಸಂಗ ಸ್ವಾತಂತ್ರ್ಯವು ಅವರ ಕೈಯಲ್ಲಿ. "ಪೇಳುವೆನು ಯಕ್ಷಗಾನದಲಿ..." ಎಂದು ವೊದಲಾಗಿ ಅವರು ತಮ್ಮ ಪ್ರಸಂಗ ಕಾವ್ಯದಲ್ಲಿ ಒಕ್ಕಣಿಸಿ "ಯಕ್ಷಗಾನ" ಎಂಬ ಪದವು ಸಾರ್ವತ್ರಿಕವಾಗಿ ಬಳಕೆಗೊಳ್ಳುವಂತೆ ಅವರೇ ಪ್ರಚಾರ ಪಡಿಸಿರಬಹುದೇ? ಹಾಗೇ ಈ ಕಲೆಯ ವೈಶಿಷ್ಟ್ಯವನ್ನು ವ್ಯಕ್ತ ಪಡಿಸುವುದಕ್ಕೆ ಹೆಚ್ಚಿನಂಶ ಅಂಥವರೇ ಪ್ರಯತ್ನಿಸಿರಬಹುದೋ ಏನೋ? ಆದರೂ ಮುಮ್ಮೇಳದವರು ಹದಗೊಳ್ಳಬೇಕಲ್ಲ! ಪ್ರಾಯಶಃ ಬೇಗನೇ ಆಗಿರಲಿಕ್ಕಿಲ್ಲ. ಆ ಪ್ರಯತ್ನವೂ ನಿರರ್ಥಕವಾಗಿರಲಾರದು; ಬಹಳ ಮಂದಗತಿಯಿಂದಲೇ ಸಾಗುತ್ತಿದ್ದಿರಬಹುದು. ಅದೇ ಸುಮಾರಿಗೆ ಭಾಗವತರಲ್ಲದ ಕವಿಗಳು ಕೂಡಾ ಕೆಲವರು ಪ್ರಸಂಗ ರಚನೆಗೆ ಮನಸ್ಸು ಮಾಡಿರಬೇಕು. ಅವರೂ ಇದೇ ಪದ್ಧತಿಯನ್ನನುಸರಿಸಿ "ಯಕ್ಷಗಾನದೊಳೊರೆವೆಂ..." ಎಂದು ಪ್ರಾರಂಭಿಸಿರಬೇಕು. ಈ ಎಲ್ಲರೂ 'ಯಕ್ಷಗಾನ ದಲ್ಲಿ 'ಹೇಳುತ್ತೇವೆ' ಎಂದು ಹೇಳಿದರೇ ಹೊರತು "ಯಕ್ಷಗಾನ"ವು ಹೇಗೆ? ಎಂದು ಹೇಳಿದಂತಿಲ್ಲ. ಆದುದರಿಂದ ಅದು ಶಾಸ್ತ್ರೀಯವಲ್ಲ 'ದೇಸಿ' ಎಂದು ಮತಿವರ್ಗದ ಮುಖಂಡರೆಂಬವರು ಆಕ್ಷೇಪಿಸಿ ತೊಡಕನ್ನು ತಂದಿಟ್ಟಿರಬೇಕು. ಆದರಿಂದ ಚೇತರಿಸಿಕೊಳ್ಳುವುದಕ್ಕೆ ಸ್ವಲ್ಪ ಕಾಲಾವಕಾಶವೂ ಬೇಕಾಗಿ ಬಂದಿರಬಹುದು. ಪ್ರಸಂಗ ರಚಯಿತರು "ಈ ಕಥೆಯನ್ನು ಯಕ್ಷಗಾನದಲ್ಲಿ ಹೇಳುತ್ತೇನೆ" ಎಂದು ಹೇಳಿದರೂ 'ರಾಗ' 'ತಾಳ'ಗಳನ್ನು ಸಂಗೀತದಿಂದಲೇ ಬಳಸಿಕೊಂಡರು; ಒಮ್ಮೊಮ್ಮೆ ನಿರ್ಧಾರವಿಲ್ಲದಾಗ ಯಾವುದೋ ಪದ್ಯದ ಸೊಲ್ಲನ್ನೆತ್ತಿಕೊಂಡು "...ಓ..." "ಎಂಬಂತೆ ಎಂದು ರಾಗವನ್ನು

ನಿರ್ದೇಶಿಸಿದರು, ಎಂದು ಕಂಡುಬರುತ್ತದೆ. ಅಂತೂ ಸಹೃದಯಿಗಳೂ, ಪ್ರಯತ್ನಶೀಲರೂ ಆದ ಆ ಕವಿಗಳು ಪ್ರಸಂಗ ಸಾಹಿತ್ಯವನ್ನಷ್ಟು ಯಥಾಸಾಧ್ಯವಾಗಿ ಪರಿಷ್ಕರಿಸಿ ಅದು ಕಳೆ ಕಟ್ಟುವಂತೆ ಮಾಡಿದರು; ಆ ಋಣ ಭಾರವು ಏನೇನೂ ಕಡಿಮೆಯಲ್ಲ. ಆದರೂ ಏನು? ಕಥೆ ಪುರಾಣದ್ದು, ರಾಗ ತಾಳಗಳು ಸಂಗೀತದ್ದು, ಭಾವ ಭಾಷೆಗಳು ಅವರದ್ದೇ; ಮತ್ತೆ ಅವರು "ಯಕ್ಷಗಾನದಲ್ಲಿ ಹೇಳಿದ್ದಾದುದು ಏನನ್ನು? ಕೇವಲ ಆ ಪದ ಪ್ರಚಾರವನ್ನಷ್ಟೇ ಮಾಡಿ ಚಿಂತನೆಗೊಂದು ಗೊಂದಲದ ಅವಕಾಶವನ್ನು ಮಾತ್ರ ಕಲ್ಪಿಸಿದರು ಎನ್ನೋಣವೇ? ಹೇಗೆ? ಹೇಗೂ 'ಯಕ್ಷಗಾನ' ಎಂದು ನಾವಿದನ್ನು ಹೇಳಲು ಒಪ್ಪುತ್ತ ಬಂದೆವು. ಮುಂದೆಯೂ ಹಾಗೆಯೇ ಹೇಳೋಣ. ಯಾಕೆ? ಮತ್ತೆ ಯಾಕಾಗಿ ಅಲ್ಲದಿದ್ದರೂ ನಮ್ಮ ಹಿಂದಿನವರು ಹಾಗೆ ಹೇಳಿದರು ಎಂಬುದರಿಂದ 'ಗತಾನುಗತಿಕ'ವಾಗಿ ಎಂದಾದರೂ ಒಪ್ಪಿ ಹಾಗೆಯೇ ಹೇಳೋಣ. ಸದ್ಯ ಅದೇ ಹೆಸರು ಸರ್ವಸಮ್ಮತವಾಗಿ ಬಳಕೆಯಲ್ಲೂ ಇದೆ.

"ಯಕ್ಷಗಾನ" ಎಂದರೆ ಏನು? ಎಂಬುದನ್ನು ಯಥಾ ಸಾಧ್ಯವಾಗಿ ಊಹಿಸಿ ನೋಡಿದೆವು; ನಿರ್ಣಯಕ್ಕೆ ಬಂಜೆಯ ಮಗನ ಉದಾಹರಣೆಯೇ ಹೊಂದಿ ಬರಬಹುದು. ಆಗಲಿ ಇನ್ನು ನಮ್ಮ ಆ ಕವಿವಾಣಿಯನ್ನವಲೋಕಿಸಿ ಏನಾದರೂ ತಿಳಿವಿನ ಸುಳಿವು ಮೂಡೀತೇ? ಎಂಬುದನ್ನು ನೋಡೋಣ. ಅಂತೆಯೇ "ಯಕ್ಷಗಾನದಲಿ..." ಎಂದರೆ ಏನು? ಹೇಗೆ? ಎಂದು ವಿವೇಚಿಸಲು ಪ್ರಯತ್ನಿಸೋಣ "ಯಕ್ಷಗಾನದಲಿ ಹೇಳುವೆನು..." ಎನ್ನುವಾಗ ಅದೊಂದು ವಿಶಿಷ್ಟವಾದ ಗಾನ ಪದ್ಧತಿಯಾಗಿರಬೇಕು ಎಂದು ಅನಿಸುತ್ತದೆ. ಸಂಗೀತದ ರಾಗತಾಳಗಳುಳ್ಳ ಪದ್ಯಗಳನ್ನು ಯಕ್ಷಗಾನ ಪದ್ಧತಿಯಲ್ಲಿ ಹೇಳುವುದು ಹೇಗೆ? ಅದನ್ನು ಹೇಳಿಯೇ ವ್ಯಕ್ತಪಡಿಸಬೇಕು. ಯಾರು ಹಾಡು ತಿಳಿದನರು, ಯಕ್ಷಗಾನ ಭಾಗವತರೆಂಬವರ ದಾರಿ ಒಬ್ಬೊಬ್ಬರದು ಒಂದೊಂದು. ಅದು ಕುರುಡರು ಕಂಡ ಆನೆಯೇ ಆಗಿತ್ತು. ಎನ್ನಬಹುದೇ? ಕೆಲವರಂತೂ ಒಂದು ಕಾಲದಲ್ಲೊಮ್ಮೆ ದೊಡ್ಡವರನ್ನು ಅಣಕಿಸುವುದೇ ತಮ್ಮ ಪರಿಣತಿ ಎಂದು ತಿಳಿದಿದ್ದಂತೆ ಭಾಗವತಿಕೆಯನ್ನು ನಿರ್ವಹಿಸುತ್ತಿದ್ದರು. ನಮ್ಮೆಣಿಕೆಯಂತೆ ಅದು ಅದರ ಪೂರ್ವ ವಾಸನಾ ಫಲದ ಪ್ರಭಾವವೇ ಆಗಿರಬೇಕು. ಆ ಕಾಲವು ಇಂದಿಗೆ ಬಹಳ ಹಿಂದೇನೂ ಅಲ್ಲ.

ಸೊಗಸಾದ ಪ್ರಸಂಗ ಸಾಹಿತ್ಯ, ಚೆಲ್ವಾದ ರಾಗ ಭಾವಗಳು, ಪವಿತ್ರವಾದ ಪುರಾಣ ಕಥೆ, ಆದರೂ ಮನಸ್ಸಿಗೆ ಬಂದಂತೆ ಹಾಡುವ ಹವ್ಯಾಸವೇ ಅಭ್ಯಾಸದಲ್ಲಿರುವಾಗ, ಆಗಷ್ಟೇ ಎಳೆವಿಮೀಸೆ ಮೂಡುತ್ತಿದ್ದ ಬಲಿಪ ನಾರಾಯಣ ಭಟ್ಟರೆಂಬವರು ಈ ಕಡೆ ತಮ್ಮ ಲಕ್ಷ್ಯವನ್ನು ಹರಿಯಿಸಿದರಂತೆ. ಹಾಗೆಯೇ ಮೊದಲು ಶಾಸ್ತ್ರೋಕ್ತವಾಗಿ ಗುರುಮುಖದಿಂದ ಸಂಗೀತವನ್ನು ಕಲಿತು ಮತ್ತೆ ಈ ಪ್ರಸಂಗಗಳನ್ನು ಪರಿಶೀಲಿಸಿ "ಯಕ್ಷಗಾನದಲಿ..." ಎಂದರೆ ಏನು? ಹೇಗೆ? ಎಂಬುದನ್ನು ಕೂಲಂಕಷವಾಗಿ ಚಿಂತಿಸಿ ಮನನ ಮಾಡಿಕೊಂಡರಂತೆ. ಆಗ ಅವರು ಕಂಡುಕೊಂಡ ಆ ದಾರಿಯಲ್ಲಿ ಅಂದಿನ ಆ ಚೆಂಡೆ ಮದ್ದಳೆಗಳೆಂಬ ಪಕ್ಕವಾದ್ಯಗಳ ವಾದನ ವಿಧಾನವೇ ಅವರಿಗೆ ತೊಡಕಾಗಿ ತೋರಿತಂತೆ. ಅಂತೆಯೇ ಅವರು ಮತ್ತೆ ಅದನ್ನೂ ಸರಿಯಾಗಿ ಕಲಿತು ಆಳವಾಗಿ ಸಂಶೋಧನೆಯನ್ನೂ ಮಾಡಿ ಪರಿಷ್ಕರಿಸಿ ಹೊಂದಿಕೆಯಾಗುವಂತೆ ವಾದನ ಪರಿಣತರನ್ನೂ ಹೊಸತಾಗಿ ಸಿದ್ಧಗೊಳಿಸಿಕೊಂಡು ತನ್ನ ತಪೋಗಮ್ಯವಾದ ಪೂರ್ವನಿಯೋಜಿತ ಕ್ರಮದಿಂದ ಹಾಡುವುದಕ್ಕೆ ಪ್ರಾರಂಭಿಸಿದರಂತೆ. ಹೀಗೆ "ಯಕ್ಷಗಾನದಲಿ..." ಈ ಸಾಹಸದ ಫಲವೇ ಮುಂದೆ ಅವರಿಗೆ "ಬಲಿಪ ಭಾಗವತ"ರು ಎಂಬ ಜನಪ್ರೀತವಾದ ಹೆಸರು ಎಂದೆಂದಿಗೂ ಉಳಿಯುವಂತೆ ಮಾಡಿತು ಎನ್ನುತ್ತಾರೆ.

ನನಗೆ ಈ ನಮ್ಮ "ಬಲಿಪ ಭಾಗವತ"ರ ಬಳಕೆಯ ಪರಿಚಯವಾದುದು ಅವರ ಅಪರ ವಯಸ್ಸಿನಲ್ಲಿ. ಅವರ ಹಾಡುಗಾರಿಕೆಯನ್ನು ಕೆಲವು ಬಾರಿ ಕೇಳಿದ ಮೇಲೆ ನನಗೂ ಆ "ಯಕ್ಷಗಾನದಲಿ .." ಎಂಬ ಗಾನಪದ್ಧತಿಯ ವೈಶಿಷ್ಟ್ಯದ ಹೊಲಬು ಒಂದಿಷ್ಟು ಮನವರಿಕೆಯಾಗತೊಡಗಿತು. ಹೀಗಿದ್ದರೆ ಮಾತ್ರ ಆ ವಿಶಿಷ್ಟತೆಯು ವ್ಯಕ್ತವಾದೀತು. ಅಭಿವ್ಯಕ್ತಿಯು ಸಾರ್ಥಕವಾದೀತು. ಔಚಿತ್ಯವು

ತುಂಬಿ ಬಂದೀತು - ಎಂದು ಅನ್ನಿಸಿತು. ಹಾಡುವುದಕ್ಕೆ ನನ್ನಿಂದ ಆಗಲೇ ಆರದು - ಆದರೆ ಹಾಡಿದ್ದನ್ನು ಕೇಳಿ ಅನುಭವಿಸುವ ಕುತೂಹಲವು ಬಿಟ್ಟು ಹೋಗಲೂ ಆರದು ಅಂತೆಯೇ ಆ ವೈಶಿಷ್ಟ್ಯ ಪೂರ್ಣವಾದ ಆ ಗಾನ ಪದ್ಧತಿಯ ಸಾರ್ಥಕ ಪ್ರಭಾವವು ನನ್ನ ಮನಸ್ಸಿಗೆ ವಿಹಿತಾನಂದವನ್ನು ನೀಡುತ್ತಿತ್ತು; ನನಗೆಂದೇನು? ನನ್ನಂತೆಯೇ ಬಹು ಮಂದಿಗೆ ಅದು ನನಗಿಂತಲೂ ಮೊದಲು ಆ ಸುಖವನ್ನಿತ್ತುದರಿಂದಲೇ ನನಗೆ ತಿಳಿವು ಮೂಡುತ್ತಿದ್ದಾಗ ಅವರು ಸುಪ್ರಸಿದ್ಧ "ಯಕ್ಷಗಾನ ಭಾಗವತ"ರಾಗಿದ್ದರು.

ಲಾಕ್ಷಣಿಕರು ಕಾವ್ಯಕ್ಕೆ "ರಸಜೀವಂ..." ಎಂದು ಮುಂತಾಗಿ ಲಕ್ಷಣಗಳನ್ನು ಹೇಳಿದ್ದಾರೆ. ಕಾವ್ಯವೂ ಕಾವ್ಯದ ಪ್ರತಿಯೊಂದು ಪದ್ಯವೂ ನಿಯತವಾದ ಲಕ್ಷಣಗಳಿಂದ ಕೂಡಿರಬೇಕು. ಅವುಗಳಲ್ಲಿ ಪ್ರತಿಪಾದ್ಯವಾಗುವ "ರಸ"ವೇ ಅದಕ್ಕೆ ಜೀವವು. ಇದು ಯಕ್ಷಗಾನ ಪ್ರಸಂಗಗಳ ಕುರಿತೂ ಅನ್ವಯಿಸಲ್ಪಡಬೇಕು. ಅಲ್ಲಿ ಹಾಡಿನ, 'ರಸ'ವೇ ಜೀವ, 'ರಾಗ'ವೇ ದೇಹ, 'ತಾಳ'ವೇ ನಡೆವಳಿಯು. ಯಕ್ಷಗಾನದಲ್ಲಿ ಹಾಡುವ ಕಾರ್ಯವನ್ನು ಸಾಮಾನ್ಯವಾಗಿ "ಪದಹೇಳುವುದು" ಎನ್ನುತ್ತೇವೆ. ಪದವೆಂಬುದು ಒಟ್ಟಿನಲ್ಲಿ ಪದ್ಯವೇ ಆಗಿದ್ದರೂ ಆ ಪದ್ಯವು ಅದರ ಛಂದಸ್ಸಿಗೆ ಅನುಗುಣವಾಗಿ ಎರಡೋ ಮೂರೋ ನಾಲ್ಕೋ ಆರೋ ಅಥವಾ ಎಂಟೋ ಚರಣಗಳಿಂದ ಕೂಡಿರುತ್ತದೆ. ಚರಣವನ್ನು ಕೂಡಾ "ಪಾದ", "ಪದ", ಎನ್ನುತ್ತಾರೆ. ಪದ್ಯದ ಪ್ರತಿ ಒಂದು ಚರಣದಿಂದ ತೊಡಗಿ ಪ್ರಸಂಗದ ಪರಿಪೂರ್ಣ ಪೂರೈಕೆಯವರೇಗೆ ಪದ ಹೇಳುವ ಕಾರ್ಯವಿಶೇಷವನ್ನೇ ನಾವು "ಭಾಗವತಿಕೆ" ಎನ್ನುವುದು, ಪ್ರತಿ ಪದ ಪದವು ಪದ್ಯಕ್ಕೂ ಪದ್ಯಗಳು ಒಟ್ಟಿನಲ್ಲಿ ಪ್ರಸಂಗಕ್ಕೂ ಪೂರಕವಾಗಿರಬೇಕು. ಅದು ಹಾಗೆಯೇ ನಿಯತ ಕ್ರಮದಿಂದ ಹೊಂದಿಕೊಂಡಿದೆ ಎಂಬುದನ್ನು ಹಾಡಿಯೇ ವ್ಯಕ್ತಪಡಿಸಬೇಕು. ಪದ್ಯದ ಪದ ಪದಗಳ ರಸ ಭಾವ ವಿಶೇಷಗಳು – ಆ ಭಾವಬಿಂಬಿತ ಶಬ್ದಗಳ ಅರ್ಥಪೂರ್ಣತೆಯು ಗತಿಗಮನಗಳೊಂದಿಗೆ ಉಚಿತವಾದ ರಾಗ ತಾಳಗಳನ್ನೊಂದಿ ಹಾಡುವವನ ಹೃದಯವನ್ನು ಪರಿಪೂರ್ಣವಾಗಿ ಮೊದಲು ತುಂಬಿ, ಪದವಿನ್ಯಾಸದ ಸಂಚಲನೆಯಿಂದ ಹಾಗೆಯೇ ಉಕ್ಕಿ ಹರಿದು ಅಜಸ್ರಸ್ರೋತವಾಗಿ ಗಾನರೂಪದಿಂದ ಪ್ರವಹಿಸಬೇಕು. ಪಕ್ಕವಾದ್ಯಗಳು ಆ ಗಾನಸ್ರೋತದ ಸಂಚಾರ ವೈಶಿಷ್ಟ್ಯವನ್ನೊಂದಿ ನಿಯತವಾದ ಆ ತಾಳವಿನ್ಯಾಸದ ಸೊಬಗಿನಿಂದ ಪದಗತಿಯ ಲಾಲಿತ್ಯಕ್ಕೆ ಪೂರಕವಾಗಿ ಆ ರಸಭಾವಗಳನ್ನು ಪ್ರಚೋದಿಸಬೇಕು. ಯಾವ ರಸ ಭಾವವನ್ನು ರಾಗ ಮುಖದಿಂದ ಸಂಚಾಲನೆಗೊಳಿಸಬೇಕೋ ಆ ಅದರಲ್ಲಿ ಹಾಡುವವನು ಮೊದಲು ತನ್ಮಯನಾಗಿ ಲಯಿಸಿ ಆ ತನ್ನ ಅನುಭವವನ್ನು ಇನ್ನಿತರರೂ ಅಂತೆಯೇ ಅನುಭವಿಸುವಂತೆ ಗಾನರೂಪದಿಂದ ಅಭಿವ್ಯಕ್ತಗೊಳಿಸಬೇಕು. ಭಾವನಾ ಪ್ರಧಾನವಾಗಿ, ರಾಗ ರಸಗಳ ಐಕ್ಯತೆಯು ಸಾಮರಸ್ಯದಿಂದ ಚೈತನ್ಯಪೂರ್ಣವಾಗಿ ಪರಿಣತಿಯು ಪಾತ್ರಾಭಿನಯಕ್ಕೆ ಪೂರಕವಾಗಿ ಹಾಡಲ್ಪಡುವ ವಿಶಿಷ್ಟವಾದ ವಿಧಾನವೇ "ಯಕ್ಷಗಾನ"ವೆಂಬ ಗಾನ ಪದ್ಧತಿಯಾಗಿರಬೇಕೆಂದು ನನಗನಿಸುತ್ತದೆ. "ಹುಟ್ಟಿನಿಂದ ಜಂತುವೇ ಆಗಿದ್ದರೂ ಸಂಸ್ಕಾರದಿಂದ ದ್ವಿಜತ್ವವು ಪ್ರಾಪ್ತಿಸುವಂತೆ – ಸುಸಂಸ್ಕೃತವಾಗಿ ಮುಂದೆ ಪ್ರವೃದ್ಧಿಗೊಂಡು ಇದು ಜ್ಞಾನ ಪ್ರದಾಯಕವಾಗಬೇಕು"... ಎಂಬಿತ್ಯಾದಿ ಹಾರೈಕೆಯಿಂದ ಸಜ್ಜನರು ಇದನ್ನು ಪ್ರೋತ್ಸಾಹಿಸಿರಬೇಕು. ಎಷ್ಟೆಂದರೂ ನಮ್ಮೆಣಿಕೆಯಂತೆ ಇದು ದೇವಾಲಯ ಪರಿಸರದಲ್ಲೇ ಮೊದಲು ಹುಟ್ಟಿಕೊಂಡುದರಿಂದ ಆ ದೇವತಾ ಸಾನ್ನಿಧ್ಯದ ಅದೃಷ್ಟ ಶಕ್ತಿಯು ಇದ್ದೇ ಇರಬೇಕು; ಆದರೆ ಅದು ನಮ್ಮ ಕಾರ್ಯ ಸಾಧನೆಯ ಕರ್ಮಶುದ್ಧಿಯಿಂದ ಸಾರ್ಥಕಗೊಳ್ಳಬೇಕು. ಇದನ್ನು ನಾನು ಮನಗಂಡುದು ನಮ್ಮ ಬಲಿಪ ಭಾಗವತರ ಹಾಡುವಿಕೆಯನ್ನು ಕೇಳಿ ಅರ್ಥಮಾಡಿಕೊಂಡ ಮೇಲೆ; ಮುಖ್ಯವಾಗಿ ಇದು ದೃಢವಾದುದು ಘನತಪಸ್ವಿಗಳಾದ ಕಾಂಚಿಯ ಶ್ರೀ ಕಾಮಕೋಟಿ ಪೀಠಾಧಿಪ ಶ್ರೀ ಶ್ರೀಗಳವರ ಉಪದೇಶಾಮೃತದಿಂದ. ಕೆಲವು ವರ್ಷಗಳ ಕೆಳಗೆ ಶ್ರೀ ಶ್ರೀಗಳವರ ಸನ್ನಿಧಿಯಲ್ಲಿ ಒಂದು ತಾಳಮದ್ದಳೆಯು ನಡೆದಿತ್ತು. ಅದನ್ನು ಕೇಳಿದ ಮೇಲೆ ಪರಮಪೂಜ್ಯ ಶ್ರೀ ಶ್ರೀಗಳವರು "...ಇದನ್ನು ಬಿಡಬೇಡಿ – ಇದೊಂದು ಧರ್ಮ ಪ್ರವಚನ – ಜ್ಞಾನ ದಾನ .."

ಎಂದು ಮುಂತಾಗಿ ಅಪ್ಪಣೆ ಕೊಡಿಸಿ ಪೂರ್ಣಾಶೀರ್ವಾದವನ್ನು ಕರುಣಿಸಿದ್ದರು. ಆದರೂ ನನ್ನದು ಮೂಕಾಸ್ವಾದನೆಯೇ – ಮೃಷ್ಟಾನ್ನವನ್ನುಂಡು ಆನಂದಗೊಂಡ ಮೂಕನೊಬ್ಬನು ಆ ಕುರಿತು ತನ್ನ ಅನುಭವವನ್ನು ಹೇಳುವುದಾದರೂ ಹೇಗೆ? ಕೇವಲ ಮುಖಭಾವದಿಂದ ತೃಪ್ತಿಯ ಸಂತಸವನ್ನಷ್ಟು ವ್ಯಕ್ತಪಡಿಸಬಹುದು; ಅದೂ ಮನೋಭಾವದ ಪೂರ್ಣ ಪ್ರತಿಬಿಂಬವಾಗಲಾರದು.

ನಮ್ಮ ಬಲಿಪ ಭಾಗವತರವರ ಹಾಡುವಿಕೆಯ ಹಲವು 'ತಾಳಮದ್ದಳೆ'ಗಳಲ್ಲಿ ನಾನು ಭಾಗ ವಹಿಸಿದ್ದೆ; ಅಂತೆಯೇ ಅವರ ಭಾಗವತಿಕೆಯ ಕುರಿತಾದ ನನ್ನ ಅನುಭವವು ನನಗೆ ಕೌತುಕಪ್ರದವಾದ ಸಂತಸವನ್ನೇ ನೀಡಿದೆ. ಪದ್ಯದ ರಸ ಭಾವಗಳನ್ನು ಪಾತ್ರಧಾರಿಯ ಹೃದಯಕ್ಕೆ ಸಂತತ ಧಾರೆಯಾಗಿ ಹಾಡಿ ಸುರಿದು – ಅದು ಮತ್ತೊಮ್ಮೆ ಅಲ್ಲಿ ಮರುದೆರೆಗೊಂಡು ತುಂಬಿ ತುಳುಕಿ ಹರಿಯುವಂತೆ, ನಿರ್ದಿಷ್ಟವಾದ ಪಾತ್ರಾಭಿವ್ಯಕ್ತತೆಗೆ ಪರಿಪೂರ್ಣ ಪೋಷಣೆಯನ್ನೀವ,ಹೃದಯಸ್ಪರ್ಶಿ ಗಾನಮಾಧುರ್ಯದ ಸೊಬಗನ್ನು ನಾವು ಇನ್ನೆಲ್ಲಿ ಕಾಣಬಲ್ಲೆವು? ಪಾತ್ರಧಾರಿಯ ಮಾತು ಪೂರೈಸುವ ಆ ನಿಮಿಷದಲ್ಲಿಯೇ ಆ ಮಾತಿನ ಲಯಗತಿಯನ್ನೊಂದಿ, ಮತ್ತೊಂದು ಹಾಡನ್ನು ಎತ್ತಿ ಹಾಡಿ ಮುನ್ನಡೆಸುವ, ಹಾಗೂ ಎಡವಿದಾಕ್ಷಣ ಕೈ ಹಿಡಿದೆತ್ತಿ, ಬಿದ್ದುದೇ ಅಲ್ಲವೆನ್ನುವಂತೆ ಮುಂದೆ ಹಾಡಿ ನಡೆಯಿಸುವ ಆ ಭಾಗವತಿಕೆಯ ಸೂತ್ರಹಸ್ತದ ಕೌಶಲವನ್ನೂ ಪ್ರೌಢಿಮೆಯನ್ನೂ ಕುರಿತು ಎಷ್ಟು ಹೇಳಿದರೂ ಅದು ಕಡಿಮೆಯೇ ಆಗಬಹುದು. ಅಂತೆಯೇ ಆಟಗಳಲ್ಲಿ ವೇಷಗಳನ್ನು ಕುಣಿಸುವ ಹೆಚ್ಚುಗಾರಿಕೆಯನ್ನು ಕೂಡಾ ಕಂಡೇ ಅನುಭವಿಸಬೇಕಾಗಿತ್ತು. ಪದ್ಯದ ಭಾವಾರ್ಥಗಳನ್ನು ಪ್ರತಿಬಿಂಬಿಸುವ ಶಬ್ದಗಳನ್ನು ಎತ್ತಿ ಎತ್ತಿ, ವಾಕ್ಯಗಳನ್ನು ಬಿಡಿಸಿ ಬಿಡಿಸಿ ರಾಗ ರಸಗಳ ಜೋಡಣೆಯಿಂದ ಅರ್ಥಪೂರ್ಣವಾಗಿ ಹಾಡುವ ಆ ಗಾನ ವೈಖರಿಯನ್ನು ವರ್ಣಿಸುವುದೆಂತು? ಅಂತೆಯೇ "ಯಕ್ಷಗಾನ"ದ ಗಾನ ವೈಶಿಷ್ಟ್ಯವನ್ನು ಸರ್ವಾಂಗೀಣವಾಗಿ ತನ್ನ ಪರಿಪೂರ್ಣ ಪರಿಣತಿಯಿಂದ ವ್ಯಕ್ತಗೊಳಿಸುವ ಆ ನಮ್ಮ ಭಾಗವತರ ಮಹಾಕಾರ್ಯ ಗೌರವದ ಪ್ರೌಢಿಮೆಯ ಕುಶಲಗಾರಿಕೆಯನ್ನು ಅನುಭವಿಸಿ ಆನಂದಗೊಂಡವರೇ ಧನ್ಯರು ಎನ್ನಬಹುದು.

ನಾವೆಲ್ಲ ನಮ್ಮ ಪೂಜ್ಯ 'ಬಲಿಪ ಭಾಗವತ'ರನ್ನು ಹೆಚ್ಚಾಗಿ 'ಅಜ್ಜ' ಎನ್ನುತ್ತಿದ್ದೆವು. ಅವರಿಗೂ ನಮ್ಮಲ್ಲಿ ವಾತ್ಸಲ್ಯ, ನಮಗೂ ಅವರಲ್ಲಿ ಗೌರವಪೂರ್ವಕವಾದ ಅಭಿಮಾನ, ಅವರು ಒಮ್ಮೊಮ್ಮೆ ".. ನನ್ನನ್ನು ಯಾರೂ ಕೇಳುವುದಿಲ್ಲ – ನಾನೂ ಅವರನ್ನು ಗುಮಾನು ಮಾಡುವುದಿಲ್ಲ..." ಎಂದು ಅನ್ನುತ್ತಿದ್ದರು. ಮೇಲಿಂದ ಮೇಲೆ ತನ್ನನ್ನು ಇತರರು ಅನಾದರಿಸುತ್ತಿರುವರೇ! ಎಂಬ ಸಂದೇಹವೂ, ಆದರೂ ಏನು? ತನಗದರಿಂದ ಆಗುವುದೇನು? ಎಂಬ ಆತ್ಮವಿಶ್ವಾಸವೂ, ಆ ಮಾತಿನಿಂದ ವ್ಯಕ್ತವಾಗುತ್ತದೆ. ಅವರ ಕೊನೆಯ ಕಾಲದ ಹೊತ್ತಿಗಾದರೂ ಸರಕಾರದ ವತಿಯಿಂದ ಅವರಿಗೆ ರಾಜ್ಯ ಪ್ರಶಸ್ತಿಯ ಗೌರವವನ್ನಿತ್ತು ಸನ್ಮಾನಿಸಿದರಲ್ಲ! ಅದೇ ದೊಡ್ಡದು. ಬಹು ಮಂದಿಯ ಅಂತರಂಗದಲ್ಲಿ ಅವರಿಗೆ ಆ ಗೌರವದ ಸ್ಥಾನವು ಮೊದಲೇ ಮೀಸಲಾಗಿದ್ದಿತು. ಅದಕ್ಕೂ ಹೆಚ್ಚು ಅವರಿಗೆ ಮತ್ತೇನೂ ಬೇಕಿರಲಿಲ್ಲ. ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ನಮ್ಮ ಊರಲ್ಲಿ ವಿಶೇಷವಾದ ಒಂದು ತಾಳಮದ್ದಳೆಯು ನಡೆದಿತ್ತಂತೆ. ಬಹು ಮಂದಿ ಪರಿಣತರು ಸೇರಿದ್ದರಂತೆ. ಅಂತಹ ತಾಳ ಮದ್ದಳೆಯು ಆ ದಶಕದಲ್ಲಿ ಎಲ್ಲಿಯೂ ಆಗಿರಲಿಲ್ಲವೆಂದು ಜನ ಇಂದೂ ಆ ಕುರಿತು ಕೊಂಡಾಡುತ್ತಲೇ ಇದ್ದಾರೆ. ಅಂದಿನ ಸಮಾರಂಭಕ್ಕೆ ಬಹುದೊಡ್ಡ ವಿದ್ವಾಂಸರಾದ ವಿದ್ಯಾಧಿಕಾರಿಗಳು "ತಾತಾಚಾರ್" ಎಂಬವರು ಸಭಾಧ್ಯಕ್ಷರಾಗಿದ್ದರಂತೆ. ನಮ್ಮ ಬಲಿಪರೇ ಅಂದಿನ ಭಾಗವತರು. ಅಂದು ಘನತೆಗೊಂಡಿದ್ದ ಆ ಅಧ್ಯಕ್ಷರು ಅವರ ಕೊನೆಯ ಭಾಷಣದಲ್ಲಿ ಅಲ್ಲೇ ಕವಿತೆಯನ್ನು ರಚಿಸಿ ಹಾಡಿ ಹೊಗಳಿದರಂತೆ. ಹೇಗೆ? "...ಪದವಪ್ಪಿದೊಡಂ ಪದನರಿತು ಪೇಳ್ವ ಬಲಿಪಿ ಬಲ್ಮೆಯ ಬಣ್ಣಿಪರಾರ್?..." ಎಂದು ನಮ್ಮ ಭಾಗವತರ ಶ್ರೇಷ್ಠತೆಗೂ ವಿಶಿಷ್ಟತೆಗೂ ಆ ಮಾತೊಂದೇ ಧಾರಾಳವಾಗಿ ಸಾಕು.

"ಯಕ್ಷಗಾನ"ದ ಭಾಗವತರೆಂಬವರು ಕೆಲವು ಮಂದಿ ಇದ್ದರು. ಈಗಲೂ ಬಹುಮಂದಿ ಇದ್ದಾರೆ. ಆದರೂ "ಭಾಗವತರು" ಎಂದರೆ 'ಬಲಿಪ'ರೆಂದೇ ಪ್ರಸಿದ್ಧಿಯು. ಉಳಿದವರು ಅಲ್ಲವೆಂದೇನೂ ಅಲ್ಲ. ಅವರಿರುವಾಗ ಅವರಿಗಲ್ಲದೆ ಹೆರವರಿಗೆ ಆ ಹೆಸರು ಅಷ್ಟೊಂದು ಜನಮನದಲ್ಲಿ ಹಾಸು ಹೊಕ್ಕಾಗಿರಲಿಲ್ಲ. ಹೆಚ್ಚಿನವರು ಅವರನ್ನು ಮೆಚ್ಚಿ "ಬಲಿಪರು" "ಬಲಿಪ""ರೇ" ಎಂದು ಅನ್ನುತ್ತಿದ್ದರು. ಬಲಿಪ ಎಂಬುದು ಹುಲಿಗಳಲ್ಲಿ ದೊಡ್ಡ ಹುಲಿ; ಅಂತೆಯೇ "ಬಲಿಪಭಾಗವತ"ರು "ಯಕ್ಷಗಾನ"ದಲ್ಲಿ ದೊಡ್ಡ ಹುಲಿ ಎಂದು ಅನ್ನಿಸಿಕೊಂಡಿದ್ದರು. ಆ ಪ್ರಪಂಚದಲ್ಲಿ ತನ್ನ ಪರಿಣತಿಯಿಂದ ಹಿರಿಯರಾಗಿಯೂ ಇನ್ನಿತರರಿಗೆ ಭಯಪ್ರದರಾಗಿಯೂ ಇರುತ್ತಿದ್ದರು. ಯಜ್ಞದಲ್ಲಿ ತನ್ನತನವೆಲ್ಲವನ್ನೂ ತೆಗೆತೆಗೆದು ಅರ್ಪಿಸಿ ಹೋಮಿಸಿದಾಗ ಆ ಮೊದಲಿಗರು ದೇವತೆಗಳೇ ಆದರಂತೆ. ಕಲೋಪಾಸನೆಯೂ ಒಂದು ಯಜ್ಞ–ಅದರಲ್ಲೂ ಅಷ್ಟೇ. ತೇದು ಮುಗಿದಾಗ ಕೊರಡು ಕಾಣದಾಗಬಹುದು. ಗಂಧ ಸಂಚಯವಾಗಬಹುದು; ಕೊರಡಿನ ಅಸ್ತಿತ್ವವು ಗಂಧದಲ್ಲಿ ಪ್ರಕಟಗೊಳ್ಳುತ್ತದೆ. ತನ್ನತನವೆಲ್ಲವನ್ನೂ ಸಮರ್ಪಿಸಿ ತಾನು ಅದೇ ಆಗಿ ಆ ಎಲ್ಲವನ್ನೂ ತನ್ನಲ್ಲಾಂತುಕೊಂಡಾಗಲೇ ಆ ಕರ್ಮಸಿದ್ಧಿಯು ಪ್ರಾಪ್ತಿಸಬಲ್ಲುದು. ಸರ್ವಸ್ವವನ್ನೂ ಅದಕ್ಕರ್ಪಿಸಿ ಮತ್ತೆ ಅದನ್ನು ಧರಿಸಿ ರಕ್ಷಿಸುವವನು ನಿಜವಾಗಿಯೂ ದೊಡ್ಡವನು. ದೊಡ್ಡವನನ್ನು ದೊಡ್ಡವನು ಎಂದು ಒಪ್ಪಿ ಗೌರವಿಸುವುವಕ್ಕೆ ನಾವೇಕೆ ಹಿಂದುಳಿಯಬೇಕು?

ನಮ್ಮ ಆ ಸಾಹಿತಿಗಳೆನ್ನುವಂತೆ "...ರಾಕ್ಷಸ"ರು ಎನ್ನುವಾಗ ತಾಮಸಿಗಳಾದ ಆ ದುಷ್ಟ ರಾಕ್ಷಸರೇ ನೆನಪಿಗೆ ಬರುತ್ತಾರೆ. ಯಾಕೆ? ಪ್ರಹ್ಲಾದ, ಬಲಿ, ವಿಭೀಷಣರೆಲ್ಲ ರಕ್ಕಸರೇ ಆಗಿದ್ದರೂ ಬಹು ದೊಡ್ಡ ಪರಿಭಕ್ತರಾಗಿರಲಿಲ್ಲವೇ? ಭಗವದ್ಭಕ್ತರ ಆ ಪರಮ ಭಾಗವತೋತ್ತಮರ ಸಾಲಿನಲ್ಲಿ ಅವರ ಹೆಸರುಗಳು ಎದ್ದು ತೋರುವುದಿಲ್ಲವೇ? ಪ್ರಹ್ಲಾದ ವಿಭೀಷಣರು ಸ್ವಲ್ಪ ಸಪ್ಪೆ–ಅವರಲ್ಲಿ ಸಾತ್ವಿಕತೆಯೇ ಹೆಚ್ಚು ಎಂದು ಕೆಲವರ ಅಭಿಪ್ರಾಯ; ಆದರೆ ಬಲಿಯ ಕುರಿತು ಹಾಗೇನಿಲ್ಲ. ಅವನು ಶುದ್ಧ ರಾಜಸತೇಜದಿಂದ ಪ್ರತಾಪಿಯೇ ಆಗಿದ್ದನು. ಮೇಲಾಗಿ ಚಕ್ರವರ್ತಿಯೂ ಹೌದು. ಆದರೂ ಅವನು ತನ್ನ ಅಸದೃಶವಾದ ತ್ಯಾಗ ಭಕ್ತಿಗಳಿಂದ ತನ್ನದನ್ನೂ ತನ್ನನ್ನೂ ಶ್ರೀಹರಿ ಪ್ರೀತ್ಯರ್ಥವಾಗಿ ಸಮರ್ಪಿಸಿ "ಬಲೀಂದ್ರ"ನೆಂದೇ ಅನ್ನಿಸಿಕೊಂಡಿದ್ದನು. 'ಯಕ್ಷಗಾನ'ದ ಬಯಲಾಟಗಳಿಗೆ ಬಲಿಪಾಡ್ಯದಂದೇ ಗೆಜ್ಜೆ ಕಟ್ಟುವ–ಮೊದಲ ಆಟವನ್ನಾಡುವ ಪದ್ಧತಿಯು. ಯಾವ ಮೇಳದವರೇ ಆಗಲಿ ಹೆಚ್ಚಾಗಿ ದೀಪಾವಳೀ ಹಬ್ಬದೊಂದಿಗೆ ಬಲಿಪಾಡ್ಯದಂದೇ ಗೆಜ್ಜೆ ಕಟ್ಟಿ ದೇವರ ಸೇವೆಯನ್ನು ಪೂರೈಸುತ್ತಾರೆ. "ಬಲೀಂದ್ರನಿಗೂ ನಮ್ಮ 'ಯಕ್ಷಗಾನ"ಕ್ಕೂ ಬಹಳ ಹಿಂದೆಯೇ ಏನೋ ಒಂದು ಸಂಬಂಧವು ಬೆಳೆದು ಬಂದಿರಬೇಕು. ಅವನು ರಾಕ್ಷಸನೂ ಹೌದು–ಅಂತೆಯೇ ದೊಡ್ಡವನೂ ಹೌದು. ಅವನನ್ನು ನಿಜವಾಗಿ "ಯಕ್ಷಗಾನ ರಾಕ್ಷಸ". ಯಕ್ಷಗಾನದ ಮೊದಲ ಆಟವನ್ನಾಡಿಸುವವ ಎಂದು ಹೇಳಬಹುದು. ಯಾವ ಆಕ್ಷೇಪವೂ ಇರಲಾರದು. ಅವನದಂತೂ ಖಂಡಿತವಾಗಿಯೂ ಇರಲಾರದು. ಅವನು ಈಗ ಇದ್ದರಲ್ಲವೇ ಅವನ ಆಕ್ಷೇಪ. ನಮ್ಮ ಪೂಜ್ಯ ಬಲಿಪ ಭಾಗವತರೂ ಹಾಗೆಯೇ–ಯಕ್ಷಗಾನಕ್ಕೆ ಬಲಿಯಾಗಿದ್ದರು, ಬಲಿಯಂತೆಯೂ ಆಗಿದ್ದರು. ಅಂತೆಯೇ ಯಕ್ಷಗಾನದಲ್ಲಿ ಅವರು ದೊಡ್ಡವರು; ಬಲಿ ಚಕ್ರವರ್ತಿಯಂತೆ ತನ್ನ ಪರಿಪೂರ್ಣ ಪರಿಣತಿಯ ಪೂರ್ಣ ತೇಜದಿಂದಲೂ. ಪ್ರತಾಪದಿಂದಲೂ ಆ ಪ್ರಪಂಚದಲ್ಲಿ ಸಮ್ರಾಟರಂತೆ ಮೆರೆದು ಯಶಸ್ಸನ್ನು ಪಡೆದವರು, ಮಾತ್ರವಲ್ಲ 'ಯಕ್ಷಗಾನ'ದ ಭಾಗವತಿಕೆಗೆ ಆದರ್ಶ ಮಾರ್ಗನಿರ್ದೇಶಕರೂ ಆಗಿದ್ದರು.

ಆದುದರಿಂದ ನಮ್ಮ ನೆಚ್ಚಿನ ಆ ಹಿರಿಯ ಸಾಹಿತಿಗಳ ಬಿರುದೆನ್ನಿಸಿದ "ಯಕ್ಷಗಾನ" "ರಾಕ್ಷಸ" ಎಂಬುದು ಗೌರವದ ಬಿರುದಾಗಿ ಎಣಿಸಲ್ಪಟ್ಟರೆ–ಅದು ನಿಜವಾಗಿಯೂ ಪ್ರಪ್ರಥಮವಾಗಿ ನಮ್ಮ ಪೂಜ್ಯ "ಬಲಿಪ ಭಾಗವತ"ರಿಗೇ ಸಲ್ಲತಕ್ಕದ್ದು – ಅನ್ಯಥಾ ಆಗಿದ್ದರೆ ನಮಗೆ ಬೇಸರವಿಲ್ಲ – ಬೇರೆ ತುಂಡು ಪಂಡಿತರೆನ್ನಿಸಿಕೊಳ್ಳುವ ಆ ವಿದ್ವಧ್ವಂಸಕರಿಗೇ ಸಂದು ಹೋಗಲಿ.

"ಯಕ್ಷಗಾನ"ವನ್ನು "ರಾಕ್ಷಸತೆ"ಯಿಂದ "ಸಾಕ್ಷರತೆ"ಗೆ – ಅವಿದ್ಯಾವಂತರಿಂದ ವಿದ್ವಾಂಸರ ಕಡೆಗೆ ಕೊಂಡ್ಯೊದು ಇದರ ಸರ್ವೋತ್ಕೃಷ್ಟವಾದ ವೈಶಿಷ್ಟ್ಯವನ್ನು ಎತ್ತಿ ರಕ್ಷಿಸಿ, ಪ್ರಗತಿಗೆ ಮುಮ್ಮಾರ್ಗ ವನ್ನೂ ರೂಪಿಸಿಕೊಟ್ಟು ಅಮರರಾಗಿರುವ ಒಬ್ಬ ಸಮರ್ಥ ಭಾಗವತರೇ ನಮ್ಮ ಪೂಜ್ಯ 'ಬಲಿಪರು'. ಕನ್ನಡನಾಡಿನ ಮೂಲೆ ಮೂಲೆಗಳಲ್ಲಿಯೂ, ಅವರ ಹೆಸರು ಜನಜನಿತವಾಗಿ ಚಿರಸ್ಥಾಯಿಯಾಗಿದೆ. ಅಂಥಾ ಯಶಶ್ಶರೀರಿಯಾಗಿರುವ ನಮ್ಮ ನೆಚ್ಚಿನ ಭಾಗವತರನ್ನು ನಾವಿಂದು ಪ್ರತ್ಯೇಕವಾಗಿ ಕಾಣಲಾರೆವು ನಿಜ; ಆ ತುಂಬು ಜೀವನವು ಪ್ರಾಪಂಚಿಕವಾದ ಯಾವತ್ತೂ ಕಷ್ಟ, ನಷ್ಟ, ನಿಷ್ಠುರಗಳ ಅವ್ಯಾಹತವಾದ ಹೊಡೆತಗಳನ್ನು ಸುದೃಢವಾಗಿಯೂ ಸಧ್ಯೆರ್ಯವಾಗಿಯೂ ಉಂಡುಂಡು ಜೀರ್ಣಿಸಿಕೊಂಡು "ಕಲಾ ಸರಸ್ವತಿ"ಗೆ "ಕರ್ಪೂರದಾರತಿ"ಯಾಗಿ ಬೆಳಗಿ ಕಣ್ಮರೆಯಾಯಿತು. "ಯಕ್ಷಗಾನ" ಎಂಬುದರ ಮಹತ್ ದರ್ಶನವನ್ನು ಪಡೆದು ಕೊಂಡಾಡಿ ಹಾಡಿ, ಹಾಡಿಯೇ ಲೋಕಕ್ಕದನ್ನು ಒಲಿದು ನೀಡಿ "ಯಕ್ಷಗಾನದ" ಒಬ್ಬ ಮಹಾದಾರ್ಶನಿಕರಾಗಿ ಸಂದ ನಮ್ಮ ಪೂಜ್ಯ ಭಾಗವತಾರ್ಯರಿಗೆ ಹಾರ್ದಿಕವಾದ ಪೂರ್ಣ ಭಕ್ತಿಯ ಶ್ರದ್ಧಾಂಜಲಿಯನ್ನರ್ಪಿಸುತ್ತಾ; ಹಿಂದಿನ ಆ "ರಕ್ಷಾಮಹೇ" ಎಂದು ಎದೆ ತಟ್ಟಿ ನುಡಿದ "ಮಹಾರಾಕ್ಷಸ"ರಂತೆ, ತ್ಯಾಗಪೂರ್ಣನಾಗಿಯೇ ಸಂದು ಮಹತ್ತನ್ನು ಸಾಧಿಸಿದ "ಬಲಿ" ಚಕ್ರವರ್ತಿ "ರಾಕ್ಷಸೇಂದ್ರನಂತೆ, ಮಾತ್ರವಲ್ಲ ಅಂದಿನ ಆ ತಂತ್ರವೇತ್ತ "ಅಮಾತ್ಯ" "ರಾಕ್ಷಸ"ನಂತೆ ರಕ್ಷಣಾ ಸಮರ್ಥತೆಯನ್ನೊಂದಿ "ಯಕ್ಷಗಾನ" ಪ್ರಪಂಚದ ಹಿರಿಮೆಯನ್ನೂ, ಗರಿಮೆಯನ್ನೂ ಗಳಿಸಿ ದೊಡ್ಡವ ರೆನಿಸಿಕೊಂಡು ಯಾವಜ್ಜೀವವೂ "ಯಕ್ಷಗಾನ" "ರಾಕ್ಷಸ"ರಾಗಿಯೇ ಅಮೃತತ್ವವನ್ನೈದಿದ – ಆ ಸುಕೃತಾತ್ಮ "ಶ್ರೀ"ಯನ್ನು ನೆನೆ ನೆನೆದು – ಆ ನಮ್ಮ ನೆಚ್ಚಿನ ಹಿರಿಯ ಸಾಹಿತಿಗಳ ಬರಿಯ ಬಿರುದಿನ ಗೌರವಾರ್ಥವೂ ಸಾರ್ಥಕಗೊಳ್ಳುವಂತೆ – ಆ ದಿವ್ಯ. ಸಂಸ್ಕೃತಿಗಿದು ತೊಡವಾಗಿ ರಂಜಿಸಲಿ – ಎಂದು ಹಾರೈಸೋಣ;. ಮುಂದೆಯೂ "ಬಲಿಪಸ್ಮೃತಿ"ಯ ಶಾಸ್ತ್ರೀಯ ಗುಣಧರ್ಮದಿಂದ ನಮ್ಮ "ಯಕ್ಷ ಗಾನ"ದ ಉಜ್ವಲ ಭವಿಷ್ಯವನ್ನು ಪ್ರತೀಕ್ಷಿಸೋಣ.

ಯಕ್ಷಗಾನ ಪ್ರಗತಿ–"ತಾಳಮದ್ದಳೆ"

ಶ್ರೀ ಉಗ್ರಾಣ ಮಂಗೇಶ ರಾವ್

ಯಕ್ಷಗಾನ ಆಟ ಬಹು ಹಿಂದಿನ ಒಂದು ಹಳ್ಳಿಕಾಲಕ್ಷೇಪ. ದಶಾವತಾರದಾಟ, ಯಕ್ಷಗಾನ ನಾಟಕ, ಬಯಲಾಟ - ಇವು ಯಕ್ಷಗಾನ ಆಟದ ಪರಿಯಾಯ ಶಬ್ದಗಳು. ತಾಳಮದ್ದಳೆ ಯಕ್ಷಗಾನ ಆಟದ ಒಂದು ಪ್ರಭೇದ.

ದಶಾವತಾರದಾಟದ ಮೇಳಗಳು - ಮಳೆಗಾಲದಲ್ಲಿ ಹೊರತು ಬೇರೆ ಕಾಲಗಳಲ್ಲಿ ಜಾತ್ರಾ ಸಮಯಗಳಲ್ಲಿ ಇತರ ಸಮಯಗಳಲ್ಲಿಯೂ ಗದ್ದೆಗಳಲ್ಲಿ ದೀಪ ದೀವಟಿಕೆಗಳಿಂದ ಸಜ್ಜುಗೊಳಿಸಿದ ರಂಗ ಸ್ಥಳದಲ್ಲಿ ರಾತ್ರಿ ಒಂಭತ್ತು ಘಂಟೆಯಿಂದ ಬೆಳಗುವರೆಗೂ ಒಂದು ದೊಡ್ಡ ಇಲ್ಲವೆ ಎರಡು ಚಿಕ್ಕ ಪ್ರಸಂಗಗಳನ್ನು ಆಡಿತೋರಿಸುತ್ತಿದ್ದರು. ಹಳ್ಳಿಯ ಪೇಟೆಯ ಜನರಿಗೆ ಸತ್ಕಾಲಕ್ಷೇಪವಿದು. ಭಾಗವತರು ಜಾಗಟೆ ಹಿಡಿದು ಹಿಮ್ಮೇಳದ ಶ್ರುತಿ ಮದ್ದಳೆ ಸಮೇತ ಒಂದೊಂದು ಪದವನ್ನು ಹಾಡುತ್ತಿರುವಾಗ ವೇಷಧಾರಿಗಳು ಆವೇಶಪರವಾಗಿ ಕುಣಿಯುತ್ತಲಿದ್ದು ಪದ ನಿಂತ ಮೇಲೆ ಅದರಲ್ಲಿ ಅಡಕವಾಗಿದ್ದ ಅರ್ಥವನ್ನು ರಸವತ್ತಾಗಿ ವಿಸ್ತಾರವಾಗಿ ಸಂಭಾಷಣೆಯಿಂದ ಪ್ರತಿಪಾದನೆ ಮಾಡಿ ಸಭಾಸದರ ಮೆಚ್ಚಿಕೆಗೆ ಪಾತ್ರರಾಗುವರು. ಕಳೆದ ಎಪ್ಪತ್ತೈದು ವರ್ಷಗಳಲ್ಲಿ ಪ್ರಸಿದ್ಧರಾದ ಭಾಗವತರಲ್ಲಿ ಮಂಜುನಾಥ ಭಾಗವತರು ಬಲಿಪ ಭಾಗವತರು ಸುಪ್ರಸಿದ್ಧರು.

ಹಲವು ವರ್ಷಗಳ ಹಿಂದೆ ಯಾರಾದರೊಬ್ಬ ಊರ ಮಹನೀಯರು ಅಲ್ಲಿಗೆ ಬಂದ ಮೇಳದಿಂದ ಕಂಬಳದ ಗದ್ದೆಯಲ್ಲಿ ತಳಮಾಡಿ ಆಡಿಸುತ್ತಿದ್ದರೆ ಸಾಧಾರಣ ಎಂಟು ಹತ್ತು ಮೈಲುಗಳ ದೂರದಿಂದಲೂ ಜನರು ತಂತಮ್ಮ ಆಸನ ಸೌಕರ್ಯಗಳನ್ನು ಹೊತ್ತುಕೊಂಡು ರಂಗ ಮಂಟಪದ ಸಮೀಪ ಕೂತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳುತ್ತಿದ್ದರು. ಮಲಗಿದ್ದ ಸಣ್ಣ ದೊಡ್ಡ ಮಕ್ಕಳು ರಾಕ್ಷಸ ವೇಷ ಪ್ರವೇಶಿಸಿ ಧೂಪದ ಹುಡಿ ಭಗ್ಗೆಂದು ಹಾರಿಸುವಾಗ ಎದ್ದು ಕೂತುಕೊಳ್ಳುವುದಿತ್ತು. ಜನರು ಸೇರುತ್ತಾ ಇರುವಾಗ ಸಂಗೀತದ ಭಾಗವತರು ಹಾಡುತ್ತ ಬಾಲಗೋಪಾಲರು ಕುಣಿಯುವ ಕ್ರಮವಿತ್ತು. ಆಮೇಲೆ ಪ್ರಸಂಗ ಪೀಠಿಕೆಗೆ ಚೆಂಡೆಬಾರಿಸಿ, ಪ್ರಸಂಗ ಭಾಗವತರು ಬಂದು ಮಂಡಿಸಿ ಸ್ತ್ರೀ ವೇಷ ಪ್ರವೇಶ ಮಾಡಿಸಿ ಹನುಮನಾಯಕನೊಂದಿಗೆ ಸಭಾ ವಂದನೆ ಮಾಡಿಸಿ ನೆರೆದ ಮುಖ್ಯ ಅತಿಥಿಗಳಿಗೆ ಸ್ತ್ರೀ ವೇಷದಿಂದ ದೌಲಜ್ಜಾತು ಹಾಕಿಸುವ ವಾಡಿಕೆಯಿತ್ತು. ಆ ಮೇಲೆ ವೇಷಧಾರಿಗಳು ತೆರೆಯ ಮರೆಯಲ್ಲಿ ತಲೆಮಾತ್ರ ಕಾಣಿಸಿ ಭಾಗವತರ ಕಡೆ ಮುಖಹಾಕಿ ಮೊದಲು ಕುಣಿದು ನಿರ್ಗಮಿಸಿದ ಬಳಿಕ ಪುನಃ ಒಬ್ಬೊಬ್ಬರಾಗಿ ಕುಣಿದು ಸಭೆಯಾಗಿ ಕುಳಿತ ಮೇಲೆ ಪ್ರಸಂಗ ಪ್ರಾರಂಭವಾಗುತ್ತಿತ್ತು.

ಈಗ ಇದೆಲ್ಲ ಬಹು ವ್ಯತ್ಯಾಸ ಹೊಂದಿದೆ. ಹಲವು ಪ್ರಸಿದ್ಧ ಯಕ್ಷಗಾನ ನಾಟಕ ಮಂಡಲಿಗಳೇ ಆಗಿದ್ದಾವೆ. ಅವುಗಳ ವ್ಯವಸ್ಥಾಪಕರು ಡೇರೆ, ವಿದ್ಯುದ್ದೀಪ ಸಲಕರಣೆ ಸಮೇತ ಒಂದು ಕಡೆ ಬೀಡು

ಬಿಟ್ಟು ಒಂದೆರಡು ಪರದೆ ಸಹಿತ ರಂಗಮಂಟಪವನ್ನು ಅಳವಡಿಸಿ, ಸಭಿಕರಿಗೆ ಕುಳಿತುಕೊಳ್ಳುವುದಕ್ಕೆ ಆರಾಮ ಕುರ್ಚಿ, ಒರಗುವ ಕುರ್ಚಿ, ಬೆಂಚು ಜಮಖಾನೆಗಳ ವ್ಯವಸ್ಥೆ ಮಾಡಿ ಟಿಕೇಟು ಇಟ್ಟು ಒಂದೇ ಆಟಕ್ಕೆ ಸಾವಿರ ಗಟ್ಟಲೆ ಹಣ ಸಂಪಾದಿಸಿ ಸಭಾರಂಜನೆ ಮಾಡಿ, ಮರುರಾತ್ರಿಯೇ ಇನ್ನೊಂದು ಊರಲ್ಲಿ ಅದೇ ರೀತಿಯಲ್ಲಿ ಅದೇ ಅಥವಾ ಇನ್ನೊಂದು ಪ್ರಸಂಗವನ್ನು ಆಡಿ ತೋರಿಸುವರು. ಬಾಲಗೋಪಾಲರ ಕುಣಿತವಿಲ್ಲ. ಸಂಗೀತ ಸಮಯಕ್ಕೆ ಶಾಸ್ತ್ರೀಯ ಸಂಗೀತ ಮತ್ತು ಭರತ ನಾಟ್ಯಗಳಿಂದ ನೆರೆದ ಸಭಿಕರನ್ನು ಮೆಚ್ಚಿಸುವರು. ಆಟದಲ್ಲಿ ಎಲ್ಲಾ ಪಾತ್ರಧಾರಿಗಳೂ ಕುಣಿಯುವ ಕ್ರಮವೂ ಇಲ್ಲ. ಭಾಗವತಿಕೆ ಯಲ್ಲಿಯೂ ಹಾಡುಗಾರಿಕೆ ಹೊಸ ಮಟ್ಟಿನದೆನಿಸಿ ನವೀನ ಕ್ರಮವಾಗಿದೆ.

ದಶಾವತಾರದಾಟಗಳು ಬಯಲಾಟಗಳಾಗಿದ್ದು ಮಳೆಗಾಲದಲ್ಲಿ ನಡೆಯುತ್ತಿರಲಿಲ್ಲ. ನವ ರಾತ್ರಿ ಸಮಯುದಲ್ಲಿ ತುಂಡು ಭಾಗವತರು ರಾಧಾಕೃಷ್ಣ ವೇಷಗಳ ಸಮೇತ ಮನೆ ಮನೆಗಳಿಗೆ ಹೋಗಿ ಒಂದೊಂದು ಸನ್ನಿವೇಶವಲ್ಲಿ ಆಡಿತೋರಿಸಿ ಜನರಂಜನೆಯನ್ನು ಮಾಡುತ್ತಿದ್ದರು. ಈಚೆಗೆ ಒಬ್ಬರಿಬ್ಬರು ಒಂದೇ ಕಡೆ ನೆಲೆನಿಂತು ಒಳ್ಳೆಯ ಮಾಡಿನ ಹಜಾರವನ್ನು ಕಟ್ಟಿಸಿ– ನಾಟಕ ಸಭೆಗಳಂತೆ - ಯಕ್ಷಗಾನ ನಾಟಕವನ್ನು ಬಗೆಬಗೆಯ ಪರದೆಯ ರಂಗವಿಶೇಷಗಳಿಂದ ಆಡಿ ತೋರಿಸುವರು. ಅವರವರ ಅಭಿರುಚಿ ಯಂತೆ ಈ ಕ್ರಮವನ್ನು ಮೆಚ್ಚುವವರೂ ಮೆಚ್ಚದವರೂ ಇದ್ದಾರೆ.

ತಾಳಮದ್ದಳೆ ಬಹುತರವಾಗಿ ಮಳೆಗಾಲದ ಕಾಲಕ್ಷೇಪವಾಗಿ ಪ್ರಾರಂಭವಾದುದು ಈಗ ಸರ್ವ ಕಾಲಗಳಲ್ಲಿಯೂ ಎಲ್ಲಾ ವೇಳೆಗಳಲ್ಲಿಯೂ ಜನಪ್ರಿಯಸತ್ಕಾಲಕ್ಷೇಪವಾಗಿದೆ. ಇದರಲ್ಲಿ ವೇಷದ ಅಳ ವಡಿಕೆಯಿಲ್ಲ, ಭಾಗವತರು ಎತ್ತರದ ವೇದಿಕೆಯಲ್ಲಿ ಜಾಗಟೆ ಹಿಡಿದು - ತಾಳವಲ್ಲ - ಶ್ರುತಿ ಮದ್ದಳೆ ಚೆಂಡೆ ಗಳ ಸಮೇತ ಕುಳಿತು, ಅರ್ಥಗಾರರು ಎಡ ಬಲ ಕ್ರಮವಾಗಿ ಆಸೀನರಾಗಿದ್ದು ಆ ವಿಹಾರ ಕೂಟವು ಗಣಪತಿ ಸ್ತುತಿಯೊಡನೆ ಪ್ರಾರಂಭವಾಗುವುದು. ಈ ಸಭೆಗೆ ಬಹುಕಡೆ ಒಬ್ಬ ಅಧ್ಯಕ್ಷರು ಆಯ್ಕೆ ಆಗಿ ರುತ್ತಾರೆ. ಸಭಾವ್ಯವಸ್ಥಾಪಕರು ಸಭಿಕರನ್ನು ವಂದಿಸಿ, ಅಧ್ಯಕ್ಷರ ಕಲಾಕಾರರ ಪರಿಚಯವನ್ನು ಸಭೆಗೆ ಮಾಡಿಸಿ, ಆ ಪ್ರಸಂಗದ ಪಾತ್ರಗಳನ್ನು ಯಾವ ಯಾವ ಕಲಾವಿದರು ವಹಿಸುವರೆಂದು ತಿಳಿಸಿ ಅಧ್ಯಕ್ಷರ ಭಾಷಣಕ್ಕೆ ಎಡೆಮಾಡುವರು. ಅಧ್ಯಕ್ಷರು ಹೆಚ್ಚಾಗಿ ಯಕ್ಷಗಾನ ಕಲೆ, ಅರ್ಥಗಾರರ ಜವಾಬುದಾರಿ ಮುಂತಾದುವನ್ನು ಪ್ರಸ್ತಾವಿಸಿ ಪ್ರಸಂಗ ಪ್ರಾರಂಭಮಾಡಿಸುವರು. ಪ್ರಸಂಗವು ಮುಗಿದ ಮೇಲೆ ಅಧ್ಯಕ್ಷರು ಸಮಾರೋಪ ಭಾಷಣ ಮಾಡುತ್ತ ಕಲಾಕಾರರನ್ನು ಯೋಗ್ಯತೆಯರಿತು ಹೊಗಳಿ ಸಭೆಯನ್ನು ಮುಕ್ತಾಯಗೊಳಿಸುವರು.

ಬಯಲಾಟಗಳಲ್ಲಿದ್ದುದಕ್ಕಿಂತಲೂ ತಾಳಮದ್ದಳೆಗಳಲ್ಲಿ ಅರ್ಥ ವಿಸ್ತಾರಕ್ಕೆ ಅವಕಾಶ ಹೆಚ್ಚು. ಇಬ್ಬರು ನುರಿತ ಕಲಾವಿದರು ಪರಸ್ಪರ ಮೀರಿಸಿ ಮೆರೆಯಬೇಕೆಂಬ ಚಪಲದಿಂದ ಬಹು ವಿಸ್ತಾರಕ್ಕೆ ತೊಡಗಿದರೆ ಮಾತು ಬಿರುಸಾಗಿ ವಿರಸಕ್ಕೆ ಮುಟ್ಟುವುದುಂಟು. ಸುವರ್ಣ ಮೃಗಬೇಟೆಯ ವಿಷಯದಲ್ಲಿ ಸೀತೆಗೂ ರಾಮನಿಗೂ ಆದ ಸಂವಾದ ಒಂದು ಸಭೆಯಲ್ಲಿ ಬೆಳೆಬೆಳೆದು ರಾಮ, ಸೀತೆಯ ಪ್ರಾರ್ಥನೆ ಸಲ್ಲಿಸಲಿಲ್ಲವೆಂದು ತರ್ಕದಿಂದ ಸಿದ್ಧಾಂತಮಾಡಿದಾಗ ಸೀತೆ ಪಾತ್ರವಹಿಸಿದ ಕಲಾಕಾರ ತಲೆತಗ್ಗಿಸಿ ಬೇರೆ ಉಪಾಯ ಕಾಣದೆ 'ನಾಥಾ, ನಾನೆಷ್ಟೆಂದರೂ ಅಬಲೆ, ಚಂಚಲೆ ತಾವು ಅಪ್ಪಣೆಗೊಡಿಸಿದ್ದುದು ಸರಿ, ನನಗೆ ಸುವರ್ಣ ಮೃಗ ಬೇಡ' ಎಂದು ಮಾತು ಮುಗಿಸಿದೊಡನೆ ಭಾಗವತರಾಗಿದ್ದ ಬಲಿಪರು ಆ ರೀತಿ ಮಾತು ಮುಗಿದರೆ ತನಗೆ ಮುಂದೆ ಪದಹೇಳಲಿಕ್ಕೆ ಗೊತ್ತಿಲ್ಲವೆಂದರಂತೆ ! 'ತಾಳಮದ್ದಳೆಯ ನಾಟಕ' ಎಂಬ ಒಂದು ಪ್ರಹಸನದಲ್ಲಿ ಈ ರೀತಿ ಭಾಗವತರು ಪದಹೇಳಲಾರೆನೆಂದಾಗ ಒಬ್ಬ ಜಾಣ ಅರ್ಥಗಾರ ತಾನು ಭಾಗವತರು ಪದ ಹೇಳದಿದ್ದರೂ ಅರ್ಥ ಹೇಳಬಲ್ಲೆನೆಂದು ಹಂಗಿಸುವನು !

ಬಯಲಾಟಗಳಲ್ಲಿ ವೇಷಧಾರಿಗಳು ಭಾಗವತನೊಡನೆಯೂ ಭಾಗವತನು ವೇಷಧಾರಿಗಳೊಡ ನೆಯೂ ಮಾತಾಡುವಷ್ಟು ತಾಳಮದ್ದಳೆಗಳಲ್ಲಿ ಇಂತಹ ವ್ಯವಹಾರ ಕಾಣುವುದಿಲ್ಲ. ಇದು ಸಂಗತವೋ

ಅಸಂಗತವೊ ಎಂಬುದು ವಿಚಾರಾರ್ಹವಾದುದು. ನನ್ನ ಸ್ವಂತ ಅಭಿಪ್ರಾಯವನ್ನು ನಾನು ಅಧ್ಯಕ್ಷನಾಗಿದ್ದಾಗ ಒಂದು ಸಭೆಯಲ್ಲಿ ಹೇಳಿದ್ದೆ. ನಮ್ಮ ದಶಾವತಾರದಾಟಗಳಲ್ಲಿ ಭಾಗವತರ ಸ್ಥಾನ ಗ್ರೀಕ್ ನಾಟಕಗಳಲ್ಲಿ ಕೋರಸ್ಸಿನ ಸ್ಥಾನದಂತೆ. ಕೋರಸ್ಸು ಆಯಾ ನಾಟಕದ ಕಾಲದಲ್ಲಿ ಜೀವಂತರಾಗಿದ್ದು ನಾಟಕದಲ್ಲಿ ಭಾಗವಹಿಸುವವರು ಅವರು ಎಲ್ಲಾ ಪಾತ್ರಗಳೊಡನೆಯೂ ಎಲ್ಲಾ ಪಾತ್ರಗಳು ಅವರೊಡನೆಯೂ ಸಂಭಾಷಣೆ ಮಾಡುವುದುಂಟು. ಭಾಗವತರು ಅವರಂತೆಯೇ ಆಯಾಯ ಕಥಾಕಾಲದ ವ್ಯಕ್ತಿಗಳೆಂದು ತಿಳಿಯಬಹುದು. ಬಯಲಾಟಗಳಲ್ಲಿ ಮುಖ್ಯ ಪಾತ್ರಗಳು ಬಂದು ಸಭೆ ಮಾಡಿ ಕೂತೊಡನೆ ಭಾಗವತರಿಗೂ ಅವರಿಗೂ ಪರಿಚಯ ವಿಷಯವಾಗಿ ಮಾತು ಪ್ರಾರಂಭವಾಗುವುದು ತಾಳಮದ್ದಳೆಯಲ್ಲಿ ಇದು ಬಹುವಾಗಿ ವಜಾಮಾಡೋಣಾಗಿದೆ.

ಕಲಾಕಾರರು ಹುರುಡಾಟದಿಂದ ತಾವೇ ಕಡೆಮಾತು ಹೇಳಿದವರಾಗಬೇಕೆಂಬ ಹಟದಿಂದ ಮಾತು ಹನುಮಂತನ ಬಾಲದಂತೆ ಬೆಳೆಯುತ್ತಿದ್ದರೂ ಭಾಗವತರು ಜಾಗಟೆ ಕೋಲುಗಳನ್ನು ಕಾಲು ಮಣೆಯಲ್ಲಿಟ್ಟು ಅಲ್ಲೇ ಮಿಕಿಮಿಕಿ ನೋಡುತ್ತ ಕುಳಿತಿರಬೇಕಾಗುತ್ತದೆ. ಬಯಲಾಟದಲ್ಲಿದ್ದಂತೆ ಪ್ರಸಂಗ ಮುಗಿಸುವ ಹೊಣೆಗಾರಿಕೆ ತಾಳಮದ್ದಳೆಯವರಿಗೆ ಇಲ್ಲ. ಒಂದು ವೇಳೆ ಸಭೆಗೆ ಸಾಕಾಯಿತೆಂದಾಗ ಅಲ್ಲೇ ಮಂಗಲ ಹಾಡಿ ಮುಗಿಸುವುದುಂಟು. ಒಂದು ವೇಳೆ ಮಂಗಲ ಹಾಡುವುದಕ್ಕೆ ಅವಕಾಶ ಕೊಡದೆ ಮಾತು ವಿಪರೀತ ಬೆಳೆಸುತ್ತ ಕಿಡಿಗಳೆದ್ದು ಮಧ್ಯದಲ್ಲೇ ಮಾತು ಮುರಿದು ಹೋಗಿ ಸಭೆ ಕೊನೆಗಾಣುವುದೂ ಉಂಟು. ತಾಳಮದ್ದಳೆ ಸುಗಮವಾಗಬೇಕಾದರೆ ಮುಖ್ಯ ಕಲಾಕಾರರು ಪರಸ್ಪರ ಯೋಗ್ಯತೆ ಹೊರಚೆಲ್ಲುವಂತೆ ಹಿತವಾಗಿ ಮಿತವಾಗಿ ಮಾತು ಬೆಳೆಸಬೇಕು. ಅವರೊಳಗೆ ಮತ್ಸರವಿದ್ದರೆ ಒಬ್ಬರನ್ನೊಬ್ಬರು ಅಡ್ಡಗಾಲಿಟ್ಟು ಬೀಳಿಸುವುದಕ್ಕೆ ಯತ್ನಿಸುವುದಾಗುತ್ತದೆ. ತಾನೇ ಒಬ್ಬ ತಿಳಿದವ ಎದುರಾಳಿಗೆ ತನ್ನಷ್ಟು ಗೊತ್ತಿಲ್ಲವೆಂದು ಕಾಣಿಸುವ ಚಟದಿಂದ ಒಬ್ಬನು 'ನಿನ್ನ ಧ್ವಜವಾವುದು? ಹೇಳು' ಎಂದು ಪ್ರಶ್ನಿಸಿದಾಗ ಅದು ಅಪ್ರಸಿದ್ಧ ವಿಷಯವಾಗಿ ತಾನು ನಿಜವಾಗಿ ತಿಳಿಯುವವನಾಗಿದ್ದರೂ, ತನ್ನ ಅಜ್ಞಾನವನ್ನು ಹೊರಗೆಡವದೆ, ಉಪಾಯದಿಂದ, 'ಅಂಧನೊಡನೆ ತನಗೆ ಯುದ್ಧ ಸಲ್ಲದು' ಎಂದು ಮಾತನ್ನು ಹಾರಿಸಿಬಿಟ್ಟನು. 'ಹೇಡಿಯಾಗಿ ಯುದ್ಧನಿಲ್ಲಿಸುವೆಯಾ? ನಾನು ಅಂಧನಲ್ಲವೆಂದು ಅವನು ಹೀಯಾಳಿಸಿದಾಗ, ಅಂಧನಲ್ಲದಿದ್ದರೆ ಧ್ವಜವನ್ನು ಕಾಣದುದು ಹೇಗೆಂದು ಅವನ ಬಾಯನ್ನೇ ಮುಚ್ಚಿಸಿದನು.

ಒಂದು ಕಡೆ ರಾವಣ ತನಗೆ ನೀತಿ ಹೇಳಲು ಬಂದ ಮಂಡೋದರಿಗೆ ಜಬ್ಬರಿಕೆಯಿಂದ ನಿತ್ಯದ ಮಾತಿನ ದಾರಿ ತಪ್ಪಿಸಿ ಅವಳ ಬಾಯಿ ಮುಚ್ಚುವುದಕ್ಕೆ ಯತ್ನಿಸಿ ತನ್ನ ವರ್ತನೆಯೇ ಸರಿಯೆಂದು ಸಾಧಿಸಿದನು. ಆಗ ಮಂಡೋದರಿ ಪಾತ್ರದ ಅರ್ಥಗಾರನು ಗಂಭೀರಭಾವದಿಂದ ತಾವು ಆ ರೀತಿ ಮಾತನಾಡುವುದಾದರೆ ಆ ಮೇಲೆ ತನ್ನ ಮಾತೇ ಇಲ್ಲವೆಂದು ಸುಮ್ಮಗಾದನು.

ಭೀಷ್ಮಕೃಷ್ಣರ ಸಂವಾದದಲ್ಲಿ ಭೀಷ್ಮನು ಭಾರತಕಾಲಮಾನದಲ್ಲಿ ತತ್ತ್ವ ವಿಚಾರ ಮಾಡುತ್ತಿದ್ದಾಗ ಕೃಷ್ಣ ನವಯುಗದ ತರ್ಕ ಸರಣಿಯಲ್ಲಿ ಆಡುತ್ತ ಮಾತಿಗೆ ಮಾತು ಹೊಂದಿಕೆಯಾಗದೆ ಭೀಷ್ಮನಾಗಿದ್ದ ಅರ್ಥಗಾರ ಇನ್ನು ತನ್ನ ಮಾತೇ ಇಲ್ಲವೆಂದು ಮೌನಧರಿಸಿ ಅಲ್ಲೆ ಸಭೆ ಅಂತ್ಯವಾಗುವಂತೆ ಮಾಡಿದನು.

ಭೀಷ್ಮ ಕೌರವರು ಇನ್ನೊಂದು ಕಡೆ ಪರಸ್ಪರ ವಿರೋಧಿಸಬೇಕೆಂಬ ಉದ್ದೇಶದಿಂದ ಎರಡು ಘಂಟೆ ಕಾಲ ಒಣ ತರ್ಕ ಮಾಡುತ್ತ ಸಭೆಗೆ ತಲೆಬೇಸರಾಗಿ ಅಧ್ಯರೊಬ್ಬರು – ಅಧ್ಯಕ್ಷರು ಅಂದು ಆಯ್ಕೆ ಆಗಿರಲಿಲ್ಲ – ಒಂದು ಚೀಟನ್ನು ಬರೆದು ಕಳುಹಿಸಿ ತರ್ಕವನ್ನು ತಡೆದು ಪ್ರಸಂಗ ಮುಂದೆ ಸಾಗುವಂತೆ ಮಾಡಿದರು.

ಒಂದೇ ಪ್ರಸಂಗವನ್ನು ಹಲವು ಕಡೆ ಇಟ್ಟುಕೊಂಡರೂ, ಅವೇ ಭಾಗವತರು, ಅವರೇ ಅರ್ಥಗಾರರಾದರೂ ತಾಳಮದ್ದಳೆಯ ರಂಜನೆಗೆ ಲವಲೇಶವೂ ಅಭ್ಯಂತರವಿಲ್ಲ. ಕಲಾಕಾರರು ಆಯಾಕಾಲದ ಸ್ಫೂರ್ತಿಯಿಂದ ಹೊಸ ಬೆಳಕನ್ನು ಹೊಸ ತಳಕನ್ನು ಕಾಣಿಸಿ, ಕಿಕ್ಕಿರಿದು ನೆರೆದ ಸಭೆ ತಲೆದೂಗಿ ಕೈ ಚಪ್ಪಾಳೆ ಹಾಕುವಂತೆ ಸಭಾರಂಜನೆಯನ್ನು ಮಾಡುವರು. ನಾಟಕಗಳಲ್ಲಿ ನಾಟಕಕಾರ ಬರೆದಿಟ್ಟ ಮಾತುಗಳನ್ನೇ ಕಂಠ ಪಾಠ ಮಾಡಿ ಆಡಬೇಕಾಗಿರುವಾಗಲೂ ನಟರು ತಮ್ಮ ಹಾವ ಭಾವ ಅಭಿನಯ ಚಮತ್ಕಾರದಿಂದ ಒಂದೇ ನಾಟಕವನ್ನು ನೂರು ಸಲ ಆಡಿಯೂ ಅದನ್ನು ಮೆರೆಯಿಸುವುದಿಲ್ಲವೆ? ತಾಳಮದ್ದಳೆಯಲ್ಲಿ, ದಶಾವತಾರ ಆಟದಲ್ಲಿ ಕೂಡ ಕಟ್ಟಿಟ್ಟ ಮಾತುಗಳಿಲ್ಲ. ವಿಷಯ ಪಲ್ಲಟಿಸದೆ ಮಾತನ್ನು ನವ ರೀತಿಯಲ್ಲಿ ಹರಿಸಿ ಕಲಾಕಾರರು ತಮ್ಮ ಕೌಶಲವನ್ನು ಮೆರೆಯಿಸುತ್ತಾರೆ.

ಅಧ್ಯಕ್ಷರು ಒಂದು ಸಂದಿಗ್ಧ ಸಮಯ ಬಂದಾಗ ಏನು ಮಾಡಬಹುದು? ಅವರಿಗೆ ಎಷ್ಟು ಅಧಿಕಾರವಿದೆ? ಮಾತು ಬಿರುಸಾದುದನ್ನು ಕಂಡು ಉಪಾಯದಿಂದ ಅದನ್ನು ತಡೆಯುವುದಕ್ಕೆ ಭಾಗವತರಿಗೆ ಕಣ್ಸನ್ನೆ ಮಾಡಬಾರದೆ? ಅಥವಾ ಭಾಗವತರೇ ಸಮಯವರಿತು ಆ ಮೇಲಿನ ಪದಕ್ಕೆ ತೊಡಗಬಾರದೆ? ಇವಕ್ಕೆ ಎಡೆಗೊಡದೆ ಅರ್ಥಗಾರರು ಶಿಷ್ಟಾಚಾರದಿಂದ ನಡೆಯಬಾರದೇ? ಕೆಲವು ಸಭೆಗಳಲ್ಲಿ ಅರ್ಥಗಾರರು ಭಾಗವತರನ್ನು ಅಲ್ಲಗಳೆದು ಹಿಂದಿನ ಪದಕ್ಕೆ ಅರ್ಥ ಹೇಳುತ್ತಾ ಹೋದರೆ ಏನು ಗತಿ? ಇಂತಹ ಕಡೆಗಳಲ್ಲಿ ಅಧ್ಯಕ್ಷರ ಅಧಿಕಾರವಾಣಿಗೆ ಎಲ್ಲರೂ ಮಣಿದು ಸಭೆಯ ಕಾರ್ಯವನ್ನು ನೆರವರಿಸುವುದೇ ಲೇಸು.

ತಾಳಮದ್ದಳೆಯ ಕಲಾಕಾರರು ಒಳ್ಳೆಯ ವಿದ್ಯಾವಂತರು – ಕಲಾಪ್ರಿಯರು – ಅದನ್ನು ವೃತ್ತಿಯಾಗಿ ಅಲ್ಲ ಒಂದು ಹಿತ ವ್ಯಾಸಂಗವಾಗಿ ಅನುಸರಿಸುವವರು. ಆದುದರಿಂದಲೇ ಈ ಕಲೆಗೆ ಯೋಗ್ಯ ಗೌರವ ದೊರೆತಿದೆ. ಒಬ್ಬ ಪ್ರಸಿದ್ಧ ಕಲಾಕಾರರನ್ನು ರಾಜ್ಯಸಭೆಯ ಸದಸ್ಯರನ್ನಾಗಿಯೂ, ರಶ್ಯದ ಪ್ರಮುಖ ಬುಲ್ಗೆನಿನ್ ಕ್ರುಶೇಶವರು ಡಿಲ್ಲಿಗೆ ಚಿತ್ತಯಿಸಿದಾಗ ಅವರ ಮನೋರಂಜನೆಗೆ ಒಂದು ದಶಾವತಾರದಾಟವನ್ನು ಮಾಡಿಸಿಯೂ ಭಾರತ ಸರಕಾರವು ಯಕ್ಷಗಾನ ಕಲೆಯನ್ನು ವಿಶೇಷ ಗೌರವಿಸಿದೆ.

ತೆಂಕಣ ಯಕ್ಷಗಾನ ಕವಿಗಳು

ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯ, ಸಾಹಿತ್ಯಶಿರೋಮಣಿ.

['ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿ'ಗಳಾದ ಕನ್ನಡದ ಕವಿಗಳು ಬರೆಯದ ಕಾವ್ಯವಸ್ತುವಿಲ್ಲ. ಅವರು ಕಾವ್ಯಪ್ರಿಯರಾದಂತೆ ಕಲಾಪ್ರಿಯರೂ ಹೌದು ! ನಮ್ಮ ನಾಡಿನ ಪ್ರಾಚೀನ ಕಲೆಯಾದ ಯಕ್ಷಗಾನವು ಬೆಳೆದಷ್ಟು ವಿಶಾಲವಾಗಿ ಇತರ ಜಾನಪದ ಕಲೆಗಳು ಬೆಳಗಿಲ್ಲವೆನ್ನಲೂ ಬಹುದು. ಈ ಪ್ರಬಂಧದಲ್ಲಿ ಯಕ್ಷಗಾನದ ತೆಂಕುತಿಟ್ಟಿನ ಕೆಲವು ಕವಿಗಳ ವಿಚಾರವಾಗಿ ಮಾತ್ರ ಸಂಗ್ರಹಿಸಲಾಗಿದೆ. ಇಲ್ಲಿ ಉಲ್ಲೇಖಿಸಿದ ಹೆಚ್ಚಿನ ಕವಿಗಳೂ 'ಮಧುಪುರದ ವಿಘ್ನೇಶ'ನನ್ನು ಸ್ತುತಿಸಿದವರೇ ಆಗಿದ್ದಾರೆ.]

ಕುಂಬಳೆ ಸೀಮೆಯಲ್ಲಿ ಯಕ್ಷಗಾನ

ಕುಂಬಳೆ ಸೀಮೆಯಲ್ಲಿ ತಮ್ಮ ಕಾವ್ಯಶ್ರೀಯನ್ನು ಬೆಳಗಿಸಿದ ಪ್ರಾಚೀನ ಕವಿಗಳು ಅನೇಕರಿದ್ದರು. ಯಕ್ಷಗಾನ ಕಲಾಚಾರ್ಯನಾದ ಪಾರ್ತಿಸುಬ್ಬನು ಹುಟ್ಟಿದ ನಾಡು ಇದೇ ಅಲ್ಲದೆ ಬೇರೆ ಅಲ್ಲ. ಯಕ್ಷಗಾನಕ್ಕೆ ಒಂದು ರೂಪುಕೊಟ್ಟು, ಅದು ಜನಾದರಣೀಯವಾಗುವಂತೆ ಮಾಡಿದವನೇ ಪಾರ್ತಿಸುಬ್ಬ. ಪಾರ್ತಿಸುಬ್ಬನಿಂದ ತೊಡಗಿ ಅಭಿನವ ಕವಿಗಳ ವರೆಗೂ ಇಲ್ಲಿನ ಸಾಹಿತ್ಯ ಪರಂಪರೆ ಬೆಳೆದುಬಂದಿದೆ.

'ಸುಬ್ಬ' ಎಂಬ ಹೆಸರನ್ನೆತ್ತಿದೊಡನೆ ನಮ್ಮ ಮುಂದೆ ಹಿರಿದಾದ ಒಂದು ಸಮಸ್ಯೆ ಎದ್ದು ನಿಲ್ಲುತ್ತದೆ. ಸುಬ್ಬನು ಕುಂಬಳೆ ಸೀಮೆಯವನು 'ಹೌದು - ಅಲ್ಲ' ಎಂಬ ವಾದ ಮೊದಲು ಹುಟ್ಟಿದ್ದರೆ, 'ಅವನು ಕವಿಯೋ– ಕೃತಿಚೋರನೋ' ಎಂಬ ವಾದ ಮತ್ತೆ ಮುಂದುವರಿಯಿತು. ಪಾರ್ತಿಸುಬ್ಬನ ಕುರಿತಾದ ಈ ಹೊಸ ವಾದವು ಮುಂದೆ ಬಂದ ನಂತರ ಆ ಕುರಿತು ಬೇಕಾದಷ್ಟು ಸಂಶೋಧನೆಗಳು ನಡೆದುವು. ಹಲವರು ಹಲವು ರೀತಿಯ ಊಹಾಪೋಹಗಳನ್ನು ಸಂಶೋಧನೆಯ ಒರೆಗಲ್ಲಿನಲ್ಲಿ ಕಲ್ಪಿಸಿದರು. ಅಂತೂ ಸುಬ್ಬನು ಒಬ್ಬ ಸಮಸ್ಯಾಪುರುಷ ! ಕೀರ್ತಿಕಾಮಿನಿಯ ವಿಯೋಗ ವ್ಯಥೆಗೆ ಈಡಾದ ಅವನ ಕವಿಪ್ರತಿಭೆ ನೀರ ಮೇಲಣ ಬರೆಹದಂತಾದುದು ಕವಿಯ ದೌರ್ಭಾಗ್ಯವೋ ಏನೋ ! ಆದರೆ ಅವನ ನಂತರ ಆ ಕಲೆಯ ಪ್ರತೀತಿ ಈ ನಾಡಿನಲ್ಲಿ ಇನ್ನಷ್ಟು ಪ್ರಸಾರವಾಗತೊಡಗಿತು. ನೆರೆನಾಡುಗಳಲ್ಲೂ ಇದು ಹಬ್ಬಿ ಜನಪ್ರಿಯತೆಯನ್ನು ಗಳಿಸಿತು. ಅಂತೂ ಯಕ್ಷಗಾನದ ಈ ಪಿತಾಮಹನನ್ನು - ಈ ಕಲಾಚಾರ್ಯನನ್ನು ಈ ನಾಡಿನ ಇತರ ಹಲವಾರು ಕವಿಗಳ ಜೊತೆಗೆ ಸ್ಮರಿಸಬೇಕಾದುದು ನಮ್ಮ ಕರ್ತವ್ಯ,

ನಾಲ್ವರು ಸುಬ್ಬಂದಿರು ?

ಸಮಸ್ಯಾಪುರುಷನಾದ ಪಾರ್ತಿಸುಬ್ಬನು ಕುಂಬಳೆಯ [ಕಣಿಪುರದ] ಗೋಪಾಲಕೃಷ್ಣ ದೇವಸ್ಥಾನದ ಸೇವಕನೂ ಪರಮಭಕ್ತನೂ ಆಗಿದ್ದು, ಹಲವಾರು ಪ್ರಸಂಗಗಳನ್ನು ರಚಿಸಿದವನು. ಪಟ್ಟಾಭಿಷೇಕ, ಪಂಚವಟಿ ಮುಂತಾದ ರಾಮಾಯಣದ ಜನಪ್ರಿಯ ಪ್ರಸಂಗಗಳ ಕರ್ತಾರನು ಅವನೆ. ಭಾರತದಲ್ಲಿ ಅವನ ಕೃತಿ 'ಐರಾವತ' ಮಾತ್ರ ನಮಗೆ ದೊರೆಯುತ್ತದೆ. ಭಾಗವತದಲ್ಲೂ ಅಷ್ಟೆ. ಅವನ ಏಕಮಾತ್ರ ಕೃತಿ 'ಕೃಷ್ಣಾವತಾರ ಸಹಿತ ಬಾಲಲೀಲೆ'ಯಲ್ಲದೆ ಬೇರಾವುದೂ ದೊರೆಯುವಂತಿಲ್ಲ. ಆದರೆ ಕೆಲವರು ಮಾತ್ರ ಅವನು ಬರೆಯದ ಪ್ರಸಂಗಗಳನ್ನೂ ಅವನವು– ಎಂಬುದಾಗಿ ತಪ್ಪು ತಿಳುವಳಿಕೆಯನ್ನಿಟ್ಟುಕೊಂಡಿದ್ದಾರೆ. ಹಾಗೆ ಸಂಶಯಾತ್ಮಕವಾದ ತಪ್ಪು ತಿಳುವಳಿಕೆಗೆ ಒಳಪಟ್ಟ ಪ್ರಸಂಗಗಳಿವು–

1. ಶ್ರೀಕೃಷ್ಣ ಪಾರಿಜಾತ 2. ರುಕ್ಮಿಣೀ ಸ್ವಯಂವರ 3. ರಾವಣೋದ್ಭವ 4. ರಾವಣವಧೆ.

ಯಥಾರ್ಥವಾಗಿ ಇವು ಪಾರ್ತಿಸುಬ್ಬನ ಪ್ರಸಂಗಗಳಲ್ಲ. ಅದು ಯಾರೋ ಹೇಳಿದುದನ್ನು ಯಾರೋ ಕೇಳಿ ಹೇಳಿದ ಒಂದು ಊಹಾವಾದವೆಂದಿಷ್ಟೇ ತಿಳಿಯಬಹುದು. ಯಾಕೆಂದರೆ ಈ ನಾಲ್ಕು ಕೃತಿಗಳಲ್ಲೂ ಪ್ರತ್ಯೇಕ ಪ್ರತ್ಯೇಕವಾದ ಕವಿಯ ಹಾಗೂ ಸ್ಥಳದ ಹೆಸರಿನ ಮುದ್ರಿಕೆಗಳಿವೆ. ಶೈಲಿಯಲ್ಲೂ ಸಾಕಷ್ಟು ಅಂತರವನ್ನು ನಾವು ಮನಗಾಣಬಹುದು. ಅಥವಾ ರಾಮಾಯಣ ಸಂಧಿಯ ಇತರ ಪ್ರಸಂಗಗಳನ್ನೂ ಈ ನಾಲ್ಕು ಪ್ರಸಂಗಗಳನ್ನೂ ಒಂದು ತುಲನಾತ್ಮಕ ದೃಷ್ಟಿಯಿಂದ ಓದಿದರೆ, ಕವಿತಾ ಶೈಲಿಯಲ್ಲೂ ಕಥಾನಿರೂಪಣೆಯಲ್ಲೂ ಕಾಣಬಹುದಾದ ಕವಿಹೃದಯದ ವ್ಯತ್ಯಾಸವು ನಮಗೆ ಸ್ಪಷ್ಟವಾಗಿಯೇ ಆಗುವುದು.

ಇವುಗಳಲ್ಲಿ ಮೊದಲನೆಯ ಎರಡು ಪ್ರಸಂಗಳನ್ನು ಬರೆದಾತ ಅಜಪುರದ ಸುಬ್ಬ–೧. ಮೂರನೆಯ ಪ್ರಸಂಗವನ್ನು 'ನಗರ'ದವನೆಂದು ಹೇಳಲಾದ ಬೇರೊಬ್ಬ ಸುಬ್ಬ–೨. ನಾಲ್ಕನೆಯ ರಾವಣವಧೆಯನ್ನು ಬರೆದವನು ಕಾಸರಗೋಡಿನವನೇ ಆದ ಸುಬ್ರಾಯನೆಂಬ ಹೆಸರಿನ ಇನ್ನೊಬ್ಬ ಕವಿ. ಅಂತೂ ಈ ನಾಲ್ಕು ಕವಿಗಳ ಹೆಸರಿನಲ್ಲೂ 'ಸುಬ್ಬ' ಎಂಬ ಪದದ ಸಾದೃಶ್ಯವಿದ್ದುದರಿಂದ ಅವಿಚಾರಿತವಾಗಿಯೇ ಇಂತಹ ಪ್ರಮಾದಾತ್ಮಕವಾದ ಕಲ್ಪನೆ ಹುಟ್ಟಿಕೊಂಡಿರಬೇಕು.

ಹನುಮದ್ರಾಮಾಯಣವನ್ನು ಬರೆದ ವೆಂಕಾರ್ಯಸುತ ಸುಬ್ಬನೇ ಯಕ್ಷಗಾನ ರಾಮಾಯಣಾದಿ ಪ್ರಸಂಗಗಳ ಕರ್ತೃವಾಗಿರಲಾರ– ಎಂಬ ವಿಷಯದಲ್ಲಿ ಈ ಹಿಂದೆ ಕುಂಬಳೆಯಲ್ಲಿ ಜರಗಿದ ಪಾರ್ತಿಸುಬ್ಬ ಜಯಂತಿಯ ಸಂದರ್ಭವೊಂದರಲ್ಲಿ ನಾನು ಉಪನ್ಯಾಸಮಾಡಿದ್ದೆ. ಲೇಖನ ವಿಸ್ತರಭಯದಿಂದ ಅದನ್ನು ಇಲ್ಲಿ ಸದ್ಯ ವಿವೇಚಿಸುವುದಿಲ್ಲ. ಅಲ್ಲದೆ ಆ ಕುರಿತು ಈಗಾಗಲೇ ಸಾಕಷ್ಟು ಅಭಿಪ್ರಾಯಗಳೂ ಬೆಳಕಿಗೆ ಬಂದಿವೆ. ಆದ್ದರಿಂದ ತೆಂಕುತಿಟ್ಟಿನ ಇತರ ಕೆಲವು ಕವಿಗಳ ಕುರಿತು ಮಾತ್ರ ಈ ಲೇಖನದಲ್ಲಿ ವಿವೇಚಿಸಬಯಸುತ್ತೇನೆ.

ಕಾಸರಗೋಡು ಸುಬ್ರಾಯ ಕವಿ

ಯಕ್ಷಗಾನದಲ್ಲಿ ರಾವಣವಧೆಯ ಕಥಾಭಾಗವನ್ನೆತ್ತಿಕೊಂಡು ಪ್ರಸಂಗ ಬರೆದವರು ೩ ಮಂದಿ.

(i) ಕಾಸರಗೋಡು ಸುಬ್ರಾಯ — ರಾವಣೇಶ್ವರನ ಕಾಳಗ (ಅಥವಾ ರಾವಣ ವಧೆ)

(ii) ತೋಟಿ ತಿಮ್ಮಯ ಭಟ್ಟ — ರಾವಣ ಮುಕ್ತಿ ಪ್ರದ

(iii) ಕೊರ್ಡೆಲ್ ವೆಂಕಟರಾವ್ — ದಶಕಂಠನ ಮೂಲಬಲ ಸಂಹಾರ ಮತ್ತು ರಾವಣಾಸುರಕಾಳಗ

ಇವರಲ್ಲಿ ಕೊರ್ಡೆಲ್ ವೆಂಕಟರಾಯರ ರಾವಣಾಸುರ ಕಾಳಗವು ೧೯೨೬ರಲ್ಲಿ ಮುದ್ರಿತವಾಯಿತು. ತೋಟಿ ತಿಮ್ಮಯ ಭಟ್ಟನ 'ರಾವಣ ಮುಕ್ತಿ ಪ್ರದ' ಪ್ರಸಂಗವು ಇನ್ನೂ ಮುದ್ರಿತವಾಗಿಲ್ಲ. ಅದು ಗಾತ್ರದಲ್ಲಿಯೂ ಸ್ವಲ್ಪ ದೊಡ್ಡದೇ ಆಗಿದೆ. ಪಟ್ಟಾಭಿಷೇಕ ಮುಂತಾದ ಪ್ರಸಿದ್ಧ ಕೃತಿಗಳನ್ನು ಬರೆದ ಸುಬ್ಬನ ಕವಿಹೃದಯದಿಂದಲೇ ಹೊರಡಬೇಕಾಗಿದ್ದ 'ರಾವಣವಧೆ'ಯ ಕಥಾ ಪ್ರಸಂಗವನ್ನು ನೋಡುವ ಭಾಗ್ಯ ನಮಗಿಲ್ಲದಿದ್ದರೂ, ತತ್ಪೂರಕವಾಗಿ ಬೇರೆ ಕವಿಗಳು ಬರೆದ ಈ ಮೂರು ಪ್ರಸಂಗಗಳಿಂದಲಾದರೂ ಆ ಕೊರತೆ ಕೊಂಚಮಟ್ಟಿಗೆ ನೀಗಿದೆಯೆಂಬುದು ಸಂತೋಷದ ವಿಷಯ. ಈ ಕುರಿತು ದಿ। ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ ಹೀಗಿದೆ.

"ಪಾರ್ತಿಸುಬ್ಬನೇ ಬರೆದಿರಬೇಕಾದ ರಾವಣವಧೆಯೆಂಬ ರಾಮಾಯಣ ಪ್ರಸಂಗಾವಳಿಯಲ್ಲಿ ಒಂಭತ್ತನೆಯದಾದ ಕಡೆಯ ಪ್ರಸಂಗ ನನಗಿನ್ನೂ ದೊರೆತಿಲ್ಲ. ಆದರೆ ಊರಲ್ಲಿ 'ರಾವಣೇಶ್ವರ ಕಾಳಗ

ರಾವಣವಧೆ' ಎಂದು ಅದೇ ಕಥಾಸಾರವನ್ನೊಳಗೊಂಡ ಎರಡು ಪ್ರಸಂಗಗಳಿವೆ. ಮೊದಲಿನದನ್ನು ಉಡುಪಿ ಪ್ರಾಂತದವರೊಬ್ಬರು ಬರೆದುದೆಂದು ಕೃತಿಯಿಂದಲೆ ಗೊತ್ತಾಗುತ್ತದೆ. ಮಾತ್ರವಲ್ಲ, ಅದು ಅತ್ಯಾಧುನಿಕವಾದುದೆಂದೂ ತಿಳಿದು ಬರುತ್ತಿದೆ. ಮತ್ತಿನದನ್ನು ನಮ್ಮ ಕವಿಯೇ ಬರೆದಿರಬೇಕೆಂದು ಕೆಲವರಾಡುತ್ತಾರೆ. ಪಾರ್ತಿಸುಬ್ಬನ ಪ್ರಸಂಗಗಳಲೆಲ್ಲಾ ತೋರುವ "ಕಣ್ವಪುರಪತಿ" ಎಂಬ ಮುದ್ರೆ ಅದರೊಳಗಿಲ್ಲ ಎಂದಷ್ಟೆ ಅಲ್ಲ, ಅದರೊಳಗಿನ ಶೈಲಿಗೂ ಸುಬ್ಬನದಕ್ಕೂ ಇರುಳು ಹಗಲುಗಳ ಅಂತರ ವಿದೆ. ಇತ್ತೀಚೆಯವನಾದ, ಪುತ್ತೂರು, ಕಾಸರಗೋಡು ಪ್ರಾಂತದ ಯಾರೋ ಒಬ್ಬ ಕವಿ ಎಂಬವನು ಬರೆದುದಲ್ಲದೆ, ಅದು ಪ್ರಕೃತ ಕವಿಯ ಎದೆಯಿಂದುಕ್ಕಿದುದು ಅಲ್ಲವೇ ಅಲ್ಲ."

[ಪಾರ್ತಿಸುಬ್ಬ ಗ್ರಂಥ- ದಿ। ಮುಳಿಯ ತಿಮ್ಮಪ್ಪಯ್ಯನವರು]

ಅವರು ಚರ್ಚಿಸಿದ ರೀತಿಯಲ್ಲೂ ರಾವಣೇಶ್ವರನ ಕಾಳಗದ ಪ್ರಸಂಗದ ಕರ್ತಾರನು ಯಾರಾಗಿರಬಹುದೆಂಬ ನಿಶ್ಚಿತಾಭಿಪ್ರಾಯಕ್ಕೆ ಬಂದಿಲ್ಲ. ಅಂತೂ ದಿ। ತಿಮ್ಮಪ್ಪಯ್ಯನವರ ಕಾಲದಲ್ಲಿ ಆ ಕವಿಯ ಕುರಿತು ಹೆಚ್ಚಿನ ಪರಿಚಯ ಜನರಿಗಾಗಿಲ್ಲವೆಂದು ತಿಳಿದು ಬರುತ್ತದೆ. ಇತ್ತೀಚೆಗೆ ನನಗೆ ದೊರೆತ ಕೆಲವು ಹಸ್ತ ಪ್ರತಿಗಳನ್ನು ಪರಿಶೋಧಿಸಿದಾಗ ನನ್ನ ಸಂಶಯ ಪರಿಹಾರವಾಯಿತು. ಅದರ ಜೊತೆಗೆ ೧೮೬೦ನೆಯ ಇಸವಿಯಲ್ಲಿ ಮೊತ್ತ ಮೊದಲಾಗಿ ಮುದ್ರಿತವಾದ ಒಂದು ಹಳೆಯ ಅಚ್ಚುಪಡಿಯ ಪುಸ್ತಕವೂ ನನಗೆ ದೊರೆಯಿತು. ಮೂಲದಲ್ಲಿ ಈ ಪ್ರಸಂಗದ ಹೆಸರು ರಾವಣೇಶ್ವರನ ಕಾಳಗವೆಂದಿದ್ದರೂ, ಇದನ್ನೆ ರಾವಣ ವಧೆಯೆಂಬ ಸಾಮಾನ್ಯ ಹೆಸರಿನಿಂದ ಹೇಳುವ ರೂಢಿಯಿದೆ. ಆದರೆ ದಿ। ತಿಮ್ಮಪ್ಪಯ್ಯನವರು ಹೇಳುವ "ವಿಟ್ಲ ಮಂಜೇಶ್ವರ ಊರುಗಳ ಮಧ್ಯಪ್ರಾಂತದಲ್ಲಿದ್ದ ಒಬ್ಬ ಬ್ರಾಹ್ಮಣ ಕವಿಯೇ ರಾವಣ ವಧೆ ಪ್ರಸಂಗವನ್ನು ಬರೆದವನಾಗಿರಬಹುದೆಂಬ ಕೆಲವರ ಆಡುಮಾತಿನ ಊಹೆಯು" ಕವಿ ಇವನಲ್ಲ. ಬಹುಶಃ ಅವರು ಕೇಳಿ ತಿಳಿದ ಆ ಹೇಳಿಕೆಯು 'ರಾವಣ ಮುಕ್ತಿಪ್ರದ' ಪ್ರಸಂಗವನ್ನು ಬರೆದ ತೋಟಿ ತಿಮ್ಮಯ ಭಟ್ಟನ ಕುರಿತಾಗಿರಬಹುದೆಂದು ಕಾಣುತ್ತವೆ. ರಾವಣೇಶ್ವರನ ಕಾಳಗದಲ್ಲಿ ಕವಿಮುದ್ರಿಕೆ ಸ್ಪಷ್ಟವಾಗಿದೆ—

"ಮೆರೆವ ಕಾಸರಗೋಡ ಪುರದೊಳ-
ಗಿರುತಿರುವ ಭೂಸುರ ಕುಲೋತ್ತಮ
ಪರಮ ಭಗವದ್ಭಕ್ತ ಬೀಕೃಷ್ಣಯ್ಯನೆಂಬುವನ ॥
ತರಳನಾ ಸಿದ್ಧಾಂತಿ ಪಂಡಿತ
ವರನು ಸುಬ್ರಾಯಾಖ್ಯನೆಸಗಿಹ
ಚರಿತೆಯಿದು ಶ್ರೀರಾಮಚಂದ್ರನ ಕರುಣದಿಂದೊಲಿದು ॥

ಕವಿಯೇ ಹೇಳಿಕೊಂಡ ಮೇಲಿನ ಮುದ್ರಿಕೆಯ ಆಧಾರದಂತೆ ಈತನು ಬ್ರಾಹ್ಮಣನೆಂದೂ, ಕಾಸರಗೋಡಿನಲ್ಲಿರುವ ಕೃಷ್ಣಯ್ಯನೆಂಬವನ ಮಗನೆಂದೂ, ಜ್ಯೋತಿಷ್ಯವನ್ನು ಅಭ್ಯಾಸ ಮಾಡಿದವನೆಂದೂ— ತಿಳಿಯಬಹುದಾಗಿದೆ. ಈತನ ತಂದೆ ಬೀರಂತ ಬೈಲಿನಲ್ಲಿದ್ದುದರಿಂದ 'ಬಿ' ಎಂಬ ಪದವು ಅದರ ಸಂಕೇತಾಕ್ಷರವೆಂದು ತಿಳಿಯಬಹುದು.

ಈ ಪ್ರಸಂಗದ ಆದಿಯಲ್ಲಿ ಬರುವ ವಿಘ್ನೇಶ್ವರ ಸ್ತುತಿಯು ಮಧೂರು ಗಣಪತಿಯ ಕುರಿತಾಗಿದೆ.

"ಧರೆಯೊಳು ರಂಜಿಸುವಾ । ಮಧುಪುರ ।
ವರದೊಳು ನೆಲೆಸಿರುವ ।
ಕರುಣದಿ ನಿಜ ಕಿಂ । ಕರರಿಗೊಲಿದು ಮನ ।
ದಿರವನು ಪಾಲಿಸುತಿರುವ ವಿನಾಯಕ ॥"

ಈ ಪ್ರಸಂಗವನ್ನು ಅನಂತರ ಉಡುಪಿಯ ಶ್ರೀಕೃಷ್ಣ ಮುದ್ರಣಾಲಯದವರು ಪುನರ್ಮುದ್ರಿಸಿರುವರು. ಈತನು ತನ್ನ ಜೀವನದ ಕೊನೆಯ ಕಾಲ 'ತೀರ್ಥಹಳ್ಳಿ'ಯಲ್ಲಿದ್ದನೆಂದೂ ಹೇಳಿಕೆಯಿದೆ.

ತೋಟ ತಿಮ್ಮಯ ಭಟ್ಟ

ಈ ಕವಿಯ ಮೀನಾಕ್ಷಿ ಕಲ್ಯಾಣ ಮತ್ತು ರಾವಣ ಮುಕ್ತಿಪ್ರದವೆಂಬ ಎರಡು ಪ್ರಸಂಗಗಳು ಮಾತ್ರ ನನಗೆ ದೊರೆತಿವೆ. ದಿ॥ ತಿಮ್ಮಪ್ಪಯ್ಯನವರು ಊಹಿಸಿ ಹೇಳಿದ 'ವಿಠ್ಠಲ ಮಂಜೇಶ್ವರ ಊರುಗಳ ಮಧ್ಯಪ್ರಾಂತದಲ್ಲಿದ್ದ ಒಬ್ಬ ಬ್ರಾಹ್ಮಣ ಕವಿ' ಈತನೇ ಆಗಿರಬೇಕೆಂದು ನನ್ನ ಅಭಿಪ್ರಾಯ. ಅಂತೂ ಇವನು ಕಾಸರಗೋಡು ತಾಲೂಕಿನ ವರ್ಕಾಡಿ ಮಾಗಣೆಯ ಕೊಳ್ಳೂರು ಗ್ರಾಮದವನು. ಇವನು ಆ ಪ್ರಾಂತದ ಹವ್ಯಕ ಬ್ರಾಹ್ಮಣರ ಪುರೋಹಿತನಾದ ಗಣಪತಿಭಟ್ಟನೆಂಬವನ ಮಗನೆಂದು ತಿಳಿದುಬರುತ್ತದೆ. 'ಕೋಳ್ಳೂರು ಶಂಕರ ನಾರಾಯಣ ದೇವರ ಕೃಪೆಯಿಂದ' ತಾನು ಈ ಕೃತಿಯನ್ನು ಬರೆದಿರುವೆನೆಂದು ಹೇಳಿರುವನು. 'ರಾವಣ ಮುಕ್ತಿಪ್ರದ' ಪ್ರಸಂಗದಲ್ಲಿ ತನ್ನ ಹೆಸರನ್ನು 'ತಿಮ್ಮಯ'ನೆಂದು ಸಂಕ್ಷೇಪವಾಗಿಯೂ 'ಮೀನಾಕ್ಷಿ ಕಲ್ಯಾಣ'ದಲ್ಲಿ 'ತಿರುಮಲೇಶ'ನೆಂದು ಪೂರ್ಣವಾಗಿಯೂ ಉಲ್ಲೇಖಿಸಿರುವನು.

ದೇಲಂತಪುರ ಕೃಷ್ಣ

ಈ ಕವಿಯು ಬರೆದ ಒಂದೇ ಒಂದು ಪ್ರಸಂಗ ಭಾರತದೊಳಗಣ 'ಸ್ವರ್ಗಾರೋಹಣ ಪರ್ವ' ಮಾತ್ರ ನನಗೆ ದೊರೆತಿದೆ. ಈ ಪ್ರಸಂಗದಲ್ಲಿ ಒಟ್ಟು ೪೪೫ ಪದ್ಯಗಳಿವೆ. ಪ್ರಸಂಗದ ಆರಂಭದಲ್ಲಿ "ಧರೆಯೊಳು ಮಧುಪುರ ಸಂಸ್ಥಿತ। ಸ್ಮರಿಸುವೆನನವರತ" – ಎಂಬುದಾಗಿ ಮಧೂರ ಗಣಪತಿಯನ್ನು ಸ್ತುತಿಸಿರುವನು. ಕವಿಯು ಕಥಾಸಾರಾಂಶವನ್ನು ಹೀಗೆ ಬರೆದಿರುವನು.

"ಶ್ರೀ ಮಹಾಭಾರತ ಪುರಾಣ ಕಥನದಲಿ । ಕಾಮಪಿತ ವೈಕುಂಠ ಸೇರ್ದಮೇಲಿನಲಿ । ಕಲಿಯುಗವು ಬಂತೆನುತ ಪಾಂಡುನಂದನರು । ಕಳಚಿ ಕಾಯವನು ಸುರಲೋಕ ಸಾರಿದರು॥ ಇತ್ತಲು ಪರೀಕ್ಷಿತನು ಕಲಿಯ ಬಂಧಿಸುತ । ಸತ್ಯಸದ್ಗುಣದಿಂದ ಧರೆಯ ಪಾಲಿಸುತ । ಮೆರೆದಿರ್ದನೆಂದೆಂಬ ಪರಮ ಸತ್ಕಥೆಯ । ಅರುಹುವೆನು ಯಕ್ಷಗಾನದಲಿ ಸಂಗತಿಯ ॥

ಈ ಪ್ರಸಂಗವು ರಂಗಭೂಮಿಯಲ್ಲಿ ಹೆಚ್ಚು ಪ್ರಯೋಗವನ್ನು ಹೊಂದಲಿಲ್ಲವೆನಿಸುತ್ತದೆ. ಕವಿಯು ಪ್ರಾರಂಭದಲ್ಲಿ 'ಶೇಷಶಯನ'ನಾದ ಶ್ರೀಕೃಷ್ಣನನ್ನು ಸ್ತುತಿಸಿರುವನು. ಈತನ ಪದಪ್ರಯೋಗಗಳು ತುಂಬಾ ಸುಲಲಿತವೂ ಔಚಿತ್ಯಪೂರ್ಣವೂ ಆಗಿದ್ದು ಕವಿಪ್ರತಿಭೆಯನ್ನು ಎತ್ತಿ ತೋರಿಸುವವುಗಳಾಗಿವೆ. ಈ ಕವಿಯ ಕುರಿತು ಬಲ್ಲವರಿಂದ ಹೆಚ್ಚಿನ ಮಾಹಿತಿಯನ್ನು ತಿಳಿಯಲಪೇಕ್ಷಿಸುತ್ತೇನೆ. ಯಾರಾದರೂ ಅನುಭವಸ್ಥರು ಈತನ ಇತರ ಕೃತಿಗಳ ಬಗ್ಗೆಯೂ ಬೆಳಕು ತೋರುವ ಅಗತ್ಯವಿದೆ. ಏಕೆಂದರೆ ಈ ಕವಿಯ ಕವಿತಾಶಕ್ತಿಯು ತುಂಬಾ ಶ್ಲಾಘ್ಯವಾಗಿದೆ.

ಮುಂಡೋಡಲ ನಾರಾಯಣ ಕವಿ

ಈತನು ಎರಡು ಉತ್ತಮ ಕೃತಿಗಳನ್ನು ಯಕ್ಷಗಾನ ಸಾಹಿತ್ಯಕ್ಕೆ ಒದಗಿಸಿರುವನು. ಮೊದಲನೆಯದು ಸತ್ಯಭಾಮಾ ಪರಿಣಯ, ಎರಡನೆಯದು ರೇವತೀ ಕಲ್ಯಾಣ. ರೇವತೀ ಕಲ್ಯಾಣ ಪ್ರಸಂಗವನ್ನು ಪಾಮಂಜೂರು ಪರಮೇಶ್ವರಯ್ಯ – ಎಂಬವರೂ ಬರೆದಿರುವರು. ಅದು ಮುದ್ರಿತವಾಗಿದೆ. ಆದರೆ ನಾರಾಯಣ ಕವಿಯ ಇವೆರಡು ಪ್ರಸಂಗಗಳು ಇನ್ನೂ ಮುದ್ರಿತವಾಗಿಲ್ಲ. ಈತನು ತನ್ನ ರೇವತಿ ಕಲ್ಯಾಣದ ಪ್ರಾರಂಭದಲ್ಲೂ, ಸತ್ಯಭಾಮಾ ಪರಿಣಯದ ಪ್ರಾರಂಭದಲ್ಲೂ ಮಧೂರಿನ ವಿಘ್ನೇಶ್ವರನನ್ನು ಸ್ತುತಿಸಿರುವನು.

"......ಸ್ಕಂಧಾಗ್ರಜದ್ವೈಮಾತುರ । ಉಂದುರುವಾಹನ ಭಜಕರ ।
ಸುಂದರಕಾಯ ಗಣೇಶ್ವರ । ವಂದ್ಯ ಕಲುಷದೂರ॥

ಚಂದನ ಕುಂಕುಮಲಂಕೃತ । ವೃಂದಾರಕ ಸನ್ನುತ ಅರ-
ವಿಂದ ಭವಾರ್ಚಿತ ಮಧುಪುರ । ಮಂದಿರ ಸುವಿಚಾರ ॥
(–ರೇವತೀಕಲ್ಯಾಣ)

"......ಜಯಲಂಬೋದರ ಶುಭಕರ । ಜಯ ಜಯ ರವಿಶತಭಾಸುರ ।
ಜಯ ಶ್ರೀಕರ ದ್ವೈಮಾತುರ । ಜಯ ಕುಮತಿವಿದೂರ ॥
ಜಯ ಸುಮನಸಕುಲಪಾಲನ । ಜಯ ಜಯ ಪಾಪವಿಮೋಚನ ।
ಜಯ ಜಯ ಮೂಷಿಕವಾಹನ । ಜಯ ಮಧುಪುರ ಸದನ ॥
(–ಸತ್ಯಭಾಮಾ ಪರಿಣಯ)

ಕವಿಯು ತಾನು 'ವಿಶ್ವಾಮಿತ್ರಗೋತ್ರಜ ನಾರಾಯಣ'ನೆಂಬುದಾಗಿ ಹೇಳಿಕೊಂಡಿರುವನು. ಸತ್ಯಭಾಮಾ ಪರಿಣಯದಲ್ಲಿ 'ಕಣ್ವಪುರ'ದ ಅಂಕಿತವಿದೆ. ಸತ್ಯಭಾಮಾ ಪರಿಣಯದ ಒಂದು ತಾಡ ವಾಲೆಯನ್ನೂ ನಾನು ನೋಡಿದ್ದೇನೆ.

ಈಗ್ಗೆ ಒಂದು ತಿಂಗಳ ಹಿಂದೆ ಈತನ ಇನ್ನೆರಡು ಗ್ರಂಥಗಳು ನನಗೆ ದೊರೆತುವು. ಒಂದನೆಯದು ಗೀತಾಭಾಮಿನಿಷಟ್ಪದಿ; ಇನ್ನೊಂದು ಅನಂತವ್ರತ ಕಥೆಯು ಭಾಮಿನಿಷಟ್ಪದಿ ಕಾವ್ಯ.

ಬನ್ನೂರು ನಾರಾಯಣ ಭಾಗವತ

ಈತನ ತಂದೆ ವೆಂಕಟೇಶ ಭಾಗವತ. ಈತನು ಹತ್ತೊಂಭತ್ತನೆಯ ಶತಮಾನದವನೆಂದು ತಿಳಿಯಲಾಗಿದೆ. 'ಮೂಲಕಾಸುರ ಕಾಳಗ' ಈ ಕವಿಯ ಒಂದು ಉತ್ತಮ ಕೃತಿ. ಪ್ರಸಂಗದ ಸ್ತುತಿ ಪದ್ಯಗಳಲ್ಲಿ ಮಧೂರಿನ ಹೆಸರು ಅಲ್ಲಲ್ಲಿ ಬರುತ್ತಿದೆ.

"......ಮದನಾರಿಯೆ ಪೊಡವಿಯೊಳಿಹ । ಬುಧಕುಲ ಪರಿಪಾಲನೆಗಾ
ಮಧುಪುರದೊಳಗವತರಿಸಿದೆ । ಮದನೇಶನುಯೆನಿಸಿ ॥"
"......ಬರಿಯಬತ್ತಲೆನಿಂತ ಬೌದ್ಧನಿಗೆ । ತುರಗವನೇರಿದ ಕಲ್ಕ್ಯನಿಗೆ ।
ವರಲಕ್ಷ್ಮಿಪತಿ ನಾರಾಯಣಗೆ । ಧರೆಯೊಳು ಮಧುಪುರವಾಸ ಗಣೇಶಗೆ ॥

ಈತ ಕುಂಬಳೆ ಸೀಮೆಗೆ ಪ್ರಸಿದ್ಧ ಭಾಗವತನೆಂದು ಪ್ರತೀತಿಯಿದೆ. ಕವಿಯ ಕುಟುಂಬವವರು ಈಗಲೂ ಇದ್ದಾರೆ. ಈ ಕವಿಯ ಮಗನೊಬ್ಬನು ಉತ್ತಮ ಸಂಗೀತಗಾರನೂ ಹರಿದಾಸನೂ ಆಗಿದ್ದನೆಂದು ಹೇಳಿಕೆಯಿದೆ.

ಮೂಲಕಾಸುರ ಕಾಳಗವು ಯಕ್ಷಗಾನ ರಂಗಭೂಮಿಗೆ ಒಪ್ಪುವ ಕಥಾನಕ. ಅದರಲ್ಲೂ ಕವಿಯು ಸ್ವತಃ ಭಾಗವತನಾಗಿದ್ದುದರಿಂದ ಈ ಕೃತಿಯು ತುಂಬ ಸರಸವೂ ರಮ್ಯವೂ ಆಗಿದೆ. ಕೆಲವೆಡೆ ವ್ಯಾಕರಣದ ಸಂಧಿದೋಷಗಳಿವೆಯಾದರೂ ಜನಸಾಮಾನ್ಯರಿಗೂ ವೇದ್ಯವಾಗುವ ಇದರ ಶೈಲಿಯೊಂದೇ ಈ ಕೃತಿಗೆ ಒಪ್ಪವಿಡಬಲ್ಲುದು.

ಚವರ್ಕಾಡು ಶಂಭು ಕವಿ

ಈತನು ಅಂಶುಮತೀ (ಹಂಸಾವತೀ) ಕಲ್ಯಾಣ ಮತ್ತು ಕುಮುದಾಕ್ಷಿ ಕಲ್ಯಾಣವೆಂಬ ಎರಡು ಪ್ರಸಂಗಗಳನ್ನು ಬರೆದಿರುವನು. ಅಂಶುಮತೀ ಕಲ್ಯಾಣದ ಪ್ರಾರಂಭದ ವೃತ್ತವು ಮಹೇಶಸ್ತುತಿಯಾಗಿದೆ. ಅನಂತರ ಕ್ರಮವಾಗಿ ಗಣಪತಿ ದುರ್ಗಾಂಬೆಯರ ಸ್ತುತಿಗಳಿವೆ. ಕವಿಯು ತನ್ನ ಪರಿಚಯವನ್ನು ಸ್ಪಷ್ಟವಾಗಿಯೇ ಹೇಳಿರುವನು –

ದೇಶ ದಕ್ಷಿಣ ಕನ್ನಡ ಜಿಲ್ಲಾ । ಕಾಸರ್ಗೋಡ್ ತಾಲೂಕಿನೊಳಗೆ ವಿ –
ಶೇಷವಂಗಡಿ ಮೊಗರುಮಾಗಣೆಯೆಣ್ಮಕಜೆ ಗ್ರಾಮ ॥

ವಾಸ ಚವರಿವನಾಲಯದ ಧರ । ಣೀಸುರೋತ್ತಮನಾದ ಲಕ್ಷ್ಮಿ ನಿ
ವಾಸ ನಾಮವ ಧರಿಸಿ ತೋಚಿರುವಾತನಾತ್ಮಜನು ॥

ಈತ ಬ್ರಾಹ್ಮಣ ಕವಿ. ಜೋಯಿಸರ ಮನೆತನದವನೆಂದು ತಿಳಿಯಲಾಗಿದೆ. ಪ್ರಸಂಗದ ಕೊನೆಯಲ್ಲಿ ತನ್ನ ಹೆಸರನ್ನು ಗುಪ್ತವಾಗಿ ಹೇಳಿರುವನು.

"ಶರಧಿಯಾದಿಗೆ ಬಿಂದುವನು ಸಂ–
ಸ್ಕರಿಸಿ, ನಭದಂತ್ಯಕ್ಕೆ ಶೃಂಗವ
ಕರುಣಿಸಲ್ಕಾಗುವ ಸುನಾಮವ ಪಡೆದುಕೊಂಡಿರುವ...॥"

'ಶರಧಿ' ಎಂಬ ಪದದ ಆದಿಯಕ್ಷರವಾದ ಶಕಾರಕ್ಕೆ ಬಿಂದುವನ್ನು ಸೇರಿಸಿದರೆ 'ಶಂ' ಎಂದಾಗುತ್ತದೆ. 'ನಭ' ಎಂಬ ಪದದ ಅಂತ್ಯಾಕ್ಷರವಾಗಿರುವ ಭಕಾರಕ್ಕೆ ಶೃಂಗ (ಕೋಡು)ವನ್ನು ಬರೆದರೆ 'ಭು' ಎಂದಾಗುತ್ತದೆ. ಈ ಪ್ರಕಾರವಾಗಿ ಕವಿಯು 'ಶಂ+ಭು' ಎಂಬ ತನ್ನ ಹೆಸರನ್ನು ಒಗಟಿನಲ್ಲಿ ಬರೆದಿರುವನು. ಈತನು 'ಪ್ರಭಾವತೀ ಪರಿಣಯ ಮತ್ತು 'ಮೂಲಕಾಸುರ ಕಾಳಗ'ವೆಂಬ ಬೇರೆರಡು ಪ್ರಸಂಗವನ್ನೂ ಬರೆದಿರುವನೆಂದು ತಿಳಿಯಲಾಗಿದೆ.

"ಉದಧಿ ಸಮ ಗಂಭೀರ ಸನ್ಮುದ । ಪದುಮ ಭವನುತ ಸತ್ಸದನ ವರ । ಮಧುಪುರಾಧಿಪ ಮದಗಜಾನನ ಪದಕೆರಗಿ..." ಎಂದು ಮಧುಪುರದ ಗಣಪತಿಯನ್ನೂ ಪ್ರಸಂಗದ ಕೊನೆಯಲ್ಲಿ "ನಿರತಸಲಹಂರುಡೂರ ಮಹಲಿಂಗೇಶ ತನ್ನುವನು–" ಎಂಬುದಾಗಿ ಅಡೂರು ಮಹಾಲಿಂಗೇಶ್ವರನನ್ನೂ ಸ್ತುತಿಸಿರುವನು.

ಕುದುರೆಪಾಡಿ ಈಶ್ವರಯ್ಯ

ಜೈಮಿನೀಭಾರತದಲ್ಲಿ ಬರುವ 'ಸುಧನ್ವ'ನ ಕತೆ ಒಂದು ರಮಣೀಯ ಪ್ರಸಂಗ, ಅದನ್ನೆತ್ತಿಕೊಂಡು ಪ್ರಸಂಗ ಬರೆದವರಲ್ಲಿ ಕುದುರೆಪಾಡಿ ಈಶ್ವರಯ್ಯನೂ ಒಬ್ಬ. ಈ ಕವಿಯ ಬಗ್ಗೆ ೧೯೫೫ರಲ್ಲಿ ಹೊನ್ನಾವರದ 'ಯಕ್ಷಗಾನ ಪತ್ರಿಕೆಯಲ್ಲಿ ನಾನು ಬರೆದ ಕವಿಪರಿಚಯವನ್ನೇ ಇಲ್ಲಿ ಸಂಗ್ರಹಿಸಿ ಕೊಡ ಬಯಸುತ್ತೇನೆ.

ಪ್ರಸ್ತುತ ಕವಿ ಈಶ್ವರಯ್ಯನ ಬಗ್ಗೆ ಅವನ ಕೃತಿಯಲ್ಲಿ ಕವಿಕಂಠೋಕ್ತವಾಗಿ ದೊರೆಯುವ ಆಧಾರಗಳಿಷ್ಟು:–

'ಹರವಿಪ್ರಕುಲಜ, ರಾಮಾತ್ಮಜನೀಶ್ವರ,
ತುರಗಪುರದಿ ನೆಲೆಸಿರುವ ॥
ವರಷಣ್ಮುಖನ ಕೃಪೆಯಿಂದ ಪೇಳಿದೆ ಮಧು–
ಪುರದ ಶ್ರೀ ಮದನೇಶ ಸಲಹೋ ॥

ಈ ಕವಿ ಶಿವಬ್ರಾಹ್ಮಣ ವರ್ಗದವರ ಕುಟುಂಬದವ. ಈತನ ತಂದೆಯ ಹೆಸರು ರಾಮಯ್ಯ. ಇವನ ಕಾಲ ನಿರ್ಣಯದ ಬಗ್ಗೆ ನನ್ನ ಮಿತ್ರರಾದ ಶ್ರೀಯುತ ಯಸ್. ವೆಂಕಪ್ಪಯ್ಯನವರು ಒದಗಿಸಿದ ದಾಖಲೆಗಳಿಂದಾಗಿ ಈತನು ಸಾಮಾನ್ಯ ಹದಿನೆಂಟನೆಯ ಶತಮಾನದ ಕೊನೆ ಹಾಗೂ ಹತ್ತೊಂಭತ್ತನೆಯ ಶತಮಾನದ ಆದಿಯವನೆನ್ನಬಹುದು. ತುರಗಪುರವೆಂದರೆ ಕುದುರೆಪಾಡಿ. ಅಲ್ಲಿ ಸುಬ್ರಹ್ಮಣ್ಯ ದೇವಾಲಯವೂ ಇದೆ. 'ವರದಮಧುಪುರವಾಸ । ಶರಣುವಿಘ್ನೇಶ' ಎಂಬುದಾಗಿ ಈತ ಮಧೂರ ಗಣಪತಿಯನ್ನು ಸ್ತುತಿಸಿರುವನು. ಮಂಗಳ ಪದ್ಯದಲ್ಲಿ ಕಣ್ವಪುರದ ಕೃಷ್ಣನ ಸ್ತುತಿಯೂ ಇದೆ. ಕಣ್ವಪುರಕ್ಕೆ ಸಮೀಪದ ಊರು ಕುದುರೆಪಾಡಿ. ಕುದುರೆಪಾಡಿಗೆ ಸಮೀಪದ ಊರು ಮಧೂರು. ಇವು ಅನ್ಯೋನ್ಯ ನೆರೆಯ ಊರುಗಳು. ಹಿಂದೆ ತೆಂಕುತಿಟ್ಟಿನ ಸುಧನ್ವಕಾಳಗವೆಂಬುದಾಗಿ ಇದೇ ಪ್ರಸಂಗವು ಪ್ರಚುರವಾಗಿತ್ತು. ಈಗಲೂ ಕೆಲವು ಹಳೆಯ ಭಾಗವತರು ತೆಂಕುತಿಟ್ಟಿನ ಬಯಲಾಟಗಳಲ್ಲಿ ಇದನ್ನೇ ಹಾಡುತ್ತಾರೆ.

ಮಯ್ಯವಟಿ ವೆಂಕಟರಮಣಯ್ಯ

೧೯೫೮ರಲ್ಲಿ ಈ ಕವಿಯ ಸಂಪೂರ್ಣ ಪರಿಚಯವನ್ನು ನಾನು ಸಾಧ್ಯವಾದಷ್ಟು ಸಂಗ್ರಹಿಸಿ ಪ್ರಕಟಣೆಗೆ ಕೊಟ್ಟಿದ್ದೆ. ಅದು ಪ್ರಕಟವಾದ ನಂತರ ಅದರ ಮೇಲೆ ಒಂದೆರಡು ವಿಷಯಗಳ ಕುರಿತು ಬಹಳಷ್ಟು ವಾದ ನಡೆಯಿತು. ಈ ಕವಿಯು ಹುಟ್ಟೂರು 'ಮೈರ್ಪಾಡಿ'ಯೆಂಬುದಾಗಿಯೂ, ಅಲ್ಲಿ ತನ್ನ ಜೀವಿತ ನಿರ್ವಹಣೆಗೆ ದುಸ್ಸಾಧ್ಯವಾಗಿ ಸಣ್ಣದಿರುವಾಗಲೇ ಮಾಯಿಪ್ಪಾಡಿಗೆ ಬಂದು, ತನ್ನ ಜೀವಿತದ ಕೊನೆಯುವರೆಗೂ – ಅಂದರೆ ಎಪ್ಪತ್ತು – ಎಪ್ಪತ್ತೈದು ವರ್ಷಗಳವರೆಗೂ ಈತ ಅಲ್ಲಿಯೇ ಇದ್ದನೆಂದೂ ನಾನು ಆ ಲೇಖನದಲ್ಲಿ ಪ್ರಸ್ತಾಪಿಸಿದ್ದೆ. ಶ್ರೀ ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ' ಗ್ರಂಥದಲ್ಲಿ 'ಮಯ್ಯವಟಿ ವೆಂಕಟ' ಎಂಬುದಾಗಿ ಹೆಸರಿಸಿದ ಕವಿ ಇವನೇ. ಈತ ಕೋಟೇಶ್ವರ ಬ್ರಾಹ್ಮಣನಿರಬೇಕು. ಮೈರ್ಪಾಡಿಯಲ್ಲಿ ಹುಟ್ಟಿದವನಾದರೂ ಈತ ಬಾಳಿ ಬದುಕಿದ್ದೆಲ್ಲಾ ಮಾಯಿಪ್ಪಾಡಿಯಲ್ಲಿ. ಮಾಯಿಪ್ಪಾಡಿಯ ಅರಸುಗಳ ಸನ್ನಿಧಿಯಲ್ಲಿ ಈತ ಶಾನುಭೋಗನಾಗಿ ಅದೇ ವೃತ್ತಿಯಿಂದ ತನ್ನ ಜೀವಿತ ನಿರ್ವಹಣೆಯನ್ನು ಮಾಡಿಕೊಂಡಿದ್ದನು. ಇವನು ಬರೆದ ಪ್ರಸಂಗಗಳು – ಪ್ರಹ್ಲಾದ ಚರಿತ್ರೆ, ಶೂರಪದ್ಮಾಸುರ ಕಾಳಗ, ಮದಾಲಸಾ ಕಲ್ಯಾಣ ಹಾಗೂ ಇತರ ಕೃತಿಗಳು – ವೆಂಕಟಗಿರಿ ಮಹಾತ್ಮೆ, ಕಾವೇರೀ ಮಹಾತ್ಮೆ ಇತ್ಯಾದಿ. ಈತ ಎಪ್ಪತ್ತೆಂಟನೆಯ ವಯಸ್ಸಿನಲ್ಲಿ ದಿವಂಗತನಾಗಿರಬೇಕೆಂದು ತಿಳಿದುಬರುತ್ತದೆ

ಕವಿಯು ಮದಾಲಸಾ ಕಲ್ಯಾಣದಲ್ಲಿ ತನ್ನ ಹೆಸರನ್ನು 'ವೆಂಕಣ್ಣಯ್ಯ'ನೆಂದೂ, ಶೂರಪದ್ಮಾಸುರ ಕಾಳಗದಲ್ಲಿ 'ವೆಂಕಟರಮಣನೆಂದೂ ಹೇಳಿರುವನು. ಪ್ರಹ್ಲಾದ ಚರಿತ್ರೆಯಲ್ಲಿ ಇವನ ತಂದೆ ಪಟೇಲ ತಿಮ್ಮಯ್ಯನೆಂಬುದಾಗಿ ಹೇಳಲಾಗಿ, ಶ್ರೀ ಶಿವರಾಮ ಕಾರಂತರು 'ಪಟೇಲ' ಎಂಬುದು ಮನೆಯ ಸೂಚನೆಯನ್ನು ಕೊಡುತ್ತದೆಯೇ ಹೊರತು ಪಟೇಲಿಕೆಯ ಉದ್ಯೋಗವನ್ನಲ್ಲ ಎಂಬ ಅಭಿಪ್ರಾಯ ನನ್ನದು-" (ಯಕ್ಷಗಾನ ಪತ್ರಿಕೆಯ 1958 ಸಪ್ಟಂಬರ ಸಂಚಿಕೆ) ಎಂದು ತಿಳಿಸಿರುವರು. ಅದೇ ಸಂಚಿಕೆಯ ಇನ್ನೊಂದು ಲೇಖನದಲ್ಲಿ ಶ್ರೀ ಕೆ. ವೆಂಕಟರಾಯಾಚಾರ್ಯರು "ಕವಿಯ ತಂದೆಯು ಕುಟುಂಬತಃ ಪಟೇಲನಾಗಿದ್ದಂತೆ ತಿಳಿಯಬರುವುದು" – ಎಂಬುದಾಗಿ ಬರೆದಿರುವರು. ಈ ಕವಿಯ ಇನ್ನೊಂದು ಕೃತಿ 'ಅನಂತವ್ರತ ಮಹಾತ್ಮೆ'ಯನ್ನು ಶ್ರೀಯುತ ಆಚಾರ್ಯರು ಪ್ರಕಟಿಸಿರುವರು. 'ಶೂರಪದ್ಮಾಸುರ ಕಾಳಗ'ದ ಆದಿಯಲ್ಲಿ ಕವಿಯು –

ಜಯ ಜಯ ಶಂಭುತನೂದ್ಭವ । ಜಯ ಜಯನುತ ಮಹಿಮಾರ್ಣವ
ಜಯ ಜಯ ಮೂಷಿಕವಾಹನ । ಜಯ ಮಧುಪುರ ಸದನ ॥

ಎಂಬುದಾಗಿ ಚರಿತ್ರ ಪ್ರಸಿದ್ಧವಾದ ಮಧೂರು ಮಹಾಗಣಪತಿಯನ್ನು ಸ್ತುತಿಸಿರುವನು. ತನ್ನ ಹುಟ್ಟೂರಿನ ಕುಲದೇವತೆಯಾದ ಚಿತ್ರಾಪುರ ದುರ್ಗಾಪರಮೇಶ್ವರಿಯ ಸ್ತುತಿಯನ್ನು ಪ್ರಹ್ಲಾದ ಚರಿತ್ರೆಯಲ್ಲಿ ಕವಿ ಬರೆದಿರುವನು,

ಆಲಂಕೋಡ್ಲು ರಾಮಕೃಷ್ಣಯ್ಯ

ಈತ ಕಾಸರಗೋಡು ತಾಲೂಕಿನ ನೆಕ್ರಾಜೆ ಗ್ರಾಮದ ಆಲಂಕೋಡ್ಲು ಎಂಬಲ್ಲಿದ್ದವನು. ಸ್ಥಾನಿಕ ಮನೆತನದವನೆನ್ನಲಾದ ಈ ಕವಿಯು 'ವಾಲಿವಿಜಯ'ವೆಂಬ ಪ್ರಸಂಗವನ್ನು ಬರೆದಿರುವನು. ಪ್ರಸಂಗದ ಕೊನೆಯಲ್ಲಿ 'ಹೃದಯದಿ ಹರಿ, ರಸನದಿ ಭಾರತಿಯರಿದ್ದು । ಒದವಿ ಪೇಳಿಸುವ ಕವಿತೆಯ । ವಿಧವರಿಯದೆ ಕೇಳ್ದರದಕೆ ಸದುತ್ತರ । ವದ ಪೇಳೆ ನಾ ನಿಜವಾಗಿ' – ಎಂದು ಹರಿಭಾರತಿಯರ ಕರುಣದಿಂದಲೆ ತನಗೆ ಕವಿತಾಶಕ್ತಿ ಬಂತೆಂದು ಹೇಳಿರುವನು. ಮತ್ತು 'ಧರೆಯೊಳುತ್ತಮವೆನಿಪ ಮಾಡಗಪುರ ನಿವಾಸ' ಎಂದು ತನ್ನ ಹುಟ್ಟೂರಾದ ಕಚ್ಚೇರಿ [ತೆಕ್ಕಿಲು ಹೊಳೆಯಿಂದ ತೆಂಕಣದ ಒಂದು ಊರು] ಯ ಸಮೀಪದ ಸ್ಥಳನಾಮವನ್ನು ಸೂಚಿಸಿರುವನು. ವಾಲಿವಿಜಯವು ರಂಗಭೂಮಿಗೆ ಒಪ್ಪುವ ಒಂದು ಕಥಾ ಪ್ರಸಂಗ. ಯುದ್ಧದ ಸನ್ನಿವೇಶಗಳೂ ಸಾಕಷ್ಟಿವೆ. ಕವಿಯ ಕುಟುಂಬಸ್ಥರ ಮನೆಯಲ್ಲಿ ಸಂಶೋಧಿಸಿದಾಗ ನನಗೆ ಇದೊಂದೇ ಪ್ರಸಂಗದ ಒಂದು ಅತ್ಯಂತ ಜೀರ್ಣವಾದ ಪ್ರತಿಮಾತ್ರ ದೊರೆಯಿತಷ್ಟೆ.

ಇತರ ಕೆಲವು ಕವಿಗಳು

ಯಕ್ಷಗಾನ ಕಾವ್ಯಪರಂಪರೆ ಅವ್ಯಾಹತವಾಗಿ ಬೆಳೆದು ಬಂದ ರೀತಿಯನ್ನು ನೋಡಿದರೆ – ಈ ಕಲೆಯು ಎಷ್ಟು ಜನಾದರಣೀಯವಾಗಿತ್ತೆಂದೂ ಇದು ಜನತೆಯ ಮೇಲೆ ಎಂತಹ ಆಗಾಧವಾದ ಪ್ರಭಾವವನ್ನು ಬೀರಿತ್ತೆಂದೂ ಊಹಿಸಬಹುದು. ಇನ್ನೂ ಎಷ್ಟೆಷ್ಟೋ ಯಕ್ಷಗಾನ ಕವಿಗಳು ಈ ನಾಡಿನಲ್ಲಿ ವಿಮರ್ಶಕ ಜನರ ಹಾಗೂ ಸಹೃದಯರ ಕಣ್ಣಂಚಿನಲ್ಲಿ ಸುಳಿಯದೆ ಮಾಯವಾಗಿದ್ದಾರೆ. ಅವರ ಸಾಹಿತ್ಯದ ಸೊಬಗನ್ನು ಸವಿಯುವ ಅದೃಷ್ಟ ನಾಡಿನ ಜನತೆಗೆ ದೊರೆಯದೇ ಹೋಗಿರಬಹುದು.

ತೆಂಕುತಿಟ್ಟಿನ ಕೃಷ್ಣಾರ್ಜುನ ಕಾಳಗವನ್ನು ಬರೆದ ಸಂಕಯ್ಯ ಭಾಗವತರು ದಕ್ಷಿಣದ ಕಲಾವಿದರಿಗೆಲ್ಲ ತುಂಬಾ ಪರಿಚಿತರು. ಅವರ ಇನ್ನೊಂದು ಕೃತಿ ಬಭ್ರುವಾಹನ ಕಾಳಗವು ತುಂಬಾ ಜನಪ್ರಿಯವಾದುದು.

ಜತ್ತಿ ಭಾಗವತರ ಮಕರಾಕ್ಷ ಕಾಳಗವು ರಂಗಭೂಮಿಗೆ ಒಪ್ಪುವ ಒಂದು ಉತ್ತಮ ಕಲಾಕೃತಿ. ಚಕ್ರಕೊಡಿ ಸುಬ್ರಹ್ಮಣ್ಯ ಶಾಸ್ತ್ರಿಗಳ 'ಗದಾಪರ್ವ'ವಂತೂ ಬಯಲಾಟದ ಕಲಾವಿದರ ನೆಚ್ಚಿನ ಪ್ರಸಂಗ. ಮಂಜೇಶ್ವರ ಶ್ರೀಧರ ಕವಿಗಳೂ ಕೆಲವು ಪ್ರಸಂಗಗಳನ್ನು ಬರೆದಿರುವರು.

ತೆಂಕುತಿಟ್ಟಿನ 'ರಾಜಸೂಯಾಧ್ವರ'ವನ್ನು ಬರೆದ ತಲೆಪ್ಪಾಡಿಯ ಕವಿಯನ್ನಂತೂ ಈ ನಾಡಿನ ಜನರು ಮರೆಯಲು ಸಾಧ್ಯವೇ ಇಲ್ಲ. ಈತ ಗಿರಿಜಾ ಕಲ್ಯಾಣ ಮತ್ತು ಘಟೋತ್ಕಚನ ಕಾಳಗವೆಂಬ ಇನ್ನೆರಡು ಪ್ರಸಂಗಗಳನ್ನು ಬರೆದಿರುವನು.

ದಿವಂಗತ॥ ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ತಂದೆಯವರಾದ ದಿ॥ ರಾಮಚಂದ್ರ ಪುಣಿಂಚತ್ತಾಯರೂ ಒಂದು ಪ್ರಸಂಗವನ್ನು ಬರೆದಿದ್ದರೆಂದು ಕೇಳಿ ತಿಳಿದಿದ್ದೆ. ಅನಂತರ ಒಮ್ಮೆ "The Indian Chronicle" ಎಂಬ ಪತ್ರಿಕೆಯ 1929ನೆಯ ಇಸವಿಯ ಒಂದು ಸಂಚಿಕೆಯಲ್ಲಿ ಪ್ರಕಟವಾದ "Mr. P.L. Puninchathaya"ಎಂಬ ಶೀರ್ಷಿಕೆಯ ಲೇಖನವನ್ನು ಓದಿದಾಗ ನನ್ನ ಸಂಶಯ ಪರಿಹಾರವಾಯಿತು.

"....While the father's literary productions VIJITASHWA VIJAYA [yakshagana Prasangam] and Keertanams are a bracing tonic to the literate and illiterate alike...."

[The Indian chronicle — 1929]

ಎಂಬುದಾಗಿ ಅದರಲ್ಲಿ ಬರೆದಿತ್ತು. ಅನಂತರ ಕೆಲವು ವರ್ಷಗಳ ನಂತರ ಆ ಪ್ರಸಂಗವೇ ನನಗೆ ದೊರೆಯಿತು. ಬೈಲುಹಳ್ಳಿ ತಿಮ್ಮಪ್ಪಯ್ಯನವರು ವಜ್ರದತ್ತ ಕಾಳಗವೆಂಬ ಪ್ರಸಂಗವನ್ನು ಬರೆದಿರುವರು. ಐವತ್ತು ವರ್ಷ ಮೊದಲು ಬರೆದುದೆಂದು ಹೇಳಲಾದ ಕರ್ನೂಲು ಗೋಪಾಲ ಕೃಷ್ಣ ಕೇಕುಣ್ಣಾಯರ ಹಸ್ತಬರೆಹದ 'ಹಿರಣ್ಯಕಾಸುರ ಕಾಳಗ – ಸುರಥ ವಿಜಯ' ಎಂಬ ಪ್ರಸಂಗವನ್ನು ನಾನು ನೋಡಿದ್ದೇನೆ. ಆ ಕುರಿತು ಹೆಚ್ಚಿನ ವಿಷಯ ನನಗರಿಯದು. ದಿವಂಗತ ಬಲಿಪ ನಾರಾಯಣ ಭಾಗವತರಂತೂ ಅನೇಕ ಪ್ರಸಂಗಗಳನ್ನು ರಚಿಸಿರುವರು. ಅವರ 'ಕೃಷ್ಣಾರ್ಜುನ ಕಾಳಗ'ವು ಒಂದು ಹೊಸ ಪ್ರಯೋಗವೆನ್ನಬಹುದು. ಅದು ಆಟಕ್ಕೂ ಬಹುವಾಗಿ ಒಪ್ಪುವಾಗುವ ಒಂದು ಪ್ರಸಂಗವಾಗಿದೆ.

ಹೀಗೆ ತೆಂಕಣ ಯಕ್ಷಗಾನ ಪರಂಪರೆಯ ಕೆಲವು ಕವಿಗಳನ್ನು ಮಾತ್ರ ಈ ಲೇಖನದಲ್ಲಿ ಹೆಸರಿಸಿರುತ್ತೇನೆ. ನನ್ನ ಸಂಶೋಧನೆಯ ದೃಷ್ಟಿಗೆ ನಿಲುಕದ ಎಷ್ಟೋ ಉತ್ತಮ ಕವಿಗಳು ಇನ್ನೂ ಇರಬಹುದು. ಅಥವಾ ಇದೇ ಕವಿಗಳ ಇತರ ಅನೇಕ ಪ್ರಸಂಗಗಳು ಇನ್ನೂ ಬೆಳಕಿಗೆ ಬಾರದಿರಬಹುದು. ಸಾಕಷ್ಟು ಪ್ರೋತ್ಸಾಹ ದೊರೆಯದೆ ಮೂಲೆ ಗುಂಪಾದ ಇಂತಹ ಅಜ್ಞಾತ ಕವಿಗಳ ಅಮರಕೃತಿಗಳು ಇದಕ್ಕೂಮಿಗಿಲಾಗಿ ಬೆಳಕಿಗೆ ಬರಲಿ – ಎಂದು ಹಾರೈಸೋಣ.



ಸತ್ಕಾರ ಸಮಾರಂಭದಲ್ಲಿ...



ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯವರ ಸತ್ಕಾರ.



ಕೀರ್ತನಕೇಸರಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರು ಅಭಿನಂದಿಸುತ್ತಿರುವರು.



ಇನ್ನೊಂದು ಸತ್ಕಾರ ಸಮಾರಂಭದಲ್ಲಿ..........

ಸೂಡ - ಸೂಳಾದಿ - ಸಾಲಗ

ಶ್ರೀ ಕುಕ್ಕಿಲ ಕೃಷ್ಣ ಭಟ್ಟ.

(ಸಂಶೋಧನಾತ್ಮಕ ಪ್ರಬಂಧ)

ಯಕ್ಷಗಾನ ಪ್ರಯೋಗಪದ್ಧತಿಯಲ್ಲಿ, ವಿಶೇಷವಾಗಿ ದಕ್ಷಿಣ ಕನ್ನಡದಲ್ಲಿ ಪ್ರಸಿದ್ಧರಾಗಿರುವ 'ತೆಂಕ ಮಟ್ಟಿನ' ಪ್ರಯೋಗದ ನೃತ್ಯ, ಗೀತ, ರಾಗ ತಾಳಾದಿಗಳಲ್ಲಿ – ಹೇಗೋ ಹಾಗೆ ಪ್ರಬಂಧಗಳ ಪದ್ಯ ರಚನೆಯಲ್ಲಿಯೂ ಕುಂಬಳೆಯ ಪಾರ್ತಿ ಸುಬ್ಬನಂತಹ ಪ್ರಸಿದ್ಧ ಯಕ್ಷಗಾನ ಕವಿಗಳ ರಚನೆಯಲ್ಲಿ ವಿಶಿಷ್ಟವಾದ ಶಾಸ್ತ್ರೀಯ ಪರಂಪರೆಯು ಕಂಡುಬರುತ್ತದೆ. ಸಂಗೀತರತ್ನಾಕರಾದಿ ಶಾಸ್ತ್ರಗ್ರಂಥಗಳಲ್ಲಿ ಶುದ್ಧಸೂಡ ಸಾಲಗಸೂಡ ಎಂಬ ಭೇದಗಳಿಂದ ಲಕ್ಷಣೋಕ್ತವಾದ ದೇಶೀಯ ಗೇಯಪ್ರಬಂಧಲಕ್ಷಣಗಳ ವ್ಯಾಪ್ತಿಗೆ ಯಕ್ಷಗಾನ ಪದ್ಯಗಳೂ ಹೊರತಾದುವಲ್ಲ, ಎಂಬ ವಿಚಾರವು ಸಂಗೀತಶಾಸ್ತ್ರಗ್ರಂಥಗಳ ಪರಿಶೀಲನೆಯಿಂದ ವ್ಯಕ್ತವಾಗುವುದು. ಅಂತಹ ಶಾಸ್ತ್ರೀಯ ಸೂಳಾದಿ ಪದರಚನಾವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದ ಕನ್ನಡ ಹರಿದಾಸರ ಪದಸಾಹಿತ್ಯದ ಪ್ರಭಾವವು ನಮ್ಮ ಯಕ್ಷಗಾನ ಕವಿಗಳ ಮೇಲೆ ಬಿದ್ದಿರುವುದೂ ಸರ್ವಥಾ ಸಂಭಾವ್ಯವೇ ಆಗಿದೆ. ಯಕ್ಷಗಾನ ಪದ್ಯರಚನೆಯ ಈ ಶಾಸ್ತ್ರೀಯ ಸಂಸ್ಕೃತಿಯನ್ನರಿಯಬೇಕಾಗಿದ್ದರೆ ಶುದ್ಧಸೂಡ, ಸಾಲಗಸೂಳ, ಸೂಳಾದಿ ಎಂಬ ಶಾಸ್ತ್ರೋಕ್ತ ಸಂಜ್ಞೆಗಳ ನೈರುಕ್ತಲಕ್ಷಣಗಳನ್ನು ಮೊದಲಾಗಿ ತಿಳಿದುಕೊಳ್ಳುವುದು ಯುಕ್ತ. ಪ್ರಸ್ತುತ ಲೇಖನದಲ್ಲಿ ಈ ಕುರಿತು ಯಥಾಮತಿ ವಿಮರ್ಶಿಸಲಾಗಿದೆ--

ಸೂಡ:— ಮಾರ್ಗದೇಶೀ ಭೇದಗಳಿಂದ ಪ್ರಸಿದ್ಧವಾದ ನಮ್ಮ ಸಂಗೀತ ಪದ್ಧತಿಯ ಚಿರಪರಂಪರೆಯಲ್ಲಿ, ಸಾಹಿತ್ಯದ ಕಾವ್ಯಪರಂಪರೆಯಲ್ಲಿ ಛಂದೋಬಂಧಗಳು ಹೇಗೋ ಹಾಗೆ, ಲೆಕ್ಕವಿಲ್ಲದಷ್ಟು ವಿಧದ ಗೇಯವಸ್ತುಗಳು ಕಾಲಕಾಲಕ್ಕೆ ಹುಟ್ಟಿಕೊಂಡಿವೆ. ಸಂಸ್ಕೃತದಲ್ಲಿ ಇವಕ್ಕೆಲ್ಲ ಸರ್ವಸಾಮಾನ್ಯವಾಗಿ ಗೀತ, ಪ್ರಬಂಧ, ವಸ್ತು, ರೂಪಕ ಎಂಬ ಹೆಸರು.[1] ಸಂಗೀತ ರತ್ನಾಕರಾದಿ ಶಾಸ್ತ್ರಗ್ರಂಥಗಳಲ್ಲಿ ಪ್ರಬಂಧಕ್ಕೆ ಪರ್ಯಾಯವಾಗಿ 'ಸೂಡ' ಎಂಬ ಶಬ್ದವೂ ಹೆಚ್ಚು ಬಳಕೆಯಲ್ಲಿದೆ. ಗಾಂಧರ್ವವೆಂದು ಪ್ರಸಿದ್ಧವಾದ ಮಾರ್ಗಪದ್ಧತಿಯಲ್ಲಿರುವ ಸಾಮಗೀತೆ, ಜಾತಿ, ಕಪಾಲ, ಕಂಬಲ, ಶುದ್ಧ, ಭಿನ್ನ, ಗೌಡ, ಸಾಧಾರಣ, ಮದ್ರಕ ಇತ್ಯಾದಿ ಗೀತೆಗಳಿಗೆಲ್ಲ ಶುದ್ಧಸೂಡಗಳೆಂಬ ಹೆಸರೆಂದು ಸಂಗೀತರತ್ನಾಕರದಲ್ಲಿ ಹೇಳಿದೆ.[2] ದೇಶೀಪದ್ಧತಿಯ ಪ್ರಬಂಧಗಳು ಅವುಗಳ ಬಂಧಗೌರವ, ತಾಳಭೇದ, ಪ್ರಯೋಗಪ್ರಾಶಸ್ತ್ಯಾದಿ ತಾರತಮ್ಯಕ್ಕನುಸಾರವಾಗಿ ವರ್ಗಶ: ವಿಭಾಗಿಸಲ್ಪಟ್ಟಿವೆ. ಆ ವರ್ಗಗಳ ಪ್ರತ್ಯೇಕ

---

1 ಸಂಗೀತಸಾರಾಮೃತ. ಪ್ರಬಂಧಾಧ್ಯಾಯದ ಆರಂಭದ ಶ್ಲೋಕಗಳು.

2 ಸಂಗೀತರತ್ನಾಕರ. ಪ್ರಬಂಧಾಧ್ಯಾಯ, ಶ್ಲೋ. ೩೧೪.

ಪ್ರಬಂಧಗಳಿಗೆ ಲಕ್ಷಣಗ್ರಂಥಗಳಲ್ಲಿ ಏಲಾಸೂಡ,[1] ಡೇಂಕಿಸೂಡ,[2] ಮಂಠಸೂಡ, ಮಾತ್ರಕಾಸೂಡ, ಗದ್ಯಸೂಡ ಇತ್ಯಾದಿ ವ್ಯವಹಾರವಿರುವುದಲ್ಲದೆ ಆ ಒಂದೊಂದು ವರ್ಗಗಳಿಗೂ ಶುದ್ಧಸೂಡ, ಸಾಲಗ ಸೂಡ, ಆಲಿಸೂಡ,[3] ಸಂಕೀರ್ಣಸೂಡ,[4] ಉತ್ತಮಸೂಡ,[5] ಜಘನ್ಯಸೂಡ ಎಂಬ ಹೆಸರುಗಳಿವೆ. ಹೀಗೆ ಸೂಡ ಎಂಬ ಪದವು ವ್ಯಾಪಕವಾಗಿ ಯತ್ಕಿಂಚಿತ್ ಗೇಯಪ್ರಬಂಧ ಎಂಬ ಸಾಮಾನ್ಯಾರ್ಥ ದಲ್ಲಿಯೂ ವಿಶಿಷ್ಟ ಪ್ರಬಂಧಗಳ ವರ್ಗ ಎಂಬ ವಿಶೇಷಾರ್ಥದಲ್ಲಿಯೂ ಪ್ರಯೋಗಿಸಲ್ಪಟ್ಟಿದೆ.

ಅಂತೆಯೇ ಲಾಕ್ಷಣಿಕರೂ ಈ ಪದಕ್ಕೆ ಇವೆರಡು ಅರ್ಥಗಳನ್ನು ಕೊಟ್ಟಿರುತ್ತಾರೆ.[6] ಸಾಮಾನ್ಯ ಸಂಜ್ಞೆಯನ್ನೇ ವಿಶಿಷ್ಟವರ್ಗಕ್ಕೂ ಅನ್ವಯಿಸುವ ಈ ಕ್ರಮವು ಪ್ರಬಂಧವಾಚಕವಾದ ಇತರ ಶಬ್ದಗಳ ವ್ಯವಹಾರದಲ್ಲಿ ಇರುವುದೇ ಆಗಿದೆ– ಪ್ರಬಂಧ ಎಂಬುದಕ್ಕೆ ಯಾವುದೇ ಒಂದು ಪದ್ಯ, ಗದ್ಯ, ಶ್ಲೋಕ, ವೃತ್ತ ಇತ್ಯಾದಿ ರಚನಾಮಾತ್ರ ಎಂಬ ವ್ಯಾಪಕವಾದ ಅರ್ಥವೂ ಅನೇಕ ಗದ್ಯಪದ್ಯಗಳು ಸೇರಿದ ಗ್ರಂಥ ಎಂಬ ವಿಶೇಷ ಅರ್ಥವೂ ರೂಢಿಯಲ್ಲಿರುವುದಷ್ಟೆ? ಅದೇ ಪ್ರಬಂಧಕ್ಕೆ ಸಂಗೀತ ಶಾಸ್ತ್ರದಲ್ಲಿ ನಿಬದ್ಧ ಗೇಯವಸ್ತು ಅಥವಾ ಗೀತಮಾತ್ರ[7] ಎಂಬುದು ಸಾಮಾನ್ಯ ಅರ್ಥ. ವಿಶೇಷಾರ್ಥದಲ್ಲಿ ಕೆಲವೊಂದು ಲಕ್ಷಣ ವಿಶೇಷವಿರುವ ಗೀತವರ್ಗಕ್ಕೂ ಅದೇ ಹೆಸರಿದೆ. ಹಾಗೆಯೇ ಗೀತ ಎಂಬುದಕ್ಕೂ ಆ ಪ್ರಬಂಧ ಗಳಿಂದ ಭಿನ್ನವಾದ ಗೀತವರ್ಗ ಎಂಬ ವಿಶಿಷ್ಟ ಅರ್ಥವಿದೆ.[8] ವಸ್ತುರೂಪಕ ಎಂಬುದಕ್ಕೂ ಹೀಗೆಯೆ.[9] ಮೇಲೆ ಹೇಳಿದ ಶುದ್ಧಸೂಡಾದಿ ಪ್ರಬಂಧವರ್ಗಗಳಲ್ಲಿ ಶುದ್ಧಸೂಡ ಮತ್ತು ಸಾಲಗಸೂಡ ಎಂಬವು ದೇಶೀಯ ಸಂಪ್ರದಾಯದಲ್ಲಿ ಅತ್ಯಂತ ಪ್ರಶಸ್ತವಾಗಿದ್ದು ಕ್ರಮಾನುವೃತ್ತಿಯಿಂದ ಪ್ರಸಿದ್ಧಿಗೆ ಬಂದಿವೆ ಎಂದು ಸಂಗೀತಶಾಸ್ತ್ರಗ್ರಂಥಗಳಿಂದ ತಿಳಿಯುವುದು. ಲಕ್ಷ್ಯಸಂಪ್ರದಾಯದಲ್ಲಿ ಅವಕ್ಕೆ ಆದೆಷ್ಟು ಮಹತ್ವವಿತ್ತೆಂದರೆ, ಒಂದೊಮ್ಮೆ ಸೂಡ ಎಂದರೆ ಶುದ್ಧಸೂಡವೇ ಸರಿ. ಆ ವರ್ಗದ ಪ್ರಬಂಧಗಳೇ ಗೇಯಸರ್ವಸ್ವ ಎಂದೂ ಕಾಲಾಂತರದಲ್ಲಿ ಸಾಲಗಸೂಡವರ್ಗವು ಅದರ ತಲೆಮೆಟ್ಟಿ ನಿಂದು ಸೂಡ ಎಂಬ ಹೆಸರೇ ಇನ್ನೊಂದಕ್ಕಿಲ್ಲ ಎಂದೂ ಭಾವಿಸುವಂತಾಗಿತ್ತು.[10] ಅವೆರಡು ವರ್ಗಗಳ ಪ್ರಬಂಧಗಳು ಸಂಗೀತರತ್ನಾಕರದಲ್ಲಿ ಕೊಟ್ಟಿರುವ ಪ್ರಕಾರ ಹೀಗಿವೆ.

ಶುದ್ಧ ಸೂಡ:— ಏಲಾಕರಣ ಡೇಂಕೀಭಿರ್ವರ್ತನ್ಯಾಜೋಂಬಡೇನಚ
ಲಂಭರಾಸೈಕತಾಲೀಭಿರಷ್ಟಭಿ: ಸೂಡ ಉಚ್ಯತೇ

ಏಲೆ, ಕರಣ, ಡೇಂಕಿ, ವರ್ತನಿ, ಜೋಂಬಡ, ಲಂಭ, ರಾಸ, ಏಕತಾಲಿ ಈ
ಎಂಟು ಪ್ರಬಂಧಗಳ ವರ್ಗವು ಶುದ್ಧಸೂಡ.

ಸಾಲಗ ಸೂಡ:— ಆದ್ಯೋಧ್ರುವಸ್ತತೋಮಂಠ ಪ್ರತಿಮಂಠ ನಿಸಾರುಕಾಃ
ಅಡ್ಡತಾಲಸ್ತತೋರಾಸ ಏಕತಾಲೀತ್ಯಸೌ ಮತಃ

1, 2, 3. ಸಂಗೀತೋಪನಿಷತ್ಸಾರೋದ್ಧಾರ.

4. ಸಂಗೀತ ದಾಮೋದರ.

5. ಸಂಗೀತೋಪನಿಷತ್ಸಾರೋದ್ಧಾರ.

6. ಸಂ. ರ. ಪ್ರಬಂಧಾಧ್ಯಾಯ ಶ್ಲೋ ೨೩ಕ್ಕೆ ಕಲ್ಲಿನಾಥನ ವ್ಯಾಖ್ಯಾನ.
— ಚತುರ್ದಂಡೀ ಪ್ರಕಾಶಿಕಾ, ಗೀತಪ್ರಕರಣ. ಶ್ಲೋ ೫
— ಸಂ. ಸಾರಾಮೃತ. ಪ್ರಬಂಧಪ್ರಕರಣ.

7. ಸಂ. ರ. ಪ್ರಬಂಧಾಧ್ಯಾಯ. ಶ್ಲೋ. ೫೬.

8. ಚ. ದಂ. ಪ್ರ. ಪ್ರಬಂಧ ಪ್ರಕರಣ ಶ್ಲೋ ೧—೬.

9. ಚ. ದಂಡೀ ಗೀತ ಪ್ರಕರಣ ಶ್ಲೋ ೨—೪.

10. ಉತ್ತಮೋತ್ತಮಸೂಡಸ್ತು ಸಾಲಗಾಖ್ಯೋ ಮಹಾರಸಃ
ಪ್ರವರ್ತತೇ ಸುಖಕರಃ ಸೋಯಂ ಸರ್ವಜನಪ್ರಿಯಃ (ಸಂ. ಸಾರೋದ್ಧಾರ.)
— ಏಲಾದ್ಯಾದುಷ್ಕರಾಃ ಸಂತಿ ಪ್ರಬಂಧಾ ಮುನಿಭಾಷಿತಾಃ (ಸಂ. ಸಾರಸಂಗ್ರಹ)

ಧ್ರುವ, ಮಂಠ, ಪ್ರತಿಮಂಠ, ನಿಸಾರುಕ, ಅಡ್ಡತಾಲ, ರಾಸ, ಏಕತಾಲಿ ಈ ಏಳು ಪ್ರಬಂಧಗಳ ವರ್ಗವು ಸಾಲಗಸೂಡ. ಪ್ರಕೃತ ಈ ಪ್ರಬಂಧವಿಶೇಷಗಳ ಲಕ್ಷಣವನ್ನು ವಿವರಿಸುವುದಿಲ್ಲ. ಸಂಗೀತ ಶಾಸ್ತ್ರ ಗ್ರಂಥಗಳಲ್ಲೆಲ್ಲ ಅವುಗಳು ವಿಸ್ತರವಾಗಿ ನಿರೂಪಿಸಲ್ಪಟ್ಟೇ ಇವೆ. ಪ್ರಬಂಧವಾಚಕವಾಗಿ ರೂಢಿಗೆ ಬಂದ ಸೂಡ–ಸೂಳಾದಿ–ಸಾಲಗ ಎಂಬ ಹೆಸರುಗಳ ನಿಜಾರ್ಥ ಮತ್ತು ಔಚಿತ್ಯದ ಕುರಿತು ಯಥಾಮತಿ ವಿಚಾರಿಸುವುದಷ್ಟೆ ಪ್ರಸ್ತುತ ಲೇಖನದ ವಿಷಯ.

ಈ ಸೂಡ ಶಬ್ದವು ಸೂಲ, ಸೂಳ ಎಂಬ ರೂಪಗಳಲ್ಲಿಯೂ ಪ್ರಯೋಗಿಸಲ್ಪಟ್ಟಿದೆ. ಸಂಸ್ಕೃತ ಭಾಷೆಯಲ್ಲಿರುವ ಅರ್ವಾಚೀನ ಸಂಗೀತಲಕ್ಷಣಗ್ರಂಥಗಳಲ್ಲಿ ಹೆಚ್ಚಾಗಿ ಸೂಲ ಎಂಬ ರೂಪವು ಕನ್ನಡದಲ್ಲಿ ಸೂಳ ಎಂಬ ವ್ಯವಹಾರವೂ ಕಂಡುಬರುತ್ತದೆ, ಹಳೆಗನ್ನಡ ಕಾವ್ಯಾದಿಗಳಲ್ಲಿ ಮಾರ್ಗಸೂಳ,[1] ಶುದ್ಧಸೂಳಸಾಲಗ ಸೂಳ ಎಂಬಂತೆ (ಱ ೞ ವಲ್ಲದ) ಳಕಾರವಿರುವ ಪ್ರಯೋಗ ಕಂಡುಬರುತ್ತದೆ. ಸಂಗೀತರತ್ನಾಕರಾದಿ ಪ್ರಾಚೀನ ಲಕ್ಷಣಗ್ರಂಥಗಳಲ್ಲಿ ಸೂಡ ಎಂಬ ರೂಪವೇ ಇರುವುದರಿಂದ ಮತ್ತು ಹೆಚ್ಚಾಗಿ ಡಕಾರದ ಸ್ಥಾನದಲ್ಲಿ ಳಕಾರ ಬರುವುದು ಹೊರತು ಳಕಾರವು ಡಕಾರವಾಗುವುದು ವಿರಳವಾದುದರಿಂದಲೂ ಸೂಡವೇ ಮೂಲರೂಪವಾಗಿರಬೇಕೆಂದು ಗ್ರಹಿಸಬಹುದು. ಸಂಗೀತಲಾಕ್ಷಣಿಕರ ಮತ್ತು ವಿಮರ್ಶಕರ ಅಭಿಪ್ರಾಯವೂ ಹಾಗೆ ಇದೆ. ಎಟ್ಟಿಯಾಪುರಂ ಸುಬ್ಬರಾಮ ದೀಕ್ಷಿತರು ರಚಿಸಿದ 'ಸಂಗೀತ ಸಂಪ್ರದಾಯ ದರ್ಶಿನಿ'ಯಲ್ಲಿ ಅದರ ವಿವರಣೆ ಹೀಗಿದೆ. 'ಸೂಳಯನಿ ಶಬ್ದಮುನಕು ಗೀತಮನಿ ಯರ್ಥಮು, ಸೂಳಯನುನ್ನದಿ ದೇಶೀಯಪದಮು, ಲಡಯೋರಭೇದಮನಿಯುಂಡುಟವಲನ ಸೂಡ ಶಬ್ದಮುಲೋ ಡಕಾರಮುನಕು ಲಕಾರಮು ವಚ್ಚಿನದಿ'. ಡಕಾರದ ಸ್ಥಾನದಲ್ಲಿ ಲಕಾರ ಳಕಾರಗಳು ಬಂದು ಸೂಲ ಸೂಳ ಎಂಬ ರೂಪಗಳಾಗಿವೆ, ಎಂದು ಇದರ ತಾತ್ಪರ್ಯ. ಸಂಸ್ಕೃತದಲ್ಲಿ ಳಕಾರವಿಲ್ಲದಿರುವುದರಿಂದ ಸೂಲ ಎಂಬ ರೂಪವೂ ಕನ್ನಡದಲ್ಲಿ ಸೂಳ ಎಂಬ ರೂಪವೂ ಬಂದಿರುವುದು ಸಹಜ.

ಸೂಡವು ದೇಶೀಯ ಪದ[2] ಎಂದಿಷ್ಟೆ ಲಕ್ಷಣಗ್ರಂಥಗಳಿಂದ ತಿಳಿಯುವುದು ಹೊರತು ಯಾವ ಭಾಷೆಯ ಪದ, ಅದರ ಮೂಲ ವ್ಯುತ್ಪತ್ತಿ ಹೇಗೆ ಎನ್ನುವ ವಿಚಾರವನ್ನು ಇದುವರೆಗೆ ಯಾರೂ ಚೆನ್ನಾಗಿ ವಿಮರ್ಶಿಸಿದಂತೆ ಕಾಣುವುದಿಲ್ಲ. ಸಂಸ್ಕೃತದಲ್ಲಿರುವ ನಮ್ಮ ಸಂಗೀತಶಾಸ್ತ್ರಗ್ರಂಥಗಳಲ್ಲಿ ಮಾತು, ಮುಕ್ತಾಯ, ಪರಿವಿಡಿ, ಜೋಡಣಿ (ಜೋಡಣೆ) ತಿರಿಪ, ಬೋನ ಮೊದಲಾದ ಎಷ್ಟೋ ಕನ್ನಡ ಪದಗಳು ಮತಂಗಾದಿಗಳ ಕಾಲದಿಂದಲೇ ಪಾರಿಭಾಷಿಕಸಂಜ್ಞೆಗಳಾಗಿ ಬಳಕೆಯಲ್ಲಿರುವುದರಿಂದಲೂ, ದೇಶೀಯ ಸೂಡಗಳಲ್ಲಿ ಕರ್ಣಾಟಕಭಾಷಾರಚನೆಗಳೇ ಹೆಚ್ಚಾಗಿ ಇದ್ದಂತೆ ಲಕ್ಷಣಗ್ರಂಥಗಳಿಂದ ತಿಳಿಯುವುದರಿಂದಲೂ, ಸಂಸ್ಕೃತದಲ್ಲಿ ಈ ಪದಕ್ಕೆ ವ್ಯುತ್ಪತ್ತಿ ಕಾಣುವುದಿಲ್ಲವಾದುದರಿಂದಲೂ, ದಾಸಕೂಟದ ವಾಗ್ಗೇಯಕಾರರ ಕನ್ನಡ ಕೃತಿಗಳಿಗೆ ಸೂಳಾದಿ ಎಂಬ ವ್ಯವಹಾರವು ಇಂದಿಗೂ ಉಳಿದಿರುವುದರಿಂದ ಸಹ ಇದು ಕನ್ನಡ ಭಾಷೆಯ ಪದವಾಗಿರಬಹುದೆಂಬ ಅನುಮಾನವಾಗುವುದು. ಆದುದರಿಂದ ಕನ್ನಡದಲ್ಲಿ ಇದರ ಸುಳಿವು ಸಿಕ್ಕುವುದೋ ಹೇಗೆ ಎಂದು ನೋಡೋಣ.

ಪ್ರಬಂಧ ಎಂಬ ಪದಕ್ಕೆ ಕಟ್ಟಿದ ಕಟ್ಟು ಎಂಬುದು ಯೋಗಾರ್ಥ. 'ಪ್ರಬಧ್ಯತೇ ಇತಿ ಪ್ರಬಂಧಃ' ಕಟ್ಟು ಎಂಬ ಧಾತುರೂಪವೇ ಕರ್ಮಾರ್ಥದಲ್ಲಿ ನಾಮವಾಗಿಯೂ ಇದೆ. ಈ ಕಟ್ಟು ಎಂಬ ಅರ್ಥವಿರುವ ಇನ್ನೊಂದು ಕನ್ನಡ ಪದ ಸೂಡ ಎಂಬುದು. ವೀಳ್ಯದೆಲೆ, ಬಾಳೆಎಲೆ, ಕಸಬರಿಕೆ, ಹರುವೆ ಸೊಪ್ಪು, ನೆಲ್ಲು, ಹುಲ್ಲು ಇತ್ಯಾದಿಗಳ ಕಟ್ಟುಗಳಿಗೆಲ್ಲ ಸೂಡು, ಸೂಡಿ ಎಂಬ ಹೆಸರಿರುವುದು

---

1 ಚಂದ್ರಪ್ರಭ ಪುರಾಣ ಪುಟ ೨೦೧ — ಅನಂತನಾಥ ಪುರಾಣ. ಜನ್ನಕವಿ.
ಪಂಪಾ ವಿರೂಪಾಕ್ಷಸ್ಥಾನವರ್ಣನಂ ಚಂದ್ರಕವಿ. ಪುಟ ೨೭.

2 ಸಂ. ರ. ಪ್ರಬಂಧಾಧ್ಯಾಯ. ಶ್ಲೋ. ೨೩ರ ವ್ಯಾಖ್ಯಾನ. ಕಲ್ಲಿನಾಥ. — ಚತುರ್ದಂಡೀ. ಗೀತಪ್ರಕರಣ. — ಸಂ ಸಾರಾಮೃತ ಪ್ರಬಂಧಾಧ್ಯಾಯ.

ನಮಗೆಲ್ಲ ತಿಳಿದೇ ಇದೆ. ಸೂಡು ಎಂಬುದು ಕ್ರಿಯಾಪದವಾದರೆ ಅದಕ್ಕೆ ಮುಡಿ ಎಂಬ ಅರ್ಥವೂ ಪ್ರಸಿದ್ಧವಾಗಿದೆ. ಹೂಗಳನ್ನು ಸೂಡುವುದು ಎಂದರೆ ಮುಡಿದುಕೊಳ್ಳುವುದು. ಶಬ್ದಮಣಿದರ್ಪಣದಲ್ಲಿಯೂ 'ಸೂಡು = ಪುಷ್ಪಧಾರಣೇ ತೃಣಾದಿಪೂರೇಚ' ಎಂದು ಇವೆರಡು ಅರ್ಥಗಳನ್ನು ಕೊಟ್ಟಿದೆ. ಕಟ್ಟಿದ ಕಟ್ಟಿಗೆ ಕರ್ಮಾರ್ಥದಲ್ಲಿ ಈ ಹೆಸರಾಗಬೇಕಾದರೆ 'ಸೂಡು' ಎಂಬುದಕ್ಕೆ ಕಟ್ಟು ಎಂಬ ಕ್ರಿಯಾರ್ಥವಿದ್ದಿರಬೇಕಾದುದು ಸಹಜ. ಪ್ರಾಚೀನ ಕನ್ನಡ ಕಾವ್ಯಾದಿಗಳಲ್ಲಿ ಹಾಗಿರುವುದೂ ಕಾಣುತ್ತದೆ. ಸ್ವಯಂವರಾದಿ ವಿವಾಹಸಂದರ್ಭದಲ್ಲಿ 'ಮಾಲೆ ಸೂಡಿದಳ್'[1] ಎಂಬ ಪ್ರಯೋಗವಿರುವುದಷ್ಟೆ? ಅಲ್ಲಿ ವಧುವು ವರನ ಕೊರಳಿಗೆ ಮಾಲೆಯನ್ನು ಕಟ್ಟಿದಳು ಎಂದು ವಾಚ್ಯಾರ್ಥ. ಪುಷ್ಪಧಾರಣೆ ಎಂಬುದರ ಲಕ್ಷಣಾರ್ಥವು ಇಲ್ಲಿ ಪ್ರವರ್ತಿಸುವ ಸಂಭವವಿಲ್ಲ. ಏಕೆಂದರೆ ಪುಷ್ಪಧಾರಣದಲ್ಲಿ ಸೂಡು ಎಂಬುದು ಸ್ವಾರ್ಥಕ್ರಿಯೆ; ತಾನು ಮುಡಿದುಕೊಳ್ಳುವುದು ಎಂಬರ್ಥ. ಪರಾರ್ಥದಲ್ಲಿಯಾದರೆ ಮುಡಿಸು ಎಂದಂತೆ ಇದಕ್ಕೂ ಇಸು ಪ್ರತ್ಯಯವನ್ನು ಹಚ್ಚಿ ಸೂಡಿಸು ಎಂದೇ ಪ್ರಯೋಗದಲ್ಲಿರುವುದು. ಇದರಂತೆಯೇ ಪಟ್ಟಕಟ್ಟಿದರು ಎಂಬರ್ಥದಲ್ಲಿ 'ಪಟ್ಟಸೂಡಿದರ್' ಎಂಬ ಪ್ರಾಚೀನ ಕವಿಪ್ರಯೋಗವಿದೆ.[2] ಕಿರೀಟಧಾರಣದ ಪೂರ್ವವಿಧಿಯಾಗಿ ಪಟ್ಟೆ ವಸ್ತ್ರವನ್ನು ತಲೆಗೆ ಕಟ್ಟುವುದರಿಂದಲೇ ಪಟ್ಟ ಕಟ್ಟುವುದು (ಪಟ್ಟಬಂಧ) ಎಂಬ ಹೆಸರಾದುದು.[3] ಪಟ್ಟ ಸೂಡಿದರ್ ಎಂಬುದಕ್ಕೆ ಪಟ್ಟ ಕಟ್ಟಿದರು ಎಂದೇ ಅರ್ಥ; ಇಲ್ಲಿಯೂ ಸೂಡಿದರ್ ಎಂಬುದು ಬಂಧನಾರ್ಥದಲ್ಲಿರುವ ಕ್ರಿಯಾಪದವೆಂಬುದರಲ್ಲಿ ಸಂದೇಹವಿಲ್ಲ. ಇನ್ನೂ ಇಂತಿರುವ ಕೆಲವು[4] ಪ್ರಾಚೀನ ಕವಿಪ್ರಯೋಗಗಳಿಂದ ಸಹ ಸೂಡು ಎಂಬ ಧಾತುವಿಗೆ ಪುಷ್ಪಧಾರಣ ಮತ್ತು ಬಂಧನ ಎಂಬ ಎರಡು ಅರ್ಥಗಳಿವೆ ಎಂದು ಸ್ಪಷ್ಟವಾಗುವುದು.[5] ಹೀಗಿರುವುದರಿಂದಲೆ ಕೇಶ ಬಂಧಕ್ಕೂ ಸೂಡು, ಸೂಡಿ ಎಂಬ ವ್ಯವಹಾರವು ಬಂದಿವೆ. ಬೇರೆ ಬೇರೆ ವಿಧಾನದಲ್ಲಿ ಕಟ್ಟಿಕೊಳ್ಳುವ ತುರುಬಿಗೆ ರಂಡೆಸೂಡಿ, ಅಂಬಡೆಸೂಡಿ, ಗಿಳಿಸೂಡಿ ಎಂದು ಕರೆಯುವುದುಂಟು. ಹೀಗೆ ಸೂಡು ಎಂಬುದು ಬಂಧನಾರ್ಥದ ಧಾತುವಾಗಿರುವಾಗ ಕರ್ಮಾರ್ಥದಲ್ಲಿ ಅದು ಸೂಡ ಎಂದು ಅಕಾರಾಂತವಾಗಿರುವುದೂ ಸಹಜವೇ ಸರಿ. ಉಕಾರಾಂತ ಧಾತುಗಳು ಭಾವ ಮತ್ತು ಕರ್ಮಾರ್ಥದಲ್ಲಿ ಅಕಾರಾಂತವಾಗುತ್ತವೆ. ಉದಾ:– ಸೋಲ್–ಸೋಲು, ಸೋಲ; ನೀಡು–ನೀಟ, ನೀಳ, ಹೂಡು–ಹೂಟ; ಓಡು–ಓಟ; ಪಾಡು – ಪಾಡು, ಪಾಟ ಇತ್ಯಾದಿ.

ಸಂಸ್ಕೃತದಲ್ಲಿರುವ ಚೂಡ ಎಂಬ ಪದವೂ ಈ ಸೂಡದ ರೂಪಾಂತರವಾಗಿದ್ದರೂ ಇರಬಹುದು. ಚಕಾರ ಸಕಾರಗಳು ಒಂದರ ಸ್ಥಾನದಲ್ಲಿ ಇನ್ನೊಂದು ಬರುವುದೇನೂ ವಿಶೇಷವಲ್ಲ. ಗೇಯ ಪ್ರಬಂಧಕ್ಕೂ 'ಚೂಡ' ಎಂಬ ವ್ಯವಹಾರವು ಸಂಗೀತಶಾಸ್ತ್ರಗ್ರಂಥಗಳಲ್ಲಿ ಇದೆ. ಚಾಲುಕ್ಯ ಸೋಮೇಶ್ವರನ ಮಗ ಜಗದೇಕಮಲ್ಲನ "ಸಂಗೀತ ಚೂಡಾಮಣಿ"ಯಲ್ಲಿ ಗೇಯಪ್ರಬಂಧಗಳನ್ನು ಸರ್ವತ್ರ ಚೂಡ ಎಂದೇ ಕರೆಯಲಾಗಿದೆ. ಇತರ ಅನೇಕ ದೇಶೀಯ ಪದಗಳು ಸಂಸ್ಕೃತಕ್ಕೆ ಸೇರಿರುವಂತೆ ಕನ್ನಡದ ಸೂಡವು ಅಲ್ಲಿ ಚೂಡವಾಗಿ ಮಾರ್ಪಟ್ಟಿದೆಂಬುದರಲ್ಲಿ ಸಂದೇಹ ಕಾಣುವುದಿಲ್ಲ. ಗೇಯಪ್ರಬಂಧವಾಚಕವಾಗಿ ಸೂಡ, ಸೂಲ, ಸೂಳ ಎಂಬ ಅಕಾರಾಂತ ರೂಪಗಳು ಮಾತ್ರವಲ್ಲ, ಸೂಲು, ಸೂಳು ಎಂಬ ರೂಪಗಳೂ ಗೀತ ವ್ಯವಹಾರದಲ್ಲಿವೆ. ದಕ್ಷಿಣ ಕನ್ನಡ ಮತ್ತು ಕಾಸರಗೋಡು ಪ್ರಾಂತದ ನಮ್ಮ ಹವೀಕ

---

1 ವಡ್ಡಾರಾಧನೆ. ಪು. ೪೧, ೧೦೮ — ಪಂಪಭಾರತ. ತೃತೀಯಾಶ್ವಾಸ. ೬೪.

2 ಚಿಕ್ಕಮಗಳೂರು ಶಾಸನ (c 500 A. D.) History of Kannada literature.

3 ಪಂಪಭಾರತ ಅ. ೧೪ — (೧೭ ಗದ್ಯ) ವಡ್ಡಾರಾಧನೆ ಪು. ೧೦೩.

4 ಕವಿರಾಜಮಾರ್ಗ.

5 ಮಲೆಯಾಳ ಭಾಷೆಯಲ್ಲಿ 'ಚೂಡು' 'ಚೂಟ್ಟು' ಎಂಬ ಪದಗಳು ಬಂಧನಾರ್ಥದ ಕ್ರಿಯಾಪದಗಳಾಗಿ ಧಾರಾಳ ವ್ಯವಹಾರದಲ್ಲಿವೆ ನಿಘಂಟುವಿನಲ್ಲಿಯೂ ಹಾಗೆ ಇದೆ.

ಸಮಾಜದ ಹೆಂಗುಸರು ಶುಭಶೋಭನಾದಿ ಉತ್ಸವಸಂದರ್ಭದಲ್ಲಿ ಹಾಡುವ ಮಂಗಳಗೀತಗಳ (ಸೋಬಾನೆಗಳ) ಒಂದೊಂದು ಗೇಯಭಾಗಗಳಿಗೆ 'ಸೂಲು'ಗಳೆಂಬ ಹೆಸರು ಪರಂಪರೆಯಿಂದ ರೂಢಿಯಲ್ಲಿದೆ. ಗದುಗಿನ ಭಾರತದಲ್ಲಿ ನಾರ್ಣಪ್ಪನೂ ಗೇಯಪ್ರಬಂಧಗಳನ್ನು 'ಸೂಳುಗಳು' ಎಂದು ಕರೆದಿದ್ದಾನೆ.[1] ಇವೆಲ್ಲ ಪ್ರಮಾಣಗಳಿಂದ ಸೂಡು, ಸೂಡ, ಸೂಲು, ಸೂಲ, ಸೂಳು, ಸೂಳ, ಚೂಡ ಎಂಬ ಸಂಜ್ಞೆಗಳು ಒಂದೇ ಕನ್ನಡ ಪದದ ಏಕಾರ್ಥಬೋಧಕವಾದ ಹಲವು ರೂಪಗಳೆಂದೂ ಸೂಡು ಎಂಬ ಪದಕ್ಕೆ ಕಟ್ಟು ಎಂಬ ಅರ್ಥವಿರುವುದರಿಂದಲೇ ಇವು ಪ್ರಬಂಧಶಬ್ದಕ್ಕೆ ಪರ್ಯಾಯವಾಗಿ ವ್ಯವಹಾರದಲ್ಲಿದ್ದುವೆಂದೂ ಸಿದ್ಧವಾಗುವುದು.

ಪ್ರಬಂಧಾರ್ಥದಲ್ಲಿರುವ ಸೂಳ ಅಥವಾ ಸೂಡ ಎಂಬ ಹೆಸರೇ ಆ ಗೇಯಸಹಿತವಾದ ನರ್ತನಕ್ಕೂ ಬಂದಿರುವುದೆಂದು ಲಕ್ಷಣಗ್ರಂಥಗಳಿಂದ ತಿಳಿಯುತ್ತದೆ. ಕರ್ಣಾಟಕ ದೇಶೀಯವೆಂದು ಪ್ರಸಿದ್ಧವಾಗಿದ್ದ ಗೋಂಡಲಿ[2] ಮೊದಲಾದ ಸ್ತ್ರೀನೃತ್ಯ ಪದ್ಧತಿಗಳಲ್ಲಿ ನರ್ತಕಿಯರು ಶುದ್ಧಸೂಡ, ಸಾಲಗಸೂಡಾದಿ ದೇಶೀಯ ಪ್ರಬಂಧಗಳನ್ನು ಹಾಡುತ್ತ ಆ ಪ್ರಬಂಧಗಳ ಭಾವತಾಳಗಳಲ್ಲಿ ಕುಣಿಯುತ್ತಿದ್ದುದು 'ಪದ್ಧತಿ'. ಇಂತಹ ನೃತ್ತಭೇದಗಳಿಗೆ ಸೂಡನೃತ್ತಗಳೆಂದು ಲಕ್ಷಣಗ್ರಂಥಗಳಲ್ಲಿ ಹೆಸರಿದೆ. ಗೀತಗಳಲ್ಲಿದ್ದಂತೆ ಶುದ್ಧಸಾಲಗಾದಿ ಭಿನ್ನಪ್ರಕಾರಗಳು ಈ ಸೂಡನೃತ್ತದಲ್ಲೂ ಇದ್ದುವು.[3] ಇದರಿಂದ ಇನ್ನೂ ಒಂದು ಅನುಮಾನವೂ ಸಹಜವಾಗಿ ಹುಟ್ಟುವುದೆಂದರೆ— ವಾರಸ್ತ್ರೀಯರಿಗೆ ನಮ್ಮಲ್ಲಿ ಸೂಳೆಯರೆಂಬ ಹೆಸರು ಚಿರಪ್ರಸಿದ್ಧವಾಗಿರುವುದಷ್ಟೆ? ಇದುವರೆಗೆ ಈ ಹೆಸರಿಗೆ ನಿಘಂಟುಗಳಲ್ಲಿಯೂ ಸರಿಯಾದ ವ್ಯುತ್ಪತ್ತಿ ಕಾಣುವುದಿಲ್ಲ. ಸೂಳೆಗೆ ವ್ಯಭಿಚಾರವೃತ್ತಿಯಲ್ಲಿರುವ ಸ್ತ್ರೀ ಎಂಬ ಅರ್ಥವು ರೂಢಿಯಲ್ಲಿರುವುದಾದರೂ ತೀರ ಅಸಭ್ಯ ಮತ್ತು ಅಶ್ಲೀಲವಾದ ಈ ಅರ್ಥವು ಸೂಳೆ ಎಂಬ ಹೆಸರಿಗೆ ಇದ್ದಿರುವುದು ಅಸಂಭವವೆಂದೇ ಹೇಳಬೇಕು. ಏಕೆಂದರೆ, ಪ್ರಾಚೀನ ಕಾವ್ಯಾದಿಗಳಿಂದ ತಿಳಿಯಬಹುದಾದಂತೆ ಹಿಂದಕ್ಕೆ ಸೂಳೆಯರಿಗೆ ಸಮಾಜದಲ್ಲಿ ಒಳ್ಳೆಯ ಗೌರವಸ್ಥಾನವಿತ್ತು. ಅರಮನೆ, ಆಸ್ಥಾನ, ವಿದ್ವತ್ಸಭೆ, ದೇವಸ್ಥಾನ, ಮಂಗಲೋತ್ಸವಾದಿಗಳಲ್ಲಿ ಸೂಳೆಯರಿಗೆ ಬಹಳ ಮನ್ನಣೆ ಇತ್ತು.[4] ಸೂಳೆಯರ ಸಂಗೀತ ನಾಟ್ಯಗಳಿಲ್ಲದೆ ಯಾವ ಶುಭಸಮಾರಂಭವೂ ನಡೆಯದು. ರಾಜಪುತ್ರಿಯರಿಗೆ 'ಪೆಂಡವಾಸದ ಸೂಳೆಯರ' ಬಳುವಳಿಯು ವಿಶೇಷವಾಗಿ ಸಲ್ಲುತ್ತಿತ್ತು.[5] ಸೂಳೆ ಎಂಬುದು ನಿಂದ್ಯವಾದ ಅಶ್ಲೀಲಾರ್ಥದಲ್ಲಿರುವ ಹೆಸರಾದರೆ ಇಷ್ಟೊಂದು ಗೌರವಾರ್ಥದಲ್ಲಿ ಅದು ಪ್ರಸಿದ್ಧವಾಗಿರಲು ನ್ಯಾಯವಿಲ್ಲ. ಈ ಸೂಳೆಯರು ಸಂಗೀತನೃತ್ತಗಳಿಗೆ ಹೆಸರಾದವರೆಂಬುದು ಸರ್ವಪ್ರಸಿದ್ಧ. ಇದರಿಂದಲೇ ಅವರಿಗೆ ಮೇಳದವರು ಎಂಬ ಹೆಸರಾಗಿದೆ. ಮೇಳ ಎಂದರೆ ಸಂಗೀತಮೇಳವೆಂಬುದು ಅನ್ಯಥಾ

1 'ಮೇಳವರಿವುತ ವಾದ್ಯ ಸಾಧನ। ದೇಳಿಗೆಯ ಸಂಪೂರ್ಣ ಮಾರ್ಗದ। ಸೂಳುಗಳ ಲಯಮಾನವರಿವವನವನೆ ಗಾಯಕನು॥' ಗದುಗಿನ ಭಾರತ ಉದ್ಯೋಗಪರ್ವ ಸಂಧಿ 3 ಪದ್ಯ ೯೬ ಮೈಸೂರು ಸರಕಾರದ ಪ್ರಕಾಶನ

2 ಸಂ. ರ. ನರ್ತನಾಧ್ಯಾಯ ಶ್ಲೋ. ೧೨೭೯ — ೧೩೧೨ ಶುದ್ಧಸೂಡ, ಸಾಲಗಸೂಡ. ನೃತ್ಯಕ್ಕೆ 'ಪದ್ಧತಿ' ಎಂದು ಪಾರಿಭಾಷಿಕಸಂಜ್ಞೆ, 'ಪರಿವಿಡಿ' ಎಂದರೂ ಇದುವೇ ಆಗಿದೆ.
ಶುದ್ಧ ಸಾಲಗ ಸೂಡಾದಿ ಗೀತಾಭಿನಯ ಮಂಥರು.
ರುಚ್ಯಾಪ್ರವರ್ತಿತಂ ದೇಶೇ ರಾಜಭಿಃ ಗುಂಡಲೀಂ ವಿದುಃ (ಶಾರದಾತನಯನ ಭಾವಪ್ರಕಾಶ)

3 ಸಂಗೀತದರ್ಪಣ ಪುಟ ೨೧೫, ೩೧೯ — ೨೨೧

4 ಪಂಪಾವಿರೂಪಾಕ್ಷಾಸ್ಥಾನದಲ್ಲಿ ಸೂಳೆಯರ ಸಂಗೀತ ನಾಟ್ಯ ಸೇವೆಗಿದ್ದ ಪ್ರಾಶಸ್ತ್ಯವನ್ನು ಚಂದ್ರಕವಿಯ 'ಪಂಪಾಸ್ಥಾನವರ್ಣನ'ದಿಂದ ತಿಳಿಯಬಹುದು.

5 ವಡ್ಡಾರಾಧನೆ ಪುಟ ೧೪೯

ಸೂಚನೆ ಇಲ್ಲದಿರುವಲ್ಲಿ ಸರ್ವತ್ರ ಗೃಹೀತವ್ಯವಹಾರ. ಮೇಳದಂಗನೆ, ಮೇಳಗಾರ್ತಿ ಎಂದರೆ ಸೂಳೆಯೇ. ಸಂಸ್ಕೃತದಲ್ಲಿ ಗಣಿಕಾ, ವಾರಸ್ತ್ರೀ ಎಂಬ ಹೆಸರುಗಳಿಗೆ ಇದೇ ಅರ್ಥ. ಮೇಳದ ಮುಖ್ಯಸ್ಥಳಿಗೆ ಗಣಮುಖ್ಯಾ, ವಾರಮುಖ್ಯಾ ಎಂಬ ಹೆಸರು. ಸಂಗೀತವು (ಗೀತ, ವಾದ್ಯ, ನೃತ್ಯ) ಸೂಳೆಯ ವೃತ್ತಿ. ಗೀತನೃತ್ತಗಳಿಗೆ ಸೂಳ ಎಂಬ ಹೆಸರು ನಮ್ಮಲ್ಲಿ ಪ್ರಸಿದ್ಧವಾಗಿರುವುದರಿಂದ ಅದೇ ಸಂಬಂಧದಲ್ಲಿ ಸೂಳೆ ಎಂಬ ಹೆಸರು ಬಂದಿರುವುದು ಸಹಜವಾಗಿ ಕಾಣುತ್ತದೆ.[1] ಸ್ತ್ರೀ ವಾಚಕವಾಗುವಾಗ ಆ ಪದವು ಸೂಳೆ ಎಂದು ಎಕಾರಾಂತವಾದುದೂ ನ್ಯಾಯವೇ ಸರಿ. ಅರ್ಥಾತ್ ಸೂಳದವಳೇ—ಸೂಳೆ.

ಸೂಳೆಯರಲ್ಲಿ ವ್ಯಭಿಚಾರ ಇರಲಿಲ್ಲವೆಂದಲ್ಲ. ಅವರು ಆ ವೃತ್ತಿಗೆ ಇಳಿದರೆಂದರೂ ಸರಿ. ಅವರಿಗೆ ಸೂಳೆಯರೆಂಬ ಹೆಸರಾದುದು ಆ ಕಾರಣದಿಂದಲ್ಲವೆಂದೇ ಹೇಳಬೇಕು. ಪುರಾತನ ದೇವಾಲಯಗಳಲ್ಲಿ ಸಂಗೀತಸೇವೆಯಲ್ಲಿರುತ್ತಿದ್ದ ದೇವದಾಸಿಯರಲ್ಲಿ ವೇಶ್ಯಾವೃತ್ತಿಯು ಸಾಮಾನ್ಯವಾಗಿ ಇದ್ದಿರುವುದಾದರೂ ಅವರಿಗೆ ದೇವದಾಸಿ ಎಂಬ ಹೆಸರು ಬಂದುದು ಆ ಗೌರವಾರ್ಥದಲ್ಲಿಯಲ್ಲವಷ್ಟೆ? ನೃತ್ಯಗೀತಾದಿಗಳಿಗೆ ಸಂಬಂಧಿಸಿದಂತೆ ಗಣಿಕಾ, ವಾರಸ್ತ್ರೀ ಎಂಬ ಹೆಸರುಗಳೇ ಸಂಸ್ಕೃತ ಕಾವ್ಯಾದಿಗಳಲ್ಲಿಯೂ ಕಾಣುತ್ತವೆ. ಹೀಗೆ ಮೂಲತಃ ಸಂಗೀತ (ನೃತ್ತ, ಗೀತ, ವಾದ್ಯ) ಸಂಬಂಧದಿಂದ ಬಂದ ಸೂಳೆ ಎಂಬ ಹೆಸರು ಕಾಲಕ್ರಮದಲ್ಲಿ ವೇಶ್ಯಾಪದಕ್ಕೆ ಪರ್ಯಾಯವಾಗಿ ಜಾರಿಣಿ ಎಂಬ ಅಗೌರವಾರ್ಥದಲ್ಲಿ ರೂಢಿಗೆ ಬಂದಿದೆ. ಇದನ್ನು ಕಟ್ಟಿಕೊಂಡು ಸೂಳೆ ಎಂದರೆ ವ್ಯಭಿಚಾರಿಣಿ ಎಂಬುದನ್ನು ಸಮರ್ಥಿಸುವುದಕ್ಕಾಗಿ, ಇದು 'ಶೂಲೆ' ಎಂಬ ಪದದ ರೂಪಾಂತರ, ಶೂಲೆಯನ್ನು ಅರ್ಥಾತ್ ಪೀಡೆಯನ್ನು ಕೊಡುವುದರಿಂದ ವೇಶ್ಯೆಗೆ ಸೂಳೆ ಎಂಬ ಹೆಸರು ಬಂದಿದೆ ಎಂಬಂತಹ ವಿಚಿತ್ರವಾದ ವ್ಯುತ್ಪತ್ತಿಗಳು ಕಲ್ಪಿಸಲ್ಪಟ್ಟಿವೆ! ವಾಸ್ತವವಾಗಿ ಹೇಳುವುದಾದರೆ ನೃತ್ಯಗಳಲ್ಲಿ ಪರಿಣತೆ, ಸಂಗೀತ ಕಲಾಭಿಜ್ಞೆ ಎಂಬ ಬಹುಮಾನವುಳ್ಳ ನಿಜಾರ್ಥದಲ್ಲಿ ಕಲಾವಂತೆಯಾದ ಆ ಸ್ತ್ರೀಗೆ ಸೂಳೆ ಎಂಬ ಹೆಸರು ಪ್ರಸಿದ್ಧವಾಯಿತು ಎಂದು ತಿಳಿಯುವುದು ಯುಕ್ತವಾಗಿದೆ. ಸೂಳೆಯರ ಗೋಷ್ಠಿಯೇ ಮೇಳ, ಸೂಳೆ — ಮೇಳದವಳು.

ಸೂಳಾದಿ:—ನೃತ್ಯಕ್ಕೆ ಮಾತ್ರವೇ ಅಲ್ಲ ಸೂಡ ಇತ್ಯಾದಿ ಹೆಸರುಗಳು ದೇಶೀಯ ಪ್ರಬಂಧಗಳಿಗೆ ನಿರ್ದಿಷ್ಟವಾದ ತಾಳಗಳಿಗೂ ಕ್ರಮೇಣ ರೂಢಿಯಲ್ಲಿ ಬಂದಿವೆ ಎಂಬುದನ್ನು ಸಹ ಲಕ್ಷಣಗ್ರಂಥಗಳಿಂದ ತಿಳಿಯಬಹುದು.[2] ಪುರಂದರದಾಸಾದಿಗಳ ಕಾಲದ ಲಕ್ಷ್ಯಮಾರ್ಗದಲ್ಲಿ ಶುದ್ಧಸೂಡ ಸಂಪ್ರದಾಯವು ಮುಗಿದ ಕಥೆಯಾಗಿತ್ತು. ಅಂದಿನಿಂದ ಸಾಲಗಸೂಡಕ್ಕೆ ಮಾತ್ರ ಸೂಳ ಸೂಳಾದಿ ಸಂಜ್ಞೆಯಿರುವುದು ಎಂಬ ಅಭಿಪ್ರಾಯವು ಲಕ್ಷಣಗ್ರಂಥಗಳಿಂದಲೂ ವ್ಯಕ್ತವಾಗುವುದು.[3] ಸಾಲಗ ಸೂಳವರ್ಗಕ್ಕೆ ಸೇರಿದ ಪ್ರಬಂಧಗಳೆಲ್ಲವಕ್ಕೂ ಪ್ರತ್ಯೇಕ ವಿಶಿಷ್ಟ ಸಂಜ್ಞೆಗಳಿರುವುದಿಲ್ಲ. ಯಾವ ತಾಳದಲ್ಲಿ ಪ್ರಬಂಧವು ರಚಿಸಲ್ಪಟ್ಟಿದೆಯೋ ಅಥವಾ ಹಾಡಲ್ಪಡುವುದೋ ಆ ತಾಳದ ಹೆಸರಿನಿಂದಲೇ ಆ ಪ್ರಬಂಧ

---

1 'ಸೂಳೆ' ಪದದ ಳಕಾರವನ್ನು ಕೆಲವರು ೞ ವೆಂದು ಭ್ರಮಿಸಿದಂತೆ ಕಾಣುತ್ತದೆ ಮುದ್ರಿತ ಕಾವ್ಯಾದಿಗಳಲ್ಲಿಯೂ ಕೆಲವೆಡೆ ೞ ವಾದುದಿದೆ. 'ಸೂೞ್' ಎಂಬ ಶಬ್ದಕ್ಕೆ ಸರ್ತಿ ಎಂಬ ಅರ್ಥವಿರುವುದರಿಂದ ಸೂಳೆಗೆ ಅವಳ ಅಸಭ್ಯವ್ಯವಹಾರಕ್ಕೆ ಅನ್ವರ್ಥವಾಗಿ ಈ ಹೆಸರಾಗಿದೆ ಎಂದೂ ಹೇಳುತ್ತಾರೆ. ಇದು ಸರಿಯಲ್ಲ, ವಾಸ್ತವವಾಗಿ ಸೂಳೆ ಎಂಬುದು ಕುಳ ಳಕಾರವೇ ಹೊರತು ೞ ವಲ್ಲ ಎಂಬುದು ನಿಸ್ಸಂದಿಗ್ಧ.

2 ಚತುರ್ದಂಡೀ-ಸ್ವರಪ್ರಕರಣ ಶ್ಲೋ ೧೧೧—೧೧೪. ಸಂಗೀತ ಸಾರಸಂಗ್ರಹ. (ಗೀತ ಪ್ರಕರಣ ಶ್ಲೋ ೨೧೦. ಬಹೂನಾಂತಾಲಾನಾಮೇಕತ್ರಗುಂಫನಂ ಸೂಡ್:...)

3 ಚತುರ್ದಂಡೀ - ಪ್ರಬಂಧ ಪ್ರಕರಣ ಶ್ಲೋ ೪೪೭, ೪೪೮.

ವನ್ನು ಕರೆಯುವ ವಾಡಿಕೆ ಹಿಂದಿನಿಂದಲೇ ನಡದು ಬಂದಿದೆ. ಅಟತಾಳದ ರಚನೆಗೆ ಅಟತಾಳಪ್ರಬಂಧ ಮಂಠತಾಳದ ರಚನೆ ಮಂಠಪ್ರಬಂಧ, ಏಕತಾಲದ್ದು ಏಕತಾಲೀಪ್ರಬಂಧ ಇತ್ಯಾದಿ ಸಾಲಗಸೂಡವರ್ಗ ದಲ್ಲಿ ಮೊದಲನೆಯ ಪ್ರಬಂಧವಾದ ಧ್ರುವ ಎಂಬುದರ ಹೊರತು ಮಿಕ್ಕ ಆರು ಪ್ರಬಂಧಗಳಿಗೂ ರತ್ನಾ ಕರಾದಿ ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಸಹ ತಾಳದ ಹೆಸರೇ ಇರುವುದಾಗಿದೆ. ಧ್ರುವ ಎಂಬ ಹೆಸರಿನ ತಾಳವು ಹಿಂದೆ ಇದ್ದುದಲ್ಲ. ಅನಂತರಕಾಲದಲ್ಲಿ ರೂಢಿಗೆ ಬಂದ ಅದೊಂದು ತಾಳವು ಧ್ರುವ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವುದಲ್ಲದೆ ಇತರ ತಾಳಗಳ ನಾಮರೂಪಗಳೂ ಬಹುಮಟ್ಟಿಗೆ ವ್ಯತ್ಯಾಸ ಗೊಂಡಿವೆ.[1] ಹಾಗೆ ಅರ್ವಾಚೀನ ಲಕ್ಷಣಗ್ರಂಥಗಳಲ್ಲಿ ಧ್ರುವ, ಮಠ್ಯ, ರೂಪಕ, ಝಂಪೆ, ತ್ರಿಪುಟ, ಅಟ, ಏಕ ಎಂಬ ಅಧುನಾಪ್ರಸಿದ್ಧ ಸಪ್ತತಾಳಗಳಿಗೆ ಮತ್ತು ಅವುಗಳಲ್ಲಿ ನಿಬದ್ಧವಾದ ಗೀತಗಳಿಗೆ ಸಮಷ್ಟಿಯಿಂದ ಸೂಡ, ಸೂಳ, ಸೂಳಾದಿ ಎಂಬ ಸಂಜ್ಞೆ ಕಾಣುತ್ತದೆ. ಕೆಲವರು ಈ ಸೂಡದಲ್ಲಿ ಆದಿತಾಳವನ್ನೂ ಸೇರಿಸುತ್ತಾರೆ.[2] ಇನ್ನು ಕೆಲವರು ಝುಮರಿ, ಯತಿ ಎಂಬೆರಡು ತಾಳಗಳನ್ನು ಸೇರಿಸಿ ಒಂಬತ್ತು ತಾಳಗಳೆನ್ನುತ್ತಾರೆ.[3] ಇಷ್ಟೇ ಅಲ್ಲ ಸೂಡ ಎಂದರೆ ಹನ್ನೊಂದು ತಾಳಗಳೆಂಬ ಇನ್ನೊಂದು ಮತವೂ ಇದೆ. ಇಂತಹ ಕೆಲವು ಮತಭೇದಗಳನ್ನು ಘನಶ್ಯಾಮದಾಸರ 'ಸಂಗೀತಸಾರಸಂಗ್ರಹ' ಎಂಬ ಗ್ರಂಥದಿಂದಲೂ ತಿಳಿಯಬಹುದು. (ಪುಟ ೨೮) ಪುರಂದರದಾಸಾದಿ ವಾಗ್ಗೇಯಕಾರರು ಈ ತಾಳಗಳಲ್ಲಿ ಅಸಂಖ್ಯಾತವೆಂಬಷ್ಟು ಕೃತಿಗಳನ್ನು ರಚಿಸಿ ವಿಶೇಷ ಪ್ರಚಾರಕ್ಕೆ ತಂದುದರಿಂದ ಹಿಂದಿನ ಲಕ್ಷ್ಯ ಮಾರ್ಗದಲ್ಲಿದ್ದ ನೂರಾರು ದೇಶೀಯ ತಾಳಗಳೂ ಪ್ರಬಂಧಜಾತಿಗಳೂ ಕ್ರಮಶಃ ನಾಮಾವಶೇಷ ವಾದುವು. ಇತರ ಸೂಡಗಳು ಪ್ರಯೋಗದಲ್ಲಿಲ್ಲದಾಗಿ ಸಾಲಗಸೂಳವೇ ಸೂಳ, ಪುರಂದರದಾಸಾದಿ ಗಳು ಧ್ರುವಾದಿ ತಾಳಗಳಲ್ಲಿ ರಚಿಸಿದ ಕೃತಿಗಳೇ ಅದಕ್ಕೆ ಲಕ್ಷ್ಯ ಎಂದಾಯಿತು.[4] ಇವುಗಳಲ್ಲಿ ಎಂದರೆ ಸಾಲಗಸೂಡಪ್ರಬಂಧಗಳಲ್ಲಿ ಮೊದಲನೆಯದಾದ, ಪ್ರಾಚೀನ ಲಕ್ಷಣಗ್ರಂಥಗಳಲ್ಲಿ ಧ್ರುವ ಎಂಬ ಹೆಸರಿದ್ದ ಅದೊಂದು ವಿಶಿಷ್ಟ ಪ್ರಬಂಧವು ಅನೇಕ ತಾಳಗಳ ರಚನೆ ಧ್ರುವಾದಿ ಸಪ್ತ ತಾಳಗಳಲ್ಲದೆ ಯತಿ (ಜತಿ) ಎಂಬ ತಾಳವೂ ಅದರಲ್ಲಿ ಸೇರಿದೆ. ದಾಸರ ಕೃತಿಗಳಲ್ಲಿ 'ಸೂಳಾದಿ' ಎಂಬ ವಿಶೇಷ ಸಂಜ್ಞೆ ಇರುವುದೂ ತಾಳಮಾಲಿಕೆಯಂತಿರುವ ಆ ಪ್ರಬಂಧಕ್ಕೇ. ಅದರ ಒಂದೊಂದು ಖಂಡಗಳೂ ಬೇರೆ ಬೇರೆ ತಾಳಗಳಲ್ಲಿರುವುವು. ಆದುದರಿಂದಲೇ ಇತರ ಪ್ರಬಂಧಗಳಂತೆ ಅವನ್ನು ಒಂದು ತಾಳದ ಹೆಸರಿ ನಿಂದ ಕರೆಯುವುದಾಗಲಿಲ್ಲ, ಮೊದಲಿದ್ದ ಧ್ರುವ ಎಂಬ ಹೆಸರಿನಿಂದಲೇ ಕರೆಯಬಹುದಿತ್ತಲ್ಲ ಎಂದರೆ ಆ ಕಾಲದಲ್ಲಿ ಒಂದು ತಾಳಕ್ಕೂ ಅದೇ ಹೆಸರಿದ್ದು ಆ ತಾಳದಲ್ಲಿ ಕೃತಿಗಳನ್ನು ಬೇರೆ ರಚಿಸಿರುವುದರಿಂದ ಅದೂ ಅನುಚಿತವಾಗಿ ಪರಿಣಮಿಸಿತು. ಹಾಗಾಗಿ ವ್ಯಾಸರಾಯಾದಿ ವಾಗ್ಗೇಯಕಾರರು ಸೂಳದ ಆದ್ಯ ಪ್ರಬಂಧವೆಂದು ಅದನ್ನು ಅನ್ವರ್ಥವಾಗಿಯೇ 'ಸೂಳಾದಿ' ಎಂದು ಕರೆದರು ಎಂದು ತಿಳಿಯಬೇಕು. ಕೆಲವು ಲಕ್ಷಣ ಗ್ರಂಥಗಳಲ್ಲಿ ಅದಕ್ಕೆ 'ಸೂಳಾದ' ಎಂಬ ಹೆಸರನ್ನೇ ಕೊಡಲಾಗಿದೆ.[5] ಸಾಲಗಸೂಡದ ಆದ್ಯ ಪ್ರಬಂಧ – 'ಸೂಳಾದಿ' ಸಂವತ್ಸರದ ಮೊದಲನೆಯ ದಿನವನ್ನು 'ಯುಗಾದಿ' ಎನ್ನುವ ಹಾಗೆ.

---

1 ಸಂ. ಸಾರಾಮೃತ ಪ್ರಬಂಧಾಧ್ಯಾಯ ಪುಟ ೧೫೨, ೧೫೩, '...ಅಡ್ಡತಾಲೀದೋಲಘು ದ್ವಯಂ, ಇದಮೇವೋಚಿರೇ' ತಾಲಂ ಕೇಚಿತ್ ತ್ರಿಪುಟಸಂಜ್ಞಯಾ (ಸಂ. ಸಾ. ಪು. ೧೭೧) ಚತುರ್ದಂಡೀ. ಗೀತಪ್ರಕರಣ. ಸಂಗೀತಸಾರಸಂಗ್ರಹ. ಗೀತಪ್ರಕರಣ ಶ್ಲೋ. ೨೧೭ — ೨೧೯.

2 ಚತುರ್ದಂಡೀ — ಸ್ವರಪ್ರಕರಣ ಶ್ಲೋ. ೧೦೪ - ೧೧೧.

3 ಸಂಗೀತ ಸಾರಸಂಗ್ರಹ. ಪುಟ ೨೭ ಶ್ಲೋ. ೨೧೨ - ೨೧೩.

4 ಸಂ. ಸಾರಾಮೃತ. ಪ್ರಬಂಧಪ್ರಕರಣ. ಪುಟ ೧೫೦.

5 ಭರತ ಕಲ್ಪಲತಾ ಮಂಜರಿ. ಪುಟ ೯೯:- ಸೂಳಾದ್ಯಾದಿ ಚತುರ್ವಿಧ ಭಾವಪ್ರಬಂಧ ಲಕ್ಷಣಂ — ಸೂಳಾದ್ಯಾನಾಮುವಳಿತಂ ಚೂರ್ಣಿಕಾ ನಾಟಕಂ ತಥಾ.

ದಾಸರ ಕೃತಿಗಳ ಸಮುದಾಯಕ್ಕೂ ಸರ್ವಸಾಮಾನ್ಯವಾಗಿ 'ಸೂಳಾದಿಗಳು' ಎಂಬ ವ್ಯವಹಾರವಿರುವುದು ಕೆಲವೆಡೆಗಳಲ್ಲಿ ಕಂಡುಬರುತ್ತದೆ. ದಾಸರ ಪದಗಳ ಕೆಲವು ಸಂಗ್ರಹ ಗ್ರಂಥಗಳಿಗೆ ಈ ಹೆಸರಿರುವುದು ಕಾಣುತ್ತದೆ. ಅವುಗಳೊಳಗೆ ಸೂಳಗಳು ಮಾತ್ರವಲ್ಲದೆ ಹರಿದಾಸಕರ್ತೃಕವಾದ ಇತರ ತಾಳಗಳ ರಚನೆಗಳೂ ತಾಳಬದ್ಧವಲ್ಲದ ಶ್ಲೋಕ, ಚೂರ್ಣಿಕೆ, ದಂಡಕ ಮೊದಲಾದ ಬಂಧವಿಶೇಷಗಳೂ ಇರುವುದರಿಂದ ಸರ್ವಗ್ರಾಹಕವಾಗಿ, ಸೂಳ ಮೊದಲಾದ ಪ್ರಬಂಧಗಳು ಎಂಬ ಅರ್ಥದಲ್ಲಿ ಹಾಗೆ ಕರೆಯುವುದೂ ತಪ್ಪಲ್ಲ.

ಸಾಲಗ:— ಸಂಗೀತರತ್ನಾಕರದಲ್ಲಿ 'ಛಾಯಾಲಗಕ್ಕೆ' ಪರ್ಯಾಯವಾಗಿ ಈ ಪದವು ಪ್ರಯೋಗಿಸಲ್ಪಟ್ಟಿದೆ. ಕಲ್ಲಿನಾಥನು ವ್ಯಾಖ್ಯಾನದಲ್ಲಿ 'ಸಾಲಗ' ಎಂಬ ಪದವು 'ಛಾಯಾಲಗ'ದ ಅಪಭ್ರಂಶರೂಪವಾಗಿ ರೂಢಿಯಲ್ಲಿದೆ ಎಂದಿದ್ದಾನೆ. ಇತರ ಲಾಕ್ಷಣಿಕರೂ ಹಾಗೆಯೆ ಹೇಳುತ್ತಾರೆ.[1]

ಛಾಯಾಲಗವೆಂಬ ಹೆಸರು ದೇಶೀಯ ಪ್ರಬಂಧಗಳಿಗೆ ಯಾವುದರಿಂದ ಬಂತು, ಆ ಪದದ ವ್ಯುತ್ಪತ್ತಿ ಹೇಗೆ ಎಂಬ ವಿಚಾರ ಸಂಗೀತರತ್ನಾಕರಾದಿ ಗ್ರಂಥಗಳಲ್ಲಿ ಕಾಣುವುದಿಲ್ಲ. 'ಶುದ್ಧಪ್ರಬಂಧಗಳ ಸಾದೃಶ್ಯವನ್ನು ಪಡೆದಿರುವುದು' ಎಂಬ ಅರ್ಥದಲ್ಲಿ ಈ ಹೆಸರಾಗಿದೆ ಎಂಬ ಅಭಿಪ್ರಾಯವು ಕಲ್ಲಿನಾಥನ ವ್ಯಾಖ್ಯಾನದಲ್ಲಿ ಕಾಣುತ್ತದೆ:– ಶುದ್ಧಶ್ಛಾಯಾಲಗಶ್ಚೇತಿ ದ್ವಿವಿಧಃ ಸೂಡ ಉಚ್ಯತೇ। ಏಲಾದಿಃ ಶುದ್ಧ ಇತ್ಯುಕ್ತೋ ಧ್ರುವಾದಿಃ ಸಾಲಗೋ ಮತಃ ಎಂಬ ರತ್ನಾಕರದ ಶ್ಲೋಕಕ್ಕೆ 'ಶುದ್ಧಃ ಶಾಸ್ತ್ರೋಕ್ತ ನಿಯಮೇನ ಪ್ರಕೀರ್ತಿತಃ ಛಾಯಾಲಗಃ ಛಾಯಾಂ ಶುದ್ಧಸಾದೃಶ್ಯಂ ಲಗತಿ ಗಚ್ಛತಿ ಸಃ' ಎಂಬ ವ್ಯಾಖ್ಯಾನವಿದೆ. ಆದರೆ ಕಲ್ಲಿನಾಥನು ಕೊಟ್ಟಿರುವ ಈ ಅರ್ಥವು ಸಂಗೀತ ರತ್ನಾಕರದಲ್ಲಿರುವ ಇದರ ಮುಂದಿನ ಶ್ಲೋಕದ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಆ ಶ್ಲೋಕವು ಇದು–

ಛಾಯಾಲಗತ್ವ ಮೇಲಾದೇರ್ಯದ್ಯಥಾಽಚಾರ್ಯಸಮ್ಮತಂ
ತಥಾಪಿ ಲೋಕೇ ಶುದ್ಧೋಽಸೌ ಶುದ್ಧಸಾದೃಶ್ಯತೋ ಮತಃ

---

1 ಸಂ. ಸಾರಾಮೃತ ಪುಟ ೧೪೩; ಚತುರ್ದಂಡೀ ಪ್ರಕಾಶಿಕಾ. ಗೀತ. ಪ್ರ. ಶ್ಲೋ ೭೮ 'ಅಥ ಛಾಯಾಲಗೋ ಯಸ್ತು ಸೂಡಃ ಸಏವ ಸಾಲಗಃ'. ಸಂ. ಸಾರ. ಸಂ ಪುಟ. ೨೭

ಧ್ರುವಾದಿ ಸಪ್ತ ತಾಳಾ (ಶ್ಚ) ಸ್ವರಭಾಷಾಪದಾನ್ಯಪಿ
(ಸರ್ವ) ಸ್ವರಾಂಗೈಃ ಪ್ರಗಾಯಂತೇ ಸೂಳಾದ್ಯಾನೀತಿ ಕಥ್ಯತೇ

ಹಳೆಗನ್ನಡದಲ್ಲಿ 'ಸೂಳ್' ಎಂಬ ಪದಕ್ಕೆ ಶಬ್ದ ಮತ್ತು ಸರ್ತಿ ಎಂಬ ಅರ್ಥವಿರುವುದರಿಂದ ಸೂಳ ಪದವು ಅದರಿಂದ ಹುಟ್ಟಿರಬಹುದೆಂದು ಕೆಲವರು ತರ್ಕಿಸುತ್ತಾರೆ. ಹಾಗೂ ಪುರಂದರದಾಸಾದಿ ಹರಿದಾಸರು ಸೂಳಾದಿಗಾನದಲ್ಲಿ ಸಶಬ್ದ ಘಾತಗಳಿಂದಲೇ ತಾಳ ಹಾಕುವ ಸಂಕ್ಷಿಪ್ತತಾಳ ಛಾಪು) ಪದ್ಧತಿಯನ್ನು ಹೊಸತಾಗಿ ರೂಢಿಗೆ ತಂದರೆಂದು ಕಲ್ಪಿಸಿ ಸೂಳ ಎಂಬ ಹೆಸರು ಮೂಲತಃ ತಾಳಗಳಿಗೆ ಅನ್ವರ್ಥವಾಗಿ ಬಂದುದೆಂದು ಸಮರ್ಥಿಸುವಂತೆಯೂ ಕಾಣುತ್ತದೆ. ಆದರೆ ಪುರಂದರಾದಿ ಹರಿದಾಸರ ಕಾಲಕ್ಕಿಂತ ಪೂರ್ವದಲ್ಲಿದ್ದ ಸಂಗೀತರತ್ನಾಕರಾದಿ ಪ್ರಾಚೀನಶಾಸ್ತ್ರಗ್ರಂಥಗಳಲ್ಲಿ 'ಸೂಡ' ಎಂಬ ಹೆಸರು ಪ್ರಬಂಧಗಳಿಗೇ ಇರುವುದು ಹೊರತು ತಾಳಗಳಿಗಲ್ಲ. ಮಾತ್ರವಲ್ಲ ಮಾರ್ಗಪದ್ಧತಿಯ ಪ್ರಬಂಧಗಳಿಗೂ ಸೂಡ ಎಂಬ ಹೆಸರಿದ್ದುದು ಆ ಛಾಪು ತಾಳವೆಂಬುದು ಸೂಳಾದಿ ತಾಳಗಳಲ್ಲಿ ಸೇರಿದುದಲ್ಲ. ಸೂಳಾದಿ ಎಂಬಪ್ರಬಂಧಕ್ಕೆ ಆ ತಾಳ ನಿರ್ದೇಶವಿರುವುದೂ ಇಲ್ಲ. ಆದುದರಿಂದ ಕೇವಲ ಕಾಲ್ಪನಿಕವಾದ ಈ ತರ್ಕಕ್ಕೆ ಅರ್ಥವಿಲ್ಲವೆಂಬುದು ಸ್ಪಷ್ಟ. ಹಳೆಗನ್ನಡ ಕಾವ್ಯಗಳಲ್ಲಿಯೆ 'ಸೂಳ್' ಎಂಬುದು ಸರ್ವತ್ರ ಱಟ ವಾಗಿರುವುದನ್ನು 'ಸೂಳವು' ಸರ್ವತ್ರ ಕುಳವಾಗಿರುವುದನ್ನು ಈ ಸಂದರ್ಭದಲ್ಲಿ ಲಕ್ಷಿಸಬಹುದು.

‘ಏಲಾದಿ ವರ್ಗದ ದೇಶೀಪ್ರಬಂಧಗಳಿಗೆ ಛಾಯಾಲಗತ್ವವಿರುವುದೆಂಬುದು ಹೇಗೆ ಆಚಾರ್ಯಸಮ್ಮತವೋ ಎಂದರೆ ಶಾಸ್ತ್ರಪ್ರಸಿದ್ಧವಾದ ವಿಷಯವೋ ಹಾಗೆಯೇ ಶುದ್ಧಪ್ರಬಂಧಗಳ ಸಾದೃಶ್ಯವಿರುವುದರಿಂದ ಲೋಕದಲ್ಲಿ ಇದಕ್ಕೆ ಶುದ್ಧ ಎಂಬ ವ್ಯವಹಾರವಿರುವುದೂ ಸಮ್ಮತವೇ ಆಗಿದೆ’ ಎಂಬ ಅಭಿಪ್ರಾಯವು ಈ ಶ್ಲೋಕದಿಂದ ಸ್ಪಷ್ಟವಾಗುವುದು. ಛಾಯಾಲಗತ್ವ ಮತ್ತು ಶುದ್ಧಸಾದೃಶ್ಯ ಎಂಬ ಎರಡೂ ಗುಣಗಳು ಈ ಪ್ರಬಂಧಗಳಲ್ಲಿವೆ, ಆದುದರಿಂದ ಶುದ್ಧ ಮತ್ತು ಸಾಲಗಗಳೆಂಬ ಎರಡು ಹೆಸರುಗಳಿಂದ ಇವನ್ನು ವ್ಯವಹರಿಸುವುದು ನ್ಯಾಯವೇ ಆಗಿದೆ ಎಂಬ ತಾತ್ಪರ್ಯ. ಹೀಗೆ ಛಾಯಾಲಗತ್ವವೆಂದರೆ ಶುದ್ಧಸಾದೃಶ್ಯವಲ್ಲ ಎಂಬುದು ಶಾರ್ಙ್ಗದೇವನ ಮಾತಿನಿಂದಲೇ ಸ್ಪಷ್ಟವಾಗುವುದರಿಂದ ಹಿಂದಿನ ಶ್ಲೋಕದ ವ್ಯಾಖ್ಯಾನದಲ್ಲಿ ಛಾಯೆ ಎಂದರೆ ಶುದ್ಧಸಾದೃಶ್ಯ ಎಂಬ ಅರ್ಥ ಕೊಟ್ಟಿರುವುದು ಸರಿಯೇ? ಅದೂ ಅಲ್ಲದೆ ಈ ಶ್ಲೋಕದ ವ್ಯಾಖ್ಯಾನದಲ್ಲಿ ಕಲ್ಲಿನಾಥನು ಶುದ್ಧಸಾದೃಶ್ಯ ಎಂಬುದಕ್ಕೆ ‘ಶುದ್ಧಸ್ಯ ಜಾತ್ಯಾದೇಃ ಸಾದೃಶ್ಯತೋ ನಿಯಮಾನತಿಲಂಘನಾದಿತ್ಯರ್ಥಃ ಎನ್ನುತ್ತಾನೆ. ಇದರಿಂದ, ಜಾತ್ಯಾದಿ ಶುದ್ಧಪ್ರಬಂಧಗಳಿಗೆ ಯಾವ ಶಾಸ್ತ್ರೋಕ್ತನಿಯಮಗಳಿವೆಯೋ ಆ ನಿಯಮಗಳನ್ನು ಮೀರದಿರುವುದೇ ಶುದ್ಧಸಾದೃಶ್ಯ ಎಂದೂ’ ಏಲಾದಿಗಳು ಅದೇ ನಿಯಮದಲ್ಲಿರುವುದರಿಂದ ಅವು ಶುದ್ಧ ಪ್ರಬಂಧಗಳೆಂಬುದೇ ಸರಿಯೆಂದೂ ಅವನೇ ಹೇಳಿದಂತಾಯಿತಷ್ಟೆ? ಇನ್ನೂ ಮುಂದುವರಿದು ‘ಧ್ರುವಾದೇಸ್ತು ನಿಯಮಾತಿಲಂಘನಾತ್ ಸರ್ವಥಾ ಸಾಲಗತ್ವಮೇವ’ ಎಂದೂ ಹೇಳುತ್ತಾನೆ. ಶಾಸ್ತ್ರೋಕ್ತನಿಮಯಮಗಳನ್ನು ಮೀರಿರುವುದರಿಂದ ಧ್ರುವಾದಿಪ್ರಬಂಧಗಳು ಸರ್ವಥಾ ಸಾಲಗಗಳೇ ಎನ್ನುವ ಈ ಮಾತು ಮೊದಲು ಅವನೇ ಹೇಳಿರುವುದಕ್ಕೆ ವಿರುದ್ಧವಾಗಿದೆಯಲ್ಲ! ಪೂರ್ವಾಪರ ವಿರುದ್ಧವಾದ ಇವೆರಡು ಅರ್ಥಗಳಲ್ಲಿ ಯಾವುದು ಸರಿ, ಯಾವುದು ತಪ್ಪು? ಶಾರ್ಙ್ಗದೇವನು ಹೇಳಿರುವುದಕ್ಕಂತೂ ಈ ಎರಡು ಅರ್ಥಗಳೂ ಹೊಂದುವುದಿಲ್ಲ. ಏಕೆಂದರೆ ಆ ಲಕ್ಷಣಶ್ಲೋಕಗಳಲ್ಲಿ ಛಾಯೆ ಎಂಬುದಕ್ಕೆ ಶುದ್ಧದ ಛಾಯೆ ಎಂದೇ ಗೃಹೀತಾರ್ಥ ಎನ್ನುವ ಯಾವ ಸೂಚನೆಯೂ ಕಾಣುವುದಿಲ್ಲ. ಶುದ್ಧದ ನಿಯಮಗಳನ್ನು ಮೀರಿರುವ, ಅಥವಾ ಶುದ್ಧದ ಲಕ್ಷಣಗಳಿಂದ ಸ್ಖಲಿತವಾಗಿರುವ, ಎಂಬ ಅರ್ಥವಿರುವಲ್ಲಿ ಶಾರ್ಙ್ಗದೇವನು ಸರ್ವತ್ರ ವಿಕೃತ ಎಂಬ ಪದವನ್ನು ಪಾರಿಭಾಷಿಕವಾಗಿ ಪ್ರಯೋಗಿಸಿರುವುದೂ ಕಾಣುತ್ತದೆ. ಶುದ್ಧಸ್ವರ × ವಿಕೃತಸ್ವರ ಶುದ್ಧಜಾತಿ × ವಿಕೃತಜಾತಿ, ಶುದ್ಧಾವಸ್ಥೆ × ವಿಕೃತಾವಸ್ಥೆ ಇತ್ಯಾದಿ. ಶುದ್ಧದ ಛಾಯೆ ಎಂಬುದು ಗೃಹೀತಾರ್ಥವಾಗಿದ್ದರೆ ಛಾಯಾಪ್ರಬಂಧಗಳು ಎಂದಷ್ಟೆ ಹೇಳಿದರೆ ಸಾಕಾಗುತ್ತಿದ್ದಿಲ್ಲವೆ? ಛಾಯೆಗೆ ‘ಲಗ’ ವನ್ನು ಸೇರಿಸುವ ಆವಶ್ಯಕತೆ ಇತ್ತೆ? ಎರಡನೆ ಶ್ಲೋಕವಲ್ಲಿಯೂ ಛಾಯಾತ್ವಂ ಎಂಬ ಸರಳವಾದ ಭಾವರೂಪಕ್ಕೆ ಬದಲು ‘ಛಾಯಾಲಗತ್ವಂ’ ಎನ್ನಬೇಕಾಗಿರಲಿಲ್ಲ. ಸಂಗೀತರತ್ನಾಕರದಲ್ಲಿಯೇ ಸಪ್ರಪಂಚವಾಗಿ ನಿರೂಪಿಸಿರುವ ಏಲಾದಿ ಪ್ರಬಂಧಲಕ್ಷಣಗಳನ್ನು ಪರಿಶೀಲಿಸಿದರೆ ಜಾತ್ಯಾದಿ ಶುದ್ಧಪ್ರಬಂಧಗಳ ಲಕ್ಷಣಗಳೆಲ್ಲ ಅವುಗಳಲ್ಲಿ ಯಥಾವತ್ತಾಗಿರುವುದಿಲ್ಲ ಎಂಬುದೂ ಸ್ಪಷ್ಟವಾಗುವುದು. ಮಾತ್ರವಲ್ಲ ಶುದ್ಧದ ಲಕ್ಷಣಗಳಿಗೆ ಅವು ಸರ್ವಾತ್ಮನಾ ಸಮವಾಗಿವೆ ಎಂದರೆ, ಆಚಾರ್ಯಸಮ್ಮತವಾಗಿ ಛಾಯಾಲಗತ್ವವಿದೆ ಎಂದು ಆ ಶ್ಲೋಕದ ಪೂರ್ವಾರ್ಧದಲ್ಲಿ ಹೇಳಿರುವುದಕ್ಕೆ ಅರ್ಥವೇನು? ಆದುದರಿಂದ ಛಾಯಲಗತ್ವ ಮತ್ತು ಶುದ್ಧಸಾದೃಶ್ಯ ಎಂಬೆರಡು ಪದಗಳಿಗೂ ಕಲ್ಲಿನಾಥನು ಕೊಟ್ಟಿರುವ ವಿವರಣೆಯು ಏನೇನೂ ಸಮರ್ಪಕವಲ್ಲ ಎಂಬುದು ಸ್ಪಷ್ಟ. ಆದರೂ ಅರ್ವಾಚೀನಲಾಕ್ಷಣಿಕರು ಅದೇನೋ ಒಂದು ಗೌರವಬುದ್ಧಿಯಿಂದ ಅವನು ಕೊಟ್ಟಿರುವ ‘ಶುದ್ಧಛಾಯಾಂ ಲಗತಿ ಇತಿ’ ಎನ್ನುವ ನಿರುಕ್ತಿಯನ್ನೇ ತಮ್ಮ ತಮ್ಮ ಗ್ರಂಥಗಳಲ್ಲಿ ಉದ್ಧರಿಸಿ ಕೊಡುತ್ತಾ ಬಂದಿರುತ್ತಾರೆ. ! ಯಥಾಗತವಾದ ಈ ನಿರುಕ್ತಿಯನ್ನು ಬಿಟ್ಟರೆ ಛಾಯಾಲಗ ಎಂಬುದಕ್ಕೆ ಯುಕ್ತವಾದ ಅರ್ಥ ಇನ್ನೇನಾದರೂ ಇದೆಯೇ ಎಂದು ಸ್ವತಂತ್ರವಾಗಿ ವಿಚಾರಿಸೋಣ:–

ಛಂದಃಶಾಸ್ತ್ರದಲ್ಲಿ ಲಘು, ಗುರು ಎಂಬ ಅಕ್ಷರ ಸಂಜ್ಞೆಗಳನ್ನು 'ಲಗ' ಎಂಬ ಸಂಕೇತಾಕ್ಷರಗಳಿಂದ ವ್ಯವಹರಿಸುವ ಕ್ರಮವು ಪರಂಪರೆಯಿಂದ ರೂಢಿಯಲ್ಲಿರುವುದಷ್ಟೆ? ಸಂಗೀತ ಶಾಸ್ತ್ರಗ್ರಂಥಗಳಲ್ಲಿ ತಾಳದ ಪಾರಿಭಾಷಿಕ ಲಘು ಗುರುಗಳನ್ನೂ 'ಲಗ'ಗಳೆಂದೇ ಕರೆಯುವುದು ಚಿರಪ್ರಸಿದ್ಧವಾಗಿರುವುದರಿಂದ ಗೇಯ ಪ್ರಬಂಧಗಳಿಗೆ ವಿಶೇಷಣವಾದ ಈ 'ಛಾಯಾಲಗ' ಪದದಲ್ಲಿರುವ 'ಲಗ' ಎಂಬುದು ಲಘುಗುರುಗಳ ಸಂಕೇತವಾಗಿದ್ದರೂ ಇರಬಹುದಲ್ಲವೆ? ಇದ್ದರೆ ಇದು ತಾಳದ ಲಘುಗುರುಗಳ ಸಂಕೇತವಾಗಿರಬೇಕು ಹೊರತು ಛಂದಸ್ಸಿನದಾಗಿರಲು ಕಾರಣವಿಲ್ಲ. ಏಕೆಂದರೆ ಸಾಲಗ ವರ್ಗದ ಪ್ರಬಂಧಗಳು ಗುರು ಲಘು (ಅಕ್ಷರ) ಗಣನೆಯ ಛಂದೋಬಂಧಗಳಲ್ಲವೆಂಬುದು ಲಕ್ಷಣ ಗ್ರಂಥಗಳಲ್ಲಿ ಸ್ಪಷ್ಟವಾಗಿದೆ. ಪಾದಖಂಡಗಳಲ್ಲಿ ಇಂತಿಷ್ಟು ಅಕ್ಷರಗಳಿರಬೇಕೆಂಬುದಷ್ಟೆ ಆ ಬಂಧಗಳಿಗಿರುವ ನಿಯಮ.[1] ಶುದ್ಧ ಸೂಡದ ಏಲಾದಿಗಳಲ್ಲಿಯೂ ಕೇವಲ ಅಕ್ಷರ ಸಂಖ್ಯಾನಿಯಮವಿರುವ ಬಂಧಗಳಿವೆ. ತಾಳವಾದರೆ ಇವೆರಡು ವರ್ಗದ ಪ್ರಬಂಧಗಳಿಗೂ ನಿಯತವಾಗಿರುವುದಷ್ಟೇ ಅಲ್ಲ ತಾಳವೇ ಅವುಗಳಲ್ಲಿ ಪ್ರಧಾನವಾದ ಅಂಗವೆಂಬುದು ಲಕ್ಷಣಗ್ರಂಥಗಳಿಂದ ಸ್ಪಷ್ಟವಾಗುವುದು. ಹಾಗಾಗಿ, ಇದ್ದರೆ ಅವು ತಾಳದ ಲಘು ಗುರುಗಳ ಸಂಕೇತವಾಗಿರಬೇಕು. ಆಗ 'ಛಾಯಾಲಗಃ' ಎಂಬುದಕ್ಕೆ ಛಾಯಾಮಾತ್ರವಾದ ಲಘು ಗುರುಗಳುಳ್ಳ ಪ್ರಬಂಧ ಎಂಬ ಅರ್ಥವಾಗುವುದು ಎಂದರೆ ದೇಶೀಯ ಪ್ರಬಂಧಗಳ ತಾಳಗಳು 'ಛಾಯಾಲಗ' ಅಥವಾ ಸಾಲಗ ಎಂದ ಹಾಗಾಯಿತು. ಹಾಗಾದರೆ, ದೇಶೀತಾಳಗಳ ಲಘುಗುರುಗಳ ಛಾಯಾಮಾತ್ರ ಎಂದಾಗುವುದು ಹೇಗೆ? ಆ ಹೆಸರಿನ ಔಚಿತ್ಯವೇನು? ಎಂಬುದಕ್ಕೆ ನ್ಯಾಯವಾದ ಸಮರ್ಥನವಿದೆಯೇ ಎಂದು ಪರೀಕ್ಷಿಸಬೇಕು.

'ಸಾಲಗ' ಎಂಬ ಹೆಸರು ದೇಶೀತಾಳಗಳಿಗೆ ಪ್ರಸಿದ್ಧವಾಗಿತ್ತು ಎಂಬ ವಿಚಾರ ಸಂಗೀತರತ್ನಾಕರದಲ್ಲಿಯೇ ಹೇಳಿರುವುದೆಂಬುದು ತಾಳಾಧ್ಯಾಯದ ಆರಂಭದಲ್ಲಿರುವ ಈ ಶ್ಲೋಕದಿಂದ ಸ್ಪಷ್ಟವಾಗುವುದು.

ಚಚ್ಚತ್ಪುಟಾದಿಭೇದಾಸ್ತು ಸಂತಿ ಖಂಡಾಭಿಧಾಃ ಪರೇ ॥ ೪೫ ॥
* ತಏವ ಸಾಲಗಾ ಜ್ಞೇಯಾಃ ಪ್ರಸಿದ್ಧಾ ಲಕ್ಷ್ಯವರ್ತ್ಮನಿ
ದೇಶೀತಾಳ ಪ್ರಪಂಚೇನ ತಾನಪಿ ವ್ಯಾಹರಾಮಹೇ ॥ ೪೬ ॥

ಸಂಗೀತರತ್ನಾಕರದ ಮುದ್ರಿತ ಪ್ರತಿಗಳಲ್ಲಿ ೪೬ನೇ ಶ್ಲೋಕದ ಪೂರ್ವಾರ್ಧ ಕಾಣುವುದಿಲ್ಲ, ಆದರೂ ಉತ್ತರಾರ್ಧ ಒಂದಕ್ಕೆ ಶ್ಲೋಕದ ಕ್ರಮ ಸಂಖ್ಯೆಯನ್ನು ಕೊಡಲಾಗಿದೆ. ಆದುದರಿಂದ ಪೂರ್ವಾರ್ಧವು ಅಲ್ಲಿ ಇದ್ದಿರಬೇಕೆಂಬುದರಲ್ಲಿ ಸಂದೇವಿಲ್ಲ. ಚತುರ ದಾಮೋದರನು ಸಂಗೀತದರ್ಪಣದಲ್ಲಿ ಉದ್ಧರಿಸಿ ಕೊಟ್ಟಿರುವ ರತ್ನಾಕರದ ಈ ಭಾಗದಲ್ಲಿ ಆ ಪೂರ್ವಾರ್ಧವಿದೆ.[2] "ಚಚ್ಚತ್ಪುಟಾದಿ ಮಾರ್ಗತಾಳಗಳಿಂದ ಹುಟ್ಟುವ ಬೇರೆ ಹಲವು ಭೇದಳಿಗೆ ಖಂಡತಾಳಗಳೆಂದು ಹೆಸರು; ಲಕ್ಷ್ಯಮಾರ್ಗದಲ್ಲಿ ಸಾಳಗ ಎಂಬ ಹೆಸರಿನಿಂದ ಅವು ಪ್ರಸಿದ್ಧವಾಗಿವೆ; ಮುಂದಿನ ಪ್ರಕರಣದಲ್ಲಿ ಅವುಗಳನ್ನೇ ದೇಶೀಯ ತಾಳಗಳೆಂದು ವಿಸ್ತರಿಸುತ್ತೇವೆ" ಎಂದು ಈ ಶ್ಲೋಕದ ಅರ್ಥ. ದೇಶೀತಾಳಗಳಿಗೆ ಖಂಡ ತಾಳಗಳೆಂಬ ಹೆಸರು ಬಗಲು ಕಾರಣವೇನೆಂಬುದನ್ನೂ ದೇಶೀತಾಳ ಪ್ರಕರಣದ ಆರಂಭದಲ್ಲಿ ಶಾರ್ಙ್ಗದೇವನು ಹೀಗೆ ವಿವರಿಸುತ್ತಾನೆ—

ಗುರ್ವಾದ್ಯಾಶ್ಚತುರಸ್ರಾದೇಃ ಖಂಡಯಿತ್ವಾನಿವೇಶಿತಾಃ
ಯದ್ವಾಲಘ್ವಾದಿ ಖಂಡಾನಾಮಾಧಿಕ್ಯ ಮಿಹ ದೃಶ್ಯತೇ
ತೇನೈಷಾಂ ಖಂಡತಾಲತ್ವಮಾಭಾಷಂತ ಪುರಾತನಾಃ

1 ಸಂ. ರ. ಪ್ರಬಂಧಾಧ್ಯಾಯ ಶ್ಲೋಕ ೩೧೯
2 ಸಂಗೀತ ದರ್ಪಣ ಪುಟ ೧೨೬ ಶ್ಲೋಕ ೬೪೬

(ಈ ಶ್ಲೋಕಕ್ಕೆ ಕಲ್ಲಿನಾಥನು ವ್ಯಾಖ್ಯಾನ ಕೊಡಲಿಲ್ಲ. 'ದೇಶೀತಾಳಾನಾಂ ಖಂಡತಾಲತ್ವಂ ಸೋಪಪತ್ತಿಕಂ ದರ್ಶಯತಿ' ಎಂದಿಷ್ಟೆ ಹೇಳಿ ಮುಗಿಸಿ ಬಿಟ್ಟಿದ್ದಾನೆ ! !) 'ಚತುರಸ್ರಾದೇಃ' ಎಂದರೆ ಚಚ್ಚತ್ಪುಟಾದಿ ತಾಳಗಳ ಎಂದರ್ಥ, 'ಗುರ್ವಾದ್ಯಾ'; ಎಂದರೆ ಅನುಕ್ರಮವಾಗಿ ಗುರು ಲಘು ಪ್ಲುತಗಳು ಎಂದರ್ಥ. ಆ ತಾಳಗಳು ಗುರುವಿನಿಂದ ಆರಂಭವಾಗುವುದರಿಂದ 'ಗುರ್ವಾದ್ಯಾ' ಎಂದು ಹೇಳಿರುವುದಾಗಿದೆ. ಆ ಶುದ್ಧತಾಳಗಳ ಗುರು ಲಘು ಪ್ಲುತಗಳನ್ನು ತುಂಡು ತುಂಡು ಮಾಡಿ ದೇಶೀತಾಳಗಳಲ್ಲಿಟ್ಟಿರುವುದರಿಂದ ಅಥವಾ ಆ ಲಘು ಗುರು ಪ್ಲುತಗಳ ಖಂಡರೂಪಗಳೆ ಈ ತಾಳಗಳಲ್ಲಿ ಹೆಚ್ಚಿರುವುದರಿಂದ ಪುರಾತನರು ಇವಕ್ಕೆ ಖಂಡತಾಲಗಳೆಂಬ ಹೆಸರು ಕೊಟ್ಟರು ಎಂದು ಇದರ ತಾತ್ಪರ್ಯ.[1] ಲಘು ಗುರುಗಳು ತುಂಡಾಗುವುದು ಎಂದರೆ ಹೇಗೆ ಎಂಬ ವಿಚಾರವು ಲಕ್ಷಣಗ್ರಂಥಗಳಲ್ಲಿ ಕೊಟ್ಟಿರುವ ಮಾರ್ಗ ದೇಶೀ ತಾಳಗಳ ಲಘ್ವಾದಿ ಲಕ್ಷಣಗಳ ಪರಿಶೀಲನದಿಂದ ತಿಳಿಯುವುದು. ಸಂಕ್ಷೇಪವಾಗಿ ಆ ತಾಳಲಕ್ಷಣಗಳು ಹೀಗಿವೆ—

ಗೀತಕ್ಕೆ ಒಂದು ವ್ಯವಸ್ಥಿತವಾದ ಕಾಲನಿಯಮವನ್ನು ವಿಧಿಸುವುದು ತಾಳ. ಲಘು ಗುರುಗಳೇ ತಾಳದ ಪ್ರಧಾನ ಘಟಕಗಳು. ಗಣನೆಯಲ್ಲಿ ಪ್ಲುತ ಎಂಬುದಿದ್ದರೂ ತಾಳದ ಕ್ರಿಯಾನಿರೂಪಣದಲ್ಲಿ ಪ್ಲುತವನ್ನು ಗುರು ಲಘುವಾಗಿ ವಿಂಗಡಿಸುವುದು ಕ್ರಮ.[2] ತಾಳದಲ್ಲಿ ಕಾಲಗಣನೆಗೆ ಮೂಲಾಧಾರವಾಗಿ ಕಲ್ಪಿಸಿಕೊಂಡ ಪ್ರಮಾಣಕಾಲವು ಯಾವುದೋ ಅದಕ್ಕೆ ಲಘು ಎಂಬ ಸಂಜ್ಞೆ. ಮಾತ್ರೆ, ಕಲೆ ಎಂದೂ ಲಘುವನ್ನು ಕರೆಯುವ ರೂಢಿಯಿದೆ. ಈ ಲಘುವಿನ ಇಮ್ಮಡಿಯಷ್ಟು ಕಾಲಪ್ರಮಾಣವು ಗುರು. ಲಘುವೇ ಮಾರ್ಗತಾಳದಲ್ಲಿ ಕನಿಷ್ಠತಮವಾದ ಕಲಾಕಾಲ ಎಂಬ ಲೆಕ್ಕ. ಚಚ್ಚತ್ಪುಟಾದಿ ಶುದ್ಧ ತಾಳಗಳಲ್ಲಿ ಈ ಲಘುವಿನ ಪ್ರಮಾಣವು ಐದು ನಿಮಿಷಗಳಷ್ಟು ಅಥವಾ ಐದು ಹ್ರಸ್ವಾಕ್ಷರಗಳನ್ನು ಉಚ್ಚರಿಸಲಿಕ್ಕೆ ಎಷ್ಟು ಸಮಯವು ಬೇಕಾಗುವುದೋ ಅಷ್ಟು ಎಂಬ ನಿಯಮ.[3] (ಛಂದಸ್ಸಿನಲ್ಲಿಯಾದರೆ ಸ್ವಾಭಾವಿಕವಾದ ಒಂದು ಹ್ರಸ್ವಾಕ್ಷರೋಚ್ಚಾರಕಾಲವು ಲಘುವಿನ ನಿಯತಪ್ರಮಾಣ.) ಈ ಲಘು ಪ್ರಮಾಣದಿಂದಲೇ ಗುರು ಪ್ಲುತಗಳ ಕಲ್ಪನೆ. ಚಚ್ಚತ್ಪುಟಾದಿ ಶುದ್ಧತಾಳಗಳಲ್ಲಿ ಗುರುವಿಗೂ ಒಂದು ಕಲೆ ಎಂಬ ವಿಶೇಷ ಸಂಜ್ಞೆ ಇದೆ. ಈ ಲೆಕ್ಕದಲ್ಲಿ ಏಕಕಲ, ದ್ವಿಕಲ, ಚತುಷ್ಕಲ ಎಂದು ಈ ತಾಳವು ಮೂರು ವಿಧ. ಎರಡು ಗುರು ಒಂದು ಲಘು, ಒಂದು ಪ್ಲುತ, ಕ್ರಮವಾಗಿ ಇಷ್ಟು ಸೇರಿದರೆ ಅದು ಏಕಕಲ ಚಚ್ಚತ್ಪುಟ, (S S I S) ಇದರ ಎರಡರಷ್ಟು ಕಲಾ ಪ್ರಮಾಣವಿರುವುದು ದ್ವಿಕಲ; ನಾಲ್ಕರಷ್ಟಾದರೆ ಚತುಷ್ಕಲ. ಚಾಚಪುಟವೆಂಬ ತ್ರಿಶ್ರತಾಳವು ಒಂದು ಗುರು, ಎರಡು ಲಘು, ಆ ಮೇಲೊಂದು ಗುರು (S I I S) ಇವುಗಳಿಂದಾಗುತ್ತದೆ. ಇದರಲ್ಲಿ ಮೇಲೆ ಹೇಳಿದ ರೀತಿಯಲ್ಲಿ ಕಲಾಕಾಲವೃದ್ಧಿಯಿಂದ ಯಥೋತ್ತರವಾಗಿ ಆರು ಭೇದಗಳಿವೆ. ಈ ಚತುರಸ್ರ ಮತ್ತು ತ್ರಿಶ್ರತಾಳಗಳು ಒಂದಕ್ಕೊಂದು ಸೇರಿರುವ ಮಿಶ್ರತಾಳಭೇದಗಳು ಹಲವಿವೆ. ಈ ತಾಳಗಳನ್ನೆಲ್ಲಾ ಚಿತ್ರ, ವಾರ್ತಿಕ, ದಕ್ಷಿಣ ಎಂಬ ಮಾರ್ಗಭೇದಗಳಲ್ಲಿ ಕ್ರಮವಾಗಿ 2–4–8ರಷ್ಟು ಕಾಲವೃದ್ಧಿಯಿಂದ ಪ್ರಯೋಗಿಸಬೇಕೆಂಬ ವಿಧಿಯಿದೆ. ಹೀಗೆ ಒಂದೊಂದು ಆವರ್ತದಲ್ಲಿ ಅಕ್ಷರಕಾಲಗಳು ಶತಸಂಖ್ಯೆಯಲ್ಲಾಗುವುದರಿಂದ ಅವಧಾನಾರ್ಥವಾಗಿ ಆ ತಾಳಗಳನ್ನು ಪಾದಭಾಗಗಳಾಗಿ ಕಲ್ಪಿಸಿಕೊಂಡು ಒಂದೊಂದು ಪಾದಗಳಿಗೂ ಕೈಗಳನ್ನು,

---

1 ಆಧಿಕ್ಯಮಿಹ ದೃಶ್ಯತೇ ಎಂದಿರುವುದರಿಂದ ನಿಜಪ್ರಮಾಣದ ಲಘು ಗುರುಗಳ ಸಮ್ಮಿಶ್ರಣವೂ ಕೆಲವು ದೇಶೀತಾಳಗಳಲ್ಲಿ ಕ್ವಾಚಿತ್ಕವಾಗಿ ಪ್ರಯೋಗದಲ್ಲಿದೆ ಎಂಬ ಅಭಿಪ್ರಾಯವೂ ಇಲ್ಲಿ ಗಮ್ಯವಾಗಿದೆ.

2 ನಾಟ್ಯ ಶಾಸ್ತ್ರ ಅ. ೩೧ ಶ್ಲೋ ೩೯, ೪೦ ಅಭಿನವ ಗುಪ್ತ ವ್ಯಾಖ್ಯಾನ

3 ಯಾ ಲೌಕಿಕೀ ಕಲಾ ಕಾಷ್ಠಾ ನಿಮೇಷಶ್ಚಸ್ಮೃತಾಬುಧೈಃ ನ ಸಾ ತಾಲಕಲಾಜ್ಞೇಯಾ ಹ್ಯನ್ಯೈ ಷಾ ತಾಲಗಾ ಕಲಾ॥ ಭ ನಾ. ತಾಲಾಧ್ಯಾಯ ಶ್ಲೋ ೨

ಕೆಳಗೆ, ಮೇಲೆ, ಎಡಕ್ಕೆ, ಬಲಕ್ಕೆ, ಮುಚ್ಚಿ, ಬಿಚ್ಚಿ ಮಾಡುವ ಪ್ರವೇಶ ಆವಾಪ ವಿಕ್ಷೇಪಾದಿ ಹಸ್ತ ಕ್ರಿಯೆಗಳಿಂದಲೂ ಅಂಗುಲಿವಿಕಲ್ಪನ ಕ್ರಮದಿಂದಲೂ, ಶಂಪಾ, (ಶಮ್ಯಾ) ತಾಳ, ಸನ್ನಿಪಾತಾದಿ ಶಬ್ದಕ್ರಿಯೆಗಳಿಂದಲೂ ಎರಡೂ ಕೈಗಳಿಂದ ತಾಳನಿರೂಪಣವನ್ನು ಮಾಡಬೇಕಾಗಿತ್ತು. ಮಾರ್ಗಪದ್ಧತಿಯ ಜಾತ್ಯಾದಿ ಶುದ್ಧಸೂಡಗಳನ್ನು ಇಷ್ಟೊಂದು ದೀರ್ಘಕಾಲದ ತಾಳಗಳಲ್ಲಿ ಈ ಶಾಸ್ತ್ರೋಕ್ತ ನಿಯಮಕ್ಕೆ ಒಂದಿಷ್ಟೂ ಹೆಚ್ಚು ಕಡಮೆಯಿಲ್ಲದೆ ವೇದಮಂತ್ರಗಳಂತೆ ಸಾವಧಾನವಾಗಿ ಹಾಡುವುದು ಕ್ರಮ. ಶುದ್ಧ, ಮಾರ್ಗ, ಗಾಂಧರ್ವ ಎಂಬ ಹೆಸರಿರುವುದು ಇದಕ್ಕೇ ಆಗಿದೆ.[1]

ದೇಶೀಯ ಸಂಪ್ರದಾಯದಲ್ಲಿ ತಾಳಗಳು ಇಷ್ಟೊಂದು ದೀರ್ಘವೂ ಜಟಿಲವೂ ಆಗಿರಲಿಲ್ಲ.[2] ಅಂತೆಯೇ ತಾಳನಿರೂಪಣೆಗೆ ಮಾರ್ಗತಾಳಗಳಲ್ಲಿ ವಿಧ್ಯುಕ್ತವಾಗಿರುವಂತಹ ಹಸ್ತಾಂಗುಲಿವ್ಯಾಪಾರಗಳೂ ಬೇಕಾಗಿರಲಿಲ್ಲ. ದೇಶೀಯ ಪ್ರಬಂಧಗಳನ್ನು ಹಾಡುವಾಗ ಕಂಚಿನ ತಾಳದ ಪೆಟ್ಟುಗಳಿಂದ ತಾಳ ನಿರೂಪಣೆ ಮಾಡುತ್ತಿದ್ದುದು ಕ್ರಮ. ಲಘು ಗುರು ದ್ರುತಗಳ ಸ್ಥಾನಗಳಲ್ಲೇ ಬೀಳುವ ಆ ಘಾತಗಳ ನಾದದಿಂದ ರಂಜನೆಯಾಗಲು ಕಾಲಾಂತರಗಳು ಎಷ್ಟು ಪ್ರಮಾಣಗಳಲ್ಲಿರುವುದು ಉಚಿತವೋ ಅಷ್ಟಕ್ಕೇ ಮಿತವಾದ ಲಘ್ವಾದಿ ಖಂಡಗಳಿಂದ ದೇಶೀತಾಳಗಳ ರಚನೆಯಾಗಿದೆ. ಶಾರ್ಙ್ಗದೇವನು ಕೊಟ್ಟಿರುವ ಲಕ್ಷಣವೇ ಇದನ್ನು ಹೇಳುತ್ತದೆ.

ದೇಶೀತಾಲಸ್ತು ಲಘ್ವಾದಿ ಮಿತಯಾ ಕ್ರಿಯಯಾ ಮತಃ
ಯಥಾಶೋಭಂ ಕಾಂಸ್ಯತಾಲ ಧ್ವನನಾದಿಕಯಾ ಮತಃ (ಯುತಃ) ॥ ೨೩೬ ॥

ಮಾರ್ಗ ತಾಳಗಳಲ್ಲಿರುವುದಕ್ಕಿಂತ ಭಿನ್ನವಾದ ಕ್ರಮವಿದು ಎಂಬ ವಿಶೇಷ ಸೂಚನೆಗಾಗಿ ಈ ಶ್ಲೋಕದಲ್ಲಿ 'ದೇಶೀ ತಾಲಸ್ತು' ಎಂಬ 'ತು'ಕಾರವನ್ನು ಪ್ರಯೋಗಿಸಿದ್ದಾಗಿದೆ. ಮಾರ್ಗತಾಲಲಕ್ಷಣದಲ್ಲಿ ಲಘ್ವಾದಿಗಳ ಕಾಲಪ್ರಮಾಣದ ಕುರಿತು ಹೇಳಿರುವ ಇದೊಂದು ಶ್ಲೋಕವೂ ಅದನ್ನು ಸಮರ್ಥಿಸುತ್ತದೆ—

ಪಂಚಲಘ್ವಕ್ಷರೋಚ್ಚಾರಮಿತಾ ಮಾತ್ರೇಹ ಕಥ್ಯತೇ
ಅನಯಾ ಮಾತ್ರಯಾತ್ರಸ್ಯಾಲ್ಲಘುಗುರ್ವಾದಿ ಕಲ್ಪನಾ

ಐದು ಲಘ್ವಕ್ಷರಗಳನ್ನು (ಇದು ಛಂದಸ್ಸಿನ ಲಘು. ಒಂದು ಹ್ರಸ್ವಾಕ್ಷರ ಎಂದರ್ಥ) ಉಚ್ಚರಿಸುವಷ್ಟು ಕಾಲಕ್ಕೆ ಒಂದು ಮಾತ್ರೆ ಎಂಬ ನಿಯಮವಿರುವುದು ಮಾರ್ಗತಾಲಗಳಲ್ಲಿ ಮಾತ್ರ, ಈ ಲಘು ಪ್ರಮಾಣದಿಂದ ಗುರು ಪ್ಲುತಗಳ ಕಾಲವನ್ನು ನಿರ್ಣಯಿಸುವುದೆಂಬ ವಿಧಿಯೂ ಮಾರ್ಗತಾಳಕ್ಕೆ ಮಾತ್ರ ಅನ್ವಯಿಸುವುದು ಎಂಬುದನ್ನು ಸ್ಪಷ್ಟಪಡಿಸಲಿಕ್ಕಾಗಿಯೆ ಈ ಶ್ಲೋಕದಲ್ಲಿ ಇಹ, ಅತ್ರ ಎಂಬ ಪದಗಳನ್ನು ಕುರಿತಾಗಿ ಪ್ರಯೋಗಿಸಿರುವುದೆಂಬುದರಲ್ಲಿ ಸಂದೇಹವಿಲ್ಲ.

ಹೀಗೆ ಮಾರ್ಗ ತಾಳದಲ್ಲಿರುವಂತೆ, ದೇಶೀತಾಳದಲ್ಲಿ ಲಘುವಿಗೆ ಇಂತಿಷ್ಟೇ ಎಂದು ನಿಯತವಾದ ಒಂದು ಕಾಲಪ್ರಮಾಣವಿಲ್ಲ. ಇಷ್ಟ ಬಂದಷ್ಟು ಅಕ್ಷರಕಾಲವನ್ನು ಲಘು ಎಂದೆನಿಸುವ ಕ್ರಮವು ಪರಂಪರೆಯಿಂದ ನಡೆದು ಬಂದಿದೆ. ಅದೂ ಎಲ್ಲ ತಾಳಗಳಲ್ಲಿ ಒಂದೇ ಪ್ರಮಾಣದಲ್ಲಿರಬೇಕೆಂಬ ನಿಯಮವೂ ಇಲ್ಲ. ಲಘುವಿನ ಒಂದೇ ಪ್ರಮಾಣವನ್ನು ಆಧರಿಸಿಯೇ ಗುರುವಿನ ಗಣನೆ ಮಾಡುವುದೆಂಬ ನಿಯಮವೂ ಇರುವುದಿಲ್ಲ. ದೇಶೀತಾಳದಲ್ಲಿ ದ್ರುತವೂ ಇದೆ. ಇದು ಹಾಗೆಯೆ; ಲಘುವಿನ ಅರ್ಧದಷ್ಟೆ

---

1 ನಾಟ್ಯಶಾಸ್ತ್ರ ಸವ್ಯಾಖ್ಯಾನ ತಾಳಾಧ್ಯಾಯ ಸಂ. ರ. ತಾಳಾಧ್ಯಾಯ-ಮಾರ್ಗತಾಳಪ್ರಕರಣ

2 'ದೌಲೌದ್ವಿತೀಯಕಃ; ಲೋದ್ರುತೋಪ್ರತಿತಾಲಃ; ಯತಿಲಗ್ನೋದ್ರುತೋಲಘುಃ; ವಿರಾಮಾಂತೌ ಲಘೂನಿಸ್ಸಾರುಕಃ; ಲೋದ್ರುತೋಪ್ರತಿತಾಲಃ; ಲಘ್ವಾದಿತಾಲಃ ಲೋಕೇ ಸೌರಾಸಇತ್ಯಭಿಧೀಯತೇ; (ಸಂ. ರ) ದ್ರುತೇನತ್ವೇಕತಾಲಿಕಾ; ಝಂಪಾತಾಲಃ ವಿರಾಮಾಂತದ್ರುತೌಲಶ್ಚ; ಇತ್ಯಾದಿ (ಸಂ. ರ.)

ಇರುವುದು ಎಂಬ ನಿಯಮವಿಲ್ಲ.[1] ಲಘುವಿನಿಂದ ಚಿಕ್ಕದು ದ್ರುತ, ದೊಡ್ಡದು ಗುರು ಎಂಬಷ್ಟೇ ಗಾತ್ರಪ್ರಮಾಣವಿರುವುದು.[2] ಹೀಗೆ ಗುರುಲಘ್ವಾದಿಗಳು ನಾನಾವಿಧವಾಗಿರುವುದರಿಂದ ದೇಶೀತಾಳಗಳಲ್ಲಿ ಅಗಣಿತವೆಂಬಷ್ಟು ಭೇದಗಳಾಗಿವೆ. ಇದನ್ನೇ ಶಾರ್ಙ್ಗದೇವನೂ ಹೇಳುತ್ತಾನೆ — 'ದ್ರುತಾದಿರಚನಾಭೇದಾತ್ತಾಲಭೇದೋಽಪ್ಯನೇಕಧಾ' ಎಂದು. ಇದರ ವ್ಯಾಖ್ಯಾನದಲ್ಲಿ ಕಲ್ಲಿನಾಥನು ದೇಶೀತಾಳಗಳ ಈ ಅವ್ಯವಸ್ಥೆಯನ್ನು ಹೀಗೆ ಸ್ಪಷ್ಟಪಡಿಸಿರುತ್ತಾನೆ —

'ದ್ರುತಾದೀನಾಂ ಲಘುಗುರುಪ್ಲುತಾನಾಂ ರಚನಾ, ಸನ್ನಿವೇಶವಿಶೇಷಃ, ಪ್ರಮಾಣವಿಶೇಷಶ್ಚ, ತಸ್ಯಾಭೇದೋ ವಿಶೇಷಾಂತರಂ ತಸ್ಮಾದ್ಧೇತೋಃ ತಾಲಭೇದೋಽಪ್ಯನೇಕಧಾ ಭವತಿ ವಿಚಿತ್ರೋ ಭವತಿ। ತಾಲವೈಚಿತ್ರ್ಯಮಪಿ ದ್ರುತಾದೀನಾಂ ಸನ್ನಿವೇಶಭೇದಾತ್ ಪ್ರಮಾಣಭೇದಾಚ್ಚೇತಿ ಮಂತವ್ಯಂ' ಇದರ ಹಿಂದಿನ ಶ್ಲೋಕದ ವ್ಯಾಖ್ಯಾನದಲ್ಲಿಯೂ ಲಘು ಗುರುಗಳ ಪ್ರಮಾಣಭೇದವನ್ನು ಸೋದಾಹರಣವಾಗಿ ನಿರೂಪಿಸಿರುತ್ತಾನೆ.

ಹೀಗೆ ಲಘು ಗುರುಗಳ ನಿಜಪ್ರಮಾಣವೂ ಸಾಪೇಕ್ಷ್ಯಸಂಬಂಧವೂ ಭಿನ್ನ ಭಿನ್ನವಾಗಿರುವುದರಿಂದಲೇ ದೇಶೀತಾಳಗಳಿಗೆ ಖಂಡತಾಳ ಅಥವಾ ಛಾಯಾಲಗಗಳೆಂಬ (ಸಾಲಗ) ಹೆಸರು ಸಾರ್ಥಕವಾಗಿ ಬಂದಿರುವುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಛಾಯೆ ಎಂದರೆ ನೆರಳು. ನೆರಳು ಹೇಗೆ ಚಿಕ್ಕದೂ ಆಗುವುದೋ ಹಾಗೆಯೇ ಸಾಲಗತಾಳದ ಲಘು ಗುರುಗಳೂ ಗಾತ್ರ ಪ್ರಮಾಣದಲ್ಲಿ ಹೆಚ್ಚು ಕಡಮೆಯಾಗುವಂಥವಾದುದರಿಂದ ಅವಕ್ಕೆ ಛಾಯೆಯ ಸಾದೃಶ್ಯ ಛಾಯಾ ಮಾತ್ರವಾದ ಲಘು ಗುರುಗಳಿರುವ ತಾಳ — ಛಾಯಾಲಗ (ಸಾಲಗ) ಇದು ಮೂಲತಃ ದೇಶೀತಾಳಗಳಿಗೆ ಬಂದ ಹೆಸರು.[3]

ಈಗ ಹಿಂದೆ ಹೇಳಿದ 'ಛಾಯಾಲಗತ್ವಮೇಲಾದೇಃ......' ಎಂಬ ಶ್ಲೋಕದ ಪೂರ್ವಾರ್ಧಕ್ಕೆ, ಏಲಾದಿ ದೇಶೀಯ ಪ್ರಬಂಧಗಳು ಸಾಲಗತಾಳ ನಿಬದ್ಧವಾಗಿರುವುದರಿಂದ ಶಾಸ್ತ್ರಜ್ಞರು ಅವನ್ನು ಸಾಲಗಪ್ರಬಂಧಗಳೆಂದು ವ್ಯವಹರಿಸುತ್ತಾರೆ ಎಂದು ನ್ಯಾಯವಾದ ಅರ್ಥವಾಗುವುದು.

ಆ ಶ್ಲೋಕದ ಉತ್ತರಾರ್ಧದಲ್ಲಿ, ಶುದ್ಧಸಾದೃಶ್ಯವಿರುವುದರಿಂದ ಅವನ್ನು ಶುದ್ಧ ಎಂದು ಕರೆಯುವುದೂ ಸಮ್ಮತವೇ ಆಗಿವೆ ಎಂದಿರುವುದರ ನಿಜಾಭಿಪ್ರಾಯವೇನು? ಎಂದರೆ ಇಲ್ಲಿ ಶುದ್ಧಸಾದೃಶ್ಯ ಎಂಬುದಕ್ಕೆ ಏಲಾದಿಗಳ ರಚನೆಯ ಸ್ವರೂಪ ಮತ್ತು ಸ್ವಭಾವದಲ್ಲಿ ಶುದ್ಧಪ್ರಬಂಧಗಳ ಹೋಲಿಕೆಯಿದೆ ಎಂಬ ಅರ್ಥವಿರಬೇಕು ಹೊರತು ಅದೇ ಶಾಸ್ತ್ರೋಕ್ತ ಲಕ್ಷಣಗಳು ಇವುಗಳಲ್ಲಿವೆ ಎಂದಾಗದು. ಇಲ್ಲಿ

---

1 ಈ ದ್ರುತಲಘುಗುರುಗಳಿಗೆ ಸ್ವಲ್ಪ ಕಾಲವನ್ನು 'ವಿರಾಮ' ಎಂದು ಸೇರಿಸಿ ಅವುಗಳ ಕಾಲಪ್ರಮಾಣದಲ್ಲಿ ಹೆಚ್ಚುಕಡಿಮೆ ಮಾಡುವುದೂ ಇದೆ:— (ಸಂ. ರ. ತಾಳಾಧ್ಯಾಯ ಶ್ಲೋ. ೨೬೧. ಕಲ್ಲಿನಾಥನ ವ್ಯಾಖ್ಯಾನ)

2 ನಾನ್ಯದೇವನು ಖಂಡತಾಳಗಳನ್ನು ಭಂಗತಾಲಗಳೆಂದು ಕರೆದಿದ್ದಾನೆ ಚಚ್ಚತ್ಪುಟಾದಿ ತಾಳಗಳ ಗುರುಲಘುಗಳು ಭಂಗವಾಗುವ ಕ್ರಮವನ್ನು ಹೀಗೆ ಹೇಳಿದ್ದಾನೆ:—

ಏತೇ ಯದಾ ವಿಭಜ್ಯಂತೇ ಗುರುದ್ರುತಲಘುಪ್ಲುತೈಃ
ತದಾ ಭಂಗೋ ಭವೇಜ್ಞಾತಿರುಪಭಂಗೋದ್ವಿಸಂಭವಃ
ನ್ಯೂನಾಧಿಕಾದ್ಭವೇದ್ಯತ್ರ ಭಂಗಸ್ತುವಿಗತಕ್ರಮಃ
ವಿಭಂಗಸ್ತು ಸಮಾಯೋಗಾ .....ವಿಲಯೋಮತಃ
ಏತೇಷಾಮಂಶಮಾತ್ರಾಪಿ ಅಜ್ಞಾನಾತ್ಪರಿಕಲ್ಪನಾ
ದ್ದೇಶ್ಯಾಂತಾಲತ್ವಮಾಯಾತಾಃ ಕಶ್ಚಪಾದೇಶ್ಚಸಮ್ಮತಃ

ಭರತಭಾಷ್ಯ-ದೇಶೀಗೀತತಾಳಾಧ್ಯಾಯದಲ್ಲಿ ದೇಶೀತಾಲ ಲಕ್ಷಣ(Folio No. 176-177)

3 ಶುದ್ಧಸಾಲಗಸಂಕೀರ್ಣಸ್ತಾಲಭೇದಾಃ ಕ್ರಮಾನ್ನತಾಃ; ಸಂ. ದರ್ಪಣ.

ಶುದ್ಧ ಎಂದಿರುವುದು ಯಾವುದನ್ನು ಎಂದು ಯೋಚಿಸಿದರೆ— ಮಾರ್ಗ ಸಂಗೀತಕ್ಕೆ ಸಾಮಗಾನವು ಮೂಲ ಎಂಬುದು ಸರ್ವಪ್ರಸಿದ್ಧ, ಸಾಮಸಂಪ್ರದಾಯದಲ್ಲಿರುವುದಕ್ಕೆ ಅಥವಾ ಅದರಿಂದ ವಿಕಾಸ ಗೊಂಡಿರುವುದಕ್ಕೆಲ್ಲ ಮಾರ್ಗ ಪದ್ಧತಿಯಲ್ಲಿ ಶುದ್ಧ ಎಂದು ಹೇಳಲಾಗಿದೆ. ಸಾಮಗಾನದ ಸಪ್ತಸ್ವರ ಗಳೇ ಶುದ್ಧಸ್ವರಗಳೆಂಬುದು ಪ್ರಸಿದ್ಧ. ಹಾಗೆಯೇ ವೈದಿಕ ಸಾಮಗೀತಗಳೂ ಶುದ್ಧಗೀತಗಳು. ಜಾತ್ಯಾದಿ ಗೀತಗಳು ಸಾಮಸಂಪ್ರದಾಯದಲ್ಲಿರುವುದರಿಂದ ಶುದ್ಧವರ್ಗದಲ್ಲಿ ಸೇರಿವೆ. ಏಲಾದಿ ಪ್ರಬಂಧಗಳ ರಚನೆಯಲ್ಲಿ ಆ ಸಾಮಗೀತಗಳ ಅನುಕರಣವಿದೆ ಎಂಬುದರಿಂದ ಅವುಗಳಲ್ಲಿ ಶುದ್ಧ ಸಾದೃಶ್ಯವಿದೆ ಎಂದು ಶಾರ್ಙ್ಗದೇವನು ಹೇಳಿದುದಿರಬೇಕು. ಒಂದರಲ್ಲಿ ಇನ್ನೊಂದರ ಸಾದೃಶ್ಯವಿದೆ ಎಂದರೆ ಅದರ ಗುಣ ಅಥವಾ ಲಕ್ಷಣವೇ ಯಥಾವತ್ತಾಗಿ ಇದರಲ್ಲಿದೆ ಎಂಬುದು ನ್ಯಾಯವಾದ ಅರ್ಥವಲ್ಲ. ಇದರ ಗುಣವು ಅದರ ಗುಣವನ್ನು ಹೋಲುತ್ತದೆ ಎಂಬುದೇ ಸರಿಯಾದ ಅರ್ಥ. ಗುಣಲಕ್ಷಣಗಳಲ್ಲಿ ಏನೂ ವ್ಯತ್ಯಾಸ ವಿಲ್ಲವೆಂದರೆ ಅವು ಅಭಿನ್ನವೆಂದೇ ಆಗುವುದಲ್ಲವೆ? ಸಾದೃಶ್ಯವೆಂದರೆ ಹೋಲಿಕೆಯೇ ಸರಿ.

ಹೀಗೆ ಏಲಾದಿ ದೇಶೀ ಪ್ರಬಂಧಗಳಲ್ಲಿರುವುದು ಶುದ್ಧಗೀತಗಳ ಶಾಸ್ತ್ರೋಕ್ತ ಲಕ್ಷಣವಲ್ಲ ವೆಂದೂ ಅವುಗಳ ರಚನೆಯಲ್ಲಿ ವೈದಿಕ ಸಾಮಗೀತಗಳ ಅವಯವ ಸಾದೃಶ್ಯವಿದೆ ಎಂದು ಪ್ರಾಚೀನ ಶಾಸ್ತ್ರಗ್ರಂಥಗಳಿಂದ ತಿಳಿಯಬಹುದಾಗಿದೆ. ಸಂಕ್ಷೇಪವಾಗಿ ಅದು ಹೀಗೆ ಎನ್ನಬಹುದು— ವೈದಿಕ ಸಾಮಗೀತದಲ್ಲಿ ಪ್ರಸ್ತಾವ, ಉದ್ಗೀಥ, ಪ್ರತೀಹಾರ, ಉಪದ್ರವ, ನಿಧನ ಎಂಬ ಐದು ಅವಯವಗಳಿರು ವುವು. ಇದಕ್ಕೆ ಹೋಲಿಕೆಯಾಗಿ ಏಲಾಪ್ರಬಂಧದಲ್ಲಿಯೂ ಐದು ಪಾದಗಳಿರುತ್ತಿದ್ದು ಆ ಪಾದಗಳಿಗೆ ಕ್ರಮವಾಗಿ ಉದ್ಗ್ರಾಹ. ಅನುದ್ಗ್ರಾಹ, ಸಂಬೋಧ ಧ್ರುವಕ. ಆಭೋಗ ಎಂಬ ಹೆಸರುಗಳಿದ್ದುವು. ನಾನ್ಯದೇವನ 'ಭರತ ಭಾಷ್ಯ'ದಲ್ಲಿ ಅದರ ವಿವರಣೆ ಹೀಗಿದೆ— (ಇದು ಸಂಗೀತ ರತ್ನಾಕರಕ್ಕಿಂತ ಪ್ರಾಚೀನ ಗ್ರಂಥ)—

ಉದ್ಗ್ರಾಹಶ್ಚಾಪ್ಯನುದ್ಗ್ರಾಹಃ ಸಂಬೋಧೋ ಧ್ರುವಕಂತಥಾ
ಆಭೋಗಃ ಪಂಚಪಾದಾಸ್ಸ್ಯುರೇಲಾಯಾಃ ಕಶ್ಯಪೋದಿತಾಃ
ಪ್ರಸ್ತಾವಶ್ಚ ಉದ್ಗೀಥಂ ಚ ಪ್ರತಿಹಾರಉಪದ್ರವಃ
ಸಂಬೋಧನಂ (ನಿಬಂಧನಂ) ಚೇತಿ ಪಂಚ......ಸಾಮಗೀತಕೇ
ಪ್ರಸ್ತಾವಃ ಸಾಮಗೀತೇಷು ಏಲಾಸೂದ್ಗ್ರಾಹ ಉಚ್ಯತೇ
ಇತರಾಣಿ ಯಥಾಸಂಖ್ಯಂ ಅನುದ್ಗ್ರಾಹಾದಿ ಸಂಜ್ಞಯಾ

ಏಲಾದಿ ಪ್ರಬಂಧಗಳ ಗಾನಕ್ರಮದಲ್ಲಿಯೂ ಕೆಲಮಟ್ಟಿಗೆ ಸಾಮಗಾನಕ್ರಮದ ಹೋಲಿಕೆ ಇದೆಯೆಂದೂ ತಿಳಿಯಬಹುದಾಗಿದೆ. ಉದಾ:— ಋಗಕ್ಷರಂ ಯಥಾಸಾಮ್ನಿ ತಕಾರೇಣ ವಿಭಜ್ಯತೇ ।

ತಥೈವ ತೇನಯಾಗೀತಂ ವಿಭಜ್ಯ ಪ್ರತಿಗೀಯತೇ

ಇದು ದೇಶೀಯ (ಶುದ್ಧಸೂಡ) ಗೀತಗಳಲ್ಲಿ ಪ್ರಥಮವೂ ಪ್ರಧಾನವೂ ಆದ ಏಲಾಪ್ರಬಂಧದ ಲಕ್ಷಣ. ಸಾಮದಲ್ಲಿ ಋಕ್ಕುಗಳನ್ನು ಹಾಡುವಾಗ ಗೇಯಾನುಕೂಲವ ವಿಭಾಗಕ್ಕಾಗಿ ತಕಾರವನ್ನು ಅಲ್ಲಲ್ಲಿ ಸೇರಿಸುತ್ತಿ ದ್ದಂತೆ ಏಲಾಗಾನದಲ್ಲಿ ತೇನ ಎಂಬ ಅಕ್ಷರಗಳನ್ನು ಬಳಸಲಾಗುತ್ತಿತ್ತು ಎಂದು ಇದರ ಅರ್ಥ. ಇದೂ ಅಲ್ಲದೆ ಸಾಮಾದಿ ಶುದ್ಧಗೀತಗಳನ್ನು ಹಾಡುವಾಗ ಪಾದಾರಂಭಾದಿ ಉಪಕ್ರಮದಲ್ಲಿ ಕಂಠವನ್ನು ಗ್ರಹಸ್ವರಕ್ಕೆ ಹೊಂದಿಸಿ ಸ್ಥಿರಪಡಿಸಿಕೊಳ್ಳುವ ಉಪೋಹನ[1] ಕ್ರಮಕ್ಕೆ ಸದೃಶವಾಗಿ ಏಲಾದಿ ಗಾನದಲ್ಲಿಯೂ 'ರಂಗ'

1 ಉಪೋಹ್ಯತೇಸ್ವರೋಯಸ್ಮಾದ್ಯೇನಗೀತಂಪ್ರವರ್ತತೇ
ತಸ್ಮಾದುಪೋಹನಂಜ್ಞೇಯಂ ಸ್ಥಾಯಿಸ್ವರಸಮಾಶ್ರಯಂ ಭ. ನಾ.

ಪ್ರಯೋಗವೆಂಬ ಕ್ರಮವಿತ್ತು ಎಂದು ಸಹ ಭರತಭಾಷ್ಯದಿಂದ ತಿಳಿಯಬಹುದಾಗಿದೆ.[1] ಹೀಗೆಲ್ಲಾ ರಚನೆಯಲ್ಲಿ ಮತ್ತು ನಿರೂಪಣೆಯಲ್ಲಿ ಸಾಮಗೀತದ ಅವಯವಸಾದೃಶ್ಯವಿರುವುದರಿಂದ ಶುದ್ಧಪ್ರಬಂಧ ಎಂಬ ಹೆಸರು ವ್ಯವಹಾರದಲ್ಲಿರುವುದು ಅಸಮ್ಮತವಲ್ಲ ಎಂದೇ ಶಾರ್ಙ್ಗದೇವನು ಆ ಶ್ಲೋಕದಲ್ಲಿ ಹೇಳಿದುದಿರಬೇಕು ಎಂಬುದರಲ್ಲಿಯೂ ಸಂದೇಹ ಕಾಣುವುದಿಲ್ಲ.

ಮೂಲತಃ ದೇಶೀತಾಳಗಳಿಗೆ ಅನ್ವರ್ಥವಾಗಿ ಬಂದ ಸಾಲಗ ಎಂಬ ಹೆಸರೇ ಪ್ರಬಂಧಗಳಿಗೂ ರೂಢಿಯಾಗಿರುವುದು ಸಹಜವೇ ಸರಿ. ದೇಶೀಯ ತಾಳ ಎಂಬ ಅರ್ಥವು "ಛಾಯಾಲಗಃ" ಎಂಬ ಪದದಲ್ಲಿಯೇ ಅಡಕವಾಗಿದೆ. ಛಾಯಾಮಾತ್ರವಾದ ಲಘು ಗುರುಗಳುಳ್ಳದು ಛಾಯಾಲಗ. (ಬಹುವ್ರೀಹ್ಯರ್ಥ) ಹಾಗಾಗಿ ದೇಶೀತಾಳನಿಬದ್ಧವಾದ ಗೀತಗಳಿಗೆ ಸಾಲಗ ಎಂದೇ ಹೆಸರಾಯಿತು. ನಮ್ಮ ಪ್ರಾಚೀನ ಕವಿಗಳು ದೇಶೀಯಗೀತ ಎಂಬ ಅರ್ಥದಲ್ಲಿ 'ಪಾಡುವಸಾಳಗು' ಎಂದು ಪ್ರಯೋಗಿಸಿರುತ್ತಾರೆ.[2] ಹೀಗೆ ಸಾಲಗ ಎಂಬ ಹೆಸರು ತಾಳದಿಂದ ಪ್ರಬಂಧಕ್ಕೆ ಬಂದಿರುವಂತೆ ಸೂಡ ಎಂಬ ಹೆಸರು ಪ್ರಬಂಧದಿಂದ ತಾಳಕ್ಕೆ ಬಂದಿರುವುದೆಂಬುದನ್ನು ಹಿಂದೆಯೇ ನೋಡಿದೆವು. ಕಲ್ಲಿನಾಥನ ಕಾಲದಲ್ಲಿಯೇ ಸಾಲಗದ ಮೂಲಾರ್ಥವು ಮರೆಯಾಗಿದ್ದಿರಬೇಕು. ಇದರಿಂದಲೇ ಆತನು ಛಾಯೆಯನ್ನು ಶುದ್ಧದ ಛಾಯೆ ಎಂದೂ ಲಗಕ್ಕೆ 'ಲಗತಿ ಇತಿಲಗಃ' ಎಂದೂ ಹೇಗಾದರೂ ಒಂದು ಅರ್ಥವನ್ನು ಎಳೆದು ತಂದು ಹೊಂದಿಸಲು ಒದ್ದಾಡಬೇಕಾಯಿತು. ಕ್ರಮೇಣ ಈ 'ಸಾಲಗ' ಎಂಬ ಸಂಜ್ಞೆಗೆ ಶುದ್ಧದಿಂದ ಭಿನ್ನವಾದ್ದು ಎಂದಿಷ್ಟೆ ಅರ್ಥವು ಬಳಕೆಯಾಗಿ ದೇಶೀಯವಾದ ನೃತ್ತ, ರಾಗ, ವಾದ್ಯಾದಿಗಳ ವ್ಯವಹಾರದಲ್ಲಿಯೂ ರೂಢಿಗೆ ಬಂದಿದೆ.

ಉದಾ:- ಶುದ್ಧರಾಗ × ಸಾಲಗರಾಗ; ಶುದ್ಧನಾಟ್ಯ × ಸಾಲಗನಾಟ್ಯ; ಶುದ್ಧಮದ್ದಳ × ಸಾಲಗಮದ್ದಳ ಇತ್ಯಾದಿ.

ಈ ಲೇಖನದಲ್ಲಿ ಇದುವರೆಗೆ ವಿಮರ್ಶಿಸಿದ ವಿಷಯಗಳ ಮುಖ್ಯ ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು:- ಸೂಡ ಎಂಬುದು ಕನ್ನಡ ಭಾಷೆಯ ಪದ. ಸೂಡು ಎಂಬ ಬಂಧನಾರ್ಥದಲ್ಲಿರುವ ಧಾತುವು ಕರ್ಮಾರ್ಥದಲ್ಲಿ ನಾಮಪದವಾಗುವಾಗ ಸೂಡ ಎಂದು ಅಕಾರಾಂತವಾಗಿದೆ. ಯೋಗತಃ ಇದಕ್ಕೆ ಕಟ್ಟಿದ ಕಟ್ಟು ಎಂಬ ಅರ್ಥವಾಗುವುದರಿಂದ ಪ್ರಬಂಧಪದಕ್ಕೆ (ಕಟ್ಟಿದ ಹಾಡು) ಪರ್ಯಾಯವಾಗಿ ಇದು ಪ್ರಯೋಗಿಸಲ್ಪಟ್ಟಿದೆ. ಸೂಡು, ಸೂಳು, ಸೂಲು, ಸೂಳ, ಸೂಲ, ಚೂಡ ಎಂಬವೆಲ್ಲ ಒಂದೇ ಅರ್ಥದಲ್ಲಿರುವ ಇದರ ರೂಪಾಂತರಗಳು, 'ಸೂಳಾದಿ' ಎಂಬುದು ಸಾಲಗ ಸೂಳ ಪ್ರಬಂಧ ವರ್ಗದಲ್ಲಿ ಮೊದಲನೆಯ ಪ್ರಬಂಧ ಅನ್ವರ್ಥವಾಗಿ ಬಂದ ಹೆಸರು. ಸಂಗೀತ ರತ್ನಾಕರಾದಿ ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಆ ಪ್ರಬಂಧಕ್ಕೆ 'ಧ್ರುವ' ಎಂದು ಹೆಸರಿದ್ದುದು 'ಛಾಯಾಲಗ' ಎಂಬುದರ ಅಪಭ್ರಂಶ ರೂಪವಾದ ಸಾಲಗಃ ಎಂಬ ಪದಕ್ಕೆ ಛಾಯಾಮಾತ್ರವಾದ ಲಘು ಗುರುಗಳುಳ್ಳ ದೇಶಿಯ ತಾಳ ಎಂದು ಮೂಲಾರ್ಥ. ತಾಳದ ಸಂಬಂಧದಿಂದ ದೇಶೀಯ ಗೀತಗಳಿಗೆ ಈ ಹೆಸರು ರೂಢಿಯಲ್ಲಿ ಬಂದುದಾಗಿದೆ. ಇದರಿಂದ, ವಾಸ್ತವವಾಗಿ ಈಗಲೂ ನಮ್ಮ ಕರ್ಣಾಟಕ ಸಂಗೀತದಲ್ಲಿ ಪ್ರಚಲಿತವಾಗಿರುವ ತಾಳಗಳೆಲ್ಲ ಸಾಲಗ ತಾಳಗಳೇ ಪ್ರಬಂಧಗಳೆಲ್ಲ ಸಾಲಗಸೂಡಗಳೇ ಎಂದು ತಿಳಿದು ಕೊಳ್ಳಬಹುದಾಗಿದೆ.

ಇತಿ-ಶಿವಂ

---

1 ರಂಗಪ್ರಬೋಧಕಂ ಬೀಜಂ ಜೀವವತ್ ಕ್ವಾಪಿ ವಿನ್ಯಸೇತ್। ಗೀತಂ ರಂಗವಿನಿರ್ಮುಕ್ತಂ ನಶ್ರೋತ್ರಸುಖದಂಭವೇತ್ (ಏಲಾದಿ ದೇಶಿಕಾಗೀತಗಾನಕ್ರಮ. ಭರತಭಾಷ್ಯ)

2 'ಪಾಡುವ ಸಾಳಗಂಲಳಿಯೊಳಾಡುವನಚ್ಚಣಿ......' (ಅನಂತನಾಥಪುರಾಣ — ಜನ್ನ ಕವಿ ಅ. ೧೪, — ಪದ್ಯ ೭೮) — ಹರಿಶ್ಚಂದ್ರ ಕಾವ್ಯ. ಸ್ಥಲ ೭. ಪದ್ಯ ೬.

ಟಿಪ್ಪಣಿಯಲ್ಲಿ ಕಾಣುವ ಸವಿಮರ್ಶಿತ ಗ್ರಂಥಗಳ ವಿವರ:-

1 ಸಂಗೀತ ರತ್ನಾಕರ ಕಲ್ಲಿನಾಥನ ವ್ಯಾಖ್ಯಾನ ಸಹಿತ ಆನಂದಾಶ್ರಮದ ಪ್ರತಿ, ಪುನೆ.

2 ಭರತಮುನಿಯ ನಾಟ್ಯಶಾಸ್ತ್ರ, ಅಭಿನವ ಗುಪ್ತವ್ಯಾಖ್ಯಾನ ಸಮೇತ, ಬರೋಡ ಗಾಯಕವಾಡ ಪ್ರತಿ 4ನೇ ಭಾಗ.

3 ಸಂಗೀತಸಾರಸಂಗ್ರಹ - ಘನಶ್ಯಾಮದಾಸ ಕೃತ - ರಾಮಕೃಷ್ಣ ವೇದಾಂತಮಠ ಕಲ್ಕತ್ತ.

4 ಸಂಗೀತ ಸಾರಾಮೃತ - ತುಲಜಮಹಾರಾಜಕೃತ Music Acadamy series, Madras.

5 ಚತುರ್ದಂಡೀಪ್ರಕಾಶಿಕಾ - ವೆಂಕಟೇಶ್ವರ ದೀಕ್ಷಿತ ವಿರಚಿತ „ „ „

6 ಸಂಗೀತೋಪನಿಷತ್ ಸಾರೋದ್ಧಾರ - ಸುಧಾಕಲಶವಿರಚಿತ ಗಾಯಕವಾಡ ಪ್ರತಿ - ಬರೋಡ.

7 ಸಂಗೀತದರ್ಪಣ - ಚತುರ ದಾಮೋದರವಿರಚಿತ ತಂಜಾವೂರು ಸರಸ್ವತೀ ಮಹಾಲ್ ಪ್ರಕಾಶನ.

8 ಸಂಗೀತ ದಾಮೋದರ - ಶುಭಂಕರಕೃತ ಸಂಸ್ಕೃತ ಕಾಲೇಜು ಕಲ್ಕತ್ತ.

9 ಭಾವಪ್ರಕಾಶ - ಶಾರದಾತನಯವಿರಚಿತ - Oriental Institute of Baroda.

10 ಭರತಭಾಷ್ಯ - (M-SS) - ನಾನ್ಯದೇವಕೃತ - No 111 of 1869-70 in the govt - MSS Library at the B. O. R. Institute Poona.

11 ಭರತಕಲ್ಪಲತಾಮಂಜರಿ — ಪಟ್ಟವರ್ಧನ ಸುಬ್ಬಾಶಾಸ್ತ್ರಿ ಅಂಕಾಜಿಶಾಸ್ತ್ರಿ - ಬೆಂಗಳೂರು 1887.

12 ಪಂಪಾಸ್ಥಾನವರ್ಣನಂ — ಚಂದ್ರಶೇಖರ ಕವಿ - ಶರಣ ಸಾಹಿತ್ಯ ಗ್ರಂಥಮಾಲೆ ಬೆಂಗಳೂರು.

13 ಶಬ್ದಮಣಿದರ್ಪಣ — ಕೇಶಿರಾಜ — ಕಿಟ್ಟೆಲ್ ಸಾಹೇಬರ ಸಂಪಾದನೆ ಪ್ರತಿ.

14 ವಡ್ಡಾರಾಧನೆ — ಶಾರದಾ ಮಂದಿರ ಪ್ರಕಾಶನ — ಮೈಸೂರು.

15 ಪಂಪ ಭಾರತ — ಸಾಹಿತ್ಯ ಪರಿಷತ್ ಪ್ರಕಾಶನ — ಬೆಂಗಳೂರು 1931.

16 History of Kannada literature by R. Narasimhachar, M.A., M.R.A.S. Mysore University Publications.

ಅರ್ಥಧಾರಿ

ಶ್ರೀ ಕೃ. ಭ. ಪೆರ್ಲ.

"ಯಕ್ಷಗಾನ ತಾಳಮದ್ದಳೆಯು ಕೂಟವೆಂದರೆ ಒಂದು ವಿದ್ವದ್ಗೋಷ್ಠಿ, ಪ್ರಾಚೀನಕಾಲದಲ್ಲಿ ಘನವಿದ್ವಾಂಸರು ಕೂಡಿ ನಡೆಸುತ್ತಿದ್ದ ವಾಕ್ಯಾರ್ಥಸಭೆಗಳಿಗೆ ಸಮಾನ. ಪೌರಾಣಿಕ ಮಹಾಪುರುಷರ ಸ್ವಭಾವಗುಣಧರ್ಮಗಳನ್ನು ವಿಶದವಾಗಿ ಅಭಿವ್ಯಕ್ತಗೊಳಿಸುತ್ತ ಧರ್ಮ, ಸತ್ಯ, ನ್ಯಾಯ, ನೀತಿಗಳನ್ನು ಸಾಮಾನ್ಯ ಜನರಿಗೂ ಚೆನ್ನಾಗಿ ಮುಂದಟ್ಟಾಗುವಂತೆ ಬೋಧಿಸುವ ಅತ್ಯುತ್ತಮ ಸಾಧನ. ಕೇವಲ ಕ್ಷಣಿಕ ಮನೋರಂಜನೆಗಾಗಿಯೇ ಹುಟ್ಟಿಕೊಂಡ ಕಲೆ ಇದಲ್ಲ. ಮನೋರಂಜನೆಯೊಂದಿಗೆ ಸರಳವಾಗಿ ಧರ್ಮ ಪ್ರಚಾರ ಮಾಡುವ ವಿಶಿಷ್ಟ ಶಕ್ತಿಯು ಈ ಕಲೆಯಲ್ಲಿ ಪರ್ಯಾಪ್ತವಾಗಿ ಅಡಕವಾಗಿದೆ."

ವರ್ಷಕ್ಕೊಂದು ಬಾರಿ ತಾವು ನಡೆಸುತ್ತಿರುವ ಅಖಿಲಭಾರತ ವಿದ್ವತ್‌ಸದಸ್ಸಿಗೆ ಮೂರು-ನಾಲ್ಕು ಸಲ ಯಕ್ಷಗಾನ ಕಲಾವಿದರನ್ನು ಪ್ರತ್ಯೇಕವಾಗಿ ಕರೆಸಿ, ಯಕ್ಷಗಾನಕೂಟಗಳನ್ನು ಏರ್ಪಡಿಸಿ ಕೇಳಿ, ಆನಂದಿಸಿದ ಶ್ರೀ ಶ್ರೀ ಕಾಂಚಿ ಕಾಮಕೋಟಿ ಪೀಠಾಧಿಪತಿಗಳು ತಾಳಮದ್ದಳೆಯ ಕುರಿತು ಈ ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಯಕ್ಷಗಾನ ಕೂಟಕ್ಕೆ ಇದಕ್ಕಿಂತ ಸೊಗಸಾದ ಇನ್ನೊಂದು ವ್ಯಾಖ್ಯಾನ ಸಿಗಲಾರದು. ಹೀಗಿರುತ್ತ ತಾಳಮದ್ದಳೆಯಲ್ಲಿ ಅರ್ಥಧಾರಿಯ ಸ್ಥಾನ ಎಷ್ಟೊಂದು ಹಿರಿದಾದುದು ಎಂದು ತರ್ಕಿಸಬಹುದು.

ಬಯಲಾಟ ದೃಶ್ಯಪ್ರಧಾನವಾದುದು. ಅದರಲ್ಲಿ ವೇಷ, ನೃತ್ಯ, ಅಭಿನಯ ಮತ್ತು ಮಾತು ಎಂಬ ನಾಲ್ಕು ಅಂಗಗಳು ಸಮಾನವಾದ ಪ್ರಾಧಾನ್ಯದಿಂದ ಪ್ರಯೋಗಿಸಲ್ಪಡುತ್ತವೆ. ಆಟದಲ್ಲಿ ಮಾತುಗಾರಿಕೆ ನಾಲ್ಕರಲ್ಲಿ ಒಂದು ಮಾತ್ರ. ತಾಳಮದ್ದಳೆಯಲ್ಲಿ ಮಾತುಗಾರಿಕೆಯೇ ಜೀವಾಳ. ಅರ್ಥಧಾರಿಯಾದವನು ಉಳಿದ ಎಲ್ಲಾ ಅಂಗಗಳ ನ್ಯೂನತೆಯುನ್ನು ತನ್ನ ಮಾತಿನ ಚಮತ್ಕಾರದಿಂದ ಪರಿಹರಿಸಿ ಕೊಡಬೇಕಾಗುತ್ತದೆ. ಶ್ರೋತೃವರ್ಗದ ರಸಪ್ರಜ್ಞೆಯುನ್ನು ಜಾಗೃತವಾಗಿಟ್ಟು ಕ್ಷಣ ಕ್ಷಣಕ್ಕೂ ಕುತೂಹಲವನ್ನು ಕೆರಳಿಸಿಡಬೇಕಾಗುತ್ತದೆ.

ತಾಳಮದ್ದಳೆಯಲ್ಲಿ ಕೇಂದ್ರಬಿಂದು ಎನಿಸಿದ ಅರ್ಥಧಾರಿಯ ನಿರೂಪಣೆಗೆ ಸಹಾಯಕವಾಗುವಂತೆ, ಪೋಷಕವಾಗುವಂತೆ ಭಾಗವತರ ಹಾಡುಗಾರಿಕೆಯೂ, ಪಕ್ಕವಾದ್ಯಗಳ ವಾದನವೂ ಅನುವರ್ತಿಯಾಗಿ ಬರಬೇಕು. ಕಲಾಪ್ರಜ್ಞೆಯುಳ್ಳ ಘನ ವಿದ್ವಾಂಸರು ಅರ್ಥಧಾರಿಗಳಾಗಿದ್ದು ಈ ರೀತಿಯಲ್ಲಿ ನಡೆದಾಗ ಮಾತ್ರ ಯಕ್ಷಗಾನ ಕೂಟವು ಯಶಸ್ವಿಯಾಗಬಲ್ಲುದು.

ಭಾಗವತನ ಸ್ಥಾನ

ಯಕ್ಷಗಾನ ಬಯಲಾಟವಾಗಲಿ, ತಾಳಮದ್ದಳೆಯ ಕೂಟವಾಗಲಿ ಇವೆರಡರಲ್ಲಿಯೂ ಭಾಗವತನೇ ಪ್ರಧಾನವ್ಯಕ್ತಿ—ಸೂತ್ರಧಾರ. ಅವನ ನಿರ್ದೇಶದಂತೆ ವಾದ್ಯವಾದಕರೂ, ವೇಷಧಾರಿಗಳೂ, ಅರ್ಥಧಾರಿಗಳೂ ನಡೆಯಬೇಕು. ಸಮಗ್ರ ಕಥಾಭಾಗವನ್ನು ಬೇಕಾದಂತೆ ನಿರೂಪಿಸಿಕೊಂಡು ಹೋಗುವ ಸರ್ವಸ್ವಾತಂತ್ರ್ಯ ಆತನಿಗೇ ಇರತಕ್ಕದ್ದು. ಅವನು ಹಾಡಿದ ಪದ್ಯಗಳಿಗೆ ಅನುಗುಣವಾಗಿ ನೃತ್ಯಾಭಿನಯಗಳೊಂದಿಗೆ ಅರ್ಥ ಹೇಳುವುದಷ್ಟೆ ವೇಷಧಾರಿಗಳ ಮತ್ತು ಅರ್ಥಧಾರಿಗಳ ಕರ್ತವ್ಯ.

ಸಾಂಪ್ರದಾಯಿಕವಾಗಿ ಬಂದ ಈ ನಿಯಮಪಾಲನೆಯು ಬಯಲಾಟದ ಮಟ್ಟಿಗೆ ಸರಿ ಹೊಂದಬಹುದು. ಅಲ್ಲಿ ಸೂತ್ರಧಾರನಾಗಿ ಭಾಗವತನೇ ಎಲ್ಲರನ್ನೂ ತನ್ನ ಅಂಕೆಯಲ್ಲಿಟ್ಟು ನಡೆಸಿಕೊಂಡು ಹೋಗುತ್ತಾನೆ, ಕಂಠಪಾಠ ಮಾಡಿಕೊಂಡ ಪ್ರಸಂಗಗಳ ಪದ್ಯಗಳನ್ನೆಲ್ಲ ಒಂದೊಂದಾಗಿ ಹಾಡಿಕೊಂಡು ಕಥೆಯನ್ನು ಆತನು ಮುಂದುವರಿಸುತ್ತ ಹೋಗುತ್ತಾನೆ.

ಆದರೆ ಯಕ್ಷಗಾನ ಕೂಟಗಳಲ್ಲಿ ಭಾಗವತನ ಮನೋಧರ್ಮವನ್ನೇ ಅನುಸರಿಸಿ, ಆತನ ನಿರ್ದೇಶವನ್ನೇ ಪಾಲಿಸುವುದು ಅರ್ಥಧಾರಿಗಳಿಗೆ ಎಷ್ಟರ ಮಟ್ಟಿಗೆ ಸಾಧ್ಯ ಮತ್ತು ಉಚಿತ ಎಂಬುದನ್ನು ವಿವೇಚಿಸಿ ನೋಡೋಣ.

ಸಾಮಾನ್ಯವಾಗಿ ಈಗ ಇರುವ ಯಕ್ಷಗಾನ ಪ್ರಸಂಗಗಳೆಲ್ಲ ಬಯಲಾಟಗಳನ್ನೇ ದೃಷ್ಟಿಯಲ್ಲಿರಿಸಿ ಅವುಗಳಲ್ಲಿ ಉಪಯುಕ್ತವಾಗುವಂತೆ ರಚಿಸಲ್ಪಟ್ಟವುಗಳು. ಆದ್ದರಿಂದ ಈ ಪ್ರಸಂಗಗಳಲ್ಲಿ ಅನೇಕ ಕಡೆ ಪುನರುಕ್ತಿಗಳೂ, ಕೇವಲ ವರ್ಣನಾತ್ಮಕ ಪದ್ಯಗಳೂ ಧಾರಾಳವಾಗಿ ಸೇರಿಕೊಂಡಿವೆ. ಇವುಗಳನ್ನು ಕಂಠಪಾಠಮಾಡಿಕೊಂಡ ಭಾಗವತರು ಒಂದೇ ಒಂದು ಪದ್ಯವನ್ನೂ ಬಿಡದೆ ಎಲ್ಲವನ್ನೂ ಹಾಡಿಕೊಂಡು ಹೋಗುತ್ತಾರೆ. ವಿಶೇಷ ಅರ್ಥಗಾಂಭೀರ್ಯವಿಲ್ಲದ, ಅನುಪಯುಕ್ತವಾದ ಒಂದೆರಡು ಪದ್ಯಗಳನ್ನು ಬಿಟ್ಟು ಹಾಡಬೇಕೆಂದಾಗ ಅವರ ಕಂಠಪಾಠಕ್ಕೆ ಚ್ಯುತಿಯುಂಟಾಗಿ ಪ್ರಸಂಗ ಮುಂದುವರಿಯುವುದಿಲ್ಲ. ಹೇಳಿದ್ದನ್ನೇ ಮತ್ತೂ ಮತ್ತೂ ಹೇಳುತ್ತ ಒಂದೇ ಪಾತ್ರವು ಮಾತನಾಡಬೇಕಾದ ಹತ್ತಾರು ಪದ್ಯಗಳಿರುವ ಸಂದರ್ಭಗಳು ಪ್ರಸಂಗಗಳಲ್ಲಿ ಅಲ್ಲಲ್ಲಿ ಬರುತ್ತವೆ. ಇದರಿಂದ ಹಲವು ಬಾರಿ ಶ್ರೋತೃಗಳಲ್ಲಿ ನೀರಸತೆಯುಂಟಾಗುತ್ತದೆ. ಹೀಗಾಗದಂತೆ ಕಥೆಗೆ ಉಪಯುಕ್ತವಾದ, ಅರ್ಥಗರ್ಭಿತವಾದ ಕೆಲವೇ ಪದ್ಯಗಳನ್ನು ಅರ್ಥಧಾರಿಗಳಿಗೆ ದಿಗ್ದರ್ಶನವಾಗುವಂತೆ ಭಾಗವತರು ಹಾಡಿದರೆ ಸಾಕಾಗುತ್ತದೆ. ಅವರು ಮುಂದೆ ಹಾಡುವ ಪದ್ಯ ಇಂತಹದೇ ಎಂದು ತಿಳಿದಾಗ ಮಾತ್ರ ಅರ್ಥಧಾರಿಯು ಸಮರ್ಪಕವಾಗಿ ಮಾತನಾಡಬಲ್ಲನು. ಆದ್ದರಿಂದ ಭಾಗವತರೂ ಅರ್ಥಧಾರಿಗಳೂ ಸಹಯೋಗದಿಂದ ಒಬ್ಬರನ್ನೊಬ್ಬರು ಹೊಂದಿಕೊಂಡು ಹೋದಾಗ ಮಾತ್ರ ತಾಳಮದ್ದಳೆಯು ಯಶಸ್ವಿಯಾದೀತೇ ಹೊರತು, ತಾನೊಬ್ಬನೇ ಸರ್ವತಂತ್ರ ಸ್ವತಂತ್ರನೆಂದು ಭಾವಿಸಿ ತಾನು ಹಾಡಿದ ಪದ್ಯಗಳಿಗೆಲ್ಲ ಅರ್ಥ ಹೇಳುತ್ತ, ತನ್ನ ಅಂಕೆಯಲ್ಲಿದ್ದು ತನ್ನ ಮನೋಧರ್ಮವನ್ನೇ ಅರ್ಥಧಾರಿಗಳು ಅನುಸರಿಸಬೇಕೆಂದು "ಕಂಠಪಾಠದ ಭಾಗವತರು" ಛಲ ಮಾಡಿದರೆ ಸರಿಯಾಗಲಾರದು.

ಸಮಗ್ರ ಪೌರಾಣಿಕ ಕಥಾಜ್ಞಾನ, ಗಹನವಾದ ಶಾಸ್ತ್ರಾಧ್ಯಯನ, ವಿಸ್ತೃತವಾದ ಲೋಕಾನುಭವ, ಅಸದೃಶ ವಾಕ್ಪಟುತ್ವ ಮುಂತಾದ ಸಕಲ ಯೋಗ್ಯತೆಯಿಂದ ಕೂಡಿದ ಹಲವು ಮಂದಿ ಘನ ವಿದ್ವಾಂಸರು ಯಕ್ಷಗಾನರಂಗವನ್ನು ಪ್ರವೇಶಿಸಿದ ಈ ಕಾಲದಲ್ಲಿ ತಾಳಮದ್ದಳೆಯ ಸ್ವರೂಪವೇ ಸಂಪೂರ್ಣ ಪರಿವರ್ತನೆ ಹೊಂದಿದೆ.

ಹಿಂದೆ ಬಯಲಾಟಗಳಿಲ್ಲದಿರುವ ಮಳೆಗಾಲಗಳಲ್ಲಿ ವಿರಾಮವಾಗಿ ಸಮಯ ಕಳೆಯುತ್ತಿದ್ದ ಹಲವು ಮಂದಿ ವೇಷಧಾರಿಗಳು, ಅಕ್ಷರಸ್ಥರಾಗಿ ತಕ್ಕಮಟ್ಟಿಗೆ ಪೌರಾಣಿಕ ಕಥೆಗಳ ಪರಿಚಯವಿರುವ ನಾಲ್ಕಾರು ಮಂದಿ ಹಳ್ಳಿಯ ಅನುಭವಸ್ಥರು ಮಾತ್ರ ತಾಳಮದ್ದಳೆಗಳಲ್ಲಿ ಅರ್ಥಧಾರಿಗಳಾಗಿ ಭಾಗ ವಹಿಸುತ್ತಿದ್ದರು. ಓದುಬರಹವಿಲ್ಲದ ಹಳ್ಳಿಯ ಜನಸಮುದಾಯವೇ ಶ್ರೋತೃವರ್ಗದಲ್ಲಿ ಹೆಚ್ಚಾಗಿ ಇರುತ್ತಿತ್ತು. ಕಲಾವಿದರಾಗಿ, ಶ್ರೋತೃಗಳಾಗಿ ವಿದ್ವಜ್ಜನರು ಇದರಲ್ಲಿ ಪ್ರವೇಶಿಸುತ್ತಲೇ ಇರಲಿಲ್ಲ. ಆದ್ದರಿಂದಲೇ ಯಕ್ಷಗಾನವು ಹಳ್ಳಿಯ ಪಾಮರರಿಗೆ ಸಂಬಂಧಪಟ್ಟ ಸಾಮಾನ್ಯ 'ಜಾನಪದ' ಕಲೆಯೆಂದು ಪ್ರಸಿದ್ಧವಾಗಿತ್ತು. ಆಗಿನ ಅರ್ಥಧಾರಿಗಳು ಭಾಗವತರು ಹಾಡಿದ ಪ್ರಸಂಗದ ಪದ್ಯಗಳ ಅರ್ಥವನ್ನು, ಹಳ್ಳಿಗರಿಗೆ ಪುರಾಣದ ಕಥಾಭಾಗದ ಪರಿಚಯವಾಗುವಂತೆ ಹೇಳುತ್ತಿದ್ದರು. ಪಾತ್ರಧಾರಿಗಳ ಸಂಭಾ ಷಣೆಯ ಮೂಲಕ ಕಥೆಯು ಮುಂದುವರಿಯುತ್ತ ಬೆಳಗಾದಾಗ ಪ್ರಸಂಗ ಮುಕ್ತಾಯವಾದರೆ ಸಾಕು. ಇಷ್ಟರಿಂದಲೇ ಶ್ರೋತೃಗಳೂ ತೃಪ್ತಿಪಡುತ್ತಿದ್ದರು. ಮಧ್ಯಮಧ್ಯದಲ್ಲಿ ಅರ್ಥಧಾರಿಗಳೊಳಗೆ ವಾದದ ರೂಪದಲ್ಲಿ ಸಾಮಾನ್ಯವಾದ ಒಂದೆರಡು ಪ್ರಶ್ನೋತ್ತರಗಳು ಬಂದರೆ—ವಾಗ್ಯುದ್ಧವು ಸ್ವಲ್ಪ ಬಿರು ಸಾದರೆ—ಕೆಲವೊಮ್ಮೆ ಅಸಭ್ಯ ಶಬ್ದಪ್ರಯೋಗ ಮಾಡಿ ಒಬ್ಬರನ್ನೊಬ್ಬರು ಹೀಯಾಳಿಸಿ ಮಾತನಾಡಿದ ರಂತೂ, ತಾಳಮದ್ದಳೆ ಬಹಳ ಗಡದ್ದಾಗಿತ್ತು ಎಂಬ ಕೀರ್ತಿ ಹರಡುತ್ತಿತ್ತು. ತಾಳಮದ್ದಳೆಯ ಉದ್ದೇಶ, ವ್ಯಾಪ್ತಿ ಇಷ್ಟಕ್ಕೇ ಪರ್ಯವಸಾನವಾಗುತ್ತಿತ್ತು.

ತಾಳಮದ್ದಳೆ - ವಿಮರ್ಶಾಗೋಷ್ಠಿ

ಆದರೆ ಯಕ್ಷಗಾನ ಕೂಟದ ಸ್ವರೂಪವೇ ಸಂಪೂರ್ಣ ಬದಲಾಗಿರುವ ಈ ಕಾಲಕ್ಕೆ ಇದು ಮೊದಲಿನಂತೆ ಹಳ್ಳಿಯ ಪಾಮರರಿಗೆ ಸಂಬಂಧಪಟ್ಟ ಕೇವಲ ಜಾನಪದಕಲೆಯಾಗಿರದೆ ವಿದ್ವಾಂಸರಿಂದ ಪುರಸ್ಕರಿಸಲ್ಪಡುವ ಪ್ರಬುದ್ಧಕಲೆ ಎನಿಸಿದೆ. ಇದರಲ್ಲಿ ಭಾಗವಹಿಸುವ ಕಲಾವಿದರೂ ವಿದ್ವಾಂಸರೆ; ಶ್ರೋತೃಗಳಾಗಿ ರಸಾಸ್ವಾದನೆ ಮಾಡುವ ಸಹೃದಯರೂ ವಿದ್ವಾಂಸರೆ.

ಶ್ರೋತೃವರ್ಗದಲ್ಲಿ, ಪೌರಾಣಿಕ ಕಥೆಗಳನ್ನು ಅರಿಯದ ಅಜ್ಞರಾಗಲಿ, ಪ್ರಸಂಗಗಳ ಪದ್ಯಗಳ ಅರ್ಥವನ್ನು ತಿಳಿಯದ ಅನಭಿಜ್ಞರಾಗಲಿ ಯಾರೂ ಇರುವುದಿಲ್ಲ. ಆದ್ದರಿಂದ ಕೇವಲ ಕಥಾಸಂದರ್ಭ ವನ್ನು ಮಾತ್ರ ನಿರೂಪಿಸುವಂತೆ, ಪ್ರಸಂಗದ ಪದ್ಯಗಳಲ್ಲಿ ಇದ್ದಷ್ಟೇ ಅರ್ಥವನ್ನು ಕೇಳುವ ಕುತೂಹಲ ದಿಂದ ಯಕ್ಷಗಾನ ಕೂಟಗಳಿಗೆ ಯಾರೂ ಬರುವುದಿಲ್ಲ. ಆಸಕ್ತಿಯಿಂದ ಬರುವ ವಿದ್ವಜ್ಜನರು, ಅರ್ಥ ಧಾರಿ ಎನಿಸಿದ ಕಲಾವಿದನು ತನ್ನದೇ ಆದ ಪ್ರತಿಭಾವಿಲಾಸದಿಂದ, ಪೌರಾಣಿಕ ಮಹಾವ್ಯಕ್ತಿಗಳ ಸ್ವಭಾವ-ಗುಣ - ಶೀಲ - ಕರ್ಮಗಳ ವಿಚಾರದಲ್ಲಿ, ಆ ಕಾಲದಲ್ಲಿ ನಡೆದ ಲೌಕಿಕ, ಅಲೌಕಿಕ ಘಟನಾವಳಿಗಳ ಕುರಿತು ಯಾವ ಹೊಸ ಬೆಳಕನ್ನು ಚೆಲ್ಲುತ್ತಾನೆ; ಎಂತಹ ನೂತನ ವಿಮರ್ಶೆಗಳನ್ನು ಮಾಡುತ್ತಾನೆ; ತರ್ಕಬದ್ಧ ವಾದ ಆಕ್ಷೇಪ ಸಮಾಧಾನಗಳು ಯಾವ ಕ್ರಮದಲ್ಲಿ ಬರುತ್ತವೆ ಮುಂತಾಗಿ ಬುದ್ಧಿಯನ್ನು ಕೆರಳಿಸಿ, ಬೌದ್ಧಿಕವಿಚಾರಪ್ರಚೋದನೆಗೆ ತೃಪ್ತಿಕರವಾದ ಸಮಾಧಾನವನ್ನು ಪಡೆಯುವ ಅಪೇಕ್ಷೆಯಿಂದಲೇ ಬರುತ್ತಾರೆ.

"ಚಿತ್ರಕೂಟದಲ್ಲಿ ಶ್ರೀರಾಮ-ಭರತರಲ್ಲಿ ನಡೆಯುವ ಸಂವಾದದಲ್ಲಿ ಎಂತೆಂತಹ ಧರ್ಮಸೂಕ್ಷ್ಮ ಗಳು ಅಡಕವಾಗಿವೆ; ವನವಾಸದ ಅವಧಿಯು ಮುಗಿಯುವ ಮುನ್ನ ಶ್ರೀರಾಮನು ತನ್ನ ಪಾದುಕೆಗಳ ನ್ನಿತ್ತು ಆ ಮೂಲಕ ಸಿಂಹಾಸನಾಧಿಕಾರವನ್ನು ಸ್ಥಾಪಿಸಿದುದು ಸರಿಯೇ ? ಪಂಚವಟಿಯಲ್ಲಿ ಶೂರ್ಪನಖಿ ಯಂತಹ ಅನಾಗರಿಕ ಸ್ತ್ರೀಯೊಡನೆ ವಿನೋದ ಪ್ರಸಂಗವನ್ನು ವಿಸ್ತರಿದ್ದು ಉಚಿತವೇ ? ಆಮೇಲೆ ಆಕೆಯ ಅಂಗಚ್ಛೇದಮಾಡಿಸಿದುದು ನ್ಯಾಯಸಮ್ಮತವೇ ? ಧರ್ಮಸಮ್ಮತವೇ ? ಕನಕಮೃಗದ ಮಾಯೆಗೆ ರಾಮ

ಸೀತೆಯರಂತಹ ಪ್ರಬುದ್ಧ ವ್ಯಕ್ತಿಗಳೂ ಹೇಗೆ ಬಲಿಯಾದರು? ಸುಗ್ರೀವನೊಡನೆ ಸಖ್ಯಮಾಡಿ ವಾಲಿಯನ್ನು ಪರಾಙ್ಮುಖ ವಧೆಮಾಡಿದ ಪ್ರಕರಣದ ಸಮರ್ಥನೆ ಹೇಗೆ, ವೇದನಿರತನೂ, ಜ್ಞಾನಿಯೂ, ತಪಸ್ವಿಯೂ ಮಹಾಪರಾಕ್ರಮಿಯೂ ಆಗಿದ್ದ ರಾವಣನು ಕೇವಲ ನಾಲ್ಕು ಆರ್ಭಟೆ ಕೊಟ್ಟು ಅಸಂಬದ್ಧ ಮಾತನಾಡುವ ಮಹಾಮೂರ್ಖನೇ ಅಥವಾ ಅವನ ಮಾತು ಕೃತಿಗಳಿಗೆ ತರ್ಕಬದ್ಧವಾದ ಉಚಿತ ನಿಲುವು ಇದೆಯೇ? ವಿಭೀಷಣನ ನೀತಿಬೋಧೆಯ ಆಧಾರತತ್ವಗಳೇನು? ಸ್ವಜನರಿಗೆ, ಸ್ವರಾಷ್ಟ್ರಕ್ಕೆ ವಿಪತ್ತು ಬಂದಾಗ ಶತ್ರುಪಕ್ಷವನ್ನು ಸೇರಿದ ಅವನ ವ್ಯವಹಾರಕ್ಕೆ ಸಮರ್ಥನೆ ಏನು? ದೂತನಾಗಿ ಸಂಧಾನಕ್ಕೆ ಹೋದ ಅಂಗದನು ರಾವಣನ ಆಸ್ಥಾನದಲ್ಲಿ ವ್ಯವಹರಿಸಿದ ಕ್ರಮ, ಆಡಿದ ಮಾತು. ರಾಮನ ಘನತೆ ಗೌರವಗಳಿಗೆ ಯುಕ್ತವಾಗಿದೆಯೇ? ಪ್ರಹಸ್ತನಂತಹ ಮಹಾಬುದ್ಧಿಶಾಲಿಯ ದೂರದರ್ಶಿತ್ವ ಎಂತಹದು? ಕುಂಭಕರ್ಣ, ಅತಿಕಾಯ, ಇಂದ್ರಜಿತು ಮುಂತಾದ ಖಲಪಾತ್ರಗಳ ಸ್ವಭಾವತಾರತಮ್ಯವೇನು? ಮಂಡೋದರಿಯೊಡನೆ, ರಾಮನೊಡನೆ ಮಾತನಾಡುವಾಗ ರಾವಣನು ತನ್ನ ಕೃತಿಸಮರ್ಥನೆಯನ್ನು ಮಾಡುವ ತರ್ಕಸರಣಿ ಎಂತಹದು"— ಮುಂತಾದ ನೂರಾರು ಕ್ಲಿಷ್ಟಸಮಸ್ಯೆಗಳು ರಾಮಾಯಣದಲ್ಲಿ ಬರುತ್ತವೆ.

ಮಹಾಭಾರತದ ಕಥೆಯಂತೂ ಇಂತಹ ವಿಚಾರಮಂಥನಗಳಿಗೆ ದೊಡ್ಡದೊಂದು ಆಗರವೇ ಆಗಿದೆ. "ಪಾಂಡವ-ಕೌರವರಲ್ಲಿ ಹಸ್ತಿನಾವತಿಯ ಸಿಂಹಾಸನಾಧಿಕಾರ ನ್ಯಾಯವಾಗಿ ಯಾರಿಗೆ ಸಲ್ಲತಕ್ಕದ್ದು; ವಂಶನಿರ್ಣಯಕ್ಕೆ ಕ್ಷೇತ್ರ, ಬೀಜ—ಇವುಗಳಲ್ಲಿ ಯಾವುದು ಆಧಾರ; 'ನಿಯೋಗ' ದಿಂದ ಪಡೆದ ಸಂತತಿಯ ಸ್ಥಾನಮಾನಗಳೇನು? ಅವತಾರಪುರುಷನೆನಿಸಿದ ಶ್ರೀ ಕೃಷ್ಣನ ಲೌಕಿಕ ಅಲೌಕಿಕ ವ್ಯವಹಾರಗಳಿಗೆ ವ್ಯಾವಹಾರಿಕ ದೃಷ್ಟಿಯಿಂದ ಸಮನ್ವಯ ಹೇಗೆ? ಛದ್ಮವೇಷದಿಂದ ಜರಾಸಂಧನನ್ನು ಸಂಧಿಸಿ ವಧಿಸಿದ ಪ್ರಕರಣದ ಸಮರ್ಥನೆ ಎಂತು? ದ್ಯೂತ, ದ್ರೌಪದೀವಸ್ತ್ರಾಪಹಾರ ಮುಂತಾದ ಸಂದರ್ಭಗಳಲ್ಲಿ ಹಿರಿಯರಾದ ಭೀಷ್ಮ ವಿದುರ ಮುಂತಾದವರ ನಿಲುಮೆಯು ನ್ಯಾಯಸಮ್ಮತವಾದುದೇ? ಸಂಗ್ರಾಮವನ್ನೇ ನಿಶ್ಚಯಿಸಿ ಬರುವೆನೆಂದು ಹೊರಟ ಶ್ರೀಕೃಷ್ಣನು ಸಂಧಾನದ ಪ್ರಯತ್ನ ಮಾಡುವುದರಲ್ಲಿ ಔಚಿತ್ಯವೇನು? ಕೌರವನ ಅನೀತಿಯನ್ನು ಚೆನ್ನಾಗಿ ಮನಗಂಡ ಭೀಷ್ಮ ದ್ರೋಣಾದಿಗಳು ಸೇನಾಪತಿತ್ವವನ್ನು ವಹಿಸಿ ಯುದ್ಧಕ್ಕೆ ಮುಂದಾದುದು ಸರಿಯೇ? ಶಲ್ಯನಂತಹ ಮಹಾನುಭಾವನ ಕಪಟವರ್ತನೆ ಲೋಕಸಮ್ಮತವಾದೀತೇ? ಶಿಖಂಡಿಯ ಪ್ರವೇಶ, ಧರ್ಮರಾಜನ ಅನೃತವಾಣಿ. ಜಯದ್ರಥವಧಾ ಪ್ರಕರಣ, ಕರ್ಣಕುಂಡಲಗಳ ದಾನ—ಇತ್ಯಾದಿ ಘಟನಾವಳಿಗಳಿಗೆ ಧರ್ಮಾಭಿಮಾನಿಗಳು ಧರ್ಮರಾಜನ ಕಡೆಯಿಂದ ಯಾವ ಸಮರ್ಪಕ ಸಮಾಧಾನವನ್ನು ಕೊಡಬಹುದು?"

ಇಂತಹ ಸಾವಿರಾರು ಸಮಸ್ಯಾತ್ಮಕ ವಿಚಾರಗಳನ್ನು ಎಳೆ ಎಳೆಯಾಗಿ ಬಿಡಿಸಿ, ಆಮೂಲಾಗ್ರವಾಗಿ ಚರ್ಚಿಸಿ, ಸಮರ್ಪಕವಾದ ಸಮಾಧಾನವನ್ನು ಹೇಳುವುದು ವಿದ್ವಾಂಸರಾದ ಅರ್ಥಧಾರಿಗಳ ಪಾಲಿಗೆ ಸೇರಿದ ಕರ್ತವ್ಯವಾಗಿದೆ. ಈ ವೈಚಾರಿಕ ಗೋಷ್ಠಿಗೆ, ಪ್ರಸಂಗದ ಪದ್ಯಗಳು, ಪೌರಾಣಿಕ ಕಥೆಗಳು, ಕಥೆಗಳಲ್ಲಿ ಬರುವ ಭಿನ್ನ ಭಿನ್ನ ಸ್ವಭಾವಗುಣಧರ್ಮಗಳುಳ್ಳ ಪಾತ್ರಗಳು ಕೇವಲ ಮಾರ್ಗದರ್ಶಕಗಳು. ಇವುಗಳ ಆಧಾರದ ಮೇಲೆ ವರ್ಣಾಶ್ರಮಪದ್ಧತಿ, ರಾಜನೀತಿ. ಆಧಿಭೌತಿಕ—ಆಧ್ಯಾತ್ಮಿಕ—ಆಧಿದೈವಿಕ ತತ್ವಪ್ರತಿಪಾದನೆ, ಜನನ ಮರಣ ಆತ್ಮಾನಾತ್ಮವಿಚಾರ, ಸದಾಚಾರನಿಷ್ಠೆ, ಪುಣ್ಯಾಪಾಪಗಳ ಸಹಜಸ್ವರೂಪ ಇತ್ಯಾದಿ ಜೀವನೋಪಯುಕ್ತ ವಿಷಯಗಳ ಒಂದು ವಿಶಾಲಸೌಧವನ್ನೇ ನಿರ್ಮಿಸಿ ಅರ್ಥಧಾರಿಯು ಅದರ ಸ್ವರೂಪದರ್ಶನವನ್ನು ಶ್ರೋತೃಗಳಿಗೆ ಮಾಡಿಸಿಕೊಡಬೇಕು. ಯಕ್ಷಗಾನ ಕೂಟಗಳಲ್ಲಿ ಪ್ರಾಸಂಗಿಕವಾಗಿ ಬಂದ ಯಾವುದಾದರೂ ವಿವಾದಾತ್ಮಕ ವಿಷಯವನ್ನು, ಶ್ರೋತೃಗಳು ಹಲವು ದಿನಗಳ ವರೆಗೆ ಪೌರಾಣಿಕ, ಶಾಸ್ತ್ರೀಯ ಆಧಾರಗಳನ್ನು ಅರಸುತ್ತ ತಮ್ಮತಮ್ಮಲ್ಲೇ ಚರ್ಚಿಸುವಂತೆ ಬೌದ್ಧಿಕ ಪ್ರಚೋದನೆಯನ್ನು ಅರ್ಥಧಾರಿಯು ಉಂಟುಮಾಡುತ್ತಿರಬೇಕು. ಯಕ್ಷಗಾನಕೂಟ

ವೆಂಬುದು ಕಲಾದೃಷ್ಟಿಯಿಂದ ಮನೋರಂಜನೆಯ ಒಂದು ಸಾಧನೆಯೂ ಹೌದು; ಅದರೊಂದಿಗೆ ಗಹನವಿಚಾರಗಳನ್ನು ಅಭ್ಯಸಿಸುವುದಕ್ಕೆ ಆಸ್ಪದವನ್ನೀಯುವ ಒಂದು ಉಚ್ಚಮಟ್ಟದ ವಿದ್ಯಾಪೀಠವೂ ಹೌದು ಎಂಬ ಮಹತ್ವವನ್ನು ಮನಗಾಣಿಸಬೇಕು.

ಬಯಲಾಟಗಳಲ್ಲಿ ವೇಷ ಹಾಕಿ ಕುಣಿಯುವ ವೇಷಧಾರಿ, ರಾತ್ರಿ ಇಡೀ ನಿದ್ದೆಕೆಟ್ಟು ತಾಳ ಮದ್ದಳೆಯಲ್ಲಿ ಅರ್ಥ ಹೇಳುವ ಅರ್ಥಧಾರಿ, ಕೀಳು ಅಭಿರುಚಿಯುಳ್ಳ ಸಾಧಾರಣ ವ್ಯಕ್ತಿಗಳೆಂದು ತಾತ್ಸಾರಕ್ಕೆ ಈಡಾಗಿದ್ದ ಒಂದು ಕಾಲ ಇತ್ತು. ವಿದ್ಯಾವಂತ ನಾಗರಿಕರ ದೃಷ್ಟಿಯಲ್ಲಿ ಇವರಿಗೆ ಹೆಚ್ಚಿನ ಮಾನ್ಯತೆ ಇರಲಿಲ್ಲ. ಆದರೆ ಇತ್ತೀಚೆಗೆ ಇಂತಹ ಮನೋಭಾವ ಬದಲಾಗುತ್ತಿರುವ ಶುಭ ಸೂಚನೆ ಕಂಡುಬರುತ್ತಿದೆ. ಯಕ್ಷಗಾನ ಕೂಟಗಳಲ್ಲಿ ಅರ್ಥಧಾರಿಯಾಗಿ ಸಮರ್ಥನೆನಿಸುವ ಕಾರ್ಯವು ಎಲ್ಲರ ಕೈಗೂ ಎಟಕಬಹುದಾದ – ಸುಲಭ ಸಾಧ್ಯವಾದ – ಮಧುರ ಫಲವಲ್ಲ; ಆಳವಾದ ಅಭ್ಯಾಸ, ನಿರಂತರ ಸಾಧನೆ, ಪ್ರಕೃತಿಜನ್ಯವಾದ ಅಲೌಕಿಕ ಪ್ರತಿಭೆ, ಉತ್ತಮ ವಾಕ್ಪಟುತ್ವ ಮುಂತಾದ ವಿಶಿಷ್ಟ ಗುಣಗಳಿರುವ ಕಲಾವಿದನಿಗೆ ಮಾತ್ರ ಅದು ಸಾಧ್ಯ ಎಂಬ ಯಥಾರ್ಥಜ್ಞಾನ ಈಗ ಉಂಟಾಗಿದೆ. ಭಾಷಾಜ್ಞಾನವಿದ್ದ ಯಾವನಾದರೂ, ಯಕ್ಷಗಾನವೇದಿಕೆಯನ್ನೇರಿ ಅರ್ಥಧಾರಿ ಎನಿಸಬಹುದೆಂಬ ಸಾಮಾನ್ಯ ತಿಳುವಳಿಕೆ ಈಗ ಮಾಯವಾಗಿದೆ. ಸಾಹಿತ್ಯ ಸಂಗೀತ ಮುಂತಾದ ಇತರ ಕಲಾಕ್ಷೇತ್ರಗಳಲ್ಲಿ ಪರಿಣತ ಕಲಾವಿದ ನಾಗಿ ಹೆಸರು ಗಳಿಸಬೇಕೆಂಬ ಚಪಲತೆ ಇರುವಂತೆ ಯಕ್ಷಗಾನದಲ್ಲಿಯೂ ಅರ್ಥಧಾರಿಯಾಗಿ ಮಾನ್ಯತೆ ಯನ್ನು ಪಡೆದರಾಗಬಹುದೆಂಬ ಆಕಾಂಕ್ಷೆ ಹಲವರಲ್ಲಿ ಉಂಟಾಗಿದೆ, ಅದು ಸುಲಭಸಾಧ್ಯವಲ್ಲ ಎಂಬ ಪ್ರಜ್ಞೆಯೂ ಬಂದಿದೆ.

ಶ್ರೋತೃವರ್ಗದ ವಿಭಿನ್ನ ಪ್ರತಿಕ್ರಿಯೆಗಳು

ತಾಳಮದ್ದಳೆಗಳಲ್ಲಿ ಶ್ರೋತೃಗಳಾಗಿ, ನೂರಾರು ಬಗೆಯ ಸ್ವಭಾವಸಂಸ್ಕಾರಗಳುಳ್ಳ ಭಿನ್ನ ರುಚಿಯ ಸಭಿಕರು ಬರುತ್ತಾರೆ. ಅಂತೆಯೇ ಅವರ ಪ್ರತಿಕ್ರಿಯೆಗಳೂ ನೂರು ವಿಧವಾಗಿರುತ್ತವೆ.

ಭಾಗವತರು ಹಾಡುವ ಪದ್ಯಗಳನ್ನು ಮಾತ್ರ ಕೇಳಿ ಆನಂದಿಸಲು ಬರುವವರು ಕೆಲವರು. ಅವರು ಕೇವಲ ಹಾಡುಗಾರಿಕೆಯ ಮೇಲೆ ದೃಷ್ಟಿ ಇಟ್ಟು ಅದನ್ನೇ ಆಸ್ವಾದಿಸುತ್ತಾರೆ. ಅಂಥವರಿಗೆ ಅರ್ಥಧಾರಿಗಳು ಹೇಳುವ ಅರ್ಥ ಕೇವಲ ಒಣ ಹರಟೆ – ರಗಳೆ. ಸುಮ್ಮನೆ ದೀರ್ಘ ಭಾಷಣ ಮಾಡುತ್ತ ವ್ಯರ್ಥ ಕಾಲಹರಣ ಮಾಡುತ್ತಾರಲ್ಲ ಎಂಬ ಪರಿತಾಪ ಅವರಿಗೆ. ಪದ್ಯಗಳಲ್ಲಿರುವಷ್ಟೇ ವಿಷಯವನ್ನು ಎರಡೇ ಮಾತುಗಳಲ್ಲಿ ಹೇಳಿ ಮುಗಿಸುವವರು ಅವರ ದೃಷ್ಟಿಯಲ್ಲಿ ಉತ್ತಮ ಅರ್ಥ ಧಾರಿಗಳು. ಉಳಿದವರೆಲ್ಲ ಅಸಂಬದ್ಧ ಪ್ರಲಾಪಿಗಳು.

'ಯಕ್ಷಗಾನದಲ್ಲಿ ರಸವೇ ಪ್ರಧಾನ. ರಸಪೋಷಣೆಗೆ ತೊಡಕುಂಟಾಗದಂತೆ ಕಥಾ ಭಾಗವನ್ನು ನಿರ್ವಹಿಸುವುದೇ ಉತ್ತಮ ಅರ್ಥಧಾರಿಯ ಲಕ್ಷಣ' ಎಂಬ ಸಿದ್ಧಾಂತವನ್ನು ಮಾಡಿಕೊಂಡ ಹಲವರು ಬರುತ್ತಾರೆ. ಅಂಥವರಿಗೆ ಕಥಾಭಾಗವು ಬೇಗ ಬೇಗನೆ ಮುಂದೆ ಸಾಗುತ್ತಿರಬೇಕು. ಅರ್ಥಧಾರಿಯು ಅಭಿನಯಪೂರ್ವಕವಾಗಿ ಸ್ವರವನ್ನು ಏರುಪೇರುಗೊಳಿಸುತ್ತ ಭಾವಪೂರ್ಣವಾಗಿ 'ಗತ್ತಿನಿಂದ' ಮಾತನಾಡ ಬೇಕು. ಶೃಂಗಾರ ವೀರ ರೌದ್ರ ಕರುಣಾದಿ ರಸಗಳಿಗೆ ಅನುಗುಣವಾಗಿ, ವಯ್ಯಾರ, ಅಟ್ಟಹಾಸ, ಆರ್ಭಟೆ, ಅಳು, ಕಣ್ಣೀರು ಮುಂತಾದ ಚೇಷ್ಟೆಗಳಿರಬೇಕು. ಪಾತ್ರಧಾರಿಗಳು ಚರ್ಚೆ, ವಾದಪ್ರತಿವಾದಗಳಿಗೆ ಆಸ್ಪದವನ್ನೇ ಕೊಡಬಾರದು. ಅದೆಲ್ಲ ಅನಗತ್ಯ - ಅಪ್ರಸ್ತುತ ಅಧಿಕಪ್ರಸಂಗ.

'ಯಕ್ಷಗಾನಕೂಟವೆಂದರೆ ವಿಚಾರ ವಿಮರ್ಶೆಯ ವಿಹಾರಸ್ಥಳ. ಪೌರಾಣಿಕ ಕಥೆಗಳಲ್ಲಿ ಬರುವ ಸೂಕ್ಷ್ಮ ವಾದಘಟ್ಟಗಳನ್ನು ಪಾತ್ರಧಾರಿಗಳು ಎತ್ತಿ ಹಿಡಿದು ವಿಸ್ತರಿಸಿ ಅವುಗಳ ಮೇಲೆ ಹೊಸ ಬೆಳಕನ್ನು ಚೆಲ್ಲಬೇಕು. ಕೇಳುವವರಿಗೆ ನೂತನ ವಿಚಾರಬೋಧೆಯಾಗಬೇಕು. ಅವರ ವಿಮರ್ಶಾಬುದ್ಧಿ ಜಾಗೃತವಾಗಬೇಕು. ಕೇವಲ ಪ್ರಸಂಗದ ಪದ್ಯಗಳ ಅರ್ಥ, ಪುರಾಣದ ಕಥೆ ಗೊತ್ತಿಲ್ಲದವರು ಯಾರು? ಅದನ್ನಷ್ಟೇ ಹೇಳುವ ಅರ್ಥಧಾರಿಯಲ್ಲಿ ಯಾವ ವೈಶಿಷ್ಟ್ಯವೂ ಇಲ್ಲ. ಅದಕ್ಕಾಗಿ ನಾವು ಬಂದವರೂ ಅಲ್ಲ'. ಈ ಬಗೆಯ ಮನೋಭಾವವುಳ್ಳ ವಿಮರ್ಶಕವರ್ಗವೂ ಶ್ರೋತೃಗಳಲ್ಲಿರುತ್ತದೆ. ಅರ್ಥಧಾರಿಗಳಲ್ಲಿ ಪರಸ್ಪರ ವಿಮರ್ಶಾತ್ಮಕವಾದ ವಾದ - ಪ್ರತಿವಾದ, ಚರ್ಚೆ, ವಾಗ್ಯುದ್ಧ ಬೆಳೆದಷ್ಟೂ ಈ ವರ್ಗಕ್ಕೆ ಅಸಾಧಾರಣ ತೃಪ್ತಿ. ಅದಿಲ್ಲದ ತಾಳಮದ್ದಳೆ ಸಪ್ಪೆ.

ಇನ್ನೂ ಹಲವರಿದ್ದಾರೆ. ತಾಳಮದ್ದಳೆ ಎಂದರೆ ಕುಸ್ತಿಯ ಅಖಾಡಾ ಎಂದೇ ತಿಳಿದು ಬರುವವರು. ಕಥೆ, ರಸಪೋಷಣೆ, ಪಾತ್ರಗೌರವ, ವಿಚಾರ ವಿಮರ್ಶೆ ಇವಾವುದರ ಗೊಡವೆಯೂ ಅವರಿಗಿರುವುದಿಲ್ಲ. ಅರ್ಥಧಾರಿಗಳಲ್ಲಿ ಪರಸ್ಪರ ಮಾತು ಬೆಳೆಯಬೇಕು, ಜಗಳ ಆಗಬೇಕು, ಮಾತಿನಲ್ಲಿ ಗೆದ್ದವನಾರು, ಸೋತವನಾರು ಎಂಬ ತೀರ್ಮಾನವಾಗಬೇಕು. ಅಶ್ಲೀಲವೋ, ಅಪ್ರಾಸಂಗಿಕವೋ, ಅಸಂಬದ್ಧವೋ - ಎಂತಹ ಮಾತು ಬಂದರೂ ಆದೀತು. ಎದುರಾಳಿಯನ್ನು ಭಂಗಿಸಿ ಮಾತಿನಲ್ಲಿ ಮೆರೆದವನು ಅವರ ದೃಷ್ಟಿಯಲ್ಲಿ ಉತ್ತಮ ಅರ್ಥಧಾರಿಯಾಗುತ್ತಾನೆ.

ಈ ರೀತಿಯಲ್ಲಿ ವಿಭಿನ್ನ ಮನೋಧರ್ಮದ ವ್ಯಕ್ತಿಗಳ ಸಮುದಾಯವುಳ್ಳ ಒಂದು ಸಭೆಯನ್ನು ಸಂಪೂರ್ಣವಾಗಿ ಯಾವ ಕಲಾವಿದನೂ ಮೆಚ್ಚಿಸಲಾರ. ಹಾಗಿದ್ದರೆ ಯಥಾರ್ಥವಾಗಿ ವಿದ್ವಾಂಸನಾದ ಒಬ್ಬ ಉತ್ತಮ ಕಲಾವಿದನ ಕರ್ತವ್ಯವೇನು?

ಪೌರಾಣಿಕ ಮಹಾಪುರುಷರ ವ್ಯಕ್ತಿತ್ವಕ್ಕೆ ಘನತೆ ಗೌರವಗಳಿಗೆ ಸ್ವಲ್ಪವೂ ನ್ಯೂನತೆ ಬಾರದಂತೆ ರಸಾಭಿವ್ಯಕ್ತಿಗೂ ಸಾಕಷ್ಟು ಅವಕಾಶವನ್ನು ಕಲ್ಪಿಸಿ ಔಚಿತ್ಯಕ್ಕೆ ಭಂಗಬಾರದಂತೆ, ವಾದವನ್ನು ಬೆಳೆಸುತ್ತ, ಸಮಾಜದ ಮೇಲೆ ನ್ಯಾಯ, ನೀತಿ, ಧರ್ಮ, ಸದಾಚಾರ ಮುಂತಾದ ಸದ್ಗುಣಗಳ ಸತ್ಪರಿಣಾಮವಾಗುವಂತೆ ಸರಳವಾದ ಭಾಷೆಯಲ್ಲಿ ಮಾತನಾಡುವುದೇ ಶ್ರೇಷ್ಠ ಅರ್ಥಧಾರಿಯ ಸ್ವಭಾವ ಲಕ್ಷಣವಾಗಿರಬೇಕು. ಪೌರಾಣಿಕ ದೇಶ, ಕಾಲ, ಪರಿಸ್ಥಿತಿಗಳಿಗೆ ಸರಿಹೊಂದದ. ವಿರೋಧವೆಂದು ತೋರುವ ಆಧುನಿಕ ವಿಚಾರಗಳನ್ನೋ, ದೃಷ್ಟಾಂತ ಉಪಮಾನಗಳನ್ನೋ ಬಳಸಿ ಆಭಾಸವನ್ನುಂಟುಮಾಡದೆ ತನ್ನ ಮಾತುಗಳ ಮೂಲಕ, ವರ್ಣನಾವೈಖರಿಯಿಂದ ಆತ ಒಂದು ಪ್ರಾಚೀನ ಪ್ರಪಂಚವನ್ನೇ ಯಕ್ಷಗಾನವೇದಿಕೆಯ ಮೇಲೆ ನಿರ್ಮಿಸಬೇಕು. ಶ್ರೋತೃಗಳು, ತಾವು ಹಿಂದಿನ ಆ ಪುರಾಣಕಾಲದ ಮಹಾಪುರುಷರ ಮಧ್ಯದಲ್ಲೇ ವ್ಯವಹರಿಸುತ್ತಿದ್ದೇವೆ ಎಂಬ ರೀತಿಯಲ್ಲಿ ತನ್ಮಯರಾಗುವಂತೆ ಮಾಡಬೇಕು. ಭಾಗವತರು, ಹಿಮ್ಮೇಳದವರು, ಅರ್ಥಧಾರಿಗಳು ಎಂಬ ಯಕ್ಷಗಾನಕೂಟದ ಈ ಮೂರು ಪ್ರಧಾನ ಅಂಗಗಳು ಏಕತಾನದಲ್ಲಿದ್ದು ಒಂದಕ್ಕೊಂದು ಪೂರಕವಾಗಿ ಸಮಷ್ಟಿರೂಪದಲ್ಲಿ ಒಂದು ನೂತನ ಪ್ರಪಂಚವನ್ನೇ ಸೃಷ್ಟಿಸುವಂತಿರಬೇಕು. ಹೀಗಾದಾಗ ಮಾತ್ರ "ಯಕ್ಷಗಾನ ಕೂಟವು" ಸಾರ್ಥಕವಾಗುತ್ತದೆ.

ಗೊಂಬೆ ಆಟ

ಡಾ। ಕೆ. ಶಿವರಾಮ ಕಾರಂತ

ದೇವರು ಈ ಜಗತ್ತಿನ ಮಾನವರನ್ನು ಸೂತ್ರದ ಗೊಂಬೆಗಳಂತೆ ಕುಣಿಸುತ್ತಾನೆ – ಎಂಬ ನಾಣ್ನುಡಿ ಬಹಳ ಕಾಲದಿಂದಲೂ ಬಂದದ್ದು. ಹೀಗಾಗಿ ಗೊಂಬೆಯಾಟಕ್ಕೆ ಬಲು ಹಿಂದಿನ ಪರಂಪರೆಯುಂಟೆಂಬುದು ವಾಸ್ತವದ ಮಾತು. ಕೆಲವರು 'ಗೊಂಬೆಯಾಟದಿಂದಲೇ' ನಾಟಕ ಉತ್ಪನ್ನವಾಯಿತು ಎನ್ನುತ್ತಾರೆ. ಸಂಸ್ಕೃತ ನಾಟಕಗಳ ಪೂರ್ವಪೀಠಿಕೆಯಲ್ಲಿ ಬರುವ 'ಸೂತ್ರಧಾರ'ನ ಪಾತ್ರ ಅದಕ್ಕೆ ಸಾಕ್ಷಿ ಎಂಬವರುಂಟು. ಸಂಸ್ಕೃತ ನಾಟಕಗಳ ಮಾರ್ಗಪರಂಪರೆ ಈ ಭಾರತ ದೇಶದ ವಿವಿಧ ಮೂಲೆಗಳಲ್ಲಿ ಪ್ರಚಾರದಲ್ಲಿದ್ದ ದೇಶೀಯ ನಾಟಕಗಳ ವಿಕಾಸವಲ್ಲದೆ ಬೇರೆಯಲ್ಲ. ಅಂಥ ದೇಶೀಯ ನಾಟಕಗಳು ಹೇಗಿದ್ದುವು ತೀರ ಅನಾದಿಯಲ್ಲಿ – ಎಂದು ಇಂದು ನಿರ್ಣಯಿಸುವುದು ಕಷ್ಟ. ಆದರೆ, ಇಂದಿನ ತನಕ ಉಳಿದು ಬಂದಿರುವ ಚೌ, ಜಾತ್ರಾ, ವೀಥಿನಾಟಕ, ಯಕ್ಷಗಾನಾದಿಗಳಲ್ಲಿ ಸೂತ್ರಧಾರನಂತು ಬರುವುದಿಲ್ಲ. ಸಂಸ್ಕೃತ ನಾಟಕಗಳ ಮಾದರಿಯಲ್ಲಿ ಅವು ತೊಡಗುವುದೂ ಇಲ್ಲ. ಆದುದರಿಂದ 'ಸೂತ್ರಧಾರ' ಎಂಬ ಪದ ಗೊಂಬೆಯಾಟದ ಬಳಿಕ ಬಂದುದೆಂದು ತರ್ಕಿಸಬಹುದಾದರೂ, ನಾಟಕಕ್ಕಿಂತ ಗೊಂಬೆ ಮೊದಲು ಹುಟ್ಟಿಕೊಂಡಿತು ಎಂಬುದು ತಪ್ಪು ಕಲ್ಪನೆಯಾದೀತು. ಗೊಂಬೆ ಪ್ರತಿರೂಪ; ನಿಜರೂಪದ ಅನುಕರಣೆ. ಅನುಕರಣೆ ಮಾಡಲು ಮೊದಲು ನಿಜವಾದ ಪಾತ್ರವೊಂದಿರಲೇಬೇಕು.

ಭಾರತದ ಹಲವಾರು ಕಡೆಗಳಲ್ಲಿ ಗೊಂಬೆಯಾಟದ ಸಂಪ್ರದಾಯ ಇಂದಿನ ತನಕವೂ ಉಳಿದು ಬಂದಿದೆ. ರಾಜಪುತಾನದಲ್ಲಿ ಅದು ಉಳಿದಿವೆ. ಆ ಜಾತಿಯ ಗೊಂಬೆಗಳನ್ನು ಕುಣಿಸುವ ಪದ್ಧತಿ ನಮ್ಮ ಕನ್ನಡ ನಾಡಿನಲ್ಲಿ ಸಾಕಷ್ಟು ಇದ್ದಿತ್ತು. ಇವೆಲ್ಲ ಹೆಚ್ಚಾಗಿ ಎರಡಡಿ ಗಾತ್ರದ, ಅಲಂಕೃತ ಗೊಂಬೆಗಳು. ಗೊಂಬೆ ಮರದ್ದು. ಅದರ ರುಂಡ, ಮುಂಡ, ಕೈಕಾಲುಗಳನ್ನು ಸಂದು ಗೂಡಿಸಿ ಎರಡೆರಡು ಜತೆ ದಾರಗಳಿಂದ ಅವನ್ನು ಸಾಮಾನ್ಯವಾಗಿ ಕುಣಿಸುತ್ತಾರೆ. ನಮ್ಮ ನಾಡಿನಲ್ಲಿ ಈ ಗೊಂಬೆಗಳ ಅಲಂಕಾರ, ಸ್ಥೂಲವಾಗಿ ಯಕ್ಷಗಾನ ವೇಷಗಳಿಗೆ, ಹೋಲುತ್ತದೆ. ಇಲ್ಲಿ 'ಸ್ಥೂಲವಾಗಿ' ಎಂಬ ಮಾತನ್ನು ಗಮನಿಸಬೇಕು. ಅವುಗಳ ಅಲಂಕಾರ ಯಕ್ಷಗಾನ ವೇಷಗಳ ಯಥಾವತ್ ಅನುಕರಣೆಯಲ್ಲ. ಈ ತೆರನ ಗೊಂಬೆ ಆಡಿಸುವ ಮನೆತನಗಳು ಮೂಲ್ಕಿ, ಉಪ್ಪಿನಕುದುರು (ದಕ್ಷಿಣ ಕನ್ನಡ) ಜಿಲ್ಲೆಯಲ್ಲಿದ್ದುವು. ಆದರೆ, ಅದನ್ನು ತೋರಿಸುವ ಪರಿಪಾಠ ಈ ಶತಮಾನದ ಆರಂಭದೊಳಗೇನೆ ನಶಿಸಿಹೋಗಿತ್ತು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಸೀಮೆಯಲ್ಲೂ ಈ ಆಟವನ್ನಾಡಿಸಿ ಜೀವನ ಸಾಗಿಸುತ್ತಿರುವ ಕುಟುಂಬಗಳು ಒಂದೋ ಎರಡೋ ಇವೆ. ಹಿಂದೆ ಸೊರಬ, ಶಿಕಾರಿಪುರಗಳಲ್ಲಿ ಅಂಥವು ಇದ್ದುವು. ಅಲ್ಲಿನ ಗೊಂಬೆಗಳ ಚೆಲುವನ್ನು ನಾನು ಕಂಡಿದ್ದೇನೆ. ಆದರೆ ಆಟಗಳನ್ನು ಕಂಡಿಲ್ಲ.

ನಮ್ಮ ಜಿಲ್ಲೆಯವರಾದ ಉಪ್ಪಿನಕುದುರು ವಯೋವೃದ್ಧ ದೇವಣ್ಣ ಕಮ್ತಿಯರು ಇತ್ತೀಚೆಗೆ ಅವನ್ನು ಆಡಿಸಿದ್ದನ್ನು ಕಂಡಿದ್ದೇನೆ. ಈ ಹಿಂದೆ 'ಚಂದ್ರಾವಳಿ' ಪ್ರಸಂಗ ತುಂಬ ಜನಪ್ರಿಯವಾದ ಗೊಂಬೆಯಾಟದ ಪ್ರಸಂಗವಾಗಿತ್ತು ಎಂಬುದನ್ನು ಕೇಳಿದ್ದೇನೆ. ಈ ಆಟದ ಕ್ರಮ ಮಾತ್ರ ಸ್ವತಂತ್ರವಾದುದಲ್ಲ; ನಮ್ಮ ಸೀಮೆಯಲ್ಲಿ ಅದು ಯಕ್ಷಗಾನ ಬಯಲಾಟದ ಪಡಿನೆಳಲಾಗಿ ಬೆಳೆದುದನ್ನೇ ಕಾಣುತ್ತೇವೆ. ಅದರಂತೆಯೇ ಚಂಡೆ, ಮದ್ದಲೆ, ಭಾಗವತರು ಇದಕ್ಕೆ ಅನಿವಾರ್ಯ. ಆಡುವ ಕಥಾನಕಗಳು ಯಕ್ಷಗಾನದುವೇ. ಯಕ್ಷಗಾನ ಬಯಲಾಟದಲ್ಲಿ ಪಾತ್ರಗಳು ಮಾತಾಡುತ್ತವೆ. ಇಲ್ಲಿ ಪಾತ್ರಗಳ ಪರವಾಗಿ ತೆರೆಯ ಹಿಂದೆ ನಿಂತವರು ಮಾತಾಡುತ್ತಾರೆ. ಎರಡೋ, ಮೂರೋ ಜನ ಕಪ್ಪು ತೆರೆಯೊಂದರ ಹಿಂದೆ ನಿಂತು, ದಾರಗಳ ಸಹಾಯದಿಂದ ಗೊಂಬೆಗಳನ್ನು ತಾಳಕ್ಕೆ ತಕ್ಕಂತೆ ಕುಣಿಸುತ್ತಾರೆ.

ಈ ತೆರನ ಗೊಂಬೆಗಳಲ್ಲದೆ - ಮೈಸೂರು ಸೀಮೆಯಲ್ಲಿ ವರ್ಣರಂಜಿತ ತೊಗಲು ಗೊಂಬೆಗಳನ್ನು ಆಡಿಸುವವರಿದ್ದಾರೆ. ಈ ಗೊಂಬೆಗಳು ದಪ್ಪವಿಲ್ಲದುವು. ಅವುಗಳ ಅಂಗಾಂಗ ಚಲನೆ ತೊಗಲಿನ ಪರೆಯ ಹಿಂದೆ ಕಟ್ಟಿದ ತೆಳ್ಳಗಿನ ಸಲಕೆಗಳಿಂದಾಗಬೇಕು. ಆ ಗೊಂಬೆಗಳನ್ನು ಬಿಳಿಯ ತೆರೆಯೊಂದಕ್ಕೆ ಅದುಮಿ ಹಿಡಿಯುತ್ತಾರೆ. ಅದರ ಹಿಂದೆ ಪ್ರಕಾಶಮಾನವಾದ, ದೀಪ ಇರಿಸುವುದರಿಂದ ಗೊಂಬೆಯ ವರ್ಣಾಲಂಕೃತರೂಪ ತೆರೆಯ ಎದುರಿಂದ ಕಾಣಿಸುತ್ತದೆ. ಈ ಬಗೆಯ ಗೊಂಬೆ ಆಟವೂ ಕರ್ಣಾಟಕದ ಯಕ್ಷಗಾನ ಪ್ರಸಂಗದ ನಿಕಟ ಅನುಕರಣೆಯೇ ಆಗಿ ಬೆಳೆದುಬಂದಿದೆ ಸುಮಾರು 20 ವರ್ಷಗಳ ಹಿಂದೆ, ಕೋಲಾರದ ಒಂದು ದಾಸಯ್ಯಗಳ ಬಳಗ ಇದನ್ನು ಆಡಿಸಿ ತೋರಿಸಿದ್ದನ್ನು ಕಂಡಿದ್ದೆ. ಒಂದೇ ಕುಟುಂಬದ ಗಂಡ, ಹೆಂಡತಿ. ಮಕ್ಕಳು ಬಂಧುಗಳು - ವಾದನ, ಹಾಡುಗಾರಿಕೆ, ಮಾತುಗಾರಿಕೆ, ಗೊಂಬೆ ಕುಣಿಸುವ ಕೆಲಸಗಳನ್ನು ಮಾಡಿದ್ದನ್ನು ಕಂಡೆ. ಅನಂತರ ಹತ್ತು ವರ್ಷಗಳ ಬಳಿಕ ಬೆಂಗಳೂರು ರಾಮನಗರದ ಸೀಮೆಯ ಒಂದು ಪಂಗಡದವರ ಆಟವನ್ನು ಪರಿಶೀಲಿಸಿದೆ. ಅವರು ಯಕ್ಷಗಾನ 'ಪಂಚವಟಿಯನ್ನು' ಆಡಿಸುತ್ತ "ಅಣ್ಣನಾಜ್ಞೆಯ ಕೇಳಿ ಲಚುಮಣ ತನ್ನ ಮನದಲಿ" ಎಂದಾಗ ನನಗೆ ದಿಗ್ಭ್ರಮೆಯಾಯಿತು.

ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಕಾಯಿಲೆ ಕಸಾಲೆ ಆದಾಗ ದಶಾವತಾರ ಆಟ ಆಡಿಸುತ್ತೇನೆ - ಎಂದು ಹರಕೆ ಸಲ್ಲಿಸುವ ವಾಡಿಕೆಯಿದೆ. ಅದರಂತೆಯೇ ರಾಮನಗರ ತಾಲೂಕಿನಲ್ಲಿ ಜಾನುವಾರುಗಳಿಗೆ ಕಾಯಿಲೆ ಬಂದಾಗ, ತೊಗಲು ಬೊಂಬೆ ಆಟದ ಹರಕೆಯನ್ನು ಹಳ್ಳಿಗರು ಹೇಳಿಕೊಳ್ಳುತ್ತಾರೆಂದು ಕೇಳಿದೆ.

ಮತ್ತು ಒಂದು ವಿಶೇಷದ ಸಂಗತಿಯೆಂದರೆ - ಈ ಆಟದ ಭಾಷೆ ಕನ್ನಡ ! ಆದರೆ ಅದನ್ನು ಪ್ರದರ್ಶಿಸುವ ಜನರ ಮನೆಮಾತು ಒಂದು ತೆರನ 'ಕೊಂಕಣಿ'. ಅವರು ಮೂಲದಲ್ಲಿ ರತ್ನಾಗಿರಿ ಪ್ರದೇಶದಿಂದ ವಲಸೆ ಬಂದು, ನಮ್ಮ ನಾಡಿನಲ್ಲಿ ಈ ತೆರನ ಯಕ್ಷಗಾನ ತೊಗಲುಗೊಂಬೆ ಆಟಗಳನ್ನು ಆಡಲು ಕಲಿತಂತಿದೆ.

ಬಳ್ಳಾರಿಯಲ್ಲಿ ಹಗರಿಬೊಮ್ಮನ ಹಳ್ಳಿ - ಎಂಬೊಂದು ಹಳ್ಳಿಯಿದೆ. ಇದು ಹಗರಿ ನದಿ ದಂಡೆಯ ಮೇಲಿರುವ ಹಳ್ಳಿ. ಅದು ಬೊಂಬೆಯಾಟ ಆಡಿಸುವ ಜನಗಳ ಹಳ್ಳಿಯಾಗಿತ್ತೆಂದು ಕೇಳಿದ್ದೇನೆ. ಬೊಮ್ಮಲಾಟ - ತೆಲುಗಿನ ಗೊಂಬೆಯಾಟ, ತೊಗಲು ಗೊಂಬೆಯಾಟ ಆಂಧ್ರ ಪ್ರದೇಶದಲ್ಲೂ ಹಿಂದೆ ರೂಢಿಯಲ್ಲಿತ್ತು. ನಮ್ಮ ಜಿಲ್ಲೆಯ ದಕ್ಷಿಣದಲ್ಲೂ ರೂಢಿಯಲ್ಲಿತ್ತು. ಈಗ ಮಾತ್ರ ಅದು ತೀರ ಕಣ್ಮರೆಯಾಗುವ ಸಂದರ್ಭ ಬಂದಿದೆ.

ನಾನು ನೋಡಿದ ಯಾವತ್ತು ತೊಗಲುಗೊಂಬೆಗಳ ವರ್ಣಾಲಂಕಾರ ತೀರ ಕೆಟ್ಟ ಸ್ಥಿತಿಯಲ್ಲೇ ಇತ್ತು. ಅವುಗಳಲ್ಲಿ ಒಂದೇ ಒಂದು ಗೊಂಬೆ ಬಹಳ ಸುಂದರವಾದ ಕಲಾಕೃತಿಯೆನಿಸು

ವಂತಿತ್ತು. ಒಮ್ಮೆ ಮಾಸಿದ ಬಣ್ಣವನ್ನು ತಿರುಗಿ ಅಚ್ಚುಕಟ್ಟಿಂದ ಬಳೆಯಲಾರದ ಜನರಿಂದಾಗಿ ಅದನ್ನು ಚಿತ್ರಿಸುವ ಕಲೆ ತೀರ ಕೆಟ್ಟುಹೋಯಿತು. ಗೊಂಬೆಗಳ ಸ್ಥಿತಿಯಾದರೂ ಹಾಗೆಯೇ. ಇವತ್ತು ದುರಸ್ತಿ ಮಾಡಿ ಪ್ರದರ್ಶಿಸುವ ಗೊಂಬೆಗಳ ಉಡುಗೆ, ಅಲಂಕಾರಗಳೆರಡೂ ಹಳೆಯ ಚೆಲುವನ್ನು ಉಳಿಸಿಕೊಂಡಿಲ್ಲ. ಅಗ್ಗಕ್ಕೆ ಸಿಗುವ ಯಾವುದೇ ಅರಿವೆ, ಬೇಗಡೆ, ವಾರ್ನಿಸು ಬಣ್ಣ ಸವರಿ ಬಿಟ್ಟರೆ ಆಯಿತು. ಪರಂಪರೆ ಉಳಿಯಬೇಕಾದರೆ ಜನರ ಪ್ರೋತ್ಸಾಹ ಬೇಕೇ ಬೇಕು; ಅದಕ್ಕೆ ತಕ್ಕ ವಿಮರ್ಶೆಯೂ ಇರಬೇಕು ಎರಡೂ ಇಲ್ಲದಾಗ ಎಷ್ಟು ಗೋಣಗಿದರೂ ಅಷ್ಟೇ.

ನಮ್ಮ ನಾಡಿನ ಈ ಎರಡು ಬಗೆಯ ಗೊಂಬೆಯಾಟಗಳು ಸ್ವತಂತ್ರ ಮಾಧ್ಯಮವಾಗಿ ಬೆಳೆದು ಬಂದಿಲ್ಲ; ಯಕ್ಷಗಾನ ಮಾಡುವ ಕೆಲಸವನ್ನೇ ಅವು ಮಾಡಲು ಹೋದುವು. ಆ ಸ್ಪರ್ಧೆಯಲ್ಲಿ ಜೀವವುಳ್ಳ ನಟರನ್ನು, ಜೀವವಿಲ್ಲದ ಗೊಂಬೆಗಳು ಸ್ಪರ್ಧಿಸಲಾರದೆ ಹೋದರೆ ಆಶ್ಚರ್ಯವಿಲ್ಲ. ಅನುಕರಣೆ ಕಲೆಗೆ ಮೃತ್ಯು ಇನ್ನೊಂದು ಕಲೆಯ ಅನುಕರಣೆ ತನ್ನ ವಿಶಿಷ್ಟತೆಗೆ, ಬೆಳವಣಿಗೆಗೆ ಮೃತ್ಯು. ಈ ಹೊತ್ತು ಜೀವಂತ ಯಕ್ಷಗಾನವೂ – ಸಿನೇಮಾ, ನಾಟಕಗಳ ಅನುಕರಣೆ ಮಾಡುತ್ತಿರುವುದನ್ನು ಕಂಡಾಗ, ಇವುಗಳ ಅಳಿಗಾಲವೂ ದೂರವಿಲ್ಲ ಅನಿಸುತ್ತದೆ !

ಪಾಶ್ಚಾತ್ಯದೇಶಗಳಲ್ಲೂ ಗೊಂಬೆಯಾಟ ಇದೆ. ಜರ್ಮನಿ, ಯುಗೊಸ್ಲಾವಿಯದಂಥ ದೇಶ ಗಳು ಅವುಗಳನ್ನು ಉಳಿಸಿಕೊಂಡು ಬಂದಿವೆ. ಅವು ತಮ್ಮದೇ ಆದ ಮಾಧ್ಯಮವನ್ನು ನಿರ್ಮಿಸಿ ಕೊಂಡಿವೆ. ಅಲ್ಲಿನ ಗೊಂಬೆಗಳ ವೈಶಿಷ್ಟ್ಯ ಬೇರೆ. ಒಂದೊಂದು ವ್ಯಕ್ತಿಯ ಶೀಲವನ್ನು ಅತಿಕರಿಸಿ, ಗೊಂಬೆಯ ಮುಖವನ್ನು ನಿರ್ಮಿಸುತ್ತಾರೆ; ಅದಕ್ಕೆ ಅನುಕೂಲವಾದ ಉಡುಗೆ, ಅಲಂಕಾರ ತೊಡಿ ಸುತ್ತಾರೆ. 'ಸರ್ಕಸ್ಸಿನ' ಹಾಸ್ಯಗಾರನ ಮುಖ ವಿದೇಶಗಳಲ್ಲಿ ಒಂದು ನಿಶ್ಚಿತ ಮುಖವರ್ಣಿಕೆಯುಳ್ಳ ಮುಖವಾಗಿದೆ. ಅದರಲ್ಲಿ ಅಳುಮೂತಿ ತುಟಿ, ಹುಬ್ಬುಗಳ ಲಕ್ಷಣ, ಉಡುಗೆ, ಚೇಷ್ಟೆಗಳು ಪ್ರತ್ಯೇಕ ತೆರ. ಇದೇ ಮಾದರಿಯ ಎರಡು ವ್ಯಕ್ತಿಗಳನ್ನು ಸೃಷ್ಟಿಸಿ ಅವನ್ನು 'ಪಂಚ್' ಮತ್ತು 'ಜ್ಯೂಡಿ' ಎಂಬ ಹೆಸರಿಂದ ಕರೆದು, ಇಂಗ್ಲೆಂಡ್ ದೇಶ ಜನಪ್ರಿಯವಾದೊಂದು ಗೊಂಬೆ ಆಟದ ಸಂಪ್ರ ದಾಯವನ್ನು ಬೆಳೆಯಿಸಿತು. ಇದೇ 'ಪಂಚ್ ಎಂಡ್ ಜ್ಯೂಡಿ ಶೋ'.

ಆಧುನಿಕ ಜರ್ಮನಿ, ಆಸ್ಟ್ರಿಯ, ಯುಗೊಸ್ಲಾವಿಯ ಮೊದಲಾದ ದೇಶಗಳಲ್ಲಿ – ಇದಕ್ಕಾ ಗಿಯೇ ವಿಚಿತ್ರ ಕತೆ ಬರೆಯುತ್ತಿದ್ದಾರೆ; ಹೊಸ ಕಥಾಪಾತ್ರಗಳನ್ನು (ಗೊಂಬೆ) ನಿರ್ಮಿಸಿದ್ದಾರೆ. ಅವುಗಳ ಅಂಗಾಂಗಚಲನೆಗಳಿಗೆ ಹೊಸ ಹೊಸ ತಂತ್ರಗಳನ್ನು ಬಳಸುತ್ತಿದ್ದಾರೆ. ಅವರ 'ಮೆರಿ ಯೊನೆಟ್' ಆಟಗಳು ಆಧುನಿಕತೆಗೆ ಯಾವ ಕೊರತೆಯನ್ನೂ ತಂದಿಲ್ಲ. ನಮ್ಮಲ್ಲಿ ಹಾಗಿಲ್ಲ; ಹಳೆ ಗಾಲದ ಕತೆ; ಹಳೆಗಾಲದ ಗೊಂಬೆ, ಜಡಭರಿತ ತಂತ್ರ. ಇನ್ನೊಂದು ಕಲೆಯ ಅನುಕರಣೆ... ಇವೆ ಲ್ಲವೂ ಏಕಕಾಲದಲ್ಲಿ ಬೆರೆತುದರಿಂದ ಜನಕ್ಕೆ ಆ ಕಲೆ ಬೇಡವಾಗುತ್ತ ಬಂತು. ಈ ನಮ್ಮ ಆಟಗಳಲ್ಲಿ ಒಂದೇ ಗೊಂಬೆ ಇಂದು ಸುಧನ್ವ, ನಾಳೆ ಕರ್ಣ, ನಾಡಿದ್ದು ರಾಮ ಆಗಬೇಕು. ಅಲ್ಲಿ ಹಾಗಿಲ್ಲ, ಕಥಾಪಾತ್ರಗಳ ಮುಖ್ಯ ಲಕ್ಷಣವೇನೆಂದು ಅರಿತು, ಅದನ್ನು ವ್ಯಂಗ್ಯಚಿತ್ರದ ಮಾದರಿಯಲ್ಲಿ ಒಂದೊಂದು ಪಾತ್ರಕ್ಕೂ ಬೇರೆ ರೂಪಕೊಟ್ಟು ರಚಿಸುತ್ತಾರೆ. ಅದು ನಗುವಿನ ಪಾತ್ರವಿರಬಹುದು. ಅಳುಬುರುಕು ಪಾತ್ರ ಇರಬಹುದು, ಅಹಂಕಾರದ ಮುದ್ದೆ ಇರಬಹುದು, ಅಜ್ಞಾನದ್ದೂ ಇರಬಹುದು, ಮುಖದಲ್ಲಿ ಪಾತ್ರಗಳ ಮೂಲಶೀಲಗಳು ಒಡೆದು ಕಾಣಿಸುತ್ತವೆ. ಕತೆಗೆ ಪರಿಕರವಾಗಿ ಬರುವ ಉಡುಗೆ, ತೊಡುಗೆ ಗಳು ಪಾತ್ರಗಳ ಶೀಲಕ್ಕೆ ಒಪ್ಪುವಂತೆ ನಿರ್ಮಾಣಗೊಳ್ಳುತ್ತವೆ. ಅಲ್ಲಿಗೆ ಬೇಕಾಗುವ ಇತರ ಪ್ರಾಣಿಗಳೋ, ಸರಂಜಾಮುಗಳೋ ಅಷ್ಟೇ ಹೊಂದಿಕೆಯಿಂದ ಸೃಷ್ಟಿಸಲ್ಪಡುತ್ತವೆ. ಅದೊಂದು ವ್ಯಂಗ್ಯ ಜಗತ್ತು. ಅದಕ್ಕೆ ಒಪ್ಪುವ ರೀತಿಯಲ್ಲಿ ಹಿನ್ನೆಲೆಯ ಮಾತು, ಕತೆ, ಅತಿಶಯಿಸಿದ ಧ್ವನಿಗಳಿಂದ ಕೂಡಿರಲು

ಬಹುದು. ಇವತ್ತು Tape recorde ನಂಥ ಸಾಧನವಿರುವಾಗ ಅದಕ್ಕೆ ಬೇಕಾಗುವ ವಿಶಿಷ್ಟ ಹಿನ್ನೆಲೆಯ ಗಾನವನ್ನೋ, ಉಪಧ್ವನಿಗಳನ್ನೋ ಧಾರಾಳವಾಗಿ ಬಳಸಬಹುದು.

ಯಾವುದೇ ಕಲೆ ಉಳಿಯುವುದು ಬರಿಯೊಂದು ಸಾಂಪ್ರದಾಯಶೀಲತೆಯಿಂದ ಮಾತ್ರವೇ ಅಲ್ಲ. ಆ ಸಂಪ್ರದಾಯದ ಸತ್ವವನ್ನೇ ಹೀರಿ ಸಮಕಾಲೀನ ಪ್ರಜ್ಞೆಗೆ ಚುರುಕಾಗಿದ್ದು, ಹೊಸ ಹೊಸ ಸೃಷ್ಟಿಯನ್ನೇ ಮಾಡಬಲ್ಲ ಕಲಾವಿದರಿಂದ, ಅಂಥ ಪ್ರಜ್ಞೆಯೂ ನಮ್ಮಲ್ಲಿ ಕಾಣಿಸುತ್ತಲಿಲ್ಲ; ಸಂಪ್ರದಾಯದ ಅರಿವೂ ಉಳಿದಿಲ್ಲ. ಹೀಗಿರುತ್ತ ನಮ್ಮ ಪುರಾತನಕಲೆಗಳು ನಶಿಸುತ್ತ ಹೋದರೆ ಆಶ್ಚರ್ಯವೇನು?

೧೯೬೫ರಲ್ಲಿ
ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯವರು
ಪ್ರಶಸ್ತಿ ವಿತರಣೆ ಮಾಡಿದಾಗ ಕೊಟ್ಟ ಪರಿಚಯ

ಶ್ರೀ ಬಲಿಪ ನಾರಾಯಣ ಭಾಗವತರು

ಕನ್ನಡ ರಂಗಭೂಮಿಯ 'ನಟ ಸಾರ್ವಭೌಮ' ವರದಾಚಾರ್ಯರು ತಮ್ಮ ತೀಕ್ಷ್ಣ ಕಣ್ಣುಗಳನ್ನು ಯುವಕನೊಬ್ಬನ ಮೇಲೆ ನೆಟ್ಟು ಅವನ ಉಜ್ವಲ ಭವಿಷ್ಯವನ್ನು ಸ್ಪಷ್ಟವಾಗಿ ನುಡಿದರು. ವರ್ಷಗಳ ಹಿಂದೆ ನುಡಿದ ಭವಿಷ್ಯ ಸತ್ಯವಾಯಿತು; ಯುವಕ ಶ್ರೀ ಬಲಿಪ ನಾರಾಯಣ ಭಾಗವತರು ಕನ್ನಡ ಕಲಾಲೋಕದ ಹೆಮ್ಮೆಯ ವ್ಯಕ್ತಿಯಾದರು. ಯಕ್ಷಗಾನ ಕ್ಷೇತ್ರದಲ್ಲಿ ಶ್ರೀ ಬಲಿಪ ನಾರಾಯಣ ಭಾಗವತರು ಬಹುಮುಖ ಪ್ರತಿಭೆಯ ಅಸಾಧಾರಣ ಕಲಾವಿದರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಕಲೆಯ ಮೇಲೆ ಅಧಿಕಾರಯುತವಾಗಿ ಮಾತನಾಡಬಲ್ಲ ಕೆಲವೇ ಮಂದಿ ಪ್ರತಿಭಾನ್ವಿತರಲ್ಲಿ ಶ್ರೀ ಬಲಿಪ ನಾರಾಯಣ ಭಾಗವತರು ಒಬ್ಬರು. ಶ್ರೀಯುತರು ೧೮೮೯ರಲ್ಲಿ ಕಾಸರಗೋಡು ತಾಲೂಕಿನ ಪಡ್ರೆ ಗ್ರಾಮದಲ್ಲಿ ಜನಿಸಿದರು. ಎಲ್ಲರಂತೆ ಬಾಲ್ಯದಲ್ಲಿ ಶಾಲಾಶಿಕ್ಷಣ ಲಭ್ಯವಾಗದಿದ್ದುದರಿಂದ, ಶ್ರೀಯುತರು ತಮ್ಮ ಅಜ್ಜ ಬಲಿಪ ಕೃಷ್ಣ ಭಟ್ಟ ಅವರಲ್ಲೇ ಕಲಿಯಬೇಕಾಯಿತು. ಶ್ರೀ ಬಲಿಪ ನಾರಾಯಣ ಅವರು ಸಂಗೀತ, ನೃತ್ಯಗಳನ್ನೂ ರಾಮಾಯಣ ಮತ್ತು ಮಹಾಭಾರತ ವಾಚನಗಳನ್ನೂ ಅಜ್ಜ ಹೇಳಿಕೊಟ್ಟಂತೆ ಕಲಿತರು. ಯಕ್ಷಗಾನಕ್ಕೆ ಸಂಬಂಧಿಸಿದ ಚಂಡೆ ಹಾಗೂ ಮೃದಂಗ ವಾದ್ಯವಾದನದಲ್ಲಿ ಸಿದ್ಧಿ ಪಡೆದರು. ಅನಂತರ ಕಾಸರಗೋಡು ತಾಲೂಕಿನ ಕೂಡಲುಗೆ ಹೋಗಿ, ಯಕ್ಷಗಾನ ಹಾಗೂ ಸಂಗೀತಕ್ಕೆ ಅಪಾರ ಬೆಂಬಲ ನೀಡುತ್ತಿದ್ದ ಶ್ರೀ ಸುಬ್ರಾಯ ಶಾನುಭೋಗ್ ಅವರ ಬಳಿ ನಿಂತರು. ಇತರ ವಿದ್ಯಾರ್ಥಿಗಳೊಡನೆ ಶ್ರೀ ಬಲಿಪ ನಾರಾಯಣ ಅವರು ಹಾಡುಗಾರಿಕೆ, ವೀಣಾ, ಪಿಟೀಲು, ಕೊಳಲು, ಯಕ್ಷಗಾನ ಸಂಗೀತಗಳಲ್ಲಿ ನಿರಂತರ ಶಿಕ್ಷಣ ಪಡೆದು ಪುಟವಿಟ್ಟ ಸ್ವರ್ಣಮೂರ್ತಿಯಂತಾದರು.

ಅನಂತರ ಶ್ರೀ ಬಲಿಪ ನಾರಾಯಣ ಅವರು ಹಲವಾರು ಯಕ್ಷಗಾನ 'ಮೇಳ'ಗಳ ಭಾಗವತರಾದರು. ಈ ವೇಳೆಗಾಗಲೇ ಶ್ರೀ ಬಲಿಪ ನಾರಾಯಣ ಭಾಗವತರು ನೂರಾರು ಮಂದಿಯನ್ನು ಯಕ್ಷಗಾನ ನೃತ್ಯ, ಚಂಡೆ ಮೃದಂಗ, ವಾದ್ಯಗಳನ್ನು ಕಲಿಸಿ, ಹತ್ತಾರು ಮಂದಿಯನ್ನು ಭಾಗವತರುಗಳನ್ನಾಗಿ ಮಾಡಿದ್ದರು. ಕಣ್ಮರೆಯಾದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಅವರ ಇಚ್ಛೆಯಂತೆ ಶ್ರೀ ಬಲಿಪ ನಾರಾಯಣ ಭಾಗವತರು ೧೮ ಯಕ್ಷಗಾನ ಪ್ರಸಂಗಗಳನ್ನು ಸ್ವಾರಸ್ಯಮಯವಾಗಿ ರಚಿಸಿದ್ದಾರೆ.

ಈಗ ಶ್ರೀಯುತರಿಗೆ ೭೬ ವರುಷವಾದರೂ, ಆ ಉತ್ಸಾಹ, ಪಾಂಡಿತ್ಯ ಮಾತ್ರ ಚಿರಯೌವ್ವನದಲ್ಲೇ ಇವೆ. ಯಕ್ಷಗಾನಕ್ಕೆ ಕರ್ನಾಟಕ ಸಂಗೀತದ ಹಲವು ರಾಗಗಳನ್ನು ಬಳಸಿಕೊಂಡು, ಜೊತೆಯಲ್ಲಿ 'ತಾಳದ' ಪರಿಪೂರ್ಣತೆ ಉಳಿಸಿಕೊಂಡು ಮಾಡಿದ ಪ್ರಯೋಗ, ಶ್ರೀಯುತರು ಕನ್ನಡ ಕಲೆಗೆ ನೀಡಿದ ಅಪೂರ್ವ ಉಡುಗೊರೆ.

॥ ಓಂ ಸ್ವಸ್ತಿ ॥

ಯಕ್ಷಗಾನ ಪಿತಾಮಹರಾದ

ಶ್ರೀ ಬಲಿಪ ನಾರಾಯಣ ಭಾಗವತರಿಗೆ

ಎಣ್ಮಕಜೆ, ಪಡ್ರೆ, ಕಾಟುಕುಕ್ಕೆ ಮತ್ತು ಮ್ಯೆರೆ ಗ್ರಾಮನಿವಾಸಿಗಳು

ಸಮರ್ಪಿಸಿದ

ಅಭಿನಂದನಾ ಪತ್ರ

ಹಿರಿಯ ಕಲಾವಿದರಾದ ಪೂಜ್ಯ ಬಲಿಪ ನಾರಾಯಣ ಭಾಗವತರೇ,

ಯಕ್ಷಗಾನವು ಕರ್ಣಾಟಕದ ಶ್ರೇಷ್ಠ ಜಾನಪದ ಕಲೆ. ಅಪೂರ್ವವಾದ ಈ ಕಲೆಯಿಂದ ಜನತೆಯ ಮೇಲೆ ಆಗುತ್ತಿರುವ ಸತ್ಪರಿಣಾಮವನ್ನು ವಿವರಿಸುವುದು ಅಸಾಧ್ಯ. ಕಳೆದ ಹಲವು ಶತಮಾನಗಳಿಂದ ಅಜ್ಞ ಜನತೆಯ ಕೈಯಲ್ಲಿದ್ದು ಮಾಲಿನ್ಯವನ್ನು ಹೊಂದುತ್ತಿದ್ದ ಈ ಭವ್ಯವಾದ ಕಲೆಯನ್ನು ತಾವು ಎತ್ತಿ ಹಿಡಿದು ಪರಿಷ್ಕರಿಸಿದಿರಿ; ಉಜ್ವಲಗೊಳಿಸಿದಿರಿ; ಉದ್ಧರಿಸಿದಿರಿ. ತಮ್ಮ ಸಮಗ್ರ ಜೀವನವನ್ನೇ ಈ ಕಲೆಯ ಉದ್ಧಾರಕ್ಕಾಗಿ ಮುಡಿಪಾಗಿಟ್ಟು ಸಾಧನೆಯನ್ನು ಮಾಡಿದಿರಿ. ಹಗಲೂ ರಾತ್ರಿಯೂ ಯಕ್ಷಗಾನದ ಒಂದೇ ವಿಚಾರವನ್ನು ಚಿಂತಿಸುತ್ತ, ಅದಕ್ಕಾಗಿಯೇ ದುಡಿಯುತ್ತ ಯಕ್ಷಗಾನವೇ ನನ್ನ ಜೀವನದ ಉಸಿರು ಎಂದು ಜಗತ್ತಿಗೆ ಸಾರಿದಿರಿ. ಯಕ್ಷಗಾನದಲ್ಲಿ ಶಾಸ್ತ್ರೀಯ ವಾದ ನೂತನ ಪ್ರಯೋಗ-ಪದ್ಧತಿಗಳನ್ನು ನಿರ್ಮಾಣ ಮಾಡಿದಿರಿ. ಉತ್ತಮ ಸಾಹಿತ್ಯದಲ್ಲಿ ಇರ ಬೇಕಾದ ಸಕಲಗುಣಗಳಿಂದ ರಂಜಿಸುವ ಹಲವು ನೂತನ ಯಕ್ಷಗಾನ ಪ್ರಸಂಗಗಳನ್ನು ರಚಿಸಿದಿರಿ. ಹಾಡುಗಾರಿಕೆ, ಮೃದಂಗವಾದನ, ನೃತ್ಯ, ವೇಷ ಅರ್ಥಗಾರಿಕೆ ಮುಂತಾದ ಯಕ್ಷಗಾನದ ವಿವಿಧ ಅಂಗಗಳಲ್ಲಿ ನಿಷ್ಣಾತರಾದ ಸಾವಿರಾರು ಸಂಖ್ಯೆಯ ಶ್ರೇಷ್ಠ ಕಲಾವಿದರನ್ನು ಮಾರ್ಗದರ್ಶನ ಮಾಡಿ ನಾಡಿಗೆ ನೀಡಿದಿರಿ.

ಸುಮಧುರವೂ, ಘನಗಂಭೀರವೂ ಆದ ದೈವದತ್ತವಾದ ಕಂಠಮಾಧುರ್ಯವುಳ್ಳ ತಾವು ಆದಕ್ಕೆ ವಿದ್ಯೆಯ ಸಂಸ್ಕಾರವನ್ನಿತ್ತು, ಯಕ್ಷಗಾನದ ಹಾಡುಗಾರಿಕೆಯು ಸಹ ಸಶಾಸ್ತ್ರೀಯವೂ ಭವ್ಯವೂ ಆಗಿದೆ ಎಂದು ಜಗತ್ತಿಗೆ ತಿಳಿಯಪಡಿಸಿದ್ದೀರಿ. ಆದ್ದರಿಂದಲೇ ತಮಗೆ ಮಾತ್ರ ಅನ್ವಯಿಸುವ "ಭಾಗವತರು" ಎಂಬ ಉಪಾಧಿಯನ್ನು ಶ್ರದ್ಧಾಳು ಜನತೆಯಿಂದ ಪಡೆದಿರಿ. ಯಕ್ಷಗಾನದಲ್ಲಿ ಹಾಡುವವರು ಅನೇಕರು ಇರುವರಾದರೂ "ಭಾಗವತರು" ತಾವೊಬ್ಬರೇ.

ಈ ವರ್ಷ ಮೈಸೂರು ಸರಕಾರದವರು ತಮಗೆ **ಹಿರಿಯ ಕಲಾವಿದರೆಂಬ** ಪ್ರಶಸ್ತಿಯನ್ನಿತ್ತು ಜನತೆಯ ಯಥಾರ್ಥವಾದ ಮನೋಗತವನ್ನು ಪ್ರತಿಬಿಂಬಿಸಿದ್ದಾರೆ. ತಾವು ಸಮಗ್ರ ಕರ್ಣಾಟಕಕ್ಕೇ ಭವ್ಯವಾದ ಕೀರ್ತಿಯನ್ನು ಗಳಿಸಿದಿರಿ. ವಿಶೇಷವಾಗಿ ತಮ್ಮ ಹುಟ್ಟೂರಿನವರಾದ ನಾವೆಲ್ಲ ಅಭಿಮಾನದಿಂದ ಮೆರೆಯುವಂತೆ ಮಾಡಿದಿರಿ. ತಮಗೆ ಭಗವಂತನು ಸುದೀರ್ಘವಾದ ಆಯುಸ್ಸು, ಆರೋಗ್ಯ, ಸಂಪತ್ತು ಮತ್ತು ಅತಿಶಯ ಯಶಸ್ಸನ್ನೂ ಕರುಣಿಸಿ ಬಹುಕಾಲ ಕಲಾರಾಧನೆಯನ್ನು ಮಾಡುವಂತೆ ಹರಸಲೆಂದು ಭಕ್ತಿಪುರಸ್ಸರವಾಗಿ ನಾವು ಪ್ರಾರ್ಥಿಸುತ್ತೇವೆ.

ಕಲಾನಿಲಯ, ಪೆರ್ಲ	**ಎಣ್ಮಕಜೆ, ಪಡ್ರೆ, ಕಾಟುಕುಕ್ಕೆ ಮತ್ತು ಮ್ಯೆರೆಯ**
ತಾ. 31—3—1964	**ಗ್ರಾಮನಿವಾಸಿಗಳು.**

॥ ಸಿರಿಗನ್ನಡಂ ಗೆಲ್ಗೆ ॥

ಯಕ್ಷಗಾನ ಕ್ಷೇತ್ರದಲ್ಲಿ ಕಲಾದೇವಿಯ ಹೃದಯಸಿಂಹಾಸನವನ್ನು ಬಲಿದು
ಅಲ್ಲಿ ನುಡಿಯ ಸಿರಿಯನ್ನು ಸ್ಥಾಪಿಸಿದ ಕಲಾವಿದರಾದ

ಶ್ರೀ ಬಲಿಪ ನಾರಾಯಣ ಭಾಗವತರಿಗೆ

ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯು
ಕನ್ನಡಿಗರ ಪರವಾಗಿ
ಕಾಸರಗೋಡು ಕನ್ನಡಿಗರ ರಾಜಕೀಯ ಸಮ್ಮೇಳನದ ಸದವಸರದಲ್ಲಿ
ಸಮರ್ಪಿಸಿದ

ಅಭಿನಂದನಾ ಪತ್ರ

ಯಕ್ಷಗಾನ ಪಿತಾಮಹರಾದ ಪೂಜ್ಯ ಬಲಿಪ ನಾರಾಯಣ ಭಾಗವತರೇ,

ನಮ್ಮ ಪಾಲಿಗೆ ತಾವಿಂದು ಸುಯೋಗವೊಂದನ್ನು ಕಲ್ಪಿಸಿಕೊಟ್ಟಿರಿ. ಈ ಸುಸಂಧಿಯನ್ನು ಪಡೆಯುವಂತಾದ ನಮ್ಮ ಭಾಗ್ಯ, ಅದು ಕನ್ನಡದ ನುಡಿ ಸಿರಿಯು ತಮ್ಮ ಪಾಲಿಗೆ ನೀಡಿದ ಕಲಾ ಸಂಪತ್ತಿನ ಅಪೂರ್ವ ಫಲ; ತಾವೆಸಗಿದ ಕಲಾಸೇವೆಯ ನಿರಂತರ ಶ್ರಮದ ಪುಣ್ಯ ಫಲ.

ಯಕ್ಷಗಾನವೆಂದರೆ ಜನಪದ ಜೀವನದ ಹೃದಯಗಂಗೆ; ಈ ಪುಣ್ಯವಾಹಿನಿಯ ದಿವ್ಯಧಾರೆಯಲ್ಲಿ ಮಾನವಜೀವನದಲ್ಲಿ ಸುಸಂಸ್ಕೃತಿಯನ್ನು ಒಡಮೂಡಿಸುವ ಭವ್ಯತೆಯಿದೆ. ಪುರಾಣಗಳಲ್ಲಿ ಕಾಣಿಸುವ ದಿವ್ಯಜೀವನದ ಸಂದೇಶವನ್ನು ಸುಮಧುರಶೈಲಿಯಲ್ಲರಳಿಸಿ, ತನ್ನದೇ ಆದ ಒಂದು ಧಾಟಿಯಲ್ಲಿ ಜೀವನದತ್ತ ಧಾವಿಸಿ, ಕಲೆಯ ಕುಂಚವಲ್ಲಿ ಜೀವನವನ್ನು ರೇಖಿಸುವ ಮಹಾಶಕ್ತಿಯು ರಸಧ್ವನಿಯಾದ ಯಕ್ಷಗಾನಕಲೆಯಲ್ಲಡಕವಾಗಿದೆ.

ಇಂತಹ ಪವಿತ್ರಕಲೆಯು, ಅಜ್ಞಜನತೆಯ ಕೈಯಲ್ಲಿದ್ದು ಮಾಲಿನ್ಯವನ್ನು ಹೊಂದುತ್ತಿದ್ದ ಕಾಲದಲ್ಲಿ, ತಾವು ಸಹೃದಯರಾಗಿ, ಕಲಾವಿದರಾಗಿ, ಕಲಾಭಿಮಾನಿಗಳಾಗಿ ಮುಂಬಂದು ಕಲೆಯನ್ನು ಎತ್ತಿಹಿಡಿದಿರಿ; ಬೆಳಗಿದಿರಿ; ಉಜ್ವಲವಾದ ನವದೀಪಿಕೆಯೆತ್ತಿ ದಾರಿತೋರಿದಿರಿ. ದಾರಿಯದು ಪರಿಷ್ಕಾರದ ವೃಂದಾವನವೆಂದರೂ ಅತಿಶಯವಾಗದು. ತಮ್ಮ ಸಮಗ್ರ ಜೀವನವೇ ಈ ಕಲೆಯ ಉದ್ಧಾರಕ್ಕಾಗಿ ಮುಡಿಪಾಯಿತು. ಹಗಲು–ರಾತ್ರಿಗಳಲ್ಲಿನ ತಮ್ಮ ಚಿಂತನೆ, ಸಾಧನೆ, ಯಕ್ಷಗಾನ ಕಲೆಯ ಶೃಂಗಾರಸೌಧವನ್ನು ನಿರ್ಮಿಸುವಲ್ಲಿ ಆಸಕ್ತವಾಯಿತು. ಈ ನಿರ್ಮಾಣದಲ್ಲಿ ತಾವು ಅನೇಕ ನೂತನ ಪ್ರಯೋಗಗಳನ್ನು ನಡೆಸಿ ಕೃತಾರ್ಥರಾದಿರಿ. ತಾವು ರಚಿಸಿದ ಸಾಹಿತ್ಯಗುಣಪೂರ್ಣಗಳಾದ ಯಕ್ಷಗಾನ ಕೃತಿಗಳು ತಮ್ಮ ಅಸದೃಶ ತಪಸ್ಸಿನ ಪುಣ್ಯಫಲಗಳು. ಶ್ರೇಷ್ಠ ಕಲಾವಿದರಾದ ತಾವು ಹಾಡುಗಾರಿಕೆ. ಮೃದಂಗವಾದನ, ಅರ್ಥಪ್ರವಚನ ಮೊದಲಾದ ಯಕ್ಷಗಾನ ವಿವಿಧ ಭಾಗಗಳಲ್ಲಿ ಸಮರ್ಥರಾದ ಅನೇಕ ಕಲಾವಿದರನ್ನು ನಾಡಿಗೊದಗಿಸಿ ಕೊಟ್ಟಿರಿ. ತಮ್ಮ ತ್ಯಾಗ ಪ್ರಶಂಸನೀಯ; ಸರ್ವಮಾನ್ಯ.

ಕಾಸರಗೋಡು ಧನ್ಯವಾಯಿತು !

ಯಕ್ಷಗಾನ ಸಾಹಿತ್ಯರಸ – ಋಷಿಯೆನಿಸಿದ **ಪಾರ್ತಿಸುಬ್ಬನ** ಕೀರ್ತಿಯಿಂದ ಪುಳಕಿತವಾದ ಕಾಸರಗೋಡಿನಲ್ಲಿ ಜನನವೆತ್ತಿದ ತಾವು ತಮ್ಮ ಅಪ್ರತಿಮ ಕಲಾನೈಪುಣ್ಯದಿಂದ ನಮ್ಮ ನಾಡಿನ ಗೌರವ ಧ್ವಜವನ್ನು ಸಾಹಿತ್ಯಾಕಾಶದಲ್ಲಿ ಅರಳಿಸಿದಿರಿ.

ಯಕ್ಷಗಾನ ಕ್ಷೇತ್ರದಲ್ಲಿ ತಾವು ಸಲ್ಲಿಸಿದ ನಿಷ್ಕಾಪೂರ್ಣ ಸೇವೆಯನ್ನು ಮನಗಂಡು ಮೈಸೂರು ಸರಕಾರ ತಮ್ಮನ್ನು ಹಿರಿಯ ಕಲಾವಿದರೆಂದು ಗೌರವಿಸಿ ಪ್ರಶಸ್ತಿಯನ್ನಿತ್ತು ಜನತೆಯ ಯಥಾರ್ಥ ಮನೋಗತವನ್ನು ಪ್ರತಿಬಿಂಬಿಸಿತು.

ಈ ಯೋಗವು ಕಾಸರಗೋಡಿಗೆ ಮಾತ್ರವಲ್ಲ, ಅಖಿಲ ಕರ್ನಾಟಕದ ಪಾಲಿಗೆ ದೊರೆತ ಸೌಭಾಗ್ಯವಾಗಿದೆ. ತಮ್ಮಂತಹ ಸುಪುತ್ರನನ್ನು ಪಡೆದ ಕನ್ನಡಾಂಬೆಯು ಧನ್ಯಳಾದಳು !

ದೈವದತ್ತವಾದ ಮಧುರ ಗಂಭೀರ ಶಾರೀರದಲ್ಲಿ ಸಂಪ್ರದಾಯಬದ್ಧವಾದ ಹಾಡುಗಾರಿಕೆಯಲ್ಲಿ, ಸುಸಂಸ್ಕೃತ ಆಕರ್ಷಕ ಶೈಲಿಯಲ್ಲಿ

ಯಕ್ಷಗಾನ ಕೃತಿಗಳನ್ನು ಹಾಡಿ, ಜನಜೀವನದಲ್ಲಿ ಆನಂದರಸವರ್ಷವನ್ನು ಸುರಿಸುತ್ತಿರುವ ಹಿರಿಯ ಕಲಾವಿದರೆ,

ಭಗವಂತನು

ತಮಗೆ ಆಯುರಾರೋಗ್ಯ ಭಾಗ್ಯಪೂರ್ಣವಾದ ಜೀವನಸಂಪತ್ತನ್ನು ಒದಗಿಸಲಿ ! ತಮ್ಮಿಂದ ಬಹುಕಾಲ ಕಲಾರಾಧನೆಯನ್ನು ಮಾಡಿಸುವ ಸುಸಂದರ್ಭವನ್ನು ಒದಗಿಸಲಿ ! ತಮ್ಮ ಬದುಕು ಭವ್ಯವಾಗಲಿ ! **ಇದೇ ಆ ಜಗದೀಶನಲ್ಲಿ ನಮ್ಮ ಬೇಡಿಕೆ.**

ಕಾಸರಗೋಡು
ತಾರೀಕು **5—5—1964**

ಕರ್ನಾಟಕ ಪ್ರಾಂತೀಕರಣ ಸಮಿತಿ.

॥ ಓಂ ಸ್ವಸ್ತಿ ॥

ಶ್ರೀ ಅಗಲ್ಪಾಡಿ ಅನ್ನಪೂರ್ಣೇಶ್ವರೀ ಪ್ರೌಢ ಪಾಠ ಶಾಲೆಯಲ್ಲಿ ಜರಗಿದ ಸತ್ಕಾರ
ಸಮಾರಂಭದ ಸಂದರ್ಭದಲ್ಲಿ

ಶ್ರೀ ಬಲಿಪ ನಾರಾಯಣ ಭಾಗವತರಿಗೆ

ಯಕ್ಷಗಾನ ಕಲಾಭಿಮಾನಿಗಳು ಸಮರ್ಪಿಸಿದ

ಮಾನ ಪತ್ರ

ನಿಧಿಃ ಸೌಭಾಗ್ಯಾನಾಮವಧಿರುಪಮಾಶೇಷ ಮಹಸಾಂ
ಕುಲಂ ಕಲ್ಯಾಣಾನಾಂ ಕಲುಷವನ ಕಲ್ಪಾನಲಶಿಖಾ।
ಖನಿಃ ಕಾರುಣ್ಯಾನಾಮಗಲಪುರ ಪೂರ್ಣಾನ್ನವಿಭವಾ
ಸವಿತ್ರೀ ಲೋಕಾನಾಂ ಜಯತಿ ಜಗದಾನಂದಲಹರೀ॥

ಯಕ್ಷಗಾನ ಕಲಾ ಪಿತಾಮಹರಾದ

ಶ್ರೀ ಬಲಿಪ ನಾರಾಯಣ ಭಾಗವತರೇ,

ಕರ್ಣಾಟಕದ ವಿಶಿಷ್ಟವೂ ಶ್ರೇಷ್ಠವೂ ಎನಿಸಿದ ಯಕ್ಷಗಾನ ಕಲೆಯನ್ನು ಪುನರ್ನವೀಕರಿಸಿ ಕಲಾ ಪ್ರಪಂಚದಲ್ಲಿ ಅದಕ್ಕೆ ಭವ್ಯವಾದ ಸ್ಥಾನವನ್ನು ಗಳಿಸಿಕೊಟ್ಟ ತಮ್ಮಂತಹ ಕಲಾತಪಸ್ವಿಯನ್ನು ಸತ್ಕರಿಸುವ ಸುಯೋಗವು ದೊರೆತುದಕ್ಕಾಗಿ ನಾವು ಅಮಿತವಾದ ಆನಂದವನ್ನು ಅನುಭವಿಸುತ್ತಿದ್ದೇವೆ.

ಸಮಗ್ರ ಜೀವನವನ್ನೇ ಕಲಾರಾಧನೆಯ ಪವಿತ್ರ ಕರ್ತವ್ಯಕ್ಕಾಗಿ ಸಮರ್ಪಿಸಿ ಹಗಲಿರುಳೂ ಅವಿಶ್ರಾಂತ ಸಾಧನೆಯಿಂದ ಶ್ರಮಿಸಿ ಕಲಾದೇವಿಯ ಉತ್ಕರ್ಷವನ್ನು ಸಾಧಿಸಿದ ತಮ್ಮಂತಹ ಕಲಾ ತಪಸ್ವಿಗಳ ಬಾಳ್ವೆಯು ಲೋಕಕ್ಕೇ ಆದರ್ಶಪ್ರಾಯವಾಗಿದೆ.

ಕೇವಲ 'ಜಾನಪದ ಕಲೆ'ಯಾಗಿದ್ದ ಯಕ್ಷಗಾನವನ್ನು ತಾವು ಪರಿಷ್ಕರಿಸಿ, ಪೋಷಿಸಿ, ಯೋಗ್ಯ ಪಥ ಪ್ರದರ್ಶನ ಮಾಡಿ ವಿದ್ವಜ್ಜನರ ಗೌರವಾದರಗಳಿಗೆ ಪಾತ್ರವಾಗುವಂತೆ ಮಾಡಿದಿರಿ. ಭಾಗವತಿಕೆ, ಹಿಮ್ಮೇಳ, ವೇಷ, ಅರ್ಥಗಾರಿಕೆ ಮುಂತಾದ ಯಕ್ಷಗಾನದ ಹಲವು ಶಾಖೆಗಳಲ್ಲಿ ಪರಿಣತರಾದ ಅಸಂಖ್ಯಾತ ಕಲಾವಿದರನ್ನು ಸಿದ್ಧಗೊಳಿಸಿದಿರಿ. ಯಕ್ಷಗಾನದಿಂದ ತಾವು ಕೀರ್ತಿಯನ್ನು ಗಳಿಸಿದಿರಿ. ತಮ್ಮಿಂದ ಯಕ್ಷಗಾನವು ಯಶಸ್ವಿಯಾಯಿತು.

ತಮಗೆ ಭಗವಂತನು ದೀರ್ಘಾಯುಸ್ಸನ್ನೂ, ಆರೋಗ್ಯವನ್ನೂ ಸಂಪತ್ಸಮೃದ್ಧಿಯನ್ನೂ ಕೊಟ್ಟು ಅನುಗ್ರಹಿಸಲೆಂದು ನಾವೆಲ್ಲರೂ ಭಕ್ತಿಪುರಸ್ಸರವಾಗಿ ಪ್ರಾರ್ಥಿಸುತ್ತೇವೆ.

॥ ಭದ್ರಂ ಶಿವಂ ಮಂಗಲಂ ॥

ಅಗಲ್ಪಾಡಿ
13-11-1964 ಶುಕ್ರವಾರ

ಇತಿ.
ಯಕ್ಷಗಾನ ಕಲಾಭಿಮಾನಿಗಳು.

ಪೆರಡಾಲ ಬೇಳ ಗ್ರಾಮಗಳ ಮತ್ತು ಆಸುಪಾಸಿನ ಗ್ರಾಮಸ್ಥರ ಪರವಾಗಿ ಬದಿಯಡ್ಕ ಪಂಚಾಯತಿ ಅಧ್ಯಕ್ಷ ಹಾಗೂ ಸದಸ್ಯರು ತಾ. 26-1-1965ರಂದು ನೆರವೇರಿದ ಪಂಚ್ಯಾತ್ ಪ್ರಥಮ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಮೈಸೂರು ರಾಜ್ಯ ಪ್ರಶಸ್ತಿ ಪಡೆದ ಯಕ್ಷಗಾನ ಕ್ಷೇತ್ರದ ಹಿರಿಯ ಕಲಾವಿದರಾದ

ಶ್ರೀ ಬಲಿಪ ನಾರಾಯಣ ಭಾಗವತರಿಗೆ

ಅರ್ಪಿಸಿದ

ಮಾನ ಪತ್ರ

ಬಹುಮಾನ್ಯರಾದ ಶ್ರೀ ಬಲಿಪ ನಾರಾಯಣ ಭಾಗವತರೇ,

ಕಳೆದ ಅರ್ಧ ಶತಮಾನಕ್ಕಿಂತಲೂ ಮಿಕ್ಕಿದ ಕಾಲಾವಧಿಯಲ್ಲಿ ನಮ್ಮ ನಾಡಿನ ಪಂಡಿತ ಪಾಮರರಾದಿ ಸಮಸ್ತರ ಮನಸ್ಸನ್ನು ಆಕರ್ಷಿಸುವಂತಹ ಹಿರಿಯ ಕಲೆಯಾದ ಯಕ್ಷಗಾನ ಕಲೆಯಲ್ಲಿ ತಾವು ಭಾಗವತರಾಗಿ ಪ್ರಸಂಗ ನಿರ್ಮಾತೃಗಳಾಗಿ ಯಕ್ಷಗಾನ ವಿದ್ಯೆಯ ಮಾರ್ಗದರ್ಶಕರಾಗಿ ಕಲಾಸರಸ್ವತಿಯ ಆರಾಧಕರಾಗಿ ನಿರಂತರ ಸಲ್ಲಿಸಿದ ತಮ್ಮ ಹಿರಿದಾದ ಯೋಗ್ಯತೆಯನ್ನು ಇಂದು ರಾಜ್ಯ ಪ್ರಶಸ್ತಿಯ ಮೂಲಕ ಲೋಕವೇ ಪ್ರಶಂಸಿಸುತ್ತಿರುವ ಸಂದರ್ಭದಲ್ಲಿ ನಾವು ನಮ್ಮ ಪಂಚಾಯತು ಕ್ಷೇತ್ರದ ಹಾಗೂ ಆಸುಪಾಸಿನ ಜನತೆಯ ಪರವಾಗಿ ನಮ್ಮ ಪಾಲಿನ ಗೌರವಾದರಗಳನ್ನು ಈ ಮಾನಪತ್ರದ ಮೂಲಕ ತಮಗೆ ಸಮರ್ಪಿಸಲು ಅಭಿಮಾನಪಡುತ್ತೇವೆ.

ದೀರ್ಘ ಕಾಲದ ಕಲಾರಾಧನೆಯ ಫಲವಾಗಿ ತಾವು ನಾಡಿನಾದ್ಯಂತ ಜನರ ಮನಸ್ಸಿನಲ್ಲಿ ಮನ್ನಣೆಯ ಪೀಠದಲ್ಲಿ ವಿರಾಜಮಾನರಾಗಿದ್ದೀರಿ. ಕಾಸರಗೋಡು ತಾಲೂಕು ದಕ್ಷಿಣ ಕನ್ನಡದಿಂದ ಬೇರ್ಪಡುವುದಕ್ಕಿಂತ ಮೊದಲು ಒಂದಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾವು ಯಕ್ಷಗಾನ ಕಲೆಯ ಭಾಗವತರಾಗಿ ಭಾಗವತರ ಪೈಕಿ ಅನಭಿಷಿಕ್ತ ಸಮ್ರಾಟರೆನಿಸಿ ಮೆರೆದಿದ್ದೀರಿ. ತಮ್ಮ ಹಾಡುಗಾರಿಕೆ ವಿದ್ವತ್ತು ಪ್ರತಿಭೆಗಳ ಮೂಲಕ ಯಕ್ಷಗಾನ ಕ್ಷೇತ್ರಕ್ಕೆ ಧೀಮಂತರನೇಕರನ್ನಾಕರ್ಷಿಸಿ ಕಲೆಗೆ ಕಳೆಯನ್ನು ಕೊಟ್ಟಿದ್ದೀರಿ. ಹೀಗೆ ಆಬಾಲವೃದ್ಧ ಜನತಾಜನಾರ್ದನನಿಂದ ಪ್ರಶಸ್ತಿಯನ್ನು ಬಹುಕಾಲದ ಮೊದಲೇ ಪಡೆದ ನಿಮ್ಮನ್ನು ಮೈಸೂರು ಸರಕಾರವು ಪ್ರಶಸ್ತಿಯಿತ್ತು ತನ್ನನ್ನೇ ತಾನು ಬಹುಮಾನಿಸಿದಂತಾಗಿದೆ. ಇದೇ ಮಾತು ಈ ದಿವಸ ತಮಗೆ ಮಾನಪತ್ರವನ್ನೊಪ್ಪಿಸುತ್ತಿರುವ ನಮಗೂ ಅನ್ವಯಿಸುತ್ತಿರುವುದೆಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ.

ಬುದ್ಧಿವಂತನಾದವನು ಸಂತೋಷವನ್ನು ಉಂಟುಮಾಡಬೇಕು. ಅದೇ ಈಶ್ವರ ಪೂಜೆಯೆಂದು ಹಿರಿಯ ಮಾತಿದೆ. ಭಾಗವತರೆನಿಸಿದ ನೀವು ಜನತೆಗೆ ಸಂತೋಷವನ್ನುಂಟುಮಾಡಿ ದೇವರ ಕೆಲಸವನ್ನು ನಿರ್ವಹಿಸಿದ್ದೀರಿ. ಇಂತು ಸಾರ್ವಜನಿಕವಾಗಿ ಬಡವ ಬಲ್ಲಿದರೆನ್ನದೆ ಪಂಡಿತ ಪಾಮರರೆನ್ನದೆ ಎಲ್ಲರಿಗೂ ಸಂತೋಷವನ್ನುಂಟುಮಾಡತಕ್ಕ ಈ ಯಕ್ಷಗಾನವನ್ನು ಆರಾಧಿಸಿದ ನಿಮ್ಮ ಜೀವನದ ಮುಂದಿನ ದಿನಗಳು ಶ್ರೀ ಪರಮಾತ್ಮನ ಅನುಗ್ರಹದಿಂದ ಸುಖ ಶಾಂತಿಮಯವಾಗುವಂತೆ ಆಗಲಿ ಎಂದು ಆಶಿಸುತ್ತೇವೆ.